ಪದವಿಪೂರ್ವ ಶಿಕ್ಷಣ ಇಲಾಖೆ
ಅನುಮೋದಿಸಿದ ಪಠ್ಯಪುಸ್ತಕ

ಪಿ.ಯು.ಸಿ. ಮೊದಲ ವರ್ಷ

ಸಮಾಜಶಾಸ್ತ್ರ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪಿ ಯು ಸಿ ಮೊದಲ ವರ್ಷ

ಸಮಾಜಶಾಸ್ತ್ರ

ಪಠ್ಯಪುಸ್ತಕ ರಚನಾ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸಲಹಾ ಸಮಿತಿ

ಸದಸ್ಯರು

ಡಾ. ಕೆ.ವಿ. ನಾರಾಯಣ

ಪ್ರೊ. ಲಕ್ಷ್ಮಣ್ ತೆಲಗಾವಿ

ಡಾ. ಕರೀಗೌಡ ಬೀಚನಹಳ್ಳಿ

ಡಾ. ಹಿ.ಚಿ. ಬೋರಲಿಂಗಯ್ಯ

ನಿರ್ದೇಶಕರು

ಡಾ. ಟಿ.ಆರ್. ಚಂದ್ರಶೇಖರ

ಸಹಾಯಕ ನಿರ್ದೇಶಕರು

ಶ್ರೀ ಜೈನುಲ್ಲಾ ಬಳ್ಳಾರಿ

ಪದವಿಪೂರ್ವ ಶಿಕ್ಷಣ ಇಲಾಖೆ
ಅನುಮೋದಿಸಿದ ಪಠ್ಯಪುಸ್ತಕ

ಪಿ ಯು ಸಿ ಮೊದಲ ವರ್ಷ

ಸಮಾಜಶಾಸ್ತ್ರ

ಸಂಪಾದಕರು
ಡಾ. ಚಂದ್ರಶೇಖರ ದಾಮ್ಲೆ
ಪ್ರೊ. ಪಿ.ಜಿ. ನಾಗನೂರಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

Samaajashaastra
Prescribed Text Book for First Year P.U.C

Edited by
Dr. Chandrashekhara Damle
Prof. P.G. Naganoori
Department of Sociology
Nehru Memorial College
SULYA- 574 327, Dakshina Kannada Dist.

Published by
Dr. H.C. Boralingaiah
Director, Prasaranga
Kannada University, Hampi
Vidyaranya 583 276

Pages: xvi + 252 **Price: Rs. 100/-**
First Impression : 2004
www.kavihampi.org

ಬೆಲೆ : ರೂ. ೧೦೦/-

ಮುಖಪುಟ : ಕೆ.ಕೆ. ಮಕಾಳಿ

ಪ್ರಕಾಶಕರು
ಡಾ. ಹಿ.ಚಿ. ಬೋರಲಿಂಗಯ್ಯ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಅಕ್ಷರ ಸಂಯೋಜನೆ
ವಿದ್ಯಾರಣ್ಯ ಗಣಕ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮುದ್ರಣ
ಸತ್ಯಶ್ರೀ ಪ್ರಿಂಟರ್ಸ್ ಪ್ರೈ.ಲಿ.
ಬೆಂಗಳೂರು

ನಿರ್ದೇಶಕರ ಮಾತು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕ ರಚನಾ ಕೇಂದ್ರವು ಶಿಕ್ಷಣದ ಎಲ್ಲ ಹಂತಗಳಿಗೆ ಮತ್ತು ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಪಠ್ಯಪುಸ್ತಕಗಳು, ಆಕರ ಗ್ರಂಥಗಳು, ಪರಾಮರ್ಶನ ಕೃತಿಗಳು, ಅಧ್ಯಾಪಕರ ಕೈಪಿಡಿಗಳು ಮುಂತಾದವುಗಳನ್ನು ಸಿದ್ಧಪಡಿಸುವ ಮತ್ತು ಪ್ರಕಟಿಸುವ ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಈ ದಿಶೆಯಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆ ೨೦೦೪-೦೫ರಲ್ಲಿ ಜಾರಿಗೆ ತಂದಿರುವ ಹೊಸ ಪಠ್ಯಕ್ರಮವನ್ನು ಆಧರಿಸಿ ಪಠ್ಯಪುಸ್ತಕಗಳನ್ನು ಪ್ರಕಟಿಸುತ್ತಿದೆ. ಈ ಪಠ್ಯಕ್ರಮಕ್ಕೆ ಅನುಗುಣವಾಗಿ ಅಧ್ಯಾಪಕರ ಕೈಪಿಡಿಗಳನ್ನು ಸಿದ್ಧಪಡಿಸುವ ಕಾರ್ಯವನ್ನು ಕೇಂದ್ರ ಆರಂಭಿಸಿದೆ.

ಈ ಕಾರ್ಯ ಅನೇಕರ ಸಹಕಾರ-ಸಹಯೋಗದಿಂದ ನಡೆಯಬೇಕಾಗಿದೆ. ನಾವು ಸಿದ್ಧಪಡಿಸುತ್ತಿರುವ ಪಠ್ಯಗಳಿಗೆ ಪದವಿಪೂರ್ವ ಶಿಕ್ಷಣ ಇಲಾಖೆಯು ಅಧಿಕೃತ ಪಠ್ಯಗಳೆಂದು ಮನ್ನಣೆ ನೀಡಿದೆ. ಇದು ತುಂಬಾ ಮಹತ್ವದ ಸಂಗತಿಯಾಗಿದೆ. ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಡಿ.ಎನ್. ನಾಯಕ್ ಇವರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ.

ಪಠ್ಯಪುಸ್ತಕಗಳ ಸಂಪಾದಕರಾಗಿ ನಾಡಿನ ಅನೇಕ ಹಿರಿಯ ವಿದ್ವಾಂಸರು ಕೆಲಸ ಮಾಡುತ್ತಿದ್ದಾರೆ. ಅವರ ಸಹಯೋಗದಲ್ಲಿ ಅನೇಕ ಲೇಖಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರೆಲ್ಲರಿಗೂ ನಾನು ವಂದನೆಗಳನ್ನು ಸಲ್ಲಿಸುತ್ತೇನೆ.

ಈ ಕೇಂದ್ರದ ಹಿಂದಿನ ಶಕ್ತಿಯೆಂದರೆ ಕುಲಪತಿಗಳಾದ ಡಾ. ಕೆ.ವಿ.ನಾರಾಯಣ. ಅವರ ಮಾರ್ಗದರ್ಶನದಲ್ಲಿ ಕೇಂದ್ರವು ಕೆಲಸ ಮಾಡುತ್ತಿದೆ. ಈ ಸಂದರ್ಭದಲ್ಲಿ ಮಾನ್ಯ ಕುಲಪತಿಗಳಿಗೆ, ಕುಲಸಚಿವರಿಗೆ, ಕೇಂದ್ರದ ಸಲಹಾ ಮಂಡಳಿ ಸದಸ್ಯರಿಗೆ, ಪ್ರಸಾರಾಂಗದ ನಿರ್ದೇಶಕರು ಮತ್ತು ಸಿಬ್ಬಂದಿಗೆ ಕೇಂದ್ರದ ಪರವಾಗಿ ನಾನು ಕೃತಜ್ಞತೆ ಸಲ್ಲಿಸುತ್ತೇನೆ.

ಪ್ರಸ್ತುತ ಪದವಿಪೂರ್ವ ಮೊದಲ ವರ್ಷದ ಸಮಾಜಶಾಸ್ತ್ರ ಪಠ್ಯವನ್ನು ತುಂಬಾ ಅಚ್ಚುಕಟ್ಟಾಗಿ ಸಿದ್ಧಪಡಿಸಿಕೊಟ್ಟಿರುವ ಅದರ ಸಂಪಾದಕರಾದ ಡಾ. ಚಂದ್ರಶೇಖರ ದಾಮ್ಲೆ ಮತ್ತು ಪ್ರೊ. ಪಿ.ಜಿ. ನಾಗನೂರಿ ಅವರಿಗೆ ಹಾಗೂ ವಿವಿಧ ಅಧ್ಯಾಯಗಳನ್ನು ಬರೆದು ಕೊಟ್ಟಿರುವ ನಾಡಿನ ಖ್ಯಾತ ವಿದ್ವಾಂಸರಿಗೆ ನಾನು ವಂದನೆಗಳನ್ನು ಸಲ್ಲಿಸುತ್ತೇನೆ.

ಡಾ. ಟಿ.ಆರ್. ಚಂದ್ರಶೇಖರ

ಸಂಪಾದಕರ ಮಾತು

ಭಾಷಾ ಮಾಧ್ಯಮದ ಗೊಂದಲವು ಇಂದು ಶಿಕ್ಷಣದ ಎಲ್ಲ ಹಂತಗಳಲ್ಲಿ ಕಾಡುತ್ತಿರುವ ಸಮಸ್ಯೆ. ಪ್ರತಿಯೊಬ್ಬ ವಿದ್ಯಾರ್ಥಿಗೂ ತಾನು ಆಯ್ದುಕೊಂಡ ಮಾಧ್ಯಮದಲ್ಲಿ ಪಠ್ಯಪುಸ್ತಕಗಳು ಲಭ್ಯವಾದರೆ ಆತನ ಶಿಕ್ಷಣವು ಸರಿಯಾದ ದಿಕ್ಕಿನಲ್ಲಿ ಸಾಗಬಲ್ಲುದು. ಆದರೆ ಇಂದಿಗೂ ಅನೇಕ ಅಧ್ಯಯನ ಶಿಸ್ತುಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಸಮರ್ಪಕವಾದ ಪುಸ್ತಕಗಳು ಸಿಗುತ್ತಿಲ್ಲ. ಈ ದಿಸೆಯಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಸರಿಯಾದ ಹೆಜ್ಜೆಯನ್ನಿರಿಸಿದೆ. ಅಂತೆಯೇ ಸರಿಯಾದ ಕಾಲದಲ್ಲಿ ಕನ್ನಡ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೊದಗಿಸುವ ಪ್ರಕ್ರಮವನ್ನು ಆರಂಭಿಸಿದೆ. ಈ ಸಂದರ್ಭದಲ್ಲಿ ಸಮಾಜಶಾಸ್ತ್ರದಲ್ಲಿ ಕನ್ನಡ ಮಾಧ್ಯಮದ ಪುಸ್ತಕಗಳ ಸಂಪಾದಕರಾಗಿ ದುಡಿಯಲು ಆಮಂತ್ರಿಸಿದ್ದಕ್ಕಾಗಿ ನಾವು ವಿಶ್ವವಿದ್ಯಾಲಯಕ್ಕೆ ಕೃತಜ್ಞರಾಗಿದ್ದೇವೆ.

ಕರ್ನಾಟಕ ರಾಜ್ಯಕ್ಕೆ ಪೂರ್ತಿಯಾಗಿ ಅನ್ವಯವಾಗುವ ಪಠ್ಯಕ್ರಮದ ಪುಸ್ತಕವನ್ನು ತಯಾರಿಸುವಾಗ ರಾಜ್ಯದ ವಿವಿಧ ಭಾಗಗಳ ಲೇಖಕರನ್ನು ಸಂಪರ್ಕಿಸಿ ಅವರಿಂದ ಬೇರೆ ಬೇರೆ ಅಧ್ಯಾಯಗಳನ್ನು ಬರೆಸಿ ಒಂದು ಪುಸ್ತಕವನ್ನು ರಚಿಸುವುದು ಸೂಕ್ತವೆಂಬ ವಿಶ್ವವಿದ್ಯಾಲಯದ ಚಿಂತನೆ ನಿಜಕ್ಕೂ ಸೂಕ್ತವಾದುದು. ಅದರಂತೆ ನಾವು ಅನೇಕ ಸಮಾಜಶಾಸ್ತ್ರ ಪ್ರಾಧ್ಯಾಪಕರನ್ನು ಸಂಪರ್ಕಿಸಿದ್ದೇವೆ. ತಮ್ಮದೇ ಕಾರಣಗಳಿಗಾಗಿ ಅನನುಕೂಲವನ್ನು ಅನೇಕರು ವ್ಯಕ್ತಪಡಿಸಿದ್ದಾರೆ. ಅಂತಹ ಸಂದರ್ಭದಲ್ಲಿ ಬೇರೆ ಉಪನ್ಯಾಸಕ ರನ್ನು ಸಂಪರ್ಕಿಸಿ ಅಧ್ಯಾಯಗಳನ್ನು ಬರೆಸಿ ಸಂಕಲಿಸಿದ್ದಾಗಿದೆ. ಹಸ್ತಪ್ರತಿಗಳ ಪರಿಶೀಲನೆ ಹಾಗೂ ಅಗತ್ಯವಿದ್ದಲ್ಲಿ ಪರಿಷ್ಕರಣೆ ಮಾಡಿದ್ದೇವೆ. ಅಂತೂ ನಮ್ಮ ವಿನಂತಿಯ ಮೇರೆಗೆ ಅಧ್ಯಾಯಗಳನ್ನು ಬರೆದುಕೊಟ್ಟ ಪ್ರಾಧ್ಯಾಪಕ ಲೇಖಕರಿಗೆಲ್ಲ ನಾವು ಕೃತಜ್ಞರಾಗಿದ್ದೇವೆ.

ಈ ಪುಸ್ತಕ ಪ್ರಕಟಣಾ ಯೋಜನೆಯಲ್ಲಿ ಆಸಕ್ತಿವಹಿಸಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಕೆ.ವಿ. ನಾರಾಯಣ, ಪಠ್ಯಪುಸ್ತಕ ರಚನಾ ಕೇಂದ್ರದ ನಿರ್ದೇಶಕರಾದ ಡಾ. ಟಿ.ಆರ್. ಚಂದ್ರಶೇಖರ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಜೈನುಲ್ಲಾ ಬಳ್ಳಾರಿ ಇವರಿಗೆ ನಾವು ಆಭಾರಿಗಳು.

ಪ್ರೊ. ಪಿ.ಜಿ. ನಾಗನೂರಿ

ಡಾ. ಚಂದ್ರಶೇಖರ ದಾಮ್ಲೆ

ಸಮಾಜಶಾಸ್ತ್ರ
ವಿಸ್ತೃತ ಪಠ್ಯಕ್ರಮ
(ಪದವಿಪೂರ್ವ ಶಿಕ್ಷಣ ಇಲಾಖೆ ನಿಯಮಿಸಿರುವ ಪಠ್ಯಕ್ರಮ)

ಉದ್ದೇಶಗಳು

ಸಮಾಜಶಾಸ್ತ್ರವನ್ನು ಒಂದು ಐಚ್ಛಿಕ ವಿಷಯವಾಗಿ ಪದವಿಪೂರ್ವ ಮಟ್ಟದಲ್ಲಿ ನಿಯಮಿಸಲಾಗಿದೆ. ಇದರ ವಿಷಯ ವಸ್ತುವು ವಿದ್ಯಾರ್ಥಿಗಳಿಗೆ ಹೊಸದಾಗಿದೆ. ಏಕೆಂದರೆ ಪ್ರೌಢಶಾಲೆ ಹಂತದಲ್ಲಿ ವಿದ್ಯಾರ್ಥಿಗಳು ಅಧ್ಯಯನ ಮಾಡಿದ 'ಸಮಾಜ ಪಾಠಗಳು' ಎಂಬ ಪತ್ರಿಕೆಯಲ್ಲಿ ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಯಾವುದೇ ವಿಷಯವನ್ನು ನಿಯಮಿಸಿಲ್ಲ.

ಸಮಾಜಶಾಸ್ತ್ರದ ಅಧ್ಯಯನದಿಂದ ವಿದ್ಯಾರ್ಥಿಗಳಿಗೆ ತಮ್ಮ ಸಮಾಜದ ಸ್ವರೂಪ ಮತ್ತು ರಚನೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಸಮಾಜಶಾಸ್ತ್ರವು ಅಳವಡಿಸಿ ಕೊಂಡಿರುವ ವೈಜ್ಞಾನಿಕ ವಿಧಾನ ವಿದ್ಯಾರ್ಥಿಗಳಲ್ಲಿ ಬದಲಾಗುತ್ತಿರುವ ಸಮಾಜ ಕುರಿತಂತೆ ರಚನಾತ್ಮಕ ಮನೋಭಾವ ಬೆಳೆಸಿಕೊಳ್ಳಲು ನೆರವಾಗುತ್ತದೆ.

ಆದರ್ಶ, ಮೌಲ್ಯಗಳು, ನೈತಿಕತೆ, ಸಾಮಾಜಿಕ ಸಂಸ್ಥೆಗಳು, ಸಂಘಟನೆ ಮುಂತಾದವುಗಳ ಅಧ್ಯಯನದಿಂದ ವಿದ್ಯಾರ್ಥಿಗಳು ದೈನಂದಿನ ಬದುಕಿನಲ್ಲಿ ಎದುರಿಸುವ ಅನೇಕ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವುದು ಸಾಧ್ಯವಾಗುತ್ತದೆ. ಸಾಮಾಜಿಕ ಬದಲಾವಣೆ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಮೂಲಕ ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವ ಅಗತ್ಯವಿದೆ.

ಜಾಗತೀಕರಣ ಪ್ರಕ್ರಿಯೆಗಳು ಮತ್ತು ಇತರೆ ಅಂತಾರಾಷ್ಟ್ರೀಯ ಸಮಸ್ಯೆಗಳು ಭಾವಿ ಜನಾಂಗವು ತನ್ನ ಬದುಕನ್ನು ಪುನಾರಚಿಸಿಕೊಳ್ಳುವ ಅಗತ್ಯವನ್ನು ಉಂಟು ಮಾಡಿವೆ. ಈ ಹಿನ್ನೆಲೆಯಲ್ಲಿ ಸಮಾಜವನ್ನು ಕುರಿತ ಸಮಾಜಶಾಸ್ತ್ರೀಯ ತತ್ವಗಳನ್ನು ಮತ್ತು ಭಾರತೀಯ ಸಮಾಜದ ಸ್ವರೂಪವನ್ನು ಪದವಿಪೂರ್ವ ಮಟ್ಟದ ಸಮಾಜಶಾಸ್ತ್ರ ಪಠ್ಯಕ್ರಮದಲ್ಲಿ ಅಳವಡಿಸಲಾಗಿದೆ.

ನಿರ್ದಿಷ್ಟ ಗುರಿಗಳು

ಅ. ಜ್ಞಾನಾರ್ಜನೆ

೧. ಸಮಾಜಶಾಸ್ತ್ರದ ಮೂಲ ಪರಿಭಾವನೆಗಳನ್ನು ಪರಿಚಯಿಸುವುದು.

೨. ಪ್ರೌಢಶಾಲೆ ಮಟ್ಟದ ಸಮಾಜ ಪಾಠಗಳಲ್ಲಿ ಸಮಾಜಶಾಸ್ತ್ರದ ವಿಷಯಗಳು ಹೆಚ್ಚಾಗಿ ಸೇರಿಲ್ಲ. ಸಮಾಜವನ್ನು ಕುರಿತ ವಿದ್ಯಾರ್ಥಿಗಳ ತಿಳಿವಳಿಕೆಗೆ ಸಂಬಂಧಿಸಿದ ಕೊರತೆಯನ್ನು ಇಲ್ಲಿನ ಪಠ್ಯಕ್ರಮದಲ್ಲಿ ತುಂಬಲು ಪ್ರಯತ್ನಿಸಲಾಗಿದೆ.

೩. ಭಾರತೀಯ ಸಾಮಾಜಿಕ ರಚನೆಯ ಮಹತ್ವದ ಮತ್ತು ಸೃಜನಶೀಲ ಸಂಗತಿಗಳನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಲು ಇಲ್ಲಿ ಸಾಧ್ಯವಾಗುತ್ತದೆ.

೪. ಜಾಗತಿಕ ಸಂದರ್ಭದಲ್ಲಿ ಹಾಗೂ ಭಾರತೀಯ ಸನ್ನಿವೇಶದ ಹಿನ್ನೆಲೆಯಲ್ಲಿ ಕೆಲವು ಪರಿಭಾವನೆಗಳನ್ನು ವಿವರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

೫. ಭಾರತೀಯ ಸಮಾಜದ ಸಾಂಸ್ಕೃತಿಕ ವೈವಿಧ್ಯತೆಯನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಅವರಲ್ಲಿ ಐಕ್ಯತೆಯ ಭಾವನೆ ಮೂಡಿಸುವುದು.

೬. ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವದ ಬೆಳವಣಿಗೆಯ ಮೌಲ್ಯಮಾಪನ ಮಾಡಿಕೊಳ್ಳಲು ಸಮರ್ಥರಾಗುವಂತೆ ಮಾಡುವುದು.

೭. ಮಹಿಳೆಯರ ಹಾಗೂ ದುಸ್ಥಿತಿಯಲ್ಲಿರುವ ವರ್ಗಗಳ ಸ್ಥಿತಿಗತಿಗಳ ಬಗ್ಗೆ ಅರಿವನ್ನು ಮೂಡಿಸುವುದು ಮತ್ತು ಅವರ ಕಲ್ಯಾಣ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡುವುದು.

೮. ಸಮಾಜಕ್ಕೆ ಸಂಬಂಧಿಸಿದ ಇತ್ತೀಚಿನ ಜಾಗತಿಕ ಬೆಳವಣಿಗೆ ಮತ್ತು ಪರಿಣಾಮಗಳ ಬಗ್ಗೆ ತಿಳಿವಳಿಕೆ ಮೂಡಿಸುವುದು ಮತ್ತು ವಿದ್ಯಾರ್ಥಿಗಳ ಜ್ಞಾನವನ್ನು ವರ್ಧಿಸುವುದು.

ಆ. ಕೌಶಲ್ಯ

೧. ಸಮಾಜಶಾಸ್ತ್ರದ ವಿಷಯಗಳ ಮೇಲೆ ವಿಚಾರ ಸಂಕಿರಣಕ್ಕಾಗಿ ಪ್ರಬಂಧ ರಚಿಸುವ ತರಬೇತಿ.

೨. ವಿಚಾರ ಸಂಕಿರಣ ಏರ್ಪಡಿಸುವುದು ಮತ್ತು ಅಲ್ಲಿ ಪ್ರಬಂಧಗಳನ್ನು ಮಂಡಿಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದು ಹಾಗೂ ಅಲ್ಲಿ ಚರ್ಚೆ-ಪ್ರಶ್ನೆ-ಉತ್ತರ ಮುಂತಾದ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು.

೩. ಕೋಮುಭಾವನೆ ಮತ್ತು ಜಾತಿಭಾವನೆ ಮೀರಿ ಸಾಮಾಜಿಕ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳು ವಸ್ತುನಿಷ್ಠ ದೃಷ್ಟಿಕೋನ ಬೆಳೆಸಿಕೊಳ್ಳುವಂತೆ ಮಾಡುವುದು.

೪. ವಾಸ್ತವಿಕ ವಿದ್ಯಮಾನಗಳನ್ನು ಪರಿವೀಕ್ಷಿಸುವ ಮುಖಾಂತರ ಸಾಮಾಜಿಕ ಸಂಗತಿಗಳ ಅಮೂರ್ತ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು.

ಇ. ಅನ್ವಯಿಕತೆ

೧. ನಮ್ಮ ಸಮಾಜವನ್ನು ಕಾಡುತ್ತಿರುವ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸಿ ಪಟ್ಟಿ ಮಾಡುವುದು ಹಾಗೂ ಅವುಗಳ ಪರಿಹಾರಕ್ಕೆ ಮಾರ್ಗೋಪಾಯಗಳನ್ನು ರೂಪಿಸುವುದು.

೨. ಗ್ರಾಮೀಣ ಪ್ರದೇಶದಲ್ಲಿ ಜನರ ವಸತಿ ವ್ಯವಸ್ಥೆಯ ನಕ್ಷೆ ಬಿಡಿಸುವುದು ಮತ್ತು ಭಾರತದಲ್ಲಿ ಬುಡಕಟ್ಟು ಜನರ ವಸತಿ ನೆಲೆಗಳ ನಕ್ಷೆ ತಯಾರಿಸುವುದು.

೩. ಭಾರತದ ಸಂವಿಧಾನದಲ್ಲಿ ನಿಯತಗೊಂಡಿರುವ ಸಾಂಸ್ಕೃತಿಕ ಅಲಿಪ್ತತೆ, ಜನತಾಂತ್ರಿಕ ತತ್ವಗಳು ಹಾಗೂ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಳ್ಳುವುದು.

೪. ಸಾಮಾಜಿಕ ಸೇವೆ ಮತ್ತು ತ್ಯಾಗಗಳಿಂದ ಕೂಡಿದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದು.

ಈ. ಸಮಾಜ ಹಾಗೂ ಸಮಾಜಶಾಸ್ತ್ರದ ಬಗೆಗಿನ ದೃಷ್ಟಿಕೋನ

೧. ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಪರಿಭಾವನೆಗಳನ್ನು ಪರಿಚಯಿಸುವುದು.

೨. ಸಾಮಾಜಿಕ ಸನ್ನಿವೇಶದ ಬಗ್ಗೆ ರಚನಾತ್ಮಕ ಹಾಗೂ ವಸ್ತುನಿಷ್ಠ ಮನೋಭಾವವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಲು ಅನುವು ಮಾಡಿಕೊಡುವುದು.

೩. ತಮ್ಮ ಸಮಾಜವನ್ನು ಉತ್ತಮ ಅನುಸಂಧಾನ ಹಾಗೂ ಸಂವಹನ ಕುಶಲತೆಯಿಂದ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ನೆರವಾಗುವುದು.

೪. ಸಾಮಾಜಿಕ ವಾಸ್ತವಿಕತೆ ಮತ್ತು ಸಾಮಾಜಿಕ ಪರಿವರ್ತನೆ ಪ್ರಕ್ರಿಯೆಯನ್ನು ವೈಜ್ಞಾನಿಕ ಮನೋಭಾವದಿಂದ ವಿದ್ಯಾರ್ಥಿಗಳು ಅರಿತುಕೊಳ್ಳುವಂತೆ ಮಾಡುವುದು.

೫. ತಮ್ಮ ಸಮಾಜವನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಮತ್ತು ಬದಲಾವಣೆ ಪ್ರಕ್ರಿಯೆಗಳನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳುವಂತೆ ಮಾಡುವುದು.

೬. ಭಾರತದ ಸಾಮಾಜಿಕ ಅಭಿವೃದ್ಧಿಗೆ ತಮ್ಮ ಕಾಣಿಕೆ ನೀಡಲು ನೆರವಾಗುವಂತೆ ಸಾಮಾಜಿಕ ಸಾತತ್ಯತೆ ಹಾಗೂ ಪ್ರಕ್ರಮ ಸಂಬಂಧಿ ಬದಲಾವಣೆಗಳ ಮಹತ್ವನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳುವಂತೆ ಮಾಡುವುದು.

ಪತ್ರಿಕೆ ಶೀರ್ಷಿಕೆ

ಸಮಾಜಶಾಸ್ತ್ರದ ಮೂಲಾಂಶಗಳು

ಪಠ್ಯಕ್ರಮ

ಬೋಧನಾ ಅವಧಿ : ೬೦ ಗಂಟೆಗಳು

ಅಧ್ಯಾಯ - ೧ **೧೪ ಗಂಟೆಗಳು**

೧. ಸಮಾಜಶಾಸ್ತ್ರ : ಪ್ರವೇಶ

೧.೧ ಸಮಾಜಶಾಸ್ತ್ರದ ಅರ್ಥ

ಅ. ಸಮಾಜಶಾಸ್ತ್ರದ ವ್ಯಾಖ್ಯೆಗಳು - ಕಾಮ್ಟೆ, ಮೆಕೈವರ್ ಮತ್ತು ಪೇಜ್, ಡರ್ಖಿಮ್, ವೇಬರ್, ಎಚ್.ಎಮ್. ಜಾನ್ಸನ್, ಗಿನ್ಸ್‌ಬರ್ಗ್. (ಈ ವ್ಯಾಖ್ಯೆಗಳು ಸಮಾಜಶಾಸ್ತ್ರ ಕುರಿತ ಸೂಕ್ಷ್ಮ, ಮಧ್ಯಮ ಹಾಗೂ ವಿಶಾಲ ನೆಲೆಯ ದೃಷ್ಟಿಕೋನಗಳನ್ನು ಪ್ರತಿನಿಧಿಸುತ್ತವೆ).

ಆ. ಸಮಾಜಶಾಸ್ತ್ರದ ಉಗಮ

ಆರಂಭದ ಸಾಮಾಜಿಕ ತತ್ವಶಾಸ್ತ್ರ : ಕಾಮ್ಟೆ ಪೂರ್ವದಲ್ಲಿನ ಸ್ಥಿತಿ - ಸಮಾಜಶಾಸ್ತ್ರದ ಉಗಮಕ್ಕೆ ಕಾರಣವಾದ ಸಂಗತಿಗಳು. (ಭೌತ ವಿಜ್ಞಾನಗಳ

ಮತ್ತು ಸಮಾಜವಿಜ್ಞಾನಗಳ ಬೆಳವಣಿಗೆ. ಕೈಗಾರಿಕಾ ಕ್ರಾಂತಿ. ಪುನರುತ್ಥಾನ-ಪುನರುದಯ, ಫ್ರೆಂಚ್ ಕ್ರಾಂತಿ).

೩. ಆಗಸ್ಟ್‌ಕಾಮ್ಟೆ ರೂಪಿಸಿದ ಜ್ಞಾನ ಶಿಸ್ತು ಸಮಾಜಶಾಸ್ತ್ರ. ಸಮಾಜಶಾಸ್ತ್ರದ ಪಿತಾಮಹರೆಂದು ಮನ್ನಣೆಗಳಿಸಿಕೊಂಡಿರುವ ಆಗಸ್ಟ್‌ಕಾಮ್ಟೆ, ಹರ್ಬಟ್ ಸ್ಪೆನ್ಸರ್, ಎಮಲಿ ಡರ್ಖಿಮ್ ಮತ್ತು ವೇಬರ್‌ರವರ ಕಾಣಿಕೆಯನ್ನು ಗುರುತಿಸುವುದು.

ಭಾರತದ ಪ್ರಸಿದ್ಧ ಸಮಾಜಶಾಸ್ತ್ರಜ್ಞರ ಪರಿಚಯ - ಜಿ.ಎಸ್. ಗುರವೆ, ಎಂ.ಎನ್. ಶ್ರೀನಿವಾಸ್, ಇರಾವತಿ ಕರ್ವೆ, ಎ.ಆರ್. ದೇಸಾಯಿ

೧.೨. ಸಮಾಜಶಾಸ್ತ್ರದ ವಸ್ತುವಿಷಯ

ಸಮಾಜಶಾಸ್ತ್ರದ ವಸ್ತುವಿಷಯದ ಅಧ್ಯಯನದ ಮೂರು ದಾರಿಗಳು - ಅಲೆಕ್ಸ್ ಇಂಕೆಲ್ಸ್ ವಿಚಾರಗಳು.

ಸಮಾಜಶಾಸ್ತ್ರದ ಮುಖ್ಯ ಧೋರಣೆಗಳು

೧.೩. ಒಂದು ವಿಜ್ಞಾನವಾಗಿ ಸಮಾಜಶಾಸ್ತ್ರ

ವಿಜ್ಞಾನದ ಸ್ವರೂಪ ಮತ್ತು ಗುಣಲಕ್ಷಣಗಳು

ವಿಜ್ಞಾನ - ಒಂದು ಅಧ್ಯಯನ ವಿಧಾನ - ವಿಜ್ಞಾನದ ಒಂದು ವ್ಯಾಖ್ಯೆ

ವಿಜ್ಞಾನದ ವಿಶಿಷ್ಟತೆಗಳ ವಿಶ್ಲೇಷಣೆ

ವಸ್ತು ವಿಶೇಷ-ಪರೀಕ್ಷೆ-ಪ್ರಮಾಣ-ವಸ್ತುನಿಷ್ಠತೆ-ಮೌಲ್ಯನಿರಪೇಕ್ಷತೆ-ಕಾರಣ-ಪರಿಣಾಮ ಮೀಮಾಂಸೆ-ಸಾರ್ವತ್ರಿಕತೆ-ಮುಂಗಾಣುವಿಕೆ - ಈ ವಿಶಿಷ್ಟತೆಗಳ ಚರ್ಚೆಯಲ್ಲಿ ಭೌತ ವಿಜ್ಞಾನಗಳು ಹಾಗೂ ಸಮಾಜ ವಿಜ್ಞಾನಗಳ ನಡುವಿನ ವ್ಯತ್ಯಾಸಕ್ಕೆ ಸಂಶೋಧನೆಗಳಿಂದ ಉದಾಹರಣೆಗಳನ್ನು ನೀಡುವುದು.

೧.೪. ಸಮಾಜಶಾಸ್ತ್ರ ಅಧ್ಯಯನ ಮಹತ್ವ

ಸಮಾಜದ ಬಗೆಗಿನ ಅರಿವು-ಸಾಮಾಜಿಕ ಸಂಗತಿಗಳ ಅರಿತುಕೊಳ್ಳಲು ಅಗತ್ಯವಾದ ವಿಮರ್ಶಾ ಸಾಮರ್ಥ್ಯ-ಬೋಧನಾ ವಿಷಯವಾಗಿ ಸಮಾಜಶಾಸ್ತ್ರ-ಸಾಮಾಜಿಕ ಸಮಸ್ಯೆಗಳ ವಸ್ತುನಿಷ್ಠ ಅಧ್ಯಯನ-ಅಂಚಿನಲ್ಲಿರುವ ವಂಚಿತ ವರ್ಗ-ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಮಹಿಳೆಯರ ಸಮಸ್ಯೆಗಳ ಚರ್ಚೆ-ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ನೀತಿಗಳನ್ನು ರೂಪಿಸುವುದು.

ಅಧ್ಯಾಯ - ೨ **೧೬ ಗಂಟೆಗಳು**

೨. ಸಮಾಜಶಾಸ್ತ್ರದ ಮೂಲಭೂತ ಪರಿಭಾವನೆಗಳು

೨.೧. ಅ. ಸಮಾಜ - ಸಾಮಾಜಿಕ ಜೀವಿಯಾಗಿ ಮಾನವ-ಮಾನವನ ಸಂಘ ಜೀವನ - 'ಸಮಾಜ' ಕುರಿತ ವ್ಯಾಖ್ಯೆ, ಸಮಾಜದ ಗುಣ ಲಕ್ಷಣಗಳು - ಪ್ರಾಥಮಿಕ ಸಾದೃಶ್ಯಗಳು-ಮಾಧ್ಯಮಿಕ ವೈದೃಶ್ಯಗಳು - ಶ್ರಮ ವಿಭಜನೆ-ಪರಸ್ಪರಾವಲಂಬನೆ-

ಸಹಕಾರ-ಸಂಘರ್ಷ-ಚಲನಶೀಲತೆ-ಸಮಾಜದ ಪರಿವರ್ತನಶೀಲ ಗುಣ-ಮಾನವ ಸಮಾಜದ ವಿಶೇಷ ಲಕ್ಷಣವಾಗಿ ಸಂಸ್ಕೃತಿ.

ಆ. ಸಮುದಾಯ-ಸಮುದಾಯದ ವ್ಯಾಖ್ಯೆ-ಸಮುದಾಯದ ಅಂಗಗಳು-ಜನತೆ-ನೆಲೆ-ಸಾಮುದಾಯಿಕ ಭಾವನೆ - ನಾವು ಎಂಬ ಭಾವನೆ-ಸಮಾಜ-ಸಮುದಾಯಗಳ ನಡುವಿನ ಭಿನ್ನತೆ.

ಇ. ಸಂಘ-ವ್ಯಾಖ್ಯೆ-ಗುಣಲಕ್ಷಣಗಳು-ಪ್ರಕಾರಗಳು

ಈ. ಸಂಸ್ಥೆ-ವ್ಯಾಖ್ಯೆ-ಗುಣಲಕ್ಷಣಗಳು-ಸಂಘ ಮತ್ತು ಸಂಸ್ಥೆಗಳ ನಡುವಣ ಭಿನ್ನತೆ-ಸಾಮಾಜಿಕ ಸಂಸ್ಥೆಗಳ ಕಾರ್ಯಗಳು

೨.೨ ಸಾಮಾಜಿಕ ಪ್ರಕ್ರಿಯೆ-ಅರ್ಥ-ವ್ಯಾಖ್ಯೆ-ಸಾಮಾಜಿಕ ಅಂತರಕ್ರಿಯೆಗಳ ಮೂಲ

೨.೩. ಸಾಮಾಜಿಕ ಪ್ರಕ್ರಿಯೆ/ಅಂತರಕ್ರಿಯೆಗಳ ಪ್ರಕಾರಗಳು

ಅ. ಸಹಕಾರ, ಆ. ಪೈಪೋಟಿ, ಇ. ಘರ್ಷಣೆ

ಅಧ್ಯಾಯ - ೩ **೧೦ ಗಂಟೆಗಳು**

೩. ಸಾಮಾಜಿಕ ಸಮೂಹಗಳು

೩.೧. ಸಾಮಾಜಿಕ ಗುಂಪುಗಳ ವ್ಯಾಖ್ಯೆ-ಗುಣಲಕ್ಷಣಗಳು-ಪ್ರಕಾರಗಳು, ಮಹತ್ವ

೩.೨. ಸಾಮಾಜಿಕ ಗುಂಪುಗಳ ವರ್ಗೀಕರಣ-ವರ್ಗೀಕರಣದ ಮಾನದಂಡ-ಸಂಘಟಿತ ಸಮೂಹ ಮತ್ತು ಅಸಂಘಟಿತ ಸಮೂಹ

ಜನಸಂದಣಿ ಅರ್ಥ-ವ್ಯಾಖ್ಯೆ, ಗುಣಲಕ್ಷಣಗಳು-ಮಹತ್ವ-ಪ್ರಾಥಮಿಕ ಸಮೂಹ, ಮಾಧ್ಯಮಿಕ ಸಮೂಹ

ಅಧ್ಯಾಯ - ೪ **೧೬ ಗಂಟೆಗಳು**

೪. ಸಂಸ್ಕೃತಿ ಮತ್ತು ಸಾಮಾಜೀಕರಣ

೪.೧. ಸಂಸ್ಕೃತಿ ವ್ಯಾಖ್ಯೆ-ಸಂಸ್ಕೃತಿಯ ಗುಣಲಕ್ಷಣಗಳು

೪.೨. ಸಂಸ್ಕೃತಿಯ ಪರಿಸೂಚಿ-ಭೌತ ಮತ್ತು ಅಭೌತ ಸಂಸ್ಕೃತಿ

ಸಾಂಸ್ಕೃತಿಕ ಹಿಂಬೀಳಿಕೆಯ ಪರಿಭಾವನೆ-ಸಂಸ್ಕೃತಿ ಮತ್ತು ನಾಗರಿಕತೆ - ಅವುಗಳ ನಡುವಿನ ಭಿನ್ನತೆ ಮತ್ತು ಪರಸ್ಪರ ಸಂಬಂಧ.

೪.೩. ಸಾಮಾಜೀಕರಣ ಪರಿಭಾವನೆ-ವ್ಯಾಖ್ಯೆ-ಮಹತ್ವ

೪.೪. ಸಾಮಾಜೀಕರಣದ ನಿಯೋಗಗಳು - ಔಪಚಾರಿಕ-ಅನೌಪಚಾರಿಕ

ಅ. ಕುಟುಂಬ ಆ. ಸಮವಯಸ್ಕರು ಇ. ಶಾಲೆ ಈ. ಸಮೂಹ ಮಾಧ್ಯಮ

ಅಧ್ಯಾಯ - ೫ **೧೦ ಗಂಟೆಗಳು**

೫. ಸಾಮಾಜಿಕ ನಿಯಂತ್ರಣ

೫.೧. ಸಾಮಾಜಿಕ ನಿಯಂತ್ರಣ ಅರ್ಥ ಮತ್ತು ವ್ಯಾಖ್ಯೆ-ನಿಯಮಗಳ ಅರ್ಥ - ನಿಯಮಗಳ ಗುಣಲಕ್ಷಣಗಳು-ಸಾಮಾಜಿಕ ಮನ್ನಣೆ

೫.೨. ಅನುವರ್ತನೆಯ ಅರ್ಥ - ಶಿಕ್ಷೆಯ ಭಯ - ಮನ್ನಣೆಯ ಅಪೇಕ್ಷೆ -
ಬಿರ್‌ಸ್ಟೆಡ್‌ರವರ ನಾಲ್ಕು ವರ್ಗೀಕರಣ

ಅ. ಸಿದ್ಧಾಂತವನ್ನು ಮನದಟ್ಟು ಮಾಡಿಕೊಡುವುದು

ಆ. ರೂಢಿ

ಇ. ಉಪಯುಕ್ತತೆ

ಈ. ಸಮೂಹ ಮನ್ನಣೆ

ಅಪವರ್ತನೆ-ಅದರ ವೈಲಕ್ಷಣಗಳು-ದೋಷಪೂರಿತ ಸಾಮಾಜೀಕರಣ-ದುರ್ಬಲ ನಿರ್ಬಂಧನೆಗಳು-ದುರ್ಬಲ ಹೇರುವಿಕೆ-ಉಪ ಸಂಸ್ಕೃತಿಗಳ ಪ್ರಭಾವ

೫.೩. ಸಾಮಾಜಿಕ ನಿಯಂತ್ರಣದ ನಿಯೋಗಗಳು

ಅ. ಔಪಚಾರಿಕ ನಿಯೋಗಗಳು - ಕಾನೂನು

ಆ. ಅನೌಪಚಾರಿಕ ನಿಯೋಗಗಳು-ಫೋಕ್‌ವೇಸ್-ಲೋಕನೀತಿ

ಅಧ್ಯಾಯ - ೬ **೧೨ ಗಂಟೆಗಳು**

೬. ವಿವಾಹ ಮತ್ತು ಕುಟುಂಬ

೬.೧. ವಿವಾಹದ ಅರ್ಥ ಮತ್ತು ವ್ಯಾಖ್ಯೆ - ವಿವಾಹದ ಕಾರ್ಯಗಳು

೬.೨. ವಿವಾಹದ ಪ್ರಭೇದಗಳು, ವಿವಾಹದ ಪ್ರಕಾರಗಳ ಚರ್ಚೆ, ಆದರ್ಶ ವಿವಾಹದ ಪ್ರತೀಕ -ಏಕಪತ್ನಿತ್ವ-ಆರ್ಥಿಕ ಸಮರ್ಥನೆ

೬.೩. ಕುಟುಂಬದ ಅರ್ಥ ಮತ್ತು ವ್ಯಾಖ್ಯೆ-ಕುಟುಂಬದ ವಿಶಿಷ್ಟ ಲಕ್ಷಣಗಳು

೬.೪. ವಿವಾಹದ ಕಾರ್ಯಗಳು

ಅ. ಪ್ರಾಥಮಿಕ ಆ. ಮಾಧ್ಯಮಿಕ

೬.೫. ವಿವಾಹದ ಪ್ರಕಾರಗಳು : ಪಿತೃಪ್ರಧಾನ, ಮಾತೃಪ್ರಧಾನ

ಅಧ್ಯಾಯ - ೭ **೧೨ ಗಂಟೆಗಳು**

೭. ಸಾಮಾಜಿಕ ಬದಲಾವಣೆ

೭.೧. ಸಾಮಾಜಿಕ ಬದಲಾವಣೆಯ ಅರ್ಥ-ವ್ಯಾಖ್ಯೆ -
ಬದಲಾವಣೆ-ವಿಕಾಸ ಮತ್ತು ಪ್ರಗತಿ-ಅಭಿವೃದ್ಧಿಗಳ ನಡುವಣ ತಾತ್ವಿಕ ಭಿನ್ನತೆ

೭.೨. ಸಾಮಾಜಿಕ ಬದಲಾವಣೆಗೆ ಅಡೆತಡೆಗಳು

ಪರಿವಿಡಿ

ಅಧ್ಯಾಯ ೧

ಸಮಾಜಶಾಸ್ತ್ರ : ಪ್ರವೇಶ

ಮಾನವನ ಸಾಮಾಜಿಕ ಬದುಕು ತುಂಬಾ ಸಂಕೀರ್ಣವಾದುದು. ಇಂದು ಸಾಮಾಜಿಕ ಸಂಬಂಧಗಳ ಅಧ್ಯಯನವು ನಮಗೆ ಅನೇಕ ರೀತಿಗಳಲ್ಲಿ ಮಹತ್ವಪೂರ್ಣವಾಗಿದೆ. ಮಾನವ ಸಮಾಜವನ್ನೇ ವಸ್ತುವಿಷಯವಾಗಿ ಹೊಂದಿರುವ ಅನೇಕ ಅಧ್ಯಯನ ಶಾಖೆಗಳಿವೆ. ಉದಾಹರಣೆಗೆ ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಮಾನವಶಾಸ್ತ್ರ, ತತ್ವಶಾಸ್ತ್ರ, ಮನಃ ಶಾಸ್ತ್ರ ಮುಂತಾದುವು ಮಾನವ ಸಮಾಜದ ವಿವಿಧ ಆಯಾಮಗಳನ್ನು ಅಭ್ಯಸಿಸುತ್ತವೆ. ಹೀಗೆ ವಿವಿಧ ಸಮಾಜ ವಿಜ್ಞಾನಗಳಿವೆಯಾದರೂ ಅವು ಯಾವುವೂ ಮಾನವ ಸಂಬಂಧಗಳು, ಸಾಮಾಜಿಕ ಸಂಸ್ಥೆಗಳು, ಸಾಮಾಜಿಕ ಪ್ರಕ್ರಿಯೆಗಳು, ಸಮಾಜದ ಸ್ವರೂಪ, ಸ್ಥಿರತೆ-ಬದಲಾವಣೆಗಳು ಮತ್ತು ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸುವುದಿಲ್ಲ. ಆದರೆ ಈ ವಿಚಾರಗಳ ಬಗ್ಗೆ ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಣೆ ನಡೆಸುವ ಶಾಸ್ತ್ರವೊಂದರ ಅವಶ್ಯಕತೆ ಇದ್ದುದರಿಂದಲೇ ಹುಟ್ಟಿಕೊಂಡ ಅಧ್ಯಯನ ಶಿಸ್ತು ಸಮಾಜಶಾಸ್ತ್ರವೆನ್ನಿಸಿದೆ.

ಮಾನವ ಜೀವನದಲ್ಲಿ ಕಂಡು ಬರುವ ಸಾಮಾಜಿಕ ಸಮಸ್ಯೆಗಳನ್ನು ಅರಿತುಕೊಂಡು ಸೂಕ್ತವಾದ ಪರಿಹಾರವನ್ನು ಕಂಡುಕೊಳ್ಳಲು ಪ್ರತ್ಯೇಕ ಸಮಾಜವಿಜ್ಞಾನದ ಅವಶ್ಯಕತೆ ಇದೆ. ಬಹಳ ಹಿಂದಿನಿಂದಲೇ ಧಾರ್ಮಿಕ ಚಿಂತಕರು, ತತ್ವಶಾಸ್ತ್ರಜ್ಞರು, ನೀತಿ ನಿರೂಪಕರು, ಶಾಸನಕರ್ತೃಗಳು ಮುಂತಾದವರು ಸಮಸ್ಯೆಗಳನ್ನು ಅವಲೋಕಿಸಿ ಅವುಗಳ ಕುರಿತು ತಮ್ಮ ಚಿಂತನೆಗಳನ್ನು ಪ್ರಕಟಿಸಿದ್ದಾರೆ. ಆದರೆ ಬೇರೆ ಬೇರೆ ಸಮಾಜವಿಜ್ಞಾನಗಳು ಸಮಾಜದಲ್ಲಿ ಮಾನವನ ವರ್ತನೆಯ ಕುರಿತು ಅಧ್ಯಯನ ನಡೆಸುವಾಗ ತಮ್ಮ ನಿರ್ದಿಷ್ಟವಾದ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತವೆ. ವಿವಿಧ ಸಮಾಜವಿಜ್ಞಾನಗಳು ಸಮಾಜದಲ್ಲಿ ಮಾನವನ ವರ್ತನೆಯ ಸಮಗ್ರ ಚಿತ್ರಣವನ್ನು ಪ್ರತಿಬಿಂಬಿಸದೆ ನೀಡಿರುವ ಆಂಶಿಕ ಚಿತ್ರಣವು ಸಮಸ್ಯೆಗೆ ಪರಿಹಾರವನ್ನು ಗುರುತಿಸಲು ವಿಫಲವಾಯಿತು. ಇದರಿಂದ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಸಮಗ್ರ ಸಮಾಜದ ವೈಜ್ಞಾನಿಕ ಮಾಹಿತಿಯು ಅವಶ್ಯಕ ವೆಂಬುದನ್ನು ಚಿಂತಕರು ಮನಗಂಡರು. ಇಂತಹ ಮಾಹಿತಿಯನ್ನು ಪೂರೈಸಲು ಪ್ರತ್ಯೇಕವಾದ ಸಮಾಜವಿಜ್ಞಾನದ ಅವಶ್ಯಕತೆ ಉಂಟಾಯಿತು. ಈ ಅವಶ್ಯಕತೆಯನ್ನು ಪೂರೈಸಲು ಪ್ರತ್ಯೇಕವಾದ ಸಾಮಾನ್ಯ ಸಮಾಜವಿಜ್ಞಾನವಾಗಿ ಸಮಾಜಶಾಸ್ತ್ರವು ಉಗಮವಾಯಿತು.

ಅಗಸ್ಟ್‌ಕಾಮ್ಟ್‌ರವರು ತಮ್ಮ 'ಪೊಸಿಟಿವ್ ಫಿಲಾಸಫಿ' ಎಂಬ ಕೃತಿಯಲ್ಲಿ

ಸೋಷಿಯಾಲಜಿ ಎಂಬ ಪದವನ್ನು ಬಳಸಿ, ವೈಜ್ಞಾನಿಕ ವಿಧಾನದ ಮೂಲಕ ಸಮಾಜದ ವೈಚಾರಿಕ ಮತ್ತು ವಸ್ತುನಿಷ್ಟ ಅಧ್ಯಯನ ನಡೆಸಬೇಕೆಂದು ತಿಳಿಸಿದರು. ಸಮಗ್ರ ಸಮಾಜವನ್ನು ಅಧ್ಯಯನದ ಘಟಕವನ್ನಾಗಿ ಅಧ್ಯಯನ ನಡೆಸುವುದರಿಂದ ಸಮಾಜದ ಕುರಿತಾದ ಸಂಪೂರ್ಣ ಚಿತ್ರಣ ದೊರಕುತ್ತದೆ.

ಸಮಾಜಶಾಸ್ತ್ರದ ವ್ಯಾಪ್ತಿಯು ವಿಶಾಲವಾದುದು. ಸಮಾಜಶಾಸ್ತ್ರದಲ್ಲಿ ಎಲ್ಲ ಸಾಮಾಜಿಕ ಸಂಬಂಧಗಳ ಸಾಮಾನ್ಯ ಸ್ವರೂಪವನ್ನು ಅಧ್ಯಯನ ನಡೆಸಲಾಗುತ್ತದೆ. ಸಾಮಾಜಿಕ ಸಂಬಂಧಗಳನ್ನು ಅಧ್ಯಯನ ನಡೆಸುವಾಗ ಅವುಗಳ ಸ್ವರೂಪ ಮತ್ತು ವಿಧಗಳನ್ನು ವಿಶ್ಲೇಷಿಸಲಾಗುತ್ತದೆ. ಸಮಾಜಶಾಸ್ತ್ರವು ಸಂಕೀರ್ಣವಾದ ವಿಜ್ಞಾನವಾಗಿರುವುದರಿಂದ ಅದರ ಬೆಳವಣಿಗೆಗೆ ಇತರ ಸಮಾಜ ವಿಜ್ಞಾನಗಳಿಂದ ಮಾಹಿತಿಯನ್ನು ಎರವಲಾಗಿ ಪಡೆದುಕೊಂಡು ಸಮಾಜಶಾಸ್ತ್ರೀಯ ತಂತ್ರಜ್ಞಾನವನ್ನು ಬಳಸಿ, ಆಮದು ಮಾಡಿದ ಮಾಹಿತಿಗಳಿಗೆ ಹೊಸ ರೂಪವನ್ನು ನೀಡಿ ಅಧ್ಯಯನ ನಡೆಸಲಾಗುತ್ತದೆ.

೧.೧. ಸಮಾಜಶಾಸ್ತ್ರದ ಅರ್ಥ ಮತ್ತು ವ್ಯಾಖ್ಯೆಗಳು

ಸಮಾಜಶಾಸ್ತ್ರದ ಅಧ್ಯಯನ ವಸ್ತುವು ಮಾನವ ಸಮಾಜವಾಗಿದೆ. ಮಾನವ ಸಮಾಜದಲ್ಲಿನ ವಿವಿಧ ಸ್ವರೂಪದ ಸಾಮಾಜಿಕ ಸಂಬಂಧಗಳನ್ನು ಸಮಾಜಶಾಸ್ತ್ರದಲ್ಲಿ ಅಧ್ಯಯನ ನಡೆಸಲಾಗುತ್ತದೆ. ಸಂಕೀರ್ಣ ಸ್ವರೂಪದ ಸಾಮಾಜಿಕ ಸಂಬಂಧಗಳನ್ನು ಸಮಾಜಶಾಸ್ತ್ರಜ್ಞರು ವಿವಿಧ ರೀತಿಯಲ್ಲಿ ತಿಳಿದುಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ಸಮಾಜಶಾಸ್ತ್ರದ ಪಿತಾಮಹನಾದ **ಅಗಸ್ಟ್‌ಕಾಮ್ಟ್** ಲ್ಯಾಟಿನ್ ಮತ್ತು ಗ್ರೀಕ್ ಪದಗಳಾದ **"ಸೋಷಿಯಸ್"** (ಸಮಾಜ) ಮತ್ತು **"ಲಾಗೋಸ್"** (ವಿಜ್ಞಾನ) ಪದಗಳ ಸಂಯೋಜನೆಯಿಂದ **"ಸೋಷಿಯಾಲಜಿ"** ಎಂಬ ಪದವನ್ನು ರಚಿಸಿದ್ದಾರೆ. ಸೋಷಿಯಾಲಜಿ ಎಂಬ ಪದದ ಅರ್ಥವು ಸಮಾಜದ ಅಧ್ಯಯನ.

ಎಲ್.ಎಫ್. ವಾರ್ಡ್ ಪ್ರಕಾರ ಸಮಾಜಶಾಸ್ತ್ರವು "ಸಮಾಜದ ಅಥವಾ ಸಾಮಾಜಿಕ ವಿದ್ಯಮಾನಗಳ ಅಧ್ಯಯನ". ಸಮಾಜದಲ್ಲಿನ ವಿವಿಧ ಸ್ವರೂಪದ ಸಾಮಾಜಿಕ ಸಂಬಂಧಗಳನ್ನು ಕುರಿತು ಸಮಾಜಶಾಸ್ತ್ರವು ಅಧ್ಯಯನ ನಡೆಸುತ್ತವೆ. ಸಮಾಜದಲ್ಲಿ ಏರ್ಪಡುವ ವಿವಿಧ ಘಟನೆಗಳ ಹಾಗೂ ಸನ್ನಿವೇಶಗಳನ್ನು ಕುರಿತ ಅಧ್ಯಯನವು ಈ ವಿಜ್ಞಾನದಲ್ಲಿ ಸೇರಿದೆ.

ನೈಲ್ ಸ್ಮೈಲ್ಸ್ರವರು ಸಾಮಾಜಿಕ ಸಂಬಂಧಗಳು, ಸಂಸ್ಥೆಗಳು ಮತ್ತು ಸಮಾಜದ ಕುರಿತಾದ ವೈಜ್ಞಾನಿಕ ಅಧ್ಯಯನವೇ ಸಮಾಜಶಾಸ್ತ್ರ ಎಂದಿದ್ದಾರೆ.

ಮೊರಿಸ್ ಗಿನ್ಸ್‌ಬರ್ಗ್ ಪ್ರಕಾರ ಸಮಾಜಶಾಸ್ತ್ರವು ಮಾನವನ ಅಂತರ್‌ಕ್ರಿಯೆ ಮತ್ತು ಅಂತರ್‌ಸಂಬಂಧಗಳು, ಅವುಗಳ ಪರಿಸ್ಥಿತಿ ಮತ್ತು ಪರಿಣಾಮಗಳ ಕುರಿತು ಅಧ್ಯಯನ ನಡೆಸುತ್ತದೆ. ಸಮಾಜಶಾಸ್ತ್ರದಲ್ಲಿ ವ್ಯಕ್ತಿ ಮತ್ತು ವ್ಯಕ್ತಿ, ವ್ಯಕ್ತಿ ಮತ್ತು ಸಮೂಹ, ಸಮೂಹ ಮತ್ತು ಸಮೂಹಗಳ ನಡುವಿನ ಸಂಬಂಧ, ಅಲ್ಲಿನ ಸನ್ನಿವೇಶಗಳು ಮತ್ತು ಪರಿಣಾಮಗಳ ಕುರಿತು ಅಧ್ಯಯನ ನಡೆಸಲಾಗುತ್ತದೆ.

ಪಾರ್ಕ್ ಮತ್ತು ಬರ್ಗೆಸ್ ಪ್ರಕಾರ ಸಮಾಜಶಾಸ್ತ್ರವು ಮಾನವನ ಅನ್ಯೋನ್ಯ ಪ್ರಕ್ರಿಯೆ ಮತ್ತು ಪರಸ್ಪರ ಸಂಬಂಧ ಮಾತ್ರವಲ್ಲದೆ ಅವುಗಳ ಕಾರಣ ಮತ್ತು ಪರಿಣಾಮಗಳ ಕುರಿತು ಅಧ್ಯಯನ ನಡೆಸುತ್ತದೆ.

ಎಚ್.ಎಂ. ಜಾನ್ಸನ್ ಸಾಮಾಜಿಕ ಸಮೂಹಗಳ ಕುರಿತಾದ ವೈಜ್ಞಾನಿಕ ಅಧ್ಯಯನವನ್ನು ಸಮಾಜಶಾಸ್ತ್ರ ಎಂದಿದ್ದಾರೆ.

ಕಿಂಬಲ್ ಯಂಗ್ ಸಮೂಹಗಳಲ್ಲಿ ಮಾನವನ ವರ್ತನೆಯ ಅಧ್ಯಯನವೇ ಸಮಾಜಶಾಸ್ತ್ರವೆಂದಿದ್ದಾರೆ.

ಸಾಮಾಜಿಕ ವರ್ತನೆಯ ವೈಜ್ಞಾನಿಕ ಅಧ್ಯಯನವನ್ನು ಸಮಾಜಶಾಸ್ತ್ರವೆಂದು **ಮ್ಯಾಕ್ಸ್‌ವೇಬರ್** ತಿಳಿಸಿದ್ದಾರೆ.

ಎಮಿಲಿ **ಡರ್ಕಿಂ** ರವರ ಪ್ರಕಾರ ಸಮಾಜಶಾಸ್ತ್ರವು ಸಾಮಾಜಿಕ ಸಂಸ್ಥೆಗಳ ಮತ್ತು ಸಾಮಾಜಿಕ ಸಂಗತಿಗಳ ಅಧ್ಯಯನವಾಗಿದೆ.

ಈ ಮೇಲಿನ ಸಮಾಜಶಾಸ್ತ್ರಜ್ಞರ ಅಭಿಪ್ರಾಯಗಳನ್ನು ಪರಿಶೀಲಿಸಿದಾಗ ಸಮಾಜಶಾಸ್ತ್ರದ ಕುರಿತು ಅವರಲ್ಲಿ ಭಿನ್ನಾಭಿಪ್ರಾಯಗಳಿರುವುದನ್ನು ಗಮನಿಸಬಹುದು. ಸಮಾಜಶಾಸ್ತ್ರಜ್ಞರ ಅಭಿಪ್ರಾಯದಲ್ಲಿ ಭಿನ್ನತೆಗಳಿದ್ದರೂ ಸಮಾಜಶಾಸ್ತ್ರದ ಮುಖ್ಯ ಉದ್ದೇಶವು ಮಾನವ ಸಮಾಜ ಮತ್ತು ಸಾಮಾಜಿಕ ಸಂಬಂಧಗಳನ್ನು ವೈಜ್ಞಾನಿಕವಾಗಿ ಅಧ್ಯಯನ ನಡೆಸುವುದಾಗಿದೆ. **ಮೆಕೈವರ್** ಪ್ರಕಾರ ಸಮಾಜಶಾಸ್ತ್ರವು ಸಾಮಾಜಿಕ ಸಂಬಂಧಗಳ ವೈಜ್ಞಾನಿಕ ಅಧ್ಯಯನ. ಇದರ ಅಧ್ಯಯನದಲ್ಲಿ ಎಷ್ಟೇ ಹೊಸ ವಿಷಯಗಳನ್ನು ಸೇರಿಸಿದರೂ ಅದು ಮೂಲಭೂತವಾಗಿ ಸಾಮಾಜಿಕ ಸಂಬಂಧಗಳ ಅಧ್ಯಯನವೇ ಆಗಿದೆ.

ಸಮಾಜಶಾಸ್ತ್ರ ಕುರಿತು ಸಮಾಜಶಾಸ್ತ್ರಜ್ಞರು ನೀಡಿರುವ ವ್ಯಾಖ್ಯೆಗಳನ್ನು ಪರಿಶೀಲಿಸಿದಾಗ ಸಮಾಜಶಾಸ್ತ್ರವು ಈ ಮುಂದೆ ಉಲ್ಲೇಖಿಸಿದ ವಿಚಾರಗಳ ಕುರಿತು ಅಧ್ಯಯನ ನಡೆಸುತ್ತದೆ ಎಂಬುದು ತಿಳಿಯುತ್ತದೆ.

೧. ಸಮಾಜದ ಕುರಿತಾದ ಅಧ್ಯಯನ
೨. ಸಾಮಾಜಿಕ ಸಂಬಂಧಗಳನ್ನು ವಿವರಿಸುವ ವಿಜ್ಞಾನ
೩. ಸಾಮಾಜಿಕ ಜೀವನ ಮತ್ತು ಅಂತರ್‌ಕ್ರಿಯೆಗಳ ಅಧ್ಯಯನ
೪. ಸಮೂಹದಲ್ಲಿ ಮಾನವನ ವರ್ತನೆಯ ಕುರಿತಾದ ಅಧ್ಯಯನ
೫. ಸಾಮಾಜಿಕ ರಚನೆ ಮತ್ತು ಕಾರ್ಯಗಳ ಕುರಿತಾದ ಅಧ್ಯಯನ
೬. ಸಾಮಾಜಿಕ ಸಂಸ್ಥೆಗಳು ಮತ್ತು ಪ್ರಕ್ರಿಯೆಗಳ ಕುರಿತಾದ ಅಧ್ಯಯನ
೭. ಸಾಮಾಜಿಕ ಕ್ರಿಯೆ ಮತ್ತು ಅದರ ವಿಧಗಳ ಕುರಿತ ಅಧ್ಯಯನ
೮. ಸಾಮಾಜಿಕ ಪ್ರಕ್ರಮ ಮತ್ತು ವ್ಯವಸ್ಥೆಯ ಕುರಿತಾದ ಅಧ್ಯಯನ

ಸಮಾಜಶಾಸ್ತ್ರದ ಉಗಮ

ಒಂದು ವಿಜ್ಞಾನವಾಗಿ ಬೆಳೆಯುತ್ತಿರುವ ಸಮಾಜಶಾಸ್ತ್ರವು ಪ್ರಾಚೀನ ಹಿನ್ನೆಲೆ

ಹೊಂದಿದ್ದರೂ ಅದರ ಇತಿಹಾಸವು ಸಂಕ್ಷಿಪ್ತವಾದುದು. ಪ್ರಾಚೀನ ಕಾಲದಿಂದಲೂ ಸಮಾಜಶಾಸ್ತ್ರೀಯ ವಿಷಯಗಳ ಕುರಿತು ಅಧ್ಯಯನ ನಡೆದರೂ ಪ್ರತ್ಯೇಕ ಮತ್ತು ಸ್ವತಂತ್ರವಾದ ಅಧ್ಯಯನವು ಇತ್ತೀಚೆಗೆ ಪ್ರಾರಂಭಗೊಂಡಿದೆ. ಸಮಾಜಶಾಸ್ತ್ರವು ವ್ಯವಸ್ಥಿತವಾಗಿ ಮತ್ತು ಕ್ರಮಬದ್ಧವಾಗಿ ಬೆಳೆದು ಬಂದಿರುವ ರೀತಿಯನ್ನು ಅವಲೋಕಿಸಿದಾಗ ಅದನ್ನು ನೂತನ ಹಾಗೂ ಯುವ ವಿಜ್ಞಾನ ಎನ್ನಬಹುದು. **ಮೆಕೈವರ್** ಪ್ರಕಾರ ನಿರ್ದಿಷ್ಟ ಸ್ವರೂಪದ ವ್ಯವಸ್ಥಿತ ಜ್ಞಾನವನ್ನು ಹೊಂದಿರುವ ಸಮಾಜಶಾಸ್ತ್ರವು ಸಮಾಜ ವಿಜ್ಞಾನಗಳ ಸಮೂಹದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಆದರೆ ಅದರ ಉಗಮವು ಕೆಲವೇ ದಶಕಗಳ ಹಿಂದೆ ಆಗಿರುವುದನ್ನು ಗುರುತಿಸಬಹುದು.

ಪ್ರಾಚೀನ ಕಾಲದಿಂದಲೂ ಮಾನವ ತನ್ನ ಸುತ್ತಮುತ್ತಲಿನ ಸಾಮಾಜಿಕ ಮತ್ತು ಭೌತಿಕ ಪರಿಸರದ ಕುರಿತು ತಿಳಿದುಕೊಳ್ಳುವ ಪ್ರಯತ್ನ ನಡೆಸುತ್ತಿದ್ದ. ತನ್ನ ಜೀವನವನ್ನು ಸಾಗಿಸಲು ಅವಶ್ಯಕ ಜ್ಞಾನವನ್ನು ಸಂಗ್ರಹಿಸುತ್ತಿದ್ದ. ಮಾನವನು ಸಂಗ್ರಹಿಸಿದ ಜ್ಞಾನವೆಲ್ಲವೂ ಕಲ್ಪನೆ, ಊಹೆ ಮತ್ತು ಭ್ರಮೆಯನ್ನು ಅವಲಂಬಿಸಿತ್ತು. ಜ್ಞಾನವನ್ನು ಸಂಗ್ರಹಿಸಲು ವೈಜ್ಞಾನಿಕವಾದ, ಕ್ರಮಬದ್ಧವಾದ ಮತ್ತು ವ್ಯವಸ್ಥಿತವಾದ ಪ್ರಯತ್ನ ನಡೆಸಿದ ಕಾರಣ ಆಗಿನ ಜ್ಞಾನವು ವಾಸ್ತವಿಕತೆಗಿಂತ ಭಿನ್ನವಾಗಿತ್ತು. ಭೌತಿಕ ಮತ್ತು ಪ್ರಾಕೃತಿಕ ಪರಿಸರದ ಕುರಿತು ವಾಸ್ತವಿಕ ಜ್ಞಾನವನ್ನು ಸಾಮಾಜಿಕ ಪರಿಸರದ ಜ್ಞಾನಕ್ಕಿಂತ ಮೊದಲೇ ಮಾನವನು ಗಳಿಸಿಕೊಂಡನು. ೧೯ನೇ ಶತಮಾನದ ತನಕ ಮಾನವ ಸಂಬಂಧಗಳ ಕುರಿತು ವ್ಯವಸ್ಥಿತವಾದ ಮತ್ತು ವೈಜ್ಞಾನಿಕ ಅಧ್ಯಯನಗಳು ನಡೆದಿರಲಿಲ್ಲ. ಮಾನವನ ಸಾಮಾಜಿಕ ಸಂಬಂಧಗಳ ಅಧ್ಯಯನವು ೧೯ನೇ ಶತಮಾನದ ಮಧ್ಯದಲ್ಲಿ ಆರಂಭವಾಯಿತು.

ಫ್ರಾನ್ಸಿನ ತತ್ವಜ್ಞಾನಿ ಮತ್ತು ಸಮಾಜಶಾಸ್ತ್ರದ ಪಿತಾಮಹನೆಂದು ಗುರುತಿಸಲ್ಪಟ್ಟಿರುವ **ಅಗಸ್ಟ್‌ಕಾಮ್ಟೆ** 'ಸೋಷಿಯಾಲಜಿ' ಎಂಬ ಪದವನ್ನು ಲ್ಯಾಟಿನ್ ಪದ **'ಸೋಷಿಯೇಟಸ್'** ಮತ್ತು 'ಲೋಗಸ್' ಪದಗಳ ಸಂಯೋಜನೆಯ ಮೂಲಕ ಪ್ರಥಮ ಬಾರಿಗೆ ೧೮೩೯ ರಲ್ಲಿ ಬಳಸಿದರು. ಅವರು ತಮ್ಮ **'ಪೊಸಿಟಿವ್ ಫಿಲಾಸಫಿ'** ಎಂಬ ಗ್ರಂಥದಲ್ಲಿ ಸಮಾಜಸಾಸ್ತ್ರದ ಅಧ್ಯಯನದ ವ್ಯಾಪ್ತಿ ಮತ್ತು ಅಧ್ಯಯನದ ವಿಧಾನವನ್ನು ವಿವರಿಸಿದ್ದಾರೆ. ಸಮಾಜಶಾಸ್ತ್ರವು ಮಾನವ ಸಮಾಜದ ಸ್ವರೂಪ ಮತ್ತು ಅದರ ಬೆಳವಣಿಗೆ ಮತ್ತು ಪ್ರಗತಿಗೆ ಸಂಬಂಧಿಸಿದ ನಿಯಮಗಳು ಮತ್ತು ತತ್ವಗಳ ಅಧ್ಯಯನ ನಡೆಸಬೇಕೆಂದು ಕಾಮ್ಟೆ ತಿಳಿಸಿದ್ದಾರೆ. ಸಮಾಜವನ್ನು ಅಧ್ಯಯನ ನಡೆಸುವ ವಿಶಿಷ್ಟವಾದ ವಿಜ್ಞಾನವನ್ನು ರೂಪಿಸುವ ಪ್ರಯತ್ನದಲ್ಲಿ **"ಸೋಷಿಯಲ್ ಫಿಸಿಕ್ಸ್"** ಎಂಬ ಶಿರೋನಾಮೆಯನ್ನು ನೀಡಿ ನಂತರ **'ಸೋಷಿಯಾಲಜಿ'** ಎಂಬ ಪದ ಬಳಸಿದರು.

ಕಾಮ್ಟೆ ಮತ್ತು ಇತರ ಸಾಮಾಜಿಕ ಚಿಂತಕರು ಸಮಾಜದ ಕುರಿತ ವೈಜ್ಞಾನಿಕ ಜ್ಞಾನವೇ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವುದೆಂದು ತಿಳಿಸಿದ್ದಾರೆ. ಸಮಾಜಶಾಸ್ತ್ರವು ವೈಜ್ಞಾನಿಕ ವಿಧಾನವನ್ನು ಬಳಿಸಿ ಸಮಾಜವನ್ನು ಅಧ್ಯಯನ ನಡೆಸುತ್ತದೆ. ಆಗ ನೈಸರ್ಗಿಕ

ವಿಜ್ಞಾನಗಳಂತೆ ಅದೂ ಕೂಡ ಉಪಯುಕ್ತ ಜ್ಞಾನಶಾಖೆ ಎಂದು ಸಾಮಾಜಿಕ ಚಿಂತತಕರು ತಿಳಿಸಿದ್ದಾರೆ. ಈ ರೀತಿಯ ಚಿಂತನೆಯು ಸಮಾಜಶಾಸ್ತ್ರದ ಉಗಮಕ್ಕೆ ನಾಂದಿಯಾಯಿತು.

ಸಮಾಜಶಾಸ್ತ್ರವು ಇತ್ತೀಚೆಗೆ ಉಗಮಗೊಂಡರೂ ಸಾಮಾಜಿಕ ಸಂಬಂಧಗಳ ಮತ್ತು ಸಾಮಾಜಿಕ ವರ್ತನೆಯ ಕುರಿತು ಅಧ್ಯಯನದ ಪ್ರಯತ್ನಗಳು ಪ್ರಾಚೀನ ಕಾಲದಿಂದಲೇ ನಡೆದಿದ್ದವು. ಮಾನವಸಮಾಜ ಮತ್ತು ಸಾಮಾಜಿಕ ಪರಿಸರದ ಕುರಿತು ಪ್ರಾಚೀನ ಕಾಲದಿಂದಲೂ ಚಿಂತಕರು ಕಲ್ಪನೆ ಮತ್ತು ಚಿಂತನೆಯನ್ನಾಧರಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ಪ್ರಾಚೀನ ಸಮಾಜದ ಅಧ್ಯಯನಗಳು ವೈಜ್ಞಾನಿಕ ವಿಧಾನವನ್ನು ಅಳವಡಿಸದೆ ನಡೆಸಿದ ಅಧ್ಯಯನಗಳಾದ ಕಾರಣ ಅವುಗಳಲ್ಲಿ ವಸ್ತುನಿಷ್ಠತೆಯ ಕೊರತೆ ಕಂಡುಬರುತ್ತಿತ್ತು. ಸಮಾಜಕಲ್ಯಾಣ ಮತ್ತು ಪ್ರಗತಿಯ ಉದ್ದೇಶವನ್ನು ಹೊಂದಿದ್ದ ಚಿಂತಕರು ಅವರದೇ ಆದ ಸಿದ್ಧಾಂತಗಳನ್ನು ನಿರೂಪಿಸಿದರು. ಇತಿಹಾಸಕಾರರು, ತತ್ವಶಾಸ್ತ್ರಜ್ಞರು, ಪ್ರವಾದಿಗಳು, ಸಮಾಜ ಸುಧಾರಕರು, ಧರ್ಮ ಪ್ರವರ್ತಕರು, ರಾಜಕೀಯ ನೀತಿ ನಿರೂಪಕರು ತಮ್ಮ ಅಧ್ಯಯನಗಳಲ್ಲಿ ಸಮಾಜಶಾಸ್ತ್ರೀಯ ವಿಚಾರಗಳನ್ನು ಪ್ರತಿಬಿಂಬಿಸಿದ್ದಾರೆ.

ಸಮಾಜಶಾಸ್ತ್ರದ ಉಗಮದ ಹಿನ್ನೆಲೆಯಲ್ಲಿ ಬೌದ್ಧಿಕ ಚಿಂತನೆಗಳು

ಪ್ಲೇಟೋ ನ 'ದಿ ರಿಪಬ್ಲಿಕ್', **ಅರಿಸ್ಟಾಟಲ್**ನ 'ಎಥಿಕ್ಸ್ ಎಂಡ್ ಪೊಲಿಟಿಕ್ಸ್', **ಸಿಸೆರೋ**ವಿನ 'ಆನ್ ಜಸ್ಟೀಸ್', **ಕೌಟಿಲ್ಯ**ನ 'ಅರ್ಥಶಾಸ್ತ್ರ', **ಶುಕ್ರಾಚಾರ್ಯ**ನ 'ನೀತಿಶಾಸ್ತ್ರ', ಮನುವಿನ 'ಮನುಸ್ಮೃತಿ', ಮುಂತಾದ ತತ್ವಶಾಸ್ತ್ರ ಮತ್ತು ಚಿಂತಕರ ಚಿಂತನೆಯಲ್ಲಿ ಸಮಾಜಶಾಸ್ತ್ರೀಯ ವಿಚಾರಧಾರೆಗಳ ವಿವರಣೆಗಳು ದೊರಕುತ್ತವೆ. **ಪ್ಲೇಟೋ** ತನ್ನ 'ರಿಪಬ್ಲಿಕ್' ಗ್ರಂಥದಲ್ಲಿ ನಗರ ಸಮುದಾಯದವರ ಜೀವನದ ವಿಶ್ಲೇಷಣೆ ಮಾಡಿದ್ದಾನೆ. ಅರಿಸ್ಟಾಟಲ್ ರಾಜ್ಯ ಮತ್ತು ಸಮಾಜಗಳ ವ್ಯವಸ್ಥಿತ ಅಧ್ಯಯನವನ್ನು ಮಾಡಿದ್ದಾನೆ. ಪ್ಲೇಟೋ ಮತ್ತು ಅರಿಸ್ಟಾಟಲ್ ಆದರ್ಶ ರಾಜ್ಯದ ಕಲ್ಪನೆಯನ್ನು ವಿವರಿಸುವ ಸಂದರ್ಭದಲ್ಲಿ ನಡೆಸಿದ ರಾಜ್ಯ ಮತ್ತು ಸಮಾಜಗಳ ನಡುವಿನ ಸಂಬಂಧದ ಅಧ್ಯಯನದಲ್ಲಿ ಸಾಮಾಜಿಕ ಸಂಬಂಧಗಳ ಮೇಲೆ ರಾಜಕೀಯ ಅಂಶಗಳು ಪ್ರಭಾವ ಬೀರುವುದನ್ನು ನಾವು ಗಮನಿಸಬಹುದು. ಸಾಮಾಜಿಕ ಮತ್ತು ರಾಜಕೀಯ ಸಂಬಂಧಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸುವ ಪ್ರಯತ್ನ ಅವರ ಅಧ್ಯಯನದಲ್ಲಿ ಕಂಡುಬರುವುದಿಲ್ಲ. **ಅರಿಸ್ಟಾಟಲ್** ಮಾನವನು ಸಾಮಾಜಿಕ ಜೀವಿ, ಮಾನವನ ಸಹಜ ಪ್ರಭಾವದಿಂದಲೇ ಸಮಾಜ ಉಗಮವಾಯಿತು ಎಂದಿದ್ದಾರೆ. ಸಾಮಾಜಿಕ ವಿದ್ಯಮಾನಗಳ ಅಧ್ಯಯನ ನಡೆಸುವಾಗ ಪ್ಲೇಟೋ ಮತ್ತು ಅರಿಸ್ಟಾಟಲ್ ಪೂರ್ವಾಗ್ರಹಕ್ಕೆ ಒಳಗಾಗಿ ಅಧ್ಯಯನ ನಡೆಸಿರುವುದು ಕಂಡುಬರುತ್ತದೆ. ಅವರು ಸಮಾಜದ ವಸ್ತುನಿಷ್ಠ ಮತ್ತು ವೈಜ್ಞಾನಿಕ ಅಧ್ಯಯನಕ್ಕೆ ಪ್ರಯತ್ನಗಳನ್ನು ನಡೆಸದೆ ಕಲ್ಪನೆ ಮತ್ತು ಯೋಚನೆಯ ನೆಲೆಯಲ್ಲಿ ಅಧ್ಯಯನ ಕೈಗೊಂಡಿದ್ದಾರೆ. **ಕೌಟಿಲ್ಯ, ಶುಕ್ರಾಚಾರ್ಯ, ಮನು, ಕನ್ಫ್ಯೂಶಿಯಸ್** ಮುಂತಾದ ದಾರ್ಶನಿಕರು ತಮ್ಮ ಬರಹಗಳಲ್ಲಿ ನೈತಿಕತೆ, ಪಾರಮಾರ್ಥಿಕತೆ, ಮಾನವನ ಜೀವನ,

ಜೀವನದ ಉದ್ದೇಶ, ಮೌಲ್ಯಗಳು, ವ್ಯಕ್ತಿ ಮತ್ತು ಸಮೂಹಜೀವನ ಮುಂತಾದ ವಿಚಾರಗಳ ಅಧ್ಯಯನದಲ್ಲಿ ಆಧ್ಯಾತ್ಮಿಕತೆ ಕಡೆಗೆ ಹೆಚ್ಚಿನ ಮಹತ್ವ ನೀಡಿದ್ದಾರೆ. ದಾರ್ಶನಿಕರ ಕೃತಿಗಳಲ್ಲಿ ಮಾನವನ ಸಂಬಂಧಗಳನ್ನು ವಿಶ್ಲೇಷಿಸುವಾಗ ವಸ್ತುನಿಷ್ಠತೆ ಮತ್ತು ವೈಜ್ಞಾನಿಕತೆಗಿಂತ ಆಧ್ಯಾತ್ಮಿಕತೆ ಕಡೆಗೆ ಹೆಚ್ಚಿನ ಒಲವನ್ನು ತೋರಿದ್ದಾರೆ. ಮುಸ್ಲಿಂ ಚಿಂತಕ ಇಬ್ನ್ ಖಲ್ದೂನ್ (Ibn Khaladun) ಸಮಾಜದ ಉಗಮಕ್ಕೆ ಐಕ್ಯಮತ್ಯ ಅಥವಾ ಒಗ್ಗೂಡುವಿಕೆಯ ಭಾವನೆಯೇ ಕಾರಣವೆಂದು ತಿಳಿಸಿದ್ದಾರೆ.

೧೬ನೇ ಶತಮಾನದ ಪ್ರಾರಂಭದಿಂದಲೂ ಚಿಂತಕರು ಮಾನವ ಸಮಾಜದ ಸಮಸ್ಯೆಗಳ ಸ್ವರೂಪವನ್ನು ವಸ್ತುನಿಷ್ಠ ಅಧ್ಯಯನ ನಡೆಸುವ ಪ್ರಯತ್ನ ನಡೆಸಿದ್ದಾರೆ. **'ಸಿಸೆರೋ'** 'ಆನ್ ಜಸ್ಟೀಸ್' (On Justice), **ಮೆಕೈವಲ್ಲಿ**ಯವರ 'ದಿ ಪ್ರಿನ್ಸ್', **ಸರ್ ಥಾಮಸ್ ಮೂರ್** 'ಯುಟೋಪಿಯಾ' (Utopia) ಮುಂತಾದ ಪುಸ್ತಕಗಳಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಕುರಿತು ಉಲ್ಲೇಖಗಳಿವೆ. **ಮೆಕೈವಲ್ಲಿ**ಯವರು ತಮ್ಮ ಕೃತಿಯಲ್ಲಿ ಯಶಸ್ವಿ ಆಡಳಿತಗಾರನ ಕುರಿತು ವಿವರಿಸುವುದಕ್ಕಿಂತ ರಾಜ್ಯ ಆಳ್ವಿಕೆಯ ಹಿನ್ನೆಲೆಯಲ್ಲಿರುವ ನೀತಿ ನಿಯಮಾವಳಿಗಳ ಕುರಿತು ಪ್ರಸ್ತಾಪಿಸಿದ್ದಾರೆ. **ಸರ್ ಥಾಮಸ್ ಮೂರ್** ರವರು ತಮ್ಮ ಕೃತಿಯಲ್ಲಿ ದೈನಂದಿನ ಸಾಮಾಜಿಕ ಸಮಸ್ಯೆಗಳ ನಿರ್ವಹಣೆಯ ಕುರಿತು ವಿವರಣೆ ನೀಡಿದ್ದಾರೆ. ಸರ್ ಥಾಮಸ್ ಮೂರ್‌ರವರು ಅನುಸರಿಸಿದ ವಸ್ತುನಿಷ್ಠ ಅಧ್ಯಯನ ವಿಧಾನವನ್ನು **ಸರ್ ಫ್ರಾನ್ಸಿಸ್‌ಬೇಕನ್**‌ರವರು 'ನ್ಯೂ ಅಟ್ಲಾಂಟಿಸ್' ಮತ್ತು **ಜೇಮ್ಸ್ ಹ್ಯಾರಿಂಗ್‌ಟನ್** ರವರು ಅನುಸರಿಸಿದರು. ಇಟಲಿಯ ವಿಕೊ ಮತ್ತು ಫ್ರಾನ್ಸಿನ **ಮಾಂಟೆಸ್ಕ್ಯೂ** ಸಾಮಾಜಿಕ ವಿದ್ಯಮಾನಗಳ ಅಧ್ಯಯನದಲ್ಲಿ ವೈಜ್ಞಾನಿಕ ವಿಧಾನವನ್ನು ಬಳಸಿದರು. **ಥಾಮಸ್ ಹಾಬ್ಸ್**‌ರವರು **'ಲೆವಿಯಾಥನ್'** ಎಂಬ ಗ್ರಂಥದಲ್ಲಿ ಭಯಾನಕ ಸನ್ನಿವೇಶವು ಮಾನವರಿಗೆ ಅನಿವಾರ್ಯವಾಗಿ ರಕ್ಷಣೆ ಪಡೆದುಕೊಳ್ಳುವಂತೆ ಮಾಡಿರುವ ಸನ್ನಿವೇಶವೇ ಸಮಾಜದ ಉಗಮಕ್ಕೆ ಕಾರಣ ಎಂದಿದ್ದಾರೆ.

೧೮ನೇ ಶತಮಾನದಲ್ಲಿ ಚಿಂತಕರು ಸಾಮಾಜಿಕ ಪರಿವರ್ತನೆಯ ಕುರಿತು ಹೆಚ್ಚಿನ ಆಸಕ್ತಿ ತಳೆದರು. ಸಮಾಜವನ್ನು ಪ್ರಗತಿಪಥದತ್ತ ಮುನ್ನಡೆಸಬೇಕು ಎನ್ನುವ ನೆಲೆಯಲ್ಲಿ ಪ್ರಾರಂಭಗೊಂಡ ಸಾಮಾಜಿಕ ಪರಿವರ್ತನೆಯ ಅಧ್ಯಯನಗಳು ಸಮಾಜಶಾಸ್ತ್ರವು ಸಾಮಾಜಿಕ ತತ್ವಶಾಸ್ತ್ರದಿಂದ ಪ್ರತ್ಯೇಕಗೊಳ್ಳುವ ಸೂಚನೆ ಮೂಡಿಸಿದವು. ಸಾಮಾಜಿಕ ಒಡಂಬಡಿಕೆಯ ಸಿದ್ಧಾಂತದಲ್ಲಿ **ಜಾನ್‌ಲಾಕ್, ರೂಸೋ, ಥಾಮಸ್ ಹಾಬ್ಸ್** ರವರ ವೈಚಾರಿಕ ಚಿಂತನೆಗಳು ಬೆಳವಣಿಗೆಗೆ ಅನುವು ಮಾಡಿದವು. ಆ ಕಾಲದ ಕ್ರಾಂತಿಕಾರಿ ಚಿಂತನೆ, ವೈಚಾರಿಕತೆಯ ಬೆಳವಣಿಗೆ ಚಿಂತಕರಲ್ಲಿ ಮೂಡಿದ ಹೊಸ ಕಲ್ಪನೆಗಳ ವಿಚಾರಗಳು, ಸಿದ್ಧಾಂತಗಳು ಸಮಾಜಶಾಸ್ತ್ರದ ಉಗಮ ಮತ್ತು ಬೆಳವಣಿಗೆಗೆ ಕಾರಣವಾದುವು. ವೈಚಾರಿಕತೆಯಲ್ಲಿ ಆದ ಕ್ರಾಂತಿಕಾರಕ ಬದಲಾವಣೆ ಮತ್ತು ಬೆಳವಣಿಗೆ ಕಾಲದಲ್ಲಿ ನೈಸರ್ಗಿಕ ವಿಜ್ಞಾನಗಳು ಸದೃಢವಾದ ನೆಲೆಯನ್ನು ಕಂಡುಕೊಂಡವು. ಸಾಮಾಜಿಕ ಚಿಂತನೆಯ ಮೇಲೆ ನೈಸರ್ಗಿಕ ವಿಜ್ಞಾನಗಳು

ಪ್ರಭಾವ ಬೀರಿದವು. ಡಾರ್ವಿನ್‌ರವರ 'ಜೀವವಿಕಾಸ' ಸಿದ್ಧಾಂತವು 'ಸಾಮಾಜಿಕ ವಿಕಾಸ' ಸಿದ್ಧಾಂತಕ್ಕೆ ವೇದಿಕೆಯಾಯಿತು. ಟರ್ಗೋಟ್, ಕೊಂಡೆರ್‌ಸಟ್, ಸ್ಪೆನ್ಸರ್ ಮುಂತಾದ ಚಿಂತಕರು ವಿಕಾಸತತ್ವದ ನೆಲೆಯಲ್ಲಿ ಸಾಮಾಜಿಕ ಪರಿವರ್ತನೆಯ ಅಧ್ಯಯನ ನಡೆಸಿದ್ದಾರೆ. ಪರಿವರ್ತನೆಯು ಮಾನವನ ನಿಯಂತ್ರಣಕ್ಕೆ ಮಿಗಿಲಾದುದು ಎಂದು ಅವರು ಪರಿಗಣಿಸಿದ್ದಾರೆ. ಸಮಾಜವು ಪರಿವರ್ತನೆಯತ್ತ ಸಾಗುವುದು ನಿಸರ್ಗದ ನಿಯಮವೇ ಆಗಿದೆ.

ಕ್ರಾಂತಿಕಾರಿ ಚಿಂತನೆ ಮತ್ತು ವೈಚಾರಿಕತೆಯಲ್ಲಾದ ಬೆಳವಣಿಗೆಯು ೧೯ನೇ ಶತಮಾನದಲ್ಲಿ ಸಮಾಜಶಾಸ್ತ್ರದ ಉಗಮಕ್ಕೆ ವೇದಿಕೆಯನ್ನು ಒದಗಿಸಿತು. ವಿಕೋರವರ ಮಾನವತಾ ಐತಿಹಾಸಿಕ ತತ್ವ ಸಮಾಜದ ಅಧ್ಯಯನಕ್ಕೆ ಭೌತವಿಜ್ಞಾನಗಳ ತತ್ವಗಳನ್ನು ಬಳಸಬೇಕೆಂದು ಒತ್ತಾಯಿಸಿತು. ಮಾಂಟೆಸ್ಕ್ಯೂ, ಮಿಲ್ಲರ್ ಮತ್ತು ಫರ್ಗುಸನ್ ರವರ ಪ್ರಯತ್ನ ಹಾಗೂ ವಾಲ್ಟೇರ್ ಮತ್ತು ರೂಸೋ ರವರ ವಿಮರ್ಶಕ ವಿಚಾರತತ್ವ ಈ ಎಲ್ಲಾ ವಿಚಾರಗಳು ಸಮಾಜವನ್ನು ಅಧ್ಯಯನ ನಡೆಸಲು ವೈಜ್ಞಾನಿಕ ಅಧ್ಯಯನ ಅವಶ್ಯವೆಂದು ತಿಳಿಸಿದವು. ಈ ವಿಚಾರಗಳೇ ಸಮಾಜಶಾಸ್ತ್ರದ ಉಗಮಕ್ಕೆ ನಾಂದಿಯಾದವು.

ಸಮಾಜಶಾಸ್ತ್ರದ ಉಗಮಕ್ಕೆ ಕಾರಣವಾದ ಸಾಮಾಜಿಕ ಸನ್ನಿವೇಶಗಳು

ಸಮಾಜಶಾಸ್ತ್ರದ ಉಗಮಕ್ಕೆ ವೈಚಾರಿಕತೆ ಮತ್ತು ಬೌದ್ಧಿಕ ಚಿಂತನೆಗಳು ಕಾರಣವಾಗುವಂತೆ ೧೮ ಮತ್ತು ೧೯ನೇ ಶತಮಾನದ ಪಾಶ್ಚಿಮಾತ್ಯ ರಾಷ್ಟ್ರಗಳ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಸನ್ನಿವೇಶಗಳು ಮಾನವ ಸಮಾಜದ ವೈಜ್ಞಾನಿಕ ಅಧ್ಯಯನಕ್ಕೆ ಅನಿವಾರ್ಯತೆಯನ್ನುಂಟು ಮಾಡಿದವು. ಕೈಗಾರಿಕಾ ಕ್ರಾಂತಿ, ರಾಜಕೀಯ ಕ್ರಾಂತಿ, ನಗರೀಕರಣ, ಸಮಾಜವಾದದ ಉದಯ, ಧಾರ್ಮಿಕ ಪರಿವರ್ತನೆ, ವಿಜ್ಞಾನದ ಬೆಳವಣಿಗೆ ಮುಂತಾದುವುಗಳು ಸಮಾಜದ ವೈಜ್ಞಾನಿಕ ಅಧ್ಯಯನಕ್ಕೆ ಅನಿವಾರ್ಯತೆಯ ಸನ್ನಿವೇಶವನ್ನು ಸೃಷ್ಟಿಸಿದವು.

ರಾಜಕೀಯ ಕ್ರಾಂತಿ

ಫ್ರಾನ್ಸಿನ ರಾಜಕೀಯ ಕ್ರಾಂತಿಯು ರಾಜಕೀಯ ಕ್ಷೇತ್ರದಲ್ಲಿ ಪರಿವರ್ತನೆಯ ಜತೆಗೆ ನಂಬಿಕೆ ಶಿಥಿಲಗೊಂಡು ಹೊಸ ಸಾಮಾಜಿಕ ವ್ಯವಸ್ಥೆಯ ಉಗಮಕ್ಕೆ ನಾಂದಿಯಾಯಿತು. ಶ್ರೀಮಂತರ ಪ್ರಭುತ್ವ ಮತ್ತು ರಾಜಪ್ರಭುತ್ವ ಅಂತ್ಯಗೊಂಡಿತು. ಸಾಮಾಜಿಕ ಅಸಮಾನತೆಗಳಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯು ದೈವ ನಿರ್ಮಿತವಾದುದೆಂಬ ಕಲ್ಪನೆ ಶಿಥಿಲಗೊಂಡಿತು. ರಾಜಕೀಯ ಅಭದ್ರತೆ ಏರ್ಪಟ್ಟು, ಶಾಂತಿ ಮತ್ತು ಸುವ್ಯವಸ್ಥೆಯ ಸಮಸ್ಯೆ ಏರ್ಪಟ್ಟಿತ್ತು. ಪರಿವರ್ತನೆಯ ವರ್ತುಲವನನ್ನು ನಿಯಂತ್ರಿಸಲು ಸಾಧ್ಯವಿಲ್ಲವೆಂದು ಭಾವಿಸಿದ ಕೆಲವು ಚಿಂತಕರು ರಾಜಕೀಯ ಕ್ರಾಂತಿಯಿಂದ ಅಸ್ತಿತ್ವಕ್ಕೆ ಬಂದ ವ್ಯವಸ್ಥೆಗೆ ಪೂರಕವಾಗಿ ಹೊಸ ವ್ಯವಸ್ಥೆಯನ್ನು ಸ್ಥಾಪಿಸಲು ಪ್ರಯತ್ನಗಳು ನಡೆದವು. ಇಂತಹ ಪ್ರಯತ್ನಗಳು ಹೊಸ ವಿಜ್ಞಾನವಾದ ಸಮಾಜಶಾಸ್ತ್ರದ ಉಗಮಕ್ಕೆ ನಾಂದಿ ಹಾಡಿದವು.

ಕೈಗಾರಿಕಾ ಕ್ರಾಂತಿ

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಏರ್ಪಟ್ಟ ರಾಜಕೀಯ ಕ್ರಾಂತಿಯು ಸಾಮಾಜಿಕ ಜೀವನದಲ್ಲಿ ಪರಿವರ್ತನೆಯ ಸರಮಾಲೆಯನ್ನು ಸೃಷ್ಟಿಸಿತು. ಹೊಸ ತಂತ್ರಜ್ಞಾನದ ಆವಿಷ್ಕಾರ, ಕೈಗಾರಿಕೆಗಳ ಸ್ಥಾಪನೆ, ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸಿತು. ಗ್ರಾಮೀಣ ಜನರು ಕೈಗಾರಿಕಾ ಕೇಂದ್ರಗಳಿಗೆ ವಲಸೆ ಬಂದು ನೆಲಸಿದುದರಿಂದ ಕೈಗಾರಿಕಾಕೇಂದ್ರಗಳು ನಗರಗಳಾಗಿ ಮಾರ್ಪಟ್ಟವು. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಲಭ್ಯವಿದ್ದ ಕಾರಣ ಕಾರ್ಮಿಕರ ಶೋಷಣೆ ಪ್ರಾರಂಭಗೊಂಡಿತು. ನಗರಗಳಲ್ಲಿ ವಸತಿ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ, ಕೊಳಚೆ ಪ್ರದೇಶ ನೈರ್ಮಲ್ಯೀಕರಣ, ಬಡತನ, ಅಭದ್ರತೆ ಮುಂತಾದ ಹಲವು ಸಮಸ್ಯೆಗಳು ಎದುರಾದವು. ಕೈಗಾರಿಕಾ ಕ್ರಾಂತಿಯಿಂದ ಏರ್ಪಟ್ಟ ಸಮಸ್ಯೆಗಳನ್ನು ಮತ್ತು ಕಷ್ಟಗಳನ್ನು ಅರಿತುಕೊಂಡು ಸಮಸ್ಯೆಗೆ ಪರಿಹಾರ ಹುಡುಕುವ ಕುರಿತು ಸಾಮಾಜಿಕ ಚಿಂತಕರು ಯೋಚಿಸಲಾರಂಭಿಸಿದರು. ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಿ ಸಾಮಾಜಿಕ ಜೀವನವನ್ನು ಕ್ರಮಬದ್ಧಗೊಳಿಸುವ ಯತ್ನವು ಸಮಾಜಶಾಸ್ತ್ರದ ಉದಯಕ್ಕೆ ಕಾರಣವಾಯಿತು.

ಕೈಗಾರಿಕಾ ಕ್ರಾಂತಿಯಿಂದ ಬಂಡವಾಳಶಾಹಿತ್ವ ಸ್ಥಾಪನೆಗೊಂಡು ಭೂಮಾಲಿಕರ ಪ್ರಭುತ್ವ ನಾಶವಾಯಿತು. ಬಂಡವಾಳಶಾಹಿಗಳು ಸಂಪತ್ತನ್ನು ಕ್ರೋಢೀಕರಿಸುವ ಪ್ರಯತ್ನದಲ್ಲಿ ಕಾರ್ಮಿಕರನ್ನು ನಿರಂತರವಾಗಿ ಶೋಷಣೆಗೆ ಒಳಪಡಿಸಿದರು. ಇದರ ಪರಿಣಾಮದಿಂದ ಸಮಾಜದಲ್ಲಿ ಕಾರ್ಮಿಕ ವರ್ಗ ಮತ್ತು ಬಂಡವಾಳಶಾಹಿ ವರ್ಗಗಳು ಅಸ್ತಿತ್ವಕ್ಕೆ ಬಂದವು. ಕಾರ್ಲ್‌ಮಾರ್ಕ್ಸ್, ಏಂಗಲ್ಸ್ ಮುಂತಾದವರು ಬಂಡವಾಳಶಾಹಿ ವ್ಯವಸ್ಥೆಯನ್ನು ವಿರೋಧಿಸಿ ಸಮಾಜವಾದಿ ಸಮಾಜದ ನಿರ್ಮಾಣಕ್ಕೆ ಕರೆ ನೀಡಿದರು.

ರಾಜಕೀಯ ಕ್ರಾಂತಿ ಮತ್ತು ಕೈಗಾರಿಕಾ ಕ್ರಾಂತಿಯಿಂದ ಸಾಮಾಜಿಕ ಪರಿವರ್ತನೆಗಳು ಏರ್ಪಡುವುದರ ಜೊತೆಗೆ ಧಾರ್ಮಿಕ ಚಿಂತನೆಗಳಲ್ಲಿಯೂ ಪರಿವರ್ತನೆಗಳಾದವು. ಧಾರ್ಮಿಕ ಶ್ರದ್ಧೆ ಕಡಿಮೆಯಾಗಿ ನೈತಿಕತೆಯು ಶಿಥಿಲಗೊಂಡಿತು. ಕಾಮ್ಟೆ, ಡರ್ಕಿಮ್, ವೇಬರ್, ಮಾರ್ಕ್ಸ್ ಮುಂತಾದವರು ಧರ್ಮದ ಕುರಿತು ವೈಜ್ಞಾನಿಕ ಅಧ್ಯಯನ ನಡೆಸಿದರು. ವಿವಿಧ ವಿಜ್ಞಾನಗಳಲ್ಲಿ ಆದ ಪ್ರಗತಿಯನ್ನು ಕಂಡ ಸಾಮಾಜಿಕ ಚಿಂತಕರು ವೈಜ್ಞಾನಿಕ ತತ್ವಗಳನ್ನು ಅಳವಡಿಸಿ ಸಮಾಜವನ್ನು ಅಧ್ಯಯನ ನಡೆಸುವ ಪ್ರಯತ್ನ ನಡೆಸಿದರು. ಭೌತವಿಜ್ಞಾನದ ರೀತಿಯಲ್ಲಿ ಸಮಾಜಶಾಸ್ತ್ರವನ್ನು ರೂಪಿಸುವ ಪ್ರಯತ್ನದಲ್ಲಿ ಸಮಾಜಶಾಸ್ತ್ರವನ್ನು ಪ್ರಾರಂಭದಲ್ಲಿ ಸಾಮಾಜಿಕ ಭೌತಶಾಸ್ತ್ರವೆಂದು ಕರೆದಿದ್ದರು.

ಬೌದ್ಧಿಕ ಚಿಂತನೆಗಳು ಮತ್ತು ಸಾಮಾಜಿಕ ಸನ್ನಿವೇಶಗಳು ಮಾನವಸಮಾಜ ಮತ್ತು ಮಾನವನ ಸಾಮಾಜಿಕ ಜೀವನವನ್ನು ಪ್ರತ್ಯೇಕವಾಗಿ ಮತ್ತು ಸ್ವತಂತ್ರವಾಗಿ ವೈಜ್ಞಾನಿಕ ವಿಧಾನವನ್ನು ಅಳವಡಿಸಿ ಅಧ್ಯಯನ ಮಾಡಲು ಮಾಡಿದ ಪ್ರಯತ್ನ ಸಮಾಜಶಾಸ್ತ್ರದ ಉದಯಕ್ಕೆ ಕಾರಣವಾಯಿತು.

ಸಮಾಜಶಾಸ್ತ್ರದ ಮೂಲಪುರುಷರು

೧೯ನೇ ಶತಮಾನದಲ್ಲಿ ಅಗಸ್ಟ್‌ಕಾಮ್ಟ್, ಮ್ಯಾಕ್ಸ್‌ವೇಬರ್, ಹರ್ಬರ್ಟ್ ಸ್ಪೆನ್ಸರ್, ಡರ್ಕೀಂ ರವರ ಚಿಂತನೆಯ ಫಲವಾಗಿ ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಅಧ್ಯಯನ ಶಾಸ್ತ್ರವಾಗಿ ಸಮಾಜಶಾಸ್ತ್ರವು ಉಗಮಗೊಂಡು ವಿಕಾಸವಾಯಿತು. ಇವರನ್ನು ಸಮಾಜಶಾಸ್ತ್ರದ ಮೂಲಪುರುಷರು ಅಥವಾ ಸ್ಥಾಪಕ ಪಿತಾಮಹರೆಂದು ಪರಿಗಣಿಸಲಾಗುತ್ತದೆ. ಸಮಾಜದ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ವೈಜ್ಞಾನಿಕ ವಿಧಾನವನ್ನು ಬಳಸಿ ಅಧ್ಯಯನ ನಡೆಸಿದ ಯತ್ನವು ಹೊಸ ವಿಜ್ಞಾನವಾದ ಸಮಾಜಶಾಸ್ತ್ರದ ಉಗಮಕ್ಕೆ ಮತ್ತು ಬೆಳವಣಿಗೆಗೆ ವೈಜ್ಞಾನಿಕ ತಳಹದಿ ಒದಗಿಸಿತು. ಇವರ ಅಧ್ಯಯನಗಳು ಸಮಾಜಶಾಸ್ತ್ರಕ್ಕೆ ಭದ್ರ ಬುನಾದಿಯನ್ನು ಒದಗಿಸಿ ಅದರ ಬೆಳವಣಿಗೆಗೆ ಅಪಾರವಾದ ಕೊಡುಗೆಗಳನ್ನು ನೀಡಿವೆ.

ಅಗಸ್ಟ್‌ಕಾಮ್ಟ್ (೧೭೯೮-೧೮೫೭)

ಅಗಸ್ಟ್ ಕಾಮ್ಟ್ ಫ್ರಾನ್ಸ್ ದೇಶದ ಪ್ರಮುಖ ತತ್ವಜ್ಞಾನಿ ಮತ್ತು ಸಾಮಾಜಿಕ ಚಿಂತಕ. 'ಸೋಷಿಯಾಲಜಿ' ಎಂಬ ಪದವನ್ನು ಬಳಸಿ ಸಮಾಜಶಾಸ್ತ್ರಕ್ಕೆ ಪ್ರತ್ಯೇಕ ಅಸ್ತಿತ್ವವನ್ನು ನೀಡಿ ಅಧ್ಯಯನದ ವ್ಯಾಪ್ತಿ ಮತ್ತು ಅಧ್ಯಯನದ ವಿಧಾನದ ಕುರಿತು ಸ್ಪಷ್ಟ ಕಲ್ಪನೆ ನೀಡಿರುವ **ಕಾಮ್ಟ್‌ರವರನ್ನು ಸಮಾಜಶಾಸ್ತ್ರದ ಸ್ಥಾಪಕ ಹಾಗೂ ಸಮಾಜಶಾಸ್ತ್ರದ ಪಿತಾಮಹನೆಂದು** ಕರೆಯಲಾಗುತ್ತದೆ. ಅವರು ಭೌತವಿಜ್ಞಾನಗಳಂತೆ ಒಂದು ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಸಮಗ್ರ ಸಮಾಜದ ಅಧ್ಯಯನದ ಶಾಖೆಯು ಅವಶ್ಯಕವೆಂದು ಪ್ರತಿಪಾದಿಸಿದರು. ಕೈಗಾರಿಕಾ ಕ್ರಾಂತಿಯಿಂದ ಏರ್ಪಟ್ಟ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಸಮಾಜಶಾಸ್ತ್ರದ ಪಾತ್ರವು ಅಪಾರವಾದುದು ಎಂದು **ಕಾಮ್ಟ್** ಮನಗಂಡಿದ್ದರು. ಅವರು ಸಾಮಾಜಿಕ ಜೀವನದ ಅವೈಚಾರಿಕ ಮತ್ತು ಅವೈಜ್ಞಾನಿಕ ಅಧ್ಯಯನವನ್ನು ಟೀಕಿಸಿ ಸಮಾಜದ ಅಧ್ಯಯನಕ್ಕೆ ವೈಜ್ಞಾನಿಕ ವಿಧಾನ ಬಳಸಬೇಕೆಂದು ಪ್ರತಿಪಾದಿಸಿದರು. ಅವರು **"ಪೊಸಿಟಿವ್ ಫಿಲಾಸಫಿ"** ಎಂಬ ಗ್ರಂಥದಲ್ಲಿ **'ಸೋಷಿಯಾಲಜಿ'** ಎಂಬ ಪದವನ್ನು ೧೮೩೯ ರಲ್ಲಿ ಪ್ರಥಮ ಬಾರಿ ಬಳಸಿದರು.

೧೭೯೮ ರಲ್ಲಿ ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದ ಕಾಮ್ಟ್‌ರವರು ಅಸಾಧಾರಣ ಮೇಧಾವಿ, ಸಂಘಟನಾ ಚತುರ ಹಾಗೂ ಕ್ರಾಂತಿ ಪುರುಷರಾಗಿದ್ದರು. ವಿದ್ಯಾರ್ಥಿಯಾಗಿ **ಕಾಮ್ಟ್** ಹಲವು ಪಾರಿತೋಷಕ ಮತ್ತು ಬಹುಮಾನಗಳನ್ನು ಪಡೆದಿದ್ದರು. ಪ್ರತಿಷ್ಠಿತ ಏಕೊಲೆ ಪಾಲಿಟೆಕ್ನಿಕ್‌ನಲ್ಲಿ ವಿದ್ಯಾರ್ಜನೆಗೆ ಸೇರಿ ಕ್ರಾಂತಿಕಾರಕ ಚಿಂತನೆಗಳನ್ನು ಅಭಿವ್ಯಕ್ತಗೊಳಿಸಿದರು. ಪ್ರಸಿದ್ಧ ಬರಹಗಾರ, ಚಿಂತಕರಾದ **ಸೈಂಟ್ ಸೈಮನ್** ಜತೆಗೆ ಸಂಪರ್ಕ ಪಡೆದು ಅವರ ಕಾರ್ಯದರ್ಶಿಯಾಗಿ, ಸಹ ಚಿಂತಕರಾಗಿ, ಸಹ ಬರಹಗಾರರಾಗಿ ಕೆಲಸ ಮಾಡಿದರು. ಮೇಧಾವಿ ಮತ್ತು ಹಠಮಾರಿ ಎಂದು ಗುರುತಿಸಲ್ಪಟ್ಟ ಕಾಮ್ಟ್‌ರವರು ವೈವಾಹಿತ ಜೀವನದಲ್ಲಿ ನಿರಾಶೆ - ಅತೃಪ್ತಿಯನ್ನು ಅನುಭವಿಸಿದರು. ಕಾಮ್ಟ್‌ರವರು **"ಪೊಸಿಟಿವ್ ಫಿಲಾಸಫಿ"** ಮತ್ತು **"ಪೊಸಿಟಿವ್ ಪೊಲಿಟಿ"** ಎಂಬ ಗ್ರಂಥಗಳಲ್ಲಿ ಸಮಾಜದ

ಕುರಿತು ವಿಶ್ಲೇಷಣೆ ನೀಡಿದ್ದಾರೆ. ಅವರು ಈ ಗ್ರಂಥಗಳಲ್ಲಿ ಸಮಾಜಶಾಸ್ತ್ರವನ್ನು ವಿಜ್ಞಾನವೆಂದು ಪ್ರತಿಪಾದಿಸಿದ್ದಾರೆ. ಕಾಮ್ಟ್‌ರವರು ಸಾಮಾಜಿಕ ಅಂಶಗಳ ಅವೈಚಾರಿಕ ಮತ್ತು ಕಲ್ಪನೆಗಳನ್ನಾಧರಿಸಿದ ಅವೈಜ್ಞಾನಿಕ ಅಧ್ಯಯನವನ್ನು ಟೀಕಿಸಿ ವೈಜ್ಞಾನಿಕ ವಿಧಾನವನ್ನು ತಮ್ಮ ಅಧ್ಯಯನದಲ್ಲಿ ಬಳಸಿದರು. ಕಾಮ್ಟ್‌ರವರು **"ಮಾನವತಾ ಧರ್ಮ"**ವನ್ನು ಸ್ಥಾಪಿಸಿದರು. ಅದು ಅವರೊಂದಿಗೆ ಅಂತ್ಯಗೊಂಡರೂ ಅವರು ಅಡಿಪಾಯ ಹಾಕಿ ಅಸ್ತಿತ್ವಕ್ಕೆ ತಂದ ಸಮಾಜಶಾಸ್ತ್ರವೆಂಬ ವಿಜ್ಞಾನವು ವಿಶ್ವವ್ಯಾಪಿಯಾಗಿ ಬೆಳೆದಿದೆ.

ಕಾಮ್ಟ್ ಮಾನವ ಚಿಂತನೆಯ ಸ್ವರೂಪ, ಸಂವಾದಿಸುವ ರೀತಿ, ವಿಶ್ಲೇಷಣೆ ಮತ್ತು ವರ್ಗೀಕರಣದ ಕ್ರಮಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಸಾಮಾಜಿಕ ವಿದ್ಯಮಾನಗಳು ಮತ್ತು ಸಮಾಜದ ಬೆಳವಣಿಗೆಯನ್ನು ಅಧ್ಯಯನ ನಡೆಸಲು ವೈಜ್ಞಾನಿಕ ವಿಧಾನವನ್ನು ಬಳಸಬೇಕು. ಕಾಮ್ಟ್‌ರವರು ಮೂರು ಹಂತಗಳ ಸೂತ್ರಗಳಲ್ಲಿ ಮಾನವನ ಬೌದ್ಧಿಕ ವಿಕಾಸ ಮತ್ತು ಅದರ ಪ್ರಭಾವದಿಂದ ಸಮಾಜದ ವಿಕಾಸ ಪ್ರಕ್ರಿಯೆಗಳನ್ನು ವಿವರಿಸಿದ್ದಾರೆ. ಕಾಮ್ಟ್‌ರವರ ಪ್ರಕಾರ ಎಲ್ಲ ಅಧ್ಯಯನಶಾಸ್ತ್ರಗಳ ವಿಕಾಸವು ದೇವಶಾಸ್ತ್ರೀಯ ಅಥವಾ ಕಾಲ್ಪನಿಕ ಹಂತ, ಅಮೂರ್ತ ಹಂತ ಮತ್ತು ವೈಜ್ಞಾನಿಕ ಹಂತಗಳಲ್ಲಿ ಸಾಗಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಎಲ್ಲ ವಿಜ್ಞಾನಗಳು ಕೊನೆಗೆ ವೈಜ್ಞಾನಿಕ ಹಂತ ತಲುಪಲೇಬೇಕು. ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ ವೈಜ್ಞಾನಿಕ ವಿಧಾನವನ್ನು ಬಳಸಬೇಕು. ಸಮಾಜಶಾಸ್ತ್ರವು ಬೆಳೆಯುತ್ತಿರುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ವಿಜ್ಞಾನವಾಗಿದೆ. ವಿಜ್ಞಾನಗಳ ಏಣಿ ಶ್ರೇಣಿಯಲ್ಲಿ ಸಮಾಜಶಾಸ್ತ್ರವನ್ನು ಮೇಲ್‌ಸ್ತರದಲ್ಲಿರಿಸಿ ಅದರ ಅಧ್ಯಯನಕ್ಕೆ ಇತರ ವಿಜ್ಞಾನಗಳನ್ನು ಅವಲಂಬಿಸಬೇಕೆಂದು ತಿಳಿಸಿದ್ದಾರೆ.

ಸಮಾಜಶಾಸ್ತ್ರವನ್ನು ಕಾಮ್ಟ್‌ರವರು **ಸಾಮಾಜಿಕ ಸ್ಥಿತಿಶಾಸ್ತ್ರ** ಮತ್ತು **ಸಾಮಾಜಿಕ ಚಲನಶಾಸ್ತ್ರ** ಎಂದು ಎರಡು ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಸಾಮಾಜಿಕ ಸ್ಥಿತಿಶಾಸ್ತ್ರವು ಸಾಂಸ್ಥಿಕ ವ್ಯವಸ್ಥೆ ಮತ್ತು ಸಾಮಾಜಿಕ ಪ್ರಕ್ರಮದ ಅಧ್ಯಯನಕ್ಕೆ ಸಂಬಂಧಿಸಿದೆ. ಅದು ಸಮಾಜ ತನ್ನ ಅಸ್ತಿತ್ವವನ್ನು ಹೇಗೆ ಕಾಯ್ದುಕೊಳ್ಳುತ್ತದೆ ಮತ್ತು ಅದಕ್ಕೆ ಸಂಬಂಧಿಸಿದ ನಿಯಮಗಳ ಕುರಿತ ಅಧ್ಯಯನಗಳನ್ನು ಒಳಗೊಂಡಿದೆ. ಸಾಮಾಜಿಕ ಚಲನಶಾಸ್ತ್ರವು ಸಮಾಜ ಹೇಗೆ ಬೆಳವಣಿಗೆ ಹೊಂದುತ್ತದೆ ಮತ್ತು ಪರಿವರ್ತನೆಯಾಗುತ್ತದೆ ಎಂಬುದಕ್ಕೆ ಸಂಬಂಧಪಟ್ಟ ಅಧ್ಯಯನವಾಗಿದೆ. ಕೈಗಾರಿಕಾಕ್ರಾಂತಿಯಿಂದ ಉದ್ಭವಿಸಿದ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಸಮಾಜವನ್ನು ವೈಜ್ಞಾನಿಕ ನೆಲೆಯಲ್ಲಿ ಅಧ್ಯಯನ ನಡೆಸಬೇಕೆಂದು ಕಾಮ್ಟ್ ಮನಗಂಡಿದ್ದರು. ಅವರು ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಸಂಗತಿಗಳಿಗೆ ತಳಪಾಯ ಹಾಕುವಾಗ ಓರ್ವ ಪ್ರತಿಭಾನ್ವಿತ ಮೇಧಾವಿಯಾಗಿ ಕಾಣಿಸಿಕೊಳ್ಳುತ್ತಾರೆ. ಒಟ್ಟಿನಲ್ಲಿ ಕಾಮ್ಟ್‌ರವರು ಸಮಾಜಶಾಸ್ತ್ರದ ಉಗಮ ಮತ್ತು ಬೆಳವಣಿಗೆಯ ದೃಷ್ಟಿಯಲ್ಲಿ ಮಹತ್ವಪೂರ್ಣವಾದ ಸ್ಥಾನವನ್ನು ಅಲಂಕರಿಸಿದ್ದಾರೆ.

ಹರ್ಬರ್ಟ್ ಸ್ಪೆನ್ಸರ್ (೧೮೨೦-೧೯೦೩)

ಹರ್ಬರ್ಟ್ ಸ್ಪೆನ್ಸ್‌ರ್‌ರವರು ಓರ್ವ ಮಹಾನ್ ಮೇಧಾವಿ, ದಾರ್ಶನಿಕ ಮತ್ತು ಅಗ್ರಗಣ್ಯ ಸಮಾಜಶಾಸ್ತ್ರಜ್ಞ. "ಪ್ರಿನ್ಸಿಪಲ್ಸ್ ಆಫ್ ಸೋಷಿಯಾಲಜಿ" ಎಂಬ ಶಿರೋನಾಮೆಯಡಿಯಲ್ಲಿ ಸಮಾಜಶಾಸ್ತ್ರ ಗ್ರಂಥವನ್ನು ರಚಿಸಿದರು ಹಾಗೂ ಮಹಾನ್ ಸಮಾಜಶಾಸ್ತ್ರಜ್ಞರೆಂದು ಗುರುತಿಸಲ್ಪಟ್ಟಿದ್ದಾರೆ. ಕಾಮ್ಟ್‌ರವರ ಸಾಮಾಜಿಕಚಿಂತನೆ ಮತ್ತು ವಿಚಾರಧಾರೆಗಳು ಸ್ಪೆನ್ಸರ್‌ರವರ ಕೃತಿಯಲ್ಲಿ ಮೂಡಿವೆ. ಡಾರ್ವಿನ್‌ರವರ ಪ್ರಭಾವದಿಂದ ಸಮಾಜವನ್ನು ವೈಜ್ಞಾನಿಕನೆಲೆಯಲ್ಲಿ ಅಧ್ಯಯನ ನಡೆಸಿ ಸಮಾಜಶಾಸ್ತ್ರಕ್ಕೆ ವೈಜ್ಞಾನಿಕರೂಪ ನೀಡುವ ಪ್ರಯತ್ನವನ್ನು ಸ್ಪೆನ್ಸ್‌ರ್‌ರವರು ನಡೆಸಿದ್ದಾರೆ.

೧೮೨೦ ರಲ್ಲಿ ಇಂಗ್ಲೆಂಡಿನ **ಡರ್ಬನ್‌**ನಲ್ಲಿ ಜನಿಸಿದ ಸ್ಪೆನ್ಸರ್‌ರವರು ಬಾಲ್ಯದಿಂದಲೇ ಅನಾರೋಗ್ಯಕ್ಕೆ ಒಳಗಾಗಿ ಔಪಚಾರಿಕ ಶಿಕ್ಷಣ ಪಡೆಯಲು ವಿಫಲರಾದರು. ತಂದೆ, ತಾಯಿ ಮತ್ತು ಚಿಕ್ಕಪ್ಪನ ಸಹಾಯದಿಂದ ಶಿಕ್ಷಣ ಪಡೆದು ರೈಲ್ವೆ ವಿಭಾಗದಲ್ಲಿ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿದರು. ೧೮೪೮ ರಲ್ಲಿ "ಎಕೊನೊಮಿಸ್ಟ್" ಎಂಬ ಪತ್ರಿಕೆಯ ಉಪಸಂಪಾದಕರಾಗಿ ಸುಪ್ರಸಿದ್ಧ ಚಿಂತಕ ಮತ್ತು ವಿಜ್ಞಾನಿಗಳ ಜೊತೆಗೆ ಸಂಪರ್ಕವನ್ನು ಸ್ಪೆನ್ಸರ್ ಪಡೆದರು. **ಸೋಷಿಯಲ್ ಸ್ಟಾಟಿಕ್ಸ್, ಪ್ರಿನ್ಸಿಪಲ್ಸ್ ಆಫ್ ಸೋಷಿಯಾಲಜಿ,** ದಿ **ಸ್ಟಡಿ ಆಫ್ ಸೋಷಿಯಾಲಜಿ, ಫಸ್ಟ್ ಪ್ರಿನ್ಸಿಪಲ್ ಆಫ್ ಬಯಾಲಜಿ** ಮುಂತಾದ ಉಪಯುಕ್ತ ಕೃತಿಗಳನ್ನು ಪ್ರಕಟಪಡಿಸಿದರು. ಲೆಮಾರ್ಕ್‌ರವರ **ಜೀವವಿಕಾಸಕ್ಕೆ ಸಂಬಂಧಿಸಿದ ತತ್ವ** ಮತ್ತು ಡಾರ್ವಿನ್‌ರವರ "ಆರಿಜಿನ್ ಆಫ್ ಸ್ಪೀಸೀಸ್" ಸ್ಪೆನ್ಸರ್‌ರವರ ಮೇಲೆ ಪ್ರಭಾವ ಬೀರಿದ ಕೃತಿಗಳಾಗಿವೆ.

ಕಾಮ್ಟ್‌ರವರಂತೆ ಸ್ಪೆನ್ಸ್‌ರವರು ತಮ್ಮ ಜೀವನದಲ್ಲಿ ನೆಮ್ಮದಿಯಿಂದಿರಲಿಲ್ಲ. ನರದೌರ್ಬಲ್ಯಕ್ಕೆ ಒಳಗಾಗಿ ನಿದ್ರಾಹೀನತೆಯ ಸಮಸ್ಯೆಯನ್ನು ಅನುಭವಿಸಿದ್ದರು. ಕೆಲವೇ ಕಾಲದಲ್ಲಿ ಗುಣಮುಖರಾದ ಇವರು ತಮ್ಮ ಸಂಶೋಧನಾ ಚಟುವಟಿಕೆಗಳನ್ನು ಮುಂದುವರಿಸಿದರು. ಜೀವನ ಪರ್ಯಂತ ಬ್ರಹ್ಮಚಾರಿ ಜೀವನ ನಡೆಸಿದರು. ಅಮಲು ಪದಾರ್ಥ ಸೇವನೆಗೂ ಒಳಗಾಗಿದ್ದರು.

ಹರ್ಬರ್ಟ್ ಸ್ಪೆನ್ಸರ್‌ರವರು **ಡಾರ್ವಿನ್‌**ರವರ **ಜೀವವಿಕಾಸ** ಸಿದ್ಧಾಂತದ ಪ್ರಭಾವದಿಂದ ಸಮಾಜವಿಕಾಸ ಸಿದ್ಧಾಂತ ಹಾಗೂ ಜೈವಿಕಸಾದೃಶ್ಯ ಸಿದ್ಧಾಂತವನ್ನು ನಿರೂಪಿಸಿದ್ದಾರೆ. ಅವರು ಸಮಾಜವನ್ನು ಒಂದು ಸಮಗ್ರ ಘಟಕವೆಂದು ಪರಿಗಣಿಸಿ ಅದರ ಅಂಗಾಂಗಗಳು (ಘಟಕಗಳು) ಮತ್ತು ಅವುಗಳ ನಡುವಿನ ಪರಸ್ಪರ ಸಂಬಂಧದ ಕುರಿತಾದ ಅಧ್ಯಯನವು ಮಹತ್ವಪೂರ್ಣವಾದುದು. ಸಮಾಜದ ವಿವಿಧ ಭಾಗಗಳಿಂದಾಗಿ ಸಮಾಜವು ನಿರ್ದಿಷ್ಟ ರೂಪವನ್ನು ಪಡೆಯುವಂತೆ, ಪ್ರತಿಯೊಂದು ಭಾಗವು ತನ್ನ ಅಸ್ತಿತ್ವಕ್ಕಾಗಿ ಸಮಾಜವನ್ನು ಅವಲಂಬಿಸಬೇಕೆನ್ನುವುದು ಸ್ಪೆನ್ಸರ್‌ರವರ ಅಭಿಪ್ರಾಯ. ಸ್ಪೆನ್ಸರ್‌ರವರು ಸಾಮಾಜಿಕ ವಿಕಾಸ ಸಿದ್ಧಾಂತದಲ್ಲಿ ಜೀವಿಗಳು ಸರಳತೆಯಿಂದ ಸಂಕೀರ್ಣತೆಯತ್ತ ಚಲಿಸುವುದು ಅನಿವಾರ್ಯ

ಮತ್ತು ಅವಶ್ಯಕವೆಂಬಂತೆ ಸಮಾಜವು ಅನಿವಾರ್ಯವಾಗಿ ಸರಳತೆಯಿಂದ ಸಂಕೀರ್ಣತೆಯತ್ತ ಚಲಿಸಲೇಬೇಕು. ಸಮಾಜ ಮತ್ತು ಜೀವಿಗಳನ್ನು ಪರಸ್ಪರ ಹೋಲಿಸಿ ಅವರು ಸಮಾಜದ ವಿವಿಧ ಅಂಗಗಳ ನಡುವಿನ ಪರಸ್ಪರಾವಲಂಬನೆಯನ್ನು ವಿವರಿಸುವ ಪ್ರಯತ್ನವನ್ನು ನಡೆಸಿದ್ದಾರೆ. ಅವರ ಸಮಾಜ ಮತ್ತು ಜೀವಿಗಳ ನಡುವಿನ ತುಲನಾತ್ಮಕ ಅಧ್ಯಯನವು ಇಂದು ಪರಂಪರೆಯಾಗಿ ಮುಂದುವರಿಯಲು ಸಹಕಾರಿಯಾಗಿದೆ.

ಸ್ಪೆನ್ಸರ್‌ರವರು ಯಾವುದೇ ಪದವಿಗಳಿಲ್ಲದೆ ನಡೆಸಿದ ಸಮಾಜಶಾಸ್ತ್ರೀಯ ಚಿಂತನೆಗಳಿಂದ ಅಮೆರಿಕಾ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಡಾರ್ವಿನ್‌ಗೆ ಸಮಾನವಾದ ಗೌರವವನ್ನು ಪಡೆದರು. ಅವರ **ಫಸ್ಟ್ ಪ್ರಿನ್ಸಿಪಲ್ಸ್, ಪ್ರಿನ್ಸಿಪಲ್ಸ್ ಆಫ್ ಸೋಷಿಯಾಲಜಿ** ಮತ್ತು **ಪ್ರಿನ್ಸಿಪಲ್ಸ್ ಆಫ್ ಬಯಾಲಜಿ**ಯನ್ನು ವಿವಿಧ ವಿಶ್ವವಿದ್ಯಾನಿಲಯಗಳು ಆಕರ ಗ್ರಂಥಗಳಾಗಿ ಪರಿಗಣಿಸಿವೆ.

ಎಮಿಲಿ ಡರ್ಕೀಂ (೧೮೫೮-೧೯೧೭)

ಸಮಾಜಶಾಸ್ತ್ರದ ಮೂಲಪುರುಷರಲ್ಲಿ ಒಬ್ಬರಾದ ಫ್ರಾನ್ಸಿನ ಎಮಿಲಿ **ಡರ್ಕೀಂ**ರವರು ಓರ್ವ ಮಹಾನ್ ಚಿಂತಕ ಮತ್ತು ಶಿಕ್ಷಣತಜ್ಞ. ಕಾಮ್ಟ್ ಮತ್ತು ಸ್ಪೆನ್ಸರ್‌ರವರು ಅನುಸರಿಸಿದ ವೈಜ್ಞಾನಿಕ ವಿಧಾನವನ್ನು ಅಳವಡಿಸಿ ಸಮಾಜಶಾಸ್ತ್ರದ ಬೆಳವಣಿಗೆಗೆ **ಡರ್ಕೀಂ**ರವರು ಅಪಾರವಾದ ಕೊಡುಗೆಗಳನ್ನು ನೀಡಿದ್ದಾರೆ. **ಡರ್ಕೀಂ**ರವರು ಸಮಾಜವನ್ನು ಸಾಮಾಜಿಕ ಸತ್ಯಸಂಗತಿಗಳ ನೆಲೆಯಲ್ಲಿ ಅಧ್ಯಯನ ನಡೆಸಬೇಕೆಂದು ಪ್ರತಿಪಾದಿಸಿದ್ದಾರೆ. ಡರ್ಕೀಂರವರ ಪ್ರಕಾರ ಸಾಮಾಜಿಕ ಸತ್ಯಸಂಗತಿಗಳು ವ್ಯಕ್ತಿಗೆ ಬಾಹ್ಯವಾದವುಗಳು. ಅವುಗಳು ವ್ಯಕ್ತಿಯ ವರ್ತನೆಯ ಮೇಲೆ ಅಪಾರವಾದ ಪರಿಣಾಮ ಬೀರುತ್ತವೆ.

೧೮೫೮ರಲ್ಲಿ ಯಹೂದಿ ಕುಟುಂಬದಲ್ಲಿ ಜನಿಸಿದ **ಡರ್ಕೀಂ**ರವರು ಚಿಕ್ಕ ವಯಸ್ಸಿನಲ್ಲಿಯೇ ಹೀಬ್ರು, ತಲ್‌ಮುಡ್, ಹಳೆಯ ಒಡಂಬಡಿಕೆ ಮುಂತಾದ ಧಾರ್ಮಿಕ ಕೃತಿಗಳ ಅಧ್ಯಯನ ನಡೆಸಿದರು. ಅವರು ವಿಕೋಲೆ ನಾರ್ಮತ್ ಶಿಕ್ಷಣ ಸಂಸ್ಥೆಯಿಂದ ಪದವಿ ಪಡೆದು, ಅರ್ಥಶಾಸ್ತ್ರ, ಜಾನಪದ ನಂಬಿಕೆಗಳು ಮುಂತಾದುವುಗಳ ಅಧ್ಯಯನ ನಡೆಸಿದರು. ಸಮಾಜಶಾಸ್ತ್ರದ ವೈಜ್ಞಾನಿಕ ಅಧ್ಯಯನಕ್ಕೆ ಅವಕಾಶಗಳಿಲ್ಲದ ಕಾರಣ ಅವರು ತತ್ವಶಾಸ್ತ್ರವನ್ನು ಅಧ್ಯಯನ ನಡೆಸಿ ೧೮೮೨-೮೭ರ ತನಕ ತತ್ವಶಾಸ್ತ್ರದ ಶಿಕ್ಷಕರಾಗಿ ಕಾರ್ಯನಿರ್ವಹಿಸಿದರು. ೧೮೮೭ ರಲ್ಲಿ ಬಾರ್ಡ್‌ಕ್ಸ್ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ನೇಮಿಸಲ್ಪಟ್ಟರು. ಫ್ರಾನ್ಸ್ ದೇಶದ ವಿದ್ಯಾನಿಲಯಗಳಲ್ಲಿ ಸಮಾಜಶಾಸ್ತ್ರವನ್ನು ಅಧ್ಯಯನ ವಿಷಯವನ್ನಾಗಿ ಅಳವಡಿಸಲಾಯಿತು. ಅವರು ಫ್ರಾನ್ಸಿನ ಪ್ರತಿಷ್ಠಿತ ವಿಶ್ವವಿದ್ಯಾನಿಲಯವಾದ ಸೊಲ್‌ಬಾನ್ ವಿಶ್ವವಿದ್ಯಾನಿಲಯದಲ್ಲಿಯೂ ಸಮಾಜಶಾಸ್ತ್ರದ ಉಪನ್ಯಾಸಕರಾಗಿ ಕಾರ್ಯನಿರ್ವಹಿಸದರು. ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾಗ ಅವರು ಪ್ರಕಟಪಡಿಸಿದ ಲೇಖನ ಮತ್ತು ಕೃತಿಗಳು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಡರ್ಕೀಂರವರಿಗೆ ಅಗ್ರಮಾನ್ಯ ಚಿಂತಕನೆಂದು ಗುರುತಿಸಲು ಸಹಾಯಕವಾದವು. ಅವರು ಡಿವಿಜನ್ ಆಫ್ ಲೇಬರ್ ಇನ್

ಸೊಸೈಟಿ, ಸುಯಿಸೈಡ್, ದಿ ಎಲಿಮೆಂಟರಿ ಫಾರ್ಮ್ಸ್ ಆಫ್ ರಿಲಿಜಿಯಸ್ ಲೈಫ್, ದಿ ರೂಲ್ಸ್ ಆಫ್ ಸೊಫಿಯಾಜಿಕಲ್ ಮೆಥಡ್ ಮುಂತಾದ ಕೃತಿಗಳನ್ನು ಪ್ರಕಟಪಡಿಸಿದರು. "ಅನ್ನಿ ಸೊಫಿಯಾಲಾಜಿಕ್ಯೂ" (Anne Sociologique) ಎಂಬ ಸಮಾಜಶಾಸ್ತ್ರೀಯ ನಿಯತಕಾಲಿಕೆಯನ್ನು ಪ್ರಾರಂಭಿಸಿದರು.

ಡರ್ಕೀಂರವರು ಸಾಮಾಜಿಕ ಏಕತೆಯ ಕುರಿತು ವಿಶ್ಲೇಷಣೆ ನಡೆಸುವ ಸಂದರ್ಭದಲ್ಲಿ ಸಮಾಜದ ಸದಸ್ಯರು ಹಂಚಿಕೊಂಡಿರುವ ಸಾಮಾನ್ಯ ನಂಬಿಕೆಗಳು ಮತ್ತು ಮೌಲ್ಯಗಳು ಏಕತೆಯನ್ನು ಕಾಯ್ದುಕೊಂಡಿವೆ ಎಂದಿದ್ದಾರೆ. ಶ್ರಮವಿಭಜನೆ ಸಿದ್ಧಾಂತದಲ್ಲಿ ಜೈವಿಕ ಐಕ್ಯಮತವು ಸಮಾಜದ ಏಕತೆಗೆ ಪ್ರೇರಕವಾಗಿವೆ ಎಂದು **ಡರ್ಕೀಂ** ತಿಳಿಸಿದ್ದಾರೆ. ಸಾಮಾಜಿಕ ಐಕ್ಯಮತವನ್ನು ಅಧ್ಯಯನ ನಡೆಸುವ ಸಂದರ್ಭದಲ್ಲಿ ಯಾಂತ್ರಿಕ ಮತ್ತು ಜೈವಿಕ ಐಕ್ಯಮತಗಳನ್ನು **ಡರ್ಕೀಂ**ರವರು ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದಾರೆ. ಸಮಾಜದ ಏಕತೆಯನ್ನು ಮೂಡಿಸುವಲ್ಲಿ ಮತಧರ್ಮ ಮತ್ತು ಕ್ರಿಯಾವಿಧಿಗಳು ನಿರ್ವಹಿಸುವ ಪಾತ್ರವನ್ನು "ದಿ ಎಲಿಮೆಂಟರಿ ಫಾರ್ಮ್ಸ್ ಆಫ್ ರಿಲಿಜಿಯಸ್ ಲೈಫ್" ಎಂಬ ಕೃತಿಯಲ್ಲಿ ವಿವರಿಸಿದ್ದಾರೆ. ಸಂಖ್ಯಾಶಾಸ್ತ್ರೀಯ ವಿಧಾನವನ್ನು ಬಳಸಿ ಆತ್ಮಹತ್ಯೆಯ ಕುರಿತಾದ ವಿಮರ್ಶೆ ನಡೆಸಿದ್ದಾರೆ. ಆತ್ಮಹತ್ಯೆಗೂ ಸಾಮಾಜಿಕ ಐಕ್ಯಮತಕ್ಕೂ ಇರುವ ನೇರ ಸಂಬಂಧದ ಕುರಿತ ಅಧ್ಯಯನ ನಡೆಸಿದ್ದಾರೆ. ಆತ್ಮಹತ್ಯೆ, ಆತ್ಮಹತ್ಯೆಯ ವಿಧಗಳು, ಕಾರಣಗಳು ಮುಂತಾದುವುಗಳನ್ನು ವೈಜ್ಞಾನಿಕ ಮತ್ತು ಸಂಖ್ಯಾಶಾಸ್ತ್ರೀಯ ವಿಧಾನ ಅಳವಡಿಸಿ ವಿಶ್ಲೇಷಿಸಿ ನೀಡಿರುವ ಕೊಡುಗೆಗಳು ಸಮಾಜಶಾಸ್ತ್ರದ ಬೆಳವಣಿಗೆಗೆ ಪೂರಕವಾಗಿವೆ.

ಎಮಿಲಿ **ಡರ್ಕೀಂ**ರವರ ಪ್ರಕಾರ ಸಮಾಜಶಾಸ್ತ್ರವು ಸಾಮಾಜಿಕ ಸತ್ಯಸಂಗತಿಗಳ ವಿಜ್ಞಾನವಾಗಿದೆ. ಸಾಮಾಜಿಕ ಸತ್ಯಸಂಗತಿಗಳು ವ್ಯಕ್ತಿಗೆ ಬಾಹ್ಯವಾದವುಗಳು. ಸಾಮಾಜಿಕ ಅಂಶಗಳ ಕುರಿತ ಅಧ್ಯಯನದಲ್ಲಿ ಸಂಶೋಧಕನು ತನ್ನ ಇಷ್ಟಾನಿಷ್ಟಗಳನ್ನು ಬೆರೆಸಬಾರದು. ಸಾಮಾಜಿಕ ಅನ್ವೇಷಣೆಯು ಸತ್ಯಾಂಶವನ್ನಾಧರಿಸಿರಬೇಕು. ಸತ್ಯಾನ್ವೇಷಣೆಯ ಕೇಂದ್ರಬಿಂದು ಸಮೂಹವಾಗಿದೆಯೇ ಹೊರತು ವ್ಯಕ್ತಿಯಲ್ಲ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಂಶೋಧಕನು ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ ವೈಜ್ಞಾನಿಕ ವಿಧಾನವನ್ನು ಅಳವಡಿಸಬೇಕೆಂದು **ಡರ್ಕೀಂ** ಕರೆ ನೀಡಿದ್ದಾರೆ.

ಸಮಾಜಶಾಸ್ತ್ರದ ವ್ಯಾಪ್ತಿಯ ಕುರಿತು ನೀಡಿರುವ ಹೇಳಿಕೆಯಲ್ಲಿ ಸಮಾಜಶಾಸ್ತ್ರದ ವ್ಯಾಪ್ತಿಯನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ.

೧. ಸಾಮಾಜಿಕ ರೂಪ ರಚನಾಶಾಸ್ತ್ರ

೨. ಸಾಮಾಜಿಕ ಶರೀರಶಾಸ್ತ್ರ

೩. ಸಾಮಾನ್ಯ ಸಮಾಜಶಾಸ್ತ್ರ

ಎಮಿಲಿ ಡರ್ಕೀಂರವರ ಕೊಡುಗೆಗಳನ್ನು ವಿಶ್ಲೇಷಿಸಿದಾಗ ಅವರು ಓರ್ವ ಪ್ರಾಯೋಗಿಕ ವಸ್ತುನಿಷ್ಠ ಯಶಸ್ವಿ ಚಿಂತಕನೆನ್ನುವುದರಲ್ಲಿ ಸಂದೇಹವಿಲ್ಲ. ಅವರು ನೀಡಿರುವ ವಿಶಿಷ್ಟ ಕೊಡುಗೆಗಳು ಸಮಾಜಶಾಸ್ತ್ರದ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ.

ಮ್ಯಾಕ್ಸ್‌ವೇಬರ್ (೧೮೬೪-೧೯೨೦)

ಮ್ಯಾಕ್ಸ್‌ವೇಬರ್‌ರವರು ಸಮಾಜಶಾಸ್ತ್ರದ ಮೂಲ ಪುರುಷರಲ್ಲಿ ಒಬ್ಬರಾಗಿದ್ದಾರೆ. ವೈಜ್ಞಾನಿಕ ನೆಲೆಯಲ್ಲಿ ಸಮಾಜಶಾಸ್ತ್ರೀಯ ವಿಚಾರಗಳ ಬಗ್ಗೆ ಅಧ್ಯಯನ ನಡೆಸಿ ಅದರ ಬೆಳವಣಿಗೆಗೆ ತಮ್ಮ ಅಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ. ವೇಬರ್‌ರವರು ಸಮಾಜದ ಬದಲು ವ್ಯಕ್ತಿಯನ್ನು ಕೇಂದ್ರಬಿಂದುವಾಗಿ ಅಧ್ಯಯನ ನಡೆಸಬೇಕೆಂದು ಪ್ರತಿಪಾದಿಸಿದ್ದಾರೆ. ಮಾನವ ಮತ್ತು ಅವನ ನಡತೆಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದ ಸಮಾಜಶಾಸ್ತ್ರೀಯ ತತ್ವ ಅಥವಾ ನಿಯಮಗಳನ್ನು ಸ್ಥಾಪಿಸಬೇಕೆನ್ನುವುದು ಅವರ ಅಭಿಪ್ರಾಯವಾಗಿದೆ.

೧೮೬೪ ರಲ್ಲಿ ಜರ್ಮನಿಯ ಪ್ರೊಟೆಸ್ಟೆಂಟ್ ಕುಟುಂಬದಲ್ಲಿ ವೇಬರ್‌ರವರು ಜನಿಸಿದರು. ಅವರ ತಂದೆ ಕ್ರಿಯಾಶೀಲ ರಾಜಕಾರಣಿ, ಸ್ವಾರ್ಥಿ ಮತ್ತು ವಿಲಾಸಿ ಜೀವನವನ್ನು ನಡೆಸುತ್ತಿದ್ದರೆ ತಾಯಿ ಧಾರ್ಮಿಕ ಆಚಾರ ವಿಚಾರಗಳಲ್ಲಿ ಶ್ರದ್ಧೆಯುಳ್ಳವರಾಗಿದ್ದರು. ತಂದೆ ತಾಯಿಯರ ನಡುವೆ ಹೊಂದಾಣಿಕೆ ಇಲ್ಲದೆ ಜಗಳಗಂಟರಾಗಿದ್ದ ಕಾರಣ ವೇಬರ್‌ರವರು ಚಿಕ್ಕಪ್ಪ ಮತ್ತು ಚಿಕ್ಕಮ್ಮನ ಪ್ರಭಾವದಲ್ಲಿ ಬೆಳೆದರು. ಅವರು ತಂದೆಯ ಪ್ರಭಾವದಿಂದ ಕಾನೂನುಶಾಸ್ತ್ರದ ಅಧ್ಯಯನಕ್ಕಾಗಿ ಐಡಲ್‌ಬರ್ಗ್ ವಿಶ್ವವಿದ್ಯಾನಿಲಯವನ್ನು ಸೇರಿದರು. ಅಲ್ಲಿ ಅವರು ಇತಿಹಾಸ, ರೋಮನ್ ಲಾ, ತತ್ವಶಾಸ್ತ್ರ, ಅರ್ಥಶಾಸ್ತ್ರ, ಸಂಸ್ಥೆಗಳು, ಶಾಸನಗಳು ಮುಂತಾದುವುಗಳ ಕುರಿತು ಅಧ್ಯಯನ ನಡೆಸಿದರು. ಅವರು ಸೈನಿಕರಾಗಿ, ರಾಜಕಾರಣಿಯಾಗಿ ಹಾಗೂ ಶಿಕ್ಷಕರಾಗಿಯೂ ಕರ್ತವ್ಯ ನಿವಹಿಸಿದರು. ೧೮೯೩ ರಿಂದ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದರು. ೧೯೧೮ ರಿಂದ ೧೯೨೦ರ ತನಕ ಅಮೇರಿಕಾದ ಮ್ಯುನಿಚ್ ಮತ್ತು ವಿಯನ್ನಾ ವಿಶ್ವವಿದ್ಯಾನಿಲಯಗಳಲ್ಲಿ 'ವಿಜ್ಞಾನವು ಒಂದು ವ್ಯಕ್ತಿ ಮತ್ತು ರಾಜಕೀಯವೂ ಒಂದು ವೃತ್ತಿ' ಎಂಬ ವಿಚಾರಗಳ ಕುರಿತು ಅತಿಥಿ ಉಪನ್ಯಾಸಗಳನ್ನು ನೀಡಿದರು.

ವೇಬರ್‌ರವರು ಸಮಾಜಶಾಸ್ತ್ರದ ಬೆಳವಣಿಗೆಗೆ ಅಪಾರ ಕೊಡುಗೆಗಳನ್ನು ನೀಡುವುದರ ಜೊತೆಗೆ ರಾಜಕೀಯ, ಅರ್ಥಶಾಸ್ತ್ರ ಮುಂತಾದ ವಿಷಯಗಳ ಕುರಿತು ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಜರ್ಮನಿಯಲ್ಲಿ 'ಜರ್ಮನ್ ಸೋಷಿಯಾಲಾಜಿಕಲ್ ಸೊಸೈಟಿ' ಎಂಬ ಸಮಾಜಶಾಸ್ತ್ರೀಯ ಸಂಘಟನೆಯನ್ನು ಸ್ಥಾಪಿಸಿದರು. ಮಾರ್ಕ್ಸ್‌ರವರ ಆರ್ಥಿಕವಾದವನ್ನು ಖಂಡಿಸಿ ಆರ್ಥಿಕ ಪರಿವರ್ತನೆಯಿಂದ ಸಾಮಾಜಿಕ ಪರಿವರ್ತನೆ ತಿಳಿಯಲು ಸಾಧ್ಯವಿಲ್ಲ. ಧರ್ಮವು ಸಾಮಾಜಿಕ ಪರಿವರ್ತನೆಗೆ ಪ್ರೇರಣೆ ನೀಡುವ ಅಂಶ ಎಂಬುವುದನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ. **ಎಕಾನಾಮಿಕ್ಸ್ ಆ್ಯಂಡ್ ಸೊಸೈಟಿ, ಬ್ಯೂರೊಕ್ರಸಿ, ಪ್ರೊಟೆಸ್ಟೆಂಟ್ ಎಥಿಕ್ ಆ್ಯಂಡ್ ಸ್ಪಿರಿಟ್ ಆಫ್ ಕ್ಯಾಪಿಟಲಿಸಂ, ರೋಮನ್ ಅಗ್ರೇರಿಯನ್ ಹಿಸ್ಟರಿ** ಮುಂತಾದ ಕೃತಿಗಳನ್ನು ಪ್ರಕಟಿಸಿದರು.

ವೇಬರ್‌ರವರು ಮಾನವ ಮತ್ತು ಅವನ ನಡತೆಯನ್ನು ಅರ್ಥಮಾಡಿಕೊಳ್ಳಲು ತಿಳುವಳಿಕೆಯ ವಿಧಾನವೆಂಬ ಹೊಸ ವಿಧಾನವನ್ನು ಕಂಡು ಹಿಡಿದರು. ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ ಪೂರ್ವಾಗ್ರಹ ಪೀಡಿತರಾಗದೆ, ನೈತಿಕವಾಗಿ ತಟಸ್ಥರಾಗಿ ವಸ್ತುನಿಷ್ಠ

ದೃಷ್ಟಿಕೋನವನ್ನು ಹೊಂದಿರಬೇಕೆಂದು ತಿಳಿಸಿದ್ದಾರೆ. ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ ಯಾವುದೇ ರೀತಿಯ ಮೌಲ್ಯಾಧಾರಿತ ನಿರ್ಣಯಗಳನ್ನು ನೀಡದೆ ಅಧ್ಯಯನ ಕೈಗೊಳ್ಳಬೇಕು. ಸಮಾಜಶಾಸ್ತ್ರೀಯ ಅಧ್ಯಯನಗಳಲ್ಲಿ ಸಂಶೋಧಕನ ಭಾವನೆಗಳು, ಆದರ್ಶಗಳು, ಮೌಲ್ಯಗಳು, ಉದ್ದೇಶಗಳು ಪ್ರಭಾವ ಬೀರದೆ ವಸ್ತುನಿಷ್ಠ ಅಧ್ಯಯನ ಕೈಗೊಳ್ಳಬೇಕೆಂದು ತಿಳಿಸಿದ್ದಾರೆ. ವೇಬರ್‌ರವರು ಧರ್ಮ, ಆರ್ಥಿಕ ಚಿಂತನೆ, ಶ್ರಮ ವಿಭಜನೆ, ನೌಕರಶಾಹಿ ವ್ಯವಸ್ಥೆ, ಸಾಮಾಜಿಕ ಕ್ರಿಯೆ, ಅಧಿಕಾರ ಮುಂತಾದ ವಿಚಾರಗಳ ಕುರಿತು ಸಮಾಜಶಾಸ್ತ್ರೀಯ ನೆಲೆಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಅವರ ಈ ವಿಶ್ಲೇಷಣೆಗಳು ಸಮಾಜಶಾಸ್ತ್ರವು ಬೆಳವಣಿಗೆಯಾಗಲು ಕಾರಣವಾಗಿದೆ.

ವೇಬರ್‌ರವರ ಆದರ್ಶ ಮಾದರಿಯ ಕಲ್ಪನೆಯು ಸಾಮಾಜಿಕ ಬದಲಾವಣೆಯ ಅಂಶಗಳ ವಿವರಣೆ, ನೈತಿಕ ಮೌಲ್ಯಗಳಿಗೆ ಮಹತ್ವ ನೀಡಿದೆ. ಕಾರ್ಯಕಾರಣ ಸಂಬಂಧ ಮತ್ತು ತಾರ್ಕಿಕ ವಿವೇಚನೆಗೆ ಆದ್ಯತೆ ನೀಡಿರುವ ಅವರ ಸಮಾಜಶಾಸ್ತ್ರೀಯ ಲೇಖನಗಳು ಹೊಸ ಪೀಳಿಗೆಯ ಸಮಾಜಶಾಸ್ತ್ರಜ್ಞರ ಮೇಲೆ ಅಪಾರ ಪರಿಣಾಮ ಬೀರಿವೆ.

ಸಮಾಜಶಾಸ್ತ್ರದ ಸ್ಥಾಪಕತಜ್ಞರು ಎನಿಸಿದ **ಕಾಮ್ಟ್, ಸ್ಪೆನ್ಸರ್, ಡರ್ಕೀಂ, ವೇಬರ್**‌ರವರು ವ್ಯಕ್ತಪಡಿಸಿರುವ ಅಭಿಪ್ರಾಯಗಳಲ್ಲಿ ವ್ಯತ್ಯಾಸಗಳು ಕಂಡುಬಂದರೂ ಸಮಾಜ ಅಧ್ಯಯನದಲ್ಲಿ ಒಮ್ಮತ ಇರುವುದು ಕಂಡುಬರುತ್ತದೆ. ಅವರ ಅಭಿಪ್ರಾಯಗಳಲ್ಲಿ ಒಮ್ಮತಾಭಿಪ್ರಾಯದ ಅಂಶಗಳು ಇಂತಿವೆ :

೧. ಸಮಾಜಶಾಸ್ತ್ರಕ್ಕೆ ಪ್ರತ್ಯೇಕವಾದ ಅಧ್ಯಯನದ ವಿಷಯವಾಗಿರಬೇಕು.
೨. ಎಲ್ಲ ಸಾಮಾಜಿಕ ಸಂಸ್ಥೆಗಳನ್ನು ಸಮಗ್ರ ದೃಷ್ಟಿಕೋನದಿಂದ ಅಧ್ಯಯನ ನಡೆಸುವುದು ಅಗತ್ಯ.
೩. ಸಾಮಾಜಿಕ ಸಂಸ್ಥೆ ಮತ್ತು ಸಂಘಗಳ ಪರಸ್ಪರ ಸಂಬಂಧ ಮತ್ತು ಅವಲಂಬನೆ ಕುರಿತು ಅಧ್ಯಯನ ನಡೆಸುವುದು.
೪. ಸಾಮಾಜಿಕ ಸಂಬಂಧಗಳು, ಸ್ವರೂಪ ಮತ್ತು ವಿಧಗಳನ್ನು ತಿಳಿದುಕೊಳ್ಳುವುದು.
೫. ಸಮಗ್ರ ಸಮಾಜ ಒಂದು ಕಲ್ಪನೆಯಾಗಿ ಪರಿಗಣನೆ.

೧.೨. ಸಮಾಜಶಾಸ್ತ್ರದ ಅಧ್ಯಯನ ವಿಷಯ

ಯುವ ವಿಜ್ಞಾನವಾಗಿರುವ ಸಮಾಜಶಾಸ್ತ್ರವು ಸ್ವತಂತ್ರವಾದ ಮತ್ತು ಪ್ರತ್ಯೇಕವಾದ ಅಧ್ಯಯನದ ವಿಷಯವನ್ನು ಹೊಂದಿದೆ. ಸಮಾಜಶಾಸ್ತ್ರವು ಮಾನವ ಸಮಾಜದ ವೈಜ್ಞಾನಿಕ ಅಧ್ಯಯನವಾಗಿದೆ. ಕೆಲವು ಸಮಾಜಶಾಸ್ತ್ರಜ್ಞರು ಸಮಾಜಶಾಸ್ತ್ರದ ಅಧ್ಯಯನದಲ್ಲಿ ಸಮಾಜವನ್ನು ಕೇಂದ್ರ ಬಿಂದುವಾಗಿ ಅಧ್ಯಯನ ನಡೆಸಬೇಕೆಂದು ತಿಳಿಸಿದರೆ, ಇನ್ನು ಕೆಲವರು ವ್ಯಕ್ತಿಯನ್ನು ಪ್ರಧಾನವಾಗಿಟ್ಟುಕೊಂಡು ಅಧ್ಯಯನ ನಡೆಸಬೇಕೆಂದು ತಿಳಿಸಿದ್ದಾರೆ. ಸಮಾಜಶಾಸ್ತ್ರವು ಮಾನವ ಸಮಾಜ, ಅದರ ಘಟಕಗಳು ಮತ್ತು ಅವುಗಳ ಪರಿವರ್ತನೆಯ ಕುರಿತು ಅಧ್ಯಯನ ನಡೆಸುತ್ತದೆ.

ಅಲೆಕ್ಸ್ ಇಂಕಲ್ಸ್‌ರವರು ಪ್ರತಿಯೊಂದು ವಿಷಯದ ಅಧ್ಯಯನಕ್ಕೆ ಮೇರೆ ಅಥವಾ ಮಿತಿಯನ್ನು ನಿರ್ದಿಷ್ಟಗೊಳಿಸುವ ಕುರಿತು ಪ್ರಯತ್ನ ಮಾಡಬಾರದೆಂದು ತಿಳಿಸಿದ್ದಾರೆ. ಸಾಮಾಜಿಕ ತತ್ವಶಾಸ್ತ್ರನೆಲೆಯಲ್ಲಿ ಸಮಾಜಶಾಸ್ತ್ರ ಮೂಡಿಬಂದಿದೆ. ಪ್ರತಿಯೊಂದು ವಿಜ್ಞಾನವು ನಿಶ್ಚಿತ ವ್ಯಾಖ್ಯಾನ ಮತ್ತು ಅಧ್ಯಯನ ವಸ್ತುವನ್ನು ಹೊಂದಿರಬೇಕು. ಜ್ಞಾನವು ಸಾಗರದಂತೆ ವಿಶಾಲವಾಗಿರುವ ಕಾರಣ ಅದರ ಅಧ್ಯಯನವನ್ನು ನಡೆಸಲು ವಿವಿಧ ಸಮಾಜ ವಿಜ್ಞಾನಗಳು ಅಸ್ತಿತ್ವಕ್ಕೆ ಬಂದಿವೆ.

ಅಲೆಕ್ಸ್ ಇಂಕಲ್ಸ್‌ರವರು ಸಮಾಜಶಾಸ್ತ್ರದ ಅಧ್ಯಯನದ ವಸ್ತುವನ್ನು ಪ್ರಸ್ತುತಪಡಿಸಲು ಮೂರು ಮಾರ್ಗಗಳಿವೆ ಎಂದಿದ್ದಾರೆ. ಅವುಗಳು :

೧. ಇತಿಹಾಸಿಕ

ಪ್ರಮುಖ ಸಾಂಪ್ರದಾಯಿಕ ವಿಷಯಗಳು ಮತ್ತು ಸಮಾಜಶಾಸ್ತ್ರದ ಆಸಕ್ತಿಗಳನ್ನು ಗುರುತಿಸಲು ಸಂಪ್ರದಾಯವಾದಿ ಸಮಾಜಶಾಸ್ತ್ರಜ್ಞರ ಬರಹಗಳನ್ನು ಅವಲಂಬಿಸುವುದು. ಸಂಕ್ಷಿಪ್ತವಾಗಿ ಸಮಾಜಶಾಸ್ತ್ರದ ಮೂಲಪುರುಷರು ಏನು ಹೇಳಿದ್ದಾರೆ ಎಂಬುದರ ವಿಶ್ಲೇಷಣೆ ಇಲ್ಲಿ ಮುಖ್ಯವಾಗುತ್ತದೆ.

೨. ಅನುಭವಾತ್ಮಕ

ಸಮಾಜಶಾಸ್ತ್ರವು ಯಾವ ವಿಷಯದ ಅಧ್ಯಯನಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತದೆಂಬುದನ್ನು ಗುರುತಿಸಲು ಪ್ರಸ್ತುತ ಸಮಾಜಶಾಸ್ತ್ರಜ್ಞರ ಕೃತಿಗಳ ಬಗ್ಗೆ ಅಧ್ಯಯನ ನಡೆಸಬೇಕು. ಅಂದರೆ ಸಮಕಾಲೀನ ಸಮಾಜಶಾಸ್ತ್ರಜ್ಞರು ಏನು ಮಾಡುತ್ತಾರೆ ಎಂಬ ಬಗ್ಗೆ ಜಿಜ್ಞಾಸೆ ಅಗತ್ಯ.

೩. ವಿಶ್ಲೇಷಣಾತ್ಮಕ

ವಿಶಾಲವಾಗಿರುವಂತಹ ಅಧ್ಯಯನದ ವಿಷಯಗಳನ್ನು ವಿಭಜಿಸಿ, ಮಿತಿಗೊಳಿಸಿ ಅವುಗಳನ್ನು ವಿವಿಧ ಅಧ್ಯಯನದ ಶಾಖೆಗಳಿಗೆ ಹಂಚುವುದು. ಅಂದರೆ ಈ ವಿಚಾರಗಳು ಏನನ್ನು ಸೂಚಿಸುತ್ತವೆ ಎಂಬುದರ ಚಿಂತನೆ ನಡೆಯಬೇಕಾಗಿದೆ.

ಐತಿಹಾಸಿಕ ಅಧ್ಯಯನವು ಪ್ರಶಂಸಾರ್ಹವಾದುದು. ಇದು ಹಿಂದಿನ ಜ್ಞಾನದನುಭವದ ತಿರುಳನ್ನು ಒದಗಿಸುತ್ತದೆ. ಯಾವುದೇ ವಿಷಯ ಅಥವಾ ಘಟನೆಯನ್ನು ತಿಳಿಯಲು ಅದರ ಹಿನ್ನೆಲೆಯನ್ನು ತಿಳಿಯಬೇಕು. ಇತಿಹಾಸದ ಅಧ್ಯಯನದಿಂದ ಘಟನೆಯ ಹಿನ್ನೆಲೆಯನ್ನು ತಿಳಿದುಕೊಳ್ಳಬಹುದಾದರೂ ಸಮಾಜಶಾಸ್ತ್ರದ ಅಧ್ಯಯನದ ದೃಷ್ಟಿಕೋನಕ್ಕಿಂತ ಇತಿಹಾಸದ ಅಧ್ಯಯನವು ಭಿನ್ನವಾಗಿದೆ. ಐತಿಹಾಸಿಕ ದೃಷ್ಟಿಕೋನವು ನಮ್ಮ ಚಿಂತನಾಲಹರಿಯನ್ನು ಜಟಿಲಗೊಳಿಸುತ್ತದೆ. ಹೀಗಾಗಿ ಐತಿಹಾಸಿಕ ಅಧ್ಯಯನವು ಪ್ರಸ್ತುತ ಮತ್ತು ಭವಿಷ್ಯದ ಸಮಸ್ಯೆಗಳನ್ನು ಪರಿಹರಿಸಲು ಸಾಕಾಗದು.

ಇಂದ್ರಿಯ ಜನ್ಯ/ಅನುಭವಾತ್ಮಕ ವಿಧಾನವು ನಿರ್ದಿಷ್ಟವಾದುದು ಮತ್ತು ಸ್ಪಷ್ಟವಾದುದು.

ಸತ್ಯ ಸಂಗತಿಗಳ ಮೇಲೆ ಆಧಾರಿತವಾದುದು. ಪ್ರಚಲಿತ ಸಮಾಜಶಾಸ್ತ್ರಜ್ಞರ ಕೃತಿಗಳು ಹಿಂದಿನ ಅಧ್ಯಯನಗಳಿಗೆ ಪ್ರಾಮುಖ್ಯತೆ ಮತ್ತು ಭವಿಷ್ಯದ ಕುರಿತು ಯಾವುದೇ ಭರವಸೆ ನೀಡದಿರುವುದರಿಂದ ಅವುಗಳನ್ನು ಪರಿಪೂರ್ಣವೆಂದು ಪರಿಗಣಿಸಲು ಸಾಧ್ಯವಿಲ್ಲ. ಈ ವಿಚಾರದ ಕುರಿತು **ಸೊರೊಕಿನ್**‌ರವರು ಪ್ರಚಲಿತ ಸಮಾಜಶಾಸ್ತ್ರೀಯ ಮುಂದಾಲೋಚನೆಗಳು ಕೇವಲ ಕಲ್ಪನೆಗಳೆಂದು ತಿಳಿಸಿದ್ದಾರೆ.

ವಿಶ್ಲೇಷಣಾತ್ಮಕ ಅಧ್ಯಯನವು ಕೆಲವು ವ್ಯಾಖ್ಯೆಗಳು ಮತ್ತು ನಿರ್ದಿಷ್ಟ ವಿವರಣೆಗಳನ್ನು ಒಳಗೊಂಡಿರುವುದರಿಂದ ಕನಿಷ್ಟ ದೋಷಗಳಿರುವಂಥದು ಎನ್ನಬಹುದು. ಸಮಾಜಶಾಸ್ತ್ರದ ಪಿತಾಮಹರಾದ **ಅಗಸ್ಟ್ ಕಾಮ್ಟ್**‌ರವರು ಈ ವಿಧಾನವನ್ನು ಸೂಚಿಸಿದ್ದಾರೆ.

ಅಲೆಕ್ಸ್ ಇಂಕಲ್ಸ್‌ರವರು ಸಮಾಜಶಾಸ್ತ್ರಜ್ಞರ ಅಭಿಪ್ರಾಯಗಳನ್ನು ಅವಲೋಕಿಸಿ ಸಮಾಜಶಾಸ್ತ್ರ ಅಧ್ಯಯನ ವಿಷಯದ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. **ಅಗಸ್ಟ್‌ಕಾಮ್ಟ್**‌ರವರು ಸಮಾಜಶಾಸ್ತ್ರವನ್ನು ಸಮಾಜದ ವೈಜ್ಞಾನಿಕ ಅಧ್ಯಯನ ನಡೆಸುವ ವಿಜ್ಞಾನವೆಂದು ತಿಳಿಸಿದರೂ ಅಧ್ಯಯನ ವಿಷಯದ ಕುರಿತು ಸ್ಪಷ್ಟ ಅಭಿಪ್ರಾಯ ನೀಡಲಿಲ್ಲ. ಅಧ್ಯಯನದ ವಸ್ತುವು ವಿಶಾಲವಾಗಿರುವ ಕಾರಣ ಸಾಮಾಜಿಕ ಸ್ಥಿತಿಶಾಸ್ತ್ರ ಮತ್ತು ಸಾಮಾಜಿಕ ಚಲನಾಶಾಸ್ತ್ರ ಎಂಬುದಾಗಿ ಸಮಾಜಶಾಸ್ತ್ರವನ್ನು ವರ್ಗೀಕರಿಸಿದ್ದಾರೆ. ಸಾಮಾಜಿಕ ಸ್ಥಿತಿಶಾಸ್ತ್ರದಲ್ಲಿ ಸಾಮಾಜಿಕ ವ್ಯವಸ್ಥೆಯ ವಿವಿಧ ಘಟಕಗಳು, ಅವುಗಳ ಕ್ರಿಯೆ ಮತ್ತು ಪ್ರತಿಕ್ರಿಯೆಗಳ ಕುರಿತಾದ ತತ್ವಗಳ ಕುರಿತ ಅಧ್ಯಯನ ಒಳಗೊಂಡಿದೆ. ಸಾಮಾಜಿಕ ಚಲನಾಶಾಸ್ತ್ರವು ಸಮಾಜದ ಪ್ರಗತಿ ಮತ್ತು ಪರಿವರ್ತನೆಯ ವಿಷಯಗಳನ್ನು ಒಳಗೊಂಡಿದೆ. **ಡರ್ಖೀಂ**ರವರು ಸಮಾಜಶಾಸ್ತ್ರದ ಅಧ್ಯಯನದ ವಿಷಯದಲ್ಲಿ ಸಾಮಾಜಿಕ ಸಂಸ್ಥೆಗಳು ಮತ್ತು ಸಾಮಾಜಿಕ ಕ್ರಿಯೆಗಳನ್ನು ಸೇರಿಸಬೇಕೆಂದು ತಿಳಿಸಿದ್ದಾರೆ. **ವೇಬರ್**‌ರವರು ಸಾಮಾಜಿಕ ಕ್ರಿಯೆ ಮತ್ತು ಅವುಗಳ ಕಾರಣ ಮತ್ತು ಪರಿಣಾಮಗಳ ಕುರಿತ ಅಧ್ಯಯನವನ್ನು ಸಮಾಜಶಾಸ್ತ್ರದಲ್ಲಿ ನಡೆಸಬೇಕೆಂದು ತಿಳಿಸಿದ್ದಾರೆ.

ಸಮಾಜಶಾಸ್ತ್ರದ ಮೂಲ ಪುರುಷರ ಮತ್ತು ಇತರ ಸಮಾಜಶಾಸ್ತ್ರಜ್ಞರ ಅಧ್ಯಯನಗಳನ್ನು ಪರಿಶೀಲಿಸಿ **ಇಂಕಲ್ಸ್**‌ರವರು ಸಮಾಜಶಾಸ್ತ್ರದ ಅಧ್ಯಯನದ ವಸ್ತುವಿನ ಕುರಿತಾದ ಮುಖ್ಯಾಂಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಿದ್ದಾರೆ :

೧. ಸಮಾಜಶಾಸ್ತ್ರೀಯ ವಿಶ್ಲೇಷಣೆ

೧. ಮಾನವ ಸಂಸ್ಕೃತಿ ಮತ್ತು ಸಮಾಜ

೨. ಸಮಾಜಶಾಸ್ತ್ರೀಯ ದೃಷ್ಟಿಕೋನಗಳು

೩. ಸಮಾಜವಿಜ್ಞಾನಗಳಲ್ಲಿ ವೈಜ್ಞಾನಿಕ ಪದ್ಧತಿ

೨. ಸಾಮಾಜಿಕ ಜೀವನದ ಪ್ರಾಥಮಿಕ ಘಟಕಗಳು

೧. ಸಾಮಾಜಿಕ ಕ್ರಿಯೆಗಳು ಮತ್ತು ಸಾಮಾಜಿಕ ವರ್ತನೆಗಳು

೨. ವ್ಯಕ್ತಿಯ ವ್ಯಕ್ತಿತ್ವ

೩. ಸಮೂಹಗಳು

೪. ಸಮುದಾಯಗಳು - ನಗರ ಮತ್ತು ಗ್ರಾಮೀಣ

೫. ಸಂಘ ಮತ್ತು ಸಂಘಟನೆ

೬. ಜನಸಂಖ್ಯೆ

೭. ಸಮಾಜ

೩. ಮೂಲಭೂತ ಸಾಮಾಜಿಕ ಸಂಸ್ಥೆಗಳು

೧. ಕುಟುಂಬ ಮತ್ತು ಬಂಧುತ್ವ

೨. ಆರ್ಥಿಕ ಸಂಸ್ಥೆಗಳು

೩. ರಾಜಕೀಯ ಮತ್ತು ಶಾಸನ

೪. ಧಾರ್ಮಿಕ

೫. ಶೈಕ್ಷಣಿಕ ಮತ್ತು ವೈಜ್ಞಾನಿಕ

೬. ಸಾಂಸ್ಕೃತಿಕ ಮತ್ತು ಕಲ್ಯಾಣಾತ್ಮಕ

೪. ಮೂಲಭೂತ ಸಾಮಾಜಿಕ ಪ್ರಕ್ರಿಯೆಗಳು

೧. ಪ್ರಭೇದ ಮತ್ತು ಸ್ತರವಿನ್ಯಾಸ

೨. ಸಹಕಾರ, ಸಂಯೋಜನೆ ಸ್ವಾಂಗೀಕರಣ

೩. ಸಾಮಾಜಿಕ ಸಂಘರ್ಷ (ಯುದ್ಧ, ಕ್ರಾಂತಿಗಳನ್ನು ಒಳಗೊಂಡು)

೪. ಅಭಿಪ್ರಾಯ ಅಭಿವ್ಯಕ್ತತೆ, ಪರಿವರ್ತನೆ ಮುಂತಾದ ಸಂಪರ್ಕಗಳು

೫. ಸಮಾಜೀಕರಣ ಮತ್ತು ತತ್ವಬೋಧನೆ

೬. ಸಾಮಾಜಿಕ ನಿಯಂತ್ರಣ

೭. ಸಾಮಾಜಿಕ ಅಪವರ್ತನೆ (ಅಪರಾಧ, ಆತ್ಮಹತ್ಯೆ ಇತ್ಯಾದಿ)

೮. ಸಾಮಾಜಿಕ ಸಮಗ್ರತೆ

೯. ಸಾಮಾಜಿಕ ಪರಿವರ್ತನೆ

೧೦. ಸಾಮಾಜಿಕ ಮೌಲ್ಯಮಾಪನ (ಮೌಲ್ಯಗಳ ಕುರಿತಾದ ಅಧ್ಯಯನ)

ಇಷ್ಟು ವ್ಯಾಪಕವಾದ ಅಧ್ಯಯನ ವಿಷಯಗಳನ್ನೊಳಗೊಂಡ ಸಮಾಜಶಾಸ್ತ್ರವನ್ನು ಇತರ ಸಮಾಜವಿಜ್ಞಾನಗಳ ತಾಯಿ ಎಂದು ಪರಿಗಣಿಸಲಾಗಿದೆ. ಮುಖ್ಯವಾಗಿ ಇದು ಸಮಾಜವನ್ನು ಸಮಗ್ರ ನೆಲೆಯಲ್ಲಿ ಅಧ್ಯಯನ ಮಾಡುತ್ತದೆ. ಹೀಗಾಗಿ ಸಮಾಜಶಾಸ್ತ್ರದ ಅಧ್ಯಯನ ವ್ಯಾಪ್ತಿಯು ತುಂಬಾ ವಿಶಾಲವಾಗಿದೆಯೆನ್ನಬಹುದು.

೧.೩. ಸಮಾಜಶಾಸ್ತ್ರವು ಒಂದು ವಿಜ್ಞಾನ

ಸಮಾಜಶಾಸ್ತ್ರದ ಸ್ವರೂಪದ ಕುರಿತು ಪ್ರಾಜ್ಞರಲ್ಲಿ ಜಿಜ್ಞಾಸೆಗಳಿವೆ. ಸಮಾಜಶಾಸ್ತ್ರವು ಒಂದು ವಿಜ್ಞಾನವೇ ಅಥವಾ ಅಲ್ಲವೇ ಎಂಬ ವಿಚಾರವನ್ನು ವಿಶ್ಲೇಷಿಸುವುದರಿಂದ ಸಮಾಜಶಾಸ್ತ್ರದ ಸ್ವರೂಪವನ್ನು ಅರಿತುಕೊಳ್ಳಬಹುದು. ಸಮಾಜಶಾಸ್ತ್ರವು ವಿಜ್ಞಾನವೇ?

ಎಂದು ತಿಳಿಯಬೇಕಾದರೆ ವಿಜ್ಞಾನ ಎಂದರೇನು? ವಿಜ್ಞಾನದ ಸ್ವರೂಪ ಮತ್ತು ಲಕ್ಷಣಗಳಾವುವು? ಭೌತವಿಜ್ಞಾನಕ್ಕೂ ಸಮಾಜವಿಜ್ಞಾನಕ್ಕೂ ಇರುವ ವ್ಯತ್ಯಾಸಗಳೇನು ಎಂಬುದನ್ನು ತಿಳಿದುಕೊಳ್ಳಬೇಕು.

ಅ. ವಿಜ್ಞಾನದ ಅರ್ಥ ಮತ್ತು ಲಕ್ಷಣಗಳು

ವಿಜ್ಞಾನವು ವ್ಯವಸ್ಥಿತವಾದ ಜ್ಞಾನದ ಸಂಚಯನ. ಸತ್ಯಸಂಗತಿಯನ್ನು ಅನ್ವೇಷಿಸುವುದೇ ಅದರ ಗುರಿ. ಯಾವುದೇ ಒಂದು ಅಧ್ಯಯನ ಶಾಖೆಯು ಸತ್ಯಾನ್ವೇಷಣೆಗೆ ವೈಜ್ಞಾನಿಕ ಪದ್ಧತಿಯನ್ನು ಬಳಸಿದಾಗ ಅದು ವಿಜ್ಞಾನವಾಗುತ್ತದೆ. ವಿಜ್ಞಾನದ ಗುರಿಯಾದ ಸತ್ಯಾನ್ವೇಷಣೆ ಅಥವಾ ಜ್ಞಾನಸಂಗ್ರಹಿಸಲು ಅನುಸರಿಸುವ ಪದ್ಧತಿಯೇ ವೈಜ್ಞಾನಿಕ ಪದ್ಧತಿ. ಸತ್ಯಸಂಗತಿಗಳನ್ನು ಶೋಧಿಸಲು ತೊಡಗಿದ ವಿಜ್ಞಾನಿಗೆ ವಿಷಯವು ಎಷ್ಟು ಪ್ರಾಮುಖ್ಯವೋ ಅನುಸರಿಸುವ ವಿಧಾನವೂ ಅಷ್ಟೇ ಪ್ರಮುಖವಾದುದು. **ಕಾರ್ಲ್ ಪಿಯರ್‌ಸನ್**‌ರವರ ಪ್ರಕಾರ ಸತ್ಯಾನ್ವೇಷಣೆಗೆ ಅಥವಾ ಪ್ರಪಂಚ ಜ್ಞಾನವನ್ನು ತಿಳಿಯಲು ವೈಜ್ಞಾನಿಕ ಪದ್ಧತಿಯ ಹೊರತು ಇತರ ಯಾವುದೇ ವಿಧಾನಗಳಿಲ್ಲ. ವಿಜ್ಞಾನಗಳಲ್ಲಿ ಅಧ್ಯಯನ ನಡೆಸುವ ವಿಷಯವು ಮೂರ್ತ ಅಥವಾ ಅಮೂರ್ತ ಸ್ವರೂಪದ್ದಿರಬಹುದು. ಆದರೆ ಅವರು ಅಧ್ಯಯನಕ್ಕೋಸ್ಕರ ಅಳವಡಿಸುವ ವಿಧಾನದಲ್ಲಿ ಏಕತೆಯನ್ನು ಕಾಣಬಹುದು. ಭೌತವಿಜ್ಞಾನ ಮತ್ತು ಸಮಾಜ ವಿಜ್ಞಾನಗಳೆರಡರ ಅಧ್ಯಯನ ವಿಷಯಗಳು ಬೇರೆ ಬೇರೆಯಾದರೂ ಅವುಗಳು ಅಳವಡಿಸುವ ಪದ್ಧತಿಯಲ್ಲಿ ಏಕತೆಯನ್ನು ಕಾಣಬಹುದು. ಒಟ್ಟಾಗಿ ವಿಜ್ಞಾನವನ್ನು ವ್ಯವಸ್ಥಿತವಾದ ಮತ್ತು ಕ್ರಮಬದ್ಧವಾದ ಜ್ಞಾನಸಂಗ್ರಹಣೆಯ ಸಾಧನವೆನ್ನಬಹುದು.

ಲಕ್ಷಣಗಳು

ವಿಜ್ಞಾನದ ಉದ್ದೇಶವು ಸತ್ಯಾನ್ವೇಷಣೆಯಾಗಿರುವುದರಿಂದ ಅದರ ಸಂಶೋಧನೆಗಾಗಿ ವೈಜ್ಞಾನಿಕ ಪದ್ಧತಿಯನ್ನು ಅವಲಂಬಿಸುವುದು ಅನಿವಾರ್ಯವಾಗಿದೆ. ಯಾವುದೇ ಅಧ್ಯಯನದ ಶಾಖೆಯನ್ನು ವಿಜ್ಞಾನವೆಂದು ಪರಿಗಣಿಸಲು ಅದು ವೈಜ್ಞಾನಿಕ ಪದ್ಧತಿಯ ಹಂತಗಳಾದ ಸಮಸ್ಯೆಯ ಸೂತ್ರೀಕರಣ, ಪ್ರಾಕ್‌ಕಲ್ಪನೆ, ಸಂಶೋಧನಾ ವಿನ್ಯಾಸದ ರಚನೆ, ಅವಲೋಕನ, ಮಾಹಿತಿ ಸಂಗ್ರಹಣೆ, ವರ್ಗೀಕರಣ, ಸಾಮಾನ್ಯೀಕರಣ, ಪುನರ್‌ಪರಿಶೀಲನೆ ಮುಂತಾದವುಗಳನ್ನು ಅನುಸರಿಸಿ ಸಿದ್ಧಾಂತ ರಚಿಸಬೇಕು. ವಿಜ್ಞಾನದ ಲಕ್ಷಣಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು :

೧. ಸಾಕ್ಷಾಧಾರಗಳ ಅವಲಂಬನೆ : ಅಧ್ಯಯನದ ಶಾಖೆಯೊಂದು ವಿಜ್ಞಾನವೆಂದು ಪರಿಗಣಿಸಲ್ಪಡಬೇಕಾದರೆ ಅದರಲ್ಲಿ ಪ್ರಕಟಿಸಲ್ಪಡುವ ವಿಚಾರಗಳು ಸೂಕ್ತವಾದ ಸಾಕ್ಷಾಧಾರಗಳನ್ನು ಅವಲಂಬಿಸಿರಬೇಕು. ವಾಸ್ತವಿಕತೆಯನ್ನು ಸಿದ್ಧಾಂತಗಳಲ್ಲಿ ಪ್ರತಿಬಿಂಬಿಸಬೇಕು.

೨. ಸಾರ್ವತ್ರಿಕತೆ : ವೈಜ್ಞಾನಿಕ ತತ್ವಗಳು ಸಾರ್ವತ್ರಿಕವಾಗಿರುತ್ತವೆ. ಎಲ್ಲ ಕಾಲ, ಸ್ಥಳ,

ಸನ್ನಿವೇಶಗಳಿಗೂ ವೈಜ್ಞಾನಿಕ ತತ್ವಗಳು ಅನ್ವಯವಾಗುತ್ತವೆ. ಉದಾಹರಣೆಗೆ ನೀರನ್ನು ೦° ಸೆಂಟಿಗ್ರೇಡ್‌ಗೆ ತಂದಾಗ ಅದು ಮಂಜುಗಡ್ಡೆಯಾಗುತ್ತದೆ.

೩. **ವಸ್ತುನಿಷ್ಠತೆ** : ವೈಜ್ಞಾನಿಕ ಸಂಶೋಧನೆಗಳಲ್ಲಿ ಸಂಶೋಧಕನು ಪೂರ್ವಾಗ್ರಹ ಮತ್ತು ಪಕ್ಷಪಾತಕ್ಕೊಳಗಾಗದೆ ವಸ್ತುನಿಷ್ಠ ಅಧ್ಯಯನ ನಡೆಸಬೇಕು. ವಿಜ್ಞಾನಿಯು ತೆರೆದ ಮನಸ್ಸಿನಿಂದ ವಿಷಯವನ್ನು ಅವಲೋಕಿಸಿ ಪರೀಕ್ಷೆಗೆ ಒಳಪಡಿಸುವ ಸನ್ನಿವೇಶದಲ್ಲಿ ಸಂಶೋಧಕನ ಬೇಕು ಬೇಡಗಳು, ಇಷ್ಟಾನಿಷ್ಟಗಳಿಗೆ ಅವಕಾಶ ನೀಡದೆ ವಸ್ತುಸ್ಥಿತಿಯನ್ನು ಗುರುತಿಸುವುದೇ ವಸ್ತುನಿಷ್ಠತೆ.

೪. **ಭವಿಷ್ಯ ಸೂಚಕತೆ**: ವಿಜ್ಞಾನಿಯು ಸಂಶೋಧನೆಯಲ್ಲಿ ಪಡೆದ ಅನುಭವಗಳನ್ನಾಧರಿಸಿ ಮುಂದೇನು ಆಗಬಹುದೆಂಬುವುದನ್ನು ನಿಖರವಾಗಿ ಸೂಚಿಸುವುದಕ್ಕೆ ಭವಿಷ್ಯ ಸೂಚಕತೆ ಎನ್ನಬಹುದು. ವೈಜ್ಞಾನಿಕ ನಿಯಮ ಮತ್ತು ಸತ್ಯಸಂಗತಿಗಳ ಪುನರಾವರ್ತಿತ ಅಧ್ಯಯನದಿಂದ ಪಡೆದ ಅನುಭವಗಳು ಭವಿಷ್ಯ ಸೂಚಿಸಲು ಸಹಾಯಕವಾಗಿವೆ.

೫. **ಸಾಮಾನ್ಯೀಕರಣ ಮತ್ತು ಪುನರ್‌ಪರಿಶೀಲನೆ** : ವಿಜ್ಞಾನದಲ್ಲಿ ರಚಿಸಿದಂತಹ ನಿಯಮಗಳು ಸಾರ್ವತ್ರಿಕವಾಗಿ ಅನ್ವಯವಾಗುತ್ತವೆ. ವಿಜ್ಞಾನಿಯು ಅಧ್ಯಯನ ಕ್ಷೇತ್ರದ ಎಲ್ಲ ಘಟಕಗಳಿಗೂ ಅನ್ವಯವಾಗುವ ಸಾಮಾನ್ಯ ನಿಯಮಗಳನ್ನು ರೂಪಿಸುತ್ತಾನೆ. ವಿಜ್ಞಾನಗಳಲ್ಲಿ ರಚಿಸಿದ ಸಿದ್ಧಾಂತಗಳನ್ನು ಅದರ ವಾಸ್ತವಿಕತೆಯನ್ನು ದೃಢಪಡಿಸಲು ಪುನರ್‌ಪರಿಶೀಲನೆಗೆ ಒಳಪಡಿಸಲಾಗುತ್ತದೆ.

೬. **ಪರಿಕಲ್ಪನೆಗಳ ಬಳಕೆ** : ಪ್ರತಿಯೊಂದು ವಿಜ್ಞಾನವು ಸ್ವತಂತ್ರವಾದ ಪರಿಕಲ್ಪನಾ ವ್ಯವಸ್ಥೆಯನ್ನು ಹೊಂದಿರುತ್ತದೆ. ಪರಿಕಲ್ಪನೆಗಳೆಂದರೆ ವಿಜ್ಞಾನದಲ್ಲಿ ಬಳಸುವ ಸಂಕೇತ ಅಥವಾ ಭಾಷಾಸಲಕರಣೆ. ಪರಿಕಲ್ಪನೆಯ ಬಳಕೆಯು ಪ್ರಮಾಣೀಕೃತವಾಗಿರುವುದರಿಂದ ವಿಜ್ಞಾನಿಯು ಬಳಸಿದ ಪರಿಕಲ್ಪನೆಗಳ ವ್ಯಾಖ್ಯಾನವನ್ನು ನೀಡುತ್ತಾನೆ.

೭. **ನೈತಿಕ ತಟಸ್ಥತೆ** : ವಿಜ್ಞಾನವು ಮೌಲ್ಯ ನಿರಪೇಕ್ಷತೆ ಅಥವಾ ತಟಸ್ಥತೆಯನ್ನು ಹೊಂದಿದೆ. ಸತ್ಯಾನ್ವೇಷಣೆಯು ವಿಜ್ಞಾನಿಯ ಗುರಿಯಾಗಿರುವ ಕಾರಣ ಇತರ ಯಾವುದೇ ಒತ್ತಡಗಳಿಗೂ ಒಳಗಾಗದೆ ಅಧ್ಯಯನವನ್ನು ನಡೆಸಬೇಕು.

೮. **ವ್ಯವಸ್ಥಿತವಾದ ಸಂದೇಹ** : ವಿಜ್ಞಾನವು ವೈಜ್ಞಾನಿಕಪದ್ಧತಿಯನ್ನು ಅಳವಡಿಸಿ ಸಂಗ್ರಹಿಸಿದ ಸಾಕ್ಷಾಧಾರಗಳ ನೆಲೆಯಲ್ಲಿ ಅಸ್ತಿತ್ವದಲ್ಲಿರುವ ಯಾವುದೇ ಸಿದ್ಧಾಂತವನ್ನು ತಿರಸ್ಕರಿಸಬೇಕಾದ ಸನ್ನಿವೇಶ ಬಂದರೆ ತಿರಸ್ಕರಿಸಲು ಸಿದ್ಧರಿರಬೇಕು.

ಆ. ಭೌತ ಮತ್ತು ಸಮಾಜವಿಜ್ಞಾನಗಳ ನಡುವಿನ ವ್ಯತ್ಯಾಸಗಳು

ವಿಜ್ಞಾನವೆಂದರೆ ವ್ಯವಸ್ಥಿತವಾದ ಜ್ಞಾನ. ಸತ್ಯಾಂಶಗಳನ್ನು ವ್ಯವಸ್ಥಿತವಾಗಿ ಜೋಡಿಸಿರುವ ಮತ್ತು ಸಾಮಾನ್ಯ ನಿಯಮಗಳ ಕಾರ್ಯರೂಪವನ್ನೇರ್ಪಡಿಸುವುದಕ್ಕೆ ಸಂಬಂಧಿಸಿದ ಜ್ಞಾನದ ಶಾಖೆಯೇ ವಿಜ್ಞಾನ. ವಿಜ್ಞಾನವು ವ್ಯವಸ್ಥಿತ ಜ್ಞಾನವಾಗಿ ವಿಚಾರ ಮತ್ತು ಪುರಾವೆಗಳನ್ನು

ಆಧರಿಸಿದೆ. ಭೌತವಿಜ್ಞಾನಗಳಲ್ಲಿ ಬಳಸಿದ ವಿಜ್ಞಾನದ ಅರ್ಥವನ್ನು ಸಮಾಜಶಾಸ್ತ್ರದಲ್ಲಿ ಬಳಸಿದರೆ ಸಮಾಜಶಾಸ್ತ್ರವನ್ನು ವಿಜ್ಞಾನವೆಂದು ಪರಿಗಣಿಸಲು ಸಾಧ್ಯವಿಲ್ಲ. ಭೌತವಿಜ್ಞಾನಗಳಂತೆ ಪ್ರಯೋಗ ನಡೆಸುವುದು ಮತ್ತು ಭವಿಷ್ಯ ನುಡಿಯುವ ಪ್ರಕ್ರಿಯೆಗಳನ್ನು ಸಮಾಜಶಾಸ್ತ್ರದಲ್ಲಿ ಅಳವಡಿಸಲು ಸಾಧ್ಯವಿಲ್ಲ. ಸಮಾಜಶಾಸ್ತ್ರದಲ್ಲಿ ಅಧ್ಯಯನದ ವಸ್ತುವಾದ ಸಾಮಾಜಿಕ ಸಂಬಂಧಗಳನ್ನು ಪ್ರಯೋಗಶಾಲೆಯಲ್ಲಿ ಪ್ರಯೋಗ ನಡೆಸಲು ಸಾಧ್ಯವಿಲ್ಲ. ಅಲ್ಲದೆ ನಿಖರವಾಗಿ ಭವಿಷ್ಯ ನುಡಿಯಲು ಸಾಧ್ಯವಿಲ್ಲದ ಕಾರಣ ಭೌತವಿಜ್ಞಾನಗಳ ಅರ್ಥದಲ್ಲಿ ಸಮಾಜಶಾಸ್ತ್ರವನ್ನು ವಿಜ್ಞಾನವೆನ್ನಲು ಕಷ್ಟವಾಗುತ್ತದೆ. ಭೌತವಿಜ್ಞಾನಗಳು ಶುದ್ಧ ವಿಜ್ಞಾನಗಳಾಗಿವೆ. ಅವುಗಳ ರೀತಿಯಲ್ಲಿ ಸಾಮಾಜಿಕ ವಿಷಯಗಳ ಕುರಿತು ಅಧ್ಯಯನವು ಅಸಾಧ್ಯವಾಗಿದೆ.

ಭೌತವಿಜ್ಞಾನ ಮತ್ತು ಸಮಾಜವಿಜ್ಞಾನಗಳ ವ್ಯತ್ಯಾಸಗಳು ಈ ಕೆಳಗಿನಂತಿವೆ :

ಭೌತವಿಜ್ಞಾನ	**ಸಮಾಜವಿಜ್ಞಾನ**
೧. ಭೌತವಿಜ್ಞಾನದಲ್ಲಿ ಅಧ್ಯಯನ ನಡೆಸುವ ವಸ್ತುಗಳು ಕಣ್ಣಿಗೆ ಗೋಚರಿಸುತ್ತವೆ. ಉದಾ : ವಸ್ತು, ಪ್ರಾಣಿ, ಸಸ್ಯ.	೧. ಸಮಾಜಶಾಸ್ತ್ರದಲ್ಲಿ ಅಧ್ಯಯನ ನಡೆಸುವ ವಸ್ತುವು ಕಣ್ಣಿಗೆ ಗೋಚರಿಸುವುದಿಲ್ಲ. ಅದು ಅನುಭವಾತ್ಮಕವಾದುದು. ಉದಾ: ಸಾಮಾಜಿಕ ಸಂಬಂಧಗಳು.
೨. ಭೌತವಿಜ್ಞಾನಗಳಲ್ಲಿ ಅಧ್ಯಯನ ನಡೆಸುವ ವಿಷಯದ ಕುರಿತು ಪ್ರಯೋಗಗಳನ್ನು ನಡೆಸಿ ವಾಸ್ತವಾಂಶಗಳನ್ನು ಗುರುತಿಸಬಹುದು.	೨. ಸಮಾಜವಿಜ್ಞಾನಗಳಲ್ಲಿ ಅಧ್ಯಯನ ನಡೆಸುವ ವಸ್ತುಗಳು ಅಸ್ಪಷ್ಟ ಮತ್ತು ಪರಿವರ್ತನೆಗೆ ಒಳಪಡುವುದರಿಂದ ಅವುಗಳನ್ನು ಪ್ರಯೋಗಕ್ಕೆ ಒಳಪಡಿಸಲು ಸಾಧ್ಯವಿಲ್ಲ.
೩. ಸಂಶೋಧಕನು ಪೂರ್ವಾಗ್ರಹ ಮತ್ತು ಪಕ್ಷಪಾತಗಳಿಂದ ಮುಕ್ತನಾಗಿ ಅಧ್ಯಯನ ನಡೆಸುತ್ತಾನೆ.	೩. ಸಂಶೋಧಕನು ಪೂರ್ವಾಗ್ರಹ ಮತ್ತು ಪಕ್ಷಪಾತಗಳಿಂದ ಮುಕ್ತವಾಗಿ ಅಧ್ಯಯನ ನಡೆಸುವುದಿಲ್ಲ.
೪. ಭೌತವಿಜ್ಞಾನಗಳಲ್ಲಿನ ಸಿದ್ಧಾಂತಗಳು ಮತ್ತು ತತ್ವಗಳು ಸಾರ್ವತ್ರಿಕವಾದವು. ಎಲ್ಲ ಕಾಲ, ಸ್ಥಳ ಹಾಗೂ ಸನ್ನಿವೇಶಗಳಿಗೂ ಒಂದೇ ರೀತಿ ಅನ್ವಯವಾಗುತ್ತವೆ.	೪. ಸಮಾಜವಿಜ್ಞಾನಿಯು ರಚಿಸಿದ ತತ್ವ ಮತ್ತು ಸಿದ್ಧಾಂತಗಳು ನಿರ್ದಿಷ್ಟವಾದ ಕಾಲ, ಸ್ಥಳ ಹಾಗೂ ಸನ್ನಿವೇಶಗಳಿಗೆ ಸೀಮಿತವಾಗಿರುತ್ತವೆ.
೫. ಭೌತವಿಜ್ಞಾನಗಳಲ್ಲಿನ ಜ್ಞಾನವು ನಂಬಲರ್ಹವಾದುದು ಮತ್ತು ಪರಿಶೀಲನೆಗೆ ಒಳಪಡಬಹುದು.	೫. ಸಮಾಜವಿಜ್ಞಾಗಳಲ್ಲಿನ ಜ್ಞಾನವು ಸಂದೇಹಾಸ್ಪದವಾದುದು.
೬. ಭೌತವಿಜ್ಞಾನಗಳಲ್ಲಿ ಬಳಸುವ	೬. ಪರಿಕಲ್ಪನೆಗಳು ಅಸ್ಪಷ್ಟ ಹಾಗೂ

ಪರಿಕಲ್ಪನೆಗಳು ಸ್ಪಷ್ಟ ಹಾಗೂ ನಿರ್ದಿಷ್ಟವಾಗಿರುತ್ತವೆ.	ಅನಿರ್ದಿಷ್ಟ ಸ್ವರೂಪವನ್ನು ಹೊಂದಿವೆ.
೭. ಅಧ್ಯಯನದ ವಿಷಯಕ್ಕೆ ಸಂಬಂಧ ಪಟ್ಟಂತೆ ಭವಿಷ್ಯವನ್ನು ನುಡಿಯಲು ಭೌತವಿಜ್ಞಾನಿಯು ಸಮರ್ಥನಾಗಿರುತ್ತಾನೆ.	೭. ಸಮಾಜವಿಜ್ಞಾನಿಗಳು ನಿಖರವಾಗಿ ಭವಿಷ್ಯವನ್ನು ನುಡಿಯಲಾರರು. ಏಕೆಂದರೆ ಅಧ್ಯಯನದ ವಿಷಯವಾದ ಮಾನವನ ವರ್ತನೆಗಳು ಅಸ್ಥಿರ ಸ್ವರೂಪ ವನ್ನು ಹೊಂದಿವೆ.
೮. ಸೂಕ್ಷ್ಮದರ್ಶಕ, ದೂರದರ್ಶಕ, ಉಷ್ಣತಾಮಾಪಕ ಮುಂತಾದ ಉಪಕರಣಗಳನ್ನು ಬಳಸಲು ಅವಕಾಶವಿದೆ.	೮. ಸಮಾಜವಿಜ್ಞಾನಗಳಲ್ಲಿ ಯಾವುದೇ ಇಂತಹ ಮಾಪನಯಂತ್ರಗಳಿಲ್ಲ.
೯. ವಸ್ತುನಿಷ್ಠತೆ, ನಿಖರತೆ ಮತ್ತು ನಿರ್ದಿಷ್ಟತೆ ಸಾಧ್ಯ.	೯. ವಸ್ತುನಿಷ್ಠತೆ, ನಿಖರತೆ ಮತ್ತು ನಿರ್ದಿಷ್ಟತೆಯ ಸಾಧ್ಯತೆ ಕಡಿಮೆ.

ಸಾಮಾಜಿಕ ಸಂಶೋಧನೆಯಲ್ಲಿ ವೈಜ್ಞಾನಿಕ ವಿಧಾನ

ಎಲ್ಲ ವಿಜ್ಞಾನಗಳೂ ಬಳಸುವ ಸಂಶೋಧನಾವಿಧಾನ ಅಥವಾ ವೈಜ್ಞಾನಿಕಪದ್ಧತಿ ಒಂದೇ ಆಗಿದೆ. ಇದನ್ನಾಧರಿಸಿಯೇ ಭೌತ, ಜೈವಿಕ ಹಾಗೂ ಸಮಾಜವಿಜ್ಞಾನಗಳು ತಮ್ಮ ಸಂಶೋಧನೆಗಳನ್ನು ನಡೆಸುತ್ತವೆ. ಹಾಗಾಗಿ ವೈಜ್ಞಾನಿಕ ಪದ್ಧತಿಯನ್ನು ಅನುಸರಿಸುವ ಪ್ರತಿಯೊಂದು ಅಧ್ಯಯನ ಕ್ಷೇತ್ರವನ್ನು ವಿಜ್ಞಾನವೆಂದು ಹೇಳಬಹುದು. ಒಂದು ಸಮಸ್ಯೆಯ ಮೂಲ, ವಿಸ್ತಾರ ಮತ್ತು ಆಳವನ್ನು ತಿಳಿಯುವ ಕುತೂಹಲ ಮೂಡಿದಾಗ ವ್ಯವಸ್ಥಿತವಾಗಿ ಅದರ ಕುರಿತಾದ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಣೆ ನಡೆಸುವ ಮೂಲಕ ಅಂತಿಮವಾಗಿ ಒಂದು ಸಿದ್ಧಾಂತವನ್ನು ನಿರೂಪಿಸುವ ತನಕ ಅನುಸರಿಸುವ ನಿರ್ದಿಷ್ಟ ವಿಧಾನವೇ ವೈಜ್ಞಾನಿಕ ಪದ್ಧತಿಯಾಗಿದೆ. ಇದರಲ್ಲಿ ಪ್ರಧಾನವಾಗಿ ಏಳು ಹಂತಗಳಿವೆ :

೧. ಸಮಸ್ಯೆಯನ್ನು ಕಂಡು ಹಿಡಿಯುವುದು : ನಮ್ಮ ಜ್ಞಾನದಿಂದ ನಾವು ಸಮಸ್ಯೆಯನ್ನು ಕಂಡುಹಿಡಿಯಬೇಕು. ಈ ಸಮಸ್ಯೆಯನ್ನು ಕುರಿತು ಸಂಶೋಧನೆ ಮಾಡಲಾಗುತ್ತದೆ. ಸಮಸ್ಯೆಯ ಸ್ವರೂಪ ಜಟಿಲವಾಗಿರಲಿ ಇಲ್ಲವೆ ಸರಳವಾಗಿರಲಿ, ಅದನ್ನು ವಿವರಿಸಬೇಕು. ಸಮಸ್ಯೆಯನ್ನು ಅರ್ಥಮಾಡಿಕೊಳ್ಳದೆ ಇದ್ದಲ್ಲಿ ಸಂಶೋಧನೆ ವ್ಯರ್ಥವಾಗುವುದು.

೨. ಊಹೆ ಅಥವಾ ಕಲ್ಪನೆ : ಕೇವಲ ಪೂರ್ವಭಾವಿ ಅವಲೋಕನ ಮತ್ತು ಸರ್ವಸಾಮಾನ್ಯ ಅರಿವಿನ ಮೂಲಕ ಸಮಸ್ಯೆಯ ಬಗ್ಗೆ ನಾವು ಊಹೆ ಅಥವಾ ಕಲ್ಪನೆಯನ್ನು ಮಾಡಬಹುದು. ಊಹೆ ಸಮಸ್ಯೆಯನ್ನು ಸಂಶೋಧಿಸಲು ಮಾರ್ಗದರ್ಶಿಯಾಗಿರುತ್ತದೆ. ಇದು ತಪ್ಪಾಗುವ ಸಾಧ್ಯತೆಗಳಿವೆ. ಸಂಶೋಧನೆ ಮುಂದುವರಿದಂತೆ ಕಲ್ಪನೆಯನ್ನು ಮಾರ್ಪಡಿಸಬಹುದು.

೩. ಅವಲೋಕನ : ಇದು ವೈಜ್ಞಾನಿಕ ಪದ್ಧತಿಯಲ್ಲಿ ಒಂದು ಮುಖ್ಯ ಹಂತವಾಗಿದೆ.

ಊಹಿಸಿದ ಸಂಗತಿಗಳ ಬಗ್ಗೆ ಸಂಶೋಧಕನು ಎಚ್ಚರಿಕೆಯಿಂದ ಗಮನಿಸಬೇಕು. ಅವಲೋಕನದಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ ನಿಯಂತ್ರಿತ ಮತ್ತು ಅನಿಯಂತ್ರಿತ ಅವಲೋಕನ.

ಸಮಾಜಶಾಸ್ತ್ರದಲ್ಲಿ ನಿಯಂತ್ರಿತ ಅವಲೋಕನ ಬಹಳ ಕ್ಲಿಷ್ಟವಾಗಿರುತ್ತದೆ. ಏಕೆಂದರೆ ಇಲ್ಲಿ ಸಮಾಜವಿಜ್ಞಾನಿ ಮನುಷ್ಯರ ಬಗ್ಗೆ ಸಂಶೋಧನೆಗಳನ್ನು ಮಾಡತೊಡಗಿರುತ್ತಾನೆ. ಪ್ರಶ್ನಾವಳಿ, ಸಂದರ್ಶನ ಮತ್ತು ಸಾರಣಿ ಅಥವಾ ಪಟ್ಟಿಗಳ ಮೂಲಕ ಸಮಾಜಶಾಸ್ತ್ರಜ್ಞರು ಆಧಾರಾಂಶಗಳನ್ನು ಅಥವಾ ದತ್ತಾಂಶಗಳನ್ನು ಪಡೆಯಬಹುದು.

೪. **ವಿಶ್ಲೇಷಣೆ ಹಾಗೂ ಸಂಯೋಜನೆ :** ಅವಲೋಕನದ ಮೂಲಕ ಸಂಗ್ರಹಿಸುವ ವಿಷಯಗಳನ್ನು ಕ್ರಮಬದ್ಧವಾಗಿ ದಾಖಲಿಸಬೇಕು. ಅನಂತರ ಅವುಗಳನ್ನು ವರ್ಗೀಕರಿಸಬೇಕು. ವರ್ಗೀಕರಣದಿಂದ ವಿಶ್ಲೇಷಣೆ ಅಥವಾ ಸಂಯೋಜನೆ ಸಾಧ್ಯವಾಗುತ್ತದೆ. ವಿಶ್ಲೇಷಣೆ ವಿಷಯದ ಬಗ್ಗೆ ತಿಳುವಳಿಕೆ ನೀಡುತ್ತದೆ.

೫. **ಸಾಮಾನ್ಯೀಕರಣ :** ವಿವರವಾದ ವಿಶ್ಲೇಷಣೆಯ ಮೂಲಕ ನಿರ್ದಿಷ್ಟ ಸಂಗತಿಗಳು ಹೊರಬೀಳುತ್ತವೆ. ಇವುಗಳ ಆಧಾರದ ಮೇಲೆ ಒಂದು ಸ್ಥೂಲವಾದ ತೀರ್ಮಾನಕ್ಕೆ ಬರಬಹುದು. ತೀರ್ಮಾನಗಳನ್ನು ಪರೀಕ್ಷಿಸಿ, ಸಿದ್ಧಾಂತವನ್ನು ಬರೆಯಬಹುದು.

೬. **ಸಿದ್ಧಾಂತ :** ಇದು ವೈಜ್ಞಾನಿಕ ಪದ್ಧತಿಯ ಮುಂದಿನ ಹಂತ. ವಿಜ್ಞಾನಿಯು ತಾನು ಸಂಗ್ರಹಿಸಿದ ವಿಷಯಗಳ ವಿಶ್ಲೇಷಣೆಯ ಆಧಾರದ ಮೇಲೆ ಸಿದ್ಧಾಂತವನ್ನು ರಚಿಸುತ್ತಾನೆ. ಸಮಾಜವಿಜ್ಞಾನಗಳಲ್ಲಿ ಸಿದ್ಧಾಂತಗಳು ಸಾಧ್ಯವಾದರೂ ಸಹ, ಅವು ಕೆಲವು ಇತಿಮಿತಿಗಳನ್ನು ಹೊಂದಿರುತ್ತವೆ.

೭. **ಭವಿಷ್ಯ ನಿರೂಪಣೆ :** ಸಿದ್ಧಾಂತಗಳ ಆಧಾರದ ಮೇಲೆ ಸಂಶೋಧಕನು ಸಂಭವಿಸಬಹುದಾದ ಘಟನೆಗಳ ಪೂರ್ವಸೂಚನೆ ನೀಡಬಹುದು. ಅಂತೆಯೇ ಸಮಸ್ಯೆಗಳ ಪರಿಹಾರಕ್ಕೆ ಅಥವಾ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ರೂಪಿಸಲು ಸಲಹೆ ನೀಡಬಹುದು.

೩. ಸಮಾಜಶಾಸ್ತ್ರವು ಒಂದು ವಿಜ್ಞಾನ

ಸಮಾಜಶಾಸ್ತ್ರವು ಸಾಮಾಜಿಕಸಂಬಂಧಗಳ ಅಥವಾ ಸಮಾಜದ ಅಧ್ಯಯನ. ಸಮಾಜಶಾಸ್ತ್ರವನ್ನು ವಿಜ್ಞಾನವೆಂದು ಭೌತವಿಜ್ಞಾನಗಳ ರೀತಿಯಲ್ಲಿ ನಿರೂಪಿಸಲು ಸಾಧ್ಯವಿಲ್ಲದಿದ್ದರೂ ವಿಜ್ಞಾನದ ಲಕ್ಷಣಗಳನ್ನು ಸಮಾಜಶಾಸ್ತ್ರಕ್ಕೆ ಹೋಲಿಸಿದಾಗ ಸಮಾಜಶಾಸ್ತ್ರವನ್ನು ವಿಜ್ಞಾನವೆನ್ನಬಹುದು. ಸಮಾಜಶಾಸ್ತ್ರದಲ್ಲಿ ಭೌತವಿಜ್ಞಾನಗಳ ರೀತಿಯಲ್ಲಿ ಪ್ರಯೋಗದ ಕೊರತೆ, ವಸ್ತುನಿಷ್ಠತೆಯ ಕೊರತೆ, ವಾಸ್ತವಿಕತೆಯ ಕೊರತೆ ಮತ್ತು ಭವಿಷ್ಯ ಪ್ರವಾದಿಸುವ ಕೊರತೆ ಇದೆ ನಿಜ. ಆದರೆ ಭೌತವಿಜ್ಞಾನಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ ಮುಂತಾದುವುಗಳ ಇತಿಹಾಸ ನೋಡಿದಾಗ ಅವು ಪ್ರತಿಪಾದಿಸಿದ ಹಲವು ಸಿದ್ಧಾಂತಗಳು ಮತ್ತು ಭವಿಷ್ಯ ಸೂಚನೆಗಳು ಹುಸಿಯಾಗಿವೆ. ಹಲವಾರು ಸಿದ್ಧಾಂತಗಳು

ಮಾರ್ಪಾಡಾಗಿವೆ. ಸಮಾಜಶಾಸ್ತ್ರವು ಯುವ ವಿಜ್ಞಾನವಾಗಿ ಸುಮಾರು ೧೫೦ ವರ್ಷಗಳ ಇತಿಹಾಸವನ್ನು ಹೊಂದಿದ್ದರೂ ಭೌತವಿಜ್ಞಾನಗಳಂತೆ ಹಲವು ಸಾರ್ವತ್ರಿಕ ಸಿದ್ಧಾಂತಗಳನ್ನು ಮತ್ತು ತತ್ವಗಳನ್ನು ನಿರೂಪಿಸಿದೆ. ಉದಾಹರಣೆಗೆ ಮಕ್ಕಳಿದ್ದ ಕುಟುಂಬಗಳಿಗಿಂತ ಮಕ್ಕಳಿಲ್ಲದ ಕುಟುಂಬಗಳಲ್ಲಿ ವಿವಾಹ ವಿಚ್ಛೇದನ ಹೆಚ್ಚಾಗಿದೆ. ಈ ನಿಯಮವು ಸಾರ್ವತ್ರಿಕವಾಗಿ ಅನ್ವಯವಾಗುತ್ತದೆ. ಈ ನಿಯಮದ ವಸ್ತುನಿಷ್ಠತೆ ಮತ್ತು ಯಥಾವತ್ತತೆಯನ್ನು ಎಲ್ಲ ಕಾಲಗಳಲ್ಲಿ ಮತ್ತು ಪ್ರದೇಶಗಳಲ್ಲಿ ಪರೀಕ್ಷಿಸಿ ನೋಡಬಹುದಾಗಿದೆ.

ಯಾವುದೇ ಅಧ್ಯಯನ ಶಾಖೆಯನ್ನು ವಿಜ್ಞಾನವೆಂದು ಪರಿಗಣಿಸಬೇಕಾದರೆ ಅದು ವ್ಯವಸ್ಥಿತ ಜ್ಞಾನವಾಗಿರಬೇಕು ಮತ್ತು ವ್ಯವಸ್ಥಿತವಾದ ಜ್ಞಾನ ಸಂಗ್ರಹಿಸಲು ಅದು ವೈಜ್ಞಾನಿಕ ವಿಧಾನವನ್ನು ಅಳವಡಿಸಿಕೊಂಡಿರಬೇಕು. ಸಮಾಜಶಾಸ್ತ್ರವು ಸಂಶೋಧನೆಗಳಲ್ಲಿ ವೈಜ್ಞಾನಿಕ ಪದ್ಧತಿಯನ್ನು ಅನುಸರಿಸುತ್ತಿದೆ. ಮಾಹಿತಿ ಸಂಗ್ರಹಣೆಗಾಗಿ ಪ್ರಶ್ನಾವಳಿ, ಅವಲೋಕನ, ಸಂದರ್ಶನ, ಅನುಸೂಚಿ ಮುಂತಾದ ವಿಧಾನಗಳನ್ನು ಬಳಸುತ್ತಿದೆ. ಕೆಳಗೆ ವಿವರಿಸುವ ಅಂಶಗಳು ಸಮಾಜಶಾಸ್ತ್ರವನ್ನು ವಿಜ್ಞಾನವೆಂದು ನಿರೂಪಿಸಲು ಆಧಾರಗಳಾಗಿವೆ.

೧. ವೈಜ್ಞಾನಿಕ ಪದ್ಧತಿಯ ಬಳಕೆ : ಸಮಾಜಶಾಸ್ತ್ರೀಯ ಸಂಶೋಧನೆಗಳಲ್ಲಿ ವೈಜ್ಞಾನಿಕ ಪದ್ಧತಿಯ ಪ್ರಮುಖ ಹಂತಗಳಾದ ಸಮಸ್ಯೆಯ ಸೂತ್ರೀಕರಣ, ಪ್ರಾಕ್‌ಕಲ್ಪನೆಯ ರಚನೆ, ಅವಲೋಕನ, ಮಾಹಿತಿ ಸಂಗ್ರಹಣೆ, ವರ್ಗೀಕರಣ, ವಿಶ್ಲೇಷಣೆ, ಸಿದ್ಧಾಂತ ನಿರೂಪಣೆ ಮುಂತಾದುವುಗಳನ್ನು ಅನುಸರಿಸಲಾಗುತ್ತಿದೆ. ವಿಜ್ಞಾನವು ಅಳವಡಿಸುವ ವೈಜ್ಞಾನಿಕ ಪದ್ಧತಿಯನ್ನು ಅಧ್ಯಯನಕ್ಕೋಸ್ಕರ ಸಮಾಜಶಾಸ್ತ್ರದಲ್ಲಿ ಬಳಸಲಾಗುತ್ತದೆ.

೨. ಪರೋಕ್ಷ ಪ್ರಯೋಗ : ಭೌತವಿಜ್ಞಾನಗಳ ರೀತಿಯಲ್ಲಿ ಸಮಾಜಶಾಸ್ತ್ರದ ಅಧ್ಯಯನ ವಿಷಯವಾದ ಮಾನವನ ವರ್ತನೆ ಮತ್ತು ಸಂಬಂಧಗಳನ್ನು ಪ್ರಯೋಗಶಾಲೆಯಲ್ಲಿ ಪ್ರಯೋಗ ನಡೆಸಿ ವಾಸ್ತವಿಕತೆಯನ್ನು ಗುರುತಿಸಲು ಸಾಧ್ಯವಿಲ್ಲದಿದ್ದರೂ ಅಧ್ಯಯನ ನಡೆಸುವ ಕ್ಷೇತ್ರದ ಒಪ್ಪಿಗೆ ಪಡೆದು ಪರೋಕ್ಷ ಪ್ರಯೋಗವನ್ನು ನಡೆಸಬಹುದು. ಉದಾಹರಣೆಗೆ ಕೈಗಾರಿಕೆಗಳಲ್ಲಿ ಕಾರ್ಮಿಕರ ವರ್ತನೆ. ಸಮಾಜಶಾಸ್ತ್ರದಲ್ಲಿ ಭೌತವಿಜ್ಞಾನಗಳಂತೆ ಪ್ರಯೋಗ ನಡೆಸಲು ತುಲನಾತ್ಮಕ ವಿಧಾನವನ್ನು ಅಳವಡಿಸಬಹುದು. ಸಂದರ್ಶನ, ಪ್ರಶ್ನಾವಳಿ ಮತ್ತು ವಿಷಯ ಅಧ್ಯಯನ ಪದ್ಧತಿಯಿಂದ ಸಂಗ್ರಹಿಸಿದ ಮಾಹಿತಿಗಳ ಪರಿಮಾಣಾತ್ಮಕ ವಿಶ್ಲೇಷಣೆ ಸಾಧ್ಯ.

೩. ಸತ್ಯಸಂಗತಿಗಳನ್ನು ನಿರೂಪಿಸಲು ಪ್ರಯೋಗ ಶಾಲೆಯಲ್ಲಿಯೇ ಪ್ರಯೋಗ ನಡೆಸುವ ಅವಶ್ಯಕತೆ ವಿಜ್ಞಾನಿಗಳಿಗಿಲ್ಲ : ಭೌತವಿಜ್ಞಾನವಾದ ಖಗೋಳಶಾಸ್ತ್ರದಲ್ಲಿ ಆಕಾಶಕಾಯಗಳನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷೆ ನಡೆಸದೆ ಆಕಾಶದಲ್ಲಿ ಘಟನೆಗಳು ನಡೆದಾಗಲೇ ಅವಲೋಕಿಸಿ ಸಿದ್ಧಾಂತಗಳನ್ನು ರಚಿಸಿದ್ದಾರೆ. ಅದಕ್ಕೆ ವಿಜ್ಞಾನದ ಸ್ಥಾನಮಾನವನ್ನು ನೀಡಲಾಗಿದೆ. **ನ್ಯೂಟನ್, ಆರ್ಕಿಮಿಡಿಸ್** ಮುಂತಾದ ವಿಜ್ಞಾನಿಗಳು ಪ್ರಯೋಗ ಶಾಲೆಯಲ್ಲಿಯೇ ಪ್ರಯೋಗಗಳನ್ನು ನಡೆಸಿ ಸಿದ್ಧಾಂತಗಳನ್ನು ರಚಿಸಿರುವುದಿಲ್ಲ. ಸಮಾಜಶಾಸ್ತ್ರವು ತನ್ನ ಕೆಲವೊಂದು ಪರಿಮಿತಿಗಳೊಂದಿಗೆ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿ

ಅಧ್ಯಯನ ನಡೆಸುತ್ತದೆ. ಖಗೋಳಶಾಸ್ತ್ರವನ್ನು ವಿಜ್ಞಾನವೆಂದು ಪರಿಗಣಿಸುವುದಾದರೆ ಅದೇ ರೀತಿ ಸಿದ್ಧಾಂತಗಳನ್ನು ರೂಪಿಸಿದ ಸಮಾಜಶಾಸ್ತ್ರಕ್ಕೂ ವಿಜ್ಞಾನದ ಸ್ಥಾನಮಾನವನ್ನು ಪಡೆಯುವ ಅರ್ಹತೆ ಬರುತ್ತದೆ.

೪. ನಿರ್ಣಯಗಳ ಸಾರ್ವತ್ರಿಕತೆ : ಸಮಾಜಶಾಸ್ತ್ರವು ಸಾರ್ವತ್ರಿಕವಾಗಿ ಅನ್ವಯವಾಗುವ ಸಿದ್ಧಾಂತ ಅಥವಾ ನಿರ್ಣಯಗಳನ್ನು ರೂಪಿಸುವ ಸಾಮರ್ಥ್ಯ ಪಡೆದಿದೆ. ನಿರ್ಣಯಗಳು ಎಲ್ಲ ಕಾಲ, ದೇಶ ಮತ್ತು ಸನ್ನಿವೇಶಕ್ಕೆ ಅನ್ವಯವಾಗುವಂತಹ ಸಿದ್ಧಾಂತಗಳನ್ನು ನಿರೂಪಿಸುವಲ್ಲಿ ಸಮಾಜಶಾಸ್ತ್ರಜ್ಞರು ಯಶಸ್ವಿಯಾಗಿದ್ದಾರೆ. ಉದಾಹರಣೆಗೆ ವಿವಾಹವೆಂಬ ಸಂಸ್ಥೆಯು ತಂದೆ ಹಾಗೂ ಮಗಳು, ತಾಯಿ ಮತ್ತು ಮಗ, ಸಹೋದರ ಮತ್ತು ಸಹೋದರಿಯ ನಡುವೆ ವೈವಾಹಿತ ಸಂಬಂಧವನ್ನು ನಿಷೇಧಿಸುತ್ತದೆ.

೫. ಭವಿಷ್ಯ ಸೂಚಕತೆ : ಸಮಾಜಶಾಸ್ತ್ರವು ತತ್ವ ಅಥವಾ ನಿಯಮಗಳನ್ನು ರೂಪಿಸಿ ಮಾನವನ ವರ್ತನೆಯ ಕುರಿತು ಭವಿಷ್ಯವನ್ನು ನುಡಿಯುತ್ತದೆ. ಮಾನವನ ವರ್ತನೆ ಸಂಕೀರ್ಣ ಸ್ವರೂಪವನ್ನು ಹೊಂದಿದ್ದರೂ ಭೌತವಿಜ್ಞಾನಿಗಳಂತೆ ಸಿದ್ಧಾಂತವನ್ನು ನಿರೂಪಿಸಿ ನಿಖರವಾಗಿ ಭವಿಷ್ಯ ನಿರೂಪಿಸುವ ಸಾಮರ್ಥ್ಯ ಹೊಂದಿದೆ. ಭೌತವಿಜ್ಞಾನಿಗಳು ರೂಪಿಸಿದಂತಹ ಕೆಲವು ಸಿದ್ಧಾಂತಗಳಲ್ಲಿ ಮಾರ್ಪಾಡುಗಳಾಗಿವೆ. ಕ್ಯುವಿಯರ್‌ರವರ ಪ್ರಕಾರ ಸಮಾಜಶಾಸ್ತ್ರದ ಭವಿಷ್ಯ ಸೂಚಿಸುವ ಸಾಮರ್ಥ್ಯದಲ್ಲಿ ಗಮನಾರ್ಹವಾದ ಪ್ರಗತಿಯಾಗಿದೆ.

೬. ಸಿದ್ಧಾಂತಗಳ ಪುನರ್‌ಪರಿಶೀಲನೆಗೆ ಅವಕಾಶ : ಸಮಾಜಶಾಸ್ತ್ರದಲ್ಲಿ ರೂಪಿಸಿದಂತಹ ನಿರ್ಣಯ, ತತ್ವ ಅಥವಾ ಸಿದ್ಧಾಂತಗಳ ವಸ್ತುನಿಷ್ಠತೆಯನ್ನು ಸಂಗ್ರಹಿಸಿದ ಮಾಹಿತಿಗಳ ಆಧಾರದಲ್ಲಿ ಪುನರ್‌ಪರಿಶೀಲನೆ ನಡೆಸಬಹುದು. ತಾರ್ಕಿಕ ನೆಲೆಗಟ್ಟಿನಿಂದ ಸಮಾಜಶಾಸ್ತ್ರೀಯ ಸಿದ್ಧಾಂತಗಳ ಸತ್ಯಾಸತ್ಯತೆಯನ್ನು ಜಿಜ್ಞಾಸೆ ನಡೆಸಬಹುದಾಗಿದೆ.

೭. ಕಾರಣ-ಪರಿಣಾಮಗಳ ಸಂಬಂಧ : ಸಮಾಜಶಾಸ್ತ್ರವು ಕಾರಣ ಮತ್ತು ಪರಿಣಾಮಗಳ ಸಂಬಂಧವನ್ನು ವಿಶ್ಲೇಷಿಸಿ ಸಾಮಾಜಿಕ ವಿದ್ಯಮಾನಗಳ ಕುರಿತು ವಿವರಣೆ ನೀಡುತ್ತದೆ. ಅವುಗಳ ಸಂಬಂಧಗಳನ್ನು ಆಧರಿಸಿ ಮುಂದಿನ ಪರಿಸ್ಥಿತಿಯ ಕುರಿತು ನಿಖರವಾಗಿ ಭವಿಷ್ಯವನ್ನು ನುಡಿಯುತ್ತದೆ. ಸಾಮಾಜಿಕ ವಿಘಟನೆಯ ಕುರಿತು ಅಧ್ಯಯನ ನಡೆಸುವಾಗ ಅವುಗಳ ಕಾರಣ ಮತ್ತು ಪರಿಣಾಮಗಳನ್ನು ವಿಶ್ಲೇಷಿಸಿ ಸಮಸ್ಯೆಗೆ ಪರಿಹಾರವನ್ನು ಗುರುತಿಸುವ ಪ್ರಯತ್ನವನ್ನು ಸಮಾಜಶಾಸ್ತ್ರ ನಡೆಸುತ್ತದೆ.

ಡಬ್ಲ್ಯು.ಎಫ್. ಅಗ್‌ಬರ್ನ್‌ರವರು ಸಮಾಜಶಾಸ್ತ್ರವನ್ನು ವಿಜ್ಞಾನವೆಂದು ಪರಿಗಣಿಸಿ ವಿಜ್ಞಾನವನ್ನು ನಿರ್ಧರಿಸುವ ಮೂರು ಮಾನದಂಡಗಳನ್ನು ವಿವರಿಸಿದ್ದಾರೆ.

೧. ನಂಬಲರ್ಹವಾದ ಜ್ಞಾನ

೨. ಜ್ಞಾನದ ಸಂಘಟನೆ

೩. ವೈಜ್ಞಾನಿಕ ವಿಧಾನ

೧. ನಂಬಲರ್ಹವಾದ ಜ್ಞಾನ

ಸಮಾಜಶಾಸ್ತ್ರವು ನಂಬಲರ್ಹವಾದ ಜ್ಞಾನವನ್ನು ಅವಲಂಬಿಸಿದೆ. ಕುಟುಂಬ, ವಿವಾಹ, ಶಿಕ್ಷಣ, ಸಾಮಾಜಿಕ ಚಲನೆ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಜ್ಞಾನ ನಂಬಲರ್ಹವಾದುದು. ಎಲ್ಲ ವಿಜ್ಞಾನಗಳು ಸಂಗ್ರಹಿಸಿದ ವೈವಿಧ್ಯಮಯ ಸತ್ಯಾಂಶಗಳಲ್ಲಿ ಏಕತೆಯನ್ನು ಪ್ರತಿಬಿಂಬಿಸುವ ಪ್ರಾಕ್‌ಕಲ್ಪನೆಯಿಂದ ಅಧ್ಯಯನವನ್ನು ಪ್ರಾರಂಭಿಸಿ ಸಾರ್ವತ್ರಿಕವಾಗಿ ಅನ್ವಯವಾಗುವ ಸಾಮಾನ್ಯ ನಿಯಮಗಳನ್ನು ರೂಪಿಸುತ್ತದೆ. ಸಮಾಜಶಾಸ್ತ್ರದಲ್ಲಿ ಎಲ್ಲ ಕಾಲ ಮತ್ತು ಸಮಾಜಕ್ಕೆ ಅನ್ವಯವಾಗುವ ನಿಯಮಗಳನ್ನು ರೂಪಿಸಲು ತೊಡಕನ್ನು ಎದುರಿಸುತ್ತಿದ್ದರೂ ಇತ್ತೀಚಿಗೆ ಈ ನಿಟ್ಟಿನಲ್ಲಿ ಯಶಸ್ಸನ್ನು ಗಳಿಸುತ್ತಿದೆ. ಉದಾಹರಣೆಗೆ ನೈತಿಕ ನಿಯಮಗಳನ್ನು ಸರಿಯೆಂದು ಎಲ್ಲ ಸಮಾಜಗಳಲ್ಲಿಯೂ ಅನುಸರಿಸುತ್ತಾರೆ.

೨. ಜ್ಞಾನದ ಸಂಘಟನೆ

ವಿಜ್ಞಾನವು ಸಂಗ್ರಹಿಸಿದ ಸತ್ಯಸಂಗತಿಗಳನ್ನು ವ್ಯವಸ್ಥಿತವಾಗಿ ಜೋಡಿಸುವುದನ್ನು ಸಂಘಟಿತಜ್ಞಾನ ಎನ್ನುತ್ತೇವೆ. ಸಂಗ್ರಹಿಸಿದ ಸತ್ಯಸಂಗತಿಗಳನ್ನು ಸಂಘಟಿಸುವುದರಿಂದ ಸಂಶೋಧಕನು ತನ್ನ ಅಧ್ಯಯನವನ್ನು ಮುಂದುವರಿಸಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಸಮಾಜಶಾಸ್ತ್ರವನ್ನು ವಿಜ್ಞಾನವೆನ್ನಬಹುದು. ಸಮಾಜಶಾಸ್ತ್ರಜ್ಞರು ಸಂಗ್ರಹಿಸಿದ ಸತ್ಯಸಂಗತಿಗಳನ್ನು ವ್ಯವಸ್ಥಿತವಾಗಿ ಜೋಡಿಸಿ, ವಿಶ್ಲೇಷಿಸಿ ಸೂತ್ರಗಳನ್ನು ನಿರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

೩. ವೈಜ್ಞಾನಿಕ ವಿಧಾನ

ವೈಜ್ಞಾನಿಕ ಪದ್ಧತಿಯ ಹಂತಗಳನ್ನು ಯಶಸ್ವಿಯಾಗಿ ಸಮಾಜಶಾಸ್ತ್ರದಲ್ಲಿ ಅಳವಡಿಸಿ ಅಧ್ಯಯನ ನಡೆಸಲಾಗುತ್ತದೆ. ಸಂಶೋಧಕನು ತನ್ನ ಪರಿಮಿತಿಗಳನ್ನು ಅರಿತುಕೊಂಡು ವೈಜ್ಞಾನಿಕ ಪದ್ಧತಿಯನ್ನು ಅಳವಡಿಸುವುದರಿಂದ ಸಾರ್ವತ್ರಿಕವಾಗಿ ಅನ್ವಯವಾಗುವ ತತ್ವಗಳನ್ನು ನಿರೂಪಿಸಲು ಸಮಾಜಶಾಸ್ತ್ರಜ್ಞನು ಯಶಸ್ವಿಯಾಗಿದ್ದಾನೆ.

ಸಮಾಜಶಾಸ್ತ್ರವು ಒಂದು ಸಮಾಜವಿಜ್ಞಾನವಾಗಿದೆ. ವಿಜ್ಞಾನವೆನ್ನುವುದು ಸತ್ಯಶೋಧನೆಗಾಗಿ ಸಂಶೋಧಕನು ಅನುಸರಿಸುವ ಮಾರ್ಗವನ್ನವಲಂಬಿಸಿದೆ. ಅದು ಕೇವಲ ಪ್ರಯೋಗಾಲಯದ ಪರೀಕ್ಷೆಯಿಂದ ನಿರ್ಧಾರವಾಗುವುದಿಲ್ಲ. ಬದಲಾಗಿ ವ್ಯವಸ್ಥಿತವಾದ ವೈಜ್ಞಾನಿಕ ವಿಧಾನವನ್ನು ಸಂಶೋಧನೆಗೆ ಬಳಸುವುದರಿಂದ ಸಮಾಜಶಾಸ್ತ್ರವನ್ನು ವಿಜ್ಞಾನವೆನ್ನಬಹುದು.

೧.೪. ಸಮಾಜಶಾಸ್ತ್ರ ಅಧ್ಯಯನದ ಮಹತ್ವ

ಸಮಾಜಶಾಸ್ತ್ರವು ಇತ್ತೀಚಿಗೆ ಅಸ್ತಿತ್ವಕ್ಕೆ ಬಂದಿದ್ದರೂ ಇತರ ವಿಜ್ಞಾನಗಳಿಗೆ ಹೋಲಿಸಿದಾಗ ಗಮನಾರ್ಹವಾದ ಪ್ರಗತಿಯನ್ನು ಸಾಧಿಸಿದೆ. ಸಮಾಜಶಾಸ್ತ್ರದ ಪ್ರಗತಿಯ

ವೇಗವನ್ನು ಪರಿಶೀಲಿಸಿದಾಗ ಅದರ ಪ್ರಾಮುಖ್ಯತೆ ವ್ಯಕ್ತವಾಗುತ್ತದೆ. ಸಮಾಜಶಾಸ್ತ್ರದಲ್ಲಿ ಸಾಮಾಜಿಕಸಂಬಂಧ, ಪರಿಸ್ಥಿತಿ ಮತ್ತು ವಿದ್ಯಮಾನಗಳನ್ನು ವೈಜ್ಞಾನಿಕವಾಗಿ ಅಧ್ಯಯನ ನಡೆಸುವುದರಿಂದಲೇ ಅದರ ಪ್ರಗತಿಯಾಗಿದೆ. ಮಾನವಸಮಾಜವನ್ನು ವೈಜ್ಞಾನಿಕವಾಗಿ ತಿಳಿದುಕೊಂಡು ಸಮಾಜದ ಪ್ರಗತಿಗೆ ಸಮಾಜಶಾಸ್ತ್ರವು ಅವಶ್ಯಕವೆಂದು ಮನಗಂಡು ಪ್ರಾರಂಭದಲ್ಲಿ ಯುರೋಪ್ ಮತ್ತು ಅಮೇರಿಕಾದಲ್ಲಿ ಪ್ರಾಮುಖ್ಯತೆ ಪಡೆದ ಸಮಾಜಶಾಸ್ತ್ರ ಇಂದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿಯೂ ಆಳವಾಗಿ ಬೇರೂರಿದೆ. ಆರ್ಥಿಕ ಅವಶ್ಯಕತೆಯು ಮೂಲಭೂತ ಬೇಡಿಕೆಯಾದರೂ ಅದನ್ನು ಪೂರೈಸಲು ಸಾಮಾಜಿಕ ಮನಶ್ಶಾಸ್ತ್ರೀಯ ಅಂಶಗಳು ಪ್ರಮುಖವೆಂದು ಮಾನವರು ಮನಗಂಡಿದ್ದಾರೆ. ಆದ್ದರಿಂದಲೇ ಸಮಾಜಶಾಸ್ತ್ರದ ಬೆಳವಣಿಗೆ ತೀವ್ರಗತಿಯಲ್ಲಾಗುತ್ತಿದೆ. ಸಮಾಜಶಾಸ್ತ್ರದ ಪ್ರಾಮುಖ್ಯತೆಯು ಈ ಕೆಳಗೆ ವಿವರಿಸುವ ಅಂಶಗಳಿಂದ ವ್ಯಕ್ತವಾಗುತ್ತದೆ.

೧. ಮಾನವ ಸಮಾಜದ ವೈಜ್ಞಾನಿಕ ಅಧ್ಯಯನ

ಸಮಾಜಶಾಸ್ತ್ರವು ಮಾನವ ಸಮಾಜವನ್ನು ವೈಜ್ಞಾನಿಕ ರೀತಿಯಲ್ಲಿ ಅಧ್ಯಯನ ನಡೆಸುತ್ತದೆ. ಸಮಾಜಶಾಸ್ತ್ರವು ಅಸ್ತಿತ್ವಕ್ಕೆ ಬರುವ ಮೊದಲು ತತ್ವಶಾಸ್ತ್ರಜ್ಞರಾಗಲಿ; ರಾಜಕೀಯತಜ್ಞರಾಗಲಿ, ಇತಿಹಾಸಕಾರರಾಗಲಿ, ಆಡಳಿತಗಾರರಾಗಲಿ, ಸಾಮಾಜಿಕ ವಿಷಯಗಳ ಕುರಿತು ವ್ಯವಸ್ಥಿತ ಮತ್ತು ವೈಜ್ಞಾನಿಕವಾದ ಅಧ್ಯಯನ ನಡೆಸಿರಲಿಲ್ಲ. ಅವರ ಅಧ್ಯಯನಗಳು ವೈಜ್ಞಾನಿಕ ಮತ್ತು ವ್ಯವಸ್ಥಿತವಾದ ಅಧ್ಯಯನಗಳಾಗಿರಲಿಲ್ಲ. ಸಮಾಜಶಾಸ್ತ್ರವು ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿ ಮಾನವ ಸಮಾಜದ ಸಂಕೀರ್ಣತೆ, ಬೆಳವಣಿಗೆಗೆ, ಪರಿವರ್ತನೆ, ರಚನೆ ಮತ್ತು ಸಮಸ್ಯೆಗಳನ್ನು ಕುರಿತು ಅಧ್ಯಯನ ನಡೆಸಿದೆ. ಸಮಾಜಶಾಸ್ತ್ರೀಯ ಅಧ್ಯಯನಗಳ ಪ್ರಕ್ರಿಯೆಯಲ್ಲಿ ಹಲವಾರು ಹೊಸ ಕಲ್ಪನೆ, ಸಿದ್ಧಾಂತಗಳನ್ನು ನಿರೂಪಿಸಲಾಗಿದೆ. ಸಮಾಜದ ಅಧ್ಯಯನ ನಡೆಸಲು ವೈಜ್ಞಾನಿಕ ವಿಧಾನ ಮತ್ತು ತಂತ್ರಜ್ಞಾನವನ್ನು ರೂಪಿಸಿ ಬೆಳೆಸಿದೆ. ಸಾಮಾಜಿಕ ಸಂಬಂಧಗಳ ಮಾಪನ ನಡೆಸಲು ಸಮಾಜಮಾಪನ ಮತ್ತಿತ್ತರ ವಿಧಾನಗಳನ್ನು ಅಳವಡಿಸಿದೆ. ಈ ಅಂಶಗಳು ಸಮಾಜಶಾಸ್ತ್ರವು ಸಮಾಜವನ್ನು ವೈಜ್ಞಾನಿಕವಾಗಿ ಅಧ್ಯಯನ ನಡೆಸುತ್ತದೆ ಎನ್ನುವುದಕ್ಕೆ ಸಾಕ್ಷಿಯಾಗಿವೆ.

೨. ಮಾನವನ ಸಾಮಾಜಿಕ ಸ್ವಭಾವ

ಸಮಾಜಶಾಸ್ತ್ರವು ಮಾನವ ಸಮಾಜದ ವೈಜ್ಞಾನಿಕ ಅಧ್ಯಯನ ನಡೆಸುವ ಸಂದರ್ಭದಲ್ಲಿ ಅವನ ನಡವಳಿಕೆಯ ಮೇಲೆ ಬೆಳಕನ್ನು ಚೆಲ್ಲುತ್ತದೆ. ಮಾನವ ಸ್ವಭಾವ ಕುರಿತು ಅಧ್ಯಯನ ನಡೆಸುವುದರಿಂದ ಮಾನವ ಏಕೆ ಸಮೂಹದಲ್ಲಿ ಜೀವಿಸುತ್ತಾನೆ? ಮಾನವನಿಗೂ ಸಮಾಜಕ್ಕೂ ಇರುವ ಸಂಬಂಧ ಯಾವ ರೀತಿಯದು? ವ್ಯಕ್ತಿಯ ಧೋರಣೆಗಳು, ಪ್ರೇರಣೆಗಳು, ನಂಬಿಕೆಗಳು, ನಾಯಕತ್ವ ಮುಂತಾದವುಗಳು ಹೇಗೆ ರೂಪುಗೊಳ್ಳುತ್ತವೆ?- ಮುಂತಾದವುಗಳನ್ನು ಸಮಾಜಶಾಸ್ತ್ರದಲ್ಲಿ ಅಧ್ಯಯನ ಮಾಡಲಾಗುತ್ತದೆ. ಸಂಕ್ಷಿಪ್ತವಾಗಿ ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಬಂಧಗಳ ಅಧ್ಯಯನವನ್ನು ಸಮಾಜಶಾಸ್ತ್ರ ಒಳಗೊಂಡಿದೆ.

೩. ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ

ಸಮಾಜವನ್ನು ವೈಜ್ಞಾನಿಕವಾದ ರೀತಿಯಲ್ಲಿ ಅಧ್ಯಯನ ನಡೆಸುವುದರಿಂದ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬಹುದು. ಯುರೋಪ್ ಖಂಡದಲ್ಲಾದ ಪರಿವರ್ತನೆಗಳು ಅನೇಕ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಸೃಷ್ಟಿಸಿದವು. ಆ ಸಂದರ್ಭದಲ್ಲಿ ಸಮಾಜಶಾಸ್ತ್ರವು ಅಸ್ತಿತ್ವಕ್ಕೆ ಬಂದಿತು. ಸಮಾಜಶಾಸ್ತ್ರವು ಬಡತನ, ನಿರುದ್ಯೋಗ, ಅಪರಾಧ, ಬಾಲಾಪರಾಧ, ಮದ್ಯವ್ಯಸನ ಮುಂತಾದ ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸಿ ಅವುಗಳ ಅವಶ್ಯಕ ಪರಿಹಾರಕ್ಕೆ ಸಲಹೆಗಳನ್ನು ನೀಡುತ್ತದೆ. ಸಾಮಾಜಿಕ ಸಮಸ್ಯೆಗಳ ಕುರಿತ ಅಧ್ಯಯನದ ಮಾಹಿತಿಗಳನ್ನು ಆಡಳಿತಗಾರರು ಬಳಸಿಕೊಂಡು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಅಳವಡಿಸುತ್ತಿದ್ದಾರೆ. ಈ ರೀತಿ ಸಾಮಾಜಿಕ ಸಮಸ್ಯೆಗಳನ್ನು ಕೊನೆಗಾಣಿಸಲು ಸಮಾಜಶಾಸ್ತ್ರವು ಸಹಕಾರಿಯಾಗಿದೆ.

೪. ಸಾಮಾಜಿಕ ನಿಯೋಜನೆ

ಸಮಾಜದ ಮುನ್ನಡೆಯಲ್ಲಿ ಸಾಮಾಜಿಕ ನಿಯೋಜನೆಯ ಪಾತ್ರವು ಪ್ರಮುಖವಾದುದು. ಸಮಾಜದ ಧ್ಯೇಯಗಳನ್ನು ಈಡೇರಿಸಲು ಸಮಾಜಸಾಸ್ತ್ರವು ಸಹಕಾರಿಯಾಗಿದೆ. ಸಮಾಜಶಾಸ್ತ್ರೀಯ ಜ್ಞಾನವು ಸಮಾಜವನ್ನು ಅರಿತುಕೊಂಡು ಸೂಕ್ತವಾದ ಯೋಜನಗಳನ್ನು ರೂಪಿಸಲು ಉಪಯುಕ್ತವಾಗದೆ. ಉದಾ: ಜನನ ಪ್ರಮಾಣವನ್ನು ನಿಯಂತ್ರಿಸಲು ಕೇವಲ ಆರ್ಥಿಕ ಪ್ರಗತಿಯಿಂದ ಸಾಧ್ಯವಿಲ್ಲ. ಕೌಟುಂಬಿಕ ಸಂಘಟನೆ, ಪದ್ಧತಿ, ಮೌಲ್ಯಗಳು ಮುಂತಾದ ಸಾಮಾಜಿಕ ಅಂಶಗಳನ್ನು ಕುರಿತು ಗಮನಹರಿಸಬೇಕಾಗುತ್ತದೆ. ಸಮಾಜಶಾಸ್ತ್ರಜ್ಞರು ಸಾಮಾಜಿಕಯೋಜನೆಯ ನೀತಿನಿರೂಪಕರಾಗಿಯೂ ಪಾತ್ರ ನಿರ್ವಹಿಸುತ್ತಾರೆ. ನೀತಿನಿರೂಪಕರಿಗೆ ಅಗತ್ಯವಾದ ಮಾಹಿತಿಗಳನ್ನು ಸಮಾಜಶಾಸ್ತ್ರವು ಒದಗಿಸುತ್ತದೆ. ಈ ರೀತಿಯಾಗಿ ಸಮಾಜಶಾಸ್ತ್ರವು ಸಮಾಜ ಸುಧಾರಣೆ ಮತ್ತು ಸಾಮಾಜಿಕ ಪುನರ್‌ಸಂಘಟನೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ.

೫. ಇತರ ಸಮಾಜಗಳ ಮಾಹಿತಿ

ಸಮಾಜಶಾಸ್ತ್ರದಲ್ಲಿ ನಾವು ನಮ್ಮ ಸಮಾಜದ ಕುರಿತು ಅಧ್ಯಯನ ನಡೆಸುವುದರ ಜೊತೆಗೆ ನಮ್ಮ ಸುತ್ತಮುತ್ತಲಿನ ಹಾಗೂ ದೂರದಲ್ಲಿರುವ ಸಮಾಜದ ಮಾಹಿತಿಯನ್ನು ಪಡೆಯುತ್ತೇವೆ. ಸಮಾಜಶಾಸ್ತ್ರವು ಬೇರೆ ಬೇರೆ ಸಮಾಜಗಳ ರೂಢಿ, ಸಂಪ್ರದಾಯ, ಪರಂಪರೆ, ಸಂಸ್ಕೃತಿ, ನೈತಿಕ ನಿಯಮ ಮುಂತಾದವುಗಳ ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಈ ಮಾಹಿತಿಗಳು ನಮ್ಮ ಸಂಸ್ಕೃತಿಯ ಕುರಿತು ವೈಚಾರಿಕವಾಗಿ ವಿಮರ್ಶಿಸಲು ಉಪಯುಕ್ತವಾಗಿವೆ.

೬. ಆದಿವಾಸಿಗಳ ಕಲ್ಯಾಣದಲ್ಲಿ ಪಾತ್ರ

ಆದಿವಾಸಿಗಳು ತೀರಾ ಹಿಂದುಳಿದ ಪ್ರದೇಶದಲ್ಲಿ ವಾಸಿಸುತ್ತಿದ್ದು ಹಿಂದುಳಿದ ಸ್ಥಿತಿಯಲ್ಲಿದ್ದಾರೆ, ಅವರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದಿವಾಸಿಗಳ ಜನಜೀವನ,

ಅವರ ಪರಂಪರೆ, ಸಮಸ್ಯೆ ಮುಂತಾದುವುಗಳ ಕುರಿತ ಸಮಗ್ರ ಅಧ್ಯಯನ ಸಮಾಜಶಾಸ್ತ್ರದಲ್ಲಿ ನಡೆಯುತ್ತವೆ. ಸಮಾಜಶಾಸ್ತ್ರಜ್ಞರು ಒದಗಿಸಿದ ಆದಿವಾಸಿ ಸಮುದಾಯದ ಸಮಸ್ಯೆ, ಪದ್ಧತಿ, ಸಂಪ್ರದಾಯ ಮುಂತಾದ ಮಾಹಿತಿಗಳು ಆದಿವಾಸಿ ಸಮಸ್ಯೆಗಳನ್ನು ನಿವಾರಿಸಲು ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಸರಕಾರಕ್ಕೆ ಸಹಾಯಕವಾಗಿವೆ.

೨. ಸಂಸ್ಕೃತಿಯ ಅಧ್ಯಯನ ಮತ್ತು ಅದರ ಶ್ರೀಮಂತಿಕೆಗೆ ಕೊಡುಗೆ

ಸಮಾಜಶಾಸ್ತ್ರವು ಮಾನವಸಮಾಜದ ಅಧ್ಯಯನದ ಜೊತೆಗೆ ಸಂಸ್ಕೃತಿಯ ಅಧ್ಯಯನವನ್ನು ನಡೆಸುತ್ತದೆ. ಬೇರೆ ಬೇರೆ ಸಮಾಜಗಳ ಸಂಸ್ಕೃತಿಯ ಕುರಿತು ತುಲನಾತ್ಮಕ ಅಧ್ಯಯನ ನಡೆಸಿ ಅದು ಸಂಸ್ಕೃತಿಯ ಕುರಿತು ವೈಚಾರಿಕ ಚಿಂತನೆ ಮೂಡಿಸಲು ಸಹಾಯಕವಾಗಿದೆ. ಬೇರೆ ಬೇರೆ ಸಂಸ್ಕೃತಿಗಳ ಭಾಷೆ, ಪದ್ಧತಿ, ಸಂಸ್ಥೆ, ಸಿದ್ಧಾಂತಗಳು, ಮೌಲ್ಯ ಮುಂತಾದವುಗಳ ವಿಶ್ಲೇಷಣಾತ್ಮಕ ಅಧ್ಯಯನವು ನಮ್ಮಲ್ಲಿ ವಸ್ತುನಿಷ್ಠತೆ, ವೈಚಾರಿಕತೆ ಮತ್ತು ನಿಷ್ಪಕ್ಷಪಾತ ದೃಷ್ಟಿಕೋನವನ್ನು ಬೆಳೆಸುತ್ತದೆ. ಸಮುದಾಯ, ಸಮೂಹ ಮುಂತಾದುವುಗಳ ಕುರಿತಾದ ಪೂರ್ವಾಗ್ರಹ, ತಪ್ಪುಕಲ್ಪನೆ, ದ್ವೇಷ, ಮನೋಭಾವನೆ ಮುಂತಾದುವುಗಳನ್ನು ನಿವಾರಿಸಿ ಜೀವನವನ್ನು ಅರ್ಥ ಪೂರ್ಣವಾಗಿಸುತ್ತದೆ.

೩. ಸಾಮಾಜಿಕ ಸಂಸ್ಥೆಗಳ ಕುರಿತು ಅಧ್ಯಯನ

ಸಾಮಾಜಿಕ ಸಂಸ್ಥೆಗಳು ಸಮಾಜವು ಹೇಗೆ ಮುಂದುವರಿಯಬೇಕೆನ್ನುವುದನ್ನು ಸೂಚಿಸುತ್ತವೆ. ಮಾನವ ಸಮೂಹದಲ್ಲಿ ವಾಸವಾಗಿದ್ದು ಸಂಸ್ಕೃತಿಯ ಬೆಳವಣಿಗೆಗೆ ತನ್ನ ಕೊಡುಗೆಯನ್ನು ನೀಡುತ್ತಾನೆ. ಸಮಾಜಶಾಸ್ತ್ರವು ಕುಟುಂಬ, ಶಿಕ್ಷಣ, ರಾಜ್ಯ, ಸರ್ಕಾರ, ಧರ್ಮ, ಆಸ್ತಿ ಮುಂತಾದ ಸಂಸ್ಥೆಗಳ ಜೊತೆ ಮಾನವನು ಹೊಂದಿರುವ ಸಂಬಂಧಗಳ ಕುರಿತು ಬೆಳಕನ್ನು ಚೆಲ್ಲುತ್ತದೆ. ಸಮಾಜಶಾಸ್ತ್ರವು ರಾಜ್ಯ ಮತ್ತು ಸರ್ಕಾರ, ಕುಟುಂಬ ಮತ್ತು ಶಾಲೆ, ಧರ್ಮ ಮತ್ತು ನೈತಿಕತೆ ಮುಂತಾದವುಗಳಿಂದ ಮಾನವನ ವ್ಯಕ್ತಿತ್ವ ಯಾವ ರೀತಿ ರೂಪುಗೊಳ್ಳುತ್ತದೆ? ಅವುಗಳ ಪ್ರಭಾವವೇನು? ಎಂಬುದನ್ನು ತಿಳಿಸುತ್ತದೆ. ಈ ರೀತಿಯ ಅಧ್ಯಯನಗಳು ಮಾನವನನ್ನು ಸಮಾಜಜೀವಿಯಾಗಿ ಮಾರ್ಪಡಿಸುವ ರೀತಿ ಮತ್ತು ಹೊಸ ಸಾಮಾಜಿಕ ಸಂಸ್ಕೃತಿಗಳ ಉಗಮ, ಬೆಳವಣಿಗೆ ಮುಂತಾದುವುಗಳ ಕುರಿತ ಮಾಹಿತಿಗಳನ್ನು ಒದಗಿಸುತ್ತವೆ.

೪. ಅಪರಾಧ ಮತ್ತಿತರ ಸಾಮಾಜಿಕ ಸಮಸ್ಯೆಗಳ ಕುರಿತ ದೃಷ್ಟಿಕೋನಗಳಲ್ಲಿ ಬದಲಾವಣೆ

ಸಮಾಜಶಾಸ್ತ್ರ ಅಧ್ಯಯನದಿಂದ ಅಪರಾಧದ ಕುರಿತ ದೃಷ್ಟಿಕೋನಗಳಲ್ಲಿ ಪರಿವರ್ತನೆಗಳಾಗಿವೆ. ಇಂದು ಅಪರಾಧಿಗಳನ್ನು ಕೀಳು ಮಟ್ಟದ ಪ್ರಾಣಿಗಳೆಂದು ಪರಿಗಣಿಸದೆ ಸಾಮಾಜಿಕ ಮತ್ತು ಮಾನಸಿಕ ಸನ್ನಿವೇಶಗಳ ಬಲಿ-ಪಶುಗಳಾಗಿ ಅವರು ಅಪರಾಧಿ ಚಟುವಟಿಕೆಯಲ್ಲಿ ತೊಡಗಿದವರು ಎಂದು ಭಾವಿಸಿ ಅಪರಾಧಿಗಳ ಪುನರ್ವಸತಿಗೆ ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

೧೦. ಅನ್ವಯಿಕ ಸಮಾಜಶಾಸ್ತ್ರ

ಸಮಾಜಶಾಸ್ತ್ರವು ವೃತ್ತಿಪರ ವಿಷಯವಾಗಿ ಮಾರ್ಪಟ್ಟಿದೆ. ಸಮಾಜಶಾಸ್ತ್ರಜ್ಞರನ್ನು ಸಾಮಾಜಿಕಕಾರ್ಯ, ಸಮಾಜಕಲ್ಯಾಣ ಮುಂತಾದ ಕ್ಷೇತ್ರಗಳಲ್ಲಿ ಉದ್ಯೋಗಿಗಳನ್ನಾಗಿ ನೇಮಿಸಿಕೊಳ್ಳಲಾಗುತ್ತಿದೆ. ಶಿಕ್ಷಣಕ್ಷೇತ್ರ, ಕೈಗಾರಿಕಾಸಂಪರ್ಕ, ಸಾಮಾಜಿಕ ಸಲಹೆ ಇತ್ಯಾದಿ ಕ್ಷೇತ್ರದಲ್ಲಿಯೂ ಸಮಾಜಶಾಸ್ತ್ರಜ್ಞರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವಿವಿಧ ರೀತಿಯ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಬೋಧಕರಾಗಿ ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಯಲ್ಲಿ ಸಹ ಅವರು ಮಹತ್ತರ ಪಾತ್ರ ನಿರ್ವಹಿಸುತ್ತಿದ್ದಾರೆ.

ಮಾನವ, ಸಮಾಜ ಮತ್ತು ಸಂಸ್ಕೃತಿಯ ಸ್ವರೂಪದ ವೈಜ್ಞಾನಿಕ ಮಾಹಿತಿಗಳನ್ನು ಅರಿತುಕೊಳ್ಳಲು ಸಮಾಜಶಾಸ್ತ್ರ ಉಪಯುಕ್ತವಾಗಿದೆ. ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸಮಾಜದ ಸಮಗ್ರ ಪ್ರಗತಿಗೆ ಅವಶ್ಯಕ ಕಾರ್ಯಕ್ರಮಗಳನ್ನು ಅಳವಡಿಸಲು ಉಪಯುಕ್ತ ಮಾಹಿತಿಗಳು ಸಮಾಜಶಾಸ್ತ್ರಜ್ಞರಿಂದ ದೊರಕುತ್ತಿವೆ. **ಪ್ರೊ. ಗಿಡ್ಡಿಂಗ್ಸ್**‌ರವರು ತಿಳಿಸಿರುವಂತೆ, ಸಮಾಜಶಾಸ್ತ್ರವು ನಾವು ಏನಾಗಬೇಕೆಂದು ಬಯಸುತ್ತೇವೆಯೋ ಹಾಗಾಗಲು ಸಹಾಯಕವಾಗಿದೆ. ಸಮಾಜಶಾಸ್ತ್ರವನ್ನು ನಾವು ಹೇಗೆ ಉಪಯೋಗಿಸುತ್ತೇವೆ? ಎನ್ನುವುದಕ್ಕೆ ಅನುಗುಣವಾಗಿ ಅದರ ಉಪಯುಕ್ತತೆ ನಿರ್ಧಾರವಾಗುತ್ತದೆ.

೧.೫. ಸಾರಾಂಶ

ಸಮಾಜಶಾಸ್ತ್ರವು ಒಂದು ತರುಣ ಸಾಮಾಜಿಕ ವಿಜ್ಞಾನವಾಗಿದೆ. ೧೮೩೯ ರಲ್ಲಿ ಮೊದಲ ಬಾರಿಗೆ **ಅಗಸ್ಟ್‌ಕಾಮ್ಟ್** 'ಸೋಶಿಯಸ್' ಎಂಬ ಲ್ಯಾಟಿನ್ ಪದ ಮತ್ತು 'ಲಾಗಸ್' ಎಂಬ ಗ್ರೀಕ್ ಪದಗಳ ಸಂಯೋಜನೆಯಿಂದ 'ಸೋಶಿಯಾಲಜಿ' ಎಂಬ ಪದವನ್ನು ನಿರೂಪಿಸಿದರು. 'ಸೋಶಿಯಸ್' ಎಂದರೆ ಸಮಾಜ, 'ಲಾಗಸ್' ಎಂದರೆ ಅಧ್ಯಯನ ಇಲ್ಲವೆ ವಿಜ್ಞಾನ ಎಂದರ್ಥ. ಶಬ್ದಾರ್ಥದ ಪ್ರಕಾರ, ಸಮಾಜಶಾಸ್ತ್ರವೆಂದರೆ ಸಮಾಜದ ಬಗೆಗಿನ ವಿಜ್ಞಾನ. ಸಮಾಜ ಅಧ್ಯಯನವನ್ನು ವೈಜ್ಞಾನಿಕ ಪದ್ಧತಿಯಿಂದ ಮಾಡುವ ಶಾಸ್ತ್ರವೇ ಸಮಾಜಶಾಸ್ತ್ರ. ಇನ್ನೂ ನಿಖರವಾಗಿ ಹೇಳುವುದಾದರೆ, ಮಾನವ ಸಮಾಜದ ಬಗೆಗೆ ವೈಜ್ಞಾನಿಕವಾಗಿ ಅಧ್ಯಯನಗೈಯ್ಯುವ ಶಾಸ್ತ್ರವೇ ಸಮಾಜಶಾಸ್ತ್ರ.

ಸಮಾಜಶಾಸ್ತ್ರದ ಪಿತಾಮಹರೆನಿಸಿದ **ಅಗಸ್ಟ್‌ಕಾಮ್ಟ್** ತಮ್ಮ 'ಪೊಸಿಟಿವ್ ಫಿಲಾಸಫಿ' ಎಂಬ ಗ್ರಂಥದಲ್ಲಿ ವೈಜ್ಞಾನಿಕ ವಿಧಾನದ ಮೂಲಕ ಸಮಾಜದ ವೈಚಾರಿಕ ಮತ್ತು ವಸ್ತುನಿಷ್ಠ ಅಧ್ಯಯನ ನಡೆಸಬೇಕೆಂದು ತಿಳಿಸಿದ್ದಾರೆ. **ಅಗಸ್ಟ್‌ಕಾಮ್ಟ್, ಹರ್ಬರ್ಟ್ ಸ್ಪೆನ್ಸರ್, ಮ್ಯಾಕ್ಸ್ ವೇಬರ್** ಮತ್ತು ಎಮಿಲಿ **ಡರ್ಕೀಂ** ರವರ ಚಿಂತನೆಯ ಫಲವಾಗಿ ಸಮಾಜಶಾಸ್ತ್ರವು ಒಂದು ಸ್ವತಂತ್ರ ಅಧ್ಯಯನಶಾಸ್ತ್ರವಾಗಿ ೧೯ನೇ ಶತಮಾನದಲ್ಲಿ ಬೆಳೆದು ಬಂತು. ಇವರ ಕೊಡುಗೆಗಳಿಂದಾಗಿ ಸಮಾಜಶಾಸ್ತ್ರವು ಉಗಮಗೊಂಡು ಒಂದು ಪ್ರತ್ಯೇಕ ವಿಜ್ಞಾನವಾಗಿ ರೂಪುಗೊಂಡಿತು. ತತ್ಕಾರಣ ಇವರನ್ನು ಸಮಾಜಶಾಸ್ತ್ರದ ಸ್ಥಾಪಕ ಪಿತಾಮಹರೆಂದು

ಗೌರವಿಸಲಾಗುತ್ತದೆ. ಕಾಮ್ಟ್‌ರವರು ಮೂರು ಹಂತಗಳ ಸೂತ್ರದಲ್ಲಿ ಮಾನವನ ಬೌದ್ಧಿಕವಿಕಾಸ ಹಾಗೂ ಅದರ ಪ್ರಭಾವದಿಂದ ಸಮಾಜದವಿಕಾಸ ಪ್ರಕ್ರಿಯೆಗಳನ್ನು ವಿವರಿಸಿದ್ದಾರೆ. ಸಮಾಜಶಾಸ್ತ್ರವನ್ನು ಸಾಮಾಜಿಕ ಸ್ಥಿತಿಶಾಸ್ತ್ರ ಮತ್ತು ಸಾಮಾಜಿಕ ಚಲನಶಾಸ್ತ್ರಗಳೆಂಬುದಾಗಿ ಕೋಮ್ಟ್ ವಿಭಜಿಸಿದ್ದಾರೆ.

ಹರ್ಬರ್ಟ್ ಸ್ಪೆನ್ಸರ್ರು ಡಾರ್ವಿನ್‌ರ ಜೀವವಿಕಾಸ ಸಿದ್ಧಾಂತದಿಂದ ಪ್ರಭಾವಿತರಾಗಿ ಸಮಾಜವಿಕಾಸ ಸಿದ್ಧಾಂತ ಮತ್ತು ಜೈವಿಕ ಸಾದೃಶ್ಯ ಸಿದ್ಧಾಂತವನ್ನು ನಿರೂಪಿಸಿದ್ದಾರೆ. **ಎಮಿಲಿ ಡರ್ಕೀಂ** ಆತ್ಮಹತ್ಯೆಯ ಕುರಿತಾದ ವಿಮರ್ಶೆಯನ್ನು ಮಾಡಿದ್ದಾರೆ. ಅವರು ಸಮಾಜಶಾಸ್ತ್ರದ ವ್ಯಾಪ್ತಿಯಲ್ಲಿ ಸಾಮಾಜಿಕ ರೂಪ ರಚನಾಶಾಸ್ತ್ರ, ಸಾಮಾಜಿಕ ಶರೀರಶಾಸ್ತ್ರ ಮತ್ತು ಸಾಮಾನ್ಯ ಸಮಾಜಶಾಸ್ತ್ರವೆಂಬ ಮೂರು ವಿಭಾಗಗಳನ್ನು ಗುರುತಿಸಿದ್ದಾರೆ. **ಮ್ಯಾಕ್ಸ್‌ವೇಬರ್** ಧರ್ಮ, ಶ್ರಮ ವಿಭಜನೆ, ನೌಕರಶಾಹಿ ವ್ಯವಸ್ಥೆ ಮತ್ತು ಅಧಿಕಾರ ಮುಂತಾದವುಗಳ ಕುರಿತು ಸಮಾಜಶಾಸ್ತ್ರೀಯ ಅಧ್ಯಯನವನ್ನು ಮಾಡಿದ್ದಾರೆ. ಅವರು 'ಜರ್ಮನ್ ಸೋಶಿಯಾಲಾಜಿಕಲ್ ಸೊಸೈಟಿ' ಎಂಬ ಸಮಾಜಶಾಸ್ತ್ರೀಯ ಸಂಘಟನೆಯನ್ನು ಜರ್ಮನಿಯಲ್ಲಿ ಸ್ಥಾಪಿಸಿದ್ದರು.

ಅಲೆಕ್ಸ್ ಇಂಕಲ್ಸ್ ಅವರ ಪ್ರಕಾರ ಸಮಾಜಶಾಸ್ತ್ರದ ವ್ಯಾಪ್ತಿ ವಿಶಾಲವಾಗಿದೆ. ಸಂಪೂರ್ಣ ಸಾಮಾಜಿಕ ಜೀವನವೇ ಸಮಾಜಶಾಸ್ತ್ರದ ವಸ್ತು ವಿಷಯವಾಗಿದೆ. ಆಧುನಿಕ ಸಮಾಜದಲ್ಲಿ ಸಮಾಜಶಾಸ್ತ್ರದ ಅಧ್ಯಯನದ ಅಗತ್ಯತೆ ದಿನೆ ದಿನೇ ಹೆಚ್ಚುತ್ತಿದೆ. ಸಮಾಜವು ಪರಿವರ್ತನ ಶೀಲವಾದ ಕಾರಣ ಸಂಸ್ಕೃತಿ, ನಾಗರಿಕತೆ, ಸಂಘ-ಸಂಸ್ಥೆಗಳ ಸ್ವರೂಪ ಮತ್ತು ಕಾರ್ಯಗಳಲ್ಲಿ ಬದಲಾವಣೆಗಳು ಆಗುತ್ತಿರುತ್ತವೆ. ವ್ಯಕ್ತಿಗಳು, ಬದಲಾಗುತ್ತಿರುವ ಸಮಾಜಕ್ಕೆ ಹೊಂದಿಕೊಂಡು ಜೀವಿಸಬೇಕಾದರೆ ಅವರಿಗೆ ಸಮಾಜದ ಬಗ್ಗೆ ಅರಿವು ಬೇಕೇ ಬೇಕು. ಸಮಾಜಶಾಸ್ತ್ರವು ಸಮಾಜದ ಸ್ಥಿತಿಗತಿಯ ಬಗೆಗೆ ತಿಳಿವಳಿಕೆಯನ್ನು ನೀಡುವ ಮೂಲಕ ಇತರ ವ್ಯಕ್ತಿಗಳೊಂದಿಗೆ ಚೆನ್ನಾಗಿ ಬಾಳಲು ಸಹಾಯ ಮಾಡುವುದು.

ಸಮಾಜಶಾಸ್ತ್ರವು ಇಂದಿನ ಸಮಾಜವು ಎದುರಿಸುತ್ತಿರುವ ಭೀಕರ ಸ್ವರೂಪದ ಸಾಮಾಜಿಕ ಸಮಸ್ಯೆಗಳನ್ನು ಅಧ್ಯಯನಗೈದು ಅವುಗಳನ್ನು ಪರಿಹರಿಸುವ ದಿಸೆಯಲ್ಲಿ ಪರಿಹಾರೋಪಾಯಗಳನ್ನು ಸೂಚಿಸುವುದು. ಹಿಂದುಳಿದ ಜಾತಿ, ಪರಿಶಿಷ್ಟ ಜಾತಿ, ಜನಾಂಗದವರ ಸಮಸ್ಯೆಗಳ ಕುರಿತು, ಗ್ರಾಮೀಣ ಜನರ ಕುಂದುಕೊರತೆಗಳ ಕುರಿತು ಅಧ್ಯಯನದ ಮಾಹಿತಿಗಳನ್ನು ಆಡಳಿತಗಾರರು ಬಳಸಿಕೊಂಡು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಅಳವಡಿಸುತ್ತಿದ್ದಾರೆ. ಹೊಸ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಸಮಾಜಶಾಸ್ತ್ರೀಯ ಜ್ಞಾನವು ಸಮಾಜವನ್ನು ಅರಿತುಕೊಂಡು ಸೂಕ್ತವಾದ ಯೋಜನೆಗಳನ್ನು ರೂಪಿಸಲು ಸಹಾಯಕವಾಗಿದೆ. ಸಮಾಜಶಾಸ್ತ್ರವು ಇತರ ಸಮಾಜಗಳ ಮಾಹಿತಿಯನ್ನು ಜನರಿಗೆ ಒದಗಿಸಿಕೊಡುವುದು. ಬೇರೆ ಸಮಾಜದ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಲು ನಮಗೆ ಸಹಾಯ ಮಾಡುವುದು.

ಸಮಾಜಶಾಸ್ತ್ರವು ಒಂದು ಸಾಮಾಜಿಕ ವಿಜ್ಞಾನವಾಗಿದೆ. ವಿಜ್ಞಾನವೆನ್ನುವುದು ಸತ್ಯಶೋಧನೆಗಾಗಿ ಸಂಶೋಧಕನು ಅನುಸರಿಸುವ ಮಾರ್ಗಗಳನ್ನವಲಂಬಿಸಿದೆ. ಅದು ಕೇವಲ ಪ್ರಯೋಗಾಲಯದ ಪರೀಕ್ಷೆಯಿಂದ ನಿರ್ಧಾರವಾಗಲಾರದು. ವ್ಯವಸ್ಥಿತವಾದ ವೈಜ್ಞಾನಿಕ ವಿಧಾನವನ್ನು ಸಂಶೋಧನೆಗೆ ಬಳಸುವುದರಿಂದ ಸಮಾಜಶಾಸ್ತ್ರವನ್ನು ವಿಜ್ಞಾನವೆನ್ನಬಹುದು.

೧.೬. ಪಾರಿಭಾಷಿಕ ಪದಕೋಶ

೧. Bureaucracy = ನೌಕರಶಾಹಿ ವ್ಯವಸ್ಥೆ

೨. Capitalism = ಬಂಡವಾಳಶಾಹಿತ್ವ

೩. Critical Rationalism = ವಿಮರ್ಶಕ ವಿಚಾರತತ್ವ

೪. Generalisalion = ಸಾಮಾನ್ಯೀಕರಣ

೫. Humanist Historicism = ಮಾನವತಾ ಐತಿಹಾಸಿಕ ತತ್ವ

೬. Industrial Revolution = ಕೈಗಾರಿಕಾ ಕ್ರಾಂತಿ

೭. Natural Sciences = ನೈಸರ್ಗಿಕ ವಿಜ್ಞಾನಗಳು

೮. Planning = ನಿಯೋಜನೆ

೯. Social Order = ಸಾಮಾಜಿಕ ಪ್ರಕ್ರಮ

೧೦. Social Statics = ಸಾಮಾಜಿಕ ಸ್ಥಿತಿಶಾಸ್ತ್ರ

೧೧. Social Dynamics = ಸಾಮಾಜಿಕ ಚಲನಶಾಸ್ತ್ರ

೧೨. Social Evolution Theory = ಸಾಮಾಜಿಕ ವಿಕಾಸ ಸಿದ್ಧಾಂತ

೧೩. Social Morphology= ಸಾಮಾಜಿಕ ರೂಪ ರಚನಾಶಾಸ್ತ್ರ

೧೪. Social Physiology = ಸಾಮಾಜಿಕ ಶರೀರಶಾಸ್ತ್ರ

೧೫. Urbanisation = ನಗರೀಕರಣ

೧೬. Universality= ಸಾರ್ವತ್ರಿಕತೆ

೧.೭. ಪ್ರಶ್ನೆಗಳು

I. ಒಂದು ಅಂಕದ ಪ್ರಶ್ನೆಗಳು

೧. ಸಮಾಜಶಾಸ್ತ್ರ ಪಿತಾಮಹನಾರು?

೨. ಸಮಾಜಶಾಸ್ತ್ರವು ಯಾವ ಶತಮಾನದಲ್ಲಿ ಹುಟ್ಟಿಕೊಂಡಿತು?

೩. ಅಗಸ್ಟ್‌ಕಾಮ್ಟ್ ಬರೆದ ಒಂದು ಕೃತಿಯನ್ನು ಹೆಸರಿಸಿ.

೪. ಸಮಾಜಶಾಸ್ತ್ರದ ಒಂದು ವ್ಯಾಖ್ಯೆಯನ್ನು ನೀಡಿ.

೫. 'ಸೋಶಿಯಾಲಜಿ' ಎಂಬ ಪದವು ಹೇಗೆ ವ್ಯುತ್ಪತ್ತಿಯಾಗಿದೆ?

೬. ಸಾಮಾಜಿಕ ಸ್ಥಿತಿಶಾಸ್ತ್ರವೆಂದರೇನು?

೭. ಸಾಮಾಜಿಕ ಚಲನಶಾಸ್ತ್ರವೆಂದರೇನು?

೮. ಹರ್ಬರ್ಟ್ ಸ್ಪೆನ್ಸರ್ ಬರೆದ ಒಂದು ಗ್ರಂಥದ ಹೆಸರನ್ನು ಸೂಚಿಸಿ.

೯. ಹರ್ಬರ್ಟ್ ಸ್ಪೆನ್ಸರ್ ಯಾರ ಸಿದ್ಧಾಂತದಿಂದ ಪ್ರಭಾವಿತರಾಗಿ ಸಮಾಜ ವಿಕಾಸ ಸಿದ್ಧಾಂತವನ್ನು ಮಂಡಿಸಿದರು?

೧೦. ಡರ್ಕೀಂ ಪ್ರಕಟಪಡಿಸಿದ ಎರಡು ಪುಸ್ತಕಗಳನ್ನು ಹೆಸರಿಸಿ.

೧೧. 'ಪ್ರೊಟೆಸ್ಟೆಂಟ್ ಎಥಿಕ್ ಆ್ಯಂಡ್ ಸ್ಪಿರಿಟ್ ಆಫ್ ಕ್ಯಾಪಿಟಲಿಸಂ' ಈ ಕೃತಿಯ ಲೇಖಕರಾರು?

೧೨. ಸಮಾಜಶಾಸ್ತ್ರವು ತನ್ನದೇ ಆದ ಅಧ್ಯಯನವಸ್ತುವನ್ನು ಹೊಂದಿದೆಯೇ?

೧೩. ಸಮಾಜಶಾಸ್ತ್ರದ ಅಧ್ಯಯನದಿಂದಾಗುವ ಒಂದು ಪ್ರಯೋಜನವನ್ನು ತಿಳಿಸಿ.

೧೪. ಎರಡು ಸಾಮಾಜಿಕ ವಿಜ್ಞಾನಗಳನ್ನು ಹೆಸರಿಸಿ.

೧೫. ವಿಜ್ಞಾನವೆಂದರೇನು?

II. ಎರಡು ಅಂಕದ ಪ್ರಶ್ನೆಗಳು

೧. ಯಾವುದಾದರೂ ನಾಲ್ಕು ಸಾಮಾಜಿಕ ವಿಜ್ಞಾನಗಳನ್ನು ಹೆಸರಿಸಿ.

೨. 'ಸೋಶಿಯಾಲಜಿ' ಎಂಬ ಪದದ ಶಬ್ದಶಾಸ್ತ್ರೀಯ ಅರ್ಥವೇನು?

೩. ಸಮಾಜಶಾಸ್ತ್ರದ ಉಗಮಕ್ಕೆ ಕಾರಣೀಭೂತವಾದ ಎರಡು ಅಂಶಗಳನ್ನು ನಮೂದಿಸಿ.

೪. ಸಮಾಜಶಾಸ್ತ್ರದ ನಾಲ್ವರು ಸ್ಥಾಪಕ ಪಿತಾಮಹರನ್ನು ಹೆಸರಿಸಿ.

೫. ಸಮಾಜಶಾಸ್ತ್ರದ ಎರಡು ಶಾಖೆಗಳನ್ನು ಹೆಸರಿಸಿ.

೬. ವಿಜ್ಞಾನವನ್ನು ವ್ಯಾಖ್ಯಾನಿಸಿ.

೭. ಔದ್ಯೋಗಿಕ ಕ್ರಾಂತಿಯಿಂದ ಸಮಾಜದಲ್ಲಿ ಉಂಟಾದ ಎರಡು ಬದಲಾವಣೆಗಳನ್ನು ತಿಳಿಸಿ.

೮. ಕೋಮ್ಟ್‌ನ ಮೂರು ಹಂತಗಳನ್ನು ಹೆಸರಿಸಿ.

೯. ಸಮಾಜಶಾಸ್ತ್ರ ಅಧ್ಯಯನದ ಎರಡು ಉಪಯೋಗಗಳನ್ನು ತಿಳಿಸಿ.

೧೦. ವಿಜ್ಞಾನದ ಎರಡು ಲಕ್ಷಣಗಳನ್ನು ತಿಳಿಸಿ.

೧೧. ಭೌತ ಮತ್ತು ಸಮಾಜವಿಜ್ಞಾನಗಳ ನಡುವಿನ ಎರಡು ಮುಖ್ಯ ವ್ಯತ್ಯಾಸಗಳನ್ನು ನಮೂದಿಸಿ.

೧೨. ಅವಲೋಕನವೆಂದರೇನು?

೧೩. ಆಗಬರ್ನ್ ನೀಡಿದ ವಿಜ್ಞಾನವನ್ನು ನಿರ್ಧರಿಸುವ ಮೂರು ಮಾನದಂಡಗಳಾವುವು?

೧೪. ಸಮಾಜಶಾಸ್ತ್ರದ ವ್ಯಾಖ್ಯೆ ನೀಡಿ.

೧೫. ಮ್ಯಾಕ್ಸ್‌ವೇಬರ್ ಬರೆದ ಎರಡು ಪುಸ್ತಕಗಳನ್ನು ಹೆಸರಿಸಿ.

III. ಐದು ಅಂಕದ ಪ್ರಶ್ನೆಗಳು

೧. ಸಮಾಜಶಾಸ್ತ್ರವೆಂದರೇನು? ವ್ಯಾಖ್ಯೆ ಸಮೇತ ವಿವರಿಸಿ.

೨. ಸಮಾಜಶಾಸ್ತ್ರದ ಉಗಮಕ್ಕೆ ಕಾರಣವಾದ ಸಾಮಾಜಿಕ ಸನ್ನಿವೇಶಗಳ ಕುರಿತಾದ ವಿವರಣೆ ನೀಡಿ.

೩. ಸಮಾಜಶಾಸ್ತ್ರಕ್ಕೆ ಎಮಿಲಿ ಡರ್ಕಿಂ ನೀಡಿದ ಕೊಡುಗೆಯನ್ನು ತಿಳಿಸಿ.
೪. ಸಮಾಜಶಾಸ್ತ್ರದ ಬೆಳವಣಿಗೆಗೆ ಸ್ಪೆನ್ಸರ್ ನೀಡಿದ ಕೊಡುಗೆಯನ್ನು ತಿಳಿಸಿ.
೫. ಸಮಾಜಶಾಸ್ತ್ರದ ಅಧ್ಯಯನದ ವಿಷಯ ಕುರಿತು ಅಲೆಕ್ಸ್ ಇಂಕಲ್ಸ್‌ರ ಅಭಿಪ್ರಾಯವೇನು?
೬. ವಿಜ್ಞಾನದ ಪ್ರಮುಖ ಲಕ್ಷಣಗಳನ್ನು ತಿಳಿಸಿ.
೭. ಭೌತ ಮತ್ತು ಸಮಾಜವಿಜ್ಞಾನಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸಿ.
೮. ಸಾಮಾಜಿಕ ಸಂಶೋಧನೆಯಲ್ಲಿ ವೈಜ್ಞಾನಿಕವಿಧಾನದ ಪಾತ್ರವನ್ನು ನಿರೂಪಿಸಿ.
೯. ಸಮಾಜಶಾಸ್ತ್ರವು ಒಂದು ವಿಜ್ಞಾನವೇ? ಚರ್ಚಿಸಿ.
೧೦. ಸಮಾಜಶಾಸ್ತ್ರ ಅಧ್ಯಯನದ ನಾಲ್ಕು ಪ್ರಮುಖ ಪ್ರಯೋಜನಗಳ ಬಗ್ಗೆ ವಿವರಣೆ ನೀಡಿ.

IV. ಹತ್ತು ಅಂಕದ ಪ್ರಶ್ನೆಗಳು

೧. ಸಮಾಜಶಾಸ್ತ್ರಕ್ಕೆ ಅಗಸ್ಟ್‌ಕೋಮ್ಟ್ ನೀಡಿದ ಕೊಡುಗೆಗಳನ್ನು ವಿವರಿಸಿ.
೨. ಸಮಾಜಶಾಸ್ತ್ರ ಅಧ್ಯಯನದಿಂದಾಗುವ ಪ್ರಯೋಜನಗಳನ್ನು ತಿಳಿಸಿ.
೩. ಸಮಾಜಶಾಸ್ತ್ರದ ಅರ್ಥ ಮತ್ತು ವ್ಯಾಖ್ಯೆಗಳನ್ನು ನೀಡಿ.
೪. ಸಮಾಜಶಾಸ್ತ್ರದ ಅಧ್ಯಯನದ ವಿಷಯ ಕುರಿತು ವಿವರಣೆ ನೀಡಿ.
೫. ವಿಜ್ಞಾನದ ಅರ್ಥ ಮತ್ತು ಲಕ್ಷಣಗಳನ್ನು ವಿವರಿಸಿ.
೬. ಭೌತವಿಜ್ಞಾನ ಮತ್ತು ಸಮಾಜವಿಜ್ಞಾನಗಳ ನಡುವಿನ ವ್ಯತ್ಯಾಸಗಳನ್ನು ಸ್ಪಷ್ಟಪಡಿಸಿ.
೭. ಸಮಾಜಶಾಸ್ತ್ರದ ಹುಟ್ಟು ಮತ್ತು ಬೆಳವಣಿಗೆಯನ್ನು ವಿವರಿಸಿ.

ಅಭ್ಯಾಸ/ಚಟುವಟಿಕೆಗಳು

೧. ಅಗಸ್ಟ್‌ಕೋಮ್ಟ್ ಚರಿತ್ರೆ ಮತ್ತು ಅವರು ಸಮಾಜಶಾಸ್ತ್ರಕ್ಕೆ ನೀಡಿದ ಕೊಡುಗೆಗಳನ್ನು ತಿಳಿಸಿರಿ.
೨. ಸಮಾಜಶಾಸ್ತ್ರದ ಅಧ್ಯಯನವು ಜೀವನಕ್ಕೆ ಹೇಗೆ ಉಪಯೋಗ ಅದರ ಪ್ರಯೋಜನಗಳನ್ನು ಪಟ್ಟಿ ಮಾಡಿ
೩. ವಿವಿಧ ಸಮಾಜವಿಜ್ಞಾನಗಳ ಪಟ್ಟಿ ಮಾಡಿ, ಅವು ಸಮಾಜಶಾಸ್ತ್ರಕ್ಕಿಂತ ಹೇಗೆ ಭಿನ್ನವಾಗಿವೆ ಎಂಬುದನ್ನು ಪರಿಶೀಲಿಸಿ.

ಅಧ್ಯಾಯ ೨

ಸಮಾಜಶಾಸ್ತ್ರದ ಮೂಲಭೂತ ಪರಿಕಲ್ಪನೆಗಳು

ಪ್ರಸ್ತಾವನೆ

ಯಾವುದೇ ಅಧ್ಯಯನಶಾಸ್ತ್ರದ ಅಂತಿಮ ಗುರಿ ಅಧ್ಯಯನ ವಿಷಯಕ್ಕೆ ಸಂಬಂಧಪಟ್ಟಂತೆ ವ್ಯವಸ್ಥಿತ ಜ್ಞಾನವನ್ನು ಹೊಂದುವುದೇ ಆಗಿದೆ. ಈ ವ್ಯವಸ್ಥಿತ ಜ್ಞಾನವೇ ವಿಜ್ಞಾನ. ಅಂತಹ ವ್ಯವಸ್ಥಿತ ಜ್ಞಾನ ವಾಸ್ತವತೆಯಲ್ಲಿನ ಹಲವು ಅಂಶಗಳನ್ನು ವಿವರಿಸಲು ಸಮರ್ಥವಾಗಿರುತ್ತದೆ. ವಾಸ್ತವತೆಯ ವಿಚಾರಗಳನ್ನು ಅಥವಾ ಅಂಶಗಳನ್ನು ವಿವರಿಸಲು ವಿಜ್ಞಾನಿಗಳು ಪದಃ ಪುಂಜಗಳನ್ನು ರೂಪಿಸುತ್ತಾರೆ. ಈ ಪದಗಳು ವಾಸ್ತವತೆಯ ಬಗ್ಗೆ ಸ್ಪಷ್ಟ ಹಾಗೂ ನಿಖರ ಅರ್ಥವನ್ನು ನೀಡುವ ಗುಣವನ್ನು ಹೊಂದಿರುವುದರಿಂದ ಪರಿಕಲ್ಪನೆಗಳೆನಿಸಿಕೊಳ್ಳುತ್ತವೆ.

ವಿವರಣಾತ್ಮಕ ಪರಿಕಲ್ಪನೆಗಳನ್ನು ರೂಪಿಸುವುದು ಯಾವುದೇ ಅಧ್ಯಯನಶಾಸ್ತ್ರದ ವಿಶ್ಲೇಷಣೆಯಲ್ಲಿ ಮಹತ್ವದ ಪಾತ್ರವಾಗಿರುತ್ತದೆ. ಪರಿಕಲ್ಪನೆಗಳು ಭಾಷೆಯಂತೆ ಉತ್ತಮ ಮಾಧ್ಯಮಗಳಾಗಿ, ವಸ್ತುವಿಷಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. ವಿದ್ವಾಂಸರಿಗೆ ಸಿದ್ಧಾಂತಗಳನ್ನು ರೂಪಿಸುವಲ್ಲಿ ಆಧಾರಗಳಾಗುತ್ತವೆ. ಪರಿಕಲ್ಪನೆಗಳನ್ನು ಪರಿಚಯಿಸಿಕೊಳ್ಳುವುದರ ಮೂಲಕ ಅಧ್ಯಯನ ವಿಷಯಗಳ ವಿಶ್ಲೇಷಣೆ ಸುಲಭವಾಗಿ, ಅಧ್ಯಯನಕಾರನಿಗೆ ಅದರ ಬಗ್ಗೆ ಸ್ಪಷ್ಟ ಚಿತ್ರಣ ದೊರೆಯುತ್ತದೆ. ವಿಚಾರಗಳನ್ನು ಸಾಮಾನ್ಯೀಕರಿಸಲು ಪರಿಕಲ್ಪನೆಗಳು ನೆರವು ನೀಡುತ್ತವೆ. ಹೀಗೆ ವಾಸ್ತವ ಸತ್ಯದ ಅಂಶಗಳನ್ನು ಪ್ರತಿನಿಧಿಸುವ ಅಮೂರ್ತ ಚಿಂತನಾರೂಪಗಳೆ ಪರಿಕಲ್ಪನೆಗಳು. ಇವು ವಿದ್ವಾಂಸರುಗಳಿಂದ ವ್ಯಾಖ್ಯಾನಿಸಲ್ಪಡುತ್ತವೆ.

ಭೌತ ವಿಜ್ಞಾನಗಳು ಪರಿಕಲ್ಪನೆಗಳನ್ನು ತಮ್ಮ ಅಧ್ಯಯನ ಶಾಸ್ತ್ರಗಳಲ್ಲಿ ಅಂತ್ಯಂತ ನಿಖರವಾಗಿ ಉಪಯೋಗಿಸುತ್ತಾರೆ. ಆದರೆ ಸಮಾಜ ವಿಜ್ಞಾನಗಳ ಕ್ಷೇತ್ರದಲ್ಲಿ ಆ ಮಟ್ಟದ ಸಾಧನೆ ಇನ್ನೂ ಆಗಬೇಕಿದೆ. ಸಮಾಜಶಾಸ್ತ್ರದಲ್ಲಿ ಸಾಮಾಜಿಕ ಅಂಶಗಳ ವಿಶ್ಲೇಷಣೆಯಲ್ಲಿ ಮೂಲಭೂತ ಪರಿಕಲ್ಪನೆಗಳ ಪಾತ್ರ ಅನಿವಾರ್ಯವಾಗಿದ್ದರೂ, ಅವುಗಳನ್ನು ನಿಖರತೆಯ ಚೌಕಟ್ಟಿನೊಳಗೆ ತರುವುದು ಅತ್ಯಂತ ಕಷ್ಟದ ಕೆಲಸ. ಇದಕ್ಕೆ ಸಮಾಜಶಾಸ್ತ್ರದ ಅಧ್ಯಯನ ವಸ್ತುವಿನ ಸ್ವರೂಪ ಕಾರಣವಾಗಿದೆ. ಸಮಾಜಶಾಸ್ತ್ರದಲ್ಲಿ ಬರುವ ಅನೇಕ ಪದಗಳಿಗೆ ಸರ್ವಸಮ್ಮತವಾದ ವ್ಯಾಖ್ಯೆಗಳು ಇಂದಿಗೂ ದೊರೆಯುವುದಿಲ್ಲ. ವಿದ್ವಾಂಸರುಗಳಲ್ಲೇ ಪರಿಕಲ್ಪನೆಗಳನ್ನು ಅರ್ಥೈಸುವಲ್ಲಿ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿವೆ. ಒಂದೇ ಕಲ್ಪನೆ ವಿಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸಲ್ಪಟ್ಟಿರುತ್ತದೆ. ಉದಾ:- 'ಸಾಮಾಜಿಕ ರಚನೆ',

'ಸಾಮಾಜಿಕ ವ್ಯವಸ್ಥೆ' ಇತ್ಯಾದಿ ಸಮಾಜಶಾಸ್ತ್ರೀಯ ಪರಿಕಲ್ಪನೆಗಳನ್ನು ಅರ್ಥೈಸುವಲ್ಲಿ ಸ್ಪಷ್ಟ ವ್ಯತ್ಯಾಸಗಳನ್ನು ಗುರುತಿಸುವುದು ಕಷ್ಟ. ಪರಿಕಲ್ಪನೆಗಳು ಸನ್ನಿವೇಶಗಳು ಬದಲಾದಂತೆ ಹಾಗೂ ವಿಭಿನ್ನ ಕಾಲ ಚೌಕಟ್ಟಿನಲ್ಲಿ ಭಿನ್ನ ಅರ್ಥಗಳಿಗೆ ಎಡೆಮಾಡಿಕೊಡಬಹುದು.

ಮೂಲಭೂತ ಪರಿಕಲ್ಪನೆಗಳ ಬಗ್ಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯದ ಕೊರತೆ ಇದ್ದರೂ, ಸಮಾಜಶಾಸ್ತ್ರಜ್ಞರು ಸಾಮಾಜಿಕ ಅಂಶಗಳನ್ನು ವಿಶ್ಲೇಷಿಸಲು ಹಲವಾರು ಪರಿಕಲ್ಪನೆಗಳನ್ನು ಬಳಸಿದ್ದಾರೆ. ಇವು ವಸ್ತುವಿಷಯದ ಬಗೆಗಿನ ಸಾಮಾನ್ಯ ಅಭಿಪ್ರಾಯವನ್ನು ಅಥವಾ ವಸ್ತುವಿಷಯಗಳ ನಡುವಿನ ಸಂಬಂಧವನ್ನು ವ್ಯಕ್ತಪಡಿಸುವ ವಿಶೇಷ ಪದಗಳಾಗಿರುತ್ತವೆ. ಸಾಮಾಜಿಕ ಸನ್ನಿವೇಶಗಳನ್ನು ಪರಿಕಲ್ಪನೆಗಳ ಸಹಾಯದಿಂದ ನಿಖರವಾಗಿ ಅರ್ಥಮಾಡಿಕೊಳ್ಳಲು ಪ್ರಥಮವಾಗಿ ಪ್ರಯತ್ನಿಸಿದವರು ಎಮಿಲಿ **ಡರ್ಖಿಮ್** (೧೮೯೭). ಅನಂತರ ಸಮಾಜಶಾಸ್ತ್ರ ಬೆಳೆದು ಪ್ರಬುದ್ಧತೆಯ ಕಡೆಗೆ ಸಾಗಿದಂತೆಲ್ಲಾ ಪರಿಕಲ್ಪನೆಗಳು ಸ್ಪಷ್ಟರೂಪ ಹಾಗೂ ನಿಖರತೆಯನ್ನು ಹೊಂದುತ್ತಾ ರೂಪುಗೊಳ್ಳತೊಡಗಿದುವು. ಪ್ರಸ್ತುತ ಅಧ್ಯಯನದಲ್ಲಿ ಸಮಾಜಶಾಸ್ತ್ರದಲ್ಲಿನ ಅತಿ ಪ್ರಮುಖ ಪರಿಕಲ್ಪನೆಗಳಾದ ಸಮಾಜ, ಸಮುದಾಯ, ಸಂಘ, ಸಂಸ್ಥೆ ಹಾಗೂ ಸಾಮಾಜಿಕ ಅಂತರಕ್ರಿಯೆ ಮತ್ತು ಪ್ರಕ್ರಿಯೆಗಳನ್ನು ವಿವರಿಸಲಾಗಿದೆ.

೨.೧. ಅ.ಸಮಾಜ

ಇಂಗ್ಲೀಷ್ ಕವಿ ಜಾನ್ ಡೋನಿ ಹೇಳುವಂತೆ ಒಬ್ಬ ವ್ಯಕ್ತಿ ಎಂದೂ ಒಂದು ದ್ವೀಪದಂತೆ ಇರಲಾರ. ಅವನು ತನ್ನ ಇತರ ಒಡನಾಡಿಗಳೊಂದಿಗೆ ಜೀವಿಸಲು ಆಶಿಸುವ ಒಬ್ಬ ಸಮಾಜ ಜೀವಿ. ವ್ಯಕ್ತಿಯು ಸಮಾಜದಲ್ಲಿ ಬದುಕುತ್ತಾ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾನೆ. ಸಮಾಜ ಜೀವಿಗಳಾದಂತಹ ವ್ಯಕ್ತಿಗಳು ತಮ್ಮ ಅಸಂಖ್ಯಾತ ಸ್ವಭಾವಗಳನ್ನು ಹಲವಾರು ಸಂಸ್ಥೆಗಳನ್ನು ಸೃಷ್ಟಿಸುವುದರ ಮೂಲಕ ಅಭಿವ್ಯಕ್ತಗೊಳಿಸುತ್ತಾರೆ. ಇದನ್ನು ವಿಶಾಲ ಅರ್ಥದಲ್ಲಿ ಸಮಾಜ ಎನ್ನುತ್ತೇವೆ. ವ್ಯಕ್ತಿಗಳು ಸೃಷ್ಟಿಸುವ ಸಂಸ್ಥೆಗಳೇ ಅವರ ನಡೆವಳಿಕೆಗಳನ್ನು ನಿರ್ದೇಶಿಸುತ್ತಾ, ಉದ್ದೇಶಗಳನ್ನು ನೆರವೇರಿಸಿಕೊಳ್ಳುವಲ್ಲಿ ಸಹಾಯ ಮಾಡುತ್ತವೆ. ಸಮಾಜವು ಮೌಲ್ಯಗಳು ಹಾಗೂ ನಿಯಮಗಳನ್ನು ಸ್ಥಾಪಿಸಿ, ಅದರ ಸದಸ್ಯರುಗಳಿಂದ ಅವುಗಳನ್ನು ಅನುಸರಿಸುವಂತೆ ನಿರೀಕ್ಷಿಸುತ್ತದೆ. ಪ್ರತಿಯೊಂದು ಮಾನವ ಶಿಶುವೂ ಇಂತಹ ಸಾಮಾಜಿಕ ಪರಿಸರದಲ್ಲಿ ಮಾನವೀಯ ಗುಣಗಳನ್ನು ಬೆಳೆಸಿಕೊಂಡು ವ್ಯಕ್ತಿಯಾಗುತ್ತದೆ. ಇತರರೊಂದಿಗಿನ ಅಂತರಕ್ರಿಯೆಯ ಮೂಲಕ ವ್ಯಕ್ತಿಯಲ್ಲಿ ರೂಪುಗೊಳ್ಳುವ ಚಿಂತನೆಗಳು, ಭಾವನೆಗಳು, ಆತನ ಅನಿಸಿಕೆಗಳು ಸಮಾಜದಲ್ಲಿನ ಸಾಮಾಜಿಕ ಪರಿಸರದಲ್ಲಿ ನಿಶ್ಚಿತ ರೂಪ ಪಡೆಯುತ್ತವೆ. ಸಮಾಜದಲ್ಲಿ ಸಂಭವಿಸುವ ಅಂತರಕ್ರಿಯೆಯ ಪರಿಣಾಮವಾಗಿ ಅನನ್ಯ ಸ್ವರೂಪದ ಅರ್ಥಗಳು, ನಿರೀಕ್ಷೆಗಳು, ನಡೆವಳಿಕೆಗಳು ಮತ್ತು ರಾಚನಿಕ ವ್ಯವಸ್ಥೆಗಳು ಮಾನವ ಸಮಾಜದಲ್ಲಿ ಕಂಡು ಬರುತ್ತವೆ. ಇದೇ ಸಮಾಜಶಾಸ್ತ್ರದ ವಸ್ತುವಿಷಯ. ಸಮಾಜಶಾಸ್ತ್ರದ ಅನೇಕ ವ್ಯಾಖ್ಯೆಗಳು 'ಸಮಾಜ' ಪರಿಕಲ್ಪನೆಯನ್ನು ಕೇಂದ್ರವಾಗಿಟ್ಟುಕೊಂಡೆ

ಪ್ರಾರಂಭವಾಗುತ್ತವೆ. ಆದ್ದರಿಂದ ಸಮಾಜವು ಸಮಾಜಶಾಸ್ತ್ರದ ಅತ್ಯಂತ ಪ್ರಮುಖ ಪ್ರಾಥಮಿಕ ಪರಿಕಲ್ಪನೆಯೆಂದು ಪರಿಗಣಿಸಲ್ಪಟ್ಟಿದೆ.

ಅತ್ಯಂತ ವಿಶಾಲಾರ್ಥದಲ್ಲಿ ಸಾಮಾಜಿಕ ಸಂಬಂಧಗಳೊಂದಿಗೆ ನಿರತರಾಗಿರುವ ಮಾನವರಿರುವ ಒಂದು ಸಮಷ್ಟಿಯೇ 'ಸಮಾಜ' ಎಂದು ಹೇಳಬಹುದು. ಸಮಾಜವು ಅಂತರ ಸಂಬಂಧಗಳಿರುವ ವ್ಯವಸ್ಥೆಯಾಗಿದ್ದು ವ್ಯಕ್ತಿಗಳನ್ನು ಒಟ್ಟಿಗೆ ತರುತ್ತದೆ. "ಸಮಾಜವು ಸಾಮಾಜಿಕ ಸಂಬಂಧಗಳ ಬಲೆಯನ್ನು ಹೊಂದಿರುವ ಸದಾ ಬದಲಾವಣೆಯಾಗುತ್ತಿರುವಂತಹ ಒಂದು ಸಂಕೀರ್ಣ ವ್ಯವಸ್ಥೆ" ಎಂದು **ಮೆಕೈವರ್** ಮತ್ತು **ಪೇಜ್** ಅಭಿಪ್ರಾಯಪಡುತ್ತಾರೆ.

ಮಾನವನ ಅಸಂಖ್ಯಾತ ಚಟುವಟಿಕೆಗಳು ಸಮಾಜವೆಂಬ ಅಭೌತಸ್ವರೂಪದ ವ್ಯವಸ್ಥೆಯ ಚೌಕಟ್ಟಿನೊಳಗೆ ನಡೆಯುತ್ತವೆ. ಮಾನವ ಜೀವನದ ಮೇಲೆ ಸಮಾಜದ ಮುದ್ರೆ ಆಚ್ಛಾದಿತವಾಗಿರುತ್ತದೆ. ಮಾನವ ತನ್ನ ಅಸ್ತಿತ್ವಕ್ಕಾಗಿ ಸಮಾಜವನ್ನು ಅವಲಂಬಿಸಿದ್ದಾನೆ. ಸಮಾಜದ ಸದಸ್ಯರ ಮೂಲಕ ಮಾನವ ಶಿಶು ಪೋಷಿಸಲ್ಪಟ್ಟು, ಸಮಾಜದ ನಿರೀಕ್ಷೆಗಳಿಗನುಗುಣವಾಗಿ ವ್ಯಕ್ತಿತ್ವವನ್ನು ಪಡೆಯುತ್ತದೆ. ಈ ದೃಷ್ಟಿಯಿಂದ ಮಾನವನು ಸಮಾಜದ ಸದಸ್ಯನಾಗಿ ಕಲಿತಿದ್ದೆಲ್ಲವೂ ಸಾಮಾಜಿಕವಾದುದು. ಆತನ ಅಸ್ತಿತ್ವಕ್ಕೆ ಸಮಾಜ ಅನಿವಾರ್ಯ. ಆತ ಸದಸ್ಯನಾಗಿ ಸಾಧಿಸಿದ್ದೆಲ್ಲಾ ಸಮಾಜದ ಬೆಳವಣಿಗೆಗೆ ಕೊಡುಗೆ. ಸಮಾಜದ ಮೂಲಕ ವ್ಯಕ್ತಿಗಳು ಹಲವಾರು ಉದ್ದೇಶಗಳನ್ನು ಸಾಕಾರಗೊಳಿಸಿಕೊಳ್ಳುತ್ತಾರೆ. ವ್ಯಕ್ತಿಗಳು ತಮ್ಮ ಬದುಕಿನ ಅರ್ಥವನ್ನು ಸಮಾಜದಲ್ಲಿ ಕಂಡುಕೊಳ್ಳುತ್ತಾರೆ.

ಸಾಮಾಜಿಕ ಜೀವನ ಮಾನವರಿಗೆ ಮಾತ್ರ ಸೀಮಿತವಾಗಿರದೆ, ಮಾನವೇತರ ಜೀವಿಗಳಲ್ಲೂ ಕಾಣಬಹುದಾಗಿದೆ. ಆಶ್ಚರ್ಯಕರ ರೀತಿಯಲ್ಲಿ ಕ್ರಿಮಿಕೀಟಗಳು, ಪಶು-ಪಕ್ಷಿಗಳು ತಮ್ಮದೇ ರೀತಿಯ ಸಾಮಾಜಿಕ ಜೀವನವನ್ನು ನಡೆಸುತ್ತವೆ. ಇಲ್ಲಿ ಅನುವಂಶೀಯತೆ ಮತ್ತು ಮೂಲ ಪ್ರವೃತ್ತಿಗಳು ಪ್ರಧಾನ ಅಂಶಗಳಾಗಿ ಕಂಡುಬರುತ್ತವೆ. ಇವುಗಳನ್ನು ಆಧರಿಸಿದ ವರ್ತನಾ ಮಾದರಿಗಳನ್ನು ಅವುಗಳ ಸಾಮೂಹಿಕ ಜೀವನದಲ್ಲಿ ಕಾಣಬಹುದು. ಪ್ರಾಣಿವರ್ಗಗಳ ಸಮಾಜಗಳಲ್ಲಿ ಸಾಮಾಜಿಕ ಪ್ರಜ್ಞೆ ಕಂಡುಬರುವುದಿಲ್ಲ. ಆದರೆ ಉನ್ನತ ಜೀವಿಗಳಾದಂತಹ ಮಾನವರಲ್ಲಿ ವಿಶಿಷ್ಟ ಸ್ವರೂಪದ ಸಮಾಜ ಅಸ್ತಿತ್ವ ಪಡೆದಿದೆ. ಮಾನವರು ಜೈವಿಕ ಪ್ರಾಣಿಗಳಾಗಿದ್ದರೂ ಪ್ರಾಣಿವರ್ಗಗಳಲ್ಲಿರುವಂತೆ ಏಕರೂಪದ ಸಮಾಜವನ್ನು ಹೊಂದಿರದೆ, ವಿಭಿನ್ನ ರೀತಿಯ ಸಮಾಜಗಳ ಸೃಷ್ಟಿಗೆ ಕಾರಣರಾಗಿದ್ದಾರೆ. ಆದ್ದರಿಂದ ಮಾನವ ಸಮಾಜದ ಅಧ್ಯಯನ, ಸಮಾಜಶಾಸ್ತ್ರಜ್ಞನಿಗೆ ಪ್ರಮುಖ ಅಧ್ಯಯನ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ 'ಸಮಾಜ' ಎಂಬ ಪದದ ಅರ್ಥ, ಲಕ್ಷಣಗಳು, ಸಮಾಜದ ಬದಲಾಗುತ್ತಿರುವ ಸ್ವರೂಪ ಹಾಗೂ ಹೇಗೆ ಸಂಸ್ಕೃತಿ ಮಾನವ ಸಮಾಜದ ವಿಶಿಷ್ಟ ಲಕ್ಷಣವಾಗಿದೆ ಎಂಬುದನ್ನು ಇಲ್ಲಿ ಅರ್ಥಮಾಡಿಕೊಳ್ಳುವುದು ಸೂಕ್ತ.

"ಸಮಾಜ"ದ ಅರ್ಥ-ವ್ಯಾಖ್ಯೆ ಮತ್ತು ಗುಣಲಕ್ಷಣಗಳು

"ಸಮಾಜ" ಎಂಬ ಪದ ವ್ಯಾಪಕ ಸ್ವರೂಪವನ್ನು ಹೊಂದಿರುವುದರಿಂದ, ಇದರ

ಸಮಾಜಶಾಸ್ತ್ರೀಯ ಅರ್ಥ, ಸಾಮಾನ್ಯ ಅರ್ಥಕ್ಕಿಂತಲೂ ಭಿನ್ನವಾಗಿರುತ್ತದೆ. ಸಾಮಾನ್ಯ ಭಾಷೆಯಲ್ಲಿ ಈ ಪದವನ್ನು ವಿವಿಧ ಅರ್ಥದಲ್ಲಿ ಬಳಸುತ್ತೇವೆ. ಉದಾಹರಣೆಗೆ ಕೈಗಾರಿಕಾ ಸಮಾಜ, ಕೃಷಿಕ ಸಮಾಜ, ವೀರಶೈವ ಸಮಾಜ, ಮಹಿಳಾ ಸಮಾಜ, ಬ್ರಿಟಿಷ್ ಸಮಾಜ ಇತ್ಯಾದಿ. ಅನೇಕ ಸಂದರ್ಭಗಳಲ್ಲಿ "ಸಮಾಜ" ಎಂಬ ಪದವನ್ನು 'ಸಂಘ' ಅಥವಾ 'ಸಮುದಾಯ' ಪದಗಳಿಗೆ ಸಮಾನಾರ್ಥವಾಗಿ ಬಳಸುವುದುಂಟು. ಅಂದರೆ ತಾರತಮ್ಯರಹಿತ ವಾಗಿ ಇವುಗಳನ್ನು ಬಳಸಿರುವುದಕ್ಕೆ ಉದಾಹರಣೆಗಳಿವೆ. ಆದ್ದರಿಂದ ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಈ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುವುದು ಅವಶ್ಯಕ.

'ಸಮಾಜ' ಎಂಬ ಪದ ಇಂಗ್ಲಿಷ್‌ನ 'ಸೊಸೈಟಿ' ಎಂಬುದರ ಕನ್ನಡ ಅನುವಾದ. ಇಂಗ್ಲಿಷ್‌ನ 'ಸೊಸೈಟಿ' ಎಂಬ ಪದವು ಲ್ಯಾಟಿನ್ ಭಾಷೆಯಲ್ಲಿನ 'ಸೋಶಿಯಸ್' ಎಂಬ ಪದದಿಂದ ಹುಟ್ಟಿದೆ. ಸೋಶಿಯಸ್ ಎಂಬ ಪದವು ಒಡನಾಡಿತನ, ಸಂಗಾತಿಗಳು ಎಂಬ ಅರ್ಥಗಳನ್ನು ಹೊಂದಿದೆ. ಆದ್ದರಿಂದ ಸಮಾಜದ ಪದಶಃ ಅರ್ಥ ಸಂಗಾತಿಗಳೊಡನೆ ನಡೆಸುವ ಒಡನಾಟದ ಜೀವನ ಎಂದಾಗುತ್ತದೆ. ವ್ಯಕ್ತಿಗಳ ಒಡನಾಟದ ಜೀವನ ಸಹಬಾಳ್ವೆಗೆ ನಾಂದಿಯಾಗುತ್ತದೆ. ಸಹಬಾಳ್ವೆ ಮತ್ತು ಸಹಭಾಗಿತ್ವ ಸಮಾಜದ ಪ್ರಮುಖ ತತ್ವಗಳು. ಆದ್ದರಿಂದ ಮಾನವ ಜೀವನವನ್ನು ಹೊರತುಪಡಿಸಿ 'ಸಮಾಜ'ವನ್ನು ಅಧ್ಯಯನ ಮಾಡಲು ಸಾಧ್ಯವಿಲ್ಲ.

ಸಮಾಜ ಕುರಿತ ವ್ಯಾಖ್ಯೆಗಳು

ಸಮಾಜಶಾಸ್ತ್ರಜ್ಞರಲ್ಲಿ ಸಮಾಜದ ಪರಿಕಲ್ಪನೆಯ ಬಗ್ಗೆ ಏಕಾಭಿಪ್ರಾಯವಿಲ್ಲ. ಇದಕ್ಕೆ ಮುಖ್ಯ ಕಾರಣ ಸಮಾಜದ ಸಂಕೀರ್ಣ ಸ್ವರೂಪ. ಸಮಾಜವು ಸರ್ವವ್ಯಾಪಕವಾಗಿದ್ದು, ಅದರೊಳಗಿನ ವೈವಿಧ್ಯಮಯ ಮಾನವ ಸಂಬಂಧಗಳು ಅದರ ಕಾರ್ಯಚಟುವಟಿಕೆಗಳನ್ನು ಒಂದೇ ಚೌಕಟ್ಟಿನೊಳಗೆ ತಂದು ಅರ್ಥಮಾಡಿಕೊಳ್ಳುವುದು ಕಷ್ಟದ ಕೆಲಸ. ಆದ್ದರಿಂದ ವಿದ್ವಾಂಸರ ವಿವಿಧ ದೃಷ್ಟಿಕೋನಗಳನ್ನಾಧರಿಸಿದ ಕೆಲವು ವ್ಯಾಖ್ಯೆಗಳನ್ನು ಇಲ್ಲಿ ವಿಶ್ಲೇಷಿಸುವುದರ ಮೂಲಕ ಸಮಾಜದ ಬಗ್ಗೆ ಒಂದು ಕಲ್ಪನೆಯನ್ನು ಹೊಂದಬಹುದು.

ಮೆಕೈವರ್ ಪ್ರಕಾರ "ಸಮಾಜವೆಂದರೆ ಸಾಮಾಜಿಕ ಸಂಬಂಧಗಳ ಜಾಲ" ಎನ್ನಬಹುದಾಗಿದೆ.

ಜುಡ್ಸನ್ ಆರ್. ಲ್ಯಾಂಡಿಸ್ ಹೇಳುವಂತೆ "ಒಂದು ನಿಶ್ಚಿತ ಭೂ ಪ್ರದೇಶದಲ್ಲಿ ಜನರು ನಿರಂತರವಾಗಿ ಸಂಘಟನೆಗೊಂಡು, ಸ್ವಪರಿಪೂರ್ಣತೆ ಮತ್ತು ಸ್ವತಂತ್ರ ಲಕ್ಷಣಗಳನ್ನು ಹೊಂದಿ, ಒಂದು ಸಾಮಾನ್ಯ ಸಂಸ್ಕೃತಿಯನ್ನು ಹಂಚಿಕೊಂಡಿದ್ದರೆ, ಅಂತಹ ವ್ಯವಸ್ಥೆಯನ್ನು ಸಮಾಜ ಎನ್ನುತ್ತೇವೆ".

ಲ್ಯಾಪಿಯರ್ ಅಭಿಪ್ರಾಯದಲ್ಲಿ "ಸಮಾಜವು ಸಮೂಹದಲ್ಲಿನ ಜನರ ನಡುವೆ ಏರ್ಪಡುವಂತಹ ಅಂತರ್‌ಕ್ರಿಯೆಗಳ ಸಂಕೀರ್ಣ ಮಾದರಿಯನ್ನು ಪ್ರತಿನಿಧಿಸುತ್ತದೆ".

ಕಾಲಿನ್ಸ್ ನಿಘಂಟುವಿನಲ್ಲಿ ಅರ್ಥೈಸಲಾದಂತೆ - ಸ್ವಯಂ ಸಾರೋಧ್ಧಾರ ಗುಣವುಳ್ಳ

ಯಾವುದೇ ಮಾನವ ಸಮೂಹವು, ಒಂದು ಸಾಪೇಕ್ಷ ಭೌಗೋಳಿಕ ಪ್ರದೇಶದ ಎಲ್ಲೆಯನ್ನು ಹಾಗೂ ಹೆಚ್ಚು ಕಡಿಮೆ ತನ್ನದೇ ಆದ ಸಂಸ್ಕೃತಿ ಮತ್ತು ಸಂಸ್ಥೆಗಳನ್ನು ಹೊಂದಿದ್ದರೆ, ಅದನ್ನು 'ಸಮಾಜ' ಎಂದು ಕರೆಯಬಹುದು.

ಐಯಾನ್ ರಾಬರ್ಟ್‌ಸನ್ "ಒಂದು ನಿಶ್ಚಿತ ಭೂ ಪ್ರದೇಶದಲ್ಲಿ ವಾಸಿಸುತ್ತಾ, ಒಂದು ಸಾಮಾನ್ಯ ಸಂಸ್ಕೃತಿಯನ್ನು ಹಂಚಿಕೊಂಡು, ಅಂತರಕ್ರಿಯೆಗಳಿಗೆ ಒಳಗಾಗಿರುವ ಜನರ ಸಮೂಹವನ್ನು ಸಮಾಜ" ಎಂದು ವ್ಯಾಖ್ಯಾನಿಸಿದ್ದಾರೆ.

ಈ ವ್ಯಾಖ್ಯೆಗಳನ್ನು ಅಭ್ಯಸಿಸಿದಾಗ ಪ್ರಧಾನವಾಗಿ ಕಂಡುಬರುವ ಅಂಶವೆಂದರೆ, ಸಮಾಜ ಪರಿಕಲ್ಪನೆಯು ತನ್ನೊಳಗೆ ಮೂರ್ತ ಹಾಗೂ ಅಮೂರ್ತ ಸ್ವರೂಪವನ್ನು ಹೊಂದಿರುವ ಮಾನವ ಸಂಬಂಧಗಳು, ಮೌಲ್ಯಗಳು, ಕಾರ್ಯಗಳು ಮತ್ತು ವಿಧಿ-ವಿಧಾನಗಳನ್ನು ಹೊಂದಿದ್ದು, ಒಂದು ಸಂಕೀರ್ಣ ವ್ಯವಸ್ಥೆ ಎನಿಸಿದೆ.

ಮೇಲಿನ ವ್ಯಾಖ್ಯೆಗಳ ಆಧಾರದ ಮೇಲೆ ಸಮಾಜದ ಗುಣಲಕ್ಷಣಗಳನ್ನು ಈ ಕೆಳಗಿನಂತೆ ವಿವರಿಸಬಹುದು.

೧. ಸಾಮ್ಯತೆ

ಮಾನವ ಸಮಾಜದಲ್ಲಿನ ಸದಸ್ಯರು, ಅವರ ನಡುವೆ ಇರುವ ಸಾಮ್ಯತೆಯ ಬಗ್ಗೆ ಅರಿವನ್ನು ಹೊಂದಿರುತ್ತಾರೆ. ವ್ಯಕ್ತಿಗಳ ನಡುವೆ ಪರಸ್ಪರ ಅರಿವಿನಿಂದಾಗಿ ಈ ಸಂಬಂಧಗಳು ಉಂಟಾಗುತ್ತವೆ. ಸಮಾಜಶಾಸ್ತ್ರಜ್ಞರಾದ ಎಫ್.ಎಚ್. ಗಿಡ್ಡಿಂಗ್ಸ್ ಅವರು ಇದನ್ನು 'ಪ್ರಭೇದ ಪ್ರಜ್ಞೆ' (Consciousness of Kind) ಎಂದು ಕರೆದಿದ್ದಾರೆ. ಯಾವಾಗ ವ್ಯಕ್ತಿಗಳು ತಮ್ಮ ಜನಾಂಗ, ತಮ್ಮ ಜಾತಿ, ತಮ್ಮ ಪ್ರದೇಶ ಹಾಗೂ ತಮ್ಮ ರಾಷ್ಟ್ರ ಎಂಬ ಭಾವನೆಯನ್ನು ಬೆಳೆಸಿಕೊಳ್ಳುವರೋ, ಆಗ ಅವರಲ್ಲಿ ಈ ರೀತಿಯ ಪ್ರಜ್ಞೆ ಬೆಳೆಯುತ್ತದೆ. ಹಾಗಾಗಿ ಇದನ್ನು ಸಾದೃಶ್ಯ ಸ್ವರೂಪಪ್ರಜ್ಞೆ ಎಂಬುದಾಗಿಯೂ ಹೇಳಬಹುದು. ಈ ರೀತಿಯ ಏಕತೆಯ ಭಾವನೆ ಅಥವಾ ಸಮಾನ ಮನೋಧರ್ಮದ ಕಾರಣದಿಂದಾಗಿ ಅವರು ಸಾಮಾನ್ಯ ಆಸಕ್ತಿಗಳು, ಉದ್ದೇಶಗಳು, ಆಸೆ-ಆಕಾಂಕ್ಷೆಗಳನ್ನು ಹಂಚಿಕೊಳ್ಳುತ್ತಾರೆ. ಸಮಾಜದ ಸದಸ್ಯರ ಈ ಪ್ರಕ್ರಿಯೆಯನ್ನು ಫೇರ್‌ಚೈಲ್ಡ್ ಅವರು 'ಸ್ವಯಂ ನಿರ್ವಹಣೆ' ಎಂದು ಕರೆದಿದ್ದಾರೆ. ಅಲ್ಲದೆ ಜನರು ಭವಿಷ್ಯದಲ್ಲಿ ಅವರ ಸಂಸ್ಕೃತಿ ಮುಂದುವರಿಯಬೇಕು ಎಂದು ಬಯಸುತ್ತಾರೆ. ಇದನ್ನು ಫೇರ್‌ಚೈಲ್ಡ್ ಅವರು ಸ್ವಯಂ ಸಾರೋದ್ಧಾರ ಎಂದು ಕರೆದಿದ್ದಾರೆ. ಹೀಗೆ ಸಾದೃಶ್ಯ ಗುಣವಿರುವ ಜೀವಿಗಳ ಬದುಕಿನಲ್ಲಿ ಅನೇಕ ವಿಧದ ಸಾಮ್ಯತೆಯ ಗುಣಗಳು ಕಂಡುಬರುತ್ತವೆ.

೨. ಭಿನ್ನತೆ

ಸಮಾಜದ ಸದಸ್ಯರ ನಡುವೆ ಸಾಮ್ಯತೆಯ ಗುಣ ಕಂಡು ಬಂದಂತೆ, ಭಿನ್ನತೆಯ ಅಂಶವೂ ಕಂಡುಬರುತ್ತದೆ. ಉದಾಹರಣೆಗೆ ವಯಸ್ಸು, ಲಿಂಗ, ಪ್ರವೃತ್ತಿ, ವರ್ಣ ಮತ್ತು ಆಸಕ್ತಿ ಇತ್ಯಾದಿಗಳನ್ನಾಧರಿಸಿದ ಸ್ವಾಭಾವಿಕ ಭೇದಗಳಿರಬಹುದು ಅಥವಾ ಆಸ್ತಿ, ಅಂತಸ್ತು

ಅಧಿಕಾರ ಇತ್ಯಾದಿಗಳನ್ನೊಳಗೊಂಡ ಸಾಮಾಜಿಕ ಭಿನ್ನತೆಗಳಿರಬಹುದು. ಸಾಮಾಜಿಕ ವಿಕಾಸದೊಂದಿಗೆ ಈ ಭೇದಗಳು ಅನಿವಾರ್ಯವಾಗಿ ಬೆಳೆದು ಬರುತ್ತವೆ. ಈ ಬೇಧಗಳಿಂದಾಗಿ ಸಮಾಜದಲ್ಲಿ ಶ್ರಮವಿಭಜನೆ ಬೆಳೆಯುತ್ತದೆ. ಸಮಾಜದಲ್ಲಿ ಸಾಮ್ಯತೆ ಹಾಗೂ ಭಿನ್ನತೆಯ ಅಂಶಗಳು ಒಂದಕ್ಕೊಂದು ಪೂರಕವಾಗಿರುತ್ತವೆ. ಇವು ಸಮಾಜದ ಐಕ್ಯತೆಯನ್ನು ಬಲಪಡಿಸುತ್ತವೆ.

೩. ಶ್ರಮ ವಿಭಜನೆ

ಸದಸ್ಯರು ತಮ್ಮ ಸಾಮರ್ಥ್ಯ ಹಾಗೂ ಅಭಿರುಚಿಗಳಿಗನುಗುಣವಾಗಿ ಕಾರ್ಯಗಳನ್ನು ಹಂಚಿಕೊಂಡು ನಿರ್ವಹಿಸುವ ಪ್ರಕ್ರಿಯೆಗೆ ಶ್ರಮವಿಭಜನೆ ಎನ್ನುತ್ತೇವೆ. ವ್ಯಕ್ತಿಗಳ ವಿಭಿನ್ನ ಬೇಡಿಕೆಗಳು ಶ್ರಮವಿಭಜನೆಯ ಮೂಲಕ ಪೂರೈಸಲ್ಪಡುತ್ತವೆ. ಸಮಾಜದ ಕಾರ್ಯಗಳು ಸುಲಲಿತವಾಗಿ ಜರುಗಲು ಶ್ರಮವಿಭಜನೆ ಅತ್ಯಂತ ಅವಶ್ಯಕವಾಗಿದೆ. ಸಮಾಜದ ಸೂಕ್ಷ್ಮ ಘಟಕವಾದ ಕುಟುಂಬದಿಂದ ಬೃಹತ್ ಘಟಕವಾದ ರಾಜ್ಯದವರೆಗೆ ಶ್ರಮವಿಭಜನೆ ಕಾರ್ಯಾಚರಣೆಗೊಂಡಿರುತ್ತದೆ. ಭೇದಗಳು, ವಿಚಾರಗಳು ಅತಿ ಸೂಕ್ಷ್ಮವಾದಂತೆ ಶ್ರಮವಿಭಜನೆ ಸಂಕೀರ್ಣಗೊಂಡು ವಿಶೇಷ ಪರಿಣತಿಗೆ ದಾರಿ ಮಾಡಿಕೊಡುತ್ತದೆ. ಇಂದಿನ ಆಧುನಿಕ ಸಮಾಜದಲ್ಲಿ ವಿಶೇಷ ಪರಿಣತಿಯನ್ನು ಆಧರಿಸಿದ ಶ್ರಮವಿಭಜನಾ ವ್ಯವಸ್ಥೆ ಅಸ್ತಿತ್ವದಲ್ಲಿದೆ.

೪. ಸಹಕಾರ ಹಾಗೂ ಪರಸ್ಪರಾವಲಂಬನೆ

ಸಮಾಜದ ಹೊರತಾಗಿ ವ್ಯಕ್ತಿಯ ಉಳಿವು ಅಸಾಧ್ಯ. ಆಹಾರ, ಶಿಕ್ಷಣ, ಲೌಕಿಕ ವಿಷಯಗಳು ಹಾಗೂ ಅವಕಾಶಗಳನ್ನು ಹೊಂದಲು, ವ್ಯಕ್ತಿ ಸಮಾಜವನ್ನು ಅವಲಂಬಿಸುತ್ತಾನೆ. ಅಲ್ಲದೆ ವ್ಯಕ್ತಿ ತನ್ನ ಚಿಂತನೆಗಳ ಅಭಿವ್ಯಕ್ತಿಗೆ, ಆಸೆ-ಆಕಾಂಕ್ಷೆಗಳ ಈಡೇರಿಕೆಗೆ, ತನ್ನ ಕನಸುಗಳನ್ನು ಸಾಕಾರಗೊಳಿಸಿಕೊಳ್ಳಲು ಸಮಾಜವನ್ನು ಅವಲಂಬಿಸಿದ್ದಾನೆ. ಇಂತಹ ಹಲವಾರು ಉದ್ದೇಶಗಳ ಸಾಧನೆಗಾಗಿ ಸದಸ್ಯರ ನಡುವೆ ಪರಸ್ಪರ ಅವಲಂಬನೆ ಅನಿವಾರ್ಯ. ಸಾಮೂಹಿಕ ಪ್ರಯತ್ನ ಸಮಾಜದ ಉಳಿವಿಗೆ ಅತ್ಯಗತ್ಯ. ಸಹಕಾರದ ಮೂಲಕ ಅದ್ವಿತೀಯವಾದುದನ್ನು ಸಾಧಿಸಬಹುದು. ಉದ್ದೇಶಗಳನ್ನು ಸಾಮೂಹಿಕ ಪ್ರಯತ್ನದ ಮೂಲಕ ಸಾಧಿಸುವುದನ್ನು ಸಹಕಾರವೆಂದು ಕರೆಯುತ್ತೇವೆ. ಸಹಕಾರದ ಮೂಲಕ ಸಮಾಜದಲ್ಲಿ ಸುಮಧುರ ಬಾಂಧವ್ಯಗಳು ಏರ್ಪಡುತ್ತವೆ. ಸಮಾಜದ ಸ್ಥಿರತೆ ಹಾಗೂ ಏಳಿಗೆ ಸದಸ್ಯರ ನಡುವಿನ ಸಹಕಾರ ಮನೋಭಾವನೆಯನ್ನು ಅವಲಂಬಿಸಿರುತ್ತದೆ.

೫. ಸಮಾಜವು ಗತಿಶೀಲತೆಯ ಗುಣವನ್ನು ಹೊಂದಿದೆ

ಸಮಾಜವು ಜಡತೆಯ ಸ್ವಭಾವವನ್ನು ಹೊಂದಿರದೆ ಗತಿಶೀಲತೆಯ ಗುಣವನ್ನು ಹೊಂದಿದೆ. ನಿರಂತರ ಬದಲಾವಣೆ ಸಮಾಜದ ಲಕ್ಷಣವಾಗಿದೆ. ಪ್ರಕೃತಿಯಲ್ಲಿ ಸಂಭವಿಸುವ ಬದಲಾವಣೆಯಂತೆಯೇ ಸಮಾಜದಲ್ಲಿಯೂ ಬದಲಾವಣೆ ಸಂಭವಿಸಿ, ಅದೊಂದು ಪ್ರಕ್ರಿಯೆಯೇ ಆಗಿದೆ. ಹಳೆಯ ಸದಸ್ಯರ ಸ್ಥಾನಗಳು ಜನಾಂಗ ಮುಂದುವರಿಕೆಯ ಮೂಲಕ

ಹೊಸ ಸದಸ್ಯರಿಂದ ತುಂಬಲ್ಪಡುತ್ತವೆ. ಹಳೆಯ ಸಂಘ-ಸಂಸ್ಥೆಗಳು ಹೊಸ ಸಂಘ-ಸಂಸ್ಥೆಗಳಿಗೆ ದಾರಿ ಮಾಡಿಕೊಡುತ್ತವೆ. ಹಳೆಯ ಮೌಲ್ಯಗಳು, ಚಿಂತನೆಗಳು, ಆದರ್ಶಗಳು ಹೊಸ ರೂಪವನ್ನು ಪಡೆದುಕೊಳ್ಳುತ್ತವೆ. ಬದಲಾವಣೆಗಳು ಸಮಾಜದಲ್ಲಿ ಸ್ವಭಾವಿಕವಾಗಿಯೆ ಸಂಭವಿಸುತ್ತಿರುತ್ತವೆ. ಹಲವಾರು ಕ್ಷೇತ್ರಗಳಲ್ಲಿನ ಈ ಬದಲಾವಣೆ ನಿರಂತರವಾಗಿದ್ದು, ಸಮಾಜದ ಪ್ರಗತಿಗೆ ಕಾರಣವಾಗುತ್ತದೆ.

೬. ಸಂಸ್ಕೃತಿ-ಮಾನವ ಸಮಾಜದ ವಿಶಿಷ್ಟ ಲಕ್ಷಣ

ಒಂದು ಸಮೂಹದ ಅಥವಾ ಒಂದು ಸಮಾಜದಲ್ಲಿನ ಸದಸ್ಯರ ಜೀವನ ವಿಧಾನವೇ ಸಂಸ್ಕೃತಿ. ಎಲ್ಲ ಸಮಾಜಗಳಲ್ಲಿನ ಸದಸ್ಯರು ವಿಶಿಷ್ಟ ಸಾಂಸ್ಕೃತಿಕ ಅಂಶಗಳನ್ನು ಆಧರಿಸಿದ ಸಾಮಾಜಿಕ ಸಂಬಂಧಗಳನ್ನು ಹೊಂದಿರುತ್ತಾರೆ. ಸಮಾಜಗಳಿಲ್ಲದೆ ಸಂಸ್ಕೃತಿಯಿಲ್ಲ, ಸಂಸ್ಕೃತಿಯಿಲ್ಲದ ಸಮಾಜವಿಲ್ಲ. ಸಂಸ್ಕೃತಿಯಿಲ್ಲದೆ ಮಾನವರಾಗಲು ಸಾಧ್ಯವಿಲ್ಲ. ಮಾನವರಲ್ಲಿನ ಸಾಂಸ್ಕೃತಿಕ ಭೇದದಿಂದಾಗಿ ನಾವು ಹಲವು ರೀತಿಯ ಸಮಾಜಗಳನ್ನು ಕಾಣುತ್ತೇವೆ. ಹೀಗೆ ಹಲವಾರು ದೃಷ್ಟಿಯಿಂದ ಸಂಸ್ಕೃತಿ ಮಾನವ ಸಮಾಜದ ವಿಶಿಷ್ಟ ಲಕ್ಷಣವಾಗಿದೆ.

ಸಮಾಜವು ಒಂದು ಸರ್ವವ್ಯಾಪಿಯಾದಂಥ ವ್ಯವಸ್ಥೆ. ವ್ಯಕ್ತಿ ತನ್ನ ಜೀವನದ ಎಲ್ಲ ಹಂತಗಳಲ್ಲೂ ಇದನ್ನು ಅವಲಂಬಿಸಿದ್ದಾನೆ. ಮಾನವ ಸಂಬಂಧಗಳ ವ್ಯವಸ್ಥಿತ ಹೆಣಿಗೆಯಿಂದ ಕೂಡಿರುವ ಸಮಾಜ, ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ವ್ಯಕ್ತಿ ಸಮಾಜದಲ್ಲಿನ ಇತರ ಒಡನಾಡಿಗಳ ಒಡನಾಟದೊಂದಿಗೆ ಮಾನವ ಗುಣಗಳನ್ನು ಬೆಳೆಸಿಕೊಳ್ಳುತ್ತಾನೆ. "ಮಾನವನು ಮೂಲಭೂತವಾಗಿ ಸಾಮಾಜಿಕ ಜೀವಿ" ಎಂದು ಅರಿಸ್ಟಾಟಲ್ ಬಹು ಹಿಂದೆಯೇ ಹೇಳಿದ್ದಾನೆ. ಮನುಷ್ಯ ಸಮಾಜದ ಮೂಲಕ ತನ್ನನ್ನು ತಾನು ಪ್ರತಿಬಿಂಬಿಸಿಕೊಳ್ಳುತ್ತಿರುವುದು ಇತಿಹಾಸದಿಂದಲೂ ಕಂಡುಬಂದಿದೆ. ಈ ದೃಷ್ಟಿಯಿಂದ ಸಮಾಜಶಾಸ್ತ್ರದ ಅಧ್ಯಯನದಲ್ಲಿ ಸಮಾಜ ಪರಿಕಲ್ಪನೆಯ ಅಧ್ಯಯನ ಪ್ರಮುಖವಾದ ಅಂಶವಾಗಿ ಪರಿಗಣಿತವಾಗಿದೆ.

ಆ. ಸಮುದಾಯ

ಮನುಕುಲದ ಆರಂಭದಿಂದಲೂ ಮಾನವ ಹಲವಾರು ಬಗೆಯ ಸಮುದಾಯಗಳಲ್ಲಿ ವಾಸಿಸುತ್ತಿರುವುದು ಕಂಡುಬಂದಿದೆ. 'ಸಮುದಾಯ'ವು ಒಂದು ಪ್ರಮುಖ ಸಾಮಾಜಿಕ ಘಟಕ. ಮಾನವನ ಸಮೂಹಜೀವನವು ಕಾಲಕ್ರಮೇಣ ಪ್ರಗತಿಯ ಅನೇಕ ಹಂತಗಳ ಮೂಲಕ ಸಾಗಿ, ಇಂದಿನ ನಾಗರಿಕ ಸಮುದಾಯಗಳ ಹಂತಕ್ಕೆ ತಲುಪಿದೆ. ಭೌತಿಕ ಪರಿಸರದ ವೈವಿಧ್ಯತೆಯಿಂದಾಗಿ ಸಮುದಾಯಗಳ ವಿವಿಧ ಪ್ರಕಾರಗಳು ಅಸ್ತಿತ್ವಕ್ಕೆ ಬಂದವು. ಉದಾಹರಣೆಗೆ ಒಂದು ಚಿಕ್ಕ ಆದಿವಾಸಿ ಬೇಟೆಗಾರರ ಸಮುದಾಯದಿಂದ ಬೃಹತ್ ನಗರ ಸಮುದಾಯದ ವರೆಗೆ ವಿವಿಧ ಪ್ರಕಾರದ ಸಮುದಾಯಗಳು ಅಸ್ತಿತ್ವದಲ್ಲಿವೆ. ಮಾನವನ ಸಾಮುದಾಯಿಕ ಜೀವನದಲ್ಲಿ ಸಾಮಾಜಿಕ ಸಂಬಂಧಗಳು ಹಾಗೂ ಸಹಭಾಗಿತ್ವ ಪ್ರಧಾನ

ಅಂಶಗಳಾಗಿರುವುದರಿಂದ, ಇದರ ಬಗ್ಗೆ ಸಮಾಜಶಾಸ್ತ್ರಜ್ಞರು ಅನೇಕ ಅಧ್ಯಯನಗಳನ್ನು ನಡೆಸಿದ್ದಾರೆ. ಸಮುದಾಯವು ಸಮಾಜಶಾಸ್ತ್ರದ ಮೂಲ ಪರಿಕಲ್ಪನೆಯಾಗಿ ಪರಿಗಣಿಸಲ್ಪಟ್ಟಿದೆ.

ಸಮುದಾಯದ ಅರ್ಥ ಮತ್ತು ಸ್ವರೂಪ

ಸಾಮೂಹಿಕ ಜೀವನ ಮಾನವನ ಸಹಜ ಪ್ರವೃತ್ತಿಯಾಗಿದ್ದು, ತನ್ನ ಒಡನಾಡಿಗಳೊಂದಿಗೆ ಇರಲು ಅವನು ಸದಾ ಬಯಸುತ್ತಾನೆ. ಇತರ ಸದಸ್ಯರ ನಿಕಟ ಸಂಪರ್ಕದೊಂದಿಗೆ, ಆತನು ಹಲವಾರು ಬೇಡಿಕೆಗಳನ್ನು ಪೂರೈಸಿಕೊಳ್ಳುತ್ತಾನೆ. ಮಾನವನು ಪ್ರಾಚೀನ ಕಾಲದಿಂದಲೂ ಒಂದಲ್ಲಾ ಒಂದು ಪ್ರದೇಶದಲ್ಲಿ ಸಾಮೂಹಿಕ ಜೀವನ ನಡೆಸಿಕೊಂಡು ಬಂದಿದ್ದಾನೆ. ಈತನ ನಿರಂತರವಾದ ಸಾಮೂಹಿಕ ಜೀವನ, ಸ್ಥಿರ ಸಮುದಾಯಗಳು ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಹಲವಾರು ಕುಟುಂಬಗಳು ಒಂದೆಡೆ ನೆಲೆಸಲು ಪ್ರಾರಂಭಿಸಿದಾಗ ಸಮುದಾಯ ಅಸ್ತಿತ್ವಕ್ಕೆ ಬಂದಿತೆನ್ನಬಹುದು. ವ್ಯಕ್ತಿ ನಿರಂತರವಾಗಿ ಒಂದೆಡೆ ನೆಲೆಸಲು ಪ್ರಾರಂಭಿಸಿದಾಗ, ತನ್ನ ಸಹ ಸದಸ್ಯರೊಂದಿಗೆ, ತನ್ನ ನೆಲದ ಬಗ್ಗೆ, ಆತನ ಮನದಲ್ಲಿ ಅಪ್ರಜ್ಞಾಪೂರ್ವಕವಾದ ಭಾವನೆಗಳು ಬೆಳೆಯುತ್ತವೆ. ಇವು ಸಮುದಾಯ ರೂಪುಗೊಳ್ಳಲು ಪೂರಕ ಅಂಶಗಳಾಗುವುದಲ್ಲದೆ, ಮೂಲಾಂಶಗಳಾಗಿ ಪರಿವರ್ತಿತಗೊಳ್ಳುತ್ತವೆ.

ಸಮಾಜಶಾಸ್ತ್ರಜ್ಞರಲ್ಲಿ ಸಮುದಾಯ ಪದದ ಅರ್ಥದ ಬಗ್ಗೆ ಸಹಮತವಿಲ್ಲ. ಅವರ ಭಿನ್ನಾಭಿಪ್ರಾಯಗಳಿಗೆ ಮುಖ್ಯ ಕಾರಣವೆಂದರೆ, ಸಮುದಾಯ ಪದವನ್ನು ಬಹಳ ಸಡಿಲ ಅರ್ಥದಲ್ಲಿ ಬಳಸಿರುವುದು ಹಾಗೂ ಇದನ್ನು ನಮ್ಮ ದಿನನಿತ್ಯದ ವ್ಯವಹಾರದಲ್ಲಿ ಹಲವು ರೀತಿ ಬಳಸಿರುವುದು. ಕೆಲವೆ ಕುಟುಂಬಗಳನ್ನು ಒಳಗೊಂಡಿರುವ 'ನೆರೆಹೊರೆ' ಸಮುದಾಯದ ಸೂಕ್ಷ್ಮರೂಪ. ನಗರ ಸಮುದಾಯ, ರಾಷ್ಟ್ರೀಯ ಸಮುದಾಯಗಳೆಂಬ ದೊಡ್ಡ ಗಾತ್ರದ ಸಮುದಾಯಗಳು ಇವೆ. ಅಲ್ಲದೆ ಶಿಕ್ಷಕ ಸಮುದಾಯ, ವಿದ್ಯಾರ್ಥಿ ಸಮುದಾಯ, ಕಾರ್ಮಿಕ ಸಮುದಾಯ, ಧಾರ್ಮಿಕ ಸಮುದಾಯ, ವೈದ್ಯ ಸಮುದಾಯ ಇತ್ಯಾದಿ ನಿರ್ದಿಷ್ಟ ವೃತ್ತಿ ಅಥವಾ ಚಟುವಟಿಕೆಗಳ ಆಧಾರದ ಮೇಲೆ ಕೆಲವು ಸಮೂಹಗಳನ್ನು ಸಮುದಾಯಗಳೆಂದು ಕರೆಯುತ್ತೇವೆ. ಇದರ ಅತೀವ ವೈವಿಧ್ಯ ಸ್ವರೂಪಾರ್ಥಗಳನ್ನು ಗಮನಿಸಿದ **ಪೀಟರ್ ವರ್ಸ್ಲೇ** ಅವರು, ಇದು ನಿರ್ದಿಷ್ಟತೆಯಿಂದ ಬಹು ದೂರದಲ್ಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ೧೯೫೫ರಲ್ಲಿ ಹಿಲರಿ ಅವರು ಸಮುದಾಯದ ಬಗ್ಗೆ ಇರುವ ೯೪ ವ್ಯಾಖ್ಯೆಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಹೀಗೆ ಈ ಪರಿಕಲ್ಪನೆಯ ಬಗ್ಗೆ ಸಾಕಷ್ಟು ಗೊಂದಲಗಳಿದ್ದು, ಇಂದಿಗೂ ಇದನ್ನು ವ್ಯಾಖ್ಯಾನಿಸುವುದು ಒಂದು ಬೌದ್ಧಿಕ ಕಸರತ್ತಾಗಿ ಮುಂದುವರಿದೆ. ಅನೇಕ ಸಮಾಜಶಾಸ್ತ್ರಜ್ಞರು ತಮ್ಮದೇ ರೀತಿಯಲ್ಲಿ ಈ ಪರಿಲ್ಪನೆಯನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆ. ಅಂತಹ ಕೆಲವು ವ್ಯಾಖ್ಯೆಗಳನ್ನು ಉಲ್ಲೇಖಿಸಬಹುದು.

ಸಮುದಾಯದ ವ್ಯಾಖ್ಯೆ

"ಒಂದು ನಿರ್ದಿಷ್ಟ ಭೌಗೋಳಿಕ ಎಲ್ಲೆಯೊಳಗೆ ಕಂಡುಬರುವ ವಿವಿಧ ಬಗೆಯ

ಸಾಮಾಜಿಕ ಸಂಬಂಧಗಳನ್ನು ಹೊಂದಿರುವ ಜನರ ಸಮೂಹಗಳನ್ನು ಸಮುದಾಯ ಎನ್ನಬಹುದು."

- ಕಾಲಿನ್ಸ್ ಸಮಾಜಶಾಸ್ತ್ರ ನಿಘಂಟು

"ಸಮುದಾಯವು ಒಂದು ಸ್ಥಳೀಯ ಸಮೂಹವಾಗಿದ್ದು, ಜನರು ಅದರೊಳಗೆ ತಮ್ಮ ಸಮಸ್ತ ಜೀವನ ಚಟುವಟಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ನಡೆಸುವರು."

- ಹಾರ್ಟನ್ ಮತ್ತು ಹಂಟ್

ಕಿಂಗ್ಸ್‌ಲೇ ಡೇವಿಸ್ ಅವರು ತಮ್ಮ **'ಹ್ಯೂಮನ್ ಸೊಸೈಟಿ'** ಗ್ರಂಥದಲ್ಲಿ ಸಮುದಾಯವನ್ನು "ಸಾಮಾಜಿಕ ಜೀವನದ ಎಲ್ಲ ಅಂಶಗಳನ್ನು ಒಳಗೊಂಡಿರುವಂಥ ಅತ್ಯಂತ ಚಿಕ್ಕ ಭೌಗೋಳಿಕ ಸಮೂಹ" ಎಂದು ವ್ಯಾಖ್ಯಾನಿಸಿದ್ದಾರೆ.

ಕಾರ್ಲ್‌ಮ್ಯಾನ್‌ಹೈಂ ಅವರು "ಒಂದೆಡೆ ಒಟ್ಟಾಗಿ ವಾಸಿಸುವ ಹಾಗೂ ತಾವು ಒಬ್ಬರಿಗೊಬ್ಬರು ಸಂಬಂಧಿಸಿದವರು ಎಂಬ ಭಾವನೆಯನ್ನು ಹೊಂದಿರುವ ಜನರ ಸಮೂಹವನ್ನು ಸಮುದಾಯ"ವೆಂದು ಕರೆದಿದ್ದಾರೆ. ಇಂತಹ ಸಮೂಹದಲ್ಲಿನ ಜನರು ಯಾವುದೇ ಒಂದು ಸೀಮಿತ ಆಸಕ್ತಿಯನ್ನು ಹೊಂದಿರದೆ ಬಹು ಆಸಕ್ತಿಗಳನ್ನು ಹೊಂದಿದವರಾಗಿರುತ್ತಾರೆ.

ಎಮ್ರಿ ಎಸ್. ಬೊಗಾರ್ಡಸ್ ಅವರ ದೃಷ್ಟಿಯಲ್ಲಿ ಸಮುದಾಯವೆಂದರೆ, "ನಾವು-ನಮ್ಮವರು ಎಂಬ ಭಾವನೆಯನ್ನು ಹೊಂದಿರುವ; ಒಂದು ನಿಶ್ಚಿತ ಪ್ರದೇಶದಲ್ಲಿ ವಾಸಿಸುತ್ತಿರುವ ಸಾಮಾಜಿಕ ಸಮೂಹ."

"ಯಾವುದೇ ಒಂದು ಜನಸಮೂಹದಲ್ಲಿ ಅಲ್ಲಿನ ಸದಸ್ಯರು ನಾವೆಲ್ಲ ಒಂದೇ ಎಂಬ ಭಾವನೆಯೊಂದಿಗೆ, ಜೀವನದಲ್ಲಿ ಹಲವು ಆಸಕ್ತಿಗಳನ್ನು ಹೊಂದಿ ಒಟ್ಟಿಗೆ ವಾಸಿಸುತ್ತಿದ್ದರೆ ಅಂತಹ ಜನರ ಸಮೂಹವನ್ನು ಸಮುದಾಯ"ವೆಂದು ಕರೆಯಬಹುದೆಂದು **ಮೆಕೈವರ್** ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ, ಸ್ವಲ್ಪಮಟ್ಟಿನ ಸಾಮಾಜಿಕ ಸಾಮರಸ್ಯವನ್ನು ಹೊಂದಿರುವ ಜನಸಮೂಹದ ನೆಲೆಯನ್ನು ಸಮುದಾಯ ಎಂದು ಕರೆದಿರುವರು.

ಈ ಮೇಲಿನ ವ್ಯಾಖ್ಯೆಗಳು ಸಮುದಾಯ ಪರಿಕಲ್ಪನೆಯ ಬಗ್ಗೆ ಸ್ಪಷ್ಟ ಚಿತ್ರಣ ನೀಡುವಲ್ಲಿ ಯಶಸ್ವಿಯಾಗಿವೆಯಲ್ಲದೆ, ಅದರ ಸರ್ವವ್ಯಾಪಕತೆಯ ಬಗ್ಗೆ ತಿಳಿಸುತ್ತವೆ. ಯಾವುದೇ ಜನರ ಸಮೂಹ, ನಿಶ್ಚಿತ ಭೌಗೋಳಿಕ ಪ್ರದೇಶದಲ್ಲಿ ವಾಸಿಸುತ್ತಿದ್ದು, ಸಾಮಾನ್ಯ ಜೀವನದ ಮೂಲಾಂಶಗಳನ್ನು ಹಂಚಿಕೊಂಡು ಅಲ್ಲಿನ ಸದಸ್ಯರು ತಮ್ಮನ್ನು ಆ ನಿಶ್ಚಿತ ಭೌಗೋಳಿಕ ಪ್ರದೇಶದ ಹೆಸರಲ್ಲಿ ಗುರುತಿಸಿಕೊಂಡು, ಅವರಲ್ಲಿ ಐಕ್ಯತೆ ಕಂಡುಬಂದರೆ, ಅದನ್ನು ಸಮುದಾಯವೆನ್ನಬಹುದು. ಸಮುದಾಯದಲ್ಲಿ ಬಹು ಆಸಕ್ತಿಗನುಗುಣವಾಗಿ ಅದರೊಳಗೇ ಅನೇಕ ಸಂಘ-ಸಂಸ್ಥೆಗಳು ತಲೆಎತ್ತುತ್ತವೆ. ತೀರಾ ಸರಳವಾದ ಆದಿವಾಸಿ ಸಮುದಾಯದಿಂದ ತೊಡಗಿ ಸಂಕೀರ್ಣ ಹಂತದ ಗ್ರಾಮ, ನಗರ, ದೇಶ ಇತ್ಯಾದಿಗಳು ಸಮುದಾಯಕ್ಕೆ ಉದಾಹರಣೆಗಳಾಗಿ ಕಂಡುಬರುತ್ತವೆ.

ಸಮುದಾಯದ ಲಕ್ಷಣಗಳು

ಸಮಾಜಶಾಸ್ತ್ರಜ್ಞರು ಸಮುದಾಯವನ್ನು ಮೂರು ಲಕ್ಷಣಗಳ ಹಿನ್ನೆಲೆಯಲ್ಲಿ ವಿವರಿಸಲು ಪ್ರಯತ್ನಿಸಿದ್ದಾರೆ. ಮೊದಲನೆಯದಾಗಿ ಒಂದು ನಿರ್ದಿಷ್ಟ ಸ್ಥಳೀಯ ಭೌಗೋಳಿಕ ಪ್ರದೇಶದಲ್ಲಿ ಇರುವಂತಹ ಜನಸಂಖ್ಯೆಯ ನೆಲೆಯೇ ಸಮುದಾಯ. ಎರಡನೆಯದಾಗಿ ಸಮುದಾಯವು ಒಂದು ಸ್ಥಳೀಯ ಸಾಮಾಜಿಕ ವ್ಯವಸ್ಥೆಯಾಗಿದೆ. ಮೂರನೆಯದಾಗಿ, ಸಮುದಾಯವು ಪರಸ್ಪರಾವಲಂಬನೆಯ ಸಂಬಂಧಗಳನ್ನು ಹೊಂದಿದೆ ಎಂದು ವ್ಯಾಖ್ಯಾನಿಸಲ್ಪಡುತ್ತದೆ. ಸಮುದಾಯದಲ್ಲಿ ವ್ಯಕ್ತಿಗಳು ತಮ್ಮ ತಮ್ಮನ್ನು ಅರ್ಥಪೂರ್ಣವಾಗಿ ಗುರುತಿಸಿಕೊಂಡಿರುತ್ತಾರೆ. ಅಲ್ಲದೆ ಸಮೂಹದ ಅನುಭವವನ್ನು ಪರಸ್ಪರ ಹಂಚಿಕೊಂಡು ಬಾಳುತ್ತಾರೆ. ಒಂದು ವೇಳೆ ಭೌಗೋಳಿಕವಾಗಿ ಸದಸ್ಯರು ಬೇರೆ ಬೇರೆ ವಾಸಿಸುತ್ತಿದ್ದರೂ ಅವರು ಈ ಸಾಮುದಾಯಿಕ ಭಾವನೆಯನ್ನು ಹೊಂದಿರುತ್ತಾರೆ.

ಪಾಲ್.ಬಿ. ಹಾರ್ಟನ್ ಮತ್ತು **ಚೆಸ್ಟರ್ ಎಲ್. ಹಂಟ್** ಅವರು ತಮ್ಮ 'ಸಮಾಜಶಾಸ್ತ್ರ' ಗ್ರಂಥದಲ್ಲಿ ಸಮುದಾಯವು ಒಳಗೊಂಡಿರುವ ಆರು ಲಕ್ಷಣಗಳನ್ನು ಪ್ರಸ್ತಾಪಿಸುತ್ತಾರೆ: ೧. ಜನರ ಸಮೂಹ ೨. ಒಂದು ನಿಶ್ಚಿತ ಭೌಗೋಳಿಕ ಪ್ರದೇಶದಲ್ಲಿ ವಾಸಿಸುವುದು ೩. ಶ್ರಮವಿಭಜನೆ ಹಾಗೂ ಪರಸ್ಪರ ಅವಲಂಬನೆ ೪. ಒಂದು ಸಾಮಾನ್ಯ ಸಂಸ್ಕೃತಿ ಮತ್ತು ಜನರ ಚಟುವಟಿಕೆಗಳನ್ನು ಸಂಘಟಿಸುವಂತಹ ಒಂದು ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರುವುದು ೫. ಸದಸ್ಯರಲ್ಲಿ ನಾವೆಲ್ಲ ಒಂದೆ ಎಂಬ ಐಕ್ಯಭಾವನೆಯ ಪ್ರಜ್ಞೆ ೬. ಸದಸ್ಯರು ಸಾಮೂಹಿಕವಾಗಿ ಸಂಘಟಿತ ರೀತಿಯಲ್ಲಿ ವರ್ತಿಸುವುದು.

ಈ ವಿವರಣೆ ಸಮುದಾಯದ ಸ್ವರೂಪ ಹಾಗೂ ಹಲವಾರು ಲಕ್ಷಣಗಳ ಬಗ್ಗೆ ಬೆಳಕು ಚೆಲ್ಲಿದರೂ, ಬಹುತೇಕ ಸಮಾಜಶಾಸ್ತ್ರೀಯ ವಿಶ್ಲೇಷಣೆಗಳಲ್ಲಿ, ನಿಶ್ಚಿತ ಭೌಗೋಳಿಕ ಪ್ರದೇಶ, ನಿರ್ದಿಷ್ಟ ಹೆಸರು ಮತ್ತು ಸಾಮುದಾಯಿಕ ಭಾವನೆಗಳನ್ನು ಸಮುದಾಯದ ಪ್ರಧಾನ ಲಕ್ಷಣಗಳೆಂದು ಪರಿಗಣಿಸಲಾಗಿದೆ.

೧. ನಿಶ್ಚಿತವಾದ ಭೂಪ್ರದೇಶ

ಒಂದು ಸಮುದಾಯವು ಯಾವಾಗಲೂ ನಿಶ್ಚಿತ ಭೂಪ್ರದೇಶವನ್ನು ಹೊಂದಿರುತ್ತದೆ. ಒಂದು ಅಲೆಮಾರಿ ಸಮುದಾಯವೂ ಕೂಡ ಒಂದು ನಿರ್ದಿಷ್ಟ ಸಮಯದಲ್ಲಿ ನಿಶ್ಚಿತ ಭೂ ಪ್ರದೇಶದಲ್ಲಿ ಬೀಡು ಬಿಟ್ಟಿರುತ್ತದೆ. ಆದರೆ ಬಹುತೇಕ ಸಮುದಾಯಗಳು ಶಾಶ್ವತ ನೆಲೆ ಹೊಂದಿರುತ್ತವೆ. ಸಮುದಾಯಗಳಿಗೆ ಈ ಗುಣವಿರುವುದರಿಂದ, ಅಲ್ಲಿನ ಸದಸ್ಯರು ತಾವಿರುವ ಭೌತಿಕ ನೆಲೆಯ ಬಗ್ಗೆ ಆಳವಾದ ಆತ್ಮೀಯ ಭಾವನೆಯನ್ನು ಬೆಳೆಸಿಕೊಳ್ಳಲು ಸಹಾಯವಾಗುತ್ತದೆ. ನಿರ್ದಿಷ್ಟ ಭೂಪ್ರದೇಶ ಸದಸ್ಯರಿಗೆ ಒಂದೆಡೆ ನೆಲೆಸಲು ಅವಕಾಶ ಸೃಷ್ಟಿಸುವುದರಿಂದ, ಅವರ ನಡುವೆ ನಿರಂತರವಾದ ಸಂಪರ್ಕ ಹಾಗೂ ಅಂತಕ್ರಿಯೆಗಳು ಏರ್ಪಟ್ಟು ಹಲವಾರು ಬಗೆಯ ಸಾಮಾಜಿಕ ಸಂಬಂಧಗಳು ಕಂಡುಬರುತ್ತವೆ. ನಿಶ್ಚಿತ ಭೂ ಪ್ರದೇಶದ ಕಾರಣದಿಂದ ಸಮುದಾಯದಲ್ಲಿ ಸದಸ್ಯರು ಮಾನಸಿಕವಾಗಿ ಭದ್ರತೆಯ

ಭಾವನೆಯನ್ನು ಹೊಂದಿರುತ್ತಾರೆ. ಸಮುದಾಯದ ಭೌತಿಕ ನೆಲೆಯು ಅಲ್ಲಿನ ಸದಸ್ಯರ ಜೀವನದ ಸಮಸ್ತ ಚಟುವಟಿಕೆಗಳ ಮೇಲೆ ನಿರ್ಣಾಯಕವಾದ ಪ್ರಭಾವವನ್ನು ಬೀರುತ್ತದೆ. ಆದರೆ ಆಧುನಿಕ ಜಗತ್ತಿನಲ್ಲಿ ಶೀಘ್ರಗತಿಯ ಸಾರಿಗೆ-ಸಂಪರ್ಕ ಹಾಗೂ ಸಂವಹನ ಸಾಧನಗಳ ಪ್ರಗತಿಯಿಂದಾಗಿ ಸಮುದಾಯದ ಸದಸ್ಯರು ತಮ್ಮ ಭೌತಿಕ ನೆಲೆಯ ಪರಿಧಿ ವಿಸ್ತಾರಗೊಳ್ಳಲೂ ಸಹ ಕಾರಣವಾಗಿದೆ. ಸಮುದಾಯ ಬೃಹತ್ತಾದಂತೆಲ್ಲ ಸಾಮಾಜಿಕ ಸಾಮರಸ್ಯ ಹಾಗೂ ಭೌತಿಕ ನೆಲೆಯ ನಡುವೆ ಇರುವ ಸಂಬಂಧ ಕೃಶವಾಗುತ್ತಾ ಹೋಗುತ್ತದೆ. ಒಟ್ಟಾರೆ ಸಮುದಾಯದ ಅಸ್ತಿತ್ವಕ್ಕೆ ಭೌತಿಕ ಪ್ರದೇಶ ಮೂಲಭೂತವಾದ ಅಂಶವಾಗಿರುವುದಲ್ಲದೆ ಕ್ರಮೇಣ ಈ ಭೌತಿಕ ಪರಿಸರವೇ ಒಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರವಾಗಿಯೂ ಮಾರ್ಪಾಡಾಗುತ್ತದೆ. ಈ ಅಂಶವು ಸಮುದಾಯದಲ್ಲಿ ಭೌತ ಹಾಗೂ ಅಭೌತ ಸಂಸ್ಕೃತಿಗಳ ಬೆಳವಣಿಗೆಗೆ ಕಾರಣವಾಗಿ ಸಮುದಾಯಗಳು ಸಂಕೀರ್ಣಗೊಳ್ಳಲು ಅವಕಾಶ ಕಲ್ಪಿಸುತ್ತದೆ.

೨. ನಿರ್ದಿಷ್ಟ ಹೆಸರು

ಪ್ರತಿಯೊಂದು ಸಮುದಾಯಕ್ಕೂ ನಿರ್ದಿಷ್ಟ ಹೆಸರಿರುತ್ತದೆ. ಹೆಚ್ಚಾಗಿ ಈ ಹೆಸರು ಪ್ರಾದೇಶಿಕ ನೆಲೆಯಿಂದ ಬರುತ್ತದೆ. ಅಂದರೆ ಸಮುದಾಯದಲ್ಲಿ ಅನನ್ಯತೆಯ ಪ್ರಜ್ಞೆಯನ್ನು ಬೆಳೆಸಲು ಇದು ಕಾರಣವಾಗುತ್ತದೆ.

೩. ಸಾಮುದಾಯಿಕ ಭಾವನೆ

ಸದಸ್ಯರು ಪರಸ್ಪರ ಹೊಂದಿರುವ ಸಾಮುದಾಯಿಕ ಭಾವನೆಯೂ ಸಹ ಸಮುದಾಯದ ನಿರ್ಮಾಣದಲ್ಲಿ ಅವಶ್ಯಕವಾಗಿರುತ್ತದೆ. ಸಾಮುದಾಯಿಕ ಭಾವನೆ ಸಮುದಾಯದ ಸದಸ್ಯರಲ್ಲಿ ಮೂಡಬೇಕಾದರೆ, ನಾವು-ನಮ್ಮವರು, ನಮ್ಮ ಜನ ಎಂಬ ಭಾವನೆಗಳನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿರುತ್ತದೆ. ನಾವೆಲ್ಲರೂ ಈ ಸಮುದಾಯಕ್ಕೆ ಸೇರಿದವರು, ಇದು ನಮ್ಮ ಸಮುದಾಯ ಎಂಬ ಭಾವನೆಯೇ ಸಾಮುದಾಯಿಕ ಭಾವನೆ. ಸಮುದಾಯದ ಸದಸ್ಯರು ಪರಸ್ಪರ ಸುಖ-ದುಃಖಗಳಲ್ಲಿ ಭಾಗಿಯಾಗುವ ಮನೋಭಾವನೆಯನ್ನು ಹೊಂದಿರುತ್ತಾರೆ. ಅವರಲ್ಲಿ ಮಾನಸಿಕವಾಗಿ ಸಮಾನ ಆಸಕ್ತಿ, ಒಲವುಗಳು ಇದ್ದು ಪರಸ್ಪರ ಆತ್ಮೀಯ ಭಾವನೆ ಬೆಳೆಯಲು ಕಾರಣವಾಗುತ್ತದೆ. ಇವೆಲ್ಲವೂ ಸಾಮುದಾಯಿಕ ಭಾವನೆಯ ಬೆಳವಣಿಗೆಗೆ ಪೂರಕವಾದುವು.

ಸಮುದಾಯದ ಜನರಲ್ಲಿ ಸಮಾನ ಅಭಿರುಚಿಗಳು, ದೃಷ್ಟಿಕೋನ, ಜೀವನ ಶೈಲಿ ಇದ್ದಾಗ ಮಾತ್ರ ಸಾಮುದಾಯಿಕ ಭಾವನೆ ಜಾಗೃತಗೊಂಡಿರುತ್ತದೆ. ಸುದೀರ್ಘ ಕಾಲದವರೆಗೆ ಜನರು ಒಂದೆಡೆ ನೆಲೆಸಿದಾಗ, ಸಹಜವಾಗಿ ತಮ್ಮ ಜನರೊಂದಿಗೆ ಹಾಗೂ ನೆಲದೊಂದಿಗೆ ಭಾವನಾತ್ಮಕ ಬೆಸುಗೆಯನ್ನು ಹೊಂದುತ್ತಾರೆ. ಇದು ಸದಸ್ಯರಿಗೆ ಮಾನಸಿಕ ನೆಮ್ಮದಿಯನ್ನು ನೀಡುತ್ತದೆ. ವ್ಯಕ್ತಿ ತನ್ನ ಸಮುದಾಯದೊಂದಿಗಿನ ನಂಟನ್ನು ಸುಲಭವಾಗಿ ಕಡಿದುಕೊಳ್ಳಲಾರ. ಆದರೆ ಇಂದಿನ ಆಧುನಿಕ ಜಗತ್ತಿನಲ್ಲಿ, ನಾಗರಿಕತೆ ಬೆಳೆದಂತೆಲ್ಲ ಸಮುದಾಯಗಳ ನಡುವಿನ

ಭೌತಿಕದೂರ ಕಡಿಮೆಯಾಗುತ್ತಿದೆ. ನಿರ್ದಿಷ್ಟವಾಗಿ ಸಮುದಾಯಗಳ ನಡುವೆ ಸೀಮಾರೇಖೆಯನ್ನು ಗುರುತಿಸಲು ಕಷ್ಟವಾಗುತ್ತಿದೆ. ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳ ಕ್ಷೇತ್ರಗಳಲ್ಲಿ ಉಂಟಾಗಿರುವ ಮಹತ್ತರ ಬೆಳವಣಿಗೆಯಿಂದಾಗಿ ಹಿಂದೆ ಇದ್ದ ಸ್ವಪರಿಪೂರ್ಣ ಹಾಗೂ ಸ್ವಯಂ-ತೃಪ್ತ ಸಮುದಾಯಗಳು ಕಣ್ಮರೆಯಾಗಿವೆ. ಆದರೂ ಕೆಲವು ಸಮುದಾಯಗಳು ಸಾಮಾಜಿಕ ಸಂಪರ್ಕವನ್ನು ಉಳಿಸಿಕೊಂಡು, ಸಾಮುದಾಯಿಕ ಭಾವನೆಯನ್ನು ಜಾಗೃತವಾಗಿರಿಸಿಕೊಂಡಿವೆ.

ಸಮುದಾಯದ ಇತರ ಲಕ್ಷಣಗಳು

ಸಮುದಾಯದ ಗಾತ್ರ

ಸಮುದಾಯಗಳು ಭೌತಿಕ ನೆಲೆಯ ವ್ಯಾಪ್ತಿ ಹಾಗೂ ಜನಸಂಖ್ಯೆಯ ಗಾತ್ರವನ್ನು ಆಧರಿಸಿ ವ್ಯತ್ಯಾಸ ಹೊಂದುವವು. ಕೆಲವೇ ಕುಟುಂಬಗಳಿರುವ ಚಿಕ್ಕ ಸಮುದಾಯಗಳಿರಬಹುದು. ಇಲ್ಲವೆ ಅಪರಿಮಿತ ಕುಟುಂಬಗಳಿರುವಂತಹ ಬೃಹತ್ ಸಮುದಾಯಗಳಿರಬಹುದು. ಸಮುದಾಯಗಳ ನಡುವಿನ ಸೀಮಾರೇಖೆಯನ್ನು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಿಲ್ಲ. ಅವುಗಳ ಗಾತ್ರಕ್ಕನುಗುಣವಾಗಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಲಾಗುತ್ತದೆ. ಉದಾಹರಣೆಗೆ : 'ಹಳ್ಳಿ', 'ಪಟ್ಟಣ', 'ನಗರ', 'ರಾಜ್ಯ', ದೇಶ ಇತ್ಯಾದಿ. ಬೃಹತ್ ಸಮುದಾಯವಾದ ರಾಷ್ಟ್ರ ಸಮುದಾಯದೊಳಗೆ ಎಲ್ಲ ರೀತಿಯ ಸಮುದಾಯಗಳು ಇರುತ್ತವೆ. ಬಹುರಾಷ್ಟ್ರೀಯ ಸಂಸ್ಕೃತಿಯ ಕಾರಣದಿಂದಾಗಿ ಸಮುದಾಯ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ವಿಶ್ವ ಸಮುದಾಯದತ್ತ ಸಾಗುತ್ತಿದೆ.

ಸ್ಥಿರತೆ

ಸಮುದಾಯಗಳಲ್ಲಿ ಜನರು ಒಂದೆಡೆ ಶಾಶ್ವತವಾಗಿ ನೆಲೆಸುವ ಕಾರಣದಿಂದ, ಅದು ಸ್ಥಿರತೆಯ ಗುಣವನ್ನು ಹೊಂದಿರುತ್ತದೆ. ಸ್ವಾಭಾವಿಕವಾಗಿ ವ್ಯಕ್ತಿಗಳ ಆಗಮನ ಮತ್ತು ನಿರ್ಗಮನ ಪ್ರಕ್ರಿಯೆ ನಡೆಯುತ್ತಿರುವಂತೆ ಸಮುದಾಯದ ಜೀವನ ಕ್ರಿಯೆ ಅವ್ಯಾಹತವಾಗಿ ಸಾಗುತ್ತಿರುತ್ತದೆ. ಮೂಲಭೂತ ಉದ್ದೇಶಗಳನ್ನು ಉಳಿಸಿಕೊಳ್ಳುತ್ತಲೇ ಪರಿವರ್ತನೆಗೆ ಅದು ತನ್ನನ್ನು ತೆರೆದುಕೊಂಡಿರುತ್ತದೆ. ವ್ಯಕ್ತಿ ಸಮುದಾಯದ ಸದಸ್ಯನಾಗಿದ್ದುಕೊಂಡು ಸಂಪಾದಿಸಿದ ಭೌತಿಕ ಸಂಪತ್ತು, ಆತನನ್ನು ಶಾಶ್ವತವಾಗಿ ಒಂದೆಡೆ ನೆಲೆಯೂರುವಂತೆ ಮಾಡುತ್ತದೆ. ಇದರಿಂದಾಗಿ ಸಮುದಾಯಗಳು ಸ್ಥಿರ ಸ್ವರೂಪದವುಗಳಾಗಿರುತ್ತವೆ.

ಸ್ವಾಭಾವಿಕತೆ

ಉದ್ದೇಶಿತ ಹಾಗೂ ಬುದ್ಧಿಪೂರ್ವಕ ಪ್ರಯತ್ನಗಳಿಲ್ಲದೆ, ಸಮುದಾಯವು ತನ್ನಷ್ಟಕ್ಕೆ ತಾನೇ ರೂಪುಗೊಳ್ಳುತ್ತದೆ. ವ್ಯಕ್ತಿಯು ಒಂದು ಸಮುದಾಯದಲ್ಲಿ ಹುಟ್ಟುವುದು ಅದರ ಸದಸ್ಯನಾದಂತೆಯೇ. ಸದಸ್ಯನಾಗಲು ಬೇರೆ ಇನ್ನಾವುದೇ ಅರ್ಹತೆಗಳು ಅಗತ್ಯವಿಲ್ಲ. ಇದರ ಅಸ್ತಿತ್ವಕ್ಕೆ ಪೂರ್ವ ಸಿದ್ಧತೆಗಳು ಅಥವಾ ನೀತಿ-ನಿರೂಪಣೆಗಳು ಅವಶ್ಯಕವಿಲ್ಲ. ಸಮುದಾಯವು

ಸ್ವತಃ ಪ್ರವರ್ತಿತವಾದದ್ದಾಗಿ, ನಿಧಾನಗತಿಯಲ್ಲಿ ವಿಕಾಸ ಹೊಂದುತ್ತದೆ. ಒಂದು ಪ್ರದೇಶದಲ್ಲಿ ಲಭ್ಯವಾಗುವಂತಹ ಅನುಕೂಲತೆಗಳು ಸಮುದಾಯದ ಹುಟ್ಟಿಗೆ ಕಾರಣವಾಗುತ್ತವೆ.

ಸಾಮಾಜಿಕ ನಿಯಂತ್ರಣ

ಪ್ರತಿಯೊಂದು ಸಮುದಾಯವು ತನ್ನದೇ ಸಾಮಾಜಿಕ ನಿಯಂತ್ರಣ ವ್ಯವಸ್ಥೆಯನ್ನು ಹೊಂದಿರುತ್ತದೆ. ಸಮುದಾಯವು ವಿಕಾಸಗೊಂಡಂತೆ ತನ್ನ ಸದಸ್ಯರ ನಡೆವಳಿಕೆಗಳನ್ನು ನಿರ್ದೇಶಿಸಲು ಸಾಮಾಜಿಕ ನಿಯಮಗಳನ್ನು ರೂಪಿಸುತ್ತದೆ. ಆಯಾ ಸಮುದಾಯಗಳ ಸ್ವರೂಪದ ಆಧಾರದ ಮೇಲೆ ಈ ನಿಯಮಗಳು ರಚಿತವಾಗುತ್ತವೆ. ಸಾಂಪ್ರದಾಯಿಕ ಸಮುದಾಯಗಳಲ್ಲಿ ಅನೌಪಚಾರಿಕ ಸಾಮಾಜಿಕ ನಿಯಮಗಳಿರುತ್ತವೆ. ಅಲ್ಲಿನ ಸದಸ್ಯರು ಇವುಗಳಿಗೆ ಬದ್ಧರಾಗಿರಬೇಕು ಎಂದು ಸಮುದಾಯ ನಿರೀಕ್ಷಿಸುತ್ತದೆ. ಸಮುದಾಯದ ರೀತಿ-ನೀತಿಗಳು, ನಿಯಮಗಳು ಅಲ್ಲಿನ ಜನರ ಜೀವನ ಪ್ರಕ್ರಿಯೆಯಲ್ಲಿ ಹಾಸುಹೊಕ್ಕಾಗಿರುತ್ತವೆ. ಆಧುನಿಕ ಸಂಕೀರ್ಣ ಸಮುದಾಯಗಳಲ್ಲಿ ಔಪಚಾರಿಕ ನಿಯಂತ್ರಣದ ಸಾಧನಗಳಾದ ಶಾಸನಗಳು, ಪೊಲೀಸ್, ನ್ಯಾಯಾಲಯ ಇತ್ಯಾದಿ ಕಾರ್ಯಾಚರಣೆಯಲ್ಲಿದ್ದು ಸದಸ್ಯರ ನಡೆವಳಿಕೆಗಳನ್ನು ನಿಯಂತ್ರಿಸುತ್ತವೆ. ಹೀಗೆ ಸಮುದಾಯವೆ ಸಾಮಾಜಿಕ ನಿಯಂತ್ರಣದ ಸಾಧನವಾಗಿರುತ್ತದೆ.

ಅಮೆರಿಕಾದ ಸಮಾಜಶಾಸ್ತ್ರಜ್ಞ **ರೊಲ್ಯಾಂಡ್ ವಾರೆನ್** ಒಂದು ಸಮುದಾಯ ನಿರ್ವಹಿಸಬಹುದಾದ ಐದು ಕಾರ್ಯಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅವುಗಳೆಂದರೆ : ಸಾಮಾಜೀಕರಣ, ಆರ್ಥಿಕ ಕಲ್ಯಾಣ, ಸಾಮಾಜಿಕ ಪಾಲ್ಗೊಳ್ಳುವಿಕೆ, ಸಾಮಾಜಿಕ ನಿಯಂತ್ರಣ ಮತ್ತು ಪರಸ್ಪರ ಬೆಂಬಲ. ಸಮುದಾಯವು ವ್ಯಕ್ತಿ ಜೀವನದ ಸಕಲ ಚಟುವಟಿಕೆಗಳು ನಡೆಯುವ ರಂಗಸ್ಥಲವಾಗಿದೆ. ವ್ಯಕ್ತಿಯ ಹುಟ್ಟು, ವ್ಯಕ್ತಿತ್ವ ವಿಕಾಸ ಮತ್ತು ಸಾವು ಪ್ರತಿಯೊಂದು ಘಟನೆಗಳೂ ಸಮುದಾಯದ ಚೌಕಟ್ಟಿನೊಳಗೇ ನಡೆಯುತ್ತವೆ.

ಸಮಾಜ ಮತ್ತು ಸಮುದಾಯಗಳ ನಡುವಿನ ವ್ಯತ್ಯಾಸಗಳು

ಸಮಾಜ ಹಾಗೂ ಸಮುದಾಯಗಳ ಅರ್ಥ, ಲಕ್ಷಣಗಳು ಮತ್ತು ಕಾರ್ಯಗಳನ್ನು ಆಧರಿಸಿ ಕೆಲವು ವ್ಯತ್ಯಾಸಗಳನ್ನು ಗುರುತಿಸಬಹುದು. ಅಂತಹ ವ್ಯತ್ಯಾಸಗಳೆಂದರೆ :

೧. ಸಮಾಜ : ಸಮಾಜವು ಸಾಮಾಜಿಕ ಸಂಬಂಧಗಳ ಬಲೆಯನ್ನು ಹೊಂದಿರುವ ಒಂದು ಸಂಕೀರ್ಣ ವ್ಯವಸ್ಥೆಯಾಗಿದೆ.

ಸಮುದಾಯ : ಒಂದು ನಿಶ್ಚಿತ ಪ್ರದೇಶದಲ್ಲಿ ವಾಸಿಸುತ್ತಿದ್ದು ನಾವು-ನಮ್ಮವರು ಎಂಬ ಭಾವನೆಯನ್ನು ಹೊಂದಿರುವ ಸಾಮಾಜಿಕ ಸಮೂಹವೇ ಸಮುದಾಯವಾಗಿದೆ.

೨. ಸಮಾಜ : ಸಮಾಜಕ್ಕೆ ನಿಶ್ಚಿತ ಭೂ ಪ್ರದೇಶದ ಮಿತಿಗಳಿಲ್ಲ.

ಸಮುದಾಯ : ಸಮುದಾಯದ ನಿಜವಾದ ಅಸ್ತಿತ್ವ ನಿಶ್ಚಿತ ಭೂ ಪ್ರದೇಶವನ್ನೆ ಅವಲಂಬಿಸಿದೆ.

೩. ಸಮಾಜ : ಸಮಾಜದ ಇರುವಿಕೆಯು ನಮ್ಮ ಕಲ್ಪನೆಯನ್ನು ಆಧರಿಸಿದೆ. ಆದ್ದರಿಂದ ಸಮಾಜವು ಅಮೂರ್ತ ಸ್ವರೂಪದ್ದಾಗಿದೆ.

ಸಮುದಾಯ : ಸಮುದಾಯವು ನಿರ್ದಿಷ್ಟ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವುದರಿಂದ, ಅದು ಮೂರ್ತ ಸ್ವರೂಪದ್ದಾಗಿದೆ. ಅಂದರೆ ನಿಶ್ಚಿತ ರೂಪದಲ್ಲಿ ಕಂಡುಬರುತ್ತದೆ.

೪. ಸಮಾಜ : ಸಮಾಜದ ನಾಮಾಂಕಿತವು ಸಾಂಸ್ಕೃತಿಕ ನೆಲೆಯನ್ನು ಹೊಂದಿರುತ್ತದೆ.

ಸಮುದಾಯ : ಸಮುದಾಯಗಳನ್ನು ಅವುಗಳ ಭೌತಿಕ ನೆಲೆಯ ಆಧಾರದ ಮೇಲೆ, ನಿರ್ದಿಷ್ಟ ನಾಮಾಂಕಿತದಿಂದ ಗುರುತಿಸಲಾಗುತ್ತದೆ.

೫. ಸಮಾಜ : ಸಮಾಜದ ಸದಸ್ಯರಲ್ಲಿ ಐಕ್ಯತೆಯ ಪ್ರಜ್ಞೆಯು ಹೆಚ್ಚು ಲಘುವಾಗಿರುತ್ತದೆ.

ಸಮುದಾಯ : ಆದರೆ ಪ್ರತಿಯೊಂದು ಸಮುದಾಯದ ಸದಸ್ಯರಲ್ಲಿ ಐಕ್ಯತೆಯ ಪ್ರಜ್ಞೆಯು ಹೆಚ್ಚು ಜಾಗೃತಗೊಂಡಿರುತ್ತದೆ.

೬. ಸಮಾಜ : ಸಮಾಜವು ವಿಶಾಲವಾಗಿದ್ದು, ಅದರ ಅಂತರ್ಯದಲ್ಲಿ ಹಲವಾರು ಸಮುದಾಯಗಳು ಅಸ್ತಿತ್ವದಲ್ಲಿರುತ್ತವೆ.

ಸಮುದಾಯ : ಸಮುದಾಯಗಳು ಚಿಕ್ಕ ಗಾತ್ರವನ್ನು ಹೊಂದಿ ಸಮಾಜದ ಭಾಗಗಳಂತೆ ಕಂಡು ಬರುತ್ತವೆ.

೭. ಸಮಾಜ : ಸಮಾಜದಲ್ಲಿ ಜನರು ಬಹಳ ವಿಸ್ತಾರವುಳ್ಳ ಧ್ಯೇಯೋದ್ದೇಶಗಳನ್ನು ಮತ್ತು ಅನನ್ಯ ಬಗೆಯ ಆಸಕ್ತಿಗಳನ್ನು ಹೊಂದಿರುತ್ತಾರೆ.

ಸಮುದಾಯ : ಸಮುದಾಯದ ಸದಸ್ಯರು ತಮ್ಮ ಸಮುದಾಯಕ್ಕೆ ಸೀಮಿತವಾದ ಧ್ಯೇಯೋದ್ದೇಶಗಳನ್ನು ಮತ್ತು ಆಸಕ್ತಿಗಳನ್ನು ಹೊಂದಿರುತ್ತಾರೆ.

೮. ಸಮಾಜ : ವಿಶಾಲವಾದ ಸಮಾಜದಲ್ಲಿ ಸಾಂಸ್ಕೃತಿಕ ಭಿನ್ನತೆಗಳೂ ಕೆಲವೊಮ್ಮೆ ವಿರೋಧಾಭಾಸಗಳೂ ಕಂಡುಬರಬಹುದು.

ಸಮುದಾಯ : ಆದರೆ ಸಮುದಾಯಗಳಲ್ಲಿ ಬಹುತೇಕ ಸಾಂಸ್ಕೃತಿಕ ಏಕರೂಪತೆಯನ್ನು ಕಾಣುತ್ತೇವೆ.

೩. ಸಂಘ

ಮಾನವನು ಸಂಘಗಳನ್ನು ಸ್ಥಾಪಿಸಿಕೊಳ್ಳುವುದರ ಮೂಲಕ ಆತನ ಸಮೂಹ ಜೀವನ ಪ್ರಕ್ರಮವನ್ನು ಪಡೆಯುತ್ತದೆ. ಮಾನವ ಸಂಘಗಳನ್ನು ಕಟ್ಟುವ ಜೀವಿ. ಪ್ರಜಾಸತ್ತಾತ್ಮಕ ಮೌಲ್ಯಗಳು ಪ್ರಧಾನವಾಗಿರುವ, ಇಂದಿನ ಆಧುನಿಕ ಸಮಾಜದಲ್ಲಿ, ಸಂಘಗಳು ಅತ್ಯಂತ ಗಹನವಾದ ಪಾತ್ರವನ್ನು ವಹಿಸುತ್ತಿವೆ. ಸಂಘಗಳು ವ್ಯಕ್ತಿಗಳ ಸಾಮೂಹಿಕ ಧ್ವನಿ. ಗುರಿಸಾಧನೆಯಲ್ಲಿ ಸಾಂಘಿಕ ಪ್ರಯತ್ನವು ವ್ಯಕ್ತಿ ಪ್ರಯತ್ನಕ್ಕಿಂತಲೂ ಶಕ್ತಿಯುತವಾದುದು. ವ್ಯಕ್ತಿ ಹಲವು ಉದ್ದೇಶಗಳನ್ನು ಹಾಗೂ ಆಶೋತ್ತರಗಳನ್ನು ಪೂರೈಸಿಕೊಳ್ಳಲು ಸಂಘಗಳನ್ನು

ಕಟ್ಟಲು ಮುಂದಾಗುತ್ತಾನೆ. ಆತನ ಜೀವನದಲ್ಲಿ ಇವುಗಳು ಬಹಳಷ್ಟು ಅನಿವಾರ್ಯವಾಗಿ, ಇವುಗಳ ಹೊರತಾದದ್ದು, ಆತನಿಗೆ ಕಷ್ಟದ ಬದುಕೆ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ 'ಸಂಘ' ಪದದ ಅರ್ಥ, ಲಕ್ಷಣಗಳು ಮತ್ತು ವಿಧಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ.

ವ್ಯಾಖ್ಯೆಗಳು

"ಯಾವುದೇ ಒಂದು ಸಮೂಹ ಸಾಮಾನ್ಯ ಬೇಡಿಕೆ ಅಥವಾ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಂಘಟಿತವಾದಾಗ ಸಂಘವಾಗುತ್ತದೆ" ಎಂದು **ಮೆಕೈವರ್** ತಿಳಿಸುತ್ತಾರೆ.

"ಒಂದು ನಿರ್ದಿಷ್ಟ ಉದ್ದೇಶ ಅಥವಾ ಸೀಮಿತ ಉದ್ದೇಶಗಳ ಸಾಧನೆಗಾಗಿ, ಯಾವುದೇ ಸಾಮಾಜಿಕ ಸಮೂಹ ಒಂದಾದರೆ ಅದನ್ನು ಸಂಘವೆಂದು ಕರೆಯಬಹುದು"

- ಪಿ. ಗಿಸ್‌ಬರ್ಟ್

"ನಿರ್ದಿಷ್ಟ ಉದ್ದೇಶವನ್ನು ಸಾಧಿಸಲು ಒಟ್ಟಾಗಿ ಕಾರ್ಯನಿರ್ವಹಿಸುವ ಜನರ ಸಮೂಹವನ್ನು ಸಂಘ" ಎಂದು ಕರೆಯುತ್ತೇವೆ **- ಈ.ಎಸ್. ಬೊಗಾರ್ಡಸ್.**

"ಸಾಂಸ್ಥಿಕ ರೂಪದ ಸಂಘಟನೆಯನ್ನು ಸ್ಥಾಪಿಸುವುದರ ಮೂಲಕ ನಿರ್ದಿಷ್ಟ ಗುರಿಗಳನ್ನು ಸಾಧಿಸಲು ಪ್ರಯತ್ನಿಸುವಂತಹ ಅಂತರ ಸಂಬಂಧವಿರುವ ಯಾವುದೇ ಒಂದು ಸಾಮಾಜಿಕ ಸಮೂಹವನ್ನು ಸಂಘ" ಎಂದು ಕರೆಯಬಹುದು **- ಗಿನ್ಸ್‌ಬರ್ಗ್.**

ಸಮಾಜದಲ್ಲಿ ಯಾವುದೇ ಒಂದು ಸಾರ್ವಜನಿಕ ಸಮೂಹ ನಿರ್ದಿಷ್ಟ ಉದ್ದೇಶ ಅಥವಾ ಉದ್ದೇಶಗಳ ಸಾಧನೆಗಾಗಿ, ವ್ಯಾಪಾರಿ ಮನೋಭಾವವಿಲ್ಲದೆ ಮತ್ತು ವ್ಯಕ್ತಿಯ ಇಚ್ಛೆಯ ಮೇರೆಗೆ ಸದಸ್ಯತ್ವಕ್ಕೆ ಅವಕಾಶ ಕಲ್ಪಿಸಿ, ಔಪಚಾರಿಕವಾಗಿ ರಚನೆಗೊಂಡಾಗ ಅದನ್ನು ಸಂಘವೆನ್ನುತ್ತೇವೆ. ವ್ಯಕ್ತಿಯ ಕೆಲವು ನಿರ್ದಿಷ್ಟ ಹಿತಾಸಕ್ತಿಗಳನ್ನು ಪೂರೈಸುವ ಸಲುವಾಗಿಯೇ ಸಂಘಗಳು ಹುಟ್ಟುತ್ತವೆ. ಉದಾಹರಣೆಗೆ ಜ್ಞಾನ ಪ್ರಸಾರಕ್ಕಾಗಿ ಸ್ಥಾಪನೆಗೊಳ್ಳುವ ಶಾಲೆ, ದೇಶವನ್ನು ರಕ್ಷಿಸುವ ದೃಷ್ಟಿಯಿಂದ ರಚಿತವಾಗುವ ಸೈನ್ಯ, ಕಾರ್ಮಿಕ ಹಿತಾಸಕ್ತಿಗಳನ್ನು ಕಾಪಾಡುವ ಕಾರ್ಮಿಕ ಸಂಘಗಳು, ರಾಜಕೀಯ ಪಕ್ಷಗಳು, ಧಾರ್ಮಿಕ ಸಂಘಗಳು ಇತ್ಯಾದಿ.

ಪ್ರಾಚೀನ ಕಾಲದಲ್ಲಿ ಸಮಾಜಗಳು ಸರಳವಾಗಿದ್ದು, ಕೆಲವೇ ಸಂಘಗಳು, ಮಾನವರ ಎಲ್ಲ ಬೇಡಿಕೆಗಳನ್ನು ಪೂರೈಸುತ್ತಿದ್ದುವು. ಇಂದು ಸಮಾಜ ವೈವಿಧ್ಯದಿಂದ ಕೂಡಿ ಸಂಕೀರ್ಣ ಸ್ವರೂಪವನ್ನು ಪಡೆದುಕೊಂಡಿದೆ. ಜನರ ವಿಭಿನ್ನ ಬೇಡಿಕೆಗಳನ್ನು ಪೂರೈಸಲು ಅನೇಕಾನೇಕ ಸಂಘಗಳು ಹುಟ್ಟಿಕೊಂಡಿವೆ. ಸಂಘದ ಬದುಕಿನ ಅನಿವಾರ್ಯತೆ ವ್ಯಕ್ತಿಗೆ ಇಂದು ಬಹಳಷ್ಟಿದೆ. ತನ್ನ ಬದುಕಿನ ವಿವಿಧ ಹಂತಗಳಲ್ಲಿ ಅನೇಕ ಸಂಘಗಳ ಸದಸ್ಯನಾಗಿರುತ್ತಾನೆ. ಯಾವುದೇ ಒಂದು ಸಂಘವು ಆತನ ಎಲ್ಲಾ ಬಯಕೆಗಳನ್ನು ಪೂರೈಸಲಾರದು. ಆತನ ಹಲವಾರು ಕ್ಷೇತ್ರಗಳಲ್ಲಿನ ವಿವಿಧ ಬಯಕೆಗಳಿಗನುಗುಣವಾಗಿ ವಿವಿಧ ಬಗೆಯ ಸಂಘಗಳು ಸಮಾಜದಲ್ಲಿ ಅಸ್ತಿತ್ವದಲ್ಲಿವೆ. ಅಂತಹ ಕೆಲವು ಸಂಘಗಳನ್ನು ಇಲ್ಲಿ ಹೆಸರಿಸಬಹುದು. ಉದಾ: ಧಾರ್ಮಿಕ ಸಂಘಗಳು, ಆಧ್ಯಾತ್ಮಿಕ ಸಂಘಗಳು, ಸಾಂಸ್ಕೃತಿಕ ಸಂಘಗಳು, ವೃತ್ತಿಪರ ಸಂಘಗಳು,

ವಿದ್ಯಾರ್ಥಿ ಸಂಘಗಳು, ರಾಜಕೀಯ ಸಂಘಗಳು, ಅಂತಾರಾಷ್ಟ್ರೀಯ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ಕ್ರೀಡಾ ಸಂಘಟನೆಗಳು ಇತ್ಯಾದಿ.

ಸಂಘದ ಲಕ್ಷಣಗಳು

ಸಮಾಜಶಾಸ್ತ್ರಜ್ಞರು ಸಂಘದ ಕೆಲವು ಲಕ್ಷಣಗಳನ್ನು ಗುರುತಿಸಿದ್ದಾರೆ. ಅವು ಈ ಕೆಳಗಿನಂತಿವೆ :

೧. **ಉದ್ದೇಶ** : ವ್ಯಕ್ತಿಗಳ ನಿರ್ದಿಷ್ಟ ಬೇಡಿಕೆಗಳ ಈಡೇರುವಿಕೆಯ ಹಿನ್ನೆಲೆಯಲ್ಲಿ ಸಂಘಗಳು ಅಸ್ತಿತ್ವಕ್ಕೆ ಬರುತ್ತವೆ. ಆದ್ದರಿಂದ ಸಂಘದ ಅಸ್ತಿತ್ವದ ತಳದಲ್ಲಿ ಅದರ ಉದ್ದೇಶ ಮುಖ್ಯವಾಗುತ್ತದೆ. ಅಂದರೆ ಜನರ ಅವಶ್ಯಕತೆಗನುಗುಣವಾಗಿ ಸಂಘಗಳು ಸೃಷ್ಟಿಯಾಗುತ್ತವೆ.

೨. **ಸಂಘಟನೆ** : ಸಂಘದ ಕಾರ್ಯಗಳು ಯಶಸ್ವಿಯಾಗಲು ನಿರ್ವಾಹಕರ ಸಂಘಟನೆ ಮುಖ್ಯವಾಗುತ್ತದೆ. ಅಧ್ಯಕ್ಷ, ಕಾರ್ಯದರ್ಶಿ, ಕಾರ್ಯಕಾರಿ ಮಂಡಳಿ ಮುಂತಾಗಿ ವಿವಿಧ ಹುದ್ದೆಗಳಲ್ಲಿರುವವರ ಮಧ್ಯೆ ಪರಸ್ಪರ ಸಹಕಾರ-ಸಹಾಯ ಅನಿವಾರ್ಯವಾಗಿರುತ್ತದೆ.

೩. **ಸಂವಿಧಾನ** : ಯಾವುದೇ ಸಂಘದ ಕಾರ್ಯನಿರ್ವಹಣೆಯು ಅದರ ಲಿಖಿತ ಅಥವಾ ಅಲಿಖಿತ ಸಂವಿಧಾನ ಅಥವಾ ಕಾನೂನು ನಿಯಮಗಳನ್ನು ಆಧರಿಸಿರುತ್ತದೆ. ಪ್ರತಿಯೊಬ್ಬ ಸದಸ್ಯನೂ ಸಂಘದ ನಿಯಮಗಳನ್ನು ಪಾಲಿಸಲು ಬಾಧ್ಯಸ್ಥನಾಗಿರುತ್ತಾನೆ. ಸದಸ್ಯರ ನಡತೆಗಳನ್ನು ನಿಯಂತ್ರಿಸಲು ಸಂಘದ ನಿಯಮಗಳು ರಚಿತಗೊಂಡಿರುತ್ತವೆ.

೪. **ಸದಸ್ಯತ್ವ** : ಸಂಘದಲ್ಲಿ ಸದಸ್ಯತ್ವವು ಐಚ್ಛಿಕವಾದದ್ದು. ವ್ಯಕ್ತಿಯು ತನ್ನ ಇಚ್ಛೆಗನುಗುಣವಾಗಿ ಸದಸ್ಯನಾಗಬಹುದು ಅಥವಾ ಸಂಘವನ್ನು ಬಿಟ್ಟು ಹೊರಗೆ ಬರಬಹುದು.

೫. **ಅಸ್ತಿತ್ವ** : ಸಂಘಗಳಲ್ಲಿ ಸ್ಥಿರವಾದ ಸಂಘಗಳೂ ಇವೆ, ತಾತ್ಕಾಲಿಕ ಸಂಘಗಳೂ ಇವೆ. ಕೆಲವು ರಾಜಕೀಯ ಹಾಗೂ ಧಾರ್ಮಿಕ ಸಂಘಗಳು ಸ್ಥಿರವಾದ ಸಂಘಗಳಿಗೆ ಉದಾಹರಣೆಯಾದರೆ, ಕಲೆಗಾರರನ್ನು ಅಥವಾ ಬರಹಗಾರರನ್ನು ಸನ್ಮಾನಿಸಲು ರಚಿತಗೊಂಡ ಸಂಘಗಳು ತಾತ್ಕಾಲಿಕವಾದವು. ತಾತ್ಕಾಲಿಕ ಸಂಘಗಳು ನಿರ್ದಿಷ್ಟ ಉದ್ದೇಶ ಈಡೇರಿದ ನಂತರ ಅಂತ್ಯಗೊಳ್ಳುತ್ತವೆ.

೬. **ಮೂರ್ತ ಸ್ವರೂಪ** : ಸಂಘಗಳಲ್ಲಿನ ರಚನೆಯನ್ನು ಪರಿಗಣಿಸಿದಾಗ ಅವು ಮೂರ್ತ ಸ್ವರೂಪದಲ್ಲಿ ಗೋಚರವಾಗುತ್ತವೆ. ಏಕೆಂದರೆ ನಿರ್ದಿಷ್ಟ ಸ್ಥಳದಲ್ಲಿ ನಿರ್ದಿಷ್ಟ ವ್ಯಕ್ತಿಗಳ ಮೂಲಕ ಅವು ಕಾರ್ಯಾಚರಣೆ ನಡೆಸುತ್ತವೆ.

ನಾಗರೀಕತೆ ಬೆಳೆದಂತೆಲ್ಲಾ ಆಧುನಿಕ ಸಮಾಜದಲ್ಲಿ ವ್ಯಕ್ತಿಗಳಿಗೆ ಸಂಘಗಳ ಅವಶ್ಯಕತೆ ಹೆಚ್ಚುತ್ತಿದೆ. ಸಂಘಗಳಲ್ಲಿ ಸದಸ್ಯರು ವೈಯಕ್ತಿಕ ಆಸಕ್ತಿಗಳನ್ನು ಸಾಧಿಸಿಕೊಳ್ಳುವುದರೊಂದಿಗೆ ಸಾಮಾಜಿಕ ಆಸಕ್ತಿಗಳನ್ನು ಸಾಧಿಸಿಕೊಳ್ಳುತ್ತಾರೆ. ಒಬ್ಬ ಫುಟ್‌ಬಾಲ್ ಆಟಗಾರ ತಾನು ಸದಸ್ಯನಾಗುವ ಕ್ಲಬ್‌ಗೆ ಆಡುವುದರೊಂದಿಗೆ ವೈಯಕ್ತಿಕವಾಗಿ ಹೆಸರುಗಳಿಸಲು ಪ್ರಯತ್ನಿ

ಸುತ್ತಿರುತ್ತಾನೆ. ಒಂದು ಸೈನ್ಯದ ಜಯ ದೇಶಕೋಸ್ಕರವಾಗಿರುತ್ತದೆ. ಅದೇ ಜಯ ಸೈನಿಕರಿಗೆ ವೈಯಕ್ತಿಕವಾಗಿ ಸಂತೋಷವನ್ನು ತರುತ್ತದೆ. ಆದ್ದರಿಂದ ಎಲ್ಲ ಸಮಾಜಗಳಲ್ಲೂ ಅತ್ಯವಶ್ಯಕವಾಗಿ ಸಂಘಗಳು ಕಂಡುಬರುತ್ತವೆ.

ಈ. ಸಂಸ್ಥೆ

ಸಮಾಜಶಾಸ್ತ್ರಜ್ಞರು ಸಮಾಜದಲ್ಲಿನ ಸಂಸ್ಥೆಗಳ ಸ್ವರೂಪ ಮತ್ತು ಕಾರ್ಯಗಳನ್ನು ವಿಶ್ಲೇಷಿಸುವುದರ ಮೂಲಕ ಸಮಾಜವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಸಂಸ್ಥೆಗಳ ಅಧ್ಯಯನವು ಸಮಾಜಶಾಸ್ತ್ರದ ಗಹನವಾದ ವಸ್ತುವಿಷಯವಾಗಿದೆ. ಈ ದೃಷ್ಟಿಯಿಂದ **ಡರ್ಖಿಮ್** ಅವರ "ಸಾಮಾಜಿಕ ಸಂಸ್ಥೆಗಳನ್ನು ಅಭ್ಯಸಿಸುವ ಶಾಸ್ತ್ರವೇ ಸಮಾಜಶಾಸ್ತ್ರ" ಎಂಬ ಹೇಳಿಕೆಯು ಸಂಸ್ಥೆಗಳ ಅಧ್ಯಯನಕ್ಕೆ ಮಹತ್ವ ತಂದುಕೊಡುತ್ತದೆ. ಸಂಸ್ಥೆಗಳು ಗುಣಾತ್ಮಕ ನಿಯೋಗಿಗಳಾಗಿ ಎಲ್ಲ ಶಾಶ್ವತ ಮಾನವ ಸಮೂಹಗಳಲ್ಲಿ ಕಂಡುಬರುತ್ತವೆ. "ಸಮಾಜವೆಂಬ ರಥಕ್ಕೆ ಸಂಸ್ಥೆಗಳು ಗಾಲಿಗಳು" ಎಂದು **ಎಚ್.ಈ. ಬಾರ್ನೆಸ್** ಹೇಳಿದ್ದಾರೆ. ಸಂಸ್ಥೆಗಳು ಮಾನವ ಜೀವನವನ್ನು ಬಲವಾಗಿ ಹಿಡಿದಿಟ್ಟಿವೆ. **ಸಮ್ನರ್ ಮತ್ತು ಕೆಲ್ಲರ್** ಅವರು "ಜೀವಿಗಳಲ್ಲಿ ಜೀವಕಣಗಳಿರುವಂತೆ ಸಮಾಜದಲ್ಲಿ ರೂಢಿಗಳಿವೆ. ಅದರ ಮೂಳೆಗಳು ಮತ್ತು ಅಂಗಾಂಶಗಳಂತೆ ಸಮಾಜದಲ್ಲಿ ಸಂಸ್ಥೆಗಳಿವೆ" ಎಂದು ಹೇಳಿರುವರು. ಸಂಸ್ಥೆಗಳ ಮೂಲಕ ಸಮಾಜದಲ್ಲಿನ ಮಾನವ ಜೀವನ ವೈವಿಧ್ಯತೆ ಹಾಗೂ ಸಂಕೀರ್ಣತೆಯತ್ತ ಸಾಗುತ್ತದೆ. **ಗಿಡ್ಡಿಂಗ್ಸ್** ಪ್ರಕಾರ ಮನುಕುಲದಲ್ಲಿ ಗತಕಾಲದಿಂದಲೂ ಯಾವುದೆಲ್ಲ ಶ್ರೇಷ್ಠತಮವಾಗಿದ್ದಿತೋ, ಅದನ್ನೆಲ್ಲವನ್ನೂ ಸಂರಕ್ಷಿಸುತ್ತಾ ಬಂದಿರುವ ಸಾಧನಗಳೇ ಸಂಸ್ಥೆಗಳು.

ವ್ಯಾಖ್ಯೆಗಳು

೧. **ಕಿಂಗ್ಸ್ಲೆ ಡೇವಿಸ್** : "ಒಂದು ಅಥವಾ ಹೆಚ್ಚಿನ ಕಾರ್ಯಗಳ ಸುತ್ತ ಹೆಣೆದುಕೊಂಡಿರುವ ಲೋಕರೂಢಿಗಳ, ನೈತಿಕ ನಿಯಮಗಳ ಹಾಗೂ ಕಾನೂನುಗಳ ಒಟ್ಟು ರೂಪವೇ ಸಂಸ್ಥೆ".

೨. **ಮೆಕೈವರ್ ಮತ್ತು ಪೇಜ್** : "ಸಾಮೂಹಿಕ ಚಟುವಟಿಕೆಗಳಿಗೆ ಸಂಬಂಧಿಸಿದ, ಸಮಾಜದಿಂದ ಸ್ಥಾಪಿತವಾದ ವಿಶಿಷ್ಟವಾದ ಕಾರ್ಯವಿಧಾನದ ರೂಪಗಳು ಅಥವಾ ನಿಯಮಗಳೇ ಸಂಸ್ಥೆ".

೩. **ಪಾಲ್ ಬಿ. ಹಾರ್ಟನ್ ಮತ್ತು ಚೆಸ್ಟರ್ ಎಲ್. ಹಂಟ್** : "ಸಮಾಜದಲ್ಲಿ ಜನರು ಯಾವ ಚಟುವಟಿಕೆ ಅಥವಾ ಗುರಿ ಬಹಳ ಪ್ರಾಮುಖ್ಯವಾದುದು ಎಂದು ಭಾವಿಸಿದಾಗ, ಅದನ್ನು ಸಾಧಿಸಲು ಸ್ಥಾಪಿತವಾಗುವಂತಹ ನೈತಿಕ ನಿಯಮಗಳ ವ್ಯವಸ್ಥೆಯೇ ಸಂಸ್ಥೆ".

೪. **ಸಿ.ಎ. ಎಲ್‌ವುಡ್** : "ಸಾಮಾಜಿಕ ರೂಢಿಗಳು ಅಥವಾ ಹವ್ಯಾಸಗಳು ವ್ಯವಸ್ಥಿತ ರೂಪು ಪಡೆದುಕೊಂಡಾಗ ಸಂಸ್ಥೆಗಳಾಗುತ್ತವೆ".

ಈ ವ್ಯಾಖ್ಯೆಗಳ ವಿಶ್ಲೇಷಣೆಯಿಂದ ಸಂಸ್ಥೆಯ ಬಗ್ಗೆ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ.

ಅಂತರ್‌ಸಂಬಂಧವಿರುವ ಲೋಕರೂಢಿಗಳು ಮತ್ತು ನೈತಿಕ ನಿಮಯಗಳು ವ್ಯವಸ್ಥಿತವಾಗಿ ಸಂಘಟಿತಗೊಂಡು ವಿಶೇಷ ಕಾರ್ಯಗಳನ್ನು ನಿರ್ವಹಿಸಿದಾಗ ಅವು ಸಂಸ್ಥೆಗಳಾಗುತ್ತವೆ. ಸಂಸ್ಥೆಗಳು ಸಮಾಜದ ಕ್ರಿಯಾತ್ಮಕ ಅಂಗಾಂಶಗಳಾಗಿದ್ದು, ಇವುಗಳ ಮೂಲಕ ಜನರ ಮೂಲಭೂತ ಸಾಮಾಜಿಕ ಚಟುವಟಿಕೆಗಳು ಮತ್ತು ಸಾಮಾಜಿಕ ಅವಶ್ಯಕತೆಗಳು ಪೂರೈಸಲ್ಪಡುತ್ತವೆ. ಹೀಗಾಗಿ ಸಮಾಜದ ಪ್ರಧಾನ ಚಟುವಟಿಕೆಗಳ ಅಥವಾ ಗುರಿಗಳ ಸಾಧನೆಗಾಗಿ ರೂಪುಗೊಂಡಿರುವ ರೂಢಿಗಳು ಮತ್ತು ನೈತಿಕ ನಿಯಮಗಳ ಸಮುಚ್ಛಯದಿಂದ ಕೂಡಿರುವ ವ್ಯವಸ್ಥೆಯೇ ಸಂಸ್ಥೆ.

ಸಂಘಗಳು ಮತ್ತು ಸಂಸ್ಥೆಗಳಿಗೆ ನೇರವಾದ ಸಂಬಂಧವಿದೆ. ಸಂಘಗಳ ಸದಸ್ಯರುಗಳು ನಿಗದಿತ ಕಟ್ಟುಪಾಡುಗಳ ಚೌಕಟ್ಟಿನೊಳಗೇ ತಮ್ಮ ಗುರಿಗಳನ್ನು ಸಾಧಿಸಿಕೊಳ್ಳುತ್ತಾರೆ. ಈ ನಿಗದಿತ ಕಟ್ಟುಪಾಡುಗಳೇ ಸಾಂಸ್ಥಿಕ ರೂಪವನ್ನು ಪಡೆದುಕೊಂಡಾಗ ಸಂಸ್ಥೆಗಳಾಗುತ್ತವೆ. ಉದಾಹರಣೆ ಕುಟುಂಬ, ರಾಜ್ಯ ಹಾಗೂ ಧಾರ್ಮಿಕ ಕ್ರಿಯಾವಿಧಿಗಳು ಅನುಕ್ರಮವಾಗಿ ಸಂಸ್ಥೆಗಳಾಗುತ್ತವೆ. ವಿವಾಹ ಸಂಸ್ಥೆಯಲ್ಲಿ ಲೋಕರೂಢಿಗಳು, ನೈತಿಕ ನಿಯಮಗಳು ಮತ್ತು ಕಾನೂನುಗಳು ಈ ಮೂರು ಅಂಶಗಳನ್ನು ಕಾಣಬಹುದು. ವಿವಾಹದ ಸುತ್ತ ನಿಶ್ಚಿತಾರ್ಥ, ಉಂಗುರಗಳ ವಿನಿಮಯ, ಅಕ್ಷತೆ-ಅಕ್ಕಿ ಹಾಕುವುದು, ಇತ್ಯಾದಿ ಲೋಕರೂಢಿಗಳಿವೆ. ಎರಡನೆಯದಾಗಿ, ವಿವಾಹಪೂರ್ವ ಶೀಲ, ಗಂಡ-ಹೆಂಡತಿ ನಡುವಿನ ನಿಷ್ಠೆ, ಪರಸ್ಪರಾವಲಂಬನೆ, ಪರಸ್ಪರ ಬೆಂಬಲದ ಹೊಣೆಗಾರಿಕೆ ಇತ್ಯಾದಿ ನೈತಿಕ ನಿಯಮಗಳಾಗುತ್ತವೆ. ಮೂರನೆಯದಾಗಿ ವಿವಾಹ ನೊಂದಾಯಿಸುವುದು, ಸಕಾರಣಕ್ಕಾಗಿ ವಿಚ್ಛೇದಿಸುವ ಹಕ್ಕು, ವಯೋಮಿತಿ ಇತ್ಯಾದಿ ಕಾನೂನುಗಳಿರುತ್ತವೆ. ಈ ಮೂರು ಅಂಶಗಳು ನಿರ್ದಿಷ್ಟ ರಚನೆಯನ್ನು ಪಡೆದುಕೊಂಡು 'ವಿವಾಹ' ಎಂಬ ಸಂಸ್ಥೆ ಅಸ್ತಿತ್ವಕ್ಕೆ ಬರುತ್ತದೆ. ಹೀಗೆ ಸಮಾಜದಲ್ಲಿನ ಎಲ್ಲ ಸಂಸ್ಥೆಗಳು ಅಂತರ್‌ಸಂಬಂಧವುಳ್ಳ ಲೋಕರೂಢಿಗಳು, ನೈತಿಕ ನಿಯಮಗಳು ಹಾಗೂ ಕಾನೂನುಗಳಿಂದ ರಚಿತವಾಗಿವೆ.

ಸಂಸ್ಥೆಯ ಲಕ್ಷಣಗಳು

೧. ಪ್ರತಿಯೊಂದು ಸಂಸ್ಥೆಯು ನಿರ್ದಿಷ್ಟವಾಗಿ ಸ್ಥಾಪಿತಗೊಂಡಿರುವಂತಹ ನಿಯಮಗಳನ್ನು ಹೊಂದಿರುತ್ತದೆ. ಸದಸ್ಯರು ಅವುಗಳಿಗೆ ವಿಧೇಯಕರಾಗಿ ಅನುಸರಿಸಬೇಕು. ಸಮುದಾಯಗಳು ಸಂಸ್ಥೆಗಳನ್ನು ಸ್ಥಾಪಿಸುತ್ತವೆ.

೨. ಸಂಸ್ಥೆಗಳಿಲ್ಲದ ಸಮಾಜವಿಲ್ಲ. ಸಮಾಜದ ಎಲ್ಲ ಬಗೆಯ ಕಾರ್ಯನಿರ್ವಹಣೆಯಲ್ಲಿ ಸಂಸ್ಥೆಗಳು ಪ್ರಧಾನ ಪಾತ್ರವಹಿಸಿವೆ. ಸಾಮಾಜಿಕ ಸಂಬಂಧಗಳ ಸಮಸ್ಯೆಗಳು ಜಟಿಲವಾದಂತೆಲ್ಲ ಪರಿಹಾರವಾಗಿ ಹೊಸ ಸಂಸ್ಥೆಗಳು ಹುಟ್ಟಿಕೊಳ್ಳುತ್ತವೆ.

೩. ಪ್ರತಿಯೊಂದು ಸಂಸ್ಥೆಯೂ ಕೆಲವು ನಿರ್ದಿಷ್ಟ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಸಾಧನವಾಗಿರುತ್ತದೆ.

೪. ಅನೇಕ ಸಂಸ್ಥೆಗಳು ವಿಕಾಸಗೊಳ್ಳುತ್ತ ಬೆಳೆಯುತ್ತವೆ. ಸಮಾಜದ ಬದಲಾದ ಸನ್ನಿವೇಶಗಳಿಗೆ ತಕ್ಕಂತೆ ಹೊಸ ನಿಯಮಗಳನ್ನು ಅಳವಡಿಸಿಕೊಳ್ಳುತ್ತವೆ.

೫. ಸಂಸ್ಥೆಗಳು ಸಮಾಜದ ಸದಸ್ಯರ ನಿರ್ದಿಷ್ಟ ಬೇಡಿಕೆಗಳನ್ನು ಪೂರೈಸಲು ಅಸ್ತಿತ್ವಕ್ಕೆ ಬರುತ್ತವೆ. ಉದಾ: ಮಾನವ ಜೀವಿಯ ಉಳಿವಿಗಾಗಿ ಮತ್ತು ಮುಂದುವರಿಕೆಗಾಗಿ ವಿವಾಹ ಎಂಬ ಸಂಸ್ಥೆ ಹುಟ್ಟಿಕೊಂಡಿದೆ; ರಕ್ಷಣೆಗಾಗಿ 'ರಾಜ್ಯ' ಎಂಬ ಸಂಸ್ಥೆ ಇದೆ. ಈ ಸಂಸ್ಥೆಗಳಲ್ಲಿ ಜನರ ಕಾರ್ಯವಿಧಾನದ ಬಗ್ಗೆಯೂ ನಿರ್ದೇಶನವಿರುತ್ತದೆ.

೬. ಸಂಸ್ಥೆಗಳು ಮಾನವನ ನಡೆವಳಿಕೆ ಹಾಗೂ ಚಟುವಟಿಕೆಗಳನ್ನು ನಿಯಂತ್ರಿಸುವಲ್ಲಿ ಸಹಾಯ ಮಾಡುತ್ತವೆ. ಇಲ್ಲಿನ ನಿಯಮಗಳು ಜನರ ನಡತೆಯನ್ನು ನಿಯಂತ್ರಿಸಿ, ಸಮಾಜದಲ್ಲಿ ಪ್ರಕ್ರಮ ನೆಲೆಸಲು ಪ್ರಯತ್ನಿಸುತ್ತವೆ.

೭. ಪ್ರತಿಯೊಂದು ಸಂಸ್ಥೆಯು ತನ್ನದೇ ಆದ ಸಾಂಕೇತಿಕ ಲಕ್ಷಣಗಳನ್ನು ಹೊಂದಿರುತ್ತದೆ. ಇವು ಭೌತಿಕವಾಗಿರಬಹುದು ಅಥವಾ ಅಭೌತಿಕ ಸ್ವರೂಪದಲ್ಲಿರಬಹುದು. ಒಂದು ರಾಷ್ಟ್ರದ ಧ್ವಜ ಅಲ್ಲಿನ ನಾಗರಿಕನಿಗೆ ರಾಷ್ಟ್ರನಿಷ್ಠೆಯನ್ನು ನೆನಪಿಸುತ್ತದೆ. ವಿವಾಹ ಸಮಯದಲ್ಲಿನ ಉಂಗುರ ಕುಟುಂಬ ನಿಷ್ಠೆಯ ಸಾಂಕೇತಿಕ ಲಕ್ಷಣವಾಗುತ್ತದೆ. ಹೀಗೆ ಸಂಸ್ಕೃತಿಯಲ್ಲಿನ ವಸ್ತುಗಳೆ ಸಂಸ್ಥೆಯ ಸಾಂಕೇತಿಕ ಲಕ್ಷಣಗಳಾಗುತ್ತವೆ.

೮. ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಅನೇಕ ಸಂಸ್ಥೆಗಳ ನಡುವೆ ಪರಸ್ಪರ ಅಂತರಸಂಬಂಧ ವಿರುತ್ತದೆ. ಉದಾ:- ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಸಂಸ್ಥೆಗಳ ನಡುವೆ ಪರಸ್ಪರ ಸಂಬಂಧವಿದೆ. ಒಂದು ಸಂಸ್ಥೆಯ ಮೇಲೆ ಆಗುವ ಪರಿಣಾಮ ಬೇರೆ ಸಂಸ್ಥೆಗಳ ಮೇಲೂ ಉಂಟಾಗುತ್ತದೆ.

ಸಂಸ್ಥೆಯ ಕಾರ್ಯಗಳು

ಎಲ್ಲ ಸಮಾಜಗಳಲ್ಲೂ ಮಾನವನ ಮಾನಸಿಕ ಹಾಗೂ ಭೌತಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಂಸ್ಥಿಕ ವ್ಯವಸ್ಥೆ ಅಸ್ತಿತ್ವದಲ್ಲಿದೆ. ಸಾಮಾಜಿಕ ಸಂಸ್ಥೆಗಳು ಮುಖ್ಯವಾಗಿ ಒಂದು ಸಮಾಜದ ಅಗತ್ಯತೆಗಳನ್ನು ಈಡೇರಿಸುವ ಸಾಧನಗಳಾಗಿವೆ. ಮುಂದುವರಿದ ಸಂಕೀರ್ಣ ಸಮಾಜದಲ್ಲಿ ವೈವಿಧ್ಯಮಯವಾದ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಮೂಲಭೂತ ಅಗತ್ಯಗಳನ್ನು ಪೂರೈಸುವ ಕಾರ್ಯಗಳಿಂದ ತೊಡಗಿ ಅಷ್ಟೇನೂ ಪ್ರಮುಖವಲ್ಲದ ಕಾರ್ಯಗಳವರೆಗೆ ಹಲವಾರು ಕಾರ್ಯಗಳನ್ನು ಸಂಸ್ಥೆಗಳು ನಿರ್ವಹಿಸುತ್ತವೆ.

ಸಂಸ್ಥೆಗಳು ಎರಡು ರೀತಿಯ ಕಾರ್ಯಗಳನ್ನು ನಿರ್ವಹಿಸುತ್ತವೆ. ಅವುಗಳು ಪ್ರಕಟಿತ ಕಾರ್ಯಗಳು ಮತ್ತು ಅಪ್ರಕಟಿತ ಕಾರ್ಯಗಳು. ಜನರು ನಿರೀಕ್ಷಿಸುವುದನ್ನು ಪೂರೈಸುವ ಸಂಸ್ಥೆಗಳ ಕಾರ್ಯಗಳನ್ನು ಪ್ರಕಟಿತ ಕಾರ್ಯಗಳೆಂದು ಕರೆಯುತ್ತೇವೆ. ಪ್ರಕಟಿತ ಕಾರ್ಯಗಳೆಂದರೆ ಸಂಸ್ಥೆಗೆ ಸಂಬಂಧಪಟ್ಟ ಉದ್ದೇಶಗಳನ್ನು ಕಾರ್ಯಗತಗೊಳಿಸುವುದು. ಉದಾಹರಣೆಗೆ ಕುಟುಂಬವು ಮಕ್ಕಳ ಲಾಲನೆ-ಪಾಲನೆ ಮಾಡುವುದು, ಕುಟುಂಬದ ಸಾಂಸ್ಥಿಕ ರೂಪವಾದ ವಿವಾಹವು ಸ್ತ್ರೀ-ಪುರುಷರ ಲೈಂಗಿಕ ಜೀವನವನ್ನು ನಿರ್ದೇಶಿಸಿ ಹಾಗೂ ನಿಯಂತ್ರಿಸಿ

ಮಾನವ ಜನಾಂಗವನ್ನು ಮುಂದುವರಿಸುವ ಕಾರ್ಯವನ್ನು ನಿರ್ವಹಿಸುವುದು, ಆರ್ಥಿಕ ಸಂಸ್ಥೆಗಳು ಸರಕುಗಳ ಉತ್ಪಾದನೆ ಹಾಗೂ ವಿತರಣಾ ಕಾರ್ಯದಲ್ಲಿ ತೊಡಗುವುದು, ಶೈಕ್ಷಣಿಕ ಸಂಸ್ಥೆಗಳು ಎಳೆಯರಿಗೆ ಶಿಕ್ಷಣವನ್ನು ಪ್ರಸಾರ ಮಾಡುವುದು ಇತ್ಯಾದಿ. ಇದಲ್ಲದೆ ಧಾರ್ಮಿಕ, ರಾಜಕೀಯ, ವೈದ್ಯಕೀಯ ಸಂಸ್ಥೆಗಳು ಮಾನವನಿಗೆ ಅನುಕೂಲವಾಗುವಂತಹ ಹಲವು ಕಾರ್ಯಗಳನ್ನು ನಿರ್ವಹಿಸುತ್ತವೆ. ಪ್ರಕಟಿತ ಕಾರ್ಯಗಳು ಸ್ಪಷ್ಟ ಸ್ವರೂಪದವುಗಳಾಗಿದ್ದು ಪ್ರಶಂಸೆಗೆ ಅರ್ಹವಾದಂಥವು.

ಅಪ್ರಕಟಿತ ಕಾರ್ಯಗಳು ಉದ್ದೇಶ ರಹಿತ ಅಥವಾ ಗಮನಕ್ಕೆ ಬಾರದಂತಹ ಕಾರ್ಯಗಳಾಗಿರುತ್ತವೆ. ಉದಾಹರಣೆಗೆ ಸರಕುಗಳ ಉತ್ಪಾದನೆ ಹಾಗೂ ವಿತರಣೆ ಪ್ರಕಟಿತ ಕಾರ್ಯವಾದರೆ ಕೆಲವೊಮ್ಮೆ ಆರ್ಥಿಕ ಸಂಸ್ಥೆಗಳು ತಾಂತ್ರಿಕ ಬದಲಾವಣೆ, ಲೋಕ ಕಲ್ಯಾಣ ಕಾರ್ಯಗಳನ್ನು ನಿರ್ವಹಿಸಬಹುದು. ಅಲ್ಲದೆ ನಿರುದ್ಯೋಗ ಮತ್ತು ಅಸಮಾನತೆಗೆ ಕಾರಣವಾಗಬಹುದು. ಅಪ್ರಕಟಿತ ಕಾರ್ಯಗಳು ಪ್ರಕಟಿತ ಕಾರ್ಯಗಳಿಗೆ ಪೂರಕವಾಗಿರಬಹುದು ಅಥವಾ ಅಸಂಬದ್ಧವಾಗಿರಬಹುದು. ಅಪ್ರಕಟಿತ ಕಾರ್ಯಗಳು ಅನೇಕ ಸಂದರ್ಭದಲ್ಲಿ ಸಮಾಜದ ಪ್ರಗತಿಗೆ ಅಡ್ಡಿಯಾಗಿ ನೇತ್ಯಾತ್ಮಕ ಕಾರ್ಯಗಳಾಗಿ ಪರಿಣಮಿಸಬಹುದು. ಧರ್ಮ, ಜಾತಿ, ಆಸ್ತಿ ಮುಂತಾದ ಸಂಸ್ಥೆಗಳು ವ್ಯಕ್ತಿಗೆ ನಿರ್ದಿಷ್ಟ ಸ್ಥಾನಮಾನವನ್ನು ಒದಗಿಸಿಕೊಟ್ಟು, ಆ ಸ್ಥಾನಮಾನಗಳಿಗೆ ಅನುಗುಣವಾಗಿ ವರ್ತಿಸುವಂತೆ ಅವಕಾಶ ಕಲ್ಪಿಸಿಕೊಡುತ್ತವೆ. ಒಟ್ಟಾರೆ ಸಂಸ್ಥೆಗಳು ವ್ಯಕ್ತಿ-ವ್ಯಕ್ತಿ ಹಾಗೂ ಸಮೂಹಗಳ ನಡುವಿನ ಸಂಬಂಧವನ್ನು ಪ್ರಕ್ರಮಗೊಳಿಸುವುದರ ಮೂಲಕ, ಅವರ ನಡತೆಯನ್ನು ನಿಯಂತ್ರಿಸುತ್ತವೆ.

ಸಂಘ ಹಾಗೂ ಸಂಸ್ಥೆಗಳ ನಡುವಿನ ವ್ಯತ್ಯಾಸಗಳು

ಸಮಾಜಶಾಸ್ತ್ರೀಯ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಸಂಘ ಹಾಗೂ ಸಂಸ್ಥೆಗಳ ನಡುವೆ ಸ್ಪಷ್ಟ ವ್ಯತ್ಯಾಸಗಳಿವೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಬಹುದು.

ನಿರ್ದಿಷ್ಟ ಉದ್ದೇಶ ಅಥವಾ ಸೀಮಿತ ಉದ್ದೇಶಗಳ ಸಾಧನೆಗಾಗಿ ಅಸ್ತಿತ್ವಕ್ಕೆ ಬರುವಂತಹ ಸಂಘಟಿತ ಸಾಮಾಜಿಕ ಸಮೂಹವನ್ನು ಸಂಘವೆನ್ನಬಹುದು. ಸಾಮಾಜಿಕ ರೂಢಿಗಳು ವ್ಯವಸ್ಥಿತ ರೂಪು ಪಡೆದುಕೊಂಡು, ಜನರ ಅಗತ್ಯಗಳನ್ನು ಪೂರೈಸುವ ಕಾರ್ಯ ವಿಧಾನಗಳಾಗುತ್ತವೆ. ಇಂತಹ ಕಾರ್ಯವಿಧಾನಗಳನ್ನು ಸಂಸ್ಥೆಗಳೆಂದು ಕರೆಯುತ್ತೇವೆ. ಸಂಸ್ಥೆಯು ಕಾರ್ಯವಿಧಾನ, ನಿಯಮ, ವ್ಯವಸ್ಥೆ ಮುಂತಾದುವುಗಳನ್ನು ಒಳಗೊಂಡರೆ ಸಂಘವು ಸದಸ್ಯತ್ವವಿರುವ ಜನರನ್ನು ಹೊಂದಿರುತ್ತದೆ. ಸಂಸ್ಥೆಗಳು ಸದಸ್ಯರನ್ನು ಹೊಂದಿರುವುದಿಲ್ಲ. ಆದರೆ ಅವುಗಳನ್ನು ಅನುಸರಿಸುವ ವ್ಯಕ್ತಿಗಳು ಇರುತ್ತಾರೆ. ಉದಾ:- ಧರ್ಮವೆಂದರೆ ಜನರಿಂದ ಕೂಡಿದ ಸಮೂಹವಲ್ಲ. ಅದು ವಿಚಾರಗಳು, ನಂಬಿಕೆಗಳು, ಆಚರಣೆಗಳು ಮತ್ತು ಸಂಬಂಧಗಳನ್ನೊಳಗೊಂಡ ವ್ಯವಸ್ಥೆ. ಅದನ್ನು ಅನುಸರಿಸುವರಿಲ್ಲದಿದ್ದರೆ ಅದು ನಾಶವಾಗುತ್ತದೆ. ಚರ್ಚ್ ಜನರನ್ನೊಳಗೊಂಡ ಸಂಘವಾಗಿದ್ದು, ಅದರ ಸದಸ್ಯರು ನಂಬಿಕೆ ಹಾಗೂ ಆಚರಣೆಗಳನ್ನು ಸ್ವೀಕರಿಸಿ ಅನುಸರಿಸುವವರಾಗಿರುತ್ತಾರೆ.

ಆದ್ದರಿಂದ ಸಂಸ್ಥೆಗಳೆಂದರೆ ವಿಚಾರಗಳು ಮತ್ತು ನಡವಳಿಕೆಗಳ ಸಂಘಟಿತ ವ್ಯವಸ್ಥೆಯಾದರೆ, ಸಂಘವು ಜನರ ಸಂಘಟಿತ ಸಮೂಹವಾಗಿದೆ. ಸಂಘಗಳ ಸದಸ್ಯರು ಸಂಸ್ಥೆಯ ನಿಯಮಗಳನ್ನು ಪಾಲಿಸುತ್ತಾರೆ. ಧರ್ಮ ಎಂಬುದು ಸಾಮಾಜಿಕ ಸಂಸ್ಥೆ.

ಸಂಸ್ಥೆಗಳು ಸ್ಥಿರ ಸ್ವರೂಪದವುಗಳಾಗಿದ್ದರೆ, ಸಂಘಗಳು ತಾತ್ಕಾಲಿಕವಾದವು. ಜನರ ನಿರ್ದಿಷ್ಟ ಬೇಡಿಕೆಗಳು ಈಡೇರಿದ ನಂತರ ಕಣ್ಮರೆಯಾಗಬಹುದು. ಸಂಘಗಳು ಜನರ ಬೇಡಿಕೆಗಳನ್ನು ಈಡೇರಿಸಲು ಉದ್ದೇಶಪೂರ್ವಕವಾಗಿ ಅಸ್ತಿತ್ವಕ್ಕೆ ಬಂದರೆ, ಸಂಸ್ಥೆಗಳು ಅವುಗಳೊಂದಿಗೆ ನಿಧಾನವಾಗಿ ವಿಕಾಸಗೊಳ್ಳುತ್ತವೆ. ಸ್ವಲ್ಪ ಸಮಯ ನಂತರ ವ್ಯವಸ್ಥಿತ ರೂಪವನ್ನು ಪಡೆಯುತ್ತವೆ. ಸಂಘಗಳನ್ನು ಅನೇಕ ಹೆಸರುಗಳಿಂದ ಗುರುತಿಸಬಹುದು. ಆದರೆ ಸಂಸ್ಥೆಗಳು ತಮ್ಮದೇ ಆದ ರಚನೆಯನ್ನು ಹಾಗೂ ಸಾಂಕೇತಿಕ ಲಕ್ಷಣಗಳನ್ನು ಹೊಂದಿರುತ್ತವೆ.

ಸಂಸ್ಥೆಗಳು ಜನರ ಸಾಮಾಜಿಕ ಜೀವನದ ಪರಿಣಾಮವಾಗಿ ಕ್ರಮೇಣ ವಿಕಾಸಗೊಳ್ಳುತ್ತವೆ. ಅವು ಸಾಮಾಜಿಕ ಸಂಬಂಧಗಳ ಕ್ರಮಬದ್ಧವಾದ ವ್ಯವಸ್ಥೆಯಾಗಿದ್ದು ಕೆಲವು ಸಾಮಾನ್ಯ ಮೌಲ್ಯಗಳನ್ನು, ಕಾರ್ಯವಿಧಾನಗಳನ್ನು ಒಳಗೊಂಡು, ಜನರ ಹಲವು ಮೂಲಭೂತ ಅಗತ್ಯತೆಗಳನ್ನು ಪೂರೈಸುತ್ತವೆ. ಮುಖ್ಯವಾಗಿ ಸಂಘಗಳ ಉದ್ದೇಶ ಸಾಧನೆಯಲ್ಲಿ ಸಂಸ್ಥೆಗಳಿಗೆ ಮಹತ್ವದ ಪಾತ್ರವಿದೆ.

೨.೨. ಸಾಮಾಜಿಕ ಪ್ರಕ್ರಿಯೆಗಳು

ಮಾನವ ಸಮಾಜವು ಸಂರಚನೀಯ ಹಾಗೂ ಕಾರ್ಯಾತ್ಮಕ ಅಂಶಗಳನ್ನು ಒಳಗೊಂಡಿರುತ್ತದೆ. ಸಮಾಜದಲ್ಲಿ ಕಂಡುಬರುವ ಅನೇಕ ಸಂಸ್ಥೆಗಳು, ಅದರ ಸಂರಚನೀಯ ಅಂಶವಾಗಿವೆ. ವ್ಯಕ್ತಿಗಳು ಸಮೂಹಗಳಲ್ಲಿ ಜೀವಿಸುವುದರಿಂದ ಉಂಟಾಗುವ ಅನೇಕ ಮಾನವ ಸಂಬಂಧಗಳು ಕಾರ್ಯಾತ್ಮಕ ಮಹತ್ವ ಹೊಂದುತ್ತವೆ. ಈ ಬಗೆಯ ಮಾನವ ಸಂಬಂಧಗಳು ಸಾಮಾಜಿಕ ಪ್ರಕ್ರಿಯೆಗಳ ಫಲ ಸ್ವರೂಪವಾಗಿ ರೂಪುಗೊಳ್ಳುತ್ತವೆ. ಸಮಾಜವೇ ಒಂದು ಸಾಮಾಜಿಕ ಪ್ರಕ್ರಿಯೆ ಎಂದು ಅನೇಕ ಸಮಾಜಶಾಸ್ತ್ರಜ್ಞರು ವ್ಯಾಖ್ಯಾನಿಸಿದ್ದಾರೆ. ಯಾವುದೇ ಮಾನವ ಸಮಾಜವನ್ನು ಅರ್ಥಮಾಡಿಕೊಳ್ಳುವಲ್ಲಿ ಸಾಮುದಾಯಿಕ ಜೀವನಕ್ಕೆ ಮೂಲಭೂತವಾಗಿರುವ ಸಾಮಾಜಿಕ ಪ್ರಕ್ರಿಯೆಗಳನ್ನು ಅಧ್ಯಯನ ಮಾಡುವುದು ಅತ್ಯಂತ ಅವಶ್ಯಕವಾಗಿರುತ್ತದೆ. ಸಮಾಜದ ವಿಶ್ಲೇಷಣೆಯನ್ನು ಸಾಮಾಜಿಕ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಅತ್ಯಂತ ಅವಶ್ಯಕವಾಗಿರುತ್ತದೆ. ಸಮಾಜದ ವಿಶ್ಲೇಷಣೆಯನ್ನು ಸಾಮಾಜಿಕ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದವರಲ್ಲಿ ಮುಖ್ಯರಾದವರು ಪಾರ್ಕ್, ಬರ್ಜೆಸ್, ರಾಸ್ ಮುಂತಾದವರು. ಸಾಮಾಜಿಕ ಪ್ರಕ್ರಿಯೆ ಹಾಗೂ ಮಾನವನ ಸಾಮಾಜಿಕ ಚಟುವಟಿಕೆಗಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಅಧ್ಯಯನ ಮಾಡುವುದೆ ಸಮಾಜಶಾಸ್ತ್ರಜ್ಞನ ಮುಖ್ಯ ಗುರಿಯಾಗಿದೆ.

ಸಾಮಾಜಿಕ ಪ್ರಕ್ರಿಯೆಗಳ ಅರ್ಥ ಮತ್ತು ವ್ಯಾಖ್ಯೆ

ಸಮಾಜದಲ್ಲಿ ವ್ಯಕ್ತಿಗಳು ಹಾಗೂ ಸಮೂಹಗಳ ನಡುವೆ ಪರಸ್ಪರ ಅಂತರಕ್ರಿಯೆ ಹಾಗೂ ಸಂಬಂಧಗಳು ಏರ್ಪಡುವ ರೀತಿಗೆ ಸಾಮಾಜಿಕ ಪ್ರಕ್ರಿಯೆಗಳೆನ್ನುತ್ತೇವೆ. ಸಮಾಜದಲ್ಲಿ ಸಾಮಾಜಿಕ ಸಂಬಂಧಗಳ ಮೂಲಕ ವ್ಯಕ್ತಿಗಳ ನಡುವೆ ಅಂತರ್‌ಸಂಬಂಧವಿರುತ್ತದೆ. ವ್ಯಕ್ತಿ ಸಮಾಜದಲ್ಲಿ ಆತನಿಗಿರುವ ಸ್ಥಾನಮಾನಕ್ಕನುಗುಣವಾಗಿ ಹಲವಾರು ಪಾತ್ರಗಳನ್ನು ನಿರ್ವಹಿಸುತ್ತಾನೆ. ಉದಾಹರಣೆಗೆ ಮಗ, ತಂದೆ, ಪತಿ, ಉದ್ಯೋಗಿ, ಕ್ಲಬ್‌ನ ಸದಸ್ಯ, ರಾಜಕೀಯ ಪಕ್ಷ ಹಾಗೂ ಧಾರ್ಮಿಕ ಸಮೂಹದ ಸದಸ್ಯ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಬೇಕಾಗಬಹುದು. ಈ ಸಂದರ್ಭದಲ್ಲಿ ವ್ಯಕ್ತಿ ಸಮಾಜದ ಇತರ ವ್ಯಕ್ತಿಗಳೊಡನೆ ಸಂಪರ್ಕ ಹೊಂದುವುದು ಅನಿವಾರ್ಯವಾಗುತ್ತದೆ. ಈ ಪ್ರಕ್ರಿಯೆ ಅಂತರ್‌ಕ್ರಿಯೆಯಾಗಿ ರೂಪುಗೊಳ್ಳುತ್ತದೆ. ಹೀಗೆ ಸಾಮಾಜಿಕ ಪರಿಸರದಲ್ಲಿ ಏರ್ಪಡುವ ಅಂತರಕ್ರಿಯೆಗೆ ಸಾಮಾಜಿಕ ಪ್ರಕ್ರಿಯೆ ಎಂದು ಕರೆಯುತ್ತೇವೆ.

ವ್ಯಾಖ್ಯೆಗಳು

"ಸಾಮಾಜಿಕ ಜೀವನದಲ್ಲಿ ಸಾಮಾನ್ಯವಾಗಿ ಕಂಡು ಬರುವ ಪುನರಾವರ್ತಿತ ಅಂತರ್‌ಕ್ರಿಯೆಯ ನಡವಳಿಕಾ ನಮೂನೆಗಳನ್ನು ಸಾಮಾಜಿಕ ಪ್ರಕ್ರಿಯೆಗಳೆಂದು ಕರೆಯಬಹುದು" ಎಂದು **ಪಾಲ್.ಬಿ. ಹಾರ್ಟನ್** ಮತ್ತು **ಚೆಸ್ಟರ್, ಎಲ್. ಹಂಟ್** (೧೯೭೨) ಅಭಿಪ್ರಾಯಪಟ್ಟಿದ್ದಾರೆ. "ಒಂದು ಸಂಘಟಿತ ಸಮೂಹದ ಸದಸ್ಯರುಗಳ ನಡುವಿನ ಸಂಬಂಧಗಳು ತಾಳುವ ನಿಶ್ಚಿತ ರೂಪವನ್ನು ಸಾಮಾಜಿಕ ಪ್ರಕ್ರಿಯೆ" ಎಂದು **ಮೆಕೈವರ್** ಕರೆದಿದ್ದಾರೆ. ಆದ್ದರಿಂದ ಅಂತರ್‌ಕ್ರಿಯೆಯ ಪರಿಣಾಮವಾಗಿ ಸಂಭವಿಸುವ ಸಾಮಾಜಿಕ ಪ್ರಕ್ರಿಯೆಗಳು ಸಮಾಜದಲ್ಲಿ ನಿರಂತರವಾಗಿ ಕಂಡುಬರುತ್ತವೆ.

ಅಂತರಕ್ರಿಯೆ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವ ಪೂರ್ವಭಾವಿಯಾಗಿ ಕೆಲವು ಅಂಶಗಳಿವೆ. ಅವು ಕ್ರಿಯೆ ಹಾಗೂ ಪ್ರತಿಕ್ರಿಯೆಗಳು. ಧ್ಯೇಯ ನಿರ್ದೇಶಿತವಾದ ಹಾಗೂ ಉದ್ದೇಶಪೂರ್ವಕವಾದ ನಡವಳಿಕೆಯ ನಮೂನೆಯನ್ನು ಕ್ರಿಯೆ ಎನ್ನಬಹುದು. ಇದು ವ್ಯಕ್ತಿಯ ನಡವಳಿಕೆಯ ಅಂಶವಾಗಿದ್ದು, ಅರಿವು, ಭಾವನೆ ಹಾಗೂ ಪ್ರಜ್ಞಾಪೂರ್ವಕವಾದ ಅನುಭವಗಳನ್ನು ಅವಲಂಬಿಸಿದೆ. ಒಂದು ಕ್ರಿಯೆ ಇತರರನ್ನು ಪ್ರಭಾವಕ್ಕೆ ಒಳಪಡಿಸಿ ಪ್ರತಿಕ್ರಿಯೆಗೆ ಕಾರಣವಾದರೆ, ಅಂತಹ ಸನ್ನಿವೇಶವನ್ನು ಅಂತರಕ್ರಿಯೆ ಎಂದು ಕರೆಯುತ್ತೇವೆ. ಅಂತರಕ್ರಿಯೆ ಕೆಲವೇ ಸನ್ನಿವೇಶಗಳಿಗೆ ಸೀಮಿತವಾಗಿರದೆ, ಸಮಾಜದಲ್ಲಿನ ಹಲವು ಸನ್ನಿವೇಶಗಳಲ್ಲಿ ಸಂಭವಿಸುತ್ತಾ ನಿರಂತರವಾಗಿರುತ್ತದೆ.

"ಮಾನವರು ಪರಸ್ಪರ ಪ್ರಚೋದನೆ ಹಾಗೂ ಪ್ರತಿಕ್ರಿಯೆಗಳ ಮೂಲಕ ಒಬ್ಬರು ಇನ್ನೊಬ್ಬರ ಮೇಲೆ ಬೀರುವ ಪರಸ್ಪರ ಪ್ರಭಾವಕ್ಕೆ ಸಾಮಾಜಿಕ ಅಂತರಕ್ರಿಯೆ" ಎಂದು **ಎನ್.ಪಿ. ಗಿಶ್** ಅಭಿಪ್ರಾಯಪಟ್ಟಿದ್ದಾರೆ.

"ಸಾಮಾಜಿಕ ಅಂತರಕ್ರಿಯೆ ಒಂದು ಪ್ರಕ್ರಿಯೆಯಾಗಿದ್ದು, ಅಲ್ಲಿ ಜನರು ಇತರರೊಂದಿಗೆ ಕ್ರಿಯೆ ಹಾಗೂ ಪ್ರತಿಕ್ರಿಯೆಗಳಲ್ಲಿ ತೊಡಗಿರುವ ಸ್ಥಿತಿ" - ಇಯಾನ್ ರಾಬರ್ಟ್‌ಸನ್

ಸಮಾಜಶಾಸ್ತ್ರಜ್ಞರು ಸಾಮಾನ್ಯವಾಗಿ ಅಂತರಕ್ರಿಯೆ ಏರ್ಪಡಲು ನಾಲ್ಕು ಅಂಶಗಳ ಅವಶ್ಯಕತೆಯಿದೆ ಎಂದಿದ್ದಾರೆ.

- ಸಾಮಾಜಿಕ ಸಂಪರ್ಕಗಳು ಅಂತರಕ್ರಿಯೆಯ ಪೂರ್ವಾವಶ್ಯಕಗಳು
- ಸಂವಹನವು ಅಂತರಕ್ರಿಯೆಗಳ ಮಾಧ್ಯಮ.
- ವಿವಿಧ ರೀತಿಯ ಸಾಮಾಜಿಕ ಕಾರ್ಯಾಚರಣೆಗಳು ಅಂತರಕ್ರಿಯೆಗಳ ಪ್ರಕಾರಗಳ ಮೇಲೆ ಪ್ರಭಾವಿಸುತ್ತವೆ.
- ಸಾಮಾಜಿಕ ಅಂತರಕ್ರಿಯೆ ಯಾವಾಗಲೂ ಒಂದು ಸಾಮಾಜಿಕ ರಚನೆಯೊಳಗೆ ಸಂಭವಿಸುತ್ತದೆ.

ಆದರೆ **ಪಾರ್ಕ್ ಮತ್ತು ಬರ್ಗೆಸ್** ಅವರು ಸಾಮಾಜಿಕ ಅಂತರಕ್ರಿಯೆಗೆ ಪರಸ್ಪರ ಪೂರಕವಾಗಿರುವ ಎರಡು ಅಂಶಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆ ಅಂಶಗಳೆ ಸಂಪರ್ಕ ಮತ್ತು ಸಂವಹನ.

೧. ಸಂಪರ್ಕ

ಶಾರೀಕವಾಗಿ ಹತ್ತಿರವಾಗುವಿಕೆ ಮತ್ತು ಮಾನಸಿಕ ಸಂಪರ್ಕ ಅಂತರಕ್ರಿಯೆಗೆ ಅವಶ್ಯಕವಾಗಿ ಬೇಕಾಗುವ ಅಂಶಗಳು. ಸಂಪರ್ಕವು ಅಂತರಕ್ರಿಯೆಯ ಅತಿ ಸರಳವಾದ, ಮೂಲಭೂತವಾದ ಹಂತವಾಗುತ್ತದೆ. ಮುಂದಿನ ಹಂತಗಳ ಅಂತರಕ್ರಿಯೆಗೆ ಪೂರ್ವಸಿದ್ಧತೆಯಾಗುತ್ತದೆ. ಸಂಪರ್ಕ ಒಂದು ಸಾಮಾಜಿಕ ಸನ್ನಿವೇಶದಲ್ಲಿ ಹಲವು ವ್ಯಕ್ತಿಗಳ ನಡುವೆ ಏರ್ಪಡುವ ಸಂಬಂಧವಾಗಿದ್ದು, ಇದು ಇತರರೊಂದಿಗೆ ಮಾಡಿಕೊಳ್ಳುವ ಆಂತರಿಕ ಹೊಂದಾಣಿಕೆಯನ್ನು ಅವಲಂಬಿಸಿರುತ್ತದೆ. ಅರ್ಥಪೂರ್ಣವಾದ ಪ್ರತಿಕ್ರಿಯೆಯ ವಿನಿಮಯ ಇದರ ಪ್ರಮುಖ ಅಂಶವಾಗಿದೆ. ಸಂಪರ್ಕದಲ್ಲಿ ಎರಡು ವಿಧಗಳಿವೆ. ಅವುಗಳು ಸಾಮಯಿಕ ಸಂಪರ್ಕ ಮತ್ತು ಪ್ರಾದೇಶಿಕ ಸಂಪರ್ಕ.

ಸಾಮಯಿಕ ಸಂಪರ್ಕ

ಜನರು ತಮ್ಮ ಹಿಂದಿನ ಪೀಳಿಗೆಯೊಂದಿಗೆ ಸ್ಥಾಪಿಸಿಕೊಳ್ಳುವ ಸಂಪರ್ಕವೇ ಸಾಮೂಹಿಕ ಸಂಪರ್ಕ. ಹಿಂದಿನ ತಲೆಮಾರುಗಳಲ್ಲಿ ಆಚರಣೆಯಲ್ಲಿದ್ದ ರೂಢಿ, ಸಂಪ್ರದಾಯಗಳು, ಲೋಕಾಚಾರಗಳು, ನೈತಿಕ ನಿಯಮಗಳು, ಮೌಲ್ಯಗಳು ಹಾಗೂ ಭಾವನಾತ್ಮಕ ನೆನಪುಗಳು ಮುಂದಿನ ಪೀಳಿಗೆಯವರೊಂದಿಗೆ ಸಂಪರ್ಕ ಸ್ಥಾಪಿಸುತ್ತವೆ. ಈ ರೀತಿಯ ಸಂಪರ್ಕದ ಮೂಲಕ ಹಿಂದಿನವರ ಸಾಮಾಜಿಕ ಪರಂಪರೆ ಮುಂದಿನವರ ಚಿಂತನೆ ಹಾಗೂ ನಡವಳಿಕೆಗಳನ್ನು ಪ್ರಭಾವಿಸುತ್ತವೆ.

ಪ್ರಾದೇಶಿಕ ಸಂಪರ್ಕ

ಒಂದು ನಿರ್ದಿಷ್ಟ ಪ್ರದೇಶದಲ್ಲಿನ ಸಮಕಾಲೀನ ಜನರ ನಡುವೆ ಸ್ಥಾಪನೆಯಾಗುವಂತಹ

ಸಂಪರ್ಕವನ್ನು ಪ್ರಾದೇಶಿಕ ಸಂಪರ್ಕವೆನ್ನುತ್ತೇವೆ. ಈ ಸಂಪರ್ಕವು ನೇರವಾದ ಸಂಪರ್ಕವಾಗಿದೆ. ಪ್ರಾದೇಶಿಕತೆಯ ಸ್ವರೂಪವು ಈ ಬಗೆಯ ಸಂಪರ್ಕದ ಇತಿಮಿತಿಗಳನ್ನು ನಿರ್ಧರಿಸುತ್ತದೆ. ಈ ಸಂಪರ್ಕದ ವಿಷಯದಲ್ಲಿ ಪ್ರಾದೇಶಿಕತೆಯ ಕಾರಣದಿಂದ ಎದುರಾಗುವ ಇತಿಮಿತಿಗಳನ್ನು ಆಧುನಿಕ ಸಮೂಹ ಮಾಧ್ಯಮಗಳ ಬಳಕೆಯಿಂದ ನಿವಾರಿಸಿಕೊಳ್ಳಬಹುದು. ಈ ಮಾಧ್ಯಮಗಳ ಮೂಲಕ ಪ್ರಪಂಚದೆಲ್ಲೆಡೆ ಜನರು ಸಂಪರ್ಕಗಳನ್ನು ಸ್ಥಾಪಿಸಿಕೊಳ್ಳಬಹುದಾಗಿದೆ. ಇವುಗಳ ಪರೋಕ್ಷ ಸಂಪರ್ಕ ಸ್ಥಾಪನೆಗೆ ಅನುಕೂಲಕರವಾಗಿವೆ.

ಸಂಪರ್ಕದಲ್ಲಿ ಪ್ರಾಥಮಿಕ ಸಂಪರ್ಕ ಮತ್ತು ಮಾಧ್ಯಮಿಕ ಸಂಪರ್ಕಗಳೆಂಬ ಎರಡು ಬಗೆಗಳು ಕಂಡುಬರುತ್ತವೆ. ಕುಟುಂಬ ಅಥವಾ ಆಟದ ಸಮೂಹಗಳಲ್ಲಿ ಕಂಡು ಬರುವ ಮುಖಾಮುಖಿ ಸಂಬಂಧ ಮತ್ತು ಆತ್ಮೀಯತೆ ಪ್ರತ್ಯಕ್ಷ ಹಾಗೂ ಪ್ರಾಥಮಿಕ ಸಂಪರ್ಕಕ್ಕೆ ಉದಾಹರಣೆಯಾಗಿದೆ. ಬೃಹತ್ ಜನ ಸಮೂಹಗಳ ನಡುವೆ ಇರುವ ಪರೋಕ್ಷ ಸಂಬಂಧಗಳನ್ನು ಮಾಧ್ಯಮಿಕ ಸಂಪರ್ಕ ಎನ್ನುತ್ತೇವೆ. ಉದಾ:- ರಾಷ್ಟ್ರಗಳ ನಡುವಿನ ಸಂಪರ್ಕ, ನಗರದ ಸದಸ್ಯರ ನಡುವಿನ ಸಂಪರ್ಕ.

೨. ಸಂವಹನ

ವ್ಯಕ್ತಿ ವ್ಯಕ್ತಿಗಳ ನಡುವೆ ಹಾಗೂ ಸಮೂಹಗಳ ನಡುವೆ ಸಂವಹನದ ಮೂಲಕ ಸಂಪರ್ಕ ಏರ್ಪಡುತ್ತದೆ. ಆದ್ದರಿಂದ ಇದು ಅಂತರಕ್ರಿಯೆಯ ಪ್ರಮುಖ ಮಾಧ್ಯಮವೆನಿಸಿಕೊಳ್ಳುತ್ತದೆ. ಸಂವಹನದಲ್ಲಿ ಹಲವಾರು ಮಾಧ್ಯಮಗಳಿವೆ. ಮಾತು, ಚರ್ಚೆ, ಹರಟೆ, ಸಾಂಸ್ಕೃತಿಕ ಚಟುವಟಿಕೆಗಳು, ರೇಡಿಯೋ, ಸಿನಿಮಾ, ಸುದ್ದಿ ಪತ್ರಿಕೆ, ಇತ್ಯಾದಿ. ವ್ಯಕ್ತಿಗಳು ಭೌತಿಕವಾಗಿ ಸನಿಹದಲ್ಲಿದ್ದು, ಸಂವಹನವಿಲ್ಲದಿದ್ದರೆ ಅಂತರಕ್ರಿಯೆ ಏರ್ಪಡಲಾರದು. ಸಂವಹನದ ಮೂಲಕವೇ ವ್ಯಕ್ತಿ ಇತರರ ಭಾವನೆಗಳು, ಆಲೋಚನೆಗಳನ್ನು ಅರ್ಥಮಾಡಿಕೊಳ್ಳುವುದು ಸಾಧ್ಯ. ಹಾಗೆಯೇ ಅದಕ್ಕೆ ಪ್ರತಿಕ್ರಿಯಿಸಲೂಬಹುದು.

ಪಾರ್ಕ್ ಮತ್ತು **ಬರ್ಗೆಸ್** ಅವರು ಸಂವಹನ ಏರ್ಪಡುವ ೩ ಹಂತಗಳ ಬಗ್ಗೆ ತಿಳಿಸುತ್ತಾರೆ. ಅವುಗಳೆಂದರೆ : ಪಂಚೇಂದ್ರಿಯಗಳ ಮೂಲಕ ಏರ್ಪಡುವ ಸಂವಹನ, ಭಾವಾತ್ಮಕ ಸಂವಹನ ಮತ್ತು ವಿಚಾರಗಳ ಮೂಲಕ ಏರ್ಪಡುವ ಸಂವಹನ. ಮೊದಲ ಎರಡನ್ನು ಸಹ ಸಂವಹನ ರೂಪಗಳೆನ್ನಬಹುದು. ಏಕೆಂದರೆ ಸಾಮಾನ್ಯವಾಗಿ ಇವುಗಳನ್ನು ಮನುಷ್ಯ ಹಾಗೂ ಪ್ರಾಣಿಗಳಲ್ಲಿ ಕಾಣುತ್ತೇವೆ. ಆದರೆ ಮೂರನೆಯದು ಮನುಷ್ಯರಿಗೆ ಮಾತ್ರ ಸೀಮಿತವಾಗಿರುತ್ತದೆ.

೧. ಇಂದ್ರಿಯಗಳ ಮೂಲಕ ಏರ್ಪಡುವ ಸಂವಹನ

ಪಂಚೇಂದ್ರಿಯಗಳ ಮೂಲಕ ಮಾನವನಾಗಲಿ ಅಥವಾ ಪ್ರಾಣಿಯಾಗಲಿ ವಿಷಯಗಳನ್ನು ಗ್ರಹಿಸಬಹುದು ಅಥವಾ ಅಭಿವ್ಯಕ್ತಿಗೊಳಿಸಬಹುದು. ಅವರ ನಡವಳಿಕೆಯನ್ನು ಈ ಬಗೆಯ ಸಂವಹನದ ಮೂಲಕ ತಿಳಿಯಬಹುದು. ಈ ಬಗೆಯ ಸಂವಹನದ ರೀತಿಗಳಾದ ನೋಡುವುದು

ಅಥವಾ ವೀಕ್ಷಿಸುವುದು, ಕೇಳುವಿಕೆ, ಆಘ್ರಾಣಿಸುವುದು, ರುಚಿ ನೋಡುವುದು, ಸ್ಪರ್ಶಿಸುವುದು, ಪ್ರತಿಕ್ರಿಯೆಯನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

೨. ಭಾವನಾತ್ಮಕ ಸಂವಹನ

ಭಾವನೆಗಳು ಶರೀರ ಭಾಷೆಯ ಮೂಲಕ ಹಲವಾರು ರೀತಿಯಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಮುಖಭಾವವು ಶರೀರ ಭಾಷೆಯ ಒಂದು ಬಗೆ. ಮುಖ ಭಾವನೆಯ ಮೂಲಕ ಮಾನವನ ಮನಸ್ಸಿನ ಅನೇಕ ರೀತಿಯ ಆವೇಗಗಳು (ಸಂತೋಷ, ದುಃಖ, ಕೋಪ, ಸೌಮ್ಯತೆ, ಅಸಹ್ಯತೆ, ಆಹ್ಲಾದ, ಇತ್ಯಾದಿ) ಅಭಿವ್ಯಕ್ತವಾಗಬಹುದು. ಮುಖಭಾವವಲ್ಲದೆ ಇನ್ನಿತರ ಭಾವಾಭಿನಯದ ಮೂಲಕವೂ ಅಂತರಂಗದ ಭಾವನೆಗಳು ವ್ಯಕ್ತವಾಗಬಹುದು.

೩. ವಿಚಾರಗಳ ಮೂಲಕ ಏರ್ಪಡುವ ಸಂವಹನ

ವಿಚಾರಗಳ ಮೂಲಕ ಏರ್ಪಡುವ ಸಂವಹನದಲ್ಲಿ ಭಾಷೆ ಪ್ರಧಾನ ಪಾತ್ರವಹಿಸುತ್ತದೆ. ವಿಚಾರಗಳ ಮೂಲಕ ಪ್ರಕಟಗೊಳ್ಳುವ ಅಭಿವ್ಯಕ್ತಿ ಮಾನವರಲ್ಲಿ ಮಾತ್ರ ಕಂಡುಬರುತ್ತದೆ. ಭಾಷೆಯ ಮೂಲಕ ವ್ಯಕ್ತಿ ತನ್ನ ವಿಚಾರಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದಲ್ಲದೆ, ಮುಂದಿನ ತಲೆಮಾರಿಗೆ ವರ್ಗಾಯಿಸುತ್ತಾನೆ. ವಿಚಾರಗಳ ಒಟ್ಟು ರೂಪವು ಮಾನವನ ಸಾಂಸ್ಕೃತಿಕ ಪರಂಪರೆಯಾಗುತ್ತದೆ. ವಿಚಾರಗಳ ವರ್ಗಾವಣೆಯ ವೇಗ, ಆಧುನಿಕ ಸಂವಹನದ ಸಾಧನಗಳಿಂದ, ಹೆಚ್ಚುತ್ತಾ ನಡೆದಿದೆ.

ಸಾಮಾಜಿಕ ಅಂತರಕ್ರಿಯೆಯ ಪ್ರಾಮುಖ್ಯತೆ

ಅಂತರಕ್ರಿಯೆಯು ಸಾಮಾಜಿಕ ಜೀವನದ ಮೂಲ. ಅಂತರಕ್ರಿಯೆಯಿಂದ ಸಮೂಹ ಜೀವನಕ್ಕೆ ಅರ್ಥ ಬರುತ್ತದೆ. ವ್ಯಕ್ತಿಗಳು ಹಾಗೂ ಸಮೂಹಗಳ ನಡುವಿನ ಅಂತರಕ್ರಿಯೆಯಿಂದಾಗಿ, ಪರಸ್ಪರ ಅರಿವು ಉಂಟಾಗುವುದಲ್ಲದೆ, ಅನೇಕ ರೀತಿಯ ಸಾಮಾಜಿಕ ಸಂಬಂಧಗಳ ಸೃಷ್ಟಿಗೆ ಕಾರಣವಾಗುತ್ತವೆ. ಅಂತರಕ್ರಿಯೆಯಿಲ್ಲದೆ ಸಮಾಜ, ಸಮುದಾಯಗಳು ಅಸ್ತಿತ್ವಕ್ಕೆ ಬರಲಾರವು. ಅಂತರಕ್ರಿಯೆಯ ಹಲವು ಪ್ರಕಾರಗಳ ಪ್ರಕ್ರಿಯೆಯಿಂದಾಗಿ ಸಮಾಜ ಗತಿಶೀಲ ಹಾಗೂ ಸ್ಥಿರತೆಯ ಗುಣವನ್ನು ಗಳಿಸಿಕೊಳ್ಳುತ್ತದೆ. ಮೂಲಭೂತವಾಗಿ ವ್ಯಕ್ತಿಯ ವ್ಯಕ್ತಿತ್ವ ಅರಳುವುದು ಇದರ ಮೂಲಕವೇ. ಮಾನವನ ಸಮಸ್ತ ಚಟುವಟಿಕೆಗಳಿಗೆ ಅಂತರಕ್ರಿಯೇ ಆಧಾರ.

ಸಾಮಾಜಿಕ ಅಂತರಕ್ರಿಯೆಯ ಪ್ರಕಾರಗಳು

ಸಮೂಹ ಜೀವನದಲ್ಲಿ ಹಲವಾರು ಬಗೆಯ ಅಂತರಕ್ರಿಯೆಗಳು ಸಂಭವಿಸುವುದು ಕಂಡು ಬರುತ್ತದೆ. ಅಂತರಕ್ರಿಯೆಯ ಕೆಲವು ಪ್ರಕಾರಗಳು ಸಮೂಹದಲ್ಲಿ ವ್ಯಕ್ತಿಗಳನ್ನು ಹತ್ತಿರಕ್ಕೆ ತರುತ್ತವೆ. ಉದಾಹರಣೆಗೆ ಸಹಕಾರ, ಸ್ವಾಂಗೀಕರಣ ಮತ್ತು ಹೊಂದಾಣಿಕೆಯಂತಹ ಅಂತರಕ್ರಿಯೆಗಳು ವ್ಯಕ್ತಿಗಳು ಸನಿಹಕ್ಕೆ ಬರಲು ಅವಕಾಶಗಳನ್ನು ಕಲ್ಪಿಸುತ್ತವೆ. ಆದರೆ ಸ್ಪರ್ಧೆ ಮತ್ತು ಘರ್ಷಣೆಗಳಂತಹ ಅಂತರಕ್ರಿಯೆಗಳು ವ್ಯಕ್ತಿಗಳನ್ನು ಪರಸ್ಪರ

ವಿರೋಧಿಗಳನ್ನಾಗಿಸುತ್ತವೆ. ಅಂತರಕ್ರಿಯೆಗಳು ಸಂಭವಿಸುವ ವಿವಿಧ ರೂಪಗಳನ್ನು ಸಾಮಾಜಿಕ ಪ್ರಕ್ರಿಯೆಗಳೆಂದೂ ಕರೆದಿದ್ದಾರೆ. ಸಮಾಜದಲ್ಲಿ ಸಾಮಾಜಿಕ ಪ್ರಕ್ರಿಯೆಗಳು ನಿರಂತರವಾಗಿ ರುವುದರಿಂದ, ವ್ಯಕ್ತಿಗಳು ಇತರರೊಂದಿಗೆ ನಿರಂತರವಾದ ಸಂಪರ್ಕವನ್ನು ಹೊಂದಿರುತ್ತಾರೆ. ಸಮಾಜದಲ್ಲಿ ಸಾಮಾಜಿಕ ಪ್ರಕ್ರಿಯೆಗಳ ಎರಡು ಪ್ರಧಾನ ರೂಪಗಳನ್ನು ನೋಡಬಹುದು. ಮೊದಲನೆ ರೂಪದ ಸಾಮಾಜಿಕ ಪ್ರಕ್ರಿಯೆಗಳಲ್ಲಿ ಸಹಕಾರ, ಹೊಂದಾಣಿಕೆ, ಸ್ವಾಂಗೀಕರಣ ಮುಂತಾದ ಅಂತರಕ್ರಿಯೆಗಳನ್ನು ಕಾಣುತ್ತೇವೆ. ಈ ಬಗೆಯ ಸಾಮಾಜಿಕ ಪ್ರಕ್ರಿಯೆಗಳನ್ನು "ಸಂಘಟಿತ ಸಾಮಾಜಿಕ ಪ್ರಕ್ರಿಯೆ"ಗಳೆಂದು ಕರೆಯುತ್ತಾರೆ. ಎರಡನೇ ಪ್ರಕಾರದ ಸಾಮಾಜಿಕ ಪ್ರಕ್ರಿಯೆಗಳಲ್ಲಿ ಸ್ಪರ್ಧೆ, ಘರ್ಷಣೆ, ವಿರೋಧಾತ್ಮಕತೆ ಅಂತರಕ್ರಿಯೆ ಗಳಿರುತ್ತವೆ. ಇವುಗಳನ್ನು "ವಿಸಂಘಟಿತ ಸಾಮಾಜಿಕ ಪ್ರಕ್ರಿಯೆ"ಗಳೆಂದು ಕರೆಯುತ್ತೇವೆ.

ಅಂತರಕ್ರಿಯೆಗಳ ವರ್ಗೀಕರಣದ ವಿಷಯದಲ್ಲಿ ಸಮಾಜಶಾಸ್ತ್ರಜ್ಞರಲ್ಲಿ ಭಿನ್ನಮತವಿದೆ. ಜರ್ಮನಿಯ **ವೋನ್ ವೈಜ್** ಅವರು ೬೫೦ ಉಪಪ್ರಕಾರಗಳ ಬಗ್ಗೆ ಉಲ್ಲೇಖಿಸಿದ್ದಾರೆ. **ರಾಸ್** ಎಂಬುವರು ತಮ್ಮ ಸಾಮಾಜಿಕ ಪ್ರಕ್ರಿಯೆಗಳ ವಿಶ್ಲೇಷಣೆಯಲ್ಲಿ ೩೮ ಪ್ರಕಾರಗಳ ಬಗ್ಗೆ ತಿಳಿಸಿದ್ದಾರೆ. ಆದರೆ **ಪಾರ್ಕ್** ಮತ್ತು **ಬರ್ಗೆಸ್** ಅವರು ಮುಖ್ಯವಾಗಿ ನಾಲ್ಕು ಬಗೆಯ ಅಂತರಕ್ರಿಯೆಗಳನ್ನು ವಿವರಿಸಿದ್ದಾರೆ. ಸ್ಪರ್ಧೆ, ಸಂಘರ್ಷ, ಹೊಂದಾಣಿಕೆ ಮತ್ತು ಸ್ವಾಂಗೀಕರಣ. ಸಮಾಜಶಾಸ್ತ್ರದ ವಲಯದಲ್ಲಿ ಈ ವರ್ಗೀಕರಣ ಸ್ವೀಕೃತವಾಗಿರುವುದಲ್ಲದೆ 'ಸಹಕಾರ' ಎಂಬ ಐದನೇ ಪ್ರಕಾರವನ್ನು ಸೇರಿಸಿಕೊಂಡಿದ್ದಾರೆ. ಸಾಮಾಜಿಕ ಪ್ರಕ್ರಿಯೆಗಳ ಈ ಐದು ಪ್ರಕಾರಗಳನ್ನು ಈ ಕೆಳಗಿನಂತೆ ವಿವರಿಸಬಹುದು.

೧. ಸಹಕಾರ

ಸಹಕಾರವು ಸಾಮಾಜಿಕ ಜೀವನದ ಪ್ರಾಥಮಿಕ ಪ್ರಕ್ರಿಯೆಯಾಗಿದೆ. ಇದರ ಹೊರತಾಗಿ ಸಮಾಜದ ಅಸ್ತಿತ್ವ ಇಲ್ಲ. ಇದರ ಮೂಲಕ ವ್ಯಕ್ತಿಗಳು ಮತ್ತು ಸಮೂಹಗಳು ಒಟ್ಟಿಗೆ ಕಲೆತು ಸಾಮಾನ್ಯ ಗುರಿಗಳು ಅಥವಾ ಉದ್ದೇಶಗಳನ್ನು ಸಾಧಿಸಿಕೊಳ್ಳುತ್ತಾರೆ. ಅಲ್ಲದೆ, ಪಾಲ್ಗೊಳುವ ಸದಸ್ಯರು ಪರಸ್ಪರ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ. 'ಸಹಕಾರ' ಎಂಬ ಪದ ಇಂಗ್ಲಿಷ್‌ನ 'ಕೋ ಆಪರೇಷನ್' ಪದದ ಕನ್ನಡಾನುವಾದವಾಗಿದೆ. ಕೋ ಆಪರೇಷನ್ ಪದವು ಲ್ಯಾಟಿನ್‌ನ ಎರಡು ಪದಗಳಾದ 'ಕೋ' ಮತ್ತು 'ಅಪೆರರಿ'ಗಳಿಂದ ವ್ಯುತ್ಪತ್ತಿ ಹೊಂದಿದೆ. 'ಕೊ' ಎಂದರೆ "ಒಟ್ಟಿಗೆ ಸೇರು", 'ಅಪೆರರಿ' ಅಂದರೆ "ಕಾರ್ಯವೆಸಗು". ಶಬ್ದಶಾಸ್ತ್ರೀಯ ಅರ್ಥಕ್ಕನುಗುಣವಾಗಿ ಸಹಕಾರ ಎಂಬ ಪದವು ಒಟ್ಟಿಗೆ ಸೇರಿ ದುಡಿಯುವುದು ಅಥವಾ ಕೆಲಸ ಮಾಡುವುದು ಎಂಬ ಮೂಲಾರ್ಥವನ್ನು ಹೊಂದಿದೆ. ಸಹಕಾರವು ಒಂದು ಸಂಘಟಿತ ಸಾಮಾಜಿಕ ಪ್ರಕ್ರಿಯೆ. ಸಹಕಾರವು ಸಮಾಜದಲ್ಲಿ ಕಂಡು ಬರುವ ಅತ್ಯಗತ್ಯತೆಯ ಅಂಶ. ಪತಿ-ಪತ್ನಿಯರಿಬ್ಬರು ಇರುವ ಒಂದು ಚಿಕ್ಕ ಸಮೂಹದಿಂದ ವಿಶ್ವಸಂಸ್ಥೆಯಂತಹ ಬೃಹತ್ ಸಂಘಟನೆವರೆಗೆ ಸಹಕಾರ ಪ್ರಕ್ರಿಯೆಯನ್ನು ಕಾಣಬಹುದು. ಪ್ರಾಚೀನ ಸಮಾಜಗಳಲ್ಲಿ ಸಹಕಾರ ಅಪ್ರಜ್ಞಾಪೂರ್ವಕ ಸದಸ್ಯರುಗಳ ನಡುವೆ ನೆಲೆಸಿರುತ್ತಿತ್ತು.

ಸಹಕಾರದ ಪ್ರಕಾರಗಳು ಸಾಂಪ್ರದಾಯಿಕ ಸ್ವಭಾವವನ್ನು ಹೊಂದಿರುತ್ತಿದ್ದವು. ಆದರೆ ಆಧುನಿಕ ಸಮಾಜದಲ್ಲಿ ಸಹಕಾರವು ಉದ್ದೇಶಪೂರ್ವಕವಾಗಿ ಹಾಗೂ ಯೋಜನಾಬದ್ಧವಾಗಿರುತ್ತದೆ. ಜನರು ತಮ್ಮ ಅಪೇಕ್ಷೆಗಳನ್ನು ಒಗ್ಗಟ್ಟಾಗಿ ನೆರವೇರಿಸಿಕೊಳ್ಳುತ್ತಾರೆ.

ವ್ಯಾಖ್ಯೆ

"ಸಹಕಾರವು ಸಾಮಾಜಿಕ ಅಂತರಕ್ರಿಯೆಯ ಒಂದು ಪ್ರಕಾರವಾಗಿದ್ದು, ಇದರಲ್ಲಿ ಇಬ್ಬರು ವ್ಯಕ್ತಿಗಳು ಅಥವಾ ಇನ್ನು ಹೆಚ್ಚಿನ ಜನರು ಸಾಮಾನ್ಯ ಗುರಿ ಸಾಧಿಸಲು ಒಟ್ಟಾಗಿ ಕಾರ್ಯ ನಿರ್ವಹಿಸುತ್ತಾರೆ" - **ಮೆರಿಲ್ ಮತ್ತು ಎಲ್ರಿಜ್.**

"ಜನರು ಪರಸ್ಪರ ಹೊಂದಿರುವ ಗುರಿಗಳನ್ನು ಸಾಧಿಸಲು ಒಗ್ಗಟ್ಟಿನ ಪ್ರಯತ್ನವೇ ಸಹಕಾರ" - **ಕಾಲಿನ್ಸ್ ಸಮಾಜಶಾಸ್ತ್ರ ನಿಘಂಟು.**

ಎ.ಡಬ್ಲ್ಯೂ. ಗ್ರೀನ್ ಅವರ ಅಭಿಪ್ರಾಯದಂತೆ "ಅವ್ಯಾಹತವಾದ ಮತ್ತು ಸಮಾನವಾದ ಪ್ರಯತ್ನದಿಂದ ಒಂದು ಧ್ಯೇಯವನ್ನು ಇಬ್ಬರು ಅಥವಾ ಹೆಚ್ಚಿನ ಜನರು ಸಾಧಿಸುವ ಕಾರ್ಯವನ್ನು ಸಹಕಾರ" ಎನ್ನಬಹುದು.

ಸಹಕಾರದ ಪ್ರಕಾರಗಳು

ಸಹಕಾರವು ಪ್ರಾಥಮಿಕ ಹಾಗೂ ಮಾಧ್ಯಮಿಕ ಸಮೂಹಗಳೆರಡರಲ್ಲೂ ಕಂಡು ಬರುತ್ತದೆ. ಇವುಗಳನ್ನು ಪ್ರತ್ಯಕ್ಷ ಸಹಕಾರ ಮತ್ತು ಪರೋಕ್ಷ ಸಹಕಾರವೆನ್ನಲಾಗುತ್ತದೆ. ಪ್ರಾಥಮಿಕ ಸಮೂಹಗಳಲ್ಲಿ ಕಂಡುಬರುವುದು ಪ್ರತ್ಯಕ್ಷ ಸಹಕಾರ. ಇದು ರಕ್ತ ಸಂಬಂಧಗಳು, ಭಾವನೆಗಳು ಮತ್ತು ಪರಸ್ಪರ ಹೊಣೆಗಾರಿಕೆ ಅಂಶಗಳನ್ನು ಆಧರಿಸಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ಹಲವಾರು ಚಿಕ್ಕ ಸಮೂಹಗಳ ಭಾಗವಾಗಿ, ಸಾಮೂಹಿಕ ಜೀವನಕ್ಕೆ ತನಗೆ ತಾನೆ ಹೊಂದಿಕೊಂಡಿರುತ್ತಾನೆ. ಇದೇ ರೀತಿ ಕುಟುಂಬ, ಮನೋರಂಜನೆ ಸಮೂಹಗಳು ಮತ್ತು ವೃತ್ತಿ ಸಮೂಹಗಳಲ್ಲಿ ಹೊಂದಿಕೊಂಡು ಬಾಳುತ್ತಾನೆ. ಕೊಟ್ಟು ತೆಗೆದುಕೊಳ್ಳುವ ಸಂಬಂಧದ ಮೂಲಕ ಸಮೂಹ ಜೀವನದಲ್ಲಿ ಸಂತೃಪ್ತಿ ಪಡೆಯುತ್ತಾನೆ. ರಕ್ತಸಂಬಂಧಿಗಳ (ಬಂಧುಗಳ) ನಡುವೆ, ಕರ್ತವ್ಯಗಳು, ಹೊಣೆಗಾರಿಕೆಗಳು, ಸಹಾಯ ಮತ್ತು ಸಹಕಾರ ಪರಸ್ಪರ ಹೊಣೆಗಾರಿಕೆಯ ಭಾವನೆಯನ್ನು ಆಧರಿಸಿವೆ. ಯಾವುದೇ ಒಬ್ಬ ವ್ಯಕ್ತಿ ಸಹಕಾರ ಚಟುವಟಿಕೆಗಳಲ್ಲಿ ಭಾಗಿಯಾಗದಿದ್ದರೆ, ಆತನನ್ನು ಸಾಮೂಹಿಕ ಜೀವನದಿಂದ ದೂರವಿಡಲಾಗುತ್ತದೆ. **ಹಾರ್ಟನ್** ಮತ್ತು **ಹಾಂಟ್** ಅವರು ಹೇಳುವಂತೆ ಸಹಕಾರವು ಪ್ರಾಥಮಿಕ ಸಮೂಹಗಳಲ್ಲಿ ಮಾತ್ರ ಪ್ರಾಮುಖ್ಯತೆಯನ್ನು ಪಡೆಯದೆ, ಮಾಧ್ಯಮಿಕ ಸಮೂಹಗಳಿಗೂ ನಿಕಟವಾಗಿ ಸಂಬಂಧಪಟ್ಟಿರುತ್ತದೆ. ಬಹುತೇಕ ಬೃಹತ್ ಸಂಘಟನೆಗಳು ಹಲವಾರು ಚಿಕ್ಕ ಪ್ರಾಥಮಿಕ ಸಮೂಹಗಳನ್ನು ಒಳಗೊಂಡು ಸಹಕಾರವು ಅತ್ಯಂತ ನಿಕಟ ವೈಯಕ್ತಿಕ ಸಂಬಂಧಗಳನ್ನು ಆಧರಿಸಿ ಕಾರ್ಯನಿರ್ವಹಿಸುತ್ತದೆ.

ಮಾಧ್ಯಮಿಕ ಸಮೂಹಗಳಲ್ಲಿ ಸಹಕಾರವು ನಿರ್ದಿಷ್ಟ ಉದ್ದೇಶ ಮತ್ತು ಸಾಮೂಹಿಕ ಆಸಕ್ತಿಯನ್ನು ಆಧರಿಸಿರುತ್ತದೆ. ಅವೈಯಕ್ತಿಕ ಸ್ವರೂಪದ ಸಹಕಾರ ಇಲ್ಲಿ ಕಂಡು ಬರುತ್ತದೆ.

ಇನ್ನು ಆರ್ಥಿಕ, ರಾಜಕೀಯ ಆಡಳಿತಾತ್ಮಕ, ಧಾರ್ಮಿಕ ಮತ್ತು ಸರ್ಕಾರಿ ಸಂಘಟನೆಗಳಲ್ಲಿ, ಸದಸ್ಯರ ನಡುವೆ ಪರಸ್ಪರ ಪರಿಚಯವಿಲ್ಲದಿದ್ದರೂ ಸಹಕಾರದಿಂದ ದುಡಿಯುತ್ತಾರೆ. ಇದನ್ನು ತೃತೀಯ ಹಂತದ ಸಹಕಾರ ಎನ್ನುತ್ತಾರೆ.

ಬಹುತೇಕ ಮಾಧ್ಯಮಿಕ ಸಮೂಹಗಳಲ್ಲಿ ಪರೋಕ್ಷ ಸಹಕಾರ ಕಂಡುಬರುತ್ತದೆ. ಅನೇಕ ವ್ಯಕ್ತಿಗಳು ಒಂದು ಉದ್ದೇಶ ಸಾಧನೆಗಾಗಿ ವಿವಿಧ ಬಗೆಯ ಕಾರ್ಯಗಳಲ್ಲಿ ಪ್ರತ್ಯೇಕವಾಗಿ ದುಡಿಯುವ ಶ್ರಮಕ್ಕೆ ಪರೋಕ್ಷ ಸಹಕಾರವೆನ್ನುತ್ತಾರೆ. ಈ ಬಗೆಯ ಉದ್ದೇಶದ ಕಾರ್ಯಾಚರಣೆಯು ಶ್ರಮವಿಭಜನೆ ಹಾಗೂ ವಿಶೇಷ ಪರಿಣತಿಯ ತತ್ವಗಳನ್ನು ಆಧರಿಸಿ ರುತ್ತದೆ. ಉದಾಹರಣೆಗೆ ಒಂದು ಕಂಪನಿಯ ಸಿಬ್ಬಂದಿ ಬೇರೆ ಬೇರೆ ಕಾರ್ಯಗಳಲ್ಲಿ ತೊಡಗಿದ್ದರೂ, ತಾವೆಲ್ಲರೂ ಆ ಕಂಪನಿಯ ಮುಖ್ಯ ಉದ್ದೇಶದ ಈಡೇರಿಕೆಗಾಗಿ ದುಡಿಯುತ್ತಿದ್ದೇವೆ ಎಂಬ ಭಾವನೆ ಅವರಲ್ಲಿ ಇರುತ್ತದೆ.

ಸಾಂಪ್ರದಾಯಕ ಸಮಾಜಗಳಲ್ಲಿನ ಬೇರೆ ಬೇರೆ ಕ್ಷೇತ್ರಗಳಲ್ಲಿ ಸಹಕಾರವು ಸಂಪ್ರದಾಯ, ಪರಂಪರೆ, ಲೋಕರೂಢಿಗಳಿಂದ ನಿರ್ದೇಶಿತವಾಗಿರುತ್ತದೆ. ಭಾರತದ ಜಾತಿಪದ್ಧತಿಯಲ್ಲಿನ ಜಾಜಮಾನಿ (ಆಯಗಾರ) ವ್ಯವಸ್ಥೆ ಇದಕ್ಕೆ ಉತ್ತಮ ಉದಾಹರಣೆ. ಜಾತಿಗಳು ತಾವು ಪಾರಂಪರಿಕವಾಗಿ ಅನುಸರಿಸಿಕೊಂಡು ಬಂದಿರುವಂತಹ ವೃತ್ತಿಗಳಿಗೆ ಸಂಬಂಧಪಟ್ಟ ಸೇವೆಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದರು. ಆದರೆ ಆಧುನಿಕ ಸಂಕೀರ್ಣ ಸಮಾಜದಲ್ಲಿ ಪರೋಕ್ಷ ಸಹಕಾರವು ವ್ಯಾಪಕವಾಗಿ ಕಂಡು ಬರುತ್ತಿದೆ.

ಸಾಮಾಜಿಕ ಜೀವನದಲ್ಲಿ ಸಹಕಾರದ ಪಾತ್ರ

ಸಾಮಾಜಿಕ ಜೀವನದಲ್ಲಿ ಸಹಕಾರವು ಅತ್ಯಂತ ಪ್ರಮುಖವಾದ ಪ್ರಕ್ರಿಯೆಯಾಗಿದೆ. ಸಮಾಜದ ಬೆಳವಣಿಗೆಗೆ ಮತ್ತು ಜನರ ವ್ಯಕ್ತಿತ್ವ ವಿಕಾಸಕ್ಕೆ ಇದು ಅಗತ್ಯವಾಗಿದೆ. ಈ ಪ್ರಕ್ರಿಯೆ ನಿರಂತರವಾಗಿದ್ದು, ವ್ಯಕ್ತಿಯ ಜೈವಿಕ, ಮಾನಸಿಕ ಹಾಗೂ ಸಾಮಾಜಿಕ ಅಗತ್ಯಗಳನ್ನು ಪೂರೈಸುವಲ್ಲಿ ವಿಶಿಷ್ಟ ಪಾತ್ರವನ್ನು ವಹಿಸಿದೆ. ಸಮಾಜದಲ್ಲಿ ವ್ಯಕ್ತಿಗಳು ಸಾಮರಸ್ಯದ ಬದುಕನ್ನು ನಡೆಸಲು ಸಹಾಯವಾಗುತ್ತದೆ. ಸಮಾಜದಲ್ಲಿ ಕೂಡಿ ದುಡಿಯುವ ವಾತಾವರಣವಿಲ್ಲದಿದ್ದರೆ, ಸದಸ್ಯರು ಸಮಾನ ಆಸಕ್ತಿಗಳನ್ನು ಪೂರೈಸಿಕೊಳ್ಳಲಾರರು ಮತ್ತು ಅದು ಅವರ ಸಹ ಜೀವನಕ್ಕೆ ಬಾಧಕ ತರುತ್ತದೆ. ಸಹಕಾರ ತತ್ವದ ಆಧಾರದಲ್ಲಿ ಸಂಘರ್ಷಗಳು ಹಾಗೂ ಬಿಕ್ಕಟ್ಟುಗಳು ಪರಿಹಾರ ಕಂಡುಕೊಳ್ಳುವುದಲ್ಲದೆ, ಸಾಮಾಜಿಕ ಉನ್ನತಿ ಹಾಗೂ ಸಾಮಾಜಿಕ ಐಕ್ಯತೆ ಸ್ಥಾಪಿಸಲ್ಪಡುತ್ತದೆ.

೨. ಸ್ಪರ್ಧೆ

ಅಂತರಕ್ರಿಯೆಯ ಪ್ರಮುಖ ಪ್ರಕಾರಗಳಲ್ಲಿ ಸ್ಪರ್ಧೆಯು ಒಂದು ಮೂಲಭೂತ ಪ್ರಕಾರವಾಗಿದೆ ಎಂದು **ಪಾರ್ಕ್** ಮತ್ತು **ಬರ್ಗೆಸ್** ಅಭಿಪ್ರಾಯಪಟ್ಟಿದ್ದಾರೆ. ಸಂಘರ್ಷ ಅಥವಾ ಹೋರಾಟದ ಅಂಶವಾಗಿ ಸ್ಪರ್ಧೆ ಮಾನವ ಸಮಾಜದಲ್ಲಿ ಸಾರ್ವತ್ರಿಕವಾಗಿ ಕಂಡುಬರುವ ಪ್ರಕ್ರಿಯೆಯಾಗಿದೆ. ಸಸ್ಯ ಹಾಗೂ ಪ್ರಾಣಿ ಜಗತ್ತಿನಲ್ಲೂ ಸ್ಪರ್ಧೆ

ಕಂಡುಬರುತ್ತದೆ. ಸಮಾಜದಲ್ಲಿ, ಜನರು ಜೀವನಾವಶ್ಯಕತೆಗಳನ್ನು ಹಾಗೂ ಬಯಸುವ ವಸ್ತುಗಳನ್ನು ಹೊಂದಲು ಪ್ರತಿಯೊಬ್ಬರ ನಡುವೆ ನಿರಂತರವಾದ ಹೋರಾಟ ಇರುವುದನ್ನು ಕಾಣುತ್ತೇವೆ. ಸಮಾಜದಲ್ಲಿ ಸಂಪನ್ಮೂಲಗಳ ಕೊರತೆ ಮತ್ತು ಸೀಮಿತ ಗುರಿಗಳು ಇದ್ದು, ಅವುಗಳನ್ನು ಅಪೇಕ್ಷಿಸುವವರ ಸಂಖ್ಯೆ ಅಧಿಕವಾದಾಗ ಸ್ಪರ್ಧೆ ಏರ್ಪಡುತ್ತದೆ. ಸಮಾಜದಲ್ಲಿ ಜನರ ವ್ಯಕ್ತಿಗತ ಸಾಮರ್ಥ್ಯದಲ್ಲಿ ಭಿನ್ನತೆಯಿದ್ದು, ಪ್ರತಿಯೊಬ್ಬರೂ ಅವಕಾಶಗಳನ್ನು ಹಾಗೂ ಲಾಭಗಳನ್ನು ಹೊಂದಲು, ಪ್ರತ್ಯೇಕವಾಗಿ ಪ್ರಯತ್ನ ಪಡುತ್ತಾರೆ. ಈ ಪ್ರಕ್ರಿಯೆ ಸ್ಪರ್ಧೆ ಉಂಟಾಗಲು ಕಾರಣವಾಗುತ್ತದೆ. ಮಾನವ ಸಮುದಾಯವು ಒಂದು ವ್ಯವಸ್ಥೆಯನ್ನು ಹೊಂದಿದ್ದು, ಅದರ ಚೌಕಟ್ಟಿನೊಳಗೆ ವ್ಯಕ್ತಿಗಳು ಕಾರ್ಯನಿರ್ವಹಿಸಬೇಕು. ಸಮಾಜದಲ್ಲಿ ಅಪೇಕ್ಷಣೀಯ ವಸ್ತುಗಳ (ಭೂಮಿ, ಸರಕುಗಳು, ಉದ್ಯೋಗಗಳು) ಸೀಮಿತ ಪೂರೈಕೆ ಇದ್ದಂತಹ ಸಂದರ್ಭದಲ್ಲಿ, ಅಂತಹ ವಸ್ತುಗಳ ಹಂಚಿಕೆಯು ಸ್ಪರ್ಧೆಯಿಂದ ನಿರ್ಧಾರ ವಾಗುತ್ತದೆ. ಹೀಗೆ ಸಾಮಾಜಿಕ ಜೀವನದಲ್ಲಿ ಶ್ರಮವಿಭಜನೆ ಹಾಗೂ ಆರ್ಥಿಕ ಸಂಘಟನೆಯು ಸ್ಪರ್ಧೆಯ ಫಲಶ್ರುತಿಯೇ ಆಗಿದೆ.

ವ್ಯಾಖ್ಯೆ

೧. **ಬೈಸಾಂಜ್** ಮತ್ತು **ಬೈಸಾಂಜ್** ರವರ ಪ್ರಕಾರ "ಸೀಮಿತವಾದ, ಎಲ್ಲರೂ ಹೊಂದಲು ಸಾಧ್ಯವಾಗದಂತಹ ಒಂದು ಅವಕಾಶಕ್ಕಾಗಿ ಇಬ್ಬರು ಅಥವಾ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳು ಮಾಡುವ ವಿಶೇಷ ಪ್ರಯತ್ನವೇ ಸ್ಪರ್ಧೆ".

೨. "ಎಲ್ಲಾ ಆಕಾಂಕ್ಷಿಗಳನ್ನು ಹಿಂದೆ ತಳ್ಳಿ ಯಾವುದೇ ಒಂದು ಪ್ರತಿಫಲವನ್ನು ಹೊಂದಲು ನಡೆಸುವ ಪ್ರಯತ್ನವೇ ಸ್ಪರ್ಧೆ" ಎಂದು **ಹಾರ್ಟನ್** ಮತ್ತು **ಹಾಂಟ್** ವ್ಯಾಖ್ಯಾನಿಸಿದ್ದಾರೆ.

ಸ್ಪರ್ಧೆಯ ಸ್ವರೂಪ

ಸ್ಪರ್ಧೆ ಹಲವಾರು ಕಾರಣಗಳಿಗಾಗಿ ಮಾನವ ಸಮಾಜದಲ್ಲಿ ನಡೆಯಬಹುದು. ಸಮಾಜದಲ್ಲಿ ಹಣ ಮತ್ತು ವಸ್ತುಗಳು ಸೀಮಿತ ಪೂರೈಕೆಯಲ್ಲಿರುತ್ತವೆ; ಉದ್ಯೋಗಗಳ ಕೊರತೆ ಇರುತ್ತದೆ. ಹೀಗಾಗಿ ಹಣ, ಅಧಿಕಾರ, ಅಂತಸ್ತು, ಗೌರವ, ಪ್ರೀತಿ ಇತ್ಯಾದಿಗಳನ್ನು ಹೊಂದಲು ವ್ಯಕ್ತಿಗಳಲ್ಲಿ ಸದಾ ಪ್ರಯತ್ನ ನಡೆದಿರುತ್ತದೆ. ಇವುಗಳು ತಮಗೆ ದೊರಕದಿದ್ದಾಗ ವ್ಯಕ್ತಿಗಳು ಸ್ಪರ್ಧೆಗೆ ಇಳಿಯಬಹುದು. ವಿಶೇಷವೆಂದರೆ ಆರ್ಥಿಕ ಸಮೃದ್ಧಿ ಇದ್ದಂತಹ ಸನ್ನಿವೇಶದಲ್ಲೂ ಸ್ಪರ್ಧೆ ಕಾರ್ಯಶೀಲವಾಗಿರುತ್ತದೆ.

ಸ್ಪರ್ಧೆಯು ಅಪ್ರಜ್ಞಾಪೂರ್ವಕವಾಗಿ ನಡೆಯುತ್ತದೆ. ವ್ಯಕ್ತಿಗಳು ತಮ್ಮ ಉದ್ದೇಶ ಸಾಧನೆಗಾಗಿ ಅವಶ್ಯಕವಾಗಿ ಸ್ಪರ್ಧೆಗಿಳಿಯಬೇಕಾಗುತ್ತದೆ. ಆದರೆ ಅವರು ಭಾಗಿಯಾಗಿರುವ ಚಟುವಟಿಕೆಗಳಲ್ಲಿ ಸ್ಪರ್ಧಾತ್ಮಕ ಗುಣವಿರುವ ಬಗ್ಗೆ ಅರಿವಿಲ್ಲದೆಯೂ ಇರಬಹುದು. ಸ್ಪರ್ಧಾ ಪ್ರಕ್ರಿಯೆಯು ಸಾಮಾಜಿಕ ನಿಯಮಗಳ ಚೌಕಟ್ಟಿನೊಳಗೇ ನಡೆಯುತ್ತದೆ. ಸ್ಪರ್ಧೆಯು ನಿಯಮಗಳ ಎಲ್ಲೆಯನ್ನು ಮೀರಿದಾಗ ಘರ್ಷಣೆಯ ರೂಪವನ್ನು ತಳೆದು ಸಮಾಜಕ್ಕೆ ಹಾನಿಕಾರವಾಗಬಹುದು. ಸ್ಪರ್ಧೆ ಜೀವನದ ಸಮಸ್ತ ಸನ್ನಿವೇಶಗಳಲ್ಲೂ ವ್ಯಾಪಿಸಿದ್ದು,

ಸಾರ್ವತ್ರಿಕ ಸ್ವರೂಪವನ್ನು ಪಡೆದುಕೊಂಡಿದೆ. ಸ್ಪರ್ಧೆಯ ವೈಯಕ್ತಿಕ ಹಾಗೂ ಸಾಮೂಹಿಕ ನೆಲೆಗಳೆರಡರಲ್ಲೂ ಕಂಡುಬರುತ್ತದೆ. ಸಾಮಾಜೀಕರಣದ ಮೂಲಕ ವ್ಯಕ್ತಿಗೆ ಸ್ಪರ್ಧಾ ಮನೋಭಾವ ಪ್ರಾಪ್ತವಾಗುತ್ತದೆಯೇ ಹೊರತು, ಮೂಲಭೂತವಾಗಿ ಹುಟ್ಟಿನಿಂದಲೇ ಪ್ರಾಪ್ತಿಯಾಗಿರುವುದಿಲ್ಲ.

ಸ್ಪರ್ಧೆಯ ಪ್ರಕಾರಗಳು

ಗಿಲಿನ್ ಮತ್ತು ಗಿಲಿನ್ ತಮ್ಮ 'ಕಲ್ಚರಲ್ ಸೋಶಿಯಾಲಜಿ' ಗ್ರಂಥದಲ್ಲಿ ನಾಲ್ಕು ವಿಧದ ಸ್ಪರ್ಧೆಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅವುಗಳೆಂದರೆ ಆರ್ಥಿಕ ಸ್ಪರ್ಧೆ, ಸಾಂಸ್ಕೃತಿಕ ಸ್ಪರ್ಧೆ, ಪಾತ್ರ ಹಾಗೂ ಅಂತಸ್ತುಗಾಗಿ ಸ್ಪರ್ಧೆ ಮತ್ತು ಜನಾಂಗೀಯ ಸ್ಪರ್ಧೆ.

ಮೆರ್ಸರ್ ಮತ್ತು ವ್ಯಾಂಡರರ್ ಸ್ಪರ್ಧೆಯನ್ನು ನಾಲ್ಕು ಪ್ರಕಾರಗಳಾಗಿ ವರ್ಗೀಕರಿಸಿದ್ದಾರೆ:

೧. ಶುದ್ಧ ಮತ್ತು ಸೀಮಿತ ಸ್ಪರ್ಧೆ

ಸೈದ್ಧಾಂತಿಕವಾಗಿ ಮಾತ್ರ ಶುದ್ಧವಾದ ಸ್ಪರ್ಧೆ ಅಸ್ತಿತ್ವದಲ್ಲಿರಬಹುದು. ಸಾಂಸ್ಕೃತಿಕ ಮಿತಿಗಳು ಅಥವಾ ನಿಷೇಧಗಳನ್ನು ಮೀರಿ ಕೊನೆತನಕವೂ ಪೈಪೋಟಿ ಏರ್ಪಟ್ಟರೆ ಅದು ಶುದ್ಧ ಸ್ಪರ್ಧೆಯಾಗುತ್ತದೆ. ಇದು ಅಸ್ಪಷ್ಟರೂಪದಲ್ಲಿರುತ್ತದೆ. ಯಾವಾಗ ಸ್ಪರ್ಧೆಯಲ್ಲಿ ಸಹಕಾರದ ಅಂಶ ಕಂಡು ಬಂದು, ವ್ಯಕ್ತಿಗಳು ನಿಯಮಗಳಿಗನುಗುಣವಾಗಿ ಸ್ಪರ್ಧಿಸುತ್ತಾರೋ, ಆಗ ಅದು ಸೀಮಿತ ಸ್ಪರ್ಧೆ ಎನಿಸಿಕೊಳ್ಳುತ್ತದೆ. ವ್ಯಕ್ತಿಗಳು ಸಹಕಾರದೊಂದಿಗೆ ಸಮ್ಮತಿ ಪೂರ್ವಕವಾಗಿ ನಡವಳಿಕೆಗೆ ಬದ್ಧರಾದಾಗ ಸ್ಪರ್ಧೆ ಸೀಮಿತ ಸ್ವರೂಪವನ್ನು ಪಡೆಯುತ್ತದೆ.

೨. ನಿರಪೇಕ್ಷ ಮತ್ತು ಸಾಪೇಕ್ಷ ಸ್ಪರ್ಧೆ

ಕೆಲವು ಸಂದರ್ಭದಲ್ಲಿ ವ್ಯಕ್ತಿಗಳು ಅಥವಾ ಸಮೂಹಗಳು ಒಂದೇ ಗುರಿಗಾಗಿ ಸ್ಪರ್ಧಿಸಬಹುದು. ಯಶಸ್ವಿಯಾಗುವಂತಹ ವ್ಯಕ್ತಿ ಮಾತ್ರ ಅದನ್ನು ಹೊಂದಲು ಅರ್ಹನಾಗಿರುತ್ತಾನೆ. ಉದಾಹರಣೆಗೆ ಭಾರತದ ಅಧ್ಯಕ್ಷತೆಯ ಸ್ಥಾನಕ್ಕೆ ಚುನಾವಣೆಯಾದರೆ ಜಯಗಳಿಸಿದ ವ್ಯಕ್ತಿ ಮಾತ್ರ ಅಧ್ಯಕ್ಷರಾಗುತ್ತಾರೆ. ಸೋತವರು ಪೂರ್ತಿಯಾಗಿ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಇದನ್ನು ನಿರಪೇಕ್ಷ ಸ್ಪರ್ಧೆ ಎಂದು ಕರೆಯಬಹುದು.

ಇದಕ್ಕೆ ವಿರುದ್ಧವಾಗಿ, ಸಮಾಜದಲ್ಲಿ, ವ್ಯಕ್ತಿಗಳು ಕೆಲವು ವೇಳೆ ಆಸ್ತಿ, ಅಂತಸ್ತು, ಅಧಿಕಾರಕ್ಕಾಗಿ ಸ್ಪರ್ಧಿಸುತ್ತಾರೆ. ಇವುಗಳನ್ನು ಪಡೆಯುವಲ್ಲಿ ಯಶಸ್ವಿಯಾದವರು ತಮ್ಮ ಸಹವರ್ತಿ ಸ್ಪರ್ಧಿಗಳು ಇವುಗಳನ್ನು ಹೊಂದಲೇಬಾರದೆಂದು ಬಯಸಲಾರರು. ಈ ಗುರಿಗಳ ಸಾಧನೆಯಲ್ಲಿ ಅನೇಕರು ಪಾಲ್ಗೊಳ್ಳಬಹುದು. ಆದರೆ ಅವರು ಸಾಧಿಸುವ ಪ್ರಮಾಣದಲ್ಲಿ ವ್ಯತ್ಯಾಸಗಳಿರುತ್ತವೆ. ಆದ್ದರಿಂದ ಇದನ್ನು ಸಾಪೇಕ್ಷ ಸ್ಪರ್ಧೆ ಎಂದು ಕರೆಯುತ್ತಾರೆ.

೩. ವೈಯಕ್ತಿಕ ಮತ್ತು ಅವೈಯುಕ್ತಿಕ ಸ್ಪರ್ಧೆ

ಕೆಲವು ವೇಳೆ ಸ್ಪರ್ಧೆ ಇಬ್ಬರು ವ್ಯಕ್ತಿಗಳ ನಡುವೆ ಏರ್ಪಡುತ್ತದೆ. ಇಲ್ಲಿ ಅವರು ನೇರ ಅಂತರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆ. ಇಲ್ಲಿ ಒಬ್ಬ ವ್ಯಕ್ತಿಯು ಮಾತ್ರ ಅಪೇಕ್ಷಿತ ಗುರಿಯನ್ನು

ಸಾಧಿಸುವಲ್ಲಿ ಯಶಸ್ವಿಯಾಗುತ್ತಾನೆ. ಇದನ್ನು ವೈಯಕ್ತಿಕ ಸ್ಪರ್ಧೆ ಎನ್ನುತ್ತಾರೆ. ಇಬ್ಬರು ಅಭ್ಯರ್ಥಿಗಳ ನಡುವೆ ಒಂದು ಅಧಿಕಾರದ ಸ್ಥಾನಕ್ಕಾಗಿ ನಡೆಯಬಹುದಾದ ನೇರವಾದ ಚುನಾವಣೆ ಇದಕ್ಕೊಂದು ಉದಾಹರಣೆ.

ಅವೈಯುಕ್ತಿಕ ಸ್ಪರ್ಧೆಯು ಬೃಹತ್ ವ್ಯಾವಹಾರಿಕ ಉದ್ಯಮಗಳಲ್ಲಿ ಕಂಡು ಬರುತ್ತದೆ. ದೂರದರ್ಶನ (ಟಿ.ವಿ.) ತಯಾರಿಕಾ ಕಂಪನಿಗಳು ತಮ್ಮ ತಮ್ಮಲ್ಲೇ ಸ್ಪರ್ಧಿಸಬಹುದು. ಇಲ್ಲಿ ಉದ್ಯಮಗಳ ನಡುವೆ ಸ್ಪರ್ಧೆ ಇರುತ್ತದೆಯೆ ವಿನಃ, ಆ ಕಂಪನಿಗಳ, ಉದ್ಯೋಗಿಗಳ ನಡುವೆ ಸ್ಪರ್ಧೆ ಇರುವುದಿಲ್ಲ. ಸ್ಪರ್ಧಿಸುವ ಉದ್ದೇಶಕ್ಕಿಂತ ಗುರಿಯೇ ಪ್ರಾಮುಖ್ಯತೆ ಪಡೆದುಕೊಂಡಾಗ ಅವೈಯುಕ್ತಿಕ ಸ್ಪರ್ಧೆ ಏರ್ಪಡುತ್ತದೆ. ಉದಾಹರಣೆ ಒಂದು ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ಶ್ರೇಣಿ ಗಳಿಸುವ ಗುರಿ.

೪. ಕಾರ್ಯಾತ್ಮಕ ಮತ್ತು ಅಪಕಾರ್ಯಾತ್ಮಕ ಸ್ಪರ್ಧೆ

ಕೆಲವು ಸ್ಪರ್ಧೆಗಳು ಅಪೇಕ್ಷಿತ ಸಾಮಾಜಿಕ ಮೌಲ್ಯಗಳನ್ನು, ಆ ಗುರಿಗಳನ್ನು ಸಾಧಿಸುವಲ್ಲಿ ಕ್ರಿಯಾತ್ಮಕವಾಗಿ ಕಾರ್ಯ ನಿರ್ವಹಿಸುತ್ತವೆ. ಉದ್ಯಮಗಳ ನಡುವಿನ ಸ್ಪರ್ಧೆಯು ಆರೋಗ್ಯ ಪೂರ್ಣವಾಗಿದ್ದರೆ, ಗ್ರಾಹಕರನ್ನು ಆಕರ್ಷಿಸಿ ಮಾರುಕಟ್ಟೆಯನ್ನು ವಿಸ್ತರಿಸಬಹುದು. ಉತ್ತಮ ಗುಣಮಟ್ಟದ ಉತ್ಪಾದನೆಗೆ ಕಾರಣವಾಗಬಹುದು. ಈ ದೃಷ್ಟಿಯಲ್ಲಿ ಸ್ಪರ್ಧೆಯು ಕಾರ್ಯಾತ್ಮಕ ಸ್ವರೂಪದ್ದಾಗಿರುತ್ತದೆ.

ಆದರೆ ಕೆಲವು ಸ್ಪರ್ಧೆಗಳು ವಿನಾಶಕಾರಿ ಗುಣವನ್ನು ಹೊಂದಿರುತ್ತವೆ. ತಾತ್ಕಾಲಿಕ ಉಪಯೋಗಗಳನ್ನು ಹೊಂದಲು ಪ್ರಕೃತಿ ಸಂಪನ್ಮೂಲಗಳನ್ನು ನಾಶಗೊಳಿಸುವುದು ಇಂತಹ ಸ್ಪರ್ಧೆಯಾಗಿದೆ. ಉದಾಹರಣೆಗೆ ತೈಲ, ಗಣಿ ಹಾಗೂ ವ್ಯವಸಾಯ ಉದ್ಯಮಗಳಲ್ಲಿ ಕಂಡು ಬರುವ ಸ್ಪರ್ಧೆಯು ಅಪಕಾರ್ಯಾತ್ಮಕ ಸ್ಪರ್ಧೆ ಎನ್ನಬಹುದು.

ಸ್ಪರ್ಧೆಯ ಸಾಮಾಜಿಕ ಮಹತ್ವ

ಸ್ಪರ್ಧೆ ಎಲ್ಲ ಸಮಾಜಗಳಲ್ಲೂ ಕಂಡು ಬರುತ್ತದೆ. ಇದು ಒಂದು ಸಾಂಸ್ಕೃತಿಕ ಅಂಶವಾಗಿದೆ. ಸಮಾಜದ ಐಕ್ಯತೆಯ ದೃಷ್ಟಿಯಿಂದ ಸ್ಪರ್ಧೆ ಆರೋಗ್ಯಪೂರ್ಣವಾಗಿ ಏರ್ಪಡಬೇಕು. ಆಗ ಇದು ಸಾಮಾಜಿಕ ಅಭಿವೃದ್ಧಿಗೆ ಕಾರಣವಾಗುತ್ತದೆ. ತೀಕ್ಷ್ಣ ಸ್ಪರ್ಧೆಯಿಂದ ಸಮಾಜಕ್ಕೆ ಹಾನಿ. ಸಮಾಜದಲ್ಲಿ ವ್ಯಕ್ತಿಗಳಿಗೆ ತಮ್ಮ ಸ್ಥಾನಗಳ ಬಗ್ಗೆ ಅರಿವು ಮೂಡಿಸುತ್ತದೆ. ಸ್ಪರ್ಧೆ ಸರಿಯಾದ ರೀತಿ ಏರ್ಪಟ್ಟರೆ, ವ್ಯಕ್ತಿಗಳು ಪರಸ್ಪರ ಅರ್ಥಮಾಡಿಕೊಳ್ಳಲು, ಕೆಲವೊಮ್ಮೆ ಅನುಕಂಪ ತೋರಲು, ಅವಕಾಶವಾಗುತ್ತದೆ. ಸ್ಪರ್ಧೆಯು ವ್ಯಕ್ತಿಗಳು ಮತ್ತು ಸಮೂಹಗಳು ಉತ್ತಮ ಪ್ರಯತ್ನ ಮಾಡಲು ಪ್ರೇರಕವಾಗುತ್ತದೆ. ಅಲ್ಲದೆ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಸಹಾಯವಾಗುತ್ತದೆ. ವ್ಯಕ್ತಿ ತನ್ನನ್ನು ಗುರುತಿಸಿಕೊಳ್ಳಲು ಮತ್ತು ಹೊಸ ಅನುಭವಗಳನ್ನು ಹೊಂದಲು, ಸ್ಪರ್ಧೆ ಉತ್ತಮ ಅವಕಾಶಗಳನ್ನು ದೊರಕಿಸುತ್ತದೆ. ಆಗ್ಬರ್ನ್ ಮತ್ತು ನಿಮ್‌ಕಾಫ ಅವರು ಸ್ಪರ್ಧೆಯು

ಅತ್ಯಂತ ಪರಿಣಾಮಕಾರಿ ಪ್ರೇರಕ ಶಕ್ತಿ ಎಂದು ವರ್ಣಿಸಿದ್ದಾರೆ. ಸ್ಪರ್ಧೆ ಸಾಮಾಜಿಕ ಚಲನೆಗೆ ಅವಕಾಶ ನಿರ್ಮಿಸುವುದು. ಸ್ಪರ್ಧೆಯಿಂದ ದೊರೆಯುವ ಪ್ರೇರಣೆಯಿಂದ ವ್ಯಕ್ತಿಗಳು ತಮ್ಮ ಅಂತಸ್ತುಗಳಲ್ಲಿ ಬದಲಾವಣೆ ಕಂಡುಕೊಳ್ಳಬಹುದು. ಇದು ಸಾಮಾಜಿಕ ಪರಿವರ್ತನೆಗೆ ಸಹಾಯಕವಾಗುತ್ತದೆ. ಸ್ಪರ್ಧೆಯ ಕಾರಣದಿಂದ ವ್ಯಕ್ತಿಗಳು ಸ್ವಾಭಾವಿಕವಾಗಿಯೆ ತಮ್ಮ ಪ್ರತಿಭೆಗೆ ತಕ್ಕಂತೆ ಸ್ಥಾನಮಾನಗಳನ್ನು ಹೊಂದಬಹುದು.

೩. ಸಂಘರ್ಷ

ಸಂಘರ್ಷವು ವ್ಯಕ್ತಿಗಳು ಮತ್ತು ಸಮೂಹಗಳಲ್ಲಿ ಕಂಡು ಬರುವ ಘರ್ಷಣೆಯ ಒಂದು ರೂಪವಾಗಿದೆ. ಸಮಾಜದಲ್ಲಿ ಸಹಕಾರ ಹಾಗೂ ಸ್ಪರ್ಧೆ ಪ್ರಕ್ರಿಯೆಗಳು ವಿಫಲಗೊಂಡಾಗ ಸಂಘರ್ಷಕ್ಕೆ ದಾರಿಯಾಗಬಹುದು. ಯಾವುದೇ ನಿಯಮಗಳು ಸಂಘರ್ಷವನ್ನು ನಿಯಂತ್ರಿಸಲಾರವು. ಘರ್ಷಣೆಯಲ್ಲಿ ನಿರತರಾಗಿರುವ ವ್ಯಕ್ತಿಗಳು ತಮ್ಮ ಗುರಿ ಸಾಧನೆಯಲ್ಲಿ ಬಲಪ್ರಯೋಗ, ದಬ್ಬಾಳಿಕೆ, ಮೋಸ, ಭಯಗಳನ್ನು ಉಪಯೋಗಿಸುತ್ತಾರೆ. ಸಂಘರ್ಷ ಯಾವುದೇ ರೀತಿ ಪ್ರಶಂಸೆಗೆ ಪಾತ್ರವಲ್ಲದ ಅಂಶವಾಗಿದ್ದರೂ, ಸಮಾಜದಲ್ಲಿ ವ್ಯಾಪಕವಾಗಿ ಕಂಡು ಬರುತ್ತದೆ. ಯಾವಾಗ ಒಬ್ಬ ವ್ಯಕ್ತಿ ಅಥವಾ ಸಮೂಹ ಪರಿಣಾಮಕಾರಿ ಸ್ಪರ್ಧೆಯನ್ನು ಬಯಸುವ ಇತರರನ್ನು ಹತ್ತಿಕ್ಕಿ ಪ್ರತಿಫಲ ಪಡೆಯಲು ಯತ್ನಿಸಿದಾಗ ಸಂಘರ್ಷ ಸಂಭವಿಸುತ್ತದೆ. ಸಮಾಜದಲ್ಲಿ ವ್ಯಕ್ತಿಗಳು ಅಥವಾ ಸಮೂಹಗಳು ಪರಸ್ಪರ ವಿರೋಧಾಸಕ್ತಿಗಳನ್ನು ಹೊಂದಿ, ಪ್ರತಿಸ್ಪರ್ಧಿಯನ್ನು ದುರ್ಬಲಗೊಳಿಸಿ ಅಥವಾ ನಾಶಗೊಳಿಸಿ, ಧ್ಯೇಯ ಸಾಧಿಸಲು ಪ್ರಯತ್ನಿಸಿದಾಗ ಸಂಘರ್ಷ ಉಂಟಾಗುತ್ತದೆ.

ಆರಂಭದಿಂದಲೂ ಮನುಕುಲದ ಇತಿಹಾಸದ ಸಮಾಜಗಳಲ್ಲಿ ಘರ್ಷಣೆ ಅಸ್ತಿತ್ವದಲ್ಲಿದೆ. **ಕಾರ್ಲ್‌ಮಾರ್ಕ್ಸ್** ಅವರು "ಮನುಕುಲದ ಇಲ್ಲಿಯವರೆಗಿನ ಇತಿಹಾಸವೆಂದರೆ ವರ್ಗ ಸಂಘರ್ಷದ ಇತಿಹಾಸವೇ ಆಗಿದೆ" ಎಂದು ಅಭಿಪ್ರಾಯಟ್ಟಿದ್ದಾರೆ. ಬಂಡವಾಳಶಾಹಿಗಳು ಮತ್ತು ಕಾರ್ಮಿಕವರ್ಗಗಳು ತಮ್ಮದೇ ಆಸಕ್ತಿಗಳನ್ನು ರಕ್ಷಿಸಿಕೊಳ್ಳಲು ಪರಸ್ಪರ ಘರ್ಷಣೆಗಿಳಿಯುತ್ತಾರೆ. ಮತ್ತೊಬ್ಬರ ಧ್ಯೇಯ ಸಾಧನೆಯ ಹಕ್ಕನ್ನು ಅಲ್ಲಗಳೆದಾಗ ಸಂಘರ್ಷದ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ ಸಂಘರ್ಷವು ಮಾನವ ಸಮಾಜದ ಅನಿವಾರ್ಯ ಪರಿಸ್ಥಿತಿಗಳಲ್ಲಿ ಒಂದಾಗಿದೆ.

ವ್ಯಾಖ್ಯೆ

"ಪ್ರತಿ ಸ್ಪರ್ಧಿಗಳನ್ನು ದುರ್ಬಲಗೊಳಿಸುವ ಅಥವಾ ನಾಶಪಡಿಸುವುದರ ಮೂಲಕ, ವ್ಯಕ್ತಿ ಅಥವಾ ಸಮೂಹ ತಾನು ಬಯಸುವ ಪ್ರತಿಫಲವನ್ನು ಹೊಂದುವ ಪ್ರಕ್ರಿಯೆಯೇ ಸಂಘರ್ಷವಾಗಿದೆ" ಎಂದು **ಹಾರ್ಟನ್** ಮತ್ತು **ಹಾಂಟ್** ತಿಳಿಸಿದ್ದಾರೆ.

"ಬೇರೆಯವನ ಅಥವಾ ಬೇರೆಯವರ ಇಚ್ಛೆಯನ್ನು ಉದ್ದೇಶಪೂರ್ವಕವಾಗಿ ವಿರೋಧಿಸುವ, ಪ್ರತಿಭಟಿಸುವ ಅಥವಾ ಬಲವಂತಾಗಿ ಹತ್ತಿಕ್ಕುವ ಪ್ರಯತ್ನವೇ ಸಂಘರ್ಷ" ಎಂದು ಎ.ಡಬ್ಲ್ಯೂ. ಗ್ರೀನ್ ಅಭಿಪ್ರಾಯಪಟ್ಟಿದ್ದಾರೆ.

ಗಿಲಿನ್ ಮತ್ತು ಗಿಲಿನ್‌ರವರ ಅಭಿಪ್ರಾಯದಲ್ಲಿ "ವ್ಯಕ್ತಿಗಳು ಅಥವಾ ಸಮೂಹಗಳು ತಮ್ಮ ಎದುರಾಳಿಗಳಿಗೆ ಹಿಂಸೆ ಮತ್ತು ಬೆದರಿಕೆಯ ಮೂಲಕ ಭೀತಿ ಹುಟ್ಟಿಸಿ ತಮ್ಮ ಉದ್ದೇಶವನ್ನು ಸಾಧಿಸುವ ಪ್ರಕ್ರಿಯೆಯೇ ಸಂಘರ್ಷವಾಗಿದೆ.

ಸಂಘರ್ಷದ ಸ್ವರೂಪ

ಸಂಘರ್ಷವು ವೈಯಕ್ತಿಕ ಸ್ವರೂಪದ್ದಾಗಿ ವ್ಯಕ್ತಿಗಳ ಅಥವಾ ಸಮೂಹಗಳ ನಡುವೆ ಪ್ರಜ್ಞಾಪೂರ್ವಕವಾಗಿ ನಡೆಯುತ್ತದೆ. ಸಂಘರ್ಷ ಹಿಂಸೆಯ ಅಂಶವನ್ನು ಒಳಗೊಂಡು, ಪ್ರತಿಸ್ಪರ್ಧಿಗಳನ್ನು ತಾರತಮ್ಯವಿಲ್ಲದೆ ನಾಶಗೊಳಿಸುತ್ತದೆ. ಆದರೆ ಕನಿಷ್ಠ ಹಿಂಸೆಯನ್ನೊಳಗೊಂಡ ಸಂಘರ್ಷ ಪ್ರಕ್ರಿಯೆಯೂ ಇರುತ್ತದೆ. ಇಲ್ಲಿ ಎದುರಾಳಿಯನ್ನು ವಾಮಮಾರ್ಗವನ್ನು ಅನುಸರಿಸಿ ಆತನ ಜನಪ್ರಿಯತೆಗೆ ಧಕ್ಕೆಯನ್ನುಂಟುಮಾಡುವುದು. ಸಂಘರ್ಷದಲ್ಲಿ ತೀವ್ರ ಭಾವೋದ್ವೇಗಗಳು ಪ್ರಧಾನವಾಗಿದ್ದು, ಇವು ಸಮಾಜದಲ್ಲಿ ನಿರಂತರವಾಗಿಲ್ಲದೆ ಆಗಾಗ್ಗೆ ಸಂಭವಿಸುತ್ತಿರುತ್ತವೆ. ಸಂಘರ್ಷವು ಮಾನವನ ಮತ್ತು ಸಮಾಜದ ಮೂಲಭೂತ ಲಕ್ಷಣವಾಗಿದೆ. ಗುಂಪ್ಲೊವಿಜ್ ಅವರು ಸಂಘರ್ಷವು ಸಾಮಾಜಿಕ ವಿಕಾಸಕ್ಕೆ ಹಾಗೂ ಪ್ರಗತಿಗೆ ಕಾರಣವಾಗುತ್ತದೆ ಎಂದಿದ್ದಾರೆ. ಇದು ಕ್ರಿಯಾತ್ಮಕವಾದ ಬೆಳವಣಿಗೆಗೂ ಅವಕಾಶ ಕಲ್ಪಿಸಬಹುದು ಅಥವಾ ವಿನಾಶಕಾರಿಯಾದ ಪ್ರವೃತ್ತಿಗಳನ್ನು ಸೃಷ್ಟಿಸಬಹುದು. ಸಂಘರ್ಷ ವೈಪರೀತ್ಯದ ಮಟ್ಟವನ್ನು ತಲುಪಿದಾಗ ವ್ಯಕ್ತಿಗಳ ಅಥವಾ ಸಂಸ್ಥೆಗಳು ಸಂಪೂರ್ಣವಾಗಿ ನಾಶವಾಗಬಹುದು. ಸಂಘರ್ಷ ಮುಕ್ತ ಸಾಮರಸ್ಯ ಸಮೂಹವನ್ನು ವಾಸ್ತವಿಕವಾಗಿ ನೋಡಲು ಸಾಧ್ಯವೇ ಇಲ್ಲ ಎಂದು ಸಿಮ್ಮೆಲ್ ಅಭಿಪ್ರಾಯಪಟ್ಟಿದ್ದಾರೆ.

ಸಂಘರ್ಷವು ವೈಯಕ್ತಿಕ ಹಾಗೂ ಸಾಮೂಹಿಕ ಮಟ್ಟಗಳೆರಡರಲ್ಲೂ ಕಂಡು ಬರುತ್ತದೆ. ವ್ಯಕ್ತಿಗಳ ನಡುವೆ ದ್ವೇಷ ಅಥವಾ ವೈರತ್ವ ಉಂಟಾದಾಗ ವೈಯುಕ್ತಿಕ ಸ್ವರೂಪದ ಸಂಘರ್ಷ ಉಂಟಾಗುತ್ತದೆ. ಸಮೂಹಗಳ ನಡುವಿನ ಸಂಘರ್ಷವು ಅವೈಯುಕ್ತಿಕ ಸ್ವರೂಪದ್ದಾಗಿರುತ್ತದೆ. ಉದಾ:- ಸಂಘಟನೆಗಳ ನಡುವೆ ಅಥವಾ ರಾಷ್ಟ್ರಗಳ ನಡುವೆ ಒಪ್ಪಂದಗಳು ಮುರಿದು ಬಿದ್ದಾಗ ಸಂಘರ್ಷದ ಪರಿಸ್ಥಿತಿ ನಿರ್ಮಾಣವಾಗಬಹುದು. ಸಮಾಜದಲ್ಲಿ ಸಂಘರ್ಷದ ಪರಿಸ್ಥಿತಿ ಸೃಷ್ಟಿಯಾಗಲು ಅನೇಕ ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದವು : ಅಸ್ತಿತ್ವಕ್ಕಾಗಿ ಹೋರಾಟ, ಮನುಷ್ಯನ ಆಕ್ರಮಣಕಾರಿ ಪ್ರವೃತ್ತಿ, ವ್ಯಕ್ತಿಗಳ ಪರಸ್ಪರ ವಿರೋಧಾತ್ಮಕವಾದ ಆಸಕ್ತಿಗಳು, ಸಾಂಸ್ಕೃತಿಕ ಭಿನ್ನತೆ, ವರ್ಗಗಳ ನಡುವಿನ ಕಲಹ, ಅಂತಸ್ತನ್ನು ಹೊಂದಲು ಮಹತ್ವಾಕಾಂಕ್ಷೆ, ಇತ್ಯಾದಿ. ಸಂಘರ್ಷ ಯಾವುದೇ ರೂಪದಲ್ಲಿ ಸಂಭವಿಸಿದರೂ ಹತಾಶೆ, ಅತೃಪ್ತಿ - ಅಸಮಾಧಾನಗಳು ಈ ಪ್ರಕ್ರಿಯೆಯ ಭಾಗವಾಗಿರುತ್ತವೆ. ಆದ್ದರಿಂದ ಸಮಾಜ ಬೆಳವಣಿಗೆಯಾಗಲು ಸಾಮರಸ್ಯತೆ, ಅಸಾಮರಸ್ಯತೆ ಹಾಗೂ ಸಂಘಟನೆ, ವಿಸಂಘಟನೆಗಳೆರಡೂ ಅವಶ್ಯಕವಾಗಿರುತ್ತವೆ ಎಂದು ಸಿಮ್ಮೆಲ್ ಅಭಿಪ್ರಾಯಪಟ್ಟಿದ್ದಾರೆ.

ಸಂಘರ್ಷದ ಪ್ರಕಾರಗಳು

ಜರ್ಮನಿಯ ಜಾರ್ಜ್ ಸಿಮ್ಮೆಲ್ ಅವರು ಸಂಘರ್ಷದ ನಾಲ್ಕು ಪ್ರಕಾರಗಳ ಬಗ್ಗೆ

ತಿಳಿಸಿದ್ದಾರೆ. ಅವುಗಳೆಂದರೆ : ಯುದ್ಧ, ಅಂತಃಕಲಹ ಅಥವಾ ಪಕ್ಷ ವೈಷಮ್ಯ, ವ್ಯಾಜ್ಯ ಅಥವಾ ಮೊಕದ್ದಮೆ ಮತ್ತು ಅವೈಯುಕ್ತಿಕ ಆದರ್ಶಗಳ ಸಂಘರ್ಷ.

೧. ಯುದ್ಧ

ಎರಡು ದೇಶಗಳ ನಡುವೆ ಸಂಭವಿಸಬಹುದಾದ ಸಂಘರ್ಷದ ಪರಿಸ್ಥಿತಿಗೆ ಯುದ್ಧ ಎನ್ನುತ್ತೇವೆ. ಆಯಾ ರಾಷ್ಟ್ರಗಳು ಹೊಂದಿರುವ ರಾಷ್ಟ್ರೀಯತೆ ಮತ್ತು ದೇಶಭಕ್ತಿ ಈ ರೀತಿಯ ಸಂಘರ್ಷಕ್ಕೆ ಕಾರಣವಾಗಬಹುದು. ಈ ಭಾವನೆಗೆ ಅಪಾಯ ಉಂಟಾದರೆ ಅಥವಾ ಅಗೌರವ ಆದಲ್ಲಿ, ದೇಶಗಳ ನಡುವೆ ಸಂಘರ್ಷ ಏರ್ಪಡುತ್ತದೆ. ಯುದ್ಧದಿಂದ ಅತ್ಯಂತ ಹಾನಿಕಾರಕ ಪರಿಣಾಮಗಳು ಉಂಟಾಗುತ್ತವೆ. ಪ್ರಾಚೀನ ಕಾಲದ ಸಮಾಜಗಳಲ್ಲಿ ಯುದ್ಧ ಸಾರ್ವತ್ರಿಕವಾಗಿ ಕಂಡು ಬರುತ್ತಿತ್ತು. ಆದರೆ ಆಧುನಿಕ ಕಾಲದಲ್ಲಿ ಯುದ್ಧದ ಸ್ವರೂಪ ಸಂಪೂರ್ಣ ಬದಲಾಗಿದೆ.

೨. ಅಂತಃಕಲಹ ಅಥವಾ ಪಕ್ಷ ವೈಷಮ್ಯ

ಇದು ಸಮೂಹದ ಒಳಗೇ ಸಂಭವಿಸುವ ಸಂಘರ್ಷ. ಉದಾಹರಣೆಗೆ ಎರಡು ಬಣಗಳು ಅಥವಾ ಕುಟುಂಬಗಳ ನಡುವೆ ನಿರ್ದಿಷ್ಟ ಕಾರಣಕ್ಕಾಗಿ ಚಿರಕಾಲ ಪರಸ್ಪರ ದ್ವೇಷ ಇದ್ದಾಗ, ಸೇಡು ತೀರಿಸಿಕೊಳ್ಳುವ ದೃಷ್ಟಿಯಿಂದ ಕಲಹ ಉಂಟಾಗಬಹುದು. ಇದನ್ನು ಕುಲಕಲಹ ವೆಂದೂ ಕರೆಯುತ್ತೇವೆ.

೩. ಮೊಕದ್ದಮೆ ಅಥವಾ ದಾವೆ

ಒಬ್ಬ ವ್ಯಕ್ತಿ ಅಥವಾ ಸಮೂಹ ತನ್ನ ಆಸ್ತಿಯ ಹಕ್ಕನ್ನು ರಕ್ಷಿಸಿಕೊಳ್ಳಲು ನ್ಯಾಯ ವ್ಯವಸ್ಥೆಯ ಮೂಲಕ ಘರ್ಷಣೆಗಿಳಿಯುತ್ತಾನೆ. ಇಲ್ಲಿ ಆಸ್ತಿ, ಉದ್ಯೋಗ ಸಂಬಂಧಿ ವಿಚಾರಗಳಿಗೆ ನ್ಯಾಯಾಸ್ಥಾನದಲ್ಲಿ ಮೊಕದ್ದಮೆ ಹೂಡಿ ಸಂಘರ್ಷಕ್ಕಿಳಿಯುವುದು ಕಂಡು ಬರುತ್ತದೆ.

೪. ಅವೈಯುಕ್ತಿಕ ಆದರ್ಶಗಳ ಸಂಘರ್ಷ

ಸಂಘರ್ಷದ ಈ ಪ್ರಕಾರದಲ್ಲಿ ವ್ಯಕ್ತಿಗಳು ತಮಗೋಸ್ಕರ ಸಂಘರ್ಷಕ್ಕಿಳಿಯದೆ, ಆದರ್ಶಗಳಿಗೋಸ್ಕರ ಸಂಘರ್ಷಕ್ಕಿಳಿಯುತ್ತಾರೆ. ವ್ಯಕ್ತಿಗಳು ಅಥವಾ ಸಮೂಹಗಳು ಭಿನ್ನವಾದಂಥ ಆದರ್ಶಗಳು ಅಥವಾ ತತ್ವಗಳನ್ನು ಹೊಂದಿದ್ದರೆ, ಅಲ್ಲಿ ಅವೈಯುಕ್ತಿಕ ಆದರ್ಶಗಳ ಸಂಘರ್ಷ ಏರ್ಪಡುತ್ತದೆ. ಉದಾ:- ಉದಾರವಾದ ಮತ್ತು ಸಮಾಜವಾದಗಳ ನಡುವಿನ ವಿರೋಧಾತ್ಮಕ ಆದರ್ಶಗಳು ಸಂಘರ್ಷಕ್ಕೆ ಕಾರಣವಾಗಬಹುದು.

ಸಾಮಾಜಿಕ ಸಂಘರ್ಷದ ಪ್ರಕಾರಗಳಲ್ಲಿನ ಭಿನ್ನತೆಯು ಪರಸ್ಪರ ಅಂತರಸಂಬಂಧವಿರುವ ಮೂರು ಅಂಶಗಳನ್ನು ಆಧರಿಸಿರುತ್ತದೆ. ಅವುಗಳು ಸಂಘರ್ಷದಲ್ಲಿ ಭಾಗಿಯಾಗುವ ವ್ಯಕ್ತಿಗಳ ಅಥವಾ ಸಮೂಹಗಳ ಗುಣಗಳು, ಗುರಿಗಳ ಸ್ವರೂಪ ಮತ್ತು ಆ ಸಂಘರ್ಷದಲ್ಲಿ ಅವರು ಹಿಡಿಯುವ ಮಾರ್ಗ.

ಸಂಘರ್ಷದ ಸಾಮಾಜಿಕ ಪಾತ್ರ

ಸಾಮಾಜಿಕ ಜೀವನದಲ್ಲಿ ಸಂಘರ್ಷ ಸಾಮಾನ್ಯವಾಗಿ ಕಾಣುವ ಅಂಶವಾಗಿದೆ. ಇದು ಸಮಾಜದ ಭಾಗವಾಗಿದೆಯೋ ಎನ್ನುವಷ್ಟರಮಟ್ಟಿಗೆ ಕಂಡುಬರುತ್ತದೆ. ಸಂಘರ್ಷವು ಸಾಮಾಜಿಕ ಪ್ರಗತಿ ಹಾಗೂ ಸಾಮಾಜಿಕ ಹಿನ್ನಡೆಗಳೆರಡಕ್ಕೂ ಕಾರಣವಾಗಿದೆ. ಅಂದರೆ ಸಂಘರ್ಷದಿಂದ ಸಂಘಟನಾತ್ಮಕ ಹಾಗೂ ವಿಸಂಘಟನಾತ್ಮಕ ಪರಿಣಾಮಗಳೆರಡೂ ಉಂಟಾಗುತ್ತವೆ.

ಕ್ರಿಯಾತ್ಮಕ ಪರಿಣಾಮಗಳು ಬಾಹ್ಯ ಸಂಘರ್ಷದ ಕಾರಣದಿಂದ ಉಂಟಾಗುತ್ತವೆ. ಒಂದು ರಾಷ್ಟ್ರ ಯುದ್ಧ ಸಾರಿದ ಸಂದರ್ಭದಲ್ಲಿ, ಅಲ್ಲಿನ ಅನೇಕ ಸಮೂಹಗಳು ಆಂತರಿಕವಾಗಿ ಒಗ್ಗಟ್ಟಾಗುತ್ತವೆ. ಅವರು ಹೊಂದಿರುವ ರಾಷ್ಟ್ರೀಯತೆಯ ಭಾವನೆಯು ಆಂತರಿಕ ಸ್ವಾಸ್ಥತೆ ಮತ್ತು ಭಾವೈಕ್ಯತೆಯನ್ನು ವೃದ್ಧಿಸುತ್ತದೆ. **ಕೋಸರ್** ಅವರು ಸಂಘರ್ಷ ಹೇಗೆ ಸಮೂಹಗಳ ಏಕತೆಗೆ ಪ್ರೇರಕವಾಗಬಲ್ಲದು ಎಂಬುದನ್ನು ವಿಶ್ಲೇಷಿಸಿದ್ದಾರೆ. "ಸಡಿಲ ರಚನೆಯನ್ನು ಹೊಂದಿರುವ ಸಮೂಹಗಳಲ್ಲಿ ಮತ್ತು ಮುಕ್ತ ಸಮಾಜಗಳಲ್ಲಿ ಸಂಘರ್ಷವು ಅಲ್ಲಿನ ಉದ್ವಿಗ್ನ ಸ್ಥಿತಿಗಳನ್ನು ಪರಿಹರಿಸುವ ಸಮೈಕ್ಯತಾ ಕಾರ್ಯಗಳನ್ನು ನಿರ್ವಹಿಸುತ್ತದೆ" ಎಂದಿದ್ದಾರೆ. ಆ ಸಮೂಹಗಳಲ್ಲಿನ ಅತೃಪ್ತಿ-ಅಸಮಾಧಾನಗಳನ್ನು ನಿವಾರಿಸಿ ಸಂಬಂಧಗಳಲ್ಲಿ ಪುನರ್‌ಹೊಂದಾಣಿಕೆ ತರುವಂತೆ ಮಾಡುತ್ತದೆ. ಎಲ್ಲ ಸಮೂಹಗಳು, ಶಾಂತಿ ಇರುವ ಸಂದರ್ಭದಲ್ಲಿ ಅಲ್ಲದಿದ್ದರೂ, ಯುದ್ಧ ಅಥವಾ ಬಾಹ್ಯ ಅಪಾಯದ ಸಂದರ್ಭದಲ್ಲಿ, ತಮ್ಮಲ್ಲಿನ ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾಗುವರು. ಸಂಘರ್ಷದಿಂದ ಸಮಾಜದಲ್ಲಿ ಮೌಲ್ಯಗಳ ಬದಲಾವಣೆ, ಸಾಮಾಜಿಕ ಚಲನೆ ಅಥವಾ ಸಾಮಾಜಿಕ ಪ್ರಗತಿ ಉಂಟಾಗಬಹುದು. ಪ್ರಗತಿಪರ ಚಿಂತನೆಗೆ ಅವಕಾಶವಾಗಬಹುದು.

ಸಂಘರ್ಷದ ವಿಘಟನಾತ್ಮಕ ಪರಿಣಾಗಳು

ಸಂಘರ್ಷವು ಸಮಾಜದಲ್ಲಿ ತೀವ್ರತರ ಹಾನಿಗಳಿಗೆ ಕಾರಣವಾಗುತ್ತವೆ. ಇದು ಮುಖ್ಯವಾಗಿ ಸಾಮಾಜಿಕ ಐಕ್ಯತೆಯನ್ನು ನಾಶಪಡಿಸುತ್ತದೆ. ಉದಾ: ಒಂದು ಸಮೂಹದ ಆಂತರಿಕ ಸಂಘರ್ಷ, ಆ ಸಮೂಹದ ಐಕ್ಯತೆಯನ್ನು ಅಶಕ್ತಗೊಳಿಸುತ್ತದೆ. ವೈವಾಹಿಕ ಸಂಬಂಧಗಳಲ್ಲಿನ ಸಂಘರ್ಷ ಕೌಟುಂಬಿಕ ವಿಘಟನಗೆ ಕಾರಣವಾಗುತ್ತದೆ. ಜಾತಿ ಘರ್ಷಣೆಗಳು ಅಂತರ್‌ಜಾತಿಗಳ ಏಕತೆಗೆ ಭಂಗವನ್ನುಂಟುಮಾಡುತ್ತವೆ. ಶೈಕ್ಷಣಿಕ ಸಂಸ್ಥೆಗಳಲ್ಲಿ ಕಂಡು ಬರುವ ಆಂತರಿಕ ಸಂಘರ್ಷಗಳು ಶಿಕ್ಷಣದ ಗುಣಮಟ್ಟವನ್ನು ನಾಶಪಡಿಸುತ್ತವೆ. ವೈರತ್ವ ಹಾಗೂ ದ್ವೇಷಗಳ ಕಾರಣದಿಂದ ಸಂಭವಿಸಿದ ಸಂಘರ್ಷದಿಂದ ಪ್ರಾಣ ಹಾನಿ, ಧನ ಹಾನಿ, ಸಂಪತ್ತಿನ ನಾಶವಾಗುವುದು. ಸಂಘರ್ಷವು ಸಮಾಜವನ್ನು ವಿನಾಶದ ಅಂಚಿಗೆ ತಳ್ಳಿ ಏಕತೆ, ಅಖಂಡತೆ ಹಾಗೂ ಮಾನಸಿಕ ಸ್ಥೈರ್ಯವನ್ನು ಭಗ್ನಗೊಳಿಸ ಬಲ್ಲದು.

೪. ಸಮಂಜನ

ಸಮಂಜನವೆಂಬುದು ಸಮಾಜದಲ್ಲಿ ಕಂಡುಬರುವ ಹೊಂದಾಣಿಕೆಯ ಪ್ರಕ್ರಿಯೆಯಾಗಿದೆ. ಹೊಂದಾಣಿಕೆಯು ಒಂದು ಸಂಘಟನಾತ್ಮಕ ಸಾಮಾಜಿಕ ಪ್ರಕ್ರಿಯೆಯಾಗಿದೆ. ಇದು ಇದ್ದಕ್ಕಿದ್ದ ಹಾಗೆ ಸಂಭವಿಸುವ ಪ್ರಕ್ರಿಯೆಯಲ್ಲ. ವ್ಯಕ್ತಿಗಳ ನಡುವಿನ ಅಂತರ್‌ಕ್ರಿಯೆಯ ಮೂಲಕ ಕ್ರಮೇಣವಾಗಿ ಏರ್ಪಡುತ್ತದೆ. ಸಮಾಜದಲ್ಲಿ ಸಂಘರ್ಷದ ಸ್ಥಿತಿ ದೀರ್ಘಕಾಲದವರೆಗೆ ಇರಲಾರದು. ಸಂಘರ್ಷ ದೀರ್ಘಕಾಲದವರೆಗೆ ನೆಲೆಸಿದರೆ ಅದು ಅಶಾಂತಿಗೆ ಕಾರಣವಾಗುತ್ತದೆ. ಅಲ್ಲದೆ ಸಮಾಜದ ಸಮತೋಲನಕ್ಕೆ ಧಕ್ಕೆ ಉಂಟಾಗುತ್ತದೆ. ಇಂತಹ ಸನ್ನಿವೇಶದಲ್ಲಿ ವ್ಯಕ್ತಿಗಳು ಸಂಘರ್ಷವನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸುವುದು, ಅಲ್ಲದೆ ಸಂಘರ್ಷ ಅಪ್ರಯೋಜಕವಾದುದು ಎಂಬ ಭಾವನೆ ಬೆಳೆಸಿಕೊಳ್ಳುವರು. ಮುಖ್ಯವಾಗಿ ಸಂಘರ್ಷದ ಹಾನಿಕಾರಕ ಪರಿಣಾಮಗಳನ್ನು ಮನಗಂಡು ತಮ್ಮ ಸಹ ಸದಸ್ಯರೊಂದಿಗೆ ಭಿನ್ನತೆಗಳನ್ನು ಮರೆತು ಹೊಂದಿಕೊಂಡು ಹೋಗಲು ಪ್ರಯತ್ನಿಸುವರು. ಈ ಪ್ರಕ್ರಿಯೆಯು ಹೊಂದಾಣಿಕೆ ಎನಿಸುವುದು. ಮೂಲಭೂತವಾಗಿ ಮಾನವನ ಸಾಮಾಜಿಕ ಸಂಘಟನೆಯು ಘರ್ಷಣಾತ್ಮಕ ಅಂಶಗಳ ಹೊಂದಾಣಿಕೆಯೇ ಆಗಿದೆ ಎಂದು **ಪಾರ್ಕ್** ಮತ್ತು **ಬರ್ಗೆಸ್** ಅಭಿಪ್ರಾಯ ಪಟ್ಟಿದ್ದಾರೆ.

ಸಮಂಜನದ ವ್ಯಾಖ್ಯೆ

ಪಾರ್ಕ್ ಮತ್ತು **ಬರ್ಗೆಸ್** ಪ್ರಕಾರ "ಸಮಂಜನವು ಒಂದು ಸಾಮಾಜಿಕ ಪ್ರಕ್ರಿಯೆಯಾಗಿದ್ದು, ಇದರ ಮೂಲಕ ವ್ಯಕ್ತಿಗಳು ಮತ್ತು ಸಮೂಹಗಳು ಸಾಮಾಜಿಕ ಪರಿಸರದೊಂದಿಗೆ ಸಾಮರಸ್ಯವನ್ನು ಸಾಧಿಸಲು ಪ್ರಯತ್ನಿಸುವರು."

ಆಗ್‌ಬರ್ನ್ ಮತ್ತು **ನಿಮ್‌ಕಾಫ್‌**ರವರ ಪ್ರಕಾರ "ಪರಸ್ಪರ ವಿರೋಧಾತ್ಮಕ ವ್ಯಕ್ತಿಗಳ ನಡುವೆ ಸಂಭವಿಸುವ ಹೊಂದಾಣಿಕೆಯೇ ಸಮಂಜನವಾಗಿದೆ".

"ಮಾನವ ತಮ್ಮ ಪರಿಸರದೊಂದಿಗೆ ಸಾಮರಸ್ಯವನ್ನು ಹೊಂದುವ ಪ್ರಕ್ರಿಯೆಯನ್ನು ಸೂಚಿಸುವ ವಿಶೇಷ ಪದವೇ ಸಮಂಜನ" ಎಂದು **ಮೆಕೈವರ್** ಹೇಳಿದ್ದಾರೆ.

ಸಾಮಾಜಿಕವಾಗಿ ವರ್ಗಾವಣೆಗೊಂಡ ನಡವಳಿಕಾ ಮಾದರಿಗಳನ್ನು ಪಡೆಯುವುದು ಹಾಗೂ ಹೊಸ ನಡವಳಿಕಾ ರೀತಿಗಳನ್ನು ಅಳವಡಿಕೊಳ್ಳುವುದರ ಮೂಲಕ ವ್ಯಕ್ತಿ ಸಾಧಿಸುವ ಹೊಂದಾಣಿಕೆಯನ್ನು ಸಮಂಜನ ಎಂದು ಕರೆಯಬಹುದು. ಹೊಂದಾಣಿಕೆಯು ವ್ಯಕ್ತಿಗಳು ಹಾಗೂ ಸಮೂಹಗಳ ಪಾಲಿಗೆ ಪ್ರಜ್ಞಾಪೂರ್ವಕ ಪ್ರಯತ್ನವಾಗಿದ್ದು, ಸಹಕಾರದ ಮೂಲಕ ಸಂಘರ್ಷವನ್ನು ತೊಡೆದು ಹಾಕಲು ಸಹಾಯವಾಗುತ್ತದೆ.

ಸಮಂಜನದ ಸ್ವರೂಪ

ಮಾನವನು ಬದುಕುತ್ತಿರುವ ಸಾಮಾಜಿಕ ಪರಿಸರವು ಆತನು ಅದಕ್ಕೆ ಹೊಂದಿಕೊಳ್ಳಬೇಕೆಂಬುದಾಗಿ ನಿರೀಕ್ಷಿಸುತ್ತದೆ. ಈ ಪ್ರಕ್ರಿಯೆ ಸಮಾಜದಲ್ಲಿ ನಿರಂತರವಾಗಿ ನಡೆಯುತ್ತಿರುತ್ತದೆ. ವ್ಯಕ್ತಿಗಳು ಅಥವಾ ಸಮೂಹಗಳ ನಡುವೆ ಸೃಷ್ಟಿಯಾಗುವ ಉದ್ವಿಗ್ನ ಸ್ಥಿತಿ

ಹೊಂದಾಣಿಕೆಯ ಮೂಲಕ ತಿಳಿಯಾಗುತ್ತದೆ. ಬದುಕೆ ಒಂದು ಹೊಂದಾಣಿಕೆ ಎಂದು ತತ್ವಜ್ಞಾನಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹುಟ್ಟಿದ ಮಗುವಿಗೆ ಸಮಾಜದ ಪರಿಸರಕ್ಕೆ ಹೊಂದಿಕೊಳ್ಳಲು ಕಲಿಸದಿದ್ದರೆ, ಅದು ಸಮೂಹದ ಕಾರ್ಯಾತ್ಮಕ ಸದಸ್ಯನಾಗುವುದಿಲ್ಲ. ಸಂಘರ್ಷಾತ್ಮಕ ವ್ಯಕ್ತಿಗಳು ಒಪ್ಪಂದ ಅಥವಾ ರಾಜಿಗೆ ತಲುಪುವ ಸ್ಥಿತಿಗೆ ಸಮಾಜಶಾಸ್ತ್ರಜ್ಞರು ಹೊಂದಾಣಿಕೆ ಪದವನ್ನು ಅನ್ವಯಿಸಿದ್ದಾರೆ.

ಸಮಂಜಸನದ ವಿಧಗಳು ಮತ್ತು ರೂಪಗಳು

ಪಾರ್ಕ್ ಮತ್ತು ಬರ್ಗೆಸ್ ಅವರು ಹೊಂದಾಣಿಕೆಯ ಎರಡು ಪ್ರಮುಖ ಬಗೆಗಳ ಬಗ್ಗೆ ತಿಳಿಸಿದ್ದಾರೆ. ಅವುಗಳೆಂದರೆ : ಹೊಸ ಸ್ವಾಭಾವಿಕ ಸನ್ನಿವೇಶಗಳಿಗೆ ಹೊಂದಿಕೊಳ್ಳುವುದು ಮತ್ತು ಹೊಸ ಸಾಮಾಜಿಕ ಪರಿಸ್ಥಿತಿಗೆ ಒಗ್ಗಿಕೊಳ್ಳುವುದು. ಎರಡನೆಯದು ಸರಳವಾಗಿ ಕಂಡರೂ ವಾಸ್ತವಿಕವಾಗಿ ಅನೇಕ ತೊಂದರೆಗಳು ಇರುತ್ತವೆ. ಉದಾಹರಣೆಗೆ ಒಬ್ಬ ಗ್ರಾಮೀಣ ವಲಸೆಗಾರ ಅಥವಾ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗುವ ವಲಸೆಗಾರ ಅಲ್ಲಿನ ಪರಿಸ್ಥಿತಿಗೆ ಹೊಂದಿಕೊಳ್ಳಲು ಬಹಳಷ್ಟು ಕಷ್ಟಪಡುತ್ತಾನೆ. ಕ್ರಮೇಣ ಹೊಂದಿಕೊಂಡು ಅಲ್ಲಿನ ಪರಿಸ್ಥಿತಿಗೆ ತನ್ನನ್ನು ಒಗ್ಗಿಸಿಕೊಳ್ಳುತ್ತಾನೆ.

ಸಿಮ್ಮೆಲ್ ಅವರು ವೈಯಕ್ತಿಕ ಸಂಬಂಧಗಳ ಆಧಾರದ ಮೇಲೆ ಹೊಂದಾಣಿಕೆಯ ಬಗೆಗಳ ಬಗ್ಗೆ ತಿಳಿಸುತ್ತಾರೆ. ಶ್ರೇಷ್ಠತೆ-ಅಧೀನತೆ ಸಂಬಂಧ ಮೇಲೆ ಹೊಂದಾಣಿಕೆ ಕಂಡು ಬರುವುದು. ವಾಸ್ತವವಾಗಿ ಶ್ರೇಷ್ಠರು ಅಧೀನವಾಗಿರುವವರನ್ನು ಪ್ರಭಾವಿಸುವಂತೆ, ಅಧೀನಕ್ಕೊಳಪಟ್ಟವರಿಂದಲೂ ಪ್ರಭಾವಕ್ಕೊಳಗಾಗುತ್ತಾರೆ. ಇದೂ ಸಹ ಒಂದು ಬಗೆಯ ಹೊಂದಾಣಿಕೆ.

ಹೊಂದಾಣಿಕೆ ಪ್ರಕ್ರಿಯೆಯು ಹಲವು ರೂಪಗಳ ಮೂಲಕ ನಡೆಯುತ್ತದೆ. ಅವುಗಳು ಬಲಪ್ರಯೋಗ, ಒಪ್ಪಂದ ಅಥವಾ ರಾಜಿ, ಮಧ್ಯಸ್ಥಿಕೆ, ಪರಸ್ಪರ ಸಹನೆ, ಮನಃಪರಿವರ್ತನೆ, ಉದಾತ್ತ ಭಾವನೆಗಳನ್ನು ಬೆಳೆಸಿಕೊಳ್ಳುವುದು, ವಿವೇಚನಾಯುಕ್ತ ವಿವರಣೆ ಕೊಡುವುದು ಇತ್ಯಾದಿ.

ಹೊಂದಾಣಿಕೆಯ ಮಹತ್ವ

ಹೊಂದಾಣಿಕೆಯಿಲ್ಲದ ಸಾಮಾಜಿಕ ಜೀವನವನ್ನು ಊಹಿಸಲು ಸಾಧ್ಯವಿಲ್ಲ. ಸಮಾಜವು ವಿರೋಧಾತ್ಮಕ ಅಂಶಗಳನ್ನು ಒಳಗೊಂಡಿರುತ್ತದೆ. ಇವು ಸದಾ ಜಾಗೃತಗೊಂಡಿರುತ್ತವೆ. ಹೊಂದಾಣಿಕೆಯು ಸಂಘರ್ಷಗಳನ್ನು ನಿಯಂತ್ರಿಸಿ, ಸಾಮೂಹಿಕ ಜೀವನಕ್ಕೆ ಅಗತ್ಯವಾಗಿ ಬೇಕಾಗಿರುವ ಸಹಕಾರವನ್ನು ಸ್ಥಾಪಿಸುತ್ತದೆ. ಬದಲಾದ ಪರಿಸ್ಥಿತಿಗಳಿಗೆ ಅನುಗುಣವಾಗಿ ವ್ಯಕ್ತಿಗಳು ಬದಲಾದ ಸ್ಥಾನಮಾನ ಹಾಗೂ ಕಾರ್ಯಗಳನ್ನು ಹೊಂದಲು ಹೊಂದಾಣಿಕೆ ಸಹಾಯ ಮಾಡುತ್ತದೆ. ಸಹಜೀವನ ಹಾಗೂ ಸಹಬಾಳ್ವೆಗಳ ತತ್ವಗಳನ್ನು ಹೊಂದಾಣಿಕೆ ಪ್ರತಿಪಾದಿಸುತ್ತದೆ. ಸಾಮಾಜಿಕ ಪ್ರಕ್ರಮದ ಅಗತ್ಯ ಸುಭದ್ರತೆಗೆ ಹೊಂದಾಣಿಕೆ ಸಹಾಯ ಮಾಡುತ್ತದೆ.

ಸಕಾರಾತ್ಮಕ ದೃಷ್ಟಿಯಿಂದ ಹೊಂದಾಣಿಕೆ ಹಲವು ಪ್ರಯೋಜನಗಳನ್ನು ದೊರಕಿಸಿದರೂ, ಕೆಲವು ನಕಾರಾತ್ಮಕ ಪರಿಣಾಮಗಳು ಹೊಂದಾಣಿಕೆಯಿಂದ ಉಂಟಾಗುತ್ತವೆ. ಹೊಂದಾಣಿಕೆಯು ಸಮಾಜದಲ್ಲಿ ಸ್ಪರ್ಧೆ ಅಥವಾ ಸಂಘರ್ಷ ಪ್ರವೃತ್ತಿಗಳನ್ನು ಹತ್ತಿಕ್ಕಿ, ಜನರ ಕ್ರಿಯಾಶೀಲತೆಗೆ ಭಂಗ ತರಬಹುದು. ಆದರೂ ಬಹು ಸಂಸ್ಕೃತಿ ಪ್ರಧಾನವಾಗಿರುವ ಇಂದಿನ ಸಮಾಜದಲ್ಲಿ ಹೊಂದಾಣಿಕೆ ಅತ್ಯಂತ ಮಹತ್ವದ ಪಾತ್ರವಹಿಸಿದೆಯಲ್ಲದೆ, ಅನಿವಾರ್ಯವಾಗಿದೆ.

೫. ಸ್ವಾಂಗೀಕರಣ

ಸ್ವಾಂಗೀಕರಣವು ಅಂತರಕ್ರಿಯೆಯ ಮತ್ತೊಂದು ರೂಪ. ಇದು ನಿಧಾನಗತಿಯಲ್ಲಿ ಹಾಗೂ ಕ್ರಮೇಣವಾಗಿ ಜರುಗುವ ಮೂಲಭೂತ ಹೊಂದಾಣಿಕಾ ಪ್ರಕ್ರಿಯೇಯೇ ಆಗಿದೆ. ಸ್ವಾಂಗೀಕರಣದಲ್ಲಿ ಸಂಪೂರ್ಣ ಪರಿವರ್ತನೆ ಹಾಗೂ ಲೀನವಾಗುವಿಕೆ ಈ ಎರಡೂ ಅಂಶಗಳು ಕಂಡುಬರುತ್ತವೆ. ಇದು ಸಂಕೀರ್ಣವಾದ ಶಾಶ್ವತವಾದ, ಪ್ರಜ್ಞಾಪೂರ್ವಕವಲ್ಲದ ಹಾಗೂ ಸಾಮಾಜಿಕ ಮತ್ತು ಮಾನಸಿಕ ಅಂಶಗಳೆರಡನ್ನು ಒಳಗೊಂಡಿರುವ ಪ್ರಕ್ರಿಯೆಯಾಗಿದೆ. ಸ್ವಾಂಗೀಕರಣದಲ್ಲಿ ಸಂಸ್ಕೃತಿ ಪ್ರಮುಖವಾದ ಅಂಶವಾಗಿದೆ. ಈ ಪ್ರಕ್ರಿಯೆ ಒಂದು ಸಂಸ್ಕೃತಿ ಇನ್ನೊಂದು ಸಂಸ್ಕೃತಿಯ ಅಂಶಗಳನ್ನು ಅಳವಡಿಸಿಕೊಳ್ಳುವುದು ಮತ್ತು ಅದರಲ್ಲಿ ಲೀನವಾಗುವುದಕ್ಕೆ ಸಂಬಂಧಿಸಿದೆ. ಭಿನ್ನ ಸಂಸ್ಕೃತಿಯ ಹಿನ್ನೆಲೆಯಿರುವ ಎರಡು ಗುಂಪು ಗಳಲ್ಲಿಯೂ ಸಂಭವಿಸುವ ದ್ವಿಮುಖಿ ಸ್ವರೂಪದ ಒಂದು ಸಾಮಾಜಿಕ ಪ್ರಕ್ರಿಯೆ. ವ್ಯತ್ಯಾಸಾತ್ಮಕ ಪ್ರಮಾಣದಲ್ಲಿ ಎರಡೂ ಗುಂಪುಗಳ ನಡುವೆ ಸಾಂಸ್ಕೃತಿಕ ವಿನಿಮಯ ಏರ್ಪಡುತ್ತದೆ. ಸಾಂಸ್ಕೃತಿಕ ಅಂಶಗಳು ಪ್ರಭಾವಿ ಸಮೂಹದಿಂದ ಕಡಿಮೆ ಪ್ರಭಾವವಿರುವ ಸಮೂಹದೆಡೆಗೆ ಚಲಿಸುತ್ತವೆ. ಇದು ಸ್ವಾಂಗೀಕರಣ ಪ್ರಕ್ರಿಯೆಗೆ ದಾರಿ ಮಾಡಿಕೊಡುತ್ತದೆ. ತೀವ್ರ ಸ್ವರೂಪದ ಸಾಂಸ್ಕೃತಿಕ ಭಿನ್ನತೆ ಇದ್ದರೆ ಸ್ವಾಂಗೀಕರಣ ಸಂಭವಿಸಲಾರದು.

ವ್ಯಾಖ್ಯೆಗಳು

೧. ''ವ್ಯಕ್ತಿಗಳು ಮತ್ತು ಸಮೂಹಗಳು ಇನ್ನೊಂದು ಸಮೂಹದ ಸಂಸ್ಕೃತಿಯನ್ನು ಪಡೆಯುವ ಹಾಗೂ ಆ ಸಮೂಹದ ಜೀವನ ವಿಧಾನವನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಯೇ ಸ್ವಾಂಗೀಕರಣ'' ಎಂದು **ಸಾಮ್ಯುಯಲ್ ಕೋನಿಗ್** ತಿಳಿಸಿದ್ದಾರೆ.

೨. ''ವ್ಯಕ್ತಿಗಳು ಮತ್ತು ಸಮೂಹಗಳು ಪರಸ್ಪರ ಸಾಂಸ್ಕೃತಿಕ ಪ್ರಸರಣ ಪ್ರಕ್ರಿಯೆಯ ಮೂಲಕ ಹೊಂದುವ ಸಾಮಾನ್ಯ ಸಂಸ್ಕೃತಿಗೆ ಸ್ವಾಂಗೀಕರಣ'' ಎನ್ನುತ್ತಾರೆ **ಹಾರ್ಟನ್** ಮತ್ತು **ಹಂಟ್.**

ಸ್ವಾಂಗೀಕರಣದ ಸ್ವರೂಪ

ಪಾರ್ಕ್ ಮತ್ತು **ಬರ್ಗೆಸ್** ಪ್ರಕಾರ ಸ್ವಾಂಗೀಕರಣವು ಒಂದು ಪ್ರಕ್ರಿಯೆಯಾಗಿದ್ದು, ಅಲ್ಲಿ ವ್ಯಕ್ತಿಗಳು ಮತ್ತು ಸಮೂಹಗಳು ಇತರ ವ್ಯಕ್ತಿಗಳು ಮತ್ತು ಸಮೂಹಗಳ ನೆನಪುಗಳು,

ಭಾವನೆಗಳು ಮತ್ತು ಮನೋಭಾವನೆಗಳನ್ನು ಪಡೆಯುತ್ತಾರೆ. ಅಲ್ಲದೆ ಅವರ ಅನುಭವ ಮತ್ತು ಇತಿಹಾಸವನ್ನು ಹಂಚಿಕೊಳ್ಳುತ್ತಾ ಸಾಮಾನ್ಯ ಸಾಂಸ್ಕೃತಿಕ ಜೀವನವನ್ನು ಕಂಡುಕೊಳ್ಳುತ್ತಾರೆ. ವ್ಯಕ್ತಿಗಳು ಅಥವಾ ಸಮೂಹಗಳು ಸ್ವಾಂಗೀಕರಣ ಪ್ರಕ್ರಿಯೆಯಲ್ಲಿ ತಮ್ಮದನ್ನು ಬಿಟ್ಟುಕೊಟ್ಟು, ಇತರ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುತ್ತಾರೆ. ಇದು ಎರಡು ಭಿನ್ನ ಸಂಸ್ಕೃತಿಗಳ ಸಂಪರ್ಕದಲ್ಲಿ ಸಹಜವಾಗಿ ನಡೆಯುವ ಪ್ರಕ್ರಿಯೆ. ಸ್ವಾಂಗೀಕರಣ ಯಾವುದೋ ನಿರ್ದಿಷ್ಟ ಕ್ಷೇತ್ರಕ್ಕೆ ಸೀಮಿತವಾಗಿರದೆ, ಸಮಾಜದ ಸಮಸ್ತ ಕ್ಷೇತ್ರಗಳಲ್ಲೂ ಕಂಡುಬರುತ್ತದೆ. ಸಮಾಜದಲ್ಲಿ ಸಂಘರ್ಷ ಕಣ್ಮರೆಯಾಗಲು ಸಹಾಯ ಮಾಡುತ್ತದೆ. ಸಂಸ್ಕೃತಿಯ ಕೊಡುಕೊಳ್ಳುವಿಕೆ ಮತ್ತು ತನ್ನತನವನ್ನು ಕಳೆದುಕೊಳ್ಳುವಿಕೆ ಹಾಗೂ ಅನ್ಯತನದ ಸ್ವೀಕಾರ ಇವುಗಳು ಸ್ವಾಂಗೀಕರಣದ ಪ್ರಮುಖ ಅಂಶಗಳಾಗಿವೆ.

ಸ್ವಾಂಗೀಕರಣಕ್ಕೆ ಸಹಾಯವಾಗುವ ಅಂಶಗಳು

ಕೆಲವು ಅಂಶಗಳು ಸ್ವಾಂಗೀಕರಣ ಪ್ರಕ್ರಿಯೆಗೆ ಉತ್ತೇಜನಕಾರಿಯಾಗಿವೆ. **ಗಿಲಿನ್** ಮತ್ತು **ಗಿಲಿನ್** ಅವರು ಸ್ವಾಂಗೀಕರಣಕ್ಕೆ ಸಹಾಯವಾಗುವ ಅಂಶಗಳನ್ನು ಪಟ್ಟಿ ಮಾಡಿದ್ದಾರೆ. ಅವುಗಳೆಂದರೆ ಸಹನೆ, ಸಮಾನ ಆರ್ಥಿಕ ಪರಿಸ್ಥಿತಿ ಹಾಗೂ ಅಭಿವೃದ್ಧಿಯ ಅವಕಾಶ, ಪ್ರಭಾವಿ ಸಮೂಹಗಳು ದುರ್ಬಲ ಸಮೂಹಗಳಿಗೆ ತೋರಿಸಬಹುದಾದ ಅನುಕಂಪ, ಪ್ರಬಲ ಸಮೂಹದ ಸಂಸ್ಕೃತಿಗೆ ದುರ್ಬಲ ಸಮೂಹದ ಸಂಸ್ಕೃತಿ ತನ್ನನ್ನು ತೆರೆದುಕೊಳ್ಳುವ ರೀತಿ, ಎರಡೂ ಸಮೂಹಗಳ ಸಂಸ್ಕೃತಿಗಳಲ್ಲಿನ ಸಮಾನ ಅಂಶಗಳು ಮತ್ತು ಅಂತರ್‌ವಿವಾಹಗಳು ಹೆಚ್ಚಾಗುವಿಕೆ ಮುಂತಾದುವು. ಹೀಗೆ ವಿಭಿನ್ನ ಸಂಸ್ಕೃತಿಯ ಜನರು ಸಹನೆಯಿಂದ ಪರಸ್ಪರ ಸಮೀಪಕ್ಕೆ ಬಂದು ಸಂಪರ್ಕ ಬೆಳೆಸಿ ಒಂದುಗೂಡಿದರೆ ಮಾತ್ರ ಸ್ವಾಂಗೀಕರಣವು ಉಂಟಾಗುತ್ತದೆ. ಅಸಹನೆ ಹಾಗೂ ದ್ವೇಷಾಸೂಯೆಗಳಿದ್ದಲ್ಲಿ ಸ್ವಾಂಗೀಕರಣವು ಸಂಭವಿಸ ಲಾರದು.

ಸ್ವಾಂಗೀಕರಣಕ್ಕೆ ಅಡ್ಡಿಯನ್ನುಂಟು ಮಾಡುವ ಅಂಶಗಳು

ಕೆಲವು ಅಂಶಗಳು ಸ್ವಾಂಗೀಕರಣ ಪ್ರಕ್ರಿಯೆಗೆ ತಡೆಯನ್ನುಂಟುಮಾಡುತ್ತವೆ. ಭಿನ್ನ ವ್ಯಕ್ತಿಗಳು ಅಥವಾ ಸಮೂಹಗಳು ಪರಸ್ಪರ ಸಂಪರ್ಕವನ್ನು ಹೊಂದದೆ ಪ್ರತ್ಯೇಕವಾಗಿ ಜೀವನವನ್ನು ನಡೆಸಲು ಪ್ರಯತ್ನಿಸಿದರೆ ಸ್ವಾಂಗೀಕರಣ ಉಂಟಾಗುವುದಿಲ್ಲ. ಪ್ರಭಾವಿ ಸಮೂಹಗಳು ಹೊಂದಿರುವ ಶ್ರೇಷ್ಠತೆಯ ಭಾವನೆಯೂ, ದುರ್ಬಲ ಸಮೂಹವನ್ನು ದೂರವಿರಿಸಿ, ಸ್ವಾಂಗೀಕರಣಕ್ಕೆ ಅಡ್ಡಿತರುತ್ತದೆ. ಎರಡು ಸಮೂಹಗಳ ನಡುವಿನ ಭಾರಿ ಸಾಂಸ್ಕೃತಿಕ ಮತ್ತು ಜನಾಂಗೀಯ ಬೇಧಗಳು ಸ್ವಾಂಗೀಕರಣಕ್ಕೆ ಅವಕಾಶ ನೀಡುವುದಿಲ್ಲ. ಬಲಿಷ್ಠ ಸಮೂಹಗಳು ತೋರಿಸುವ ದಬ್ಬಾಳಿಕೆ, ದರ್ಪ, ಹಿಂಸೆ, ಕ್ರೌರ್ಯ ಮೊದಲಾದು ವುಗಳು ದುರ್ಬಲ ಗುಂಪುಗಳಲ್ಲಿ ಭಯದ ವಾತಾವರಣ ಮೂಡಿಸಿ, ಸ್ವಾಂಗೀಕರಣಕ್ಕೆ ಅಡ್ಡಿಯಾಗುತ್ತವೆ. ಆದುದರಿಂದ ಪ್ರತ್ಯೇಕತೆಯ ಭಾವನೆ, ಜನಾಂಗೀಯ ಮತ್ತು ಶಾರೀರಿಕ

ಭಿನ್ನತೆಗಳು, ಸಾಂಸ್ಕೃತಿಕ ಬೇಧಗಳು, ಜನರ ನಡುವೆ ಇರುವ ಪರಸ್ಪರ ಪೂರ್ವಾಗ್ರಹಗಳು, ಶೋಷಣೆ, ದಬ್ಬಾಳಿಕೆ ಮುಂತಾದುವು ಘರ್ಷಣೆಗೆ ಕಾರಣವಾಗುತ್ತವೆ. ಈ ತೊಡಕುಗಳು ನಿವಾರಣೆಯಾದರೆ ಮಾತ್ರ ಸ್ವಾಂಗೀಕರಣಕ್ಕೆ ಅನುಕೂಲಕರವಾದ ಪರಿಸ್ಥಿತಿ ನಿರ್ಮಾಣ ವಾಗುವುದು.

ಸ್ವಾಂಗೀಕರಣವು ಸಂಘರ್ಷ ಸ್ಥಿತಿಯಿಂದ ನಿರ್ಮಾಣವಾಗುವ ಉದ್ವಿಗ್ನತೆಯನ್ನು ಉಪಶಮನಗೊಳಿಸುತ್ತದೆ. ಭಿನ್ನ ಸಾಂಸ್ಕೃತಿಕ ಸಮೂಹಗಳ ನಡುವಿನ ಭಿನ್ನತೆಯನ್ನು ಕಡಿಮೆ ಮಾಡಿ, ಏಕತೆಗೆ ಮತ್ತು ಅಖಂಡತೆಗೆ ಪ್ರೋತ್ಸಾಹ ನೀಡುತ್ತದೆ. ಜನರಲ್ಲಿ ಸಹಕಾರ ಮನೋಭಾವನೆ ಬೆಳೆಯಲು ಅವಕಾಶ ಕಲ್ಪಿಸುತ್ತದೆ. ಸ್ವಾಂಗೀಕರಣವು ಸಾಮಾಜಿಕ ಬದಲಾವಣೆ ಮತ್ತು ಮೌಲ್ಯಗಳಲ್ಲಿ ಬದಲಾವಣೆ ತರಲು ಸಹಾಯ ಮಾಡುತ್ತದೆ.

ಸಮಂಜನ ಮತ್ತು ಸ್ವಾಂಗೀಕರಣದ ನಡುವೆ ಕೆಲವು ವ್ಯತ್ಯಾಸಗಳಿವೆ. ಮೂಲತಃ ಈ ಎರಡೂ ಪ್ರಕ್ರಿಯೆಗಳು ಸಂಘರ್ಷದ ಉಪಶಮನಕ್ಕಾಗಿ ಉಂಟಾಗುವ ಪ್ರಕ್ರಿಯೆಗಳಾಗಿವೆ. ಆದರೆ ಅವುಗಳ ನಡುವೆ ಇರುವ ವ್ಯತ್ಯಾಸಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಸಮಂಜನವು ಶಾಶ್ವತವಲ್ಲ. ಆದರೆ ಸ್ವಾಂಗೀಕರಣವು ಶಾಶ್ವತವಾದ ಸಾಂಸ್ಕೃತಿಕ ಬದಲಾವಣೆಯನ್ನು ತರುತ್ತದೆ.
೨. ಸಮಂಜನವು ಸಂಘರ್ಷದ ಕೊನೆಯ ಹಂತದಲ್ಲಿ ಒಮ್ಮಿಂದೊಮ್ಮೆಲೇ ಸಂಭವಿಸುವಂತಹದು. ಆದರೆ ಸ್ವಾಂಗೀಕರಣವು ನಿಧಾನವಾಗಿ ಹಂತ-ಹಂತವಾಗಿ ಜರಗುವ ಪ್ರಕ್ರಿಯೆಯಾಗಿದೆ.
೩. ಸಮಂಜನವು ಉದ್ದೇಶ ಪೂರ್ವಕವಾಗಿ ಹಾಗೂ ಪ್ರಜ್ಞಾಪೂರ್ವಕವಾಗಿ ಜರಗುತ್ತದೆ. ಆದರೆ ಸ್ವಾಂಗೀಕರಣವು ಸಹಜವಾಗಿ ಹಾಗೂ ಅಪ್ರಜ್ಞಾಪೂರ್ವಕವಾಗಿ ಜರಗುತ್ತದೆ.

ಈ ವ್ಯತ್ಯಾಸಗಳಿದ್ದರೂ ಈ ಎರಡು ಪ್ರಕ್ರಿಯೆಗಳು ಪರಸ್ಪರ ಪೂರಕವಾಗಿವೆ. ಏಕೆಂದರೆ ಸಮಂಜನವು ಸ್ವಾಂಗೀಕರಣಕ್ಕೆ ಸೂಕ್ತ ತಳಹದಿಯನ್ನು ಒದಗಿಸುತ್ತದೆ.

೨.೩. ಸಾರಾಂಶ

ಪ್ರತಿಯೊಂದು ವಿಜ್ಞಾನವು ತನ್ನದೇ ಆದ ಮೂಲ ಪರಿಕಲ್ಪನೆಗಳನ್ನು ಹೊಂದಿರುವುದು. ಅಂತಹ ಪರಿಕಲ್ಪನೆಗಳ ಮುಖಾಂತರ ತನ್ನ ಅಧ್ಯಯನ ವಸ್ತುವನ್ನು ವಿವರಿಸುವುದು. ಪರಿಕಲ್ಪನೆಗಳು ಭಾಷೆಯಂತೆ ಉತ್ತಮ ಮಾಧ್ಯಮಗಳಾಗಿ, ವಸ್ತುವಿಷಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯವೆಸಗುತ್ತವೆ. ವಿಚಾರಗಳನ್ನು ಸಾಮಾನ್ಯೀಕರಿಸಲು ಪರಿಕಲ್ಪನೆಗಳು ನೆರವಾಗುತ್ತವೆ. ಸಮಾಜ, ಸಮುದಾಯ, ಸಂಘ, ಸಂಸ್ಥೆ, ಸಾಮಾಜಿಕ ಅಂತರಕ್ರಿಯೆ ಮತ್ತು ಪ್ರಕ್ರಿಯೆ ಮುಂತಾದವು ಸಮಾಜಶಾಸ್ತ್ರದ ಮೂಲಭೂತ ಪರಿಕಲ್ಪನೆಗಳಾಗಿದ್ದು, ಅವುಗಳ ವಿವರಣೆ ನೀಡಲಾಗಿದೆ.

ಪ್ರತಿಯೊಬ್ಬ ವ್ಯಕ್ತಿಯು ಇನ್ನಿತರರೊಡಗೂಡಿ ಅಂತರಕ್ರಿಯೆಗಳನ್ನು ಬೆಳೆಸುವ ಮೂಲಕ ಸಾಮಾಜಿಕ ಸಂಬಂಧಗಳನ್ನು ಬೆಳೆಸಿಕೊಳ್ಳುವನು. ಹೀಗೆ ವ್ಯಕ್ತಿ-ವ್ಯಕ್ತಿಗಳ ಮಧ್ಯೆ ಅನೇಕ

ಸಂಬಂಧಗಳು ಒಡಮೂಡುವವು. ಇಂತಹ ಸಾಮಾಜಿಕ ಸಂಬಂಧಗಳ ಬಲೆಯೇ ಸಮಾಜವೆಂಬುದಾಗಿ **ಮೆಕೈವರ್** ತಿಳಿಸಿದ್ದಾನೆ. ಸಾಮ್ಯತೆ, ಭಿನ್ನತೆ, ಸಹಕಾರ ಹಾಗೂ ಪರಸ್ಪರ ಅವಲಂಬನೆ ಇವು ಸಮಾಜದ ಗುಣಲಕ್ಷಣಗಳಾಗಿವೆ. ಯಾವುದೇ ಜನರ ಸಮೂಹ, ನಿಶ್ಚಿತ ಭೌಗೋಳಿಕ ಪ್ರದೇಶದಲ್ಲಿ ವಾಸಿಸುತ್ತಿದ್ದು ನಾವು-ನಮ್ಮವರೆಂಬ ಭಾವನೆಯನ್ನು ಬೆಳೆಸಿಕೊಂಡರೆ, ಅದನ್ನು ಸಮುದಾಯವೆನ್ನಬಹುದು. ನಿಶ್ಚಿತವಾದ ಭೂಪ್ರದೇಶ, ಸಾಮುದಾಯಿಕ ಭಾವನೆ, ಸ್ಥಿರತೆ, ಸ್ವಾಭಾವಿಕತೆ, ಒಂದು ನಿಶ್ಚಿತ ಹೆಸರು, ಸಾಮಾಜಿಕ ನಿಯಂತ್ರಣ ಇತ್ಯಾದಿಗಳನ್ನು ಸಮುದಾಯದ ಮುಖ್ಯ ಮೂಲಾಂಶಗಳಾಗಿವೆ. ನಿರ್ದಿಷ್ಟ ಗುರಿಯನ್ನು ಸಾಧಿಸಲೋಸುಗ ಕಾರ್ಯನಿರ್ವಹಿಸುವ ಜನರ ಸಮೂಹವೇ ಸಂಘವೆಂದೆನಿಸುವುದು. ಪ್ರತಿಯೊಂದು ಸಂಘವು ತನ್ನದೇ ಆದ ಉದ್ದೇಶ, ಸಂಘಟನೆ, ಲಿಖಿತ ಇಲ್ಲವೆ ಅಲಿಖಿತ ನಿಯಮಗಳನ್ನು ಹೊಂದಿರುವುದು. ಮಾನವರು ಸಂಘಗಳನ್ನು ಕಟ್ಟಿಕೊಳ್ಳುವ ಮೂಲಕ ತಮ್ಮ ಆಶೆ-ಆಶೋತ್ತರಗಳನ್ನು ಈಡೇರಿಸಿಕೊಳ್ಳುವರು. ಅಂತರ್‌ಸಂಬಂಧವಿರುವ ಲೋಕರೂಢಿಗಳು ಮತ್ತು ನೈತಿಕ ನಿಯಮಗಳು ವ್ಯವಸ್ಥಿತವಾಗಿ ಸಂಘಟಿತಗೊಂಡು ವಿಶೇಷ ಕಾರ್ಯಗಳನ್ನು ನಿರ್ವಹಿಸಿದಾಗ ಅವು ಸಂಸ್ಥೆಗಳೆನಿಸುತ್ತವೆ. ಸಂಸ್ಥೆಗಳು ಪ್ರಕಟಿತ ಮತ್ತು ಅಪ್ರಕಟಿತ ಕಾರ್ಯಗಳನ್ನು ನಿರ್ವಹಿಸುತ್ತವೆ. ವ್ಯಕ್ತಿಗಳು ಹಾಗೂ ಸಮೂಹಗಳಲ್ಲಿ ಪರಸ್ಪರ ಅಂತರಕ್ರಿಯೆ ಮತ್ತು ಸಂಬಂಧಗಳು ಏರ್ಪಡುವ ಬಗೆಗೆ ಸಾಮಾಜಿಕ ಪ್ರಕ್ರಿಯೆಗಳೆನ್ನಬಹುದು. ಸಹಕಾರ, ಸ್ಪರ್ಧೆ, ಸಂಘರ್ಷ, ಹೊಂದಾಣಿಕೆ, ಸ್ವಾಂಗೀಕರಣ ಇತ್ಯಾದಿಗಳನ್ನೊಳಗೊಂಡ ಅಂತರಕ್ರಿಯೆಯ ವಿವಿಧ ಪ್ರಕಾರಗಳೇ ಸಾಮಾಜಿಕ ಪ್ರಕ್ರಿಯೆಗಳಾಗಿವೆ. ಸಹಕಾರ, ಹೊಂದಾಣಿಕೆ, ಸ್ವಾಂಗೀಕರಣ ಮುಂತಾದ ಅಂತರಕ್ರಿಯೆಗಳು ಸಂಘಟಿತ ಸಾಮಾಜಿಕ ಪ್ರಕ್ರಿಯೆಗಳೆಂದೆನಿಸಿದರೆ; ಸ್ಪರ್ಧೆ, ಸಂಘರ್ಷ, ವಿರೋಧಾತ್ಮಕತೆ ಇತ್ಯಾದಿ ಅಂತರಕ್ರಿಯೆಗಳು ವಿಸಂಘಟಿತ ಸಾಮಾಜಿಕ ಪ್ರಕ್ರಿಯೆಗಳೆಂದೆನಿಸುವುವು.

ಸಾಮಾನ್ಯ ಉದ್ದೇಶ ಸಾಧನೆಗಾಗಿ ಇಬ್ಬರು ಇಲ್ಲವೆ ಹೆಚ್ಚು ಸಂಖ್ಯೆಯ ವ್ಯಕ್ತಿಗಳು ಒಟ್ಟುಗೂಡಿ ಶ್ರಮಿಸಿದರೆ ಅದು ಸಹಕಾರವೆಂದೆನಿಸುವುದು. ಪ್ರತ್ಯಕ್ಷ ಸಹಕಾರ, ಪರೋಕ್ಷ ಸಹಕಾರ, ಪ್ರಾಥಮಿಕ ಸಹಕಾರ, ಮಾಧ್ಯಮಿಕ ಸಹಕಾರ ಹಾಗೂ ತೃತೀಯ ಹಂತದ ಸಹಕಾರಗಳು ಸಹಕಾರದ ಪ್ರಮುಖ ವಿಧಗಳಾಗಿವೆ.

ಅಪೇಕ್ಷಣೀಯ ವಸ್ತುಗಳ ಸೀಮಿತ ಪೂರೈಕೆಯ ಸಂದರ್ಭದಲ್ಲಿ, ವ್ಯಕ್ತಿಗಳ ಮಧ್ಯದಲ್ಲಿ ಅವುಗಳನ್ನು ದೊರಕಿಸಿಕೊಳ್ಳಲು ಏರ್ಪಡುವ ಹೋರಾಟವೇ ಸ್ಪರ್ಧೆ. ಹಣ, ಆಸ್ತಿ, ಅಧಿಕಾರ, ಅಂತಸ್ತು, ಗೌರವ, ಪ್ರೀತಿ ಮತ್ತು ಉದ್ಯೋಗಗಳನ್ನು ಹೊಂದಲು ಜನರು ಪೈಪೋಟಿಗಿಳಿಯುತ್ತಾರೆ. ಸ್ಪರ್ಧೆಯು ಸಾರ್ವತ್ರಿಕವಾಗಿದ್ದು, ಸರ್ವಸಮಾಜಗಳಲ್ಲಿಯೂ, ಸರ್ವಕ್ಷೇತ್ರಗಳಲ್ಲಿಯೂ ಕಾಣಬರುವುದು ಇದೊಂದು ಅವೈಯಕ್ತಿಕ ಹೋರಾಟವಾಗಿದೆ. ಸ್ಪರ್ಧೆಯು ಪ್ರಜ್ಞಾಪೂರ್ವಕವಾಗಿ ಇಲ್ಲವೆ ಅಪ್ರಜ್ಞಾಪೂರ್ವಕವಾಗಿ ನಡೆಯುತ್ತದೆ. ಇದು ನಿಯಮಗಳಿಂದ ನಿಯಂತ್ರಿಸಲ್ಪಡುವುದು. ಗಿಲಿನ್ ಮತ್ತು ಗಿಲಿನ್‌ರವರು ನಾಲ್ಕು ಪ್ರಕಾರದ ಸ್ಪರ್ಧೆಗಳನ್ನು

ಗುರುತಿಸಿದ್ದಾರೆ. ಅವುಗಳೆಂದರೆ ೧. ಆರ್ಥಿಕ ಸ್ಪರ್ಧೆ ೨. ಸಾಂಸ್ಕೃತಿಕ ಸ್ಪರ್ಧೆ ೩. ಪಾತ್ರ ಹಾಗೂ ಅಂತಸ್ತಿಗಾಗಿ ಸ್ಪರ್ಧೆ ೪. ಜನಾಂಗೀಯ ಸ್ಪರ್ಧೆ. **ಮೆರ್ಸರ್ ಮತ್ತು ಪ್ಯಾಂಡರರ್** ಸ್ಪರ್ಧೆಯಲ್ಲಿ ನಾಲ್ಕು ವಿಧಗಳನ್ನು ಸೂಚಿಸಿದ್ದಾರೆ. ೧. ಶುದ್ಧ ಮತ್ತು ಸೀಮಿತ ಸ್ಪರ್ಧೆ ೨. ನಿರಪೇಕ್ಷ ಮತ್ತು ಸಾಪೇಕ್ಷಕ ಸ್ಪರ್ಧೆ ೩. ವೈಯಕ್ತಿಕ ಮತ್ತು ಅವೈಯಕ್ತಿಕ ಸ್ಪರ್ಧೆ ೪. ಕ್ರಿಯಾತ್ಮಕ ಮತ್ತು ಕ್ರಿಯಾತ್ಮಕವಲ್ಲದ ಸ್ಪರ್ಧೆ. ವ್ಯಕ್ತಿಗಳ ಪರಸ್ಪರ ವಿರೋಧಾಸಕ್ತಿಗಳನ್ನು ಹೊಂದಿ, ಪ್ರತಿಸ್ಪರ್ಧೆಯನ್ನು ದುರ್ಬಲಗೊಳಿಸಿ ಇಲ್ಲವೆ ನಾಶಗೊಳಿಸಿ ಗುರಿ ಸಾಧಿಸಲು ಪ್ರಯತ್ನಿಸಿದಾಗ ಸಂಘರ್ಷವು ಉಂಟಾಗುತ್ತದೆ. ಯುದ್ಧ, ಅಂತಃಕಲಹ, ಮೊಕದ್ದಮೆ ಮತ್ತು ಅವೈಯುಕ್ತಿಕ ಆದರ್ಶಗಳ ಸಂಘರ್ಷಗಳು, ಸಂಘರ್ಷದ ನಾಲ್ಕು ಪ್ರಕಾರಗಳಾಗಿವೆ ಎಂದು **ಜಾರ್ಜ್ ಸಿಮ್ಮೆಲ್** ತಿಳಿಸಿದ್ದಾರೆ. ಸಂಘರ್ಷದ ಹಾನಿಕಾರಕ ಪರಿಣಾಮಗಳನ್ನು ಮನಗಂಡು ಸಹ ಸದಸ್ಯರೊಂದಿಗಿನ ಭಿನ್ನತೆಗಳನ್ನು ಮರೆತು ಅವರೊಡನೆ ಹೊಂದಿಕೊಂಡು ಹೋಗುವ ಪ್ರಕ್ರಿಯೆಯೇ ಹೊಂದಾಣಿಕೆ. ವ್ಯಕ್ತಿಗಳು ಮತ್ತು ಸಮೂಹಗಳು ಮತ್ತೊಂದು ಸಮೂಹದ ಸಂಸ್ಕೃತಿ ಹಾಗೂ ಜೀವನ ವಿಧಾನವನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಯೇ ಸ್ವಾಂಗೀಕರಣವಾಗಿದೆ.

೨.೪. ಪಾರಿಭಾಷಿಕ ಪದಕೋಶ

೧. Absolute Competition = ನಿರಪೇಕ್ಷ ಸ್ಪರ್ಧೆ

೨. Assimilation = ಸ್ವಾಂಗೀಕರಣ

೩. Community Sentiment = ಸಾಮುದಾಯಿಕ ಭಾವನೆ

೪. Communication = ಸಂವಹನ

೫. Concepts = ಪರಿಕಲ್ಪನೆಗಳು

೬. Compromise= ರಾಜಿ

೭. Concrete nature = ಮೂರ್ತ ಸ್ವರೂಪ

೮. Division of labour = ಶ್ರಮ ವಿಭಜನೆ

೯. Feud = ಅಂತಃಕಲಹ ಅಥವಾ ಪಕ್ಷ ವೈಷಮ್ಯ

೧೦. Likeness = ಸಾಮ್ಯತೆ

೧೧. Litigation = ಮೊಕದ್ದಮೆ ಅಥವಾ ದಾವೆ

೧೨. Process = ಪ್ರಕ್ರಿಯೆ

೧೩. Stability = ಸ್ಥಿರತೆ

೨.೫. ಪ್ರಶ್ನೆಗಳು

I. ಒಂದು ಅಂಕದ ಪ್ರಶ್ನೆಗಳು

೧. ಸಮಾಜದ ಒಂದು ವ್ಯಾಖ್ಯೆಯನ್ನು ನೀಡಿ.

೨. 'ಸೊಸೈಟಿ' ಎಂಬ ಆಂಗ್ಲ ಪದವು ಹೇಗೆ ಹುಟ್ಟಿಕೊಂಡಿದೆ?
೩. ಸಮಾಜದ ಒಂದು ಗುಣಲಕ್ಷಣವನ್ನು ತಿಳಿಸಿ.
೪. 'ಮಾನವನು ಮೂಲಭೂತವಾಗಿ ಸಮಾಜ ಜೀವಿ' - ಇದು ಯಾರ ಹೇಳಿಕೆ?
೫. ಸಮುದಾಯದ ಒಂದು ವ್ಯಾಖ್ಯೆ ಕೊಡಿ.
೬. ಸಮುದಾಯದ ಒಂದು ಮೂಲಾಂಶವನ್ನು ನಮೂದಿಸಿ.
೭. ಸಮುದಾಯದ ಒಂದು ವಿಧವನ್ನು ತಿಳಿಸಿ.
೮. 'ಸಾಮುದಾಯಿಕ ಭಾವನೆ' ಎಂದರೇನು?
೯. ಸಮಾಜ ಮತ್ತು ಸಮುದಾಯಗಳ ಮಧ್ಯದ ಒಂದು ವ್ಯತ್ಯಾಸವನ್ನು ತಿಳಿಸಿ.
೧೦. ಪ್ರಭೇದ ಪ್ರಜ್ಞೆ ಈ ಪದವನ್ನು ಯಾರು ಪ್ರಥಮವಾಗಿ ಬಳಸಿದ್ದಾರೆ?
೧೧. ಸಂಸ್ಥೆಯ ವ್ಯಾಖ್ಯೆ ನೀಡಿ.
೧೨. ಸಂಸ್ಥೆಯ ಒಂದು ಲಕ್ಷಣವನ್ನು ತಿಳಿಸಿ.
೧೩. ಸಹಕಾರವೆಂದರೇನು?
೧೪. ಪ್ರತ್ಯಕ್ಷ ಸಹಕಾರಕ್ಕೆ ಒಂದು ಉದಾಹರಣೆ ಕೊಡಿ.
೧೫. ಪರೋಕ್ಷ ಸಹಕಾರಕ್ಕೆ ಒಂದು ಉದಾಹರಣೆ ನೀಡಿ.
೧೬. 'ಕೊ-ಆಪರೇಶನ್' ಪದವು ಹೇಗೆ ವ್ಯುತ್ಪತ್ತಿಯಾಗಿದೆ?
೧೭. ಸಹಕಾರದ ಒಂದು ವಿಧವನ್ನು ನಮೂದಿಸಿ.
೧೮. ಸ್ಪರ್ಧೆಯೆಂದರೇನು?
೧೯. ಸ್ಪರ್ಧೆಯ ಒಂದು ಪ್ರಕಾರವನ್ನು ನಮೂದಿಸಿ.
೨೦. ಜಾರ್ಜ್ ಸಿಮ್ಮೆಲ್ ಸೂಚಿಸಿದ ಸಂಘರ್ಷದ ಒಂದು ಪ್ರಕಾರವನ್ನು ನಮೂದಿಸಿ.
೨೧. ಸಂಘರ್ಷವು ನಿರಂತರವಾದುದೇ?
೨೨. ಹೊಂದಾಣಿಕೆಯ ವ್ಯಾಖ್ಯೆಯೊಂದನ್ನು ನೀಡಿ.
೨೩. ಸ್ವಾಂಗೀಕರಣದ ಒಂದು ವ್ಯಾಖ್ಯೆಯನ್ನು ಕೊಡಿ.

II. ಎರಡು ಅಂಕದ ಪ್ರಶ್ನೆಗಳು

೧. ಸಮಾಜವೆಂದರೇನು?
೨. ಸಮಾಜದ ಎರಡು ಲಕ್ಷಣಗಳನ್ನು ನಮೂದಿಸಿ.
೩. ಶ್ರಮವಿಭಜನೆ ಎಂದರೇನು?
೪. ಸಮಾಜ ಮತ್ತು ಸಮುದಾಯದ ಮಧ್ಯದ ಎರಡು ವ್ಯತ್ಯಾಸಗಳನ್ನು ತಿಳಿಸಿ.
೫. ಸಮುದಾಯದ ಎರಡು ಮೂಲಾಂಶಗಳನ್ನು ತಿಳಿಸಿ.
೬. ಸಂಘದ ಎರಡು ಲಕ್ಷಣಗಳನ್ನು ತಿಳಿಸಿ.
೭. ಸಂಸ್ಥೆಯು ನಿರ್ವಹಿಸುವ ಎರಡು ರೀತಿಯ ಕಾರ್ಯಗಳಾವುವು?
೮. ಸಂಘ-ಸಂಸ್ಥೆಗಳ ನಡುವಿನ ಎರಡು ವ್ಯತ್ಯಾಸಗಳನ್ನು ತಿಳಿಸಿ.

೯. ಸಹಕಾರದ ಎರಡು ವ್ಯಾಖ್ಯೆಗಳನ್ನು ಕೊಡಿ.

೧೦. ಸಹಕಾರದ ಎರಡು ಪ್ರಕಾರಗಳನ್ನು ಗುರುತಿಸಿ.

೧೧. ಪ್ರತ್ಯಕ್ಷ ಸಹಕಾರಕ್ಕೆ ಎರಡು ಉದಾಹರಣೆಗಳನ್ನು ಕೊಡಿ.

೧೨. ಪರೋಕ್ಷ ಸಹಕಾರಕ್ಕೆ ಎರಡು ನಿದರ್ಶನಗಳನ್ನು ಕೊಡಿ.

೧೩. ಸ್ಪರ್ಧೆಯ ಎರಡು ಪ್ರಕಾರಗಳನ್ನು ತಿಳಿಸಿ.

೧೪. ಸ್ಪರ್ಧೆಯ ಎರಡು ಲಕ್ಷಣಗಳನ್ನು ತಿಳಿಸಿ.

೧೫. ಜಾರ್ಜ್ ಸಿಮ್ಮೆಲ್ ಸೂಚಿಸಿದ ಸಂಘರ್ಷದ ನಾಲ್ಕು ಪ್ರಕಾರಗಳನ್ನು ನಮೂದಿಸಿ.

೧೬. ಮೊಕದ್ದಮೆ ಅಥವಾ ದಾವೆ ಎಂದರೇನು?

೧೭. ಅಂತಃಕಲಹವೆಂದರೇನು?

೧೮. ಸಂಘರ್ಷದ ಎರಡು ಅನುಕೂಲತೆಗಳನ್ನು ತಿಳಿಸಿ.

೧೯. ಹೊಂದಾಣಿಕೆಯೆಂದರೇನು?

೨೦. ಸ್ವಾಂಗೀಕರಣಕ್ಕೆ ಸಹಾಯವೆಸಗುವ ಎರಡು ಅಂಶಗಳನ್ನು ತಿಳಿಸಿ.

೨೧. ಸ್ವಾಂಗೀಕರಣಕ್ಕೆ ಅಡ್ಡಿಯನ್ನುಂಟು ಮಾಡುವ ಎರಡು ಅಂಶಗಳನ್ನು ತಿಳಿಸಿ.

III. ಐದು ಅಂಕದ ಪ್ರಶ್ನೆಗಳು

೧. ಸಮಾಜವನ್ನು ವ್ಯಾಖ್ಯಾನಿಸಿ.

೨. ಸಮಾಜದ ನಾಲ್ಕು ಗುಣಲಕ್ಷಣಗಳನ್ನು ವಿವರಿಸಿ.

೩. ಸಮುದಾಯದ ಮೂಲಾಂಶಗಳನ್ನು ಚರ್ಚಿಸಿ.

೪. ಸಮಾಜ ಮತ್ತು ಸಮುದಾಯಗಳ ನಡುವಿನ ವ್ಯತ್ಯಾಸಗಳನ್ನು ಸ್ಪಷ್ಟಪಡಿಸಿ.

೫. ಸಂಘವನ್ನು ವ್ಯಾಖ್ಯಾನಿಸಿ, ಅದರ ಲಕ್ಷಣಗಳನ್ನು ಸಂಕ್ಷಿಪ್ತದಲ್ಲಿ ವಿವರಿಸಿ.

೬. ಸಂಸ್ಥೆಯ ಕಾರ್ಯಗಳನ್ನು ವಿವರಿಸಿ.

೭. ಸಂಘ ಹಾಗೂ ಸಂಸ್ಥೆಗಳ ನಡುವಿನ ವ್ಯತ್ಯಾಸಗಳ ವಿವರಣೆ ನೀಡಿ.

೮. ಸಹಕಾರದ ಪ್ರಕಾರಗಳನ್ನು ಚರ್ಚಿಸಿರಿ.

೯. ಸಹಕಾರವನ್ನು ವ್ಯಾಖ್ಯಾನಿಸಿ, ಸಾಮಾಜಿಕ ಜೀವನದಲ್ಲಿ ಸಹಕಾರದ ಪಾತ್ರವನ್ನು ಚಿತ್ರಿಸಿ.

೧೦. ಸ್ಪರ್ಧೆಯ ಸ್ವರೂಪವನ್ನು ನಿರೂಪಿಸಿ.

೧೧. ಸ್ಪರ್ಧೆಯ ಸಾಮಾಜಿಕ ಮಹತ್ವವನ್ನು ತಿಳಿಸಿ.

೧೨. ಹೊಂದಾಣಿಕೆಯ ವ್ಯಾಖ್ಯೆ ನೀಡಿ, ಅದರ ಸ್ವರೂಪವನ್ನು ತಿಳಿಸಿ.

೧೩. ಸ್ವಾಂಗೀಕರಣಕ್ಕೆ ಸಹಾಯವಾಗುವ ಮತ್ತು ಅಡ್ಡಿಯನ್ನುಂಟುಮಾಡುವ ಅಂಶಗಳ ಬಗ್ಗೆ ವಿವರಣೆ ನೀಡಿ.

IV. ಹತ್ತು ಅಂಕದ ಪ್ರಶ್ನೆಗಳು

೧. ಸಮಾಜದ ವ್ಯಾಖ್ಯೆ ನೀಡಿ, ಅದರ ಲಕ್ಷಣಗಳನ್ನು ವಿವರಿಸಿ.

೨. ಸಮುದಾಯವೆಂದರೇನು? ಅದರ ಮೂಲಾಂಶಗಳ ಕುರಿತು ವಿವರಣೆ ನೀಡಿ.

೩. ಸಂಸ್ಥೆಯ ವ್ಯಾಖ್ಯೆ ನೀಡಿ, ಅದರ ಲಕ್ಷಣಗಳನ್ನು ತಿಳಿಸಿ.
೪. ಸ್ಪರ್ಧೆಯ ಪ್ರಕಾರಗಳನ್ನು ವಿವರಿಸಿ.
೫. ಜಾರ್ಜ್ ಸಿಮ್ಮೆಲ್ ನೀಡಿದ ಸಂಘರ್ಷದ ವಿಧಗಳನ್ನು ವಿವರಿಸಿ.
೬. ಹೊಂದಾಣಿಕೆಯ ವ್ಯಾಖ್ಯೆ ನೀಡಿ, ಅದರ ಮಹತ್ವವನ್ನು ತಿಳಿಸಿ.

V. ಅಭ್ಯಾಸ/ಚಟುವಟಿಕೆಗಳು

೧. ವ್ಯಕ್ತಿಗಳ ಜೀವನದಲ್ಲಿ ಸಹಕಾರದ ಪಾತ್ರವೇನು? ಚರ್ಚಿಸಿ.
೨. ಸಮಾಜವಿಲ್ಲದೆ ನಮ್ಮ ಬದುಕು ಸಾಧ್ಯವೇ? ಚರ್ಚಿಸಿ.
೩. ಗ್ರಾಮೀಣ ಸಮುದಾಯದ ಜನರ ಸಮಸ್ಯೆಗಳ ಪಟ್ಟಿ ಮಾಡಿ, ಅವುಗಳ ಪರಿಹಾರಕ್ಕೆ ಸಲಹೆಗಳನ್ನು ಸೂಚಿಸಿ.
೪. ನಿಮ್ಮ ಕಾಲೇಜನ್ನು ಒಂದು ಸಂಸ್ಥೆಯೆಂದು ಪರಿಗಣಿಸಿ ಅದರ ಕಾರ್ಯಗಳನ್ನು ತಿಳಿಸಿ.

ಅಧ್ಯಾಯ ೩

ಸಾಮಾಜಿಕ ಸಮೂಹಗಳು

ಪೀಠಿಕೆ

ಮಾನವನು ದೀರ್ಘಕಾಲ ಒಂಟಿಯಾಗಿ ಬಾಳಲಾರ. ಒಂಟಿ ಜೀವನ ಅವನಿಗೆ ಬೇಸರವನ್ನುಂಟು ಮಾಡುವುದು. ಏಕಾಂಗಿತನ ಅವನಿಗೆ ಶಿಕ್ಷೆಯಾಗಿ ಪರಿಣಮಿಸುವುದು. ಮಾನವ ಸ್ವಭಾವತಃ ಸಮಾಜ ಜೀವಿ, ಸಮೂಹ ಜೀವಿ. ಅವನಿಗೆ ಇನ್ನಿತರ ವ್ಯಕ್ತಿಗಳ ಒಡನಾಟ, ಸಹಾಯ, ಸಹಕಾರದ ಅಗತ್ಯವಿದೆ. ಅವನ ಬೇಕು-ಬೇಡಿಕೆಗಳು ಅವನನ್ನು ಸಮೂಹದಲ್ಲಿ ಬಾಳಿ ಬದುಕಲು ಪ್ರೇರೇಪಿಸುತ್ತವೆ. ಸಮೂಹಗಳಲ್ಲಿ ಇನ್ನಿತರರ ಜೊತೆ ಕೂಡಿ ಬಾಳುವುದರಿಂದ ಸಂತೋಷ, ಸುಖ, ನೆಮ್ಮದಿ ದೊರಕುವವು; ದುಃಖ-ದುಮ್ಮಾನಗಳು ದೂರವಾಗುವವು. ತತ್ಕಾರಣ, ಸಾಮಾನ್ಯ ಆಸಕ್ತಿ ಮತ್ತು ಅಭಿರುಚಿಯನ್ನುಳ್ಳ ವ್ಯಕ್ತಿಗಳು ಒಂದು ಗೂಡಿ ಸಮೂಹಗಳನ್ನು ರಚಿಸುವರು.

ಮಾನವನ ಜೀವನವೆಂದರೆ ಸಮೂಹ ಜೀವನವೆಂದು ಹೇಳಬಹುದು. ವ್ಯಕ್ತಿಯು ಹುಟ್ಟಿನಿಂದ ಮರಣದ ಕ್ಷಣದವರೆಗೆ ಸಮೂಹಗಳಲ್ಲಿಯೇ ಜೀವನ ಸಾಗಿಸುವನು. ಅಂದರೆ ಅವನು ಸಮೂಹದಲ್ಲಿ ಜನಿಸಿ, ಸಮೂಹಗಳಲ್ಲಿ ಬೆಳೆದು, ದುಡಿದು ಸಮೂಹದಲ್ಲಿಯೇ ಅಂತ್ಯ ಕಾಣುವನು. ದಿನಂಪ್ರತಿಯ ಜೀವನದಲ್ಲಿ ವ್ಯಕ್ತಿಯು ಅನೇಕ ಸಮೂಹಗಳಲ್ಲಿ ಪಾಲ್ಗೊಳ್ಳುವನು. ಪ್ರತಿಯೊಬ್ಬನೂ ಒಂದಿಲ್ಲೊಂದು ಕುಟುಂಬದ ಸದಸ್ಯನಾಗಿರುವನು. ಅವನಿಗೆ ಕೆಲವರಾದರೂ ಸ್ನೇಹಿತರ ಬಳಗವಿರುವುದು. ಅವನು ವಾಸಿಸಿರುವ ಮನೆಯ ಅಕ್ಕಪಕ್ಕ ನೆರೆಹೊರೆಯವರಿರುವರು. ಅವನು ಒಂದಿಲ್ಲೊಂದು ಗ್ರಾಮ ಅಥವಾ ಪಟ್ಟಣ ಮತ್ತು ದೇಶಕ್ಕೆ ಸಂಬಂಧಪಟ್ಟಿರುವನು. ಕುಟುಂಬ, ಸ್ನೇಹಿತರ ಬಳಗ, ನೆರೆಹೊರೆ, ಗ್ರಾಮ, ದೇಶ ಎಲ್ಲವೂ ವಿವಿಧ ಸಮೂಹಗಳಾಗಿವೆ. ಅಂದರೆ ವ್ಯಕ್ತಿಯು ಅನೇಕ ಸಮೂಹಗಳಿಗೆ ಸಂಬಂಧಪಟ್ಟವನಾಗಿರುತ್ತಾನೆ.

೩.೧. ಸಾಮಾಜಿಕ ಸಮೂಹಗಳ ಅರ್ಥ ಮತ್ತು ವ್ಯಾಖ್ಯೆಗಳು

ವಿವಿಧ ಘಟಕಗಳು ಒಂದರ ಹತ್ತಿರ ಇನ್ನೊಂದು ತಗುಲಿಕೊಂಡಿದ್ದರೆ ಅವುಗಳ ಸಮುಚ್ಚಯಕ್ಕೆ ಸಮೂಹವೆನ್ನುವರು. ಬಸ್‌ಸ್ಟ್ಯಾಂಡಿನಲ್ಲಿ ನಿಂತಿರುವ ಬಸ್ಸುಗಳು, ದಟ್ಟಡವಿಯಲ್ಲಿರುವ ಮರಗಳು, ಗ್ರಾಮಗಳಲ್ಲಿ ಕಾಣಬರುವ ಒತ್ತೊತ್ತಾಗಿರುವ ಮನೆಗಳು, ಬಂದರುಗಳಲ್ಲಿ ನಿಂತ ಹಡಗುಗಳು ಸಮೂಹಗಳೆಂದೆನಿಸುತ್ತವೆ. ಅದೇ ಸಾಮಾನ್ಯ ಅರ್ಥವನ್ನು

ನಾವು ಸಾಮಾಜಿಕ ಸಮೂಹಕ್ಕೆ ಬಳಸಿದರೆ ಜನರ ಒಟ್ಟುಗೂಡುವಿಕೆ ಸಮೂಹವೆಂದೆನಿಸುತ್ತದೆ. ಇಂತಹ ಬಳಕೆ ಸರಿಯಾದುದಲ್ಲ. ಏಕೆಂದರೆ ಜನರು ಒಂದೆಡೆ ಸೇರಿದ ತಕ್ಷಣ ಸಮೂಹ ರಚನೆಗೊಳ್ಳಲಾರದು. ಸೇರಿದ ಜನರ ಮಧ್ಯೆ ಅಂತಃಕ್ರಿಯೆಗಳು ಜರುಗಿ ತನ್ಮೂಲಕ ಸಾಮಾಜಿಕ ಸಂಬಂಧಗಳು ಒಡಮೂಡಿದಾಗ ಸಾಮಾಜಿಕ ಸಮೂಹವು ಅಸ್ತಿತ್ವಕ್ಕೆ ಬರುತ್ತದೆ. ನಿರ್ದಿಷ್ಟ ನಿಯಮಗಳು ಸಾಮಾಜಿಕ ಸಂಬಂಧಗಳನ್ನು ನಿಯಂತ್ರಣದಲ್ಲಿಡುತ್ತವೆ.

"ಪರಸ್ಪರ ಸಾಮಾಜಿಕ ಸಂಬಂಧಗಳಿರುವ, ಒಡನಾಟ ಹೊಂದಿರುವ ಮಾನವರ ಯಾವುದೇ ಒಟ್ಟುಗೂಡುವಿಕೆಯು ಸಾಮಾಜಿಕ ಸಮೂಹವೆಂದೆನಿಸುವುದು" ಎಂಬುದಾಗಿ **ಮೆಕೈವರ್** ಸಾಮಾಜಿಕ ಸಮೂಹವನ್ನು ವ್ಯಾಖ್ಯಾನಿಸಿದ್ದಾರೆ.

ಆಗಬರ್ನ್ ಮತ್ತು **ನಿಮ್‌ಕಾಫ್‌ರ** ಪ್ರಕಾರ "ಇಬ್ಬರು ಇಲ್ಲವೆ ಹೆಚ್ಚು ವ್ಯಕ್ತಿಗಳು ಒಟ್ಟುಗೂಡಿ ಒಬ್ಬರೊಬ್ಬರ ಮೇಲೆ ಪ್ರಭಾವ ಬೀರಿದಾಗ, ಅವರು ಸಾಮಾಜಿಕ ಸಮೂಹವನ್ನು ಸ್ಥಾಪಿಸಿದರೆಂದು ಹೇಳಬಹುದು".

"ಸಾಮಾಜಿಕ ಸಮೂಹವು ವ್ಯಕ್ತಿಗಳ ಒಟ್ಟುಗೂಡುವಿಕೆಯಾಗಿದ್ದು, ಅದರಲ್ಲಿದ್ದ ವ್ಯಕ್ತಿಗಳ ಮಧ್ಯ ನಿಶ್ಚಿತ ಸ್ವರೂಪದ ಸಂಬಂಧಗಳು ಅಸ್ತಿತ್ವದಲ್ಲಿದ್ದು, ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಗುಂಪು ಹಾಗೂ ಅದರ ಸಂಕೇತಗಳ ಕುರಿತು ಅರಿವು ಇರುವುದು" ಎಂಬುದಾಗಿ **ಟಿ.ಬಿ. ಬಾಟ್‌ಮೋರ್** ಸಾಮಾಜಿಕ ಸಮೂಹವನ್ನು ವ್ಯಾಖ್ಯಾನಿಸಿದ್ದಾರೆ.

"ಅಂತಃಕ್ರಿಯೆಯ ಹಾಗೂ ಸದಸ್ಯತ್ವದ ಪ್ರಜ್ಞೆಯನ್ನು ಹೊಂದಿದ ಜನರ ಸಂಕಲನವೇ (ಮೊತ್ತ) ಸಮೂಹವೆಂದೆನಿಸುವುದು" ಎಂಬುದಾಗಿ **ಹರ್ಟನ್** ಮತ್ತು **ಹಂಟ್** ಅಭಿಪ್ರಾಯಪಟ್ಟಿದ್ದಾರೆ.

"ಸಾಮಾನ್ಯ ಉದ್ದೇಶಗಳೆಡೆಗೆ ಗಮನವಿದ್ದು, ಒಬ್ಬರನ್ನೊಬ್ಬರು ಪ್ರಚೋದಿಸಿ, ಸಾಮಾನ್ಯವಾದ ಕರ್ತವ್ಯ ನಿಷ್ಠೆಯನ್ನು ಹೊಂದಿದ್ದು, ಒಂದೇ ತೆರನಾದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಇಬ್ಬರು ಇಲ್ಲವೆ ಹೆಚ್ಚಿನ ಸಂಖ್ಯೆಯ ಜನರ ಗುಂಪಿಗೆ ಸಾಮಾಜಿಕ ಸಮೂಹವೆಂದು ಹೇಳಬಹುದು" - **ಬೋಗಾರ್ಡಸ್.**

ಮೇಲಿನ ವ್ಯಾಖ್ಯೆಗಳಿಂದ ತಿಳಿದು ಬರುವುದೇನೆಂದರೆ ಸಾಮಾಜಿಕ ಸಮೂಹವನ್ನು ರಚಿಸಲು ಕನಿಷ್ಟ ಪಕ್ಷ ಇಬ್ಬರು ವ್ಯಕ್ತಿಗಳಾದರೂ ಬೇಕು. ಇಬ್ಬರು ಅಥವಾ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳು ಪರಸ್ಪರ ಅರ್ಥಪೂರ್ಣ ಅಂತಃಕ್ರಿಯೆಗಳನ್ನು ಬೆಳೆಸಿ, ಸಾಮಾನ್ಯವಾದ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಒಟ್ಟುಗೂಡಿದಾಗ ಸಾಮಾಜಿಕ ಸಮೂಹ ರೂಪಗೊಳ್ಳುತ್ತದೆ. ಇಲ್ಲಿ ವ್ಯಕ್ತಿಗಳ ದೈಹಿಕ ಸಾಮೀಪ್ಯ ಮುಖ್ಯವಲ್ಲ. ಅವರು ಜಂಟಿ ಸದಸ್ಯತ್ವದ ಬಗ್ಗೆ, ಜಂಟಿ ಅಂತಃಕ್ರಿಯೆಗಳ ಬಗ್ಗೆ ಅರಿವು ಹೊಂದಿರುವುದು ಅತೀ ಅಗತ್ಯ. ಆಗ ಮಾತ್ರ ಸಮೂಹವು ಸಂಘಟಿತವಾಗಿರಬಲ್ಲುದು. ಒಟ್ಟಿನಲ್ಲಿ, ಒಂದು ನಿಶ್ಚಿತ ಗುರಿ ಅಥವಾ ಗುರಿಗಳನ್ನು ಸಾಧಿಸಲು ವ್ಯಕ್ತಿಗಳು ಜೊತೆ ಸೇರಿ ಪರಸ್ಪರ ಅಂತಃಕ್ರಿಯೆಗಳನ್ನು ಬೆಳೆಸಿದಾಗ ಸಾಮಾಜಿಕ ಸಮೂಹ ಮೈದಳೆಯುತ್ತದೆ.

ಸಾಮಾಜಿಕ ಸಮೂಹಗಳ ಲಕ್ಷಣಗಳು

ಸಾಮಾಜಿಕ ಸಮೂಹಗಳ ಪ್ರಮುಖ ಲಕ್ಷಣಗಳು ಇಂತಿವೆ.

೧. ಅನ್ಯೋನ್ಯ ಸಂಬಂಧಗಳು

ಸಮೂಹದ ಸದಸ್ಯರಲ್ಲಿ ಪರಸ್ಪರ ಸಂಬಂಧಗಳು ಕಾಣಬರುತ್ತವೆ. ಕೇವಲ ಜನರು ಒಂದೆಡೆ ಸೇರಿದ ತಕ್ಷಣ ಸಮೂಹ ರಚನೆಗೊಳ್ಳುವುದಿಲ್ಲ. ಅವರಲ್ಲಿ ಆಂತರಿಕ ಸಂಬಂಧಗಳು ಬೆಳೆದು ಬಂದಾಗ ಸಮೂಹಗಳು ರಚನೆಗೊಳ್ಳುತ್ತವೆ. ಅನ್ಯೋನ್ಯ ಸಂಬಂಧಗಳು ಸಾಮಾಜಿಕ ಸಮೂಹಗಳ ಅಡಿಗಲ್ಲುಗಳಾಗಿವೆ.

೨. ಸಾಮಾನ್ಯ ಉದ್ದೇಶ

ಸಾಮಾನ್ಯ ಆಸಕ್ತಿ, ಅಭಿರುಚಿ ಮತ್ತು ಗುರಿಗಳನ್ನು ಹೊಂದಿದಾಗ ಮಾತ್ರ ವ್ಯಕ್ತಿಗಳು ಜೊತೆಗೂಡಿ ಸಮೂಹ ರಚಿಸುವರು. ತಮ್ಮ ಸಾಮಾನ್ಯ ಗುರಿಗಳನ್ನು ಸಾಧಿಸಿಕೊಳ್ಳಲೋಸುಗ ವ್ಯಕ್ತಿಗಳು ಒಟ್ಟುಗೂಡುತ್ತಾರೆ. ಜನರ ಸಾಮಾನ್ಯ ಬೇಡಿಕೆಗಳು, ಆಸೆ-ಆಕಾಂಕ್ಷೆಗಳು ಅವರನ್ನು ಜೊತೆ ಸೇರಿಸುತ್ತವೆ. ವಿಭಿನ್ನ ಗುರಿಗಳನ್ನು ಹೊಂದಿದ ವ್ಯಕ್ತಿಗಳು ಒಟ್ಟು ಗೂಡಿ ಸಮೂಹವನ್ನು ರಚಿಸಲಾರರು.

೩. ನಾವು-ನನ್ನವರೆಂಬ ಭಾವನೆಗಳು

ಸಾಮಾನ್ಯ ಆಸಕ್ತಿ, ಅಭಿರುಚಿ ಮತ್ತು ಗುರಿಗಳನ್ನು ಹೊಂದಿದ ಜನರು ಒಂದುಗೂಡಿ ಸಮೂಹ ರಚಿಸುವರೆಂದು ಈಗಾಗಲೆ ತಿಳಿದಿದ್ದೇವೆ. ಸಾಮಾನ್ಯ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ವ್ಯಕ್ತಿಗಳು ಒಟ್ಟಿಗೆ ಜೊತೆ ಸೇರಿ ಸಾಮಾನ್ಯ ಚಟುವಟಿಕೆಗಳಲ್ಲಿ ತೊಡಗಿದಾಗ ಅವರಲ್ಲಿ ನಾವೆಲ್ಲ ಒಂದು ಎಂಬ ಭಾವನೆ ಮೂಡಿಬರುತ್ತದೆ. ಅವರಲ್ಲಿ ಸಾಂಘಿಕ ಭಾವನೆ ಬೆಳೆದು ಬರುತ್ತದೆ. ನಾವೆಲ್ಲ ಒಂದು ಎಂಬ ಭಾವನೆ ರೂಪ ತಳೆಯುವ ಕಾರಣ ಸಮೂಹದ ಸದಸ್ಯರಲ್ಲಿ ಹೆಚ್ಚಿನ ಸಹಕಾರ ಕಂಡು ಬರುವುದು.

೪. ಏಕತೆಯ ಮನೋಭಾವ

ಸದಸ್ಯರಲ್ಲಿರುವ ನಾವು-ನನ್ನವರು ಎಂಬ ಭಾವನೆಯಿಂದಾಗಿ ಏಕತೆಯ ಮನೋಭಾವನೆಯು ಅವರಲ್ಲಿ ಚಿಗುರಿಕೊಳ್ಳುವುದು. ಒಬ್ಬ ಸದಸ್ಯನ ನೋವು-ನಲಿವುಗಳಿಗೆ ಇನ್ನಿತರ ಸದಸ್ಯರು ಸ್ಪಂದಿಸುವರು. ಏಕತೆಯ ಮನೋಭಾವನೆಯಿಂದಾಗಿ ಸದಸ್ಯರಲ್ಲಿ ಅನುಕಂಪದ ಪರಿಜ್ಞಾನ ಬೆಳೆದು ಬರುವುದು.

೫. ಒಂದೇ ತೆರನಾದ ವರ್ತನೆ

ಸಾಮಾನ್ಯವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ದಿಸೆಯಲ್ಲಿ ಸದಸ್ಯರಿಂದ ಒಂದೇ ತೆರನಾದ ವರ್ತನೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಉದಾಹರಣೆಗೆ ಪಾಠದ ಕೋಣೆಯಲ್ಲಿ ವಿದ್ಯಾರ್ಥಿಗಳೆಲ್ಲರೂ ಒಂದೇ ತೆರನಾದ ವರ್ತನೆಯನ್ನು ತೋರಿಸುವರು, ಶಿಸ್ತು ಬದ್ಧವಾಗಿ

ಕುಳಿತು ಪಾಠಗಳನ್ನು ಗಮನವಿಟ್ಟು ಕೇಳುವರು. ಏಕೆಂದರೆ ಅವರೆಲ್ಲರ ಉದ್ದೇಶ ಉತ್ತಮ ರೀತಿಯ ಶಿಕ್ಷಣವನ್ನು ಪಡೆದು ಭವಿಷ್ಯವನ್ನು ರೂಪಿಸಿಕೊಳ್ಳುವುದಾಗಿದೆ.

೬. ಸಂಘಟನೆ

ಸಮೂಹದ ಸದಸ್ಯರು ಸಮೂಹದ ಕಟ್ಟುಪಾಡುಗಳಿಗೆ ಒಳಪಡುವರು. ಅವರಿಗೆ ಮನಬಂದಂತೆ ವರ್ತಿಸಲು ಸಾಧ್ಯವಾಗದು. ತತ್ಕಾರಣ ಸಾಮಾಜಿಕ ಸಮೂಹವು ಸಂಘಟನೆಯ ಲಕ್ಷಣವನ್ನು ಹೊಂದಿರುವುದು.

೭. ಸಮೂಹ ನಿಯಮಗಳು

ನಿಯಮಗಳನ್ನು ಹೊಂದದ ಸಮೂಹವಿಲ್ಲ. ಕುಟುಂಬ, ಶಾಲೆ, ರಾಜಕೀಯ ಪಕ್ಷ, ಆಟಗಾರರ ಬಳಗ ಇತ್ಯಾದಿ ಯಾವುದೇ ಸಮೂಹವನ್ನು ತೆಗೆದುಕೊಂಡರೂ ಒಂದಿಲ್ಲೊಂದು ಬಗೆಯ ನಿಯಮಗಳಿರುವುದನ್ನು ಕಾಣುತ್ತೇವೆ. ಸಮೂಹದ ಸದಸ್ಯರು ಅಂತಹ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುವುದು. ಪಾಲಿಸದಿದ್ದ ಪಕ್ಷದಲ್ಲಿ ಅಂತಹ ಸದಸ್ಯರನ್ನು ಕೆಲವೊಂದು ಸಲ ಸಮೂಹದಿಂದ ದೂರವಿರಿಸಲಾಗುವುದು, ಹೊರಹಾಕಲಾಗುವುದು. ಅದಕ್ಕಿಂತಲೂ ಹೆಚ್ಚಾಗಿ ನಿಯಮಗಳ ಉಲ್ಲಂಘನೆ ಮಾಡಿದ ಸದಸ್ಯನು ಉಳಿದ ಸದಸ್ಯರ ಟೀಕೆಗೆ, ಅಪಹಾಸ್ಯಕ್ಕಾಗಿ ಗುರಿಯಾಗುವನು.

೮. ಸಾಮಾಜಿಕ ಸಮೂಹಗಳು ಬದಲಾವಣೆಗೊಳಪಡುತ್ತವೆ

ಕಾಲಕ್ಕೆ ಅನುಗುಣವಾಗಿ ಸಾಮಾಜಿಕ ಸಮೂಹಗಳು ತಮ್ಮ ರಚನೆ, ಸ್ವರೂಪ ಮತ್ತು ಕಾರ್ಯಗಳನ್ನು ಬದಲಿಸುತ್ತವೆ. ಸಮೂಹಗಳಲ್ಲಿ ಬದಲಾವಣೆ ಅನಿವಾರ್ಯ. ಕೆಲವು ಸಲ ತೀವ್ರತರವಾದ ಬದಲಾವಣೆಗಳಾದರೆ ಇನ್ನು ಹಲವು ಸಲ ಸಮೂಹಗಳು ನಿಧಾನಗತಿಯ ಬದಲಾವಣೆಗೆ ಒಳಪಡುವವು.

ಸಾಮಾಜಿಕ ಸಮೂಹಗಳ ವಿಧಗಳು ಮತ್ತು ಮಹತ್ವ

ಅನೇಕ ಸಮಾಜಶಾಸ್ತ್ರಜ್ಞರು ತಮ್ಮದೇ ಆದ ಬಗೆಯಲ್ಲಿ ಸಾಮಾಜಿಕ ಸಮೂಹಗಳನ್ನು ವಿವಿಧ ವಿಧಗಳಾಗಿ ಗುರುತಿಸಲು ಪ್ರಯತ್ನಿಸಿದ್ದಾರೆ. ಆದಾಗ್ಯೂ ಇದುವರೆಗೆ ಎಲ್ಲ ಸಮಾಜಶಾಸ್ತ್ರಜ್ಞರು ಒಪ್ಪಬಲ್ಲ ವರ್ಗೀಕರಣ ನೀಡುವುದು ಯಾರಿಗೂ ಸಾಧ್ಯವಾಗಿಲ್ಲ. ತತ್ಕಾರಣ ಸಮೂಹಗಳನ್ನು ವರ್ಗೀಕರಿಸುವ ಪ್ರಯತ್ನಗಳು ಇನ್ನೂ ಆಗುತ್ತಿವೆ. ಇದುವರೆಗೂ ಆಗಿರುವ ಮುಖ್ಯ ವರ್ಗೀಕರಣಗಳನ್ನು ಮತ್ತು ಸಮೂಹದ ವಿಧಗಳನ್ನು ಇಲ್ಲಿ ನೀಡಲಾಗಿದೆ. ಅಮೆರಿಕೆಯ ಸಮಾಜವಿಜ್ಞಾನಿ **ಚಾರ್ಲ್ಸ್ ಹಟನ್ ಕೂಲೆ** ಸಾಮಾಜಿಕ ಸಮೂಹಗಳನ್ನು ಪ್ರಾಥಮಿಕ ಸಮೂಹ ಮತ್ತು ಮಾಧ್ಯಮಿಕ ಸಮೂಹಗಳೆಂದು ಎರಡು ವಿಧಗಳಾಗಿ ವಿಂಗಡಿಸಿದ್ದಾನೆ. ಮುಖಾಮುಖಿ ಸಂಪರ್ಕ ಮತ್ತು ಆತ್ಮೀಯ ಸಂಬಂಧಗಳನ್ನೊಳಗೊಂಡ ಚಿಕ್ಕ ಗಾತ್ರದ ಸಮೂಹಗಳು ಪ್ರಾಥಮಿಕ ಸಮೂಹಗಳೆಂದೆನಿಸಿದರೆ; ಅವೈಯಕ್ತಿಕ-ಅಪ್ರತ್ಯಕ್ಷ ಮತ್ತು ಮಾಧ್ಯಮಿಕ ಸಂಬಂಧಗಳನ್ನೊಳಗೊಂಡ ದೊಡ್ಡ ಗಾತ್ರದ ಸಮೂಹಗಳು ಮಾಧ್ಯಮಿಕ

ಸಮೂಹಗಳಾಗಿವೆ. ಕುಟುಂಬ, ನೆರೆಹೊರೆ, ಶಾಲೆ, ಗೆಳೆಯರ ಬಳಗ ಇತ್ಯಾದಿ ಸಮೂಹಗಳು ಪ್ರಾಥಮಿಕ ಸಮೂಹಗಳಿಗೆ ಉದಾಹರಣೆಗಳಾಗಿವೆ. ಟ್ರೇಡ್ ಯೂನಿಯನ್, ರಾಜ್ಯ, ರಾಜಕೀಯ ಪಕ್ಷ ಮುಂತಾದವುಗಳು ಮಾಧ್ಯಮಿಕ ಸಮೂಹಗಳಾಗಿವೆ.

ಸಮೂಹಗಳು

- **ಕೂಲೆಯವರ ವರ್ಗೀಕರಣ**
  - ಪ್ರಾಥಮಿಕ ಸಮೂಹಗಳು
  - ಮಾಧ್ಯಮಿಕ ಸಮೂಹಗಳು
- **ಸುಮ್ನರನ ವರ್ಗೀಕರಣ**
  - ಒಳ ಸಮೂಹಗಳು
  - ಹೊರ ಸಮೂಹಗಳು
- **ವಾರ್ಡನ ವರ್ಗೀಕರಣ**
  - ಐಚ್ಛಿಕ ಸಮೂಹಗಳು
  - ಅನೈಚ್ಛಿಕ ಸಮೂಹಗಳು
- **ಮಿಲ್ಲರನ ವರ್ಗೀಕರಣ**
  - ಲಂಬ ಸಮೂಹಗಳು
  - ಸಮತಟ್ಟಾದ ಸಮೂಹಗಳು
- **ಗಿಡ್ಡಿನ್ಸ್ ವರ್ಗೀಕರಣ**
  - ಜನನ ಸಂಬಂಧಿ ಸಮೂಹಗಳು
  - ನೆರೆದ ಸಮೂಹಗಳು
- **ಡ್ವಿಟ್ ಸ್ಯಾಂಡರ್ಸನ್ ವರ್ಗೀಕರಣ**
  - ಐಚ್ಛಿಕ ಸಮೂಹಗಳು
  - ಅನೈಚ್ಛಿಕ ಸಮೂಹಗಳು
  - ಪ್ರತಿನಿಧಿ ಸಮೂಹಗಳು
- **ಜಾರ್ಜ್ ಹಸೆನ್ ವರ್ಗೀಕರಣ**
  - ಅಸಾಮಾಜಿಕ ಸಮೂಹಗಳು
  - ಸಾಮಾಜಿಕದಂತೆ ತೋರುವ ಸಮೂಹಗಳು
  - ಸಮಾಜ ವಿರೋಧಿ ಸಮೂಹಗಳು
  - ಸಮಾಜ ಪರ ಸಮೂಹಗಳು

ವಿಲಿಯಂ ಗ್ರಹಾಂ ಸುಮ್ನರನು ಸಾಮಾಜಿಕ ಸಮೂಹಗಳನ್ನು ಎರಡು ವಿಧಗಳಾಗಿ ವಿಂಗಡಿಸಿದ್ದಾನೆ. ಅವುಗಳೆಂದರೆ ಒಳಸಮೂಹಗಳು ಮತ್ತು ಹೊರಸಮೂಹಗಳು. ವ್ಯಕ್ತಿಯು ಸದಸ್ಯತ್ವವನ್ನು ಹೊಂದಿದ ಸಮೂಹಗಳು ಒಳಸಮೂಹಗಳು. ಓರ್ವ ವ್ಯಕ್ತಿಯು ಸಮಾಜದಲ್ಲಿ ಕಾಣಬರುವ ಎಲ್ಲ ಸಮೂಹಗಳಿಗೆ ಸೇರಿರಲಾರ, ಸದಸ್ಯತ್ವ ಪಡೆಯಲಾರ. ಕೆಲವು ಸಮೂಹಗಳಿಗೆ ಮಾತ್ರ ಅವನು ಸಂಬಂಧಪಟ್ಟವನಾಗಿರುತ್ತಾನೆ. ಅಂತಹ ಸಮೂಹಗಳು ಒಳಸಮೂಹಗಳೆಂದೆನಿಸುವುವು. ಅವನ ಕುಟುಂಬ, ನೆರೆಹೊರೆ, ಕಾಲೇಜು, ದೇಶ, ಧರ್ಮ ಮುಂತಾದವು ಅವನಿಗೆ ಒಳಸಮೂಹಗಳು. ಅವನಿಗೆ ಸಂಬಂಧಪಡದ, ಅವನು ಸದಸ್ಯತ್ವವನ್ನು ಹೊಂದಿರದ ಇನ್ನಿತರ ಕುಟುಂಬಗಳು, ಕಾಲೇಜುಗಳು, ರಾಜಕೀಯ ಪಕ್ಷ ಮುಂತಾದವು ಅವನ ಹೊರಸಮೂಹಗಳೆಂದೆನಿಸುವುವು.

ಎಲ್.ಎಫ್. ವಾರ್ಡ್ ಸಾಮಾಜಿಕ ಸಮೂಹಗಳನ್ನು ಐಚ್ಛಿಕ ಸಮೂಹಗಳು ಮತ್ತು ಅನೈಚ್ಛಿಕ ಸಮೂಹಗಳೆಂಬುದಾಗಿ ವರ್ಗೀಕರಿಸಿದ್ದಾನೆ. ಸಮೂಹದ ಸದಸ್ಯತ್ವ ಕಡ್ಡಾಯವಾಗಿರದ ಸಮೂಹಗಳು ಐಚ್ಛಿಕ ಸಮೂಹಗಳು. ಅವುಗಳ ಸದಸ್ಯತ್ವ ಪಡೆಯುವುದು-ತೊರೆಯುವುದು ವ್ಯಕ್ತಿಗಳಿಗೆ ಬಿಟ್ಟುಕೊಟ್ಟ ವಿಚಾರವಾಗಿರುವುದು.

ಸಮೂಹದ ಸದಸ್ಯತ್ವ ಕಡ್ಡಾಯವಾಗಿದ್ದು, ವ್ಯಕ್ತಿಯ ಆಯ್ಕೆಗೆ ಅವಕಾಶವಿಲ್ಲದಿದ್ದರೆ ಅಂತಹ ಸಮೂಹ ಅನೈಚ್ಛಿಕ ಸಮೂಹ ಎಂದು ತಿಳಿಯಲ್ಪಡುವುದು. ಕಾಲೇಜು, ಕ್ಲಬ್ಬು,

ಗೆಳೆಯರ ಬಳಗ ಇತ್ಯಾದಿ ಸಮೂಹಗಳು ಐಚ್ಛಿಕ ಸಮೂಹಗಳಾಗಿವೆ. ಕುಟುಂಬ, ರಾಜ್ಯ ಮುಂತಾದ ಸಮೂಹಗಳು ಅನೈಚ್ಛಿಕ ಸಮೂಹಗಳು.

ಮಿಲ್ಲರನು ಸಮೂಹಗಳನ್ನು ಲಂಬಸಮೂಹಗಳು ಮತ್ತು ಸಮತಟ್ಟಾದ ಸಮೂಹಗಳೆಂಬುದಾಗಿ ವರ್ಗೀಕರಿಸಿದ್ದಾನೆ. ದೇಶ, ರಾಜಕೀಯ ಪಕ್ಷ ಮುಂತಾದ ದೊಡ್ಡ ಸಮೂಹಗಳು ಸಮತಟ್ಟಾದ ಸಮೂಹಗಳಾಗಿವೆ. ಸಮತಟ್ಟಾದ ಸಮೂಹವು ಗಾತ್ರದಲ್ಲಿ ದೊಡ್ಡದಾಗಿದ್ದು ಅನೇಕ ಉಪಸಮೂಹಗಳನ್ನು ಒಳಗೊಂಡಿರುವವು. ಚಿಕ್ಕ ವಿಭಾಗಗಳು ಲಂಬ ಸಮೂಹಗಳಾಗಿವೆ. ಲಂಬ ಸಮೂಹವು ಸಮತಟ್ಟಾದ ಸಮೂಹದ ಭಾಗವಾಗಿರುತ್ತದೆ. ಆರ್ಥಿಕ ವರ್ಗಗಳು ಲಂಬ ಸಮೂಹಗಳಾಗಿವೆ.

ಎಫ್.ಎಚ್. ಗಿಡ್ಡಿನ್ಸ್ ಸಾಮಾಜಿಕ ಸಮೂಹಗಳನ್ನು ಎರಡು ವಿಧಗಳಾಗಿ ಗುರುತಿಸಿದ್ದಾನೆ. ೧. ಜನನ ಸಂಬಂಧಿ ಸಮೂಹಗಳು ೨. ನೆರೆದ ಸಮೂಹಗಳು. ವ್ಯಕ್ತಿಯು ಜನಿಸಿದ ಕುಟುಂಬವು ಜನನ ಸಂಬಂಧಿ ಸಮೂಹವೆಂದೆನಿಸುವುದು. ಇಲ್ಲಿ ವ್ಯಕ್ತಿಯು ಹುಟ್ಟಿನಿಂದಾಗಿ ಆ ಒಂದು ಕುಟುಂಬದ ಸದಸ್ಯತ್ವ ಪಡೆಯುವನು. ಅವನಿಗೆ ತನ್ನ ಇಚ್ಛೆಯ ಮೇರೆಗೆ ಯಾವುದಾದರೊಂದು ಕುಟುಂಬದ ಸದಸ್ಯತ್ವವನ್ನು ಪಡೆದುಕೊಳ್ಳಲು ಅವಕಾಶವಿಲ್ಲ. ಆದರೆ ನೆರೆದ ಸಮೂಹದ ಸದಸ್ಯತ್ವ ಕಡ್ಡಾಯವಾಗಿಲ್ಲ. ಇದು ಹುಟ್ಟಿನ ಮೂಲಕ ನಿರ್ಧಾರವಾಗುವುದೂ ಇಲ್ಲ. ವ್ಯಕ್ತಿಯು ತನ್ನ ಇಚ್ಛಾನುಸಾರ ಸದಸ್ಯತ್ವ ಪಡೆಯಬಹುದು ಇಲ್ಲವೆ ಈಗಾಗಲೆ ಹೊಂದಿದ ಸಮೂಹದ ಸದಸ್ಯತ್ವವನ್ನು ಹಿಂತೆಗೆದುಕೊಳ್ಳಬಹುದು. ಕುಟುಂಬವು ಜನನ ಸಂಬಂಧಿ ಸಮೂಹಕ್ಕೆ ಉದಾಹರಣೆಯಾದರೆ, ರಾಜಕೀಯ ಪಕ್ಷವು ನೆರೆದ ಸಮೂಹಕ್ಕೆ ಉದಾಹರಣೆಯಾಗಿದೆ.

ಡ್ವಿಟ್ ಸ್ಯಾಂಡರ್ಸನ್ ಸಮೂಹಗಳನ್ನು ಐಚ್ಛಿಕ, ಅನೈಚ್ಛಿಕ ಮತ್ತು ಪ್ರತಿನಿಧಿ ಸಮೂಹಗಳೆಂದು ಮೂರು ಬಗೆಗಳಾಗಿ ವರ್ಗೀಕರಿಸಿದ್ದಾನೆ.

ರಕ್ತಸಂಬಂಧಿ ಆಧಾರಿತ ಸಮೂಹಗಳು ಅನೈಚ್ಛಿಕ ಸಮೂಹಗಳಾಗಿವೆ. ಉದಾಹರಣೆಗೆ ಕುಟುಂಬ. ಇಂತಹ ಸಮೂಹಗಳ ಸದಸ್ಯತ್ವದ ಕಡ್ಡಾಯವಾಗಿರುವುದು. ವ್ಯಕ್ತಿಗೆ ಇಲ್ಲಿ ಆಯ್ಕೆಗೆ ಅವಕಾಶವಿಲ್ಲ. ತನ್ನ ಇಚ್ಛಾನುಸಾರವಾಗಿ ವ್ಯಕ್ತಿ ಸಮೂಹದ ಸದಸ್ಯತ್ವವನ್ನು ಪಡೆಯುವಂತಿದ್ದರೆ ಅದು ಐಚ್ಛಿಕ ಸಮೂಹವೆಂದೆನಿಸುವುದು. ಇಲ್ಲಿ ಸದಸ್ಯತ್ವ ಪಡೆಯುವುದು ಅಥವಾ ಪಡೆಯದಿರುವುದು ವ್ಯಕ್ತಿಯ ಸ್ವಇಚ್ಛೆಗೆ ಬಿಟ್ಟುಕೊಟ್ಟದಾಗಿರುತ್ತದೆ.

ವ್ಯಕ್ತಿಯು ಪ್ರಜಾಪ್ರತಿನಿಧಿಯಾಗಿ ಸದಸ್ಯತ್ವವನ್ನು ಪಡೆಯುವ ಸಮೂಹವು ಪ್ರತಿನಿಧಿ ಸಮೂಹವೆಂದೆನಿಸುವುದು. ಇಲ್ಲಿ ಜನರ ಪ್ರತಿನಿಧಿಗಳಿಗೆ ಸದಸ್ಯತ್ವ ಸೀಮಿತವಾಗಿರುವುದು. ಲೋಕಸಭೆ, ವಿಧಾನಸಭೆ ಇತ್ಯಾದಿಗಳು ಪ್ರಜಾಪ್ರತಿನಿಧಿ ಸಮೂಹದ ಉದಾಹರಣೆಗಳಾಗಿವೆ.

ಜಾರ್ಜ್ ಹಸೆನ್ ಸಮೂಹಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಿದ್ದಾನೆ. ೧. ಅಸಾಮಾಜಿಕ ಸಮೂಹಗಳು ೨. ಸಾಮಾಜಿಕದಂತೆ ತೋರುವ ಸಮೂಹಗಳು ೩. ಸಮಾಜ ವಿರೋಧಿ ಸಮೂಹಗಳು ೪. ಸಮಾಜ ಪರ ಸಮೂಹಗಳು.

ಅಸಾಮಾಜಿಕ ಸಮೂಹವು ತನಗೋಸ್ಕರ ತಾನಿದ್ದು ಉಳಿದ ಸಮೂಹಗಳೊಡನೆ ಅಷ್ಟೊಂದಾಗಿ ಬೆರೆಯುವುದಿಲ್ಲ. ಈ ಸಮೂಹವು ಇನ್ನಿತರ ಸಮೂಹಗಳಿಂದ ದೂರವಿದ್ದು ತನ್ನ ಹಿತದೆಡೆಗೆ ಮಾತ್ರ ಗಮನ ನೀಡುವುದು.

ಸಾಮಾಜಿಕದಂತೆ ತೋರುವ ಸಮೂಹವು ಸಮಾಜದ ಇನ್ನಿತರ ಸಮೂಹಗಳೊಡನೆ ಬೆರೆತು ವಿಶಾಲ ಸಮಾಜದಲ್ಲಿ ಪಾಲ್ಗೊಳ್ಳುವುದು. ಆದರೆ ಇದರ ಹಿಂದಿನ ಉದ್ದೇಶ ಮಾತ್ರ ಸ್ವಾರ್ಥಪರತೆಯಿಂದ ಕೂಡಿದೆ. ತನ್ನ ಸಮೂಹದ ಲಾಭಕ್ಕೋಸ್ಕರ ಉಳಿದ ಸಮೂಹಗಳೊಡನೆ ಕಲೆಯುವುದು. ಅನ್ಯ ಸಮೂಹಗಳ ಸಾಮಾಜಿಕ ಕಲ್ಯಾಣ ಇದಕ್ಕೆ ಮುಖ್ಯವಲ್ಲ.

ಸಮಾಜದ ಹಿತವನ್ನು ಅಲಕ್ಷಿಸಿ ಅದರ ವಿರೋಧಿ ಚಟುವಟಿಕೆಗಳಲ್ಲಿ ತೊಡಗುವ ಸಮೂಹವೇ ಸಮಾಜ ವಿರೋಧಿ ಸಮೂಹವಾಗಿದೆ. ಸಮಾಜದ ಹಿತಾಸಕ್ತಿಗಳಿಗೆ ಮಾರಕವಾಗುವ ಅನಿಷ್ಟ ಚಟುವಟಿಕೆಗಳಲ್ಲಿ ಇಂತಹ ಸಮೂಹಗಳು ತೊಡಗಿರುವವು. ಮುಷ್ಕರ ನಿರತ ಕಾಲೇಜು ವಿದ್ಯಾರ್ಥಿಗಳು ಸರಕಾರಿ ಬಸ್ಸನ್ನು ಸುಡುವುದು, ಬೀದಿ ದೀಪಗಳನ್ನು ಒಡೆದು ಹಾಕುವುದು, ಕಾಲೇಜಿನ ಕಿಟಕಿ ಗಾಜುಗಳನ್ನು ಚೂರು ಮಾಡುವುದು ಮುಂತಾದ ಕೃತ್ಯಗಳು ಸಮಾಜ ವಿರೋಧಿ ಚಟುವಟಿಕೆಗಳಾಗಿವೆ.

ಸಮಾಜ ಪರ ಸಮೂಹವು, ಸಮಾಜದ ಹಿತಕ್ಕಾಗಿ, ಏಳಿಗೆಗಾಗಿ ಮೀಸಲಿರುವ ಸಮೂಹ. ಸಮಾಜ ಕಲ್ಯಾಣ-ಸರ್ವರ ಏಳ್ಗೆ ಸಾಧಿಸುವುದೇ ಈ ಸಮೂಹದ ಗುರಿಯಾಗಿರುವುದು. ಅದು ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿರುವುದು.

ಒಳಸಮೂಹ ಮತ್ತು ಹೊರಸಮೂಹಗಳು : ಅಮೇರಿಕೆಯ ಸಮಾಜಶಾಸ್ತ್ರಜ್ಞನಾದ ವಿಲಿಯಂ **ಗ್ರಹಾಂ ಸುಮ್ನರನು** ತನ್ನ "ಫೋಕ್‌ವೇಸ್" ಎಂಬ ಗ್ರಂಥದಲ್ಲಿ ಸಾಮಾಜಿಕ ಸಮೂಹಗಳನ್ನು ಒಳಸಮೂಹ ಮತ್ತು ಹೊರಸಮೂಹ ಎಂಬುದಾಗಿ ವರ್ಗೀಕರಿಸಿದ್ದಾನೆ. ಅವನ ಈ ಗ್ರಂಥವು ೧೯೦೬ ರಲ್ಲಿ ಪ್ರಕಟಗೊಂಡಿತು.

ಒಳಸಮೂಹವು ಇಬ್ಬರು ವ್ಯಕ್ತಿಗಳಿಂದ ಹಿಡಿದು ಲಕ್ಷಾಂತರ ಜನರನ್ನು ಒಳಗೊಂಡಿರಬಹುದು. ಅದು ಕುಟುಂಬದಷ್ಟು ಚಿಕ್ಕದು, ಪ್ರಪಂಚದಷ್ಟು ದೊಡ್ಡದು ಆಗಿರಬಹುದು. ಅಂದರೆ ಗಾತ್ರದ ಆಧಾರದ ಮೇಲೆ ಈ ವರ್ಗೀಕರಣ ರಚನೆಗೊಂಡಿಲ್ಲ.

ಒಳಸಮೂಹವೆಂದರೆ 'ನಾವು-ನಮ್ಮವರ ಸಮೂಹ', ಹೊರ ಸಮೂಹವೆಂದರೆ 'ಅವರ ಸಮೂಹ' ಅಥವಾ 'ಇನ್ನಿತರರ ಸಮೂಹ'. ನಾವು ಯಾವ ಸಮೂಹಗಳಿಗೆ ಸಂಬಂಧಪಟ್ಟಿರುವೆವೋ, ಯಾವ ಸಮೂಹಗಳ ಸದಸ್ಯತ್ವವನ್ನು ಹೊಂದಿರುವೆವೋ ಅವು ನಮ್ಮ ಒಳಸಮೂಹಗಳು. ನಾವು ಅನೇಕ ಸಮೂಹಗಳ ಸದಸ್ಯತ್ವ ಪಡೆದಿರುತ್ತೇವೆ. ನಾವು ನಮ್ಮ ಕುಟುಂಬದ, ನಮ್ಮ ಕಾಲೇಜಿನ ಸದಸ್ಯರಾಗಿರುತ್ತೇವೆ. ಯಾವುದಾದರೊಂದು 'ರಾಜಕೀಯ ಪಕ್ಷದ ಸದಸ್ಯರಾಗಿರಲೂ'ಬಹುದು. ನಮ್ಮ ಕುಟುಂಬ, ಕಾಲೇಜು, ಧರ್ಮ, ಜಾತಿ, ರಾಜಕೀಯ ಪಕ್ಷ, ನಮ್ಮ ರಾಷ್ಟ್ರ ಇವು ನಮ್ಮ ಒಳಸಮೂಹಗಳಾಗಿವೆ.

ಒಳಸಮೂಹಗಳ ಸದಸ್ಯರಲ್ಲಿ ನಾವೆಲ್ಲ ಒಂದು ಎಂಬ ಭಾವನೆಯಿರುವುದು. ಸದಸ್ಯರ

ಮಧ್ಯೆ ಸಹಾಯ-ಸಹಕಾರದ ಭಾವನೆಗಳು ಎದ್ದು ಕಾಣುವವು. ಇನ್ನೊಬ್ಬ ಸದಸ್ಯನ ಸಂತೋಷದಲ್ಲಿ ತನ್ನ ಸಂತೋಷ, ಇನ್ನೊಬ್ಬನ ದುಃಖದಲ್ಲಿ ತನ್ನ ದುಃಖ ಅಡಗಿದೆ ಎಂಬ ಭಾವನೆ ಒಳಸಮೂಹದ ಸದಸ್ಯರಲ್ಲಿರುವುದು. ಉದಾಹರಣೆಗೆ ಕುಟುಂಬದಲ್ಲಿ ಮಗ ಅಥವಾ ಮಗಳು ಪಿ.ಯು.ಸಿ. ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದಾಗ, ಅವರಿಗಾಗುವಷ್ಟೇ ಸಂತೋಷ ಅವರ ತಂದೆ ತಾಯಿಗಳಿಗಾಗುವುದು. ಅಂದರೆ ಇಲ್ಲಿ ಮಕ್ಕಳ ಸಂತೋಷವೇ ತಂದೆತಾಯಿಗಳ ಸಂತೋಷವೆಂದೆನಿಸುವುದು. ಅದೇ ತೆರನಾಗಿ ಚಿಕ್ಕ ಮಗು ಆಟವಾಡುವಾಗ ಬಿದ್ದು ಗಾಯಗೊಂಡು ಸಂಕಟಪಡುತ್ತಿದ್ದರೆ, ಅದನ್ನು ಕಂಡ ತಾಯಿ ಮಗುವಿನಷ್ಟೇ ಸಂಕಟಪಡುವಳು. ಇದಕ್ಕೆ 'ನನ್ನವರೆಂಬ ಭಾವನೆಯೆ' ಕಾರಣ. ಪರಸ್ಪರ ಕಲ್ಯಾಣಕ್ಕಾಗಿ ಒಳಸಮೂಹದ ಸದಸ್ಯರು ದುಡಿಯುವರು. ಒಬ್ಬರು ಇನ್ನೊಬ್ಬರಿಗೆ ತೊಂದರೆಯನ್ನು ಉಂಟು ಮಾಡಲು ಬಯಸುವುದಿಲ್ಲ. ಅಪ್ಪಿತಪ್ಪಿ ಯಾರಾದರೊಬ್ಬ ಸದಸ್ಯ ಹಾಗೆ ಮಾಡಲೆತ್ನಿಸಿದರೂ ಉಳಿದ ಸದಸ್ಯರು ಆ ಚಟುವಟಿಕೆಯನ್ನು ಸಹಿಸುವುದಿಲ್ಲ.

ಒಳಸಮೂಹದ ಸದಸ್ಯರು ಮನಃಪೂರ್ವಕವಾಗಿ ಬಿಚ್ಚು ಮನಸ್ಸಿನಿಂದ ವರ್ತಿಸುವರು. ಪರಸ್ಪರರಲ್ಲಿ ಸಹಕಾರ, ನಿಷ್ಠೆ, ಸಹಾನುಭೂತಿ ತೋರುವರು. ಹೊರ ಸಮೂಹದವರು ಇವರ ಗೋಜಿಗೆ ಬಂದರೆ ಸರ್ವರೂ ಒಂದುಗೂಡಿ ಅವರನ್ನು ಎದುರಿಸುವರು. ಉದಾಹರಣೆಗೆ ನಮ್ಮ ರಾಷ್ಟ್ರದ ಮೇಲೆ ಪಾಕಿಸ್ತಾನದವರು ದಾಳಿ ಮಾಡಿದ ಪಕ್ಷದಲ್ಲಿ ಎಲ್ಲ ಭಾರತೀಯರು ಒಂದಾಗಿ ತನು, ಮನ, ಧನಗಳನ್ನಿತ್ತು ದೇಶವನ್ನು ರಕ್ಷಿಸಲು ಪ್ರಯತ್ನಪಡುವರು.

ಓರ್ವ ವ್ಯಕ್ತಿಗೆ ಸಂಬಂಧಪಡದ ಸಮೂಹಗಳು ಅವನಿಗೆ ಹೊರಸಮೂಹ ಗಳೆಂದೆನಿಸುವವು. ಬೇರೆ ಮಾತಿನಲ್ಲಿ ಹೇಳುವುದಾದರೆ ತನ್ನದಲ್ಲದ ಸಮೂಹಗಳು ಹೊರ ಸಮೂಹಗಳು. ವ್ಯಕ್ತಿಯು ಸಮಾಜದಲ್ಲಿರುವ ಅನೇಕ ಅನಂತ ಸಮೂಹಗಳ ಸದಸ್ಯನಾಗಿಲಾರ. ಉದಾಹರಣೆಗೆ ಓರ್ವ ವ್ಯಕ್ತಿ ಒಂದು ಕುಟುಂಬದ ಸದಸ್ಯತ್ವ ಪಡೆದಿರುತ್ತಾನೆ. ಅವನ ಕುಟುಂಬ ಅವನಿಗೆ ಒಳಸಮೂಹವೆಂದಾದರೆ, ಇನ್ನಿತರರ ಕುಟುಂಬಗಳು ಹೊರ ಸಮೂಹಗಳಾಗುವವು. ಅದೇ ತೆರನಾಗಿ ಕನ್ನಡಿಗರಿಗೆ ಮಲೆಯಾಳಿಗಳು, ತಮಿಳರು, ಮರಾಠಿಗರು ಹೊರ ಸಮೂಹದವರು. ಮುಸ್ಲಿಮ್‌ರಿಗೆ ಹಿಂದೂಗಳು, ಕ್ರಿಶ್ಚಿಯನ್‌ರು ಮತ್ತು ಶಿಖ್ಖರು ಹೊರ ಸಮೂಹದವರು. ಭಾರತೀಯರಿಗೆ ಪಾಕಿಸ್ತಾನಿಗಳು, ಚೀನಿಯರು ಹೊರಸಮೂಹದವರಾಗಿರುವರು.

ಒಳಸಮೂಹದ ಸದಸ್ಯರಲ್ಲಿ ಸ್ವ-ಸಮೂಹ, ನನ್ನವರು ಎನ್ನುವ ಭಾವನೆಗಳು ಮನೆ ಮಾಡಿರುವವು. ನಾವೆಲ್ಲ ಒಂದು ಎಂಬ ಮನೋಭಾವನೆ ಸದಾ ಜಾಗೃತವಾಗಿರುವುದು. ಅದಕ್ಕೆ ತದ್ವಿರುದ್ಧವಾಗಿ ಹೊರಸಮೂಹದ ಸದಸ್ಯರ ಬಗ್ಗೆ ತಾತ್ಸಾರದ ಮನೋಭಾವನೆಯಿರುವುದು. ಅವರನ್ನು ಪರಕೀಯರು ಎಂಬ ಭಾವನೆಯಿಂದ ನೋಡಲಾಗುವುದು.

ಸ್ವಕುಲ ಅಭಿಮಾನ

ಒಳ ಸಮೂಹದ ಸದಸ್ಯರು 'ನಾವು' ಎಂಬ ಒಳ್ಳೆಯ ಭಾವನೆಯನ್ನು ಬೆಳೆಸಿಕೊಳ್ಳುವುದರ ಜೊತೆಗೆ ಇನ್ನಿತರ ಸಮೂಹಗಳ ಬಗ್ಗೆ ದುರಭಿಮಾನ ಹೊಂದುವರು. ಸ್ವ-ಕುಲ ಅಭಿಮಾನ ಹೊಂದುವರು. ಇದು ದುರದೃಷ್ಟಕರ. ಸ್ವಕುಲ ಅಭಿಮಾನ ಒಳಸಮೂಹದ ಜನರಲ್ಲಿ ಸದಾ ಜಾಗೃತವಾಗಿರುತ್ತದೆ.

ಒಳಸಮೂಹದ ಜನರಿಗೆ ಇನ್ನುಳಿದ ಸಮೂಹಗಳಿಗಿಂತ ತಮ್ಮ ಸಮೂಹವೇ ಶ್ರೇಷ್ಠವಾದುದು, ತಮ್ಮ ಭಾಷೆ ಉಳಿದ ಭಾಷೆಗಳಿಗಿಂತ ಮಾತನಾಡಲು ಕೇಳಲು ಖುಷಿಯಾಗುವಂತಹುದು, ತಮ್ಮದು ಉಳಿದ ದೇಶಗಳಿಗಿಂತ ಮಹಾನ್ ದೇಶ ಎಂಬ ಮಿಥ್ಯಕಲ್ಪನೆಯಿರುವುದು. ಪ್ರತಿಯೊಂದು ಒಳಸಮೂಹವು ತಮ್ಮ ಸಮೂಹವೇ ಸರ್ವಶ್ರೇಷ್ಠವಾದುದೆಂದು ಭಾವಿಸುವುದು. ತಮ್ಮ ಸಮೂಹದ ಸರ್ವ ಚಟುವಟಿಕೆಗಳು ಸರಿಯೆಂದು ಭಾವಿಸಿ ಉಳಿದ ಸಮೂಹಗಳ ಚಟುವಟಿಕೆಗಳನ್ನು ಖಂಡಿಸಲಾಗುವುದು ಇಲ್ಲವೆ ಅಸಡ್ಡೆಯಿಂದ ಕಾಣಲಾಗುವುದು.

ಸ್ವ ಸಮೂಹವನ್ನು ಪ್ರೀತಿ-ಆದರಗಳಿಂದ ಕಂಡು ಇತರ ಸಮೂಹಗಳನ್ನು ತಿರಸ್ಕರಿಸುವ ಪ್ರವೃತ್ತಿಯೇ ಸ್ವಕುಲ ಅಭಿಮಾನವಾಗಿದೆ. ಇಂತಹ ಭಾವನೆ ಒಳಸಮೂಹದಲ್ಲಿ ಏಕತೆಯನ್ನು ರೂಪಿಸುವುದಾದರೂ ಅದು ಸಾಮಾಜಿಕ ಪ್ರಗತಿಗೆ ಅಡ್ಡಿಯನ್ನುಂಟುಮಾಡುವುದು. ಸಮಾಜದ ವಿಭಿನ್ನ ಸಮೂಹಗಳ ಬೆರೆಯುವಿಕೆಗೆ ಸ್ವಕುಲಾಭಿಮಾನವು ಅಡ್ಡಿಪಡಿಸುತ್ತದೆ. ವಿಭಿನ್ನ ಸಮೂಹಗಳ ಸದಸ್ಯರ ಮಧ್ಯ ದ್ವೇಷ, ಅಸೂಯೆ ಭಾವನೆಗಳು ಹುಟ್ಟುವವು. ಉತ್ತರ ಭಾರತದ ಜನರು ಪುಂಡಪೋಕರಿಗಳು ಎಂದು ದಕ್ಷಿಣದವರು ಭಾವಿಸಿದರೆ ದಕ್ಷಿಣ ಭಾರತದವರು ತಿಳಿಗೇಡಿಗಳು ಎಂದು ಉತ್ತರ ಭಾರತದವರು-ಆರೋಪಿಸುವರು. ಈ ತರಹದ ಭಾವನೆಗಳಿಂದಾಗಿ ದಕ್ಷಿಣ ಮತ್ತು ಉತ್ತರ ಭಾರತದವರ ಮಧ್ಯೆ ನಿಕಟ ಸಂಪರ್ಕ ಕಡಿಮೆಯಾಗಿ ವ್ಯಾಪಾರೋದ್ಯಮಗಳು ಬೆಳೆಯಲಾರವು. ನಾವೆಲ್ಲ ಭಾರತೀಯರೆಂಬ ಭಾವನೆ ಬೆಳೆಯಲು ಸ್ವಕುಲಾಭಿಮಾನ ಅಡ್ಡಿಯನ್ನುಂಟು ಮಾಡುವುದು.

ಸಾಮಾಜಿಕ ಸಮೂಹಗಳ ಮಹತ್ವ

ಮಾನವನು ದ್ವೀಪದಂತಿರದೆ ಸಮೂಹಗಳಲ್ಲಿ ಬಾಳಿ ಬದುಕಲು ಇಚ್ಛೆ ಪಡುವನು. ತನ್ನ ಅನಂತ ಬೇಡಿಕೆಗಳನ್ನು ಈಡೇರಿಸಿಕೊಳ್ಳಲೋಸುಗ ಹಲವಾರು ಸಮೂಹಗಳನ್ನು ಕಟ್ಟಿಕೊಳ್ಳುವನು. ಅವನು ಜನನದ ಕ್ಷಣದಿಂದ ಆರಂಭಿಸಿ ಮರಣದವರೆಗೂ ಸಮೂಹಗಳಲ್ಲಿ ಬಾಳಿ-ಬದುಕುವನು. ಸಮೂಹಗಳಿಂದ ಬೇರ್ಪಟ್ಟಲ್ಲಿ ಅವನ ಸ್ಥಿತಿ ನೀರಿನಿಂದ ಹೊರತೆಗೆದ ಮೀನಿನ ಹಾಗಾಗುವುದು. ಮಾನವನಿಲ್ಲದೆ ಸಮೂಹವಿಲ್ಲ; ಸಮೂಹವಿಲ್ಲದೆ ಮಾನವನಿಲ್ಲ. ಕೇವಲ ಮೃಗ ಇಲ್ಲವೆ ದೇವರು ಒಂಟಿಯಾಗಿರಬಲ್ಲರು. ಋಷಿಗಳು, ಪ್ರತ್ಯೇಕ ಖಾನೆಯಲ್ಲಿಟ್ಟ ಕಾರಾಗೃಹವಾಸಿಗಳು, ತೀವ್ರತರದ ಚಿತ್ತವಿಕಲತೆಯನ್ನು ಹೊಂದಿದ ಮನೋರೋಗಿಗಳು ಇತ್ಯಾದಿ ಅಪವಾದಗಳನ್ನು ಹೊರತುಪಡಿಸಿ, ದೀರ್ಘಾವಧಿಯವರೆಗೆ ಯಾವ ಮನುಷ್ಯನೂ

ಒಬ್ಬಂಟಿಯಾಗಿರಲು ಇಷ್ಟಪಡಲಾರ. ತನ್ನ ಮನೋ ಇಂಗಿತ ವ್ಯಕ್ತಪಡಿಸಲು, ತನ್ನ ಭಾವನೆಗಳನ್ನು ಹೊರಹಾಕಲು ಅವನಿಗೆ ಇನ್ನಿತರರ ಅಗತ್ಯತೆಯಿದೆ. ದುಃಖ-ದುಮ್ಮಾನ ಮತ್ತು ದುಗುಡಗಳಿಂದ ಹೊರಬರಲು ಅನ್ಯರ ಸಹಾಯಬೇಕು. ಒಂಟಿ ಬಾಳು ಬಾಳಲ್ಲ; ಬರಿಗೋಳು. ಒಂಟಿಯಾಗಿದ್ದು ಬದುಕುಳಿಯುವುದೇ ಕಷ್ಟವಾಗುತ್ತದೆ.

ಮಾನವ ಶಿಶು ಹುಟ್ಟಿದಾಗ ಅಸಹಾಯಕ ಸ್ಥಿತಿಯಲ್ಲಿರುವುದು. ಈ ಶಿಶುವಿನಲ್ಲಿ ಮಾನವೀಯ ಗುಣಗಳು ಕಾಣಲಾರವು. ಅದಕ್ಕೆ ಭಾಷೆ ಬರುವುದಿಲ್ಲ. ಇಂತಹ ಸ್ಥಿತಿಯ ಮಗು ಕುಟುಂಬದಲ್ಲಿ ಜನಿಸಿ ಕುಟುಂಬದ ಸದಸ್ಯರ ಸತತ ಸಂಪರ್ಕದಿಂದಾಗಿ ಭಾಷೆಯನ್ನು ಕಲಿಯುವುದು, ದೊಡ್ಡವರನ್ನು ಗೌರವಿಸಬೇಕೆಂಬ ವಿಚಾರವನ್ನು ಬೆಳೆಸಿಕೊಳ್ಳುವುದು, ಯಾವುದು ಸರಿ ಯಾವುದು ತಪ್ಪು ಎಂಬುದನ್ನು ಅರ್ಥೈಸಿಕೊಳ್ಳುವುದು. ಕುಟುಂಬದ ಸದಸ್ಯರು ಹರಿಸುವ ಪ್ರೀತಿ, ವಾತ್ಸಲ್ಯದಿಂದಾಗಿ ಮಗು ಮಾನಸಿಕ ತೃಪ್ತಿ ಹೊಂದಿ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಬೆಳೆಸಿಕೊಳ್ಳುವುದು. ಅಂದರೆ ಕುಟುಂಬ, ಶಾಲೆಯಂತಹ ಸಾಮಾಜಿಕ ಸಮೂಹಗಳಿಂದಾಗಿ ಮಾನವ ಶಿಶು ಮನುಷ್ಯನಾಗಿ ಬೆಳೆಯುವುದು, ಸುಸಂಸ್ಕೃತ ವ್ಯಕ್ತಿಯಾಗುವುದು.

ಸಮೂಹಗಳ ಸಂಪರ್ಕವಿರದಿದ್ದರೆ ಮಾನವನು ಪ್ರಾಣಿ ಸಮಾನನಾಗುತ್ತಾನೆ. ಇದಕ್ಕೆ ಸಂಬಂಧಪಟ್ಟಂತೆ ಮೆಕೈವರನು ಸಾಮಾಜಿಕ ಸಂಬಂಧಗಳಿಂದ ಪ್ರತ್ಯೇಕಿಸಲ್ಪಟ್ಟ ಮೂರು ದೃಷ್ಟಾಂತಗಳನ್ನು ನೀಡಿದ್ದಾನೆ.

ಕಾಸ್ಪರ್ ಹೌಸರ್ ಎಂಬ ಬಾಲಕನು ಬಾಲ್ಯದಿಂದ ಹಿಡಿದು ತನ್ನ ಹದಿನೇಳನೇ ವಯಸ್ಸಿನವರೆಗೆ ನೂರೆಂಬರ್ಗ್ ಕಾಡಿನಲ್ಲಿ ಬೆಳೆದು ಬಂದನು. ತನ್ನ ೧೭ನೇ ವಯಸ್ಸಿನಲ್ಲಿಯೂ ಅವನಿಗೆ ನಡೆದಾಡಲು ಬರುತ್ತಿರಲಿಲ್ಲ, ಮಾತನಾಡಲು ಬರುತ್ತಿರಲಿಲ್ಲ. ಅವನ ಬುದ್ಧಿಮಟ್ಟ ಕ್ಷೀಣವಾಗಿತ್ತು.

ಎರಡನೆಯದಾಗಿ, ೧೯೨೦ರಲ್ಲಿ ಇಬ್ಬರು ಹಿಂದೂ ಮಕ್ಕಳು ಮಿದ್ನಾಪುರ ಅರಣ್ಯಪ್ರದೇಶದ ತೋಳಗಳ ಗುಹೆಯಲ್ಲಿ ಕಾಣಸಿಕ್ಕಿದ್ದವು. ಅವುಗಳಿಗೆ ಕಮಲ ಮತ್ತು ಅಮಲ ಎಂದು ನಾಮಕರಣ ಮಾಡಲಾಯಿತು. ಅಮಲ ಚಿಕ್ಕ ಮಗು, ಕಾಣಸಿಕ್ಕಿದ ಕೆಲವೇ ದಿನಗಳಲ್ಲಿ ಮರಣವನ್ನಪ್ಪಿತು. ಕಮಲ ಮತ್ತೆ ಕೆಲವು ವರ್ಷ ಬದುಕುಳಿಯಿತು. ಈ ಎರಡು ಬಾಲಿಕಿಯರು ತೋಳಗಳ ಗುಹೆಯಲ್ಲಿ ಕಾಣಿಸಿಕೊಂಡಾಗ ಅವರಲ್ಲಿ ಮಾನವ ಗುಣಗಳು ಕಂಡುಬರಲಿಲ್ಲ. ಅವು ಮಾನವ ಶಿಶುಗಳಾದಾಗ್ಯೂ ತೋಳಗಳ ತೆರನಾಗಿ ವರ್ತಿಸುತ್ತಿದ್ದವು. ಕೈಗಳು ಮತ್ತು ಕಾಲುಗಳನ್ನು ಬಳಸಿಕೊಂಡು ನಡೆದಾಡುತ್ತಿದ್ದವು. ಅವುಗಳಿಗೆ ಯಾವುದೇ ಭಾಷೆ ಗೊತ್ತಿರಲಿಲ್ಲ. ಅವು ಕೇವಲ ತೋಳಗಳಂತೆ ಶಬ್ದ ಮಾಡುತ್ತಿದ್ದವು. ಮಾನವರನ್ನು ಕಂಡಾಗ ಅತಿಯಾಗಿ ಹೆದರುತ್ತಿದ್ದವು. ಹಲವು ವರ್ಷಗಳ ಕಾಲ ತರಬೇತಿ ನೀಡಿದ ನಂತರ ಕಮಲ ಎರಡು ಕಾಲುಗಳ ಮೇಲೆ ನಡೆಯುವುದನ್ನು ರೂಢಿಸಿಕೊಂಡಳು, ಹಲವು ಶಬ್ದಗಳನ್ನು ಉಚ್ಚರಿಸಲು ಶಕ್ತಳಾದಳು.

೩ನೇ ದೃಷ್ಟಾಂತ

ಅನೈತಿಕ ಸಂಗದಿಂದಾಗಿ ಹುಟ್ಟಿದ ಆರು ತಿಂಗಳ ಮಗುವನ್ನು ಒಂದು ಗುಪ್ತವಾದ ಕೋಣೆಯಲ್ಲಿ ಬಚ್ಚಿಡಲಾಗಿತ್ತು. ಐದು ವರ್ಷಗಳ ತರುವಾಯ ಅಮೆರಿಕಾದ ಅನ್ನಾ ಎಂಬ ಆ ಮಗುವನ್ನು ಹೊರತಂದಾಗ ಅದರ ಶಾರೀರಿಕ ಬೆಳವಣಿಗೆಯಾಗಲಿ, ಮಾನಸಿಕ ಬೆಳವಣಿಗೆಯಾಗಲಿ ಸಮರ್ಪಕವಾಗಿ ಆಗಿರಲಿಲ್ಲ. ಅವಳಿಗೆ ಮಾತನಾಡಲು ಗೊತ್ತಿರಲಿಲ್ಲ. ನಡೆದಾಡುವಷ್ಟು ಶಕ್ತಿಯನ್ನು ಅವಳು ಹೊಂದಿರಲಿಲ್ಲ.

ಸಮೂಹದಲ್ಲಿದ್ದು, ಸಹಚರರೊಡನೆ ಸಾಮೂಹಿಕ ಜೀವನವನ್ನು ಹಂಚಿಕೊಂಡಾಗ ಮಾತ್ರ ವ್ಯಕ್ತಿಯಲ್ಲಿ ಮಾನವ ಗುಣಗಳು ಬೆಳೆದು ಬರಲು ಸಾಧ್ಯವೆಂಬುದನ್ನು ಈ ದೃಷ್ಟಾಂತಗಳು ಪುಷ್ಟೀಕರಿಸುತ್ತವೆ. ಮಾನವ ಸಂಪರ್ಕದ ಕೊರತೆಯಿಂದಾಗಿ ಈ ಮಕ್ಕಳು ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳಲು ವಿಫಲವಾದವು. ಅದಕ್ಕಾಗಿಯೇ ಸಾಧುಗಳೂ ಸಹ ಕಾಡಿನಲ್ಲಿ ತಮ್ಮ ಸಹಚರರ ಸಾಂಗತ್ಯದಲ್ಲಿರಲು ಬಯಸುವರು.

ಮಾನವನ ಮಾನಸಿಕ-ಬೌದ್ಧಿಕ ವಿಕಸನಕ್ಕೆ ಸಮೂಹಗಳು ಸಹಕಾರಿಯಾಗಿವೆ. ಅವು ಮಾನವನ ಸಂಸ್ಕೃತಿಯನ್ನು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಸಾಗಿಸುವ ಮೂಲಕ, ಆಯಾ ಸಮೂಹಗಳ ವಿಶಿಷ್ಟ ಸಂಸ್ಕೃತಿಯನ್ನು ಉಳಿಯುವಂತೆ, ಬೆಳೆಯುವಂತೆ ಮಾಡುವವು. ಸಮೂಹಗಳು ವ್ಯಕ್ತಿಯ ನಡತೆಯನ್ನು ನಿರ್ಧರಿಸುವವು. ಅವನು ವಾಮ ಮಾರ್ಗಕ್ಕೆಳಸದಂತೆ ಕಟ್ಟುಪಾಡುಗಳನ್ನು ವಿಧಿಸುವವು.

ಸಮೂಹ ಜೀವನವು ವ್ಯಕ್ತಿಯ ಜೀವನಕ್ಕೆ-ಜೀವಕ್ಕೆ-ಅವನ ಆಸ್ತಿಪಾಸ್ತಿಗೆ ಭದ್ರತೆಯನ್ನು ರಕ್ಷಣೆಯನ್ನು ಒದಗಿಸುವುದು. ಒಟ್ಟಿನಲ್ಲಿ ವ್ಯಕ್ತಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಜೀವನದುದ್ದಕ್ಕೂ ಸಾಮಾಜಿಕ ಸಮೂಹಗಳನ್ನು ಅವಲಂಬಿಸಬೇಕಿದೆ.

೩.೨. ಸಂಘಟಿತ ಮತ್ತು ಅಸಂಘಟಿತ ಸಮೂಹಗಳು

ಸಂಘಟನೆ ಮತ್ತು ಶಾಶ್ವತತೆಯಾಧಾರಗಳ ಮೇಲೆ ಸಾಮಾಜಿಕ ಸಮೂಹಗಳನ್ನು ಸಂಘಟಿತ ಮತ್ತು ಅಸಂಘಟಿತ ಸಮೂಹಗಳೆಂಬುದಾಗಿ ವಿಂಗಡಿಸಲಾಗಿದೆ. ನಿರಂತರ ಅಸ್ತಿತ್ವದಲ್ಲಿರುವ ಮತ್ತು ನಿಶ್ಚಿತವಾದ ಸಂಘಟನೆಯ ಲಕ್ಷಣಗಳನ್ನು ಹೊಂದಿದ ಸಮೂಹಗಳಿಗೆ ಸಂಘಟಿತ ಸಮೂಹಗಳೆನ್ನುವರು. ಅಲ್ಲಿ ವ್ಯಕ್ತಿಗಳು ಹುಟ್ಟಬಹುದು ಇಲ್ಲವೆ ಸಾಯಬಹುದು. ಆದರೆ ಸಮೂಹ ಮುಂದುವರಿಯುವುದು. ಕೆಲವು ವ್ಯಕ್ತಿಗಳು ಕಣ್ಮರೆಯಾದಾಗ ಸಮೂಹವು ಕಣ್ಮರೆಯಾಗುವುದಿಲ್ಲ. ಏಕೆಂದರೆ ಅಲ್ಲಿ ಬೇರೆ ವ್ಯಕ್ತಿಗಳು ಸಾಕಷ್ಟು ಸಂಖ್ಯೆಯಲ್ಲಿರುವರು. ರಾಜ್ಯ, ಗ್ರಾಮ ಅಥವಾ ನಗರದಂತಹ ಸಮೂಹಗಳು ಇದಕ್ಕೆ ಉದಾಹರಣೆಗಳಾಗಿವೆ. ಸಂಘಟಿತ ಸಮೂಹಗಳು ಶಾಶ್ವತ ಸಮೂಹಗಳಾಗಿವೆ.

ವ್ಯಕ್ತಿಗಳು ನಿರ್ದಿಷ್ಟ ಉದ್ದೇಶಗಳನ್ನು ಈಡೇರಿಸಿಕೊಳ್ಳಲೋಸುಗ ಸಂಘಟಿತ ಸಮೂಹಗಳನ್ನು ಸ್ಥಾಪಿಸುವರು. ನಿಶ್ಚಿತ ಉದ್ದೇಶವಿಲ್ಲದಿದ್ದರೆ ಸಂಘಟಿತ ಸಮೂಹ ಅಸ್ತಿತ್ವಕ್ಕೆಬಾರದು. ರಾಜಕೀಯ ಪಕ್ಷ ಇದಕ್ಕೊಂದು ಉತ್ತಮ ಉದಾಹರಣೆಯಾಗಿದೆ.

ಇಂತಹ ಸಮೂಹಗಳಲ್ಲಿ ನಿರ್ದಿಷ್ಟ ನಿಯಮಗಳಿರುವವು. ಇವು ಸದಸ್ಯರ ವರ್ತನೆಯನ್ನು ಅಂಕಿತದಲ್ಲಿಟ್ಟುಕೊಳ್ಳುವವು. ಸದಸ್ಯರು ಮನಸ್ಸಿಗೆ ಬಂದಂತೆ ಬೇಜವಾಬ್ದಾರಿಯಿಂದ ವರ್ತಿಸಲು ನಿಯಮಗಳು ಅವಕಾಶ ನೀಡುವುದಿಲ್ಲ. ತತ್ಕಾರಣ ಸದಸ್ಯರ ಮಧ್ಯದ ಅಂತಃ ಕ್ರಿಯೆಗಳು ಒಂದು ವ್ಯವಸ್ಥಿತ ರೀತಿಯಲ್ಲಿ ಕ್ರಮಬದ್ಧವಾಗಿ ಸಾಗುವವು.

ಸಂಘಟಿತ ಸಮೂಹಗಳನ್ನು ಸೇರಿಕೊಳ್ಳಲು ಸದಸ್ಯತ್ವ ಪಡೆಯಬೇಕಾಗುತ್ತದೆ. ಯಾರು ಬೇಕಾದರೂ ಬಂದು ಇವುಗಳಿಗೆ ಸೇರಲಾಗುವುದಿಲ್ಲ. ಇಂತಹ ಸಮೂಹಗಳಲ್ಲಿ ಸಮೂಹ ಭಾವನೆ ಗಾಢವಾಗಿರುವುದು.

ಕುಟುಂಬ, ಸಮುದಾಯ, ವರ್ಗ, ರಾಜ್ಯ, ಕಾರ್ಖಾನೆ, ಸರಕಾರ, ವಿಶ್ವವಿದ್ಯಾಲಯ ಮುಂತಾದವು ಸಂಘಟಿತ ಸಮೂಹಗಳಿಗೆ ಉದಾಹರಣೆಗಳಾಗಿವೆ.

ಅಲ್ಪ ಅವಧಿಯ ತಾತ್ಕಾಲಿಕ ಸಮೂಹಗಳೇ ಅಸಂಘಟಿತ ಸಮೂಹಗಳು. ಹೆಸರೇ ಸೂಚಿಸುವಂತೆ, ಇಂತಹ ಸಮೂಹಗಳಲ್ಲಿ ಸಂಘಟನೆಯ ಕೊರತೆಯಿರುವುದು. ಇವು ಅಲ್ಪಕಾಲಿಕ ಸಮೂಹಗಳು. ಇವು ಬೇಗ ಅಸ್ತಿತ್ವಕ್ಕೆ ಬಂದು ಅಷ್ಟೇ ತೀವ್ರಗತಿಯಲ್ಲಿ ಅದೃಶ್ಯಗೊಳ್ಳುವವು, ಕರಗಿ ಹೋಗುವವು. ಜನಸಂದಣಿ, ಪ್ರೇಕ್ಷಕ ವರ್ಗ, ದೊಂಬಿ ಮುಂತಾದವು ಅಸಂಘಟಿತ ಸಮೂಹಗಳಾಗಿವೆ. ಹಾವಾಡಿಗನು ಹಾವಿನಾಟವನ್ನು ಪ್ರದರ್ಶಿಸುವಾಗ ಅನೇಕ ಜನರು ಅವನ ಸುತ್ತ ನೆರೆಯುವರು. ಆಟ ಮುಗಿದಾಕ್ಷಣ ಆ ಜನರೆಲ್ಲ ಚದುರಿ ಹೋಗುವರು. ಅಲ್ಲಿಗೆ ಆ ಸಮೂಹ ಅಂತ್ಯಗೊಳ್ಳುವುದು. ಅದೇ ತೆರನಾಗಿ ನಾಟಿ ಔಷಧಿ ಮಾರುವವನು ಬೀದಿ ಪಕ್ಕ ಔಷಧಿ ಪ್ರಚಾರ ಮತ್ತು ಮಾರಾಟ ಮಾಡುವಾಗ, ದೊಂಬರಾಟ ನಡೆದಾಗ, ಅಕಸ್ಮಾತ್ ಅಪಘಾತಗಳು ಸಂಭವಿಸಿದಾಗ ಜನರು ಒಂದೆಡೆ ಸೇರುತ್ತಾರೆ. ಇವೆಲ್ಲ ಅಸಂಘಟಿತ ಸಮೂಹಗಳಾಗಿವೆ.

ಜನಸಂದಣಿ (ಜನ-ಜಂಗುಳಿ)

ದಿನನಿತ್ಯದ ಜೀವನದಲ್ಲಿ ಹಲವಾರು ಜನಸಂದಣಿಗಳನ್ನು ಕಾಣಬಹುದಾಗಿದೆ. ಸಂತೆ, ಜಾತ್ರೆ, ಅಪಘಾತ ನಡೆದ ಸ್ಥಳ, ಚುನಾವಣೆಗಳ ಸಮಯದಲ್ಲಿ ರಾಜಕೀಯ ನಾಯಕರು ಮಾಡುವ ಭಾಷಣದ ಸ್ಥಳ ಇತ್ಯಾದಿಗಳೆಡೆ ಜನರು ಸೇರುವರು. ಜನಸಂದಣಿಯ ಸದಸ್ಯರು ಸ್ವಪ್ರವರ್ತಿತರಾಗಿ ಬೇಗ ಒಟ್ಟುಗೂಡಿ ಅಷ್ಟೇ ಬೇಗ ಚದುರಿ ಹೋಗುವರು. ಆದುದರಿಂದ ಇವು ಅಲ್ಪಾವಧಿ ಅಥವಾ ಅಲ್ಪಕಾಲಿಕ ಸಮೂಹವಾಗಿದೆ.

ಜನಸಂದಣಿಯ ಅರ್ಥ ಮತ್ತು ವ್ಯಾಖ್ಯೆಗಳು

ಜನಸಂದಣಿಯು ಒಂದು ತಾತ್ಕಾಲಿಕ, ಅಲ್ಪಾವಧಿ ಸಮೂಹವಾಗಿದೆ. ಇದು ಜನರ ಸಾಮೂಹಿಕ ವರ್ತನೆಯನ್ನು ಪ್ರತಿನಿಧಿಸುವುದು. ಜನರು ತಾತ್ಕಾಲಿಕವಾದ ಸಾಮಾನ್ಯ ಗುರಿ ಸಾಧನೆಗೋಸ್ಕರ ಒಟ್ಟುಗೂಡಿ ಗುಂಪು ಸೇರುವರು. ಜನಸಂದಣಿಯಲ್ಲಿ ಸಂಘಟನೆಯಾಗಲಿ, ದೀರ್ಘಾವಧಿಯ ಗುರಿಯಾಗಲಿ ಇರುವುದಿಲ್ಲ. ಇದು ತಾತ್ಕಾಲಿಕ, ಪ್ರತ್ಯಕ್ಷ ಮತ್ತು ಅಸಂಘಟನೆಯಿಂದ ಒಡಗೂಡಿದ ಜನರ ಸಮೂಹವಾಗಿದೆ. ಜನಸಂದಣಿಯ ಸದಸ್ಯರೆಲ್ಲರ

ಆಸಕ್ತಿ ಒಂದೇ ಇರುವ ಕಾರಣ ಅವರ ಕುತೂಹಲ, ಉದ್ವೇಗಗಳು ತಾತ್ಕಾಲಿಕವಾಗಿ ಒಂದೇ ತೆರನಾಗಿರುತ್ತವೆ.

ಬ್ರಿಟ್ ಅವರ ಪ್ರಕಾರ "ಒಂದೇ ರೀತಿಯ ಪ್ರೇರಣೆಯಿಂದ, ಒಂದೇ ವಿಧದ ಪ್ರತಿಕ್ರಿಯೆಗಳನ್ನು ಅನುಭವಿಸುವ ಜನಗ ತಾತ್ಕಾಲಿಕ ಭೌತಿಕ ಸೇರುವಿಕೆಯನ್ನು ಜನಸಂದಣಿ ಎನ್ನಬಹುದು".

"ಕೆಲವೊಂದು ಸಾಮಾನ್ಯ ಗುರಿಗಳ ಪರಿಣಾಮವಾಗಿ ಸ್ವಪ್ರವರ್ತಿತವಾಗಿ ರಚಿತವಾದ, ಸಂಪೂರ್ಣವಾಗಿ ಬೇಧಿಸುವಂತಹ ಗಡಿಗಳನ್ನೊಳಗೊಂಡ ತಾತ್ಕಾಲಿಕ ಸಮೂಹವೇ ಜನಸಂದಣಿ" ಎಂಬುದಾಗಿ **ಫೋಲೆನ್** ಜನಸಂದಣಿಯನ್ನು ವ್ಯಾಖ್ಯಾನಿಸಿದ್ದಾರೆ.

ಸಮಾಜಶಾಸ್ತ್ರ ಶಬ್ದಕೋಶದ ಪ್ರಕಾರ "ಪೂರ್ವ ಅಂತಃಕ್ರಿಯೆಗಳ ಇತಿಹಾಸವಿಲ್ಲದ, ಭೌತಿಕ ಸಾಮೀಪ್ಯ ಹೊಂದಿದ, ಸಾಮಾನ್ಯ ಕೇಂದ್ರಬಿಂದು ಅಥವಾ ಆಸಕ್ತಿಯೊಡನೆ ಸೇರಿದ ವ್ಯಕ್ತಿಗಳ ತಾತ್ಕಾಲಿಕ ಗುಂಪು ಜನಸಂದಣಿಯೆಂದೆನಿಸುವುದು".

ಜನಸಂದಣಿಯು ಕ್ಷಣಾರ್ಧದಲ್ಲಿ ಉದ್ಭವಗೊಳ್ಳುವುದು. ಅದು ಪೂರ್ವ ನಿಶ್ಚಿತವಾದುದಲ್ಲ. ರಸ್ತೆಯಲ್ಲಿ ಅಪಘಾತವಾದ ತಕ್ಷಣವೇ ಜನರು ಆ ಸ್ಥಳದ ಹತ್ತಿರ ಸೇರುವರು. ಅಂದರೆ ಅಲ್ಲಿ ಜನಸಂದಣಿಯು ರಚನೆಗೊಳ್ಳುವುದು. ಜನಸಂದಣಿಯು ಒಂದು ಅವ್ಯವಸ್ಥಿತ ಗುಂಪು. ಅದಕ್ಕೆ ನಿರ್ದಿಷ್ಟ ನಾಯಕರಾರೂ ಬೇಕಿಲ್ಲ. ನಾಯಕರು ಹುಟ್ಟಿಕೊಂಡರೂ ಅವರಿಗೇನೂ ವಿಶೇಷ ಸ್ಥಾನಮಾನ, ಗೌರವ ದಕ್ಕುವುದಿಲ್ಲ.

ಜನಸಂದಣಿಯ ಲಕ್ಷಣಗಳು

ಜನಸಂದಣಿಯ ಮುಖ್ಯ ಲಕ್ಷಣಗಳು ಈ ಕೆಳಗಿನಂತಿವೆ.

೧. ಕ್ಷಣಿಕವಾದುದು

ಜನಸಂದಣಿಯು ತಾತ್ಕಾಲಿಕವಾದುದು. ಯಾವುದಾದರೊಂದು ನಿರ್ದಿಷ್ಟ, ಗುರಿ, ಆಸಕ್ತಿ, ಕುತೂಹಲ ಇಲ್ಲವೆ ತಾತ್ಕಾಲಿಕ ಕಾರಣದಿಂದಾಗಿ ಜನರು ಒಟ್ಟುಗೂಡಿ ಅದು ಈಡೇರಿದ ತಕ್ಷಣ ವಿಸರ್ಜಿತಗೊಳ್ಳುವುದು. ಬ್ರಿಟ್‌ನ ಮಾತಿನಲ್ಲಿ ಹೇಳುವುದಾದರೆ ಜನಸಂದಣಿಯ ವರ್ತನೆಯು ಮೂರು ಮುಖ್ಯ ಅಂಶಗಳನ್ನು ಒಳಗೊಂಡಿದೆ. ೧. ಮಾನಸಿಕ ನಿರಂತರತೆ ೨. ಆಸಕ್ತಿ ಮತ್ತು ಗಮನದ ಕೇಂದ್ರೀಕರಣ ೩. ಕ್ಷಣಿಕತೆ ಅಥವಾ ತಾತ್ಕಾಲಿಕ ಗುಣ.

ಜನಸಂದಣಿಯು ಸೇರಿದಷ್ಟೇ ಬೇಗ ಅದೃಶ್ಯಗೊಳ್ಳುತ್ತದೆ. ಉದಾಹರಣೆಗೆ, ಇಬ್ಬರು ದಾರಿಯಲ್ಲಿ ಪರಸ್ಪರ ಜಗಳವಾಡುತ್ತಿದ್ದರೆ ನಿಮಿಷಾರ್ಧದಲ್ಲಿ ಜನರು ಸೇರಿಕೊಳ್ಳುವರು ಮತ್ತು ಅವರ ಜಗಳ ಮುಗಿದ ತಕ್ಷಣ ಚದುರಿ ಹೋಗುವರು. ಅದೇ ತೆರನಾಗಿ ಹಾವಾಡಿಗನು ಹಾವಿನಾಟ ಪ್ರಾರಂಭಿಸಿದ ತಕ್ಷಣ ಜನರು ತಮ್ಮಷ್ಟಕ್ಕೆ ತಾವೇ ಬಂದು ಸೇರುವರು, ಕುತೂಹಲದಿಂದ ಆಟ ನೋಡುವರು. ಹಾವಾಡಿಗ ಹಾವಿನಾಟ ನಿಲ್ಲಿಸಿದ ತತ್‌ಕ್ಷಣ ಜನರು ಅಲ್ಲಿಂದ ಜಾಗ ಖಾಲಿ ಮಾಡುವರು.

೨. ಅಸಂಘಟಿತವಾದುದು

ಜನಸಂದಣಿಯು ಅಸಂಘಟಿತ ಸಮೂಹವಾಗಿದೆ. ಅದು ಪೂರ್ವ ನಿಯೋಜಿತವಾದುದಲ್ಲ. ಅದು ವರ್ತನೆಯ ಸಂಹಿತೆಯನ್ನು, ನಿರ್ದಿಷ್ಟ ನಿಯಮಗಳನ್ನು ಹೊಂದಿರದು. ಅದು ನಾಯಕನನ್ನು ಹೊಂದಿದ್ದರೂ ಅಲ್ಲಿ ನಿರ್ದಿಷ್ಟ ಶ್ರಮ ವಿಭಜನೆ ಕಾಣದು.

೩. ಗಮನದ ಕೇಂದ್ರೀಕರಣ

ಜನಸಂದಣಿಯಲ್ಲಿ ಸೇರಿದ ವ್ಯಕ್ತಿಗಳ ಗಮನ ಯಾವುದಾದರೊಂದು ವ್ಯಕ್ತಿ ಇಲ್ಲವೆ ಘಟನೆಯ ಮೇಲೆ ಕೇಂದ್ರೀಕೃತಗೊಂಡಿರುವುದು. ಉದಾಹರಣೆಗೆ, ರಸ್ತೆಯ ಮೇಲೆ ವಾಹನ ಅಪಘಾತ ಸಂಭವಿಸಿದಾಗ ನೆರೆದ ಜನರ ಗಮನ ಅದರೆಡೆಗೆ ಕೇಂದ್ರೀಕೃತಗೊಂಡಿರುವುದು. ಹಾವಾಡಿಗನು ಹಾವಿನಾಟ ಆಡಿಸುವಾಗ ಸೇರಿದ ಜನರ ಗಮನ ಸಂಪೂರ್ಣವಾಗಿ ಹಾವಾಡಿಗನ ಆಟದ ಮೇಲೆಯೇ ಕೇಂದ್ರೀಕೃತಗೊಂಡಿರುತ್ತದೆ.

೪. ಪರಸ್ಪರ ಪ್ರಭಾವ

ಜನಸಂದಣಿಯಲ್ಲಿ ವ್ಯಕ್ತಿಗಳು ತಮ್ಮ ಸಹಚರರ ವಿಚಾರ ಮತ್ತು ಕ್ರಿಯೆಗಳನ್ನು ಕೆರಳಿಸುವರು, ಪ್ರಚೋದಿಸುವರು. ಅದೇ ತೆರನಾಗಿ ಅವರೂ ಸಹ ಇನ್ನಿತರರಿಂದ ಪ್ರಭಾವಿತಗೊಳ್ಳುವರು.

೫. ಸಾಕಷ್ಟು ಜನರ ಸೇರುವಿಕೆ

ಸಮೂಹದ ಅತ್ಯಗತ್ಯ ಅಂಶವೆಂದರೆ ಜನರು. ಜನರಿಲ್ಲದೆ ಜನಸಂದಣಿ ರೂಪಗೊಳ್ಳದು. ಸಾಕಷ್ಟು ಜನರು ದೈಹಿಕವಾಗಿ ಒಂದೆಡೆ ಸೇರುವರು. ಅಂದರೆ ಭೌತಿಕ ಸಾಮೀಪ್ಯತೆಯನ್ನು ಜನರು ಹೊಂದಿರುವರು.

೬. ಸಮೂಹ ಬಲದ ಪ್ರಜ್ಞೆ

ಜನಸಂದಣಿಯಲ್ಲಿ ವ್ಯಕ್ತಿಗಳು ಸಮೂಹ ಬಲದ ಅನುಭವ ಹೊಂದುವ ಕಾರಣ ಅವರ ಆತ್ಮವಿಶ್ವಾಸ ಹೆಚ್ಚುವುದು. ತಮ್ಮ ಹಿಂದೆ ಸಮೂಹದ ಬೆಂಬಲ ಉಂಟೆಂಬ ಕಾರಣದಿಂದಾಗಿ ವ್ಯಕ್ತಿಗಳು ಅಸಂಬದ್ಧವಾಗಿ ವರ್ತಿಸುವರು. ಬಸ್ಸು ಸುಡುವುದು, ಕಲ್ಲು ಬೀಸಾಕುವುದು, ಅಂಗಡಿಗಳ ಲೂಟಿ ಮಾಡುವುದು ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗುವ ಸಂದರ್ಭಗಳೂ ಉಂಟು.

೭. ವಿಚಾರಗಳಲ್ಲಿ ಸಾಮ್ಯತೆ

ಜನಸಂದಣಿಯ ಸದಸ್ಯರಲ್ಲಿ ವಿಚಾರಗಳು. ಉದ್ವೇಗಗಳು ಮತ್ತು ಕ್ರಿಯೆಗಳಲ್ಲಿ ಸಾಮ್ಯತೆ ಕಂಡುಬರುವುದು.

೮. ಜವಾಬ್ದಾರಿ ಪ್ರಜ್ಞೆಯ ಕೊರತೆ

ಸೂಚ್ಯತೆಯ ಹೆಚ್ಚಳ ಮತ್ತು ಸಮೂಹ ಬಲದ ಪ್ರಜ್ಞೆಯಿಂದಾಗಿ ಜನರು ಜನಸಂದಣಿಯಲ್ಲಿ ತಮ್ಮ ಜವಾಬ್ದಾರಿಯ ಪ್ರಜ್ಞೆಯನ್ನು ಕಳೆದುಕೊಳ್ಳುವರು. ಓರ್ವ ವ್ಯಕ್ತಿಯಿದ್ದಾಗ

ಮಾಡಲಾಗದ ಹಲವಾರು ದುಷ್ಕೃತ್ಯಗಳನ್ನು ಜನಸಂದಣಿಯಲ್ಲಿ ಜನರು ಮಾಡುವರು. ಅತ್ಯಾಚಾರ, ರಕ್ತಪಾತ, ಕೊಲೆ ಸುಲಿಗೆಗಳಂತಹ ಹೀನ ಕೆಲಸ ಮಾಡಲೂ ಸಹ ಅವರು ಹಿಂಜರಿಯುವುದಿಲ್ಲ. ಜನಸಂದಣಿಯಲ್ಲಿ ಅಪಾರ ಜನಸ್ತೋಮವಿರುವಾಗ ಅಪರಾಧಿಯನ್ನು ಪತ್ತೆ ಹಚ್ಚುವುದು ಕಷ್ಟದ ಕೆಲಸ. ಹಾಗಾಗಿ ಯಾವ ವ್ಯಕ್ತಿಯ ಮೇಲೂ ಸಂಬಂಧಪಟ್ಟ ಅಧಿಕಾರಿಗಳು, ಪೋಲೀಸರು ಕ್ರಮಕೈಕೊಳ್ಳಲಾಗುವುದಿಲ್ಲ. "ಜನಸಂದಣಿಯಲ್ಲಿ ವ್ಯಕ್ತಿಗಳನ್ನು ಸದಾ ನಿಯಂತ್ರಿಸುವ ಜವಾಬ್ದಾರಿಯ ಭಾವನೆಯು ಸಂಪೂರ್ಣವಾಗಿ ಮಾಯವಾಗಿ ರುವುದೆಂದು" **ಲೆಬನ್** ಹೇಳಿದ್ದಾನೆ.

೯. ಉದ್ವೇಗದ ಹೆಚ್ಚಳ

ಜನಸಂದಣಿಯ ಸದಸ್ಯರು ಹೆಚ್ಚು ಭಾವೋದ್ವೇಗಕ್ಕೆ ಒಳಗಾಗಿರುವರು. ಕೆಲವರು ಕೆರಳಿದ ಇನ್ನಿತರ ಸದಸ್ಯರನ್ನು ಕಂಡು ತಾವೂ ಕೆರಳುವರು. ಇವರು ಕೆರಳಿದ್ದನ್ನು ಕಂಡು ಮುಂಚೆ ಕೆರಳಿದವರು ಇನ್ನು ಹೆಚ್ಚು ಕೆರಳುವರು. ಈ ರೀತಿಯಾಗಿ ಸದಸ್ಯರ ಉದ್ವೇಗಗಳು ಹೆಚ್ಚಳಗೊಂಡು ಪರಮಾವಧಿ ತಲುಪುವವು. ಉದ್ವೇಗಗಳ ಭರದಲ್ಲಿ ತಾವು ಎಂತಹ ಚಟುವಟಿಕೆಗಳಲ್ಲಿ ತೊಡಗಿದ್ದೇವೆ ಎಂಬ ಜ್ಞಾನವೇ ಇರುವುದಿಲ್ಲ. ಸಾಮಾನ್ಯವಾಗಿ ಕೆಲವು ಬಲಿಷ್ಟ ಉದ್ವೇಗಗಳು ಅಥವಾ ಪ್ರೇರಣೆಗಳು ಜನಸಂದಣಿಯನ್ನು ರೂಪಿಸುವುದೆಂದು **ಬರ್ನಾರ್ಡ್** ಅಭಿಪ್ರಾಯಪಟ್ಟಿದ್ದಾನೆ.

೧೦. ಹೆಚ್ಚಿದ ಸೂಚ್ಯತೆ

ಜನಸಂದಣಿಯಲ್ಲಿ ಸದಸ್ಯರು ಪರಸ್ಪರ ಪ್ರಭಾವಕ್ಕೆ ಒಳಗಾಗುವರು. ಅವರಲ್ಲಿ ಸಲಹೆಗಳನ್ನು ಸ್ವೀಕರಿಸುವ ಸೂಚ್ಯತೆಯ ಮಟ್ಟ ಹೆಚ್ಚಿರುವುದು. ಹಾಗಾಗಿ ಇನ್ನಿತರ ಸದಸ್ಯರು ಹೇಳಿದ ಹಾಗೆ ಮಾಡುವರು ಅಥವಾ ಇನ್ನಿತರರು ಮಾಡತೊಡಗಿದ ಚಟುವಟಿಕೆಗಳಲ್ಲಿ ತೊಡಗುವರು. ಕಾಲೇಜು ವಿದ್ಯಾರ್ಥಿಗಳು ಮುಷ್ಕರದಲ್ಲಿ ಪಾಲ್ಗೊಂಡಾಗ, ಒಬ್ಬ ವಿದ್ಯಾರ್ಥಿಯು ಸರಕಾರಿ ಬಸ್ಸಿನ ಗಾಜುಗಳಿಗೆ ಕಲ್ಲೆಸೆದರೆ, ಇನ್ನಿತರ ಸದಸ್ಯರು ಅವರ ಅಂತಿಮ ಪರಿಣಾಮದ ಬಗ್ಗೆ ಯೋಚಿಸದೆ ಗಾಜುಗಳತ್ತ ಕಲ್ಲೆಸೆಯುವರು. ಯಾರಾದರೂ ಅದನ್ನು ವಿರೋಧಿಸಿದರೆ ಅವರು ಸಹಿಸಲಾರರು.

೧೧. ಕೆಳಮಟ್ಟದ ಮಾನಸಿಕ ಸ್ಥಿತಿ

ಜನಸಂದಣಿಯ ಸದಸ್ಯರು ಭಾವೋದ್ವೇಗಗಳಿಗೆ ಒಳಗಾಗುವ ಕಾರಣ, ಇನ್ನಿತರರು ವ್ಯಕ್ತಪಡಿಸಿದ ಅಭಿಪ್ರಾಯಗಳು ಸರಿಯೋ ಅಲ್ಲವೋ ಎಂದು ವಿಚಾರ ಮಾಡಲಾರರು. ಒಬ್ಬ ಉತ್ತಮವಾಗಿ ಚೆನ್ನಾಗಿ ಬಣ್ಣದ ಮಾತುಗಳನ್ನು ಆಡುವ ಮೂಲಕ ಜನಸಂದಣಿಯನ್ನು ಮರುಳಗೊಳಿಸಬಹುದು. ಎಲ್ಲರ ಗಮನವನ್ನು ವಶೀಕರಣ ಮಾಡಿಕೊಳ್ಳಬಹುದು. ಉದ್ವೇಗದ ಭರದಲ್ಲಿ ಜನರು ವಿಚಾರ ಮಾಡುವ ಶಕ್ತಿಯನ್ನು ಕಳೆದುಕೊಳ್ಳುವರು.

೧೨. ಆಂತರಿಕ ಉತ್ತೇಜನ

ಜನಸಂದಣಿಯ ಸದಸ್ಯರು ಪರಸ್ಪರ ಭಾವೋದ್ವೇಗಳಿಗೆ ಒಳಗಾಗುವರು. ಒಬ್ಬರಿಂದ

ಇನ್ನೊಬ್ಬರು ಉತ್ತೇಜನ ಪಡೆಯುವರು, ಪ್ರಚೋದನೆ ಹೊಂದುವರು. ಸದಸ್ಯರ ಸಂಖ್ಯೆ ಹೆಚ್ಚಿದಂತೆ ಜನಸಂದಣಿಯ ಬಲವೂ ಹೆಚ್ಚುತ್ತದೆ.

೧೩. ಅದುಮಿಡಲ್ಪಟ್ಟ ಪ್ರವೃತ್ತಿಗಳ ಕೆರಳುವಿಕೆ

ಸಾಮಾನ್ಯ ಸಮಯದಲ್ಲಿ ವ್ಯಕ್ತಿಯು ತನ್ನ ಅನೇಕ ಪ್ರವೃತ್ತಿಗಳನ್ನು ಅದುಮಿಟ್ಟುಕೊಂಡಿರುವನು. ತನ್ನ ಕೆಲವು ಆಸೆಗಳಿಗೆ ಕಡಿವಾಣ ಹಾಕುವನು. ಅವು ಒಳಗೆ ಹುದುಗಿದ್ದು ಸೂಕ್ತ ಸಮಯಕ್ಕೆ ಹೊರಬರಲು ಕಾಯುತ್ತಿರುತ್ತವೆ. ಜನಸಂದಣಿಯಂತಹ ಸನ್ನಿವೇಶಗಳಲ್ಲಿ ಅವುಗಳಿಗೆ ಸುರಕ್ಷತಾ ಮಾರ್ಗ ದೊರೆತು ಸ್ಫೋಟಿಸುವವು. ಹಿಡಿದಿಟ್ಟ ಪ್ರವೃತ್ತಿಗಳು ಕೆರಳುವ ಕಾರಣ ಬುದ್ಧಿವಂತ ವ್ಯಕ್ತಿಗಳೂ ಸಹ ಜನಸಂದಣಿಯಲ್ಲಿ ಮತಿಭ್ರಮಣೆಯಾದವರ ರೀತಿ ವರ್ತಿಸುವರು. ಜನಸಂದಣಿಯಲ್ಲಿ ಎಂತಹ ಹೀನ-ಅನೈತಿಕ ಕಾರ್ಯವೂ ಸದಸ್ಯರಿಗೆ ಸರಿಯೆಂದು ತೋರಿಬರುವುದು. ಅತ್ಯಾಚಾರ, ದೊಂಬಿ, ಗಲಾಟೆಗಳಲ್ಲಿ ತೊಡಗಲು ಸದಸ್ಯರು ಹಿಂಜರಿಯಲಾರರು.

ಜನಸಂದಣಿಯಲ್ಲಿ ವ್ಯಕ್ತಿಯ ವರ್ತನೆಯು ಮೂಲ ಪ್ರವೃತ್ತಿಗಳು ಮತ್ತು ಉದ್ವೇಗಗಳ ಆಧೀನಗೊಳಪಟ್ಟಿರುವುದು. ಇಲ್ಲಿ ಅವನ ಸೂಚ್ಯತೆ, ಭಾವುಕತೆ ಮತ್ತು ಉದ್ವೇಗಗಳು ಗರಿಷ್ಠ ಪ್ರಮಾಣದಲ್ಲಿ ಹೆಚ್ಚಾಗಿರುವವು. ವಿಚಾರ ಪರತೆಯ ಅಭಾವ, ನಾಯಕನ ಪ್ರಭಾವ, ನೈತಿಕತೆ ಪ್ರಜ್ಞೆಯ ಕೊರತೆಗಳಿಂದಾಗಿ ವ್ಯಕ್ತಿಯು ಜನಸಂದಣಿಯಲ್ಲಿ ಎಂತಹ ದುಷ್ಕೃತ್ಯಗಳನ್ನು ಮಾಡಲು ಹಿಂಜರಿಯನು.

ಪ್ರೇಕ್ಷಕ ವರ್ಗ

ಪ್ರೇಕ್ಷಕ ವರ್ಗದ ಅರ್ಥ ಮತ್ತು ಲಕ್ಷಣಗಳು

ಹಲವು ಜನರು ನಿರ್ದಿಷ್ಟ ಉದ್ದೇಶಕ್ಕೋಸ್ಕರ, ಒಂದು ನಿಶ್ಚಿತ ಸ್ಥಳದಲ್ಲಿ ನಿಗದಿತ ಸಮಯಕ್ಕೆ ಸಂಧಿಸುವರು. ಇಂತಹ ಜನರ ಗುಂಪಿಗೆ ಪ್ರೇಕ್ಷಕ ವರ್ಗವೆನ್ನಬಹುದು. ಉದಾಹರಣೆಗೆ, ಕ್ರಿಕೆಟ್ ಆಟ ನೋಡಲು ಆಟದ ಮೈದಾನಕ್ಕೆ ಹೋಗುವವರ ಗುಂಪು, ರಾಜಕೀಯ ನಾಯಕರ ಭಾಷಣ ಕೇಳಲು ಹೋಗುವ ಗುಂಪುಗಳು ಪ್ರೇಕ್ಷಕ ವರ್ಗಗಳಾಗಿವೆ. ಪ್ರೇಕ್ಷಕ ವರ್ಗ ಅಲ್ಪಮಟ್ಟಿಗೆ ಸಂಘಟಿತವಾಗಿದ್ದು ಒಟ್ಟು ಸೇರಿದ ಪ್ರೇಕ್ಷಕರು ನಿರ್ದಿಷ್ಟ ನಿಯಮಗಳನ್ನು ಪರಿಪಾಲಿಸುಬೇಕಾಗುವುದು. ಕೆಲವು ನಿರ್ದಿಷ್ಟ ನಿಯಮಗಳನ್ನು ಪರಿಪಾಲಿಸಬೇಕಾಗುವುದು. ಕೆಲವು ನಿರ್ದಿಷ್ಟ ನಿಯಮಗಳನ್ನು ಆಧಾರವಾಗಿಟ್ಟುಕೊಂಡು ನಿರ್ದಿಷ್ಟ ಅವಧಿಗಾಗಿ ಅಸ್ತಿತ್ವಕ್ಕೆ ಬರುವ ಜನಸಂದಣಿಯೇ ಪ್ರೇಕ್ಷಕ ವರ್ಗ.

ಕಿಂಬಾಲ್ ಯಂಗ್‌ನ ಪ್ರಕಾರ "ಪ್ರೇಕ್ಷಕ ವರ್ಗವು ಸಾಂಸ್ಥಿಕ ಜನಸಂದಣಿಯ ರೂಪವಾಗಿದೆ".

ಸ್ಪ್ರೋಟ್‌ನ ಪ್ರಕಾರ "ನಾವು ಪ್ರೇಕ್ಷಕ ವರ್ಗವನ್ನು ಸಾಂಸ್ಥಿಕ ಜನಸಂದಣಿಯೆಂದು ಕರೆಯಲು ಕಾರಣವೆಂದರೆ, ಪ್ರೇಕ್ಷಕ ವರ್ಗ ಎಂದು ನಾವು ಕರೆಯುವ ಹೆಚ್ಚಿನ ಸನ್ನಿವೇಶಗಳಲ್ಲಿ

ಸಮಾಜ ಮನ್ನಿತವಾದ ವರ್ತನೆ, ಔಪಚಾರಿಕ ಉದ್ಘಾಟನೆ ಮತ್ತು ಔಪಚಾರಿಕ ಮುಕ್ತಾಯಗಳಿರುವವು".

ಲಕ್ಷಣಗಳು

೧. ನಿರ್ದಿಷ್ಟ ಉದ್ದೇಶ

ಪ್ರತಿಯೊಂದು ಪ್ರೇಕ್ಷಕ ವರ್ಗಕ್ಕೆ ನಿರ್ದಿಷ್ಟ ಉದ್ದೇಶವಿರುವುದು. ನಾಟಕ ನೋಡಲು, ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳಲು, ಸಿನೇಮಾ ನೋಡಲು ಇತ್ಯಾದಿ ನಿರ್ದಿಷ್ಟ ಉದ್ದೇಶದಿಂದಾಗಿ ಪ್ರೇಕ್ಷಕರು ಒಂದೆಡೆ ಸೇರುವರು.

೨. ಪೂರ್ವ ನಿಗದಿತ ಸ್ಥಳ ಮತ್ತು ವೇಳೆ

ಪ್ರೇಕ್ಷಕವರ್ಗವು ಒಂದು ನಿರ್ದಿಷ್ಟ ಸ್ಥಳದಲ್ಲಿ ಮತ್ತು ಮುಂಚೆಯೇ ನಿರ್ಧಾರವಾದ ವೇಳೆಯಲ್ಲಿ ಸೇರುವುದು. ಅಂದರೆ ಕಾರ್ಯಕ್ರಮದ ಪೂರ್ವ ನಿಯೋಜನೆಯನ್ನು ಇಲ್ಲಿ ಕಾಣಬಹುದು. ಕಾರ್ಯಕ್ರಮದ ಪೂರ್ವ ನಿಯೋಜನೆಯನ್ನು ಇಲ್ಲಿ ಕಾಣಬಹುದು. ಕಾರ್ಯಕ್ರಮದ ಸ್ಥಳ ಮತ್ತು ವೇಳೆಯನ್ನು ಮೊದಲೆ ಗೊತ್ತುಪಡಿಸಲಾಗಿರುವುದು. ಸೇರತಕ್ಕಂತಹ ಪ್ರೇಕ್ಷಕರಿಗೆ ಸ್ಥಳಾವಕಾಶವನ್ನು ಒದಗಿಸುವ ವ್ಯವಸ್ಥೆಯಿರುವುದು. ಇದು ಜನಸಂದಣಿಯಂತೆ ಯಾವ ಕ್ಷಣದಲ್ಲಾದರೂ ರಚನೆಗೊಳ್ಳುವಂತಹುದಲ್ಲ.

೩. ಕಾರ್ಯನಿರ್ವಾಹಕ ಮತ್ತು ಪ್ರೇಕ್ಷಕವರ್ಗದ ನಡುವೆ ಅಂತಃಕ್ರಿಯೆ ಒಡಮೂಡುವುದು

ಪ್ರೇಕ್ಷಕ ವರ್ಗವು ಕಾರ್ಯನಿರ್ವಾಹಕನೆಡೆಗೆ ಗಮನವೀಯುವುದು. ಅವನ ಮಾತು, ಕ್ರಿಯೆ, ಹಾವ-ಭಾವಗಳು ಪ್ರೇಕ್ಷಕ ವರ್ಗದ ಮೇಲೆ ಪರಿಣಾಮ ಬೀರುವವು. ನಾಟಕದಲ್ಲಿ ದುರಂತ ದೃಶ್ಯ ಬಂದಾಗ ನಟಿಯ ಕಷ್ಟ, ರೋದನ ಕಂಡು ಎಷ್ಟೋ ಜನ ಪ್ರೇಕ್ಷಕರು ಕಣ್ಣೀರಿಡುವರು. ವಿದೂಷಕರು ಹಾವಭಾವ ಮತ್ತು ಹಾಸ್ಯ ಚಟಾಕಿಗಳನ್ನು ಹಾರಿಸುವ ಮೂಲಕ ನಗೆಯಾಡುವಾಗ ಪ್ರೇಕ್ಷಕರು ನಗೆಯಾಡುವರು. ನಾಟಕದಲ್ಲಿ ಗಂಭೀರ ಸನ್ನಿವೇಶವಿದ್ದಾಗ ಪ್ರೇಕ್ಷಕರೂ ಸಹ ಗಂಭೀರವದನರಾಗಿ ಕುಳಿತುಕೊಳ್ಳುವರು.

ಜನಸಂದಣಿ ಮತ್ತು ಪ್ರೇಕ್ಷಕ ವರ್ಗಗಳ ನಡುವಿನ ಭಿನ್ನತೆಗಳು

ಜನಸಂದಣಿ ಮತ್ತು ಪ್ರೇಕ್ಷಕ ವರ್ಗಗಳ ಪ್ರಮುಖ ಭಿನ್ನತೆಗಳು ಈ ಕೆಳಗಿನಂತಿವೆ.

ಜನಸಂದಣಿ	ಪ್ರೇಕ್ಷಕವರ್ಗ
೧. ಜನಸಂದಣಿಗೆ ಪೂರ್ವನಿರ್ಧಾರಿತ ಗುರಿ ಎಂಬುವುದಿರುವುದಿಲ್ಲ.	೧. ಪ್ರೇಕ್ಷಕ ವರ್ಗವು ಪೂರ್ವ ನಿರ್ಧಾರಿತ ಉದ್ದೇಶಕ್ಕಾಗಿ ಅಸ್ತಿತ್ವಕ್ಕೆ ಬರುವುದು.
೨. ಜನಸಂದಣಿಯ ಸದಸ್ಯರು ತಾವಾಗಿ ಘಟನೆಯ ಸ್ಥಳಕ್ಕೆ ಧಾವಿಸುವರು. ಅವರನ್ನು ಆಹ್ವಾನಿಸಬೇಕಿಲ್ಲ. ಉದಾಹರಣೆಗೆ, ದಾರಿಯಲ್ಲಿ ಒಂದು	೨. ಪ್ರೇಕ್ಷಕ ವರ್ಗದ ಪ್ರೇಕ್ಷಕರನ್ನು ಆಹ್ವಾನಿಸಲಾಗಿರುವುದು. ಆಹ್ವಾನದ ಮೇರೆಗೆ ಜನರು ನಿಗದಿಪಡಿಸಿದ ಸ್ಥಳಕ್ಕೆ ಹಾಜರಾಗುವರು ಉದಾ: ಕಾಲೇಜು ವಾರ್ಷಿಕೋ

ಅಪಘಾತ ಸಂಭವಿಸಿದರೆ ಜನರು ಕುತೂಹಲದಿಂದ ಶೀಘ್ರ ಬಂದು ಸೇರುವರು.	ತ್ಸವ. ಇದಕ್ಕೆ ವಿದ್ಯಾರ್ಥಿ, ವಿದ್ಯಾರ್ಥಿಗಳ ಹೆತ್ತವರನ್ನು, ಅಧಿಕಾರಿಗಳನ್ನು ಸಾರ್ವಜನಿಕರನ್ನು ಆಹ್ವಾನಿಸಲಾಗುತ್ತದೆ.
೩. ಜನಸಂದಣಿಯು ಯಾವ ಕ್ಷಣದಲ್ಲಿ ಯಾವ ಸ್ಥಳದಲ್ಲಿ ಅಸ್ತಿತ್ವಕ್ಕೆ ಬರಬಹುದೆಂದು ಅಂದಾಜಿಸಲಾಗದು. ಅದು ಯಾವ ಕ್ಷಣದಲ್ಲಾದರೂ ರಚನೆಗೊಳ್ಳಬಹುದು. ಒಂದು ಅಪಘಾತ ಯಾವ ಸ್ಥಳದಲ್ಲಿ ಯಾವ ಸಮಯದಲ್ಲಿ ಜರುಗಿ ಜನಸಂದಣಿ ಸೇರುತ್ತದೆಂದು ಹೇಳಲಾಗದು.	೩. ಪ್ರೇಕ್ಷಕವರ್ಗದಲ್ಲಿ ಪ್ರೇಕ್ಷಕರನ್ನು ಆಹ್ವಾನಿಸಲಾಗಿರುತ್ತದೆಂದು ಈಗಾಗಲೇ ತಿಳಿದಿದ್ದೇವೆ. ಪ್ರೇಕ್ಷಕರಿಗೆ ಆಹ್ವಾನ ಕೊಡಬೇಕೆಂದಾದರೆ ಸ್ಥಳ ಮತ್ತು ವೇಳೆಯನ್ನು ಮೊದಲೆ ನಿರ್ಧರಿಸಬೇಕಾಗುವುದು. ಹಾಗೆ ನಿರ್ಧರಿಸಿದಲ್ಲಿ ಮಾತ್ರ ಜನರಿಗೆ ಆ ಸ್ಥಳದಲ್ಲಿ, ನಿಗದಿತ ಸಮಯದಲ್ಲಿ ಒಟ್ಟುಗೂಡಲು ಸಾಧ್ಯವಾಗುತ್ತದೆ.
೪. ಸದಸ್ಯರು ಒಬ್ಬರೊಬ್ಬರು ಭೌತಿಕ ಸಾಮೀಪ್ಯವನ್ನು ಹೊಂದಿದ್ದು, ಪರಸ್ಪರ ಉತ್ತೇಜನ ನೀಡುವರು.	೪. ಇಲ್ಲಿ ಉಳಿದ ಪ್ರೇಕ್ಷಕರ ಹಾಜರಾತಿಯಿಂದಾಗಿ ವ್ಯಕ್ತಿಯ ವರ್ತನೆಯು ಉತ್ತೇಜಿತಗೊಳ್ಳದು.
೫. ಜನಸಂದಣಿಯಲ್ಲಿ ಜನರ ವರ್ತನೆಯು ನಿರ್ದಿಷ್ಟ ರೀತಿಯಲ್ಲಿರದು. ಹೆಚ್ಚಿನ ಸೂಚ್ಯತೆ, ನಾಯಕನ ಪ್ರಭಾವ, ಉದ್ವೇಗಗಳ ತುಡಿತಗಳಿಂದಾಗಿ ಸದಸ್ಯರೆಲ್ಲ ಮನಬಂದಂತೆ ವರ್ತಿಸುವರು.	೫. ಪ್ರೇಕ್ಷಕ ವೃಂದದಲ್ಲಿ ನಿಯಮಗಳಿರುವ ಕಾರಣ ಪ್ರೇಕ್ಷಕರು ನಿರ್ದಿಷ್ಟವಾದ ರೀತಿಯಲ್ಲಿ ಶಿಸ್ತುಬದ್ಧವಾಗಿ ವರ್ತಿಸುವರು.
೬. ಜನಸಂದಣಿಯಲ್ಲಿ ಸದಸ್ಯರು ಉದ್ವೇಗಗಳಿಂದ ಉತ್ತೇಜಿತರಾಗುವ ಕಾರಣ ಅವರನ್ನು ನಿಯಂತ್ರಿಸುವುದು ಕಷ್ಟದ ಕಾರ್ಯವಾಗಿದೆ. ಜನಸಂದಣಿಯು ಅನಿಯಂತ್ರಿತವಾದುದು.	೬. ಪ್ರೇಕ್ಷಕ ವೃಂದದ ಸದಸ್ಯರು ಔಚಿತ್ಯವನ್ನರಿತು ನಡೆದುಕೊಳ್ಳುವರು. ಯಾವುದಾದರೂ ವ್ಯಕ್ತಿಯು ಉದ್ವೇಗಗಳಿಗೊಳಗಾಗಿ ಗಲಾಟೆ ಮಾಡಿದರೆ ಉಳಿದ ಪ್ರೇಕ್ಷಕರು ಸಹಿಸುವುದಿಲ್ಲ. ಅವನ ವರ್ತನೆಯನ್ನು ಖಂಡಿಸುವರು.
೭. ಜನಸಂದಣಿಯಲ್ಲಿ ಪಾಲ್ಗೊಂಡ ಜನರ ಬುದ್ಧಿ ಕೆಳಮಟ್ಟದಲ್ಲಿರುವುದು. ಅತಿ ಬುದ್ಧಿವಂತರೂ ಸಹ ಮತಿಭ್ರಣೆಯಾದವರ ರೀತಿಯಲ್ಲಿ ವರ್ತಿಸುವರು.	೭. ಪ್ರೇಕ್ಷಕ ವೃಂದದಲ್ಲಿ ಜನರು ತಮ್ಮ ಬುದ್ಧಿಮತ್ತೆಯನ್ನು ಕಳೆದುಕೊಳ್ಳಲಾರರು. ಅವರು ಶಿಸ್ತುಬದ್ಧವಾಗಿ ವರ್ತಿಸಲು ಪ್ರಯತ್ನಿಸುವರು.
೮. ಜನಸಂದಣಿಯು ಅಸಂಘಟಿತ,	೮. ಪ್ರೇಕ್ಷಕ ವೃಂದವು ಸಂಘಟಿತವು, ಕ್ರಮ

ಕ್ರಮರಹಿತ ಮತ್ತು ಅನಿಯಂತ್ರಿತ ವಾದುದಾಗಿರುವುದು.	ಬದ್ಧವೂ ಮತ್ತು ನಿಯಂತ್ರಿತವಾಗಿಯೂ ಇರುವುದು.
೬. ಜನಸಂದಣಿಯ ಸದಸ್ಯರ ಸಂಖ್ಯೆ ಹೆಚ್ಚಿದಂತೆ ಅದರ ಬಲವೂ ವೃದ್ಧಿ ಗೊಳ್ಳುವುದು. ಅನೇಕ ಜನರ ಬೆಂಬಲ ದಿಂದಾಗಿ ಸದಸ್ಯರು ಹೇಯ ಕೃತ್ಯಗಳ ನ್ನೆಸಗಲು ಹಿಂಜರಿಯಲಾರರು.	೬. ಸದಸ್ಯರ ಸಂಖ್ಯೆ ಪ್ರೇಕ್ಷಕರ ಮೇಲೆ ಹೆಚ್ಚಿನ ಪ್ರಭಾವ ಬೀರದು.

ಜನಸಂದಣಿ ಮತ್ತು ಪ್ರೇಕ್ಷಕ ವೃಂದದ ಮಧ್ಯೆ ಭಿನ್ನತೆಗಳಿರುವಂತೆ, ಅವುಗಳ ನಡುವೆ ಹಲವು ಸಾಮ್ಯತೆಗಳನ್ನು ಗುರುತಿಸಬಹುದಾಗಿದೆ. ಜನಸಂದಣಿ ಮತ್ತು ಪ್ರೇಕ್ಷಕ ವರ್ಗಗಳೆರಡರಲ್ಲೂ ಜನರು ಭೌತಿಕ ಸಾಮೀಪ್ಯವನ್ನು ಹೊಂದಿರುವರು. ಇವೆರಡರಲ್ಲೂ ಗಮನ ಸೆಳೆಯುವ ಕೇಂದ್ರಬಿಂದು ಇಲ್ಲವೆ ಸಾಮಾನ್ಯ ಆಸಕ್ತಿಯಿರುವುದು. ಕೆಲವು ಸಲ ಉದ್ವೇಗ ಎರಡರಲ್ಲೂ ಕಾಣಬರುತ್ತದೆ.

ಜನಸಂದಣಿಯ ಬಗೆಗಳು

ಜನಸಂದಣಿಯ ಸ್ವಭಾವ ವೈಚಿತ್ರ್ಯವು ವ್ಯಕ್ತಿಯ ಸ್ವಭಾವ ವೈಚಿತ್ರ್ಯಕ್ಕಿಂತಲೂ ಭಿನ್ನವಾದುದು. ಜನಸಂದಣಿಯಲ್ಲಿ ಪಾಲ್ಗೊಂಡ ತಕ್ಷಣ ವ್ಯಕ್ತಿಯ ವರ್ತನೆಯಲ್ಲಿ ಆಮೂಲಾಗ್ರ ಪರಿವರ್ತನೆ ತೋರಿಬರುವುದು. ಎಲ್ಲ ಜನಸಂದಣಿಗಳು ಒಂದೇ ತೆರನಾಗಿರಲಾರವು. ಕೆಲವು ಜನಸಂದಣಿಗಳು ಇನ್ನುಳಿದವುಗಳಿಗಿಂತ ಹೆಚ್ಚು ಆಕ್ರಮಣಕಾರಿಯಾಗಿರುವವು, ಕೆಲವು ಸಮೂಹಗಳು ಹೆಚ್ಚು ಕ್ರಿಯಾಶೀಲವಾಗಿದ್ದರೆ ಇನ್ನುಳಿದವು ಕಡಿಮೆ ಕ್ರಿಯಾಶೀಲವಾಗಿರುತ್ತವೆ.

ಬ್ಲೂಮರ್ ಜನಸಂದಣಿಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಿದ್ದಾನೆ.

೧. ಆಕಸ್ಮಿಕವಾದ ಜನಸಂದಣಿ

೨. ಸಾಂಪ್ರದಾಯಿಕ ಜನಸಂದಣಿ

೩. ಸೂಚಕ ಜನಸಂದಣಿ

೪. ಕ್ರಿಯಾಶೀಲ ಜನಸಂದಣಿ

ಲೆಬನ್ ಜನಸಂದಣಿಗಳಲ್ಲಿ ಎರಡು ಬಗೆಗಳನ್ನು ಗುರುತಿಸಿದ್ದಾನೆ.

೧. ಸಾದೃಶ್ಯತೆಯ ಜನಸಂದಣಿ

೨. ವಿಷಮ ರೂಪದ ಜನಸಂದಣಿ

ಸಾಮಾನ್ಯವಾಗಿ ಜನಸಂದಣಿಗಳನ್ನು ಎರಡು ಪ್ರಮುಖ ವಿಧಗಳಾಗಿ ಗುರುತಿಸಲಾಗುವುದು.

೧. ಕ್ರಿಯಾಶೀಲ ಜನಸಂದಣಿ

೨. ವಿಶ್ರಾಂತ ಜನಸಂದಣಿ

- ಜನಸಂದಣಿ
  - ಕ್ರಿಯಾಶೀಲ ಜನಸಂದಣಿ
    - ಆಕ್ರಮಣಕಾರಿ ಜನಸಂದಣಿ
    - ದಿಗಿಲುಗೊಂಡ ಜನಸಂದಣಿ
    - ಅರ್ಜನೇಚ್ಛುಕ ಜನಸಂದಣಿ
    - ಸೂಚಕ ಜನಸಂದಣಿ
  - ವಿಶ್ರಾಂತ ಜನಸಂದಣಿ
    - ಮಾಹಿತಿ ಕೋರುವ ಜನಸಂದಣಿ
    - ರೂಪಾಂತರ ಜನಸಂದಣಿ
    - ಮನರಂಜನೆ ಬಯಸುವ ಜನಸಂದಣಿ
    - ಕಾಲಾಳು ಅಥವಾ ಪಾದಚಾರಿ ಜನಸಂದಣಿ

I. ಕ್ರಿಯಾಶೀಲ ಜನಸಂದಣಿ

ಕ್ರಿಯಾಶೀಲ ಜನಸಂದಣಿಯು ಸಾಮಾನ್ಯ ಉದ್ದೇಶದಿಂದ ಪ್ರಚೋದಿಸಲ್ಪಡುವುದು ಮತ್ತು ಅದರ ಅಂತಿಮ ಗುರಿ ಒಂದೇಯಾಗಿರುವುದು. ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪ್ರಾಂಶುಪಾಲರ ಕೊಠಡಿಗೆ ನುಗ್ಗಿ ಕಡಿಮೆ ಹಾಜರಾತಿ ಇರುವವರನ್ನೊಳಗೊಂಡು ಎಲ್ಲ ವಿದ್ಯಾರ್ಥಿಗಳಿಗೂ ಪೂರ್ತಿ ಹಾಜರಾತಿ ಕೊಡಬೇಕು, ಎಲ್ಲರಿಗೂ ಪರೀಕ್ಷೆಗೆ ಹಾಜರಾಗಲು ಬಿಡಬೇಕೆಂದು ಆಗ್ರಹಿಸಿ, ಕಾನೂನಿನ ತೊಡಕಿನಿಂದಾಗಿ ಪ್ರಾಂಶುಪಾಲರು ಅವರ ಬೇಡಿಕೆಗೆ ಒಪ್ಪದಿದ್ದಾಗ, ಕಚೇರಿಗೆ ಕಲ್ಲೆಸೆಯಲು ಪ್ರಾರಂಭಿಸಿದರೆ ಅದು ಕ್ರಿಯಾಶೀಲ ಜನಸಂದಣಿ ಎಂದೆನಿಸುವುದು. ಈ ಜನಸಂದಣಿಯು ಸಾಮಾನ್ಯ ಪ್ರೇರಣೆಗಳಿಂದ ಪ್ರಚೋದಿತಗೊಂಡು ಕ್ರಿಯಾಶೀಲವಾಗುವುದು. ಇಂತಹ ಸನ್ನಿವೇಶಗಳಲ್ಲಿ ಎಲ್ಲ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅಂತಿಮ ಗುರಿ ಸಾಧನೆಗಾಗಿ ಒಂದೇ ರೀತಿಯ ವರ್ತನೆಯನ್ನು ಪ್ರದರ್ಶಿಸುವರು.

ಕ್ರಿಯಾಶೀಲ ಜನಸಂದಣಿಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳು ಇಂತಿವೆ.

೧. ಆಕ್ರಮಣಕಾರಿ ಜನಸಂದಣಿ

೨. ದಿಗಿಲುಗೊಂಡ ಜನಸಂದಣಿ

೩. ಅರ್ಜನೇಚ್ಛುಕ ಜನಸಂದಣಿ

೪. ಸೂಚಕ ಜನಸಂದಣಿ

೧. ಆಕ್ರಮಣಕಾರಿ ಜನಸಂದಣಿ

ಈ ಬಗೆಯ ಜನಸಂದಣಿಯ ಸದಸ್ಯರು ಆಕ್ರಮಣಕಾರಿ ಮನೋಭಾವ ಹೊಂದಿದ್ದು, ಎಂತಹುದೇ ಹಾನಿಕಾರಕ ಮತ್ತು ಅಮಾನವೀಯ ಕೃತ್ಯಗಳನ್ನೆಸಗಬಲ್ಲರು. ಕೊಳ್ಳಿ ಇಡುವಿಕೆ, ಕೊಲೆ, ಸುಲಿಗೆ, ಲೂಟಿ, ಅತ್ಯಾಚಾರ, ಮಾನಸಿಕ ಹಿಂಸೆ ಕೊಡುವಿಕೆ, ಇತ್ಯಾದಿ ಚಟುವಟಿಕೆಗಳನ್ನು ಆಕ್ರಮಣಕಾರಿ ಜನಸಂದಣಿಯು ಮಾಡುವ ಸಾಧ್ಯತೆಯಿರುವುದು. ಜನರು ಉದ್ರೇಕಗೊಂಡು, ಆವೇಶದ ಭರದಲ್ಲಿ ಎಂತಹ ಹೀನಕೃತ್ಯಗಳನ್ನು ಎಸಗಬಲ್ಲರು. ಅಯೋಧ್ಯೆಯ ಗಲಭೆಯಾದ ಸಂದರ್ಭದಲ್ಲಿ ದೇಶದ ಕೆಲವೆಡೆ ಕೋಮುದ್ವೇಷದ ಜ್ವಾಲೆ

ಭುಗಿಲೆದ್ದು, ಹಿಂದುಗಳು ಮುಸ್ಲಿಮರ ಮನೆ ಮತ್ತು ಅಂಗಡಿಗಳನ್ನು ಸುಟ್ಟು ಹಾಕಿದ್ದನ್ನು ಅದೇ ತೆರನಾಗಿ ಮುಸ್ಲಿಮರು ಹಿಂದೂಗಳ ಮನೆ ಮುಂಗಟ್ಟುಗಳನ್ನು ಸುಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

೨. ದಿಗಿಲುಗೊಂಡ ಜನಸಂದಣಿ

ಭಯದಿಂದ ಜರ್ಜರಿತಗೊಂಡ ಜನಸಂದಣಿಯೇ ದಿಗಿಲುಗೊಂಡ ಜನಸಂದಣಿ. ಜನರು ತಮ್ಮ ಜೀವವನ್ನು ಉಳಿಸಿಕೊಳ್ಳಲು ಎಲ್ಲೆಂದರಲ್ಲಿ ಭಯಭೀತರಾಗಿ ಓಡುವರು. ಒದಗಿ ಬಂದ ಅಪಾಯದ ಬಗ್ಗೆ ಈ ಜನಸಂದಣಿಯ ಹೆಚ್ಚಿನ ಸದಸ್ಯರಿಗೆ ತಿಳಿದಿರುವುದು. ಇನ್ನು ಕೆಲವರು ಇತರರು ಭೀತಿಗೊಂಡು ಓಡುವುದನ್ನು ನೋಡಿ ಏನೋ ಅಪಾಯವಿದೆಯಂದರಿತು ತಾವೂ ದಿಕ್ಕಾಪಾಲಾಗಿ ಓಡುವುದು. ಕಾಲೇಜು ವಿದ್ಯಾರ್ಥಿಗಳು ಮುಷ್ಕರ ನಿರತರಾದಾಗ ಬಸ್ಸಿಗೆ ಬೆಂಕಿ ಇಡಲು ಪ್ರಯತ್ನಿಸಿದರೆ, ಪೋಲೀಸರು ಅಶ್ರುವಾಯು ಪ್ರಯೋಗ ಇಲ್ಲವೆ ಲಾಠಿ ಚಾರ್ಜು ಪ್ರಾರಂಭಿಸುವರು. ಅಂತಹ ಸಮಯದಲ್ಲಿ ವಿದ್ಯಾರ್ಥಿಗಳು ಭಯಗೊಂಡು ಜೀವ ರಕ್ಷಣೆಗಾಗಿ ಸಂದಿಗೊಂದಿಗಳಲ್ಲಿ ಓಡುವರು. ಭಯಭೀತಗೊಂಡ ಜನಸಂದಣಿಯಲ್ಲಿ ನಾಯಕನಿರಲಾರ.

ಆಕ್ರಮಣಕಾರಿ ಜನಸಂದಣಿಯಲ್ಲಿ ಸದಸ್ಯರು ಉದ್ವೇಗ ಮತ್ತು ಆವೇಶಭರಿತರಾಗಿರುವರು. ಆದರೆ ದಿಗಿಲುಗೊಂಡ ಜನಸಂದಣಿಯಲ್ಲಿ ಜನರು ಭಯಭೀತರಾಗಿರುವರು. ಆಕ್ರಮಣಕಾರಿ ಜನಸಂದಣಿಯ ಸದಸ್ಯರು ಉಪದ್ರವ ಮತ್ತು ಹಾನಿಯನ್ನುಂಟು ಮಾಡುವರು. ಆದರೆ ದಿಗಿಲುಗೊಂಡ ಜನಸಂದಣಿಯ ಸದಸ್ಯರು ತಮ್ಮ ಜೀವಗಳನ್ನು ಉಳಿಸಿಕೊಳ್ಳುವ ಆಶೆ ಉಳ್ಳವರಾಗಿರುವರು. ಆಕ್ರಮಣಕಾರಿ ಜನಸಂದಣಿಯಲ್ಲಿ ನಾಯಕ ಹೇಳಿದ್ದನ್ನು ಉಳಿದವರು ಚಾಚೂ ತಪ್ಪದೆ ನಿರ್ವಹಿಸುವರು. ಆದರೆ ದಿಗಿಲುಗೊಂಡ ಜನಸಂದಣಿಯಲ್ಲಿ ಯಾವ ಸದಸ್ಯನಿಗೂ ನಾಯಕನಾಗಲು ಇಲ್ಲವೆ ನಾಯಕನಾದವನೆಡೆಗೆ ಗಮನವೀಯಲು ಸಮಯವಿರುವುದಿಲ್ಲ.

೩. ಅನುಕೂಲ ಪಡೆಯಲು ಸೇರುವ ಜನಸಂದಣಿ

ಅರ್ಜನೇಚ್ಛುಕ ಜನಸಂದಣಿಯ ಪ್ರತಿಯೊಬ್ಬ ಸದಸ್ಯನು ಏನೋ ಒಂದಿಷ್ಟನ್ನು ಪಡೆದುಕೊಳ್ಳಲು ಅರ್ಜಿಸಲು ಹಾತೊರೆಯುವನು. ಯಾವುದಾದರೂ ನಿರ್ದಿಷ್ಟ ವಸ್ತುವನ್ನು ಪಡೆಯಲೋಸುಗ ಜನರು ಸೇರುವರು. ಉದಾಹರಣೆಗೆ ರೇಶನ್ ಅಂಗಡಿಯೆದುರು ಸೀಮೆ ಎಣ್ಣೆ ಮತ್ತು ಸಕ್ಕರೆ ಪಡೆಯಲು ಜನ ಸೇರುವರು, ಸಿನೇಮಾ ಟಿಕೇಟುಕೊಳ್ಳಲು ಜನರು ಗುಂಪುಗೂಡುವರು.

೪. ಸೂಚಕ ಜನಸಂದಣಿ

ಸದಸ್ಯರು ತಮ್ಮ ಅಹವಾಲುಗಳನ್ನು ತಿಳಿಯಪಡಿಸಲು, ತಮ್ಮ ಬೇಡಿಕೆಗಳನ್ನು ಪ್ರಕಟಪಡಿಸಲು ಒಟ್ಟುಗೂಡುವರು. ಪರೀಕ್ಷೆಯ ಸಮಯದಲ್ಲಿ ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆಗಳು ಪಠ್ಯಕ್ರಮದ ಹೊರತಾಗಿದ್ದಲ್ಲಿ, ವಿದ್ಯಾರ್ಥಿಗಳೆಲ್ಲರೂ ಪರೀಕ್ಷಾ ಕೊಠಡಿ ತ್ಯಜಿಸಿ

ಬಂದು ಒಂದೆಡೆ ಸೇರಿ ಪರೀಕ್ಷೆಯನ್ನು ಮುಂದೂಡಿ ಪಠ್ಯಕ್ರಮದನುಸಾರ ಪ್ರಶ್ನೆಪತ್ರಿಕೆ ಹಂಚಲು ಆಗ್ರಹಿಸುವರು. ಅದೇ ತೆರನಾಗಿ ಕಾಲೇಜಿನಲ್ಲಿ ಸಾಕಷ್ಟು ಒಳ್ಳೆಯ ಬೆಂಚುಗಳಿಲ್ಲ, ಸಮರ್ಪಕವಾದ ಕುಡಿಯುವ ನೀರಿನ ವ್ಯವಸ್ಥೆಯಿಲ್ಲವೆಂಬ ಬೇಡಿಕೆಯನ್ನು ಪ್ರಾಂಶುಪಾಲರ ಮುಂದೊಡ್ಡುವ ವಿದ್ಯಾರ್ಥಿಗಳ ಗುಂಪು ಸೂಚಕ ಜನಸಂದಣಿಯೆನಿಸುವುದು. ಸೂಚಕ ಜನಸಂದಣಿಯ ಸದಸ್ಯರ ಮುಖ್ಯ ಉದ್ದೇಶ ತಮ್ಮ ಕುಂದುಕೊರತೆಗಳ ಬಗ್ಗೆ ಧ್ವನಿಯೆತ್ತುವುದೆ ಹೊರತು ಸ್ವತ್ತುಗಳನ್ನು ನಾಶಪಡಿಸುವುದಲ್ಲ.

II. ವಿಶ್ರಾಂತ ಜನಸಂದಣಿ

ವಿಶ್ರಾಂತ ಜನಸಂದಣಿಯು ಪ್ರೇಕ್ಷಕವೃಂದವನ್ನು ಹೋಲುವುದು. ಈ ಬಗೆಯ ಸಮೂಹವು ಯಾವುದಾದರೊಂದು ಉದ್ದೇಶಕ್ಕಾಗಿ ಅಸ್ತಿತ್ವಕ್ಕೆ ಬರುವುದು. ಆ ಉದ್ದೇಶವು ಯಾವುದಾದರೂ ಕುರಿತು ಮಾಹಿತಿ ಪಡೆದುಕೊಳ್ಳುವುದಿರಬಹುದು ಅಥವಾ ಮನರಂಜನೆಯನ್ನು ಪಡೆಯುವುದಿರಬಹುದು. ವಿಶ್ರಾಂತ ಜನಸಂದಣಿಯ ನಾಲ್ಕು ಪ್ರಕಾರಗಳ ಬಗೆಗೆ ಈಗ ತಿಳಿಯುವಾ.

೧. ಮಾಹಿತಿ ಕೋರುವ ಜನಸಂದಣಿ

ಮಾಹಿತಿ ಅಥವಾ ಜ್ಞಾನವನ್ನು ಪಡೆಯಲು ಸೇರಿದ ಜನರ ಸಮೂಹವು ಮಾಹಿತಿ ಕೋರುವ ಜನಸಂದಣಿಯಾಗಿದೆ. ಉದಾ: ಯಾರಾದರೂ ರಾಜಕೀಯ ಮುಂದಾಳು ನಗರದಲ್ಲಿ ಭಾಷಣ ಮಾಡಲು ಬಂದರೆ ಆ ಭಾಷಣ ಕೇಳಲು ನೂರಾರು ಜನರು ಸೇರುವರು. ಭಾರತ-ಪಾಕಿಸ್ತಾನ ನಡುವೆ ಕ್ರಿಕೆಟ್ ಆಟ ನಡೆಯುವಾಗ ಹೊಟೇಲುಗಳ ಮುಂದಿಟ್ಟ ಟೆಲಿವಿಜನ್‌ಗಳಲ್ಲಿ ಆಟ ನೋಡಲು ನೂರಾರು ಜನರು ಸೇರುವರು. ಶಾಲೆ-ಕಾಲೇಜುಗಳಲ್ಲಿ ಪ್ರಸಿದ್ಧ ಸಾಹಿತಿಗಳ ಭಾಷಣವೇರ್ಪಡಿಸಿದಾಗ ಅನೇಕ ವಿದ್ಯಾರ್ಥಿಗಳು ಸೇರುವರು. ಇವೆಲ್ಲವೂ ಮಾಹಿತಿ ಕೋರುವ ಜನಸಂದಣಿಗಳಾಗಿವೆ.

೨. ಮನೋರಂಜನೆ ಬಯಸುವ ಜನಸಂದಣಿ

ಈ ಬಗೆಯ ಜನಸಂದಣಿಯಲ್ಲಿ, ಸದಸ್ಯರು ಜ್ಞಾನ ಪಡೆಯಲಾಗಲಿ, ಮಾಹಿತಿ ಸಂಗ್ರಹಣೆಗಾಗಲಿ ಬಾರದೆ ಮನೋರಂಜನೆ ಬಯಸಿ ಬರುವರು. ಸರ್ಕಸ್ ನೋಡಲು, ಸಿನೇಮಾ ನೋಡಿ ಮನೋರಂಜನೆ ಪಡೆಯಲು ಜನರು ಒಂದೆಡೆ ಸೇರುವರು.

೩. ರೂಪಾಂತರ ಜನಸಂದಣಿ

ವಿಚಾರ ಮತ್ತು ಅನಿಸಿಕೆಗಳನ್ನು ವಿನಿಮಯ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಸೇರುವ ಜನರ ಗುಂಪಿಗೆ ರೂಪಾಂತರ ಜನಸಂದಣಿಯೆನ್ನಬಹುದು. ಧಾರ್ಮಿಕ ಪ್ರೇಕ್ಷಕ ವರ್ಗಗಳು ರೂಪಾಂತರ ಜನಸಂದಣಿಗೆ ಉದಾಹರಣೆಯಾಗಿವೆ.

೪. ಪಾದಚಾರಿ ಜನಸಂದಣಿ

ಕೆಲವು ಸಲ ಯಾವುದಾದರೂ ಆಕರ್ಷಣೆಯಿಂದಾಗಿ ಜನರು ದಾರಿ ಪಕ್ಕದಲ್ಲಿ ಸೇರುವರು.

ಆಕರ್ಷಣೆಯ ಬಿಂದು ಭವಿಷ್ಯ ಹೇಳುವವನಾಗಿರಬಹುದು, ಮಾಂತ್ರಿಕ ಇರಬಹುದು, ಹಾವಾಡಿಗನಿರಬಹುದು. ಇಂತಹ ಜನಸಂದಣಿಯಲ್ಲಿ ಸೇರಿದ ಜನರು ಆಕರ್ಷಣೆಯ ವಸ್ತು ಆಕರ್ಷಿಸುವವರೆಗೆ ನಿಂತಿದ್ದು, ಆಕರ್ಷಣೆ ಕಡಿಮೆಯಾದಾಗ ಚದುರಿ ಹೋಗುವರು.

೩.೩. ಪ್ರಾಥಮಿಕ ಮತ್ತು ಮಾಧ್ಯಮಿಕ ಸಮೂಹಗಳು

ಅಮೆರಿಕೆಯ ಸಮಾಜಶಾಸ್ತ್ರಜ್ಞರಾದ **ಚಾರ್ಲ್ಸ್‌ಹಟನ್ ಕೂಲೆ** ಸಾಮಾಜಿಕ ಸಮೂಹಗಳನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಸಮೂಹಗಳೆಂಬುದಾಗಿ ವರ್ಗೀಕರಿಸಿದ್ದಾರೆ. ಅವರ ಸೋಶಿಯಲ್ 'ಆರ್ಗನೈಜೇಶನ್' ಎಂಬ ಗ್ರಂಥವು ೧೯೦೯ರಲ್ಲಿ ಪ್ರಕಟಗೊಂಡಿತು.

ಸಾಮಾಜಿಕ ಸಮೂಹಗಳ ವರ್ಗೀಕರಣಗಳಲ್ಲಿ ಕೂಲೆಯವರ ಪ್ರಾಥಮಿಕ ಮತ್ತು ಮಾಧ್ಯಮಿಕ ಸಮೂಹಗಳ ವರ್ಗೀಕರಣವು ಹೆಚ್ಚು ಜನಪ್ರಿಯವಾಗಿದೆ. ಹೆಚ್ಚಿನ ಸಮಾಜಶಾಸ್ತ್ರಜ್ಞರು ಈ ವರ್ಗೀಕರಣದ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ.

ಪ್ರಾಥಮಿಕ ಸಮೂಹದ ಅರ್ಥ

ಕೂಲೆಯವರು ಪ್ರಕಾರ ಆತ್ಮೀಯ, ವೈಯಕ್ತಿಕ ಮತ್ತು ಮುಖಾಮುಖಿ ಸಂಪರ್ಕ ಹೊಂದಿದ ಸಮೂಹಗಳೇ ಪ್ರಾಥಮಿಕ ಸಮೂಹಗಳು. ಇವುಗಳ ಸದಸ್ಯರ ಮಧ್ಯದಲ್ಲಿ ನಿಕಟ ಸಂಬಂಧಗಳು ಮತ್ತು ಆತ್ಮೀಯ ಭಾವನೆಗಳು ಕಾಣಬರುವವು. ನಾವು ನಮ್ಮವರೆಂಬ ಭಾವನೆಯು ಇವರಲ್ಲಿ ಗಾಢವಾಗಿರುವುದು. ಪ್ರಾಥಮಿಕ ಸಮೂಹಗಳ ಗಾತ್ರ ಚಿಕ್ಕದಾಗಿದ್ದು ಕಡಿಮೆ ಸಂಖ್ಯೆಯ ಜನರು ಪರಸ್ಪರ ನೇರ ಸಂಪರ್ಕವನ್ನು ಹೊಂದಿರುವರು. ಕೆಲವು ಪ್ರಾಥಮಿಕ ಸಮೂಹಗಳ ಗಾತ್ರ ಅತಿ ಚಿಕ್ಕದಾಗಿದ್ದು ಇಬ್ಬರು ಸದಸ್ಯರನ್ನು ಹೊಂದಿರುತ್ತವೆ. ಉದಾಹರಣೆ ಗಂಡ-ಹೆಂಡತಿ ಇಬ್ಬರೇ ಇರುವ ಕುಟುಂಬ, ಸ್ನೇಹಿತರ ಬಳಗ ಇತ್ಯಾದಿ.

ಪ್ರಾಥಮಿಕ ಸಮೂಹಗಳು ಸಾಮಾಜಿಕ ಸಂಘಟನೆಯ ಮೂಲ ತಳಹದಿಯಾಗಿವೆ. ಇಂತಹ ಸಮೂಹಗಳ ಮೂಲಕ ಸಾಮಾಜಿಕ ಜೀವನ ಪ್ರಾರಂಭಗೊಳ್ಳುವುದು. ಮಗು ಕುಟುಂಬದಲ್ಲಿ ಜನಿಸಿ ಬೆಳವಣಿಗೆ ಹೊಂದುವುದು. ಮಗು ಬೆಳೆಯುತ್ತ ಹೋದಂತೆ ಪ್ರಾಥಮಿಕ ಸಮೂಹಗಳೊಡನೆ ಅದರ ಸಂಬಂಧಗಳು ಹೆಚ್ಚುತ್ತ ಹೋಗುವವು. ವ್ಯಕ್ತಿಯು ನೆರೆಹೊರೆ ಸ್ನೇಹಿತರು, ಹಳ್ಳಿ, ಚರ್ಚು, ಶಾಲೆ - ಹೀಗೆ ಹಲವಾರು ಸಮೂಹಗಳ ಜೊತೆ ಸಂಪರ್ಕ ಬೆಳೆಸುವನು. ಕುಟುಂಬ, ನೆರೆಹೊರೆ, ಸ್ನೇಹಿತರ ಬಳಗ, ಶಾಲೆ ಮತ್ತು ಹಳ್ಳಿ ಇವುಗಳೆಲ್ಲ ಪ್ರಾಥಮಿಕ ಸಮೂಹಗಳಾಗಿವೆ. ಇಂತಹ ಪ್ರಾಥಮಿಕ ಸಮೂಹಗಳ ಸಂಪರ್ಕದಿಂದಾಗಿ ಮಗು ಸಂಪ್ರದಾಯ, ನೈತಿಕ ನಿಯಮ, ಕಾಯ್ದೆ ಕಾನೂನುಗಳ ಪರಿಚಯ ಮಾಡಿಕೊಳ್ಳುವುದು, ಜೀವನದ ಪ್ರಥಮ ಪಾಠಗಳನ್ನು ಕಲಿತುಕೊಳ್ಳುವುದು.

ಅತಿ ಸರಳವಾದ ಪ್ರಥಮವಾದ ಎಲ್ಲ ವಿಧದ ಸಂಘಗಳಿಗಿಂತಲೂ ಹೆಚ್ಚು ಸಾರ್ವತ್ರಿಕವಾದ ಸಮೂಹವು ಪ್ರಾಥಮಿಕ ಸಮೂಹವಾಗಿದ್ದು, ಇದರಲ್ಲಿ ಒಡನಾಟ ಪರಸ್ಪರ ಸಹಾಯ ಅವರೆಲ್ಲರಿಗೆ ಸಂಬಂಧಪಟ್ಟ ಪ್ರಶ್ನೆಗಳ ಚರ್ಚೆ ಅಥವಾ ಸಾಮಾನ್ಯ ನೀತಿಯನ್ನು

ಕಂಡುಹಿಡಿಯಲು ಮತ್ತು ಕಾರ್ಯರೂಪಕ್ಕೆಳಸಲು ಕಡಿಮೆ ಸಂಖ್ಯೆಯ ಜನರು ಮುಖಾಮುಖಿ ಭೇಟಿಯಾಗುವವರು - **ಆರ್.ಎಂ. ಮೆಕೈವರ್.**

ಆಟಗಾರರ ಸಮೂಹ-ಕುಟುಂಬ, ಸ್ನೇಹಿತರ ಸಮೂಹ, ಸಮ ವಯಸ್ಕರ ಸಮೂಹ, ಹರಟೆ ಕುಟ್ಟುವವರ ಸಮೂಹ, ಜೊತೆಗಾರರು, ಅಧ್ಯಯನ ತಂಡ, ಆದಿವಾಸಿಗಳ ಮಂಡಲ ಮುಂತಾದವು **ಮೆಕೈವರನು** ನೀಡಿದ ಪ್ರಾಥಮಿಕ ಸಮೂಹದ ಉದಾಹರಣೆಗಳಾಗಿವೆ.

ಕೂಲೆಯವರ ಪ್ರಕಾರ "ಮುಖಾಮುಖಿ ಸಂಬಂಧಗಳು ಮತ್ತು ಸಹಕಾರವನ್ನು ಹೊಂದಿದ ಸಮೂಹಗಳು ಪ್ರಾಥಮಿಕ ಸಮೂಹಗಳಾಗಿವೆ. ವ್ಯಕ್ತಿಯ ಸಾಮಾಜಿಕ ವರ್ತನೆ ಮತ್ತು ಆದರ್ಶಗಳನ್ನು ರೂಪಿಸುವಲ್ಲಿ ಪ್ರಾಥಮಿಕ ಸಮೂಹಗಳು ಮಹತ್ತರವಾದ ಪಾತ್ರವನ್ನು ವಹಿಸುವವು."

ಕೂಲೆಯವರು ತಮ್ಮ ಸಾಮಾಜಿಕ ಸಮೂಹಗಳ ವ್ಯಾಖ್ಯೆಯಲ್ಲಿ, "ಮುಖಾಮುಖಿ ಸಂಪರ್ಕ" ಮತ್ತು 'ನಾವು' ಎನ್ನುವ ಭಾವನೆ ಈ ಎರಡು ಅಂಶಗಳಿಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಇಂತಹ ಸಮೂಹಗಳಲ್ಲಿ ವ್ಯಕ್ತಿಗಳ ನಡುವೆ ನೇರ ಸಂಪರ್ಕಗಳು ಏರ್ಪಡುತ್ತವೆಂಬ ಅಭಿಪ್ರಾಯವನ್ನು ಕೂಲೆ ವ್ಯಕ್ತಪಡಿಸಿದ್ದಾರೆ. ಇಂತಹ ನೇರ ಸಂಪರ್ಕಗಳಾಗಿ ವ್ಯಕ್ತಿಗಳಲ್ಲಿ ಪ್ರೀತಿ, ವಾತ್ಸಲ್ಯ, ಆತ್ಮೀಯತೆ, ಅನುಕಂಪ ಇತ್ಯಾದಿ ಭಾವನೆಗಳು ಸ್ಫುರಿಸುವವು.

ಪ್ರಾಥಮಿಕ ಸಮೂಹದ ಲಕ್ಷಣಗಳು

ಪ್ರಾಥರ್ಮಿಕ ಸಮೂಹವು ಕೆಲವು ಬಾಹ್ಯ ಮತ್ತು ಆಂತರಿಕ ಲಕ್ಷಣಗಳನ್ನು ಹೊಂದಿದೆ. ಭೌತಿಕ ಸಾಮೀಪ್ಯ, ಚಿಕ್ಕದಾದ ಗಾತ್ರ, ಶಾಶ್ವತತೆ ಮತ್ತು ದೃಢತೆ ಇವು ಪ್ರಾಥಮಿಕ ಸಮೂಹದ ಬಾಹ್ಯ ಲಕ್ಷಣಗಳು. ಸಾಮಾನ್ಯ ಗುರಿ, ಒಂದೇ ಹಿನ್ನೆಲೆ, ವೈಯಕ್ತಿಕ ಸಂಬಂಧ, ಪರಿಮಿತ ಸ್ವಾರ್ಥ ಸಾಧನೆ, ಗರಿಷ್ಟ ನಿಯಂತ್ರಣ ಮುಂತಾದವು ಇದರ ಆಂತರಿಕ ಲಕ್ಷಣಗಳಾಗಿವೆ.

ಬಾಹ್ಯ ಲಕ್ಷಣಗಳು

೧. ಭೌತಿಕ ಸಾಮೀಪ್ಯ

ಪ್ರಾಥಮಿಕ ಸಮೂಹದ ಸದಸ್ಯರು ಭೌತಿಕ ಸಾಮೀಪ್ಯವನ್ನು ಹೊಂದಿರುವವರು. ಭೌತಿಕ ಸಾಮೀಪ್ಯವಿಲ್ಲದೆ ಹೋದಲ್ಲಿ ಮುಖಾಮುಖಿ ಸಂಪರ್ಕವು ಅಸಾಧ್ಯವಾಗುತ್ತದೆ. ಸದಸ್ಯರಲ್ಲಿ ಪರಸ್ಪರ ತಿಳುವಳಿಕೆ, ಸಹಾಯ, ಸಹಕಾರದ ಮನೋಭಾವನೆಗಳು ಉಂಟಾಗಬೇಕಾದರೆ ಅವರು ಒಂದೆಡೆ ಸೇರುವುದು ಅಗತ್ಯವಾಗಿದೆ.

೨. ಚಿಕ್ಕ ಗಾತ್ರ

ಪ್ರಾಥಮಿಕ ಸಮೂಹಗಳು ಚಿಕ್ಕ ಗಾತ್ರದ ಸಮೂಹಗಳಾಗಿವೆ. ಉದಾಹರಣೆಗೆ ಕುಟುಂಬ, ಗೆಳೆಯರ ಬಳಗ, ನೆರೆಹೊರೆ ಇತ್ಯಾದಿ ಸಮೂಹಗಳು ಗಾತ್ರದಲ್ಲಿ ಚಿಕ್ಕವುಗಳಾಗಿವೆ. ಈ ಕಾರಣದಿಂದಾಗಿಯೇ ಆತ್ಮೀಯ, ಅನ್ಯೋನ್ಯ ಮತ್ತು ವೈಯಕ್ತಿಕ ಸಂಬಂಧಗಳು ಚಿಕ್ಕಸಮೂಹ ಗಳಲ್ಲಿ ಬೆಳೆದು ಬರುವವು. ಸಮೂಹವು ಚಿಕ್ಕದಾಗಿದ್ದಷ್ಟೂ ಸದಸ್ಯರ ಮಧ್ಯೆ ನಿಕಟತೆ,

ಆತ್ಮೀಯತೆ, ಅನುಕಂಪಗಳು ಅಧಿಕವಾಗುವವು. ಅವರು ಪರಸ್ಪರ ಚರ್ಚೆಯ ಮೂಲಕ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವರು.

೩. ಸ್ಥಿರತೆ

ಸದಸ್ಯರಲ್ಲಿ ಆತ್ಮೀಯ ಸಂಬಂಧಗಳು ಕುದುರಬೇಕಾದರೆ ಸಮೂಹವು ಹೆಚ್ಚು ಶಾಶ್ವತವಾಗಿರುವುದು ಅಗತ್ಯ. ಕುಟುಂಬ, ಶಾಲೆಯಂತಹ ಪ್ರಾಥಮಿಕ ಸಮೂಹಗಳು ಹೆಚ್ಚು ಕಾಲ ಬಾಳುವಂತಹವೂ, ಸ್ಥಿರತೆಯನ್ನು ಹೊಂದಿದವೂ ಆಗಿರುವವು.

ಆಂತರಿಕ ಲಕ್ಷಣಗಳು

೧. ಸಾಮಾನ್ಯ ಗುರಿ

ಪ್ರಾಥಮಿಕ ಸಮೂಹದ ಸದಸ್ಯರು ನಿರ್ದಿಷ್ಟ ಸಾಮಾನ್ಯ ಗುರಿಗಳನ್ನು ಹೊಂದಿರುವರು. ಅಂತಹ ಗುರಿಗಳ ಸಾಧನೆಗಾಗಿ ಜನರು ಪ್ರಾಥಮಿಕ ಸಮೂಹಗಳನ್ನು ಸೇರುವರು. ಅವರ ಉದ್ದೇಶಗಳಲ್ಲಿ ಸಾಮ್ಯತೆಯಿರುವುದು. ಕೆಲವು ಸಲ ಸದಸ್ಯರು ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ಸಮೂಹದ ಹಿತಾಸಕ್ತಿಗಳನ್ನು ಈಡೇರಿಸಲು ದುಡಿಯಬೇಕಾಗುತ್ತದೆ. ಸಮೂಹದ ಸಾಮಾನ್ಯ ಹಿತಾಸಕ್ತಿಗಳು ಸದಸ್ಯರಿಗೆ ಮಾನಸಿಕ ತೃಪ್ತಿಯನ್ನು ನೀಡುತ್ತವೆ.

೨. ಸಾಮಾನ್ಯ ಹಿನ್ನೆಲೆ ಅಥವಾ ಹಿನ್ನೆಲೆಯ ಏಕತೆ

ಪ್ರಾಥಮಿಕ ಸಮೂಹದ ಯಶಸ್ಸಿಗೆ ಅದರ ಸದಸ್ಯರು ಸಾಮಾನ್ಯ ಹಿನ್ನೆಲೆಯನ್ನು ಹೊಂದಿರುವುದು ಅಪೇಕ್ಷಣೀಯ. ಒಂದೇ ಹಿನ್ನೆಲೆಯನ್ನು ಹೊಂದಿದ ಸದಸ್ಯರಾಗಿದ್ದಲ್ಲಿ ಕೂಡಿಕೊಳ್ಳುವುದು ಸುಲಭವಾಗುತ್ತದೆ. ಅವರಲ್ಲಿ ಸಮಾನಮಟ್ಟದ ತಿಳುವಳಿಕೆ ಮತ್ತು ಅನುಭವ ಇರುವುದು ಅಗತ್ಯ. ಉದಾಹರಣೆಗೆ, ಸಾಮಾನ್ಯವಾಗಿ ಒಂದೇ ರೀತಿಯ ಹಿನ್ನೆಲೆಯನ್ನು ಹೊಂದಿದ ಹುಡುಗ-ಹುಡುಗಿ ವಿವಾಹವಾಗಿ ಕುಟುಂಬವನ್ನು ಸ್ಥಾಪಿಸಿದರೆ, ಆ ಕುಟುಂಬವು ಹೆಚ್ಚು ಶಾಶ್ವತವಾಗಿರುವುದು. ಅವರಲ್ಲಿ ಹೆಚ್ಚಿನ ಮಧುರ ಭಾವನೆಗಳು, ಹೊಂದಾಣಿಕೆಗಳು ಕಂಡುಬರುವವು. ಇದಕ್ಕೆ ತದ್ವಿರುದ್ಧವಾಗಿ, ವಿಭಿನ್ನ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಹೊಂದಿದವರು ವಿವಾಹವಾದರೆ ಅವರ ಮಧ್ಯೆ ಹೆಚ್ಚಿನ ಭಿನ್ನಾಭಿಪ್ರಾಯಗಳು ತಲೆದೋರಿ ಕುಟುಂಬವು ವಿಘಟಿತಗೊಳ್ಳುವ ಸಾಧ್ಯತೆಯಿರುವುದು.

೩. ವೈಯಕ್ತಿಕ ಸಂಬಂಧ

ಪ್ರಾಥಮಿಕ ಸಮೂಹದ ಸದಸ್ಯರು ವೈಯಕ್ತಿಕ ಸಂಬಂಧಗಳನ್ನು ಹೊಂದಿರುವರು. ಅವೈಯುಕ್ತಿಕ ಸಂಬಂಧಗಳು ಪ್ರಾಥಮಿಕ ಸಮೂಹದ ಬೆಳವಣಿಗೆಗೆ ಅಡಚಣೆಯನ್ನುಂಟು ಮಾಡುವವು. ಪ್ರಾಥಮಿಕ ಸಮೂಹಗಳ ಸದಸ್ಯರ ಸಂಬಂಧಗಳು ಸ್ವಯಂಪ್ರೇರಿತ ಮತ್ತು ಸ್ವಾಭಾವಿಕವೂ ಆಗಿರುತ್ತವೆ. ಔಪಚಾರಿಕತೆ ಅಷ್ಟೊಂದಾಗಿ ತೋರಿಬರದು. ಇಂತಹ ಸಮೂಹದಲ್ಲಿ ಸಂಬಂಧಗಳು ನೈಸರ್ಗಿಕವಾಗಿದ್ದು, ಈ ಸಂದರ್ಭಗಳಲ್ಲಿಯೇ ವ್ಯಕ್ತಿಯ ಸಂಪೂರ್ಣ ವ್ಯಕ್ತಿತ್ವ ರೂಪಗೊಳ್ಳುವುದು.

೪. ಪರಿಮಿತ ಸ್ವಾರ್ಥಪರತೆ

ತಮ್ಮ ಹಿತಾಸಕ್ತಿಗಳ ಸಾಧನೆಗಾಗಿ ಸಮೂಹದ ಸದಸ್ಯರು ಒಟ್ಟುಗೂಡುವರು. ಅವರೆಲ್ಲರಿಗೂ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಉದ್ದೇಶವಿರುವುದು. ಆದಾಗ್ಯೂ ಅವರು ಸಮಗ್ರ ಸಮೂಹದ ಒಳಿತಿಗಾಗಿ, ಏಳ್ಗೆಗಾಗಿ ತಮ್ಮ ಸ್ವಾರ್ಥವನ್ನು ಹಿಡಿತದಲ್ಲಿಡ ಬೇಕಾಗುವುದು. ಸಮೂಹದ ಕಲ್ಯಾಣಕ್ಕಾಗಿ ಸ್ವ-ಹಿತವನ್ನು ಬದಿಗೊತ್ತಿದಲ್ಲಿ ಮಾತ್ರ ಅವರು ಪ್ರಾಥಮಿಕ ಸಮೂಹದ ನಿಜವಾದ ಸದಸ್ಯರೆನಿಸುವರು. ಸ್ವ-ಹಿತವನ್ನು ಕಾಪಾಡಿಕೊಳ್ಳುವುದರ ಜೊತೆ ಜೊತೆಗೆ ಸಮೂಹದ ಹಿತವನ್ನು ಲಕ್ಷದಲ್ಲಿಡಬೇಕಾದುದು ಅಗತ್ಯ.

೫. ಗರಿಷ್ಠ ನಿಯಂತ್ರಣ

ಪ್ರಾಥಮಿಕ ಸಮೂಹದ ವ್ಯಕ್ತಿಗಳಲ್ಲಿ ಪರಸ್ಪರ ನಿಕಟ ಸಂಪರ್ಕ ಮತ್ತು ತಿಳುವಳಿಕೆ ಇರುವ ಕಾರಣ ಒಬ್ಬರು ಇನ್ನೊಬ್ಬರ ಅಭಿಪ್ರಾಯಕ್ಕೆ ಬೆಲೆ ಕೊಡುವರು. ಸಾಮಾನ್ಯವಾಗಿ ಸಮೂಹದ ಸದಸ್ಯರು, ಸಮೂಹದ ಯಜಮಾನನ ಸಂಪೂರ್ಣ ನಿಯಂತ್ರಣದಲ್ಲಿರುವರು. ಇಲ್ಲಿ ಕಾನೂನುಗಳಿಗಿಂತಲೂ ಹೆಚ್ಚಾಗಿ ಸಾಂಪ್ರದಾಯಿಕ ವಿಧಾನಗಳಿಂದ (ಅನೌಪಚಾರಿಕ ಸಾಧನಗಳಿಂದ) ಸದಸ್ಯರ ವರ್ತನೆಯನ್ನು ಅಂಕಿತದಲ್ಲಿಟ್ಟುಕೊಳ್ಳಲಾಗುತ್ತದೆ. ಓರ್ವ ಸದಸ್ಯನು ಆಕಸ್ಮಾತಾಗಿ ತಪ್ಪೆಸಗಿದರೂ ಉಳಿದ ಸದಸ್ಯರು ಸಲಹೆ-ಸೂಚನೆಗಳನ್ನು ನೀಡುವ ಮೂಲಕ ಅವನ ತಪ್ಪನ್ನು ತಿದ್ದುವರು.

ಪ್ರಾಥಮಿಕ ಸಮೂಹಗಳ ಮಹತ್ವ

ವ್ಯಕ್ತಿಗೆ ಆದಿಯಿಂದ ಅಂತ್ಯದವರೆಗೆ ಪ್ರಾಥಮಿಕ ಸಮೂಹಗಳ ಅಗತ್ಯವಿದೆ. ಮಗು ಜನ್ಮ ತಾಳುವುದೆ ಕುಟುಂಬದಲ್ಲಿ. ಮಗು ಜನಿಸಿದ ತಕ್ಷಣ ಕುಟುಂಬದ ಸದಸ್ಯರು ಅದರ ಲಾಲನೆ-ಪೋಷಣೆ ಮಾಡದಿದ್ದರೆ ಅದು ಬದುಕುಳಿಯದು. ಅಂದರೆ ವ್ಯಕ್ತಿಯ ಸಾಮಾಜಿಕ ಜೀವನ ಕುಟುಂಬವೆಂಬ ಪ್ರಾಥಮಿಕ ಸಮೂಹದಿಂದಲೆ ಆರಂಭಗೊಳ್ಳುತ್ತದೆ. ಕುಟುಂಬದ ಆಸರೆಯಿಲ್ಲದೆ ಹೋದಲ್ಲಿ ವ್ಯಕ್ತಿಯ ಬದುಕು ದುಸ್ತರಗೊಳ್ಳುತ್ತದೆ. ಕುಟುಂಬದಲ್ಲಿ ಭಾಷೆ, ರೀತಿ-ನೀತಿಗಳನ್ನು ಕಲಿತುಕೊಳ್ಳಲು ಸಾಧ್ಯವಾಗುತ್ತದೆ. ವ್ಯಕ್ತಿಯ ಸಾಮಾಜೀಕರಣ ಪ್ರಾರಂಭ ಗೊಳ್ಳುವುದೇ ಕುಟುಂಬದಿಂದ. ತದನಂತರ ಶಾಲೆ ಕಾಲೇಜುಗಳಲ್ಲಿ ಅವನು (ಳು) ಶಿಕ್ಷಣ ಪಡೆಯುವನು (ಳು). ಅಂದರೆ ಪ್ರಾಥಮಿಕ ಸಮೂಹಗಳು ಸಾಮಾಜೀಕರಣದ ಅತಿ ಪ್ರಮುಖವಾದ ಸಾಧನಗಳಾಗಿವೆ. ಇವುಗಳ ಅನುಪಸ್ಥಿತಿಯಲ್ಲಿ ವ್ಯಕ್ತಿಯ ಸಾಮಾಜೀಕರಣ ಸರಿಯಾದ ರೀತಿಯಲ್ಲಿ ಆಗದು. ದೋಷಪೂರಿತ ಸಾಮಾಜೀಕರಣ ಉಂಟಾದಲ್ಲಿ ವ್ಯಕ್ತಿಗಳು ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗುವರು. ಅದರಿಂದ ವ್ಯಕ್ತಿಗೆ-ಸಮಾಜಕ್ಕೆ ಕೇಡು ಉಂಟಾಗುವುದು.

ಪ್ರಾಥಮಿಕ ಸಮೂಹಗಳು ವ್ಯಕ್ತಿತ್ವ ವಿಕಾಸಕ್ಕೆ ಸಹಾಯ ಮಾಡುವವು. ಕುಟುಂಬ, ಆಟಗಾರರ ತಂಡ, ಕ್ಲಬ್ಬು ಇತ್ಯಾದಿ ಪ್ರಾಥಮಿಕ ಸಮೂಹಗಳು ವ್ಯಕ್ತಿಗಳ ಸರ್ವತೋಮುಖ ವ್ಯಕ್ತಿತ್ವ ರೂಪಿತಗೊಳ್ಳಲು ನೆರವು ನೀಡುವವು. ಇವು ಸದಸ್ಯರ ಕಾರ್ಯದಕ್ಷತೆಯನ್ನು

ಹೆಚ್ಚಿಸುವವು. ಪ್ರಾಥಮಿಕ ಸಮೂಹಗಳ ಸದಸ್ಯರು ಒಟ್ಟುಗೂಡಿ ಸಹಾಯ-ಸಹಕಾರ ಮನೋಭಾವನೆಗಳಿಂದ ದುಡಿಯುವರು. ಪರಸ್ಪರ ಸಹಾಯ ಸಾಧ್ಯವಾದ ಕಾರಣ ಎಂತಹ ಕಠಿಣ ಕೆಲಸಗಳನ್ನು ಸುಲಭವಾಗಿ ವ್ಯಕ್ತಿಗಳು ಪೂರೈಸುವರು. ಇಂತಹ ಸಮೂಹಗಳ ಸದಸ್ಯರಲ್ಲಿ ನಾವೆಲ್ಲ ಒಂದು ಎಂಬ ಭಾವನೆಯಿರುವ ಕಾರಣ ಆಪತ್ಕಾಲದಲ್ಲಿ ಒಬ್ಬರೊಬ್ಬರಿಗೆ ನೆರವು ದೊರೆಯುವುದು. ಪ್ರತಿಯೊಬ್ಬರು ಇನ್ನೊಬ್ಬರ ಸುಖ-ಸಂತೋಷ ಕಷ್ಟ-ನಷ್ಟಗಳ ವಿಚಾರಗಳನ್ನು ಹಂಚಿಕೊಳ್ಳುವರು, ಒಟ್ಟಿಗೆ ಅನುಭವಿಸುವರು. ಇದರಿಂದಾಗಿ ಇಲ್ಲಿ ತೃಪ್ತಿ, ಸಮಾಧಾನ ಮತ್ತು ಭದ್ರತೆಯ ಪ್ರಜ್ಞೆಯಿದೆ. ತೃಪ್ತಿ ಮತ್ತು ಭದ್ರತೆಗಳು ಸಮೂಹದ ಸದಸ್ಯರಿಗೆ ಮಾನಸಿಕ ನೆಮ್ಮದಿಯನ್ನು ನೀಡುವವು.

ಸಮಾಜವು ಸಂಘಟಿತವಾಗಿರಲು ಸಾಮಾಜಿಕ ನಿಯಂತ್ರಣದ ಸಾಧನಗಳು ಬಲಿಷ್ಠವಾಗಿ ಕಾರ್ಯ ನಿರ್ವಹಿಸುವುದಗತ್ಯ. ಪ್ರಾಥಮಿಕ ಸಮೂಹಗಳು ತಮ್ಮ ಸದಸ್ಯರ ವರ್ತನೆಗಳನ್ನು ಗರಿಷ್ಠಮಟ್ಟದಲ್ಲಿ ನಿಯಂತ್ರಿಸುವವು. ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ಸದಸ್ಯರು ತೊಡಗಿಕೊಳ್ಳದಂತೆ ಎಚ್ಚರಿಕೆ ವಹಿಸುವವು. ಇದರಿಂದಾಗಿ ಸಮಾಜ-ಸಮೂಹಗಳೆರಡೂ ಸಂಘಟನೆಯ ಸ್ವರೂಪವನ್ನು ಕಾಯ್ದುಕೊಳ್ಳುವವು.

ಪ್ರಾಥಮಿಕ ಸಮೂಹಗಳ ಸದಸ್ಯರಲ್ಲಿ ಏಕತೆಯ ಭಾವನೆಯಿರುವುದು. ನಾವೆಲ್ಲ ಒಂದು ಎಂಬ ಮನೋಭಾವನೆ ಅವರನ್ನೆಲ್ಲ ಒಗ್ಗೂಡಿಸುವುದು. ಪರಸಮೂಹದವರು ಅನ್ಯಾಯವಾಗಿ ತೊಂದರೆ ಕೊಡಲು ಬಂದಲ್ಲಿ ಸರ್ವಸದಸ್ಯರು ಒಗ್ಗಟ್ಟಾಗಿ ಎದುರಿಸುವರು. ಹೀಗಾಗಿ ಇಲ್ಲಿ ಬಾಹ್ಯ ದಾಳಿಯ ಭಯ ಕಡಿಮೆ.

ಮಾಧ್ಯಮಿಕ ಸಮೂಹಗಳು

ಆಧುನಿಕ ಕಾಲದಲ್ಲಿ ಮಾಧ್ಯಮಿಕ ಸಮೂಹಗಳ ಸಂಖ್ಯೆ ಮತ್ತು ಗಾತ್ರ ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತಿವೆ. ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯಿಂದಾಗಿ ಬೆಳೆದು ಬಂದಿರುವ ಹೆಚ್ಚಿನ ಸಮೂಹಗಳು ಮಾಧ್ಯಮಿಕ ಸಮೂಹಗಳಾಗಿವೆ. ಕಾರ್ಖಾನೆ, ಕಾರ್ಮಿಕರ ಸಂಘ, ಬ್ಯಾಂಕ್ ಮತ್ತು ಇನ್ನಿತರ ಹಣಕಾಸು ಸಂಸ್ಥೆಗಳು ಮಾಧ್ಯಮಿಕ ಸಮೂಹಗಳ ನಿದರ್ಶನಗಳಾಗಿವೆ. ವ್ಯಕ್ತಿಯು ಹುಟ್ಟಿದ ತಕ್ಷಣದಿಂದ ಪ್ರಾಥಮಿಕ ಸಮೂಹಗಳೊಂದಿಗೆ ಸಂಪರ್ಕ ಹೊಂದಿ ಅವನು ಬೆಳೆಯುತ್ತ ಹೋದಂತೆ ಅನೇಕ ಮಾಧ್ಯಮಿಕ ಸಮೂಹಗಳ ಸಂಪರ್ಕವನ್ನು ಹೊಂದುವನು.

ಮಾಧ್ಯಮಿಕ ಸಮೂಹವು, ಪ್ರಾಥಮಿಕ ಸಮೂಹದ ತದ್ವಿರುದ್ಧವಾದ ಲಕ್ಷಣಗಳನ್ನು ಹೊಂದಿರುವುದು. ಚಿಕ್ಕ ಗಾತ್ರದ ಸಮೂಹಗಳು ಪ್ರಾಥಮಿಕ ಸಮೂಹಗಳೆಂದೆನಿಸಿದರೆ, ದೊಡ್ಡ ಗಾತ್ರದ ಸಮೂಹಗಳು ಮಾಧ್ಯಮಿಕ ಸಮೂಹಗಳಾಗಿವೆ. ಅಂದರೆ ಮಾಧ್ಯಮಿಕ ಸಮೂಹಗಳು ಹೆಚ್ಚು ಸದಸ್ಯರನ್ನು ಒಳಗೊಂಡಿರುವವು. ಈ ಬಗೆಯ ಸಮೂಹದ ಸದಸ್ಯರ ಸಂಬಂಧಗಳು ಆಕಸ್ಮಿಕ ಮತ್ತು ಅನಿಶ್ಚಿತವಾಗಿರುವವು. ಅವುಗಳಲ್ಲಿ ಶಾಶ್ವತತೆ ಕಂಡುಬಂದು, ಮಾಧ್ಯಮಿಕ ಸಮೂಹದ ಸದಸ್ಯರ ಸಂಬಂಧಗಳು ಮಿತವಾದ ವ್ಯಾಪ್ತಿಯನ್ನು ಹೊಂದಿರುವವು.

ಅವರಲ್ಲಿಯ ಸಂಬಂಧಗಳು ಸ್ಪರ್ಧಾತ್ಮಕವಾದವುಗಳು. ಪ್ರತಿಯೊಬ್ಬ ಸದಸ್ಯನು ಕೆಲವೇ ಜನರ ವೈಯಕ್ತಿಕ ಪರಿಚಯ ಹೊಂದಿದ್ದು ಅನೇಕ ಸದಸ್ಯರು ಅಪರಿಚಿತರಾಗಿಯೇ ಉಳಿಯುವರು. ಹೀಗಾಗಲು ಮುಖಾಮುಖಿ ಸಂಪರ್ಕವಿಲ್ಲದಿರುವುದೇ ಕಾರಣವಾಗಿದೆ. ಸಮೂಹದ ಸದಸ್ಯರ ಸಂಖ್ಯೆ ಹೆಚ್ಚಿರುವ ಕಾರಣ ಮತ್ತು ಸದಸ್ಯರು ದೂರ ದೂರ ಹರಡಿಕೊಂಡಿರುವ ಕಾರಣ ವೈಯಕ್ತಿಕ ಮುಖಾಮುಖಿ ಸಂಪರ್ಕ ಸಾಧ್ಯವಾಗದು.

ಮಾಧ್ಯಮಿಕ ಸಮೂಹದ ಲಕ್ಷಣಗಳು

ಮಾಧ್ಯಮಿಕ ಸಮೂಹಗಳ ಸ್ವರೂಪವನ್ನು ಅರ್ಥೈಸಿಕೊಳ್ಳಬೇಕಾದರೆ ಅವುಗಳ ಲಕ್ಷಣ ಗಳನ್ನು ಅಭ್ಯಸಿಸುವುದು ಅತ್ಯಗತ್ಯ.

೧. ಗಾತ್ರದಲ್ಲಿ ದೊಡ್ಡದು

ಮಾಧ್ಯಮಿಕ ಸಮೂಹಗಳು ಹೆಚ್ಚು ಸಂಖ್ಯೆಯ ಜನರನ್ನು ಸದಸ್ಯರನ್ನಾಗಿ ಹೊಂದುವ ಕಾರಣ ಅವು ದೊಡ್ಡ ಗಾತ್ರದವುಗಳಾಗಿರುತ್ತವೆ. ಅವು ಕೆಲವೊಮ್ಮೆ ವಿಶ್ವದಾದ್ಯಂತ ಹರಡಿಕೊಂಡಿರುವವು. ಅವುಗಳ ಸದಸ್ಯರು ಪ್ರಪಂಚದ ಉದ್ದಗಲಕ್ಕೂ ಚದುರಿಕೊಂಡಿರ ಬಹುದು. ಇಲ್ಲಿ ಸದಸ್ಯರ ಸಂಖ್ಯೆಗೆ ಮಿತಿಯೆಂಬುದು ಇರುವುದಿಲ್ಲ. ಉದಾಹರಣೆಗೆ, ಬಿ.ಜೆ.ಪಿ. ಮತ್ತು ಕಾಂಗ್ರೆಸ್ಸಿನಂತಹ ರಾಷ್ಟ್ರೀಯ ಪಕ್ಷಗಳು ಕೋಟ್ಯಾಂತರ ಜನ ಸದಸ್ಯರನ್ನು ಹೊಂದಿವೆ.

೨. ಅವೈಯಕ್ತಿಕ ಸಂಬಂಧಗಳು

ಮಾಧ್ಯಮಿಕ ಸಮೂಹಗಳ ಸದಸ್ಯರ ಸಂಬಂಧಗಳು ಔಪಚಾರಿಕ ಮತ್ತು ಅವೈಯಕ್ತಿಕವಾದವುಗಳಾಗಿರುವವು. ಅವರ ಸಂಬಂಧಗಳಲ್ಲಿ ಆತ್ಮೀಯತೆಯ ಕೊರತೆಯಿರುವುದು. ಸದಸ್ಯರ ಮಧ್ಯೆ ವೈಯಕ್ತಿಕ ವಿಷಯಗಳ ಚರ್ಚೆಗೆ ಪ್ರಾಮುಖ್ಯತೆ ಯಿರುವುದಿಲ್ಲ. "ಮುಟ್ಟು ಮತ್ತು ಮುಂದೆ ಸಾಗು" ಈ ಬಗೆಯ ಸಂಪರ್ಕವನ್ನು ಮಾಧ್ಯಮಿಕ ಸಮೂಹಗಳಲ್ಲಿ ಕಾಣಬಹುದು. ಉದಾಹರಣೆಗೆ ನಾವು ಬಸ್ಸಿನಲ್ಲಿ ಸ್ಥಳ ಕಾಯ್ದಿರಿಸುವ ಉದ್ದೇಶದಿಂದ ಬಸ್‌ಸ್ಟ್ಯಾಂಡಿಗೆ ತೆರಳಿ, ಸ್ಥಳ ಕಾಯ್ದಿರಿಸುವ ವಿಭಾಗದಲ್ಲಿಯ ಸಂಬಂಧಪಟ್ಟ ಗುಮಾಸ್ತನನ್ನು ವಿಚಾರಿಸಿ ಹಣಕೊಟ್ಟು ರಿಝರ್ವೇಶನ್ ಚೀಟಿ ತೆಗೆದುಕೊಂಡು ಬರುತ್ತೇವೆ. ಅಲ್ಲಿ ನಾವು ಗುಮಾಸ್ತನ ವೈಯಕ್ತಿಕ ಜೀವನದ ಬಗ್ಗೆ, ಅವನ ಪತ್ನಿ, ಮಕ್ಕಳ ಕ್ಷೇಮದ ಬಗ್ಗೆ ವಿಚಾರಿಸುವುದಿಲ್ಲ. ಅದು ನಮಗೆ ಸಂಬಂಧಪಟ್ಟ ವಿಷಯವೂ ಅಲ್ಲ. ನಮ್ಮ ಕೆಲಸ ಯಾರ ಹತ್ತಿರವಿದೆಯೇ ಅವರನ್ನು ಭೇಟಿಯಾಗಿ, ನಮ್ಮ ಕೆಲಸ ಮುಗಿಸಿಕೊಂಡು ತಕ್ಷಣ ಮರಳುತ್ತೇವೆ. ಇದುವೇ 'ಸ್ಪರ್ಶಿಸು ಮತ್ತು ಹೋಗು' ಮಾದರಿಯ ಸಂಪರ್ಕ.

೩. ಐಚ್ಛಿಕ ಸದಸ್ಯತ್ವ

ಮಾಧ್ಯಮಿಕ ಸಮೂಹಗಳ ಸದಸ್ಯತ್ವ ಐಚ್ಛಿಕವಾದುದಾಗಿದೆ. ಬೇರೆ ಪದಗಳಲ್ಲಿ

ಹೇಳುವುದಾದರೆ, ಇವುಗಳ ಸದಸ್ಯತ್ವ ಕಡ್ಡಾಯವಾಗಿಲ್ಲ. ಸದಸ್ಯತ್ವ ಪಡೆಯುವುದು ಅಥವಾ ಪಡೆಯದಿರುವುದು ವ್ಯಕ್ತಿಯ ವಿಷಯಕ್ಕೆ ಬಿಟ್ಟ ವಿಚಾರ.

೪. ವಿಶೇಷ ಸ್ಥಾನ

ಮಾಧ್ಯಮಿಕ ಸಮೂಹಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ವಿಶೇಷ ಸ್ಥಾನವನ್ನು ಅಲಂಕರಿಸಿರುವನು. ಉದಾಹರಣೆಗೆ, ವಿಶ್ವವಿದ್ಯಾಲಯದಲ್ಲಿ ವೈಸ್-ಚಾನ್ಸಲರ್. ಮಾಧ್ಯಮಿಕ ಸಮೂಹಗಳು ಒಂದು ನಿರ್ದಿಷ್ಟ ಉದ್ದೇಶದ ಈಡೇರಿಕೆಗಾಗಿ ಅಸ್ತಿತ್ವಕ್ಕೆ ಬಂದು, ಆ ಉದ್ದೇಶವನ್ನು ಸಾಧಿಸಿದ ಮೇಲೆ ಅದೃಶ್ಯಗೊಳ್ಳುವವು. ಇವು ಕೃತ್ರಿಮವಾಗಿ ರೂಪಗೊಳ್ಳುವವು. ಇದರ ಸದಸ್ಯರು ಔಪಚಾರಿಕವಾಗಿ ವರ್ತಿಸುವರು. ಸದಸ್ಯರ ಹಿನ್ನೆಲೆಗಳಲ್ಲಿ ಹೆಚ್ಚಿನ ಭಿನ್ನತೆ ಕಾಣಬರುವುದು. ಅನ್ಯೋನ್ಯತೆಯ ಕೊರತೆಯು ಮಾಧ್ಯಮಿಕ ಸಮೂಹದ ಸದಸ್ಯರಲ್ಲಿ ಎದ್ದು ಕಾಣುವುದು.

ಮಾಧ್ಯಮಿಕ ಸಮೂಹಗಳ ಸದಸ್ಯತ್ವವು ಕಡ್ಡಾಯವಾಗಿಲ್ಲ. ವಿಶ್ವವಿದ್ಯಾಲಯ, ಟ್ರೇಡ್ ಯೂನಿಯನ್, ರಾಜಕೀಯಪಕ್ಷ, ನಗರ ಮುಂತಾದವು ಮಾಧ್ಯಮಿಕ ಸಮೂಹಗಳ ಉದಾಹರಣೆಗಳಾಗಿವೆ. ಇವೆಲ್ಲ ಸಮೂಹಗಳ ಸದಸ್ಯತ್ವವು ಐಚ್ಛಿಕವಾಗಿದೆ. ವ್ಯಕ್ತಿಯು ಇಷ್ಟಾನುಸಾರ ಸದಸ್ಯತ್ವ ಪಡೆಯಬಹುದು, ಪಡೆಯದಿರಬಹುದು, ಈಗಾಗಲೇ ಸದಸ್ಯತ್ವ ಹೊಂದಿದ್ದರೆ ಸದಸ್ಯತ್ವವನ್ನು ಹಿಂತೆಗೆದುಕೊಳ್ಳಲೂಬಹುದು.

ಮಾಧ್ಯಮಿಕ ಸಮೂಹಗಳಲ್ಲಿ ಸದಸ್ಯತ್ವವು ಕಡ್ಡಾಯವಾಗಿಲ್ಲ. ವಿಶ್ವವಿದ್ಯಾಲಯ, ಟ್ರೇಡ್ ಯೂನಿಯನ್, ರಾಜಕೀಯಪಕ್ಷ, ನಗರ ಮುಂತಾದವು ಮಾಧ್ಯಮಿಕ ಸಮೂಹಗಳ ಉದಾಹರಣೆಗಳಾಗಿವೆ. ಇವೆಲ್ಲ ಸಮೂಹಗಳ ಸದಸ್ಯತ್ವವು ಐಚ್ಛಿಕವಾಗಿದೆ. ವ್ಯಕ್ತಿಯು ಇಷ್ಟಾನುಸಾರ ಸದಸ್ಯತ್ವ ಪಡೆಯಬಹುದು, ಪಡೆಯದಿರಬಹುದು, ಈಗಾಗಲೇ ಸದಸ್ಯತ್ವ ಹೊಂದಿದ್ದರೆ ಸದಸ್ಯತ್ವವನ್ನು ಹಿಂತೆಗೆದುಕೊಳ್ಳಲೂಬಹುದು.

ಮಾಧ್ಯಮಿಕ ಸಮೂಹದ ವ್ಯಾಖ್ಯೆಗಳು

ಆಗಬರ್ನ್ ಪ್ರಕಾರ "ಆತ್ಮೀಯತೆಯ ಕೊರತೆಯ ಅನುಭವವನ್ನು ಒದಗಿಸಿಕೊಡುವ ಸಮೂಹಗಳನ್ನು ಮಾಧ್ಯಮಿಕ ಸಮೂಹಗಳೆಂಬುದಾಗಿ ಕರೆಯಬಹುದು".

ಎಚ್.ಟಿ. ಮಜುಮ್‌ದಾರ್ ಪ್ರಕಾರ "ಸದಸ್ಯರ ಸಂಬಂಧಗಳಲ್ಲಿ ಮುಖಾಮುಖಿ ಸಂಪರ್ಕ ತೋರದಿದ್ದಲ್ಲಿ ಅದು ಮಾಧ್ಯಮಿಕ ಸಮೂಹವೆನಿಸುವುದು".

"ಆಕಸ್ಮಿಕ ಮತ್ತು ಅವೈಯಕ್ತಿಕ ಸಂಬಂಧಗಳನ್ನು ಹೊಂದಿದ ಸಮೂಹಗಳು ಮಾಧ್ಯಮಿಕ ಸಮೂಹಗಳು. ಇವುಗಳಲ್ಲಿ ಸಂಬಂಧಗಳು ಪರಸ್ಪರ ಸಹಾಯಕಾರಿ ಆಗಿರುವುದಕ್ಕಿಂತ ಹೆಚ್ಚಾಗಿ ಸ್ಪರ್ಧಾತ್ಮಕವಾಗಿರುವವು" ಎಂಬುದಾಗಿ **ಪಿ.ಎಚ್. ಲ್ಯಾಂಡಿಸ್** ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕಿಂಗ್‌ಸ್ಲೇ ಡೇವಿಸ್ ಪ್ರಕಾರ "ಪ್ರಾಥಮಿಕ ಸಮೂಹಗಳ ವಿರುದ್ಧವಾದ ಸಮೂಹಗಳನ್ನು ಮಾಧ್ಯಮಿಕ ಸಮೂಹಗಳೆಂದು ಸ್ಥೂಲವಾಗಿ ವ್ಯಾಖ್ಯಾನಿಸಬಹುದು".

ಈ ಮೇಲ್ಕಾಣಿಸಿದ ವ್ಯಾಖ್ಯೆಗಳಿಂದ ತಿಳಿದುಬರುವುದೇನೆಂದರೆ, ಮಾಧ್ಯಮಿಕ ಸಂಬಂಧಗಳು ಪರಸ್ಪರ ಸಹಾಯಕಾರಿಯಾಗಿರದೆ ಸ್ಪರ್ಧಾತ್ಮಕವಾದವುಗಳಾಗಿರುತ್ತವೆ. ಸದಸ್ಯರು ಅವೈಯಕ್ತಿಕ ಮತ್ತು ಔಪಚಾರಿಕ ಸಂಬಂಧಗಳನ್ನು ಹೊಂದಿರುವರು. ಅವರಲ್ಲಿ ಆತ್ಮೀಯತೆಯ ಕೊರತೆ ಎದ್ದು ಕಾಣುತ್ತದೆ. ಪರೀಕ್ಷಾ ನಿಯಂತ್ರಣಾಧಿಕಾರಿ, ಪ್ರಾಧ್ಯಾಪಕರು, ಲೆಕ್ಕಾಧಿಕಾರಿಗಳು ಮುಂತಾದವರು ಈ ಸಮೂಹದಲ್ಲಿ ಬರುತ್ತಾರೆ. ಇವರೆಲ್ಲರಿಗೂ ಪ್ರತ್ಯೇಕ ಮತ್ತು ವಿಶೇಷ ಸ್ಥಾನವನ್ನು ನೀಡಲಾಗಿರುತ್ತದೆ. ಪ್ರತಿಯೊಬ್ಬರೂ ತಮ್ಮ ಸ್ಥಾನಕ್ಕನುಗುಣವಾಗಿ ವರ್ತಿಸುವರು.

೫. ಆಸಕ್ತ ಮತ್ತು ಅನಾಸಕ್ತ ಸದಸ್ಯರು

ಮಾಧ್ಯಮಿಕ ಸಮೂಹವು ವಿಶಾಲವಾಗಿದ್ದು ಹೆಚ್ಚು ಜನ ಸದಸ್ಯರನ್ನು ಒಳಗೊಂಡಿರುವುದು. ಇದರಲ್ಲಿ ಕೆಲವರು ಆಸಕ್ತರು, ಚುರುಕುತನದಿಂದ ಕೆಲಸ ಮಾಡುವವರಾಗಿದ್ದರೆ, ಇನ್ನು ಕೆಲವರು ಮೈಗಳ್ಳರಿರುವರು. ಅನಾಸಕ್ತಿ, ಅಸಡ್ಡೆ ಅವರಲ್ಲಿ ಮನೆ ಮಾಡಿಕೊಂಡಿರುವುದು. ಹೆಚ್ಚಿನ ಸಂಖ್ಯೆಯ ಸದಸ್ಯರು ನಾಮಮಾತ್ರ ಸದಸ್ಯರಾಗಿದ್ದು ಸಮೂಹದ ಕಾರ್ಯಗಳತ್ತ ಗಮನ ನೀಡುವುದಿಲ್ಲ. ಉದಾಹರಣೆಗೆ ಕಾರ್ಮಿಕ ಸಂಘವನ್ನು ತೆಗೆದುಕೊಳ್ಳೋಣ. ಹೆಚ್ಚಿನ ಕಾರ್ಮಿಕರು ಕಾರ್ಮಿಕ ಸಂಘದ ಸದಸ್ಯತ್ವ ಹೊಂದಿರುವರು. ಆದರೆ ಅವರೆಲ್ಲರೂ ಆ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಿಲ್ಲ. ಕೆಲವೇ ಕಾರ್ಮಿಕರು ಬಲು ಆಸಕ್ತಿಯಿಂದ ಸಂಘದ ಕೆಲಸ ಕಾರ್ಯಗಳಲ್ಲಿ ತೊಡಗುವರು.

೬. ಅಪ್ರತ್ಯಕ್ಷ ಸಂಬಂಧಗಳು

ಮಾಧ್ಯಮಿಕ ಸಮೂಹದ ಸದಸ್ಯರಲ್ಲಿ ಅಪ್ರತ್ಯಕ್ಷ ಸಹಕಾರ ಮತ್ತು ಸಂಪರ್ಕವಿರುವುದು. ಈ ಬಗೆಯ ಸಮೂಹದ ಸದಸ್ಯರು ವಿವಿಧ ಸ್ಥಳಗಳಲ್ಲಿ ಚದುರಿರುವುದರಿಂದ ಮುಖಾಮುಖಿ ಸಂಪರ್ಕ ಸಾಧ್ಯವಾಗಲಾರದು. ಸದಸ್ಯರು ಅಂಚೆ ಪತ್ರಗಳು, ವೃತ್ತಪತ್ರಿಕೆ, ಟೆಲಿಫೋನ್ ಇತ್ಯಾದಿ ಸಾಧನಗಳ ಮೂಲಕ ಒಬ್ಬರನ್ನೊಬ್ಬರು ಸಂಪರ್ಕಿಸುವರು.

೭. ಉದ್ದೇಶ

ನಿರ್ದಿಷ್ಟ ಉದ್ದೇಶವಿಲ್ಲದೆ ಮಾಧ್ಯಮಿಕ ಸಮೂಹ ಅಸ್ತಿತ್ವಕ್ಕೆ ಬಂದು ಒಂದು ನಿರ್ದಿಷ್ಟ ಗುರಿಯ ಸಾಧನೆಗಾಗಿಯೇ ಜನರು ಮಾಧ್ಯಮಿಕ ಸಮೂಹಗಳ ಸದಸ್ಯತ್ವ ಪಡೆಯುವರು. ಯುವಕ-ಯುವತಿಯರಿಗೆ ಉತ್ತಮ ಶಿಕ್ಷಣ ನೀಡಬೇಕೆಂಬುದು ವಿಶ್ವವಿದ್ಯಾಲಯದ ಉದ್ದೇಶ. ಅಂದರೆ ಯುವಕರ ಮತ್ತು ಯುವತಿಯರ ಉದ್ದೇಶವು ವಿಶ್ವವಿದ್ಯಾಲಯದಲ್ಲಿ ಶಿಕ್ಷಣವನ್ನು ಪಡೆದು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳುವುದಾಗಿದೆ.

೮. ಔಪಚಾರಿಕ ನಿಯಮಗಳು

ಅನೌಪಚಾರಿಕ ನಿಯಮಗಳು ಮಾಧ್ಯಮಿಕ ಸಮೂಹದ ಸದಸ್ಯರ ವರ್ತನೆಯನ್ನು ಅಂಕಿತದಲ್ಲಿಟ್ಟುಕೊಳ್ಳಲಾರವು. ಅವುಗಳ ಬದಲಾಗಿ ಇಲ್ಲಿ ಔಪಚಾರಿಕ ಕಾನೂನುಗಳು

ಜಾರಿಯಲ್ಲಿರುವವು. ಇಲ್ಲಿ ಸದಸ್ಯರ ಹಕ್ಕು ಮತ್ತು ಕರ್ತವ್ಯಗಳನ್ನು ಸ್ಫುಟವಾಗಿ ನಮೂದಿಸಲಾಗುತ್ತದೆ. ಪ್ರತಿಯೊಬ್ಬ ಸದಸ್ಯನು ನಿಯಮಗಳಿಗನುಗುಣವಾಗಿ ನಡೆಯುವುದು ಅವಶ್ಯವಾಗಿದೆ. ಇಲ್ಲವಾದಲ್ಲಿ ಶಿಸ್ತಿನ ಕ್ರಮ ಕೈಕೊಳ್ಳಲಾಗುವುದು. ಮಾಧ್ಯಮಿಕ ಸಮೂಹಗಳಲ್ಲಿ ಕರಾರುಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿರುತ್ತದೆ.

ಮಾಧ್ಯಮಿಕ ಸಮೂಹದ ಮಹತ್ವ

ಆಧುನಿಕ ಸಂಕೀರ್ಣ ಸಮಾಜದಲ್ಲಿ ಮಾಧ್ಯಮಿಕ ಸಮೂಹಗಳು ಮಹತ್ತರವಾದ ಪಾತ್ರವನ್ನು ವಹಿಸುತ್ತಿವೆ. ಅವುಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಔದ್ಯೋಗಿಕ ಕ್ರಾಂತಿಗಿಂತ ಮುಂಚೆ ಸಮಾಜಗಳು ಸರಳ ಮತ್ತು ಚಿಕ್ಕದಾಗಿದ್ದವು ಮತ್ತು ಅವುಗಳ ಜನಸಂಖ್ಯೆ ಕಡಿಮೆಯಾಗಿದ್ದು ಅವರೆಲ್ಲರೂ ಒಟ್ಟುಗೂಡಿ ವಾಸ ಮಾಡುತ್ತಿದ್ದರು. ಅವರ ಬೇಡಿಕೆಗಳು ಕನಿಷ್ಟ ಪ್ರಮಾಣದ್ದಾಗಿದ್ದವು. ಅವರ ಅಂದಿನ ಬೇಡಿಕೆಗಳನ್ನು ಪ್ರಾಥಮಿಕ ಸಮೂಹಗಳು ಯಶಸ್ವಿ ರೀತಿಯಲ್ಲಿ ಪೂರೈಸುತ್ತಿದ್ದವು. ಆದರೆ ಆಧುನಿಕ ಯುಗದಲ್ಲಿ ಜನಸಂಖ್ಯೆ ತುಂಬಾ ವೃದ್ಧಿಯಾಗಿ ಸಮಾಜಗಳ ಗಾತ್ರ ದೊಡ್ಡದಾಗಿದೆ. ಸದಸ್ಯರ ಆಸೆ-ಆಕಾಂಕ್ಷೆಗಳು ಹೆಚ್ಚಿವೆ. ಯಂತ್ರಗಳ ಬಳಕೆ ಹೆಚ್ಚುತ್ತಿದೆ. ಇವೆಲ್ಲವುಗಳ ಪರಿಣಾಮವಾಗಿ ಮಾಧ್ಯಮಿಕ ಸಮೂಹಗಳು ಹೆಚ್ಚು ಸಂಖ್ಯೆಯಲ್ಲಿ ಬೆಳೆಯುತ್ತಿವೆ. ದಿನನಿತ್ಯದ ಜೀವನದಲ್ಲಿ ಇವುಗಳ ಅಗತ್ಯತೆ ಹೆಚ್ಚಿದೆ.

ಗುಡಿ ಕೈಗಾರಿಕೆಗಳ ಬದಲಾಗಿ ಇಂದು ಬೃಹತ್ ಗಿರಣಿ-ಕಾರ್ಖಾನೆಗಳು ತಲೆಯೆತ್ತಿವೆ. ಗಿರಣಿ ಕಾರ್ಖಾನೆಗಳಲ್ಲಿ ದುಡಿಯಲೋಸುಗ ಜನರು ಹಳ್ಳಿಗಳಿಂದ ಪಟ್ಟಣಗಳಿಗೆ ಧಾವಿಸುವ ಕಾರಣ ವಲಸೆ ಪ್ರಮಾಣ ಜಾಸ್ತಿಯಾಗಿದೆ. ನಗರಗಳ ಜನಸಂಖ್ಯೆ ಅತಿಯಾಗಿ ಹೆಚ್ಚಿ ಅವು ಮಹಾನಗರಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಇಂತಹ ಬದಲಾಗುತ್ತಿರುವ ಸಮಾಜದಲ್ಲಿ ಮಾಧ್ಯಮಿಕ ಸಮೂಹಗಳ ಜೊತೆಗಿನ ವ್ಯವಹಾರ ಜಾಸ್ತಿಯಾಗುತ್ತಿದೆ.

ಮಾಧ್ಯಮಿಕ ಸಮೂಹದಲ್ಲಿ ಶ್ರಮವಿಭಜನೆಯಿದ್ದು ನಿಯಮಗಳನುಸಾರ ಕಾರ್ಯವು ನಡೆಯುವುದು. ಸದಸ್ಯರ ಕಾರ್ಯದಕ್ಷತೆಯನ್ನು ಅವಲೋಕಿಸಲು ಔಪಚಾರಿಕ ಆಡಳಿತ ಸಮಿತಿ ಇರುವುದು. ತತ್ಕಾರಣ ಸರ್ವ ಸದಸ್ಯರು ಕಾರ್ಯಕ್ಷಮತೆಯನ್ನು ತೋರುವರು. ಮಾಧ್ಯಮಿಕ ಸಮೂಹಗಳಲ್ಲಿ ಹೆಚ್ಚಿನ ಕಾರ್ಯದಕ್ಷತೆಯನ್ನು ಕಾಣಬಹುದು.

ಔದ್ಯೋಗಿಕ ಕ್ರಾಂತಿಗಿಂತ ಮುಂಚೆ ಉದ್ಯೋಗಾವಕಾಶಗಳು ವಿರಳವಾಗಿದ್ದವು. ಅಲ್ಲಿ ವಿಶೇಷತೆಗೆ ಅವಕಾಶವಿರಲಿಲ್ಲ. ಜನರು ಕೃಷಿ ಮತ್ತು ವ್ಯಾಪಾರದಲ್ಲಿ ನಿರತರಾಗಿರುತ್ತಿದ್ದರು. ಆದರೆ ವಿಜ್ಞಾನ ಮತ್ತು ತಂತ್ರರಂಗದಲ್ಲಾದ ಆಮೂಲಾಗ್ರ ಬೆಳವಣಿಗೆಯಿಂದಾಗಿ ಸಾವಿರಾರು ಬಗೆಯ ವೈವಿಧ್ಯಮಯ ಉದ್ಯೋಗಗಳು ಹುಟ್ಟಿಕೊಂಡಿವೆ. ಕಾರ್ಖಾನೆಗಳಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್, ವಿಮಾನಯಾನ ಖಾತೆಯಲ್ಲಿ ಗಗನಸಖಿ, ರೈಲ್ವೆ ಸ್ಟೇಶನ್ ಮಾಸ್ಟರ್, ಇಂಜನೀಯರ್, ಸ್ಟಾಕ್ ಎಕ್ಸ್‌ಚೇಂಜ್ ಬ್ರೋಕರ್ಸ್ (ದಲ್ಲಾಳಿಗಳು) ಮುಂತಾದ ಹುದ್ದೆಗಳು ಔದ್ಯೋಗಿಕ ಕ್ರಾಂತಿಯ ನಂತರ ಸೃಷ್ಟಿಗೊಂಡಿವೆ. ಎಲ್ಲ ರಂಗದಲ್ಲೂ ವಿಶೇಷತೆಗೆ ಪ್ರಾಮುಖ್ಯತೆ ಹೆಚ್ಚುತ್ತಿದೆ. ಹಾಗಾಗಿ ಸಾಮರ್ಥ್ಯ ಹೊಂದಿದ ವ್ಯಕ್ತಿಗಳು ಗಿರಣಿ

ಕಾರ್ಖಾನೆಗಳಲ್ಲಿ, ವ್ಯಾಪಾರೋದ್ಯಮಗಳಲ್ಲಿ ಹಾಗೂ ತಾಂತ್ರಿಕ ಸೇವೆಯನ್ನು ಒದಗಿಸಿ ಕೊಡುವಲ್ಲಿ ಹೆಚ್ಚಿನ ಸ್ಥಾನಮಾನ ಪಡೆಯಬಹುದಾಗಿದೆ.

ಮಾಧ್ಯಮಿಕ ಸಮೂಹಗಳು ಗಾತ್ರದಲ್ಲಿ ವಿಶಾಲವಾಗಿರುತ್ತವೆ. ವಿಭಿನ್ನ ಭಾಷೆ, ಜಾತಿ ಜನಾಂಗ, ಪ್ರದೇಶಗಳ ಜನರು ಅವುಗಳ ಸದಸ್ಯತ್ವ ಹೊಂದಿರುವರು, ಪರಸ್ಪರ ಸಂಪರ್ಕ ಹೊಂದುವರು. ಇದರಿಂದಾಗಿ ಜಾತೀಯತೆ, ಸ್ಥಾನಿಕತೆಯ ಬಂಧನಗಳು ದೂರವಾಗುತ್ತವೆ. ಜನರು ಭಾಷೆ, ಜಾತಿ ವೈಷಮ್ಯಗಳನ್ನು, ಬೇಧಭಾವಗಳನ್ನು ತೊರೆದು ವಿಶಾಲ ಮನೋಭಾವನೆ ಬೆಳೆಸಿಕೊಳ್ಳುವರು.

ಇಂದು ಪ್ರಾಥಮಿಕ ಸಮೂಹಗಳಿಗಿಂತಲೂ ಮಾಧ್ಯಮಿಕ ಸಮೂಹಗಳ ಅವಶ್ಯಕತೆ ಹೆಚ್ಚುತ್ತಿದೆ. ಇದರರ್ಥ ಪ್ರಾಥಮಿಕ ಸಮೂಹಗಳು ಅವಶ್ಯವಿಲ್ಲವೆಂದಲ್ಲ. ಪ್ರಾಥಮಿಕ ಮತ್ತು ಮಾಧ್ಯಮಿಕ ಸಮೂಹಗಳೆರಡೂ ತಮ್ಮದೇ ಆದ ಮಹತ್ವವನ್ನು, ಪ್ರಯೋಜನವನ್ನು ಹೊಂದಿವೆ. ಪ್ರಾಥಮಿಕ ಸಮೂಹಗಳಿಲ್ಲದೆ ಹೋದರೆ ಮಾಧ್ಯಮಿಕ ಸಮೂಹಗಳು ಬೇರಿಲ್ಲದ ಮರದಂತಾಗುತ್ತವೆ. ಪ್ರಾಥಮಿಕ ಸಮೂಹಗಳೆಂಬ ಬೇರುಗಳಿಂದಾಗಿ ಮಾಧ್ಯಮಿಕ ಸಮೂಹಗಳೆಂಬ ರೆಂಬೆಗಳು ಬಹು ವಿಸ್ತರಿಸಿ, ಪಸರಿಸಿ ಬೆಳೆಯುತ್ತಿವೆ.

ಇಂದು, ಒಂದು ದಿನದ ಮಟ್ಟಿಗೆ ಬಸ್ಸಿನ ಸಂಚಾರ ನಿಂತಲ್ಲಿ ಜನಜೀವನ ಅಸ್ತವ್ಯಸ್ತಗೊಳ್ಳುವುದು. ಅದೇ ರೀತಿ ಒಂದು ದಿನ ಬ್ಯಾಂಕ್ ಮುಚ್ಚಿದರೆ ವ್ಯಾಪಾರಕ್ಕೆ ಧಕ್ಕೆಯೊದಗುವದು. ಸ್ಟಾಕ್ ಎಕ್ಸ್‌ಚೇಂಜ್ ಒಂದು ದಿನ ಮುಚ್ಚಿಕೊಂಡರೆ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಿಂತು ಹೋಗುವುದು. ಬ್ಯಾಂಕು, ಸ್ಟಾಕ್ ಎಕ್ಸ್‌ಚೇಂಜ್ ಮುಂತಾದವುಗಳು ಮಾಧ್ಯಮಿಕ ಸಮೂಹಗಳಾಗಿವೆ.

ಪ್ರಾಥಮಿಕ ಮತ್ತು ಮಾಧ್ಯಮಿಕ ಸಮೂಹಗಳ ನಡುವಿನ ವ್ಯತ್ಯಾಸ

ಮುಖಾಮುಖಿ ಸಂಪರ್ಕ, ಆತ್ಮೀಯತೆ, ವೈಯಕ್ತಿಕ ಸಂಬಂಧಗಳು ಪ್ರಾಥಮಿಕ ಸಮೂಹಗಳಲ್ಲಿ ಕಂಡು ಬಂದರೆ, ಅಪ್ರತ್ಯಕ್ಷ, ಅವೈಯಕ್ತಿಕ ಸಂಬಂಧಗಳು ಮಾಧ್ಯಮಿಕ ಸಮೂಹಗಳಲ್ಲಿ ಕಾಣಬರುವವು. ಪ್ರಾಥಮಿಕ ಸಮೂಹಗಳು ಚಿಕ್ಕದಾಗಿದ್ದು ಕಡಿಮೆ ಸಂಖ್ಯೆಯ ಸದಸ್ಯರನ್ನು ಒಳಗೊಂಡಿರುವವು. ಅವಕ್ಕೆ ತದ್ವಿರುದ್ಧವಾಗಿ, ಮಾಧ್ಯಮಿಕ ಸಮೂಹಗಳು ವಿಶಾಲ ವ್ಯಾಪ್ತಿಯನ್ನು ಹೊಂದಿದ್ದು ಹೆಚ್ಚು ಜನರನ್ನು ಸದಸ್ಯರನ್ನಾಗಿ ಹೊಂದಿರುವವು.

ಭೌತಿಕ ಸಾಮೀಪ್ಯತೆ ಚಿಕ್ಕ ಗಾತ್ರದ ಪ್ರಾಥಮಿಕ ಸಮೂಹಗಳಲ್ಲಿ ಹೆಚ್ಚಾಗಿ ಕಂಡುಬರುವುದು. ಆದರೆ ಮಾಧ್ಯಮಿಕ ಸಮೂಹಗಳ ಸದಸ್ಯರು ವಿಶ್ವದಾದ್ಯಂತ ಹರಡಿಕೊಂಡಿರುವ ಸಾಧ್ಯತೆಯಿರುವ ಕಾರಣ, ಸದಸ್ಯರಲ್ಲಿ ಭೌತಿಕ ಸಾಮೀಪ್ಯತೆ ಅಷ್ಟೊಂದಾಗಿರದು. ಸದಸ್ಯರ ಮಧ್ಯೆ 'ಮುಟ್ಟು ಮತ್ತು ಮುಂದೆ ಸಾಗು' ರೀತಿಯ ತಾತ್ಕಾಲಿಕ ಸಂಬಂಧಗಳೇ ಹೆಚ್ಚಾಗಿರುತ್ತವೆ.

ಒಟ್ಟಿನಲ್ಲಿ **ಕಿಂಗ್‌ಸ್ಲೇ ಡೇವಿಸ್** ಹೇಳಿರುವಂತೆ ಮಾಧ್ಯಮಿಕ ಸಮೂಹಗಳು, ಪ್ರಾಥಮಿಕ

ಸಮೂಹಗಳ ತದ್ವಿರುದ್ಧವಾದ ಸಮೂಹಗಳಾಗಿವೆ. ಈ ಎರಡು ಬಗೆಯ ಸಮೂಹಗಳ ನಡುವಿನ ಪ್ರಮುಖ ವ್ಯತ್ಯಾಸಗಳನ್ನು ವಿಭಾಗ ಮಾಡುವ ಮೂಲಕ ಪರಿಶೀಲಿಸುವಾ.

ಪ್ರಾಥಮಿಕ ಸಮೂಹ	ಮಾಧ್ಯಮಿಕ ಸಮೂಹ
೧. ಪ್ರಾಥಮಿಕ ಸಮೂಹದ ಸದಸ್ಯತ್ವ ಕೆಲವೇ ಜನರಿಗೆ ಸೀಮಿತಗೊಂಡಿರುವುದು. ಇದರ ಕ್ಷೇತ್ರವ್ಯಾಪ್ತಿಯು ಸೀಮಿತವಾದುದು. ಇದರ ಫಲವಾಗಿ ಪ್ರಾಥಮಿಕ ಸಮೂಹದ ಗಾತ್ರ ಚಿಕ್ಕದಾಗಿರುವುದು. ಒಂದು ವೇಳೆ ಅದರ ಗಾತ್ರ ದೊಡ್ಡದಾದಲ್ಲಿ ಅದರ ಮುಖ್ಯ ಉದ್ದೇಶಕ್ಕೆ ಭಂಗ ಬರುತ್ತದೆ. ಅಂದರೆ ಅದು ಪ್ರಾಥಮಿಕ ಸಮೂಹದ ಲಕ್ಷಣವನ್ನು ಕಳೆದುಕೊಂಡು ಮಾಧ್ಯಮಿಕ ಕುಟುಂಬ, ನೆರೆಹೊರೆ, ಶಾಲೆ, ಮಕ್ಕಳ ಆಟದ ತಂಡ, ಹಳ್ಳಿ, ಸಮವಯಸ್ಕರ ಸಮೂಹ, ಹರಟೆಗಾರರ ಗುಂಪು ಇತ್ಯಾದಿ ಪ್ರಾಥಮಿಕ ಸಮೂಹದ ಉದಾಹರಣೆಗಳಾಗಿವೆ. ಇವೆಲ್ಲವೂ ಗಾತ್ರದಲ್ಲಿ ಚಿಕ್ಕವುಗಳಾಗಿರುವವು.	೧. ಮಾಧ್ಯಮಿಕ ಸಮೂಹದ ವ್ಯಾಪ್ತಿ ವಿಶಾಲವಾಗಿದ್ದು, ಕೆಲವೊಮ್ಮೆ ಇಡೀ ಪ್ರಪಂಚವನ್ನೇ ಆವರಿಸುತ್ತದೆ. ಸದಸ್ಯರ ಸಂಖ್ಯೆ ಅಗಣಿತವಾದುದಾಗಿರಬಹುದು. ತತ್ಕಾರಣ ಈ ಬಗೆಯ ಸಮೂಹದ ಗಾತ್ರ ಸಹಜವಾಗಿ ದೊಡ್ಡದಾಗಿರುವುದು. ರೆಡ್‌ಕ್ರಾಸ್ ಸೊಸೈಟಿಯಂತಹ ದೊಡ್ಡ ಸಮೂಹಗಳು ವಿಶ್ವದಾದ್ಯಂತ ಸದಸ್ಯರನ್ನು ಹೊಂದಿರುತ್ತವೆ. ರಾಜಕೀಯ ಪಕ್ಷ, ಟ್ರೇಡ್‌ಯೂನಿಯನ್, ಕಾರ್ಪೋರೇಶನ್, ಕಾರ್ಮಿಕರ ಸಂಘ, ನಗರ, ದೇಶ, ಬ್ಯಾಂಕು, ವಿಶ್ವವಿದ್ಯಾಲಯ, ಗ್ರಾಹಕರ ಸಂಘ ಮುಂತಾದವು ಮಾಧ್ಯಮಿಕ ಸಮೂಹದ ಉದಾಹರಣೆಗಳು. ಇವುಗಳ ಗಾತ್ರ ವಿಶಾಲವಾಗಿರುವುದು ಸ್ಪಷ್ಟವಾಗಿರುತ್ತದೆ.
೨. ಪ್ರಾಥಮಿಕ ಸಮೂಹಗಳ ಸದಸ್ಯರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ ಹೆಚ್ಚು ಕಡಿಮೆ ಒಂದೇಯಾಗಿರುವುದು.	೨. ಮಾಧ್ಯಮಿಕ ಸಮೂಹಗಳ ಸದಸ್ಯರ ಹಿನ್ನೆಲೆಯಲ್ಲಿ ಅಸಮಾನತೆಗಳಿರುವವು. ಅವರೆಲ್ಲರೂ ಒಂದೇ ಬಗೆಯ ಹಿನ್ನೆಲೆಯಿಂದ ಬಂದವರಾಗಿರುವುದಿಲ್ಲ.
೩. ಪ್ರಾಥಮಿಕ ಸಮೂಹದ ಸದಸ್ಯರು ಪರಸ್ಪರ ನೇರ ಅಥವಾ ಪ್ರತ್ಯಕ್ಷ ರೀತಿಯಲ್ಲಿ ಸಹಕರಿಸುವರು. ತಮ್ಮ ಸಾಮಾನ್ಯ ಗುರಿಸಾಧನೆಗಾಗಿ ಸರ್ವ ಸದಸ್ಯರು ಒಟ್ಟುಗೂಡಿ ಕಾರ್ಯ ಮಾಡುವರು. ಒಬ್ಬರು ಇನ್ನೊಬ್ಬರಿಗೆ ಮುಕ್ತ ಮನಸ್ಸಿನಿಂದ ಸಹಾಯ ಮಾಡುವರು.	೩. ಮಾಧ್ಯಮಿಕ ಸಮೂಹದ ಸದಸ್ಯರು ಬೇರೆ ಬೇರೆಡೆಗೆ ಹರಡಿಕೊಂಡಿರುವ ಕಾರಣ, ಅವರಲ್ಲಿ ಪ್ರತ್ಯಕ್ಷ ಸಹಕಾರ ಕಾಣಬರದು. ಸದಸ್ಯರು ತಮ್ಮ ತಮ್ಮ ಕಾರ್ಯಗಳನ್ನು ಮಾಡುವ ಮೂಲಕ ಅಪ್ರತ್ಯಕ್ಷವಾದ ರೀತಿಯಲ್ಲಿ ಸಹಕಾರ ನೀಡುವರು.

೪. ಪ್ರಾಥಮಿಕ ಸಮೂಹಗಳ ಸದಸ್ಯರ ಸಂಖ್ಯೆ ಮಿತವಾಗಿರುವ ಕಾರಣ ಸದಸ್ಯರಲ್ಲಿ ಪರಸ್ಪರ ನೇರ ಆತ್ಮೀಯ ಮತ್ತು ವೈಯಕ್ತಿಕ ಸಂಬಂಧಗಳಿರುತ್ತವೆ. ಅವರು ಪರಸ್ಪರ ಮುಖಾಮುಖಿಯಾಗಿ ಭೇಟಿಯಾಗುವರು. ಇದರಿಂದಾಗಿ ನೇರ ಸಂಪರ್ಕಗಳು ಸಾಧ್ಯವಾಗಿವೆ. ಸದಸ್ಯರ ಮಧ್ಯದ ಸಂಬಂಧಗಳು ವ್ಯಕ್ತಿಗತವಾಗಿರುವವು.	೪. ಮಾಧ್ಯಮಿಕ ಸಮೂಹದ ಸದಸ್ಯರಲ್ಲಿಯ ಪರಸ್ಪರ ಸಂಬಂಧಗಳು ಔಪಚಾರಿಕ - ಅವೈಯಕ್ತಿಕವಾದವುಗಳಾಗಿರುತ್ತವೆ. ಆತ್ಮೀಯತೆಯ ಕೊರತೆ ಅಲ್ಲಿ ಎದ್ದು ಕಾಣುತ್ತದೆ. ಸದಸ್ಯರು ಒಬ್ಬರನ್ನೊಬ್ಬರು ಮುಖಾಮುಖಿಯಾಗಿ ಭೇಟಿಯಾಗುವ ಅವಕಾಶಗಳು ಕಡಿಮೆಯಿರುತ್ತವೆ. ತತ್ಕಾರಣ 'ಸ್ಪರ್ಶಿಸು ಮತ್ತು ಹೋಗು' ವಿಧದ ಸಂಬಂಧಗಳು ಇಲ್ಲಿ ಹೆಚ್ಚಾಗಿರುವವು.
೫. ಈ ಬಗೆಯ ಸಮೂಹದಲ್ಲಿ ಸರ್ವ ಸದಸ್ಯರು ಸಾಮಾನ್ಯ ಆಸಕ್ತಿ, ಅಭಿರುಚಿಗಳನ್ನು ಹೊಂದಿರುವರು. ಅವರ ಸಾಮಾನ್ಯ ಧ್ಯೇಯೋದ್ದೇಶಗಳನ್ನು ಸಾಧಿಸಿಕೊಳ್ಳಲೋಸುಗ ಎಲ್ಲರೂ ಕಷ್ಟಪಟ್ಟು ದುಡಿಯುವರು. ಹಾಗಾಗಿ ಇಲ್ಲಿ ಸದಸ್ಯರೆಲ್ಲರೂ ಜೊತೆಗೂಡಿ ಒಟ್ಟಿನಲ್ಲಿ ಪ್ರಯತ್ನ ಮಾಡುವರು.	೫. ಮಾಧ್ಯಮಿಕ ಸಮೂಹದ ಸದಸ್ಯರು ಸ್ವಾರ್ಥಪರತೆಯ ಗುರಿಗಳನ್ನು ಹೊಂದಿರುವರು. ಇಂತಹ ಸಮೂಹಗಳನ್ನು ಸೇರುವ ಉದ್ದೇಶ ಸ್ವಾರ್ಥ ಸಾಧನೆ ತತ್ಕಾರಣ ಸಾಮೂಹಿಕ ಪ್ರಯತ್ನಗಳು ಇಲ್ಲಿ ಸಾಗುವುದಿಲ್ಲ.
೬. ಪ್ರಾಥಮಿಕ ಸಮೂಹದಲ್ಲಿ ಔಪಚಾರಿಕ ನಿಯಮಗಳು ಜಾರಿಯಲ್ಲಿರುವುದಿಲ್ಲ. ಸಂಪ್ರದಾಯ, ನೀತಿ-ನಿಯಮಗಳು, ಸದಸ್ಯರ ಪರಿವರ್ತನೆಯನ್ನು ಅಂಕಿತದಲ್ಲಿಟ್ಟುಕೊಳ್ಳುವವು.	೬. ಮಾಧ್ಯಮಿಕ ಸಮೂಹದಲ್ಲಿ ಔಪಚಾರಿಕ ಸಾಮಾಜಿಕ ನಿಯಂತ್ರಣವಿರುವುದು. ಸದಸ್ಯರ ಪರಸ್ಪರ ಸಂಬಂಧಗಳು ಕಾನೂನುಬದ್ಧವಾಗಿರುತ್ತವೆ.
೭. ಪ್ರಾಥಮಿಕ ಸಮೂಹಗಳ ಸದಸ್ಯತ್ವ ಕಡ್ಡಾಯವಾದುದು. ಅದು ಸ್ಥಿರ ಸ್ವರೂಪದ್ದಾಗಿದ್ದು ಜೀವನ	೭. ಮಾಧ್ಯಮಿಕ ಸಮೂಹಗಳ ಸದಸ್ಯತ್ವ ಐಚ್ಛಿಕವಾದುದು. ಇವು ತಾತ್ಕಾಲಿಕವಾದ ಸಮೂಹಗಳು.
೮. ಪ್ರಾಥಮಿಕ ಸಮೂಹದಲ್ಲಿ ಪ್ರತಿಯೊಬ್ಬ ಸದಸ್ಯನ ಸ್ಥಾನವು ಕುಟುಂಬದ ಆಧಾರದ ಮೇಲೆ ನಿರ್ಧರಿಸಲ್ಪಡುತ್ತದೆ.	೮. ಮಾಧ್ಯಮಿಕ ಸಮೂಹದಲ್ಲಿ ಸದಸ್ಯನ ಸ್ಥಾನವು ಕಾರ್ಯದ ಆಧಾರದ ಮೇಲೆ ನಿರ್ಧರಿಸಲ್ಪಡುವುದು. ಸ್ಥಾನವನ್ನು ನಿರ್ಧರಿಸುವಲ್ಲಿ ವ್ಯಕ್ತಿಯ ಕುಟುಂಬವನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

೯. ಪ್ರಾಥಮಿಕ ಸಮೂಹಗಳು ಪುರಾತನ ಮತ್ತು ಗ್ರಾಮೀಣ ಸಮಾಜಗಳಲ್ಲಿ ಹೆಚ್ಚಾಗಿ ಕಾಣಬರುವವು.	೯. ಮಾಧ್ಯಮಿಕ ಸಮೂಹಗಳು ನಗರ ಪ್ರದೇಶಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದುದು ಕಂಡುಬರುತ್ತವೆ.
೧೦. ಪ್ರಾಥಮಿಕ ಸಮೂಹವು ಚಿಕ್ಕದಾಗಿರುವ ಕಾರಣ ಅದು ಬೇರೆ ಯಾವುದೇ ಸಮೂಹವನ್ನು ಒಳಗೊಂಡಿರುವುದಿಲ್ಲ.	೧೦. ಮಾಧ್ಯಮಿಕ ಸಮೂಹವು ದೊಡ್ಡದಾಗಿರುವ ಕಾರಣ ಹಲವಾರು ಸಮೂಹಗಳನ್ನು ಒಳಗೊಂಡಿರುವುದು. ಉದಾಹರಣೆಗೆ ದೇಶ. ಒಂದು ದೇಶವು ಅನೇಕ ಸಮೂಹಗಳನ್ನು ಹೊಂದಿರುವುದು.
೧೧. ಪ್ರಾಥಮಿಕ ಸಮೂಹವು ವ್ಯಕ್ತಿಯ ಸರ್ವತೋಮುಖ ವ್ಯಕ್ತಿತ್ವಕ್ಕೆ ಸಂಬಂಧಪಟ್ಟಿರುವುದು. ಉದಾ:- ಕುಟುಂಬವು ತನ್ನ ಸದಸ್ಯರ ಸರ್ವತೋಮುಖ ವ್ಯಕ್ತಿತ್ವವನ್ನು ರೂಪಿಸುವುದು.	೧೧. ಮಾಧ್ಯಮಿಕ ಸಮೂಹವು ವ್ಯಕ್ತಿಯ ವ್ಯಕ್ತಿತ್ವದ ಒಂದು ನಿರ್ದಿಷ್ಟ ಭಾಗದ ಬಗ್ಗೆ ಸಂಬಂಧಪಟ್ಟಿರುವುದು. ಅಂದರೆ ಈ ಸಮೂಹವು ವ್ಯಕ್ತಿಯ ಸಂಪೂರ್ಣ ವ್ಯಕ್ತಿತ್ವವನ್ನು ರೂಪಿಸಲಾರದು.
೧೨. ಪ್ರಾಥಮಿಕ ಸಮೂಹದಲ್ಲಿ ಸರ್ವ ಸದಸ್ಯರು, ಸಮೂಹದ ಸ್ವಯಂ ಪರಿಪೂರ್ಣತೆಗಾಗಿ ಏಳಿಗೆಗಾಗಿ ಮನಃಪೂರ್ವಕವಾಗಿ ಕಾರ್ಯವೆಸಗುವರು.	೧೨. ಮಾಧ್ಯಮಿಕ ಸಮೂಹವು ಹೆಚ್ಚು ಸದಸ್ಯರನ್ನು ಹೊಂದಿರುವುದು. ಇವರಲ್ಲಿ ಕೆಲವರು ಆಲಸಿಗಳಾಗಿದ್ದು, ಹಲವರು ಮಾತ್ರ ಚುರುಕಾಗಿ ಕೆಲಸ ಮಾಡುವರು.
೧೩. ಪ್ರಾಥಮಿಕ ಸಮೂಹವು ತನ್ನ ಸದಸ್ಯರ ವೈಯಕ್ತಿಕ ಜೀವನವನ್ನು ಸಹ ನಿಯಂತ್ರಿಸುವುದು.	೧೩. ಮಾಧ್ಯಮಿಕ ಸಮೂಹವು ತನ್ನ ಸದಸ್ಯರ ವೈಯಕ್ತಿಕ ಜೀವನದ ಮೇಲೆ ಯಾವ ನಿಯಂತ್ರಣವನ್ನು ಹೊಂದಿರದು.

ಪ್ರಾಥಮಿಕ ಸಮೂಹಗಳು ಒಂದು ಕಾಲಕ್ಕೆ ಸೂಕ್ತವಾಗಿದ್ದವು. ಆಗ ಸಾಮಾಜಿಕ ರಚನೆ ತುಂಬಾ ಸರಳವಾಗಿತ್ತು. ಆದರೆ ಇಂದು ಸಮಾಜ ಬಹು ಸಂಕೀರ್ಣ ಮತ್ತು ಜಟಿಲವಾಗಿದೆ. ಆದಕಾರಣ ಇಂದಿನ ದಿನಗಳಲ್ಲಿ ಪ್ರಾಥಮಿಕ ಸಮೂಹಗಳು ಅಷ್ಟೊಂದಾಗಿ ಸುಸೂತ್ರವಾಗಿ ಕಾರ್ಯನಿರ್ವಹಿಸಲಾರವು. ಅಂದರೆ ಇವುಗಳ ಅಗತ್ಯತೆ ಇಂದು ಇಲ್ಲವೆಂದಲ್ಲ. ಇವಷ್ಟೇ ಇದ್ದರೆ ಸಾಲದು. ಕುಟುಂಬ, ಶಾಲೆ, ಗೆಳೆಯರ ಬಳಗ ಇವುಗಳು ಯಾವ ಕಾಲಕ್ಕೂ ನಮಗೆ ಅತ್ಯಗತ್ಯ. ಅವುಗಳಿಲ್ಲದೆ ಸಾಮಾಜೀಕರಣ ಸಾಧ್ಯವಾಗದು. ಈ ಪ್ರಾಥಮಿಕ ಸಮೂಹಗಳ ಜೊತೆಗೆ ಮಾಧ್ಯಮಿಕ ಸಮೂಹಗಳು ಅತ್ಯವಶ್ಯವಾಗಿಬೇಕು. ಇಂದು ಬ್ಯಾಂಕು, ವಿಶ್ವವಿದ್ಯಾಲಯ ಮುಂತಾದ ಮಾಧ್ಯಮಿಕ ಸಮೂಹಗಳು ಒಂದೆರಡು ದಿನಗಳು ಕಾರ್ಯ ನಿರ್ವಹಿಸದಿದ್ದಲ್ಲಿ ಜನರಿಗೆ ವಿಪರೀತ ತೊಂದರೆಯಾಗುವುದು. ಒಟ್ಟಿನಲ್ಲಿ ಸಾಮಾಜಿಕ ಜೀವನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಸಮೂಹಗಳೆರಡೂ ಬೇಕು.

೩.೪. ಸಾರಾಂಶ

ಮಾನವನು ಸಮಾಜ ಜೀವಿಯಾಗಿದ್ದು, ತನ್ನ ಇಡೀ ಜೀವಮಾನವನ್ನು ಸಮೂಹಗಳಲ್ಲಿಯೇ ಕಳೆಯುವನು. ಸಮೂಹ ಜೀವನವು ವ್ಯಕ್ತಿಯ ಜೀವನಕ್ಕೆ, ಜೀವಕ್ಕೆ, ಅವನ ಆಸ್ತಿಪಾಸ್ತಿಗೆ ಭದ್ರತೆಯನ್ನು ಒದಗಿಸುವುದು. ವ್ಯಕ್ತಿಯು ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳಲು ಸಮೂಹಗಳ ಸಂಪರ್ಕವು ಸಹಾಯ ಮಾಡುವುದು. ಕುಟುಂಬ, ನೆರೆಹೊರೆ, ಗೆಳೆಯರ ಬಳಗ, ಶಾಲೆ, ರಾಜ್ಯ ಇತ್ಯಾದಿ ಸಮೂಹಗಳು ಮಾನವನ ವಿಕಾಸಕ್ಕೆ ನೆರವಾಗುವವು. ಸಾಮಾನ್ಯ ಆಸಕ್ತಿಗಳು, ಆಶೆ ಆಕಾಂಕ್ಷೆಗಳು ಜನರನ್ನು ಒಂದುಗೂಡಿಸಿ ಸಮೂಹ ಕಟ್ಟಲು ಪ್ರೇರೇಪಿಸುವವು. ಹೀಗೆ ಜನರು ಒಂದುಗೂಡಿದಾಗ ಅವರಲ್ಲಿ ಏಕತಾ ಮನೋಭಾವನೆ, ನಾವು-ನನ್ನವರೆಂಬ ಭಾವನೆಗಳು ಮೈದಾಳುವವು.

ಸಮಾಜದಲ್ಲಿ ಹಲವಾರು ಸಮೂಹಗಳು ಕಾಣಬರುವವು. ಅವುಗಳನ್ನು ಕೆಲವು ಸಮಾಜಶಾಸ್ತ್ರಜ್ಞರು ತಮ್ಮದೇ ಆದ ರೀತಿಯಲ್ಲಿ ವರ್ಗೀಕರಿಸಿ ವಿವಿಧ ವಿಧಗಳನ್ನಾಗಿ ಗುರುತಿಸಿದ್ದಾರೆ. **ಸಮ್ನರನು** ಸಮೂಹಗಳನ್ನು ಒಳಸಮೂಹಗಳು ಮತ್ತು ಹೊರ ಸಮೂಹಗಳೆಂಬುದಾಗಿ ವರ್ಗೀಕರಿಸಿದರೆ, **ಸಿ.ಹೆಚ್. ಕೂಲೆಯವರು** ಪ್ರಾಥಮಿಕ ಮತ್ತು ಮಾಧ್ಯಮಿಕ ಸಮೂಹಗಳೆಂಬುದಾಗಿ ವರ್ಗೀಕರಿಸಿದ್ದಾರೆ. **ವಾರ್ಡ್** ಎಂಬ ಸಮಾಜಶಾಸ್ತ್ರಜ್ಞನು ಸಮೂಹಗಳಲ್ಲಿ ಐಚ್ಛಿಕ ಮತ್ತು ಅನೈಚ್ಛಿಕ ಸಮೂಹಗಳೆಂಬ ವಿಧಗಳನ್ನು ಗುರುತಿಸಿದ್ದಾನೆ. **ಕೂಲೆಯವರ** ಪ್ರಕಾರ ಚಿಕ್ಕ ಗಾತ್ರದ, ಮುಖಾಮುಖಿ ಸಂಪರ್ಕ ಮತ್ತು ಆತ್ಮೀಯತೆಯಿಂದೊಡಗೂಡಿದ ಸಮೂಹಗಳು ಪ್ರಾಥಮಿಕ ಸಮೂಹಗಳಾಗಿವೆ. ದೊಡ್ಡ ಗಾತ್ರದ ಮತ್ತು ಅವೈಯಕ್ತಿಕ ಸಂಬಂಧಗಳನ್ನು ಹೊಂದಿದ ಸಮೂಹಗಳು ಮಾಧ್ಯಮಿಕ ಸಮೂಹಗಳಾಗಿವೆ. ಔದ್ಯೋಗಿಕ ಕ್ರಾಂತಿಗಿಂತ ಮುಂಚೆ ಸಮಾಜಗಳು ಸರಳ ಮತ್ತು ಚಿಕ್ಕವಾದ ಕಾರಣ ಹೆಚ್ಚಿನ ಸಮೂಹಗಳು ಪ್ರಾಥಮಿಕ ಸಮೂಹಗಳೇ ಆಗಿದ್ದವು. ಆದರೆ ಇಂದಿನ ಸಂಕೀರ್ಣ ಸಮಾಜದಲ್ಲಿ ಮಾಧ್ಯಮಿಕ ಸಮೂಹಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ. ಕೆಲವು ಸಮೂಹಗಳು ಸಂಘಟನೆ ಮತ್ತು ಶಾಶ್ವತತೆಯ ಲಕ್ಷಣಗಳನ್ನು ಹೊಂದಿದ್ದರೆ ಇನ್ನು ಕೆಲವು ತಾತ್ಕಾಲಿಕ ಮತ್ತು ಅಸಂಘಟನೆಯ ಲಕ್ಷಣಗಳನ್ನು ಹೊಂದಿವೆ. ಕುಟುಂಬ, ವರ್ಗ, ಕಾರ್ಖಾನೆ, ರಾಜ್ಯ, ವಿಶ್ವವಿದ್ಯಾಲಯ ಮತ್ತು ಸಮುದಾಯ ಇತ್ಯಾದಿ ಸಮೂಹಗಳು ಸಂಘಟಿತ ಸಮೂಹಗಳಾಗಿವೆ. ಅವು ಹೆಚ್ಚು ಕಾಲ ಬಾಳಿ ಬದುಕಬಲ್ಲ ಸಮೂಹಗಳೂ ಆಗಿವೆ. ಜನಸಂದಣಿ, ಪ್ರೇಕ್ಷಕ ವರ್ಗ, ದೊಂಬಿ ಮುಂತಾದವು ಅಸಂಘಟಿತ ಸಮೂಹಗಳು. ಇಂತಹ ಸಮೂಹಗಳಲ್ಲಿ ಸಂಘಟನೆಯಾಗಲಿ, ದೀರ್ಘಾವಧಿಯ ಗುರಿಯಾಗಲಿ ಇರುವುದಿಲ್ಲ. ಇವು ತಾತ್ಕಾಲಿಕ ಸಮೂಹಗಳು.

೩.೫. ಪಾರಿಭಾಷಿಕ ಪದಕೋಶ

೧. Audience = ಪ್ರೇಕ್ಷಕ ವರ್ಗ

೨. Crowd = ಜನಸಂದಣಿ

೩. Ethnocentrism = ಸ್ವಕುಲಾಭಿಮಾನ

೪. Face-to-Face Contact = ಮುಖಾಮುಖಿ ಸಂಪರ್ಕ

೫. Horizontal Groups = ಸಮಾನಾಂತರ ಸಮೂಹಗಳು

೬. Interaction = ಅಂತರ್‌ಕ್ರಿಯೆ

೭. Involuntary Groups = ಅನೈಚ್ಛಿಕ ಸಮೂಹಗಳು

೮. In- groups = ಒಳ ಸಮೂಹಗಳು

೯. Organised groups = ಸಂಘಟಿತ ಸಮೂಹಗಳು

೧೦. Out-groups = ಹೊರ ಸಮೂಹಗಳು

೧೧. Peer group = ಸಮ ವಯಸ್ಕರ ಸಮೂಹ

೧೨. Physical Proximity = ಭೌತಿಕ ಸಾಮೀಪ್ಯ

೧೩. Touch and Go = ಮುಟ್ಟು ಮತ್ತು ಮುಂದೆ ಸಾಗು

೧೪. Un-organised groups = ಅಸಂಘಟಿತ ಸಮೂಹಗಳು

೧೫. Vertical groups = ಲಂಬ ಸಮೂಹಗಳು

೧೬. Voluntary groups = ಐಚ್ಛಿಕ ಸಮೂಹಗಳು

೩.೬. ಪ್ರಶ್ನೆಗಳು

I. ಒಂದು ಅಂಕದ ಪ್ರಶ್ನೆಗಳು

೧. ಸಾಮಾಜಿಕ ಸಮೂಹದ ಒಂದು ವ್ಯಾಖ್ಯೆಯನ್ನು ನೀಡಿ.

೨. ಸಾಮಾಜಿಕ ಅಂತಃಕ್ರಿಯೆ ಎಂದರೇನು?

೩. ಸಮ ವಯಸ್ಕರ ಸಮೂಹವು ಯಾವ ವಿಧದ ಸಮೂಹವಾಗಿದೆ ?

೪. ಸಾಮಾಜಿಕ ಸಮೂಹಗಳನ್ನು ಸಮತಟ್ಟಾದ ಮತ್ತು ಲಂಬ ಸಮೂಹಗಳೆಂದು ಯಾರು ವರ್ಗೀಕರಿಸಿದ್ದಾರೆ ?

೫. 'ಮುಟ್ಟು ಮತ್ತು ಮುಂದೆ ಸಾಗು' ಸಂಬಂಧವನ್ನು ಯಾವ ಸಮೂಹದಲ್ಲಿ ಕಾಣುತ್ತೇವೆ?

೬. ಪ್ರಾಥಮಿಕ ಸಮೂಹ ಎಂಬ ಶಬ್ದವನ್ನು ಮೊದಲ ಬಾರಿಗೆ ಬಳಸಿದವರಾರು?

೭. ಅಶಾಶ್ವತ ಸಮೂಹಕ್ಕೆ ಒಂದು ಉದಾಹರಣೆ ಕೊಡಿ.

೮. ಕುಟುಂಬವು ಯಾವ ಪ್ರಕಾರದ ಸಾಮಾಜಿಕ ಸಮೂಹವನ್ನು ಪ್ರತಿನಿಧಿಸುತ್ತದೆ ?

೯. ಸಾಮಾಜಿಕ ಸಮೂಹಗಳನ್ನು ಒಳಸಮೂಹ ಮತ್ತು ಹೊರಸಮೂಹ ಎಂದು ವರ್ಗೀಕರಿಸಿದವರು ಯಾರು?

೧೦. ಮುಖಾಮುಖಿ ಸಂಬಂಧ ಯಾವ ಸಮೂಹದಲ್ಲಿ ಕಾಣಬರುತ್ತದೆ ?

೧೧. ಕೂಲೆಯವರ ಪ್ರಕಾರ ರಾಜಕೀಯ ಪಕ್ಷವು ಯಾವ ಬಗೆಯ ಸಮೂಹವಾಗಿದೆ?

೧೨. ರಾಜಕೀಯ ಪಕ್ಷಗಳು ಮಾಧ್ಯಮಿಕ ಸಮೂಹವೆ?

೧೩. ಅಸಂಘಟಿತ ಸಮೂಹದ ಒಂದು ಲಕ್ಷಣವನ್ನು ತಿಳಿಸಿ.

೧೪. ಒಳಸಮೂಹ ಮತ್ತು ಹೊರ ಸಮೂಹಗಳ ಮಧ್ಯದ ಒಂದು ವ್ಯತ್ಯಾಸವನ್ನು ತಿಳಿಸಿ.
೧೫. ಸಾಮಾಜಿಕ ಸಮೂಹಗಳನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಸಮೂಹಗಳೆಂಬುದಾಗಿ ಯಾರು ವಿಂಗಡಿಸಿದ್ದಾರೆ?

II. ಎರಡು ಅಂಕದ ಪ್ರಶ್ನೆಗಳು

೧. ಶಾಶ್ವತ ಸಮೂಹಕ್ಕೆ ಎರಡು ಉದಾಹರಣೆಗಳನ್ನು ನೀಡಿ.
೨. ಜನಸಂದಣಿಯ ಎರಡು ಲಕ್ಷಣಗಳನ್ನು ತಿಳಿಸಿ.
೩. ಜನಸಂದಣಿಯ ಎರಡು ವ್ಯಾಖ್ಯೆಗಳನ್ನು ನೀಡಿ.
೪. ಸಾಮಾಜಿಕ ಸಮೂಹಗಳ ಎರಡು ಪ್ರಮುಖ ಲಕ್ಷಣಗಳನ್ನು ತಿಳಿಸಿ.
೫. ಸಾಮಾಜಿಕ ಸಮೂಹಗಳ ಯಾವುದಾದರೂ ಎರಡು ವಿಧಗಳನ್ನು ನಮೂದಿಸಿ.
೬. ಸುಮ್ನರನು ನೀಡಿದ ಎರಡು ಸಮೂಹಗಳ ವಿಧಗಳನ್ನು ತಿಳಿಸಿ.
೭. ಪ್ರಾಥಮಿಕ ಸಮೂಹದ ಎರಡು ಉದಾಹರಣೆಗಳನ್ನು ನಮೂದಿಸಿ.
೮. ಮಾಧ್ಯಮಿಕ ಸಮೂಹಕ್ಕೆ ಎರಡು ಉದಾಹರಣೆಗಳನ್ನು ಕೊಡಿ.
೯. ಸಂಘಟಿತ ಸಮೂಹದ ಎರಡು ಲಕ್ಷಣಗಳನ್ನು ತಿಳಿಸಿ.
೧೦. ಪ್ರಾಥಮಿಕ ಮತ್ತು ಮಾಧ್ಯಮಿಕ ಸಮೂಹಗಳ ನಡುವಿನ ಎರಡು ವ್ಯತ್ಯಾಸಗಳನ್ನು ತಿಳಿಸಿ.
೧೧. ಸ್ವಕುಲಾಭಿಮಾನವೆಂದರೇನು?
೧೨. ಜನಸಂದಣಿಯ ಯಾವುದಾದರೂ ಎರಡು ಬಗೆಗಳನ್ನು ತಿಳಿಸಿ.
೧೩. ಪ್ರಾಥಮಿಕ ಸಮೂಹದ ವ್ಯಾಖ್ಯೆ ನೀಡಿ.
೧೪. ಪ್ರಾಥಮಿಕ ಸಮೂಹದ ಎರಡು ಲಕ್ಷಣಗಳನ್ನು ನಮೂದಿಸಿ.
೧೫. ಮಾಧ್ಯಮಿಕ ಸಮೂಹದ ಎರಡು ಲಕ್ಷಣಗಳನ್ನು ತಿಳಿಸಿ.

III. ಐದು ಅಂಕಗಳ ಪ್ರಶ್ನೆಗಳು

೧. ಸಾಮಾಜಿಕ ಸಮೂಹಗಳ ಅರ್ಥ ಮತ್ತು ವ್ಯಾಖ್ಯೆಗಳನ್ನು ನೀಡಿ.
೨. ಸಾಮಾಜಿಕ ಸಮೂಹಗಳ ಲಕ್ಷಣಗಳನ್ನು ವಿವರಿಸಿ.
೩. ಸಾಮಾಜಿಕ ಸಮೂಹಗಳ ಪ್ರಾಮುಖ್ಯತೆಯನ್ನು ತಿಳಿಸಿರಿ.
೪. ಜನಸಂದಣಿ ಹಾಗೂ ಪ್ರೇಕ್ಷಕ ವರ್ಗಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಿ.
೫. ಜನಸಂದಣಿಯ ವಿವಿಧ ಬಗೆಗಳನ್ನು ವಿವರಿಸಿರಿ.
೬. ಮಾಧ್ಯಮಿಕ ಸಮೂಹಗಳ ಗುಣಲಕ್ಷಣಗಳನ್ನು ವಿವರಿಸಿ.
೭. ಸಾಮಾಜಿಕ ಸಮೂಹಗಳ ವರ್ಗೀಕರಣವನ್ನು ವಿವರಿಸಿ.
೮. ಸಾಮಾಜಿಕ ಸಮೂಹಗಳನ್ನು ಹೇಗೆ ವರ್ಗೀಕರಿಸುವಿರಿ?
೯. ಆಧುನಿಕ ಕಾಲದಲ್ಲಿ ಮಾಧ್ಯಮಿಕ ಸಮೂಹಗಳ ಮಹತ್ವವನ್ನು ಸ್ಪಷ್ಟಪಡಿಸಿ.
೧೦. ಕುಟುಂಬವು ಪ್ರಾಥಮಿಕ ಸಮೂಹವೆಂದು ಹೇಗೆ ಹೇಳುವಿರಿ?

೧೧. ಪ್ರಾಥಮಿಕ ಸಮೂಹದ ಲಕ್ಷಣಗಳನ್ನು ವಿವರಿಸಿ.

೧೨. ಪ್ರಾಥಮಿಕ ಸಮೂಹಗಳ ಮಹತ್ವವನ್ನು ತಿಳಿಸಿರಿ.

IV. ಹತ್ತು ಅಂಕಗಳ ಪ್ರಶ್ನೆಗಳು

೧. ಪ್ರಾಥಮಿಕ ಸಮೂಹದ ವ್ಯಾಖ್ಯೆಗಳನ್ನು ನೀಡಿ, ಅದರ ಲಕ್ಷಣಗಳನ್ನು ವಿವರಿಸಿ.

೨. ಪ್ರಾಥಮಿಕ ಮತ್ತು ಮಾಧ್ಯಮಿಕ ಸಮೂಹಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸಿರಿ.

೩. ಜನಸಂದಣಿಯನ್ನು ವ್ಯಾಖ್ಯಾನಿಸಿ ಅದರ ಲಕ್ಷಣಗಳ ಕುರಿತಾದ ವಿವರಣೆ ನೀಡಿ.

೪. ಸಾಮಾಜಿಕ ಸಮೂಹಗಳ ಮಹತ್ವವನ್ನು ವಿವರಿಸಿ.

೫. ನಿಮ್ಮ ಸಮುದಾಯದಲ್ಲಿ ಕಂಡುಬರುವ ಸಮೂಹಗಳನ್ನು ಪಟ್ಟಿ ಮಾಡಿ, ಯಾವುದಾದರೊಂದು ಸಮೂಹದ ಲಕ್ಷಣಗಳನ್ನು ತಿಳಿಸಿ.

ಅಭ್ಯಾಸ/ಚಟುವಟಿಕೆಗಳು

೧. ಗ್ರಾಮವನ್ನು ಪ್ರಾಥಮಿಕ ಸಮೂಹವೆಂಬುದಾಗಿ ಪರಿಗಣಿಸಿ ಅದರ ಲಕ್ಷಣಗಳನ್ನು ವಿವರಿಸಿ.

೨. ನಿಮ್ಮ ಸಮುದಾಯದಲ್ಲಿರುವ ಪ್ರಾಥಮಿಕ ಸಮೂಹಗಳ ಪಟ್ಟಿ ಮಾಡಿ, ಕುಟುಂಬದ ಚಟುವಟಿಕೆಗಳ ಕುರಿತು ಒಂದು ವರದಿಯನ್ನು ಸಿದ್ಧಪಡಿಸಿ.

೩. ವಿಶ್ವವಿದ್ಯಾಲಯವನ್ನು ಮಾಧ್ಯಮಿಕ ಸಮೂಹವೆಂಬುದಾಗಿ ಪರಿಗಣಿಸಿ ಅದರ ಲಕ್ಷಣಗಳನ್ನು ತಿಳಿಸಿರಿ.

೪. ಮುಷ್ಕರದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳ ಜನಸಂದಣಿಯ ಸ್ವರೂಪವನ್ನು ಚಿತ್ರಿಸಿ.

೫. ಹಾವಿನಾಟ ವೀಕ್ಷಿಸಲು ಸೇರಿದ ಸಮೂಹವು ಒಂದು ಅಸಂಘಟಿತ ಸಮೂಹವೆಂಬುದಾಗಿ ಪರಿಗಣಿಸಿ ಅದರ ಲಕ್ಷಣಗಳನ್ನು ನಮೂದಿಸಿ.

ಅಧ್ಯಾಯ ೪

ಸಂಸ್ಕೃತಿ ಮತ್ತು ಸಾಮಾಜೀಕರಣ

ಸಮಾಜಶಾಸ್ತ್ರೀಯ ಅಧ್ಯಯನಗಳಲ್ಲಿ ಸಂಸ್ಕೃತಿಯ ಅಧ್ಯಯನವು ಒಂದು ಪ್ರಮುಖ ಸ್ಥಾನವನ್ನು ಪಡೆದಿದೆ. ಯಾವುದೇ ಸಮಾಜದ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳದೆ, ಸಾಮಾಜಿಕ ವ್ಯವಸ್ಥೆಯನ್ನಾಗಲೀ ಅಥವಾ ಸಮಾಜದ ಯಾವುದೇ ಅಂಶವನ್ನಾಗಲೀ ಅಧ್ಯಯನ ಮಾಡಲು ಸಾಧ್ಯವಿಲ್ಲ. ಸಮಾಜದ ಎಲ್ಲಾ ಚಟುವಟಿಕೆಗಳು, ಕಾರ್ಯಗಳು, ಸಂಸ್ಕೃತಿ ಮತ್ತು ಸಾಮಾಜಿಕ ನಿಯಮಗಳಿಂದ ಅವಲಂಬಿತವಾಗಿವೆ. ಸಾಮಾಜಿಕ ನಿಯಮಗಳು ಸಂಸ್ಕೃತಿಯ ಪ್ರಮುಖ ಅಂಗಗಳಾಗಿವೆ.

ಸಂಸ್ಕೃತಿಯು ಮಾನವನನ್ನು ಪ್ರಾಣಿಗಳಿಂದ ಪ್ರತ್ಯೇಕಿಸುತ್ತದೆ. ಸಂಸ್ಕೃತಿಯು ಮಾನವನ ಒಂದು ವಿಶಿಷ್ಟವಾದ ಆಸ್ತಿಯಾಗಿದ್ದು, ಮಾನವನು ಮಾತ್ರ ಸಂಸ್ಕೃತಿಯನ್ನು ಸೃಷ್ಟಿಸಿ ಅದರಂತೆ ಬದುಕುತ್ತಾನೆ. ಆದರೆ ಸಂಸ್ಕೃತಿಯು ಸಮಾಜದಿಂದ ಸಮಾಜಕ್ಕೆ ವ್ಯತ್ಯಾಸಹೊಂದುತ್ತದೆ. ಇದು ಸಾಮಾಜಿಕ ಸಂಬಂಧಗಳಿಗೆ ಅರ್ಥವನ್ನು ಕಲ್ಪಿಸುತ್ತದೆ. ಉದಾ: ತಂದೆ, ತಾಯಿ, ಸಹೋದರ, ಸಹೋದರಿ, ಪತಿ, ಪತ್ನಿ ಎನ್ನುವ ಸಂಬಂಧಗಳ ಅರ್ಥವು ಸಂಸ್ಕೃತಿಯಿಂದ ಉಂಟಾಗಿದೆ. ಆದರೆ ಇಂದಿನ ಆಧುನಿಕ ಸಮಾಜದಲ್ಲಿ ಜಾಗತೀಕರಣದ ಪ್ರಕ್ರಿಯೆಯು ಸ್ಥಳೀಯ ಸಂಸ್ಕೃತಿಯನ್ನು ಬಾಧಿಸುತ್ತಿರುವ ಪರಿಣಾಮವಾಗಿ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಜನರು 'ಸಂಸ್ಕೃತಿ ಬಿಕ್ಕಟ್ಟ'ನ್ನು ಎದುರಿಸುತ್ತಿದ್ದಾರೆ.

'ಸಂಸ್ಕೃತಿ' ಎಂಬ ಪರಿಕಲ್ಪನೆಯು ಒಂದು ಅಮೂರ್ತವಾದ ಪದವಾಗಿದ್ದು ಅದನ್ನು ನೇರವಾಗಿ ಕಾಣಲು ಸಾಧ್ಯವಿಲ್ಲ. ಜನರ ವರ್ತನೆಗಳಿಂದಲೇ ಸಂಸ್ಕೃತಿಯನ್ನು ಅವಲೋಕಿಸಬೇಕು. ಬೇರೆ ಬೇರೆ ಸಂಸ್ಕೃತಿಗೆ ಸೇರಿದ ಜನರು ವಿಭಿನ್ನವಾಗಿ ವರ್ತಿಸುತ್ತಾರೆ. ಹಾಗಾಗಿ ಮಾನವನ ವರ್ತನೆಯು ಸಾಂಸ್ಕೃತಿಕವಾಗಿದೆ. ಸಮಾಜಶಾಸ್ತ್ರಜ್ಞರು ಸಂಸ್ಕೃತಿಯನ್ನು ಸಮಾಜದ ಒಂದು ಭಾಗವೆಂಬುವುದಾಗಿ ಪರಿಗಣಿಸುತ್ತಾರೆ. ಅನೇಕ ಸಮಾಜಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು ಸಂಸ್ಕೃತಿಯ ಪರಿಕಲ್ಪನೆಯನ್ನು ವೈಜ್ಞಾನಿಕವಾಗಿ ಅಭ್ಯಸಿಸಿದ್ದಾರೆ. ಉದಾಹರಣೆ : ಇ.ಬಿ. ಟೈಲರ್, ಮೆಲಿನೊಸ್ಕಿ, ರಾಲ್ಫ್ ಲಿಂಟನ್, ಆಗ್ಬರ್ನ್ ಬೆಂಡಿಕ್ಸ್, ಎ.ಎಲ್. ಕ್ರೋಬರ್, ಸುಮ್ನರ್, ಮ್ಯಾಕ್ಸ್‌ವೆಬರ್, ಪಿ.ಎ. ಸಾರೋಕಿನ್ ಟಾಲ್ಕಟ್ ಪಾರ್ಸನ್ಸ್, ಎಮಿಲಿ ಡರ್ಖಿಮ್ ಮುಂತಾದವರು ಸಂಸ್ಕೃತಿಯ ಕುರಿತು ಆಳವಾಗಿ ಅಧ್ಯಯನ ಮಾಡಿದ ಪ್ರಮುಖರು.

೪.೧. ಸಂಸ್ಕೃತಿಯ ಅರ್ಥ ಮತ್ತು ವ್ಯಾಖ್ಯೆ

ಸಾಮಾನ್ಯವಾಗಿ ನಾವು ಉತ್ತಮ ನಡತೆ, ಸಂಗೀತ, ಕಲೆ, ತತ್ವಶಾಸ್ತ್ರ ಇತ್ಯಾದಿ ಸುಧಾರಿತ ಅಥವಾ ಸುಸಂಸ್ಕೃತಗೊಂಡ ಅಂಶಗಳನ್ನೆಲ್ಲಾ 'ಸಂಸ್ಕೃತಿ' ಎನ್ನುತ್ತೇವೆ. ಇದರ ಮೂಲವು ಲ್ಯಾಟಿನ್ ಭಾಷೆಯ 'ಕೊಲೆರೆ (Colere)' ಎಂಬ ಪದದಿಂದ ಉತ್ಪತ್ತಿಯಾಗಿದ್ದು ಇದು 'ಬೆಳೆಸುವ' ಅಥವಾ 'ಕೃಷಿ ಮಾಡುವ' ಎಂಬ ಅರ್ಥವನ್ನು ನೀಡುತ್ತದೆ. ಸಾಮಾಜಿಕ ಮಾನವಶಾಸ್ತ್ರದಲ್ಲಿ ಸಂಸ್ಕೃತಿ ಎಂದರೆ 'ಜ್ಞಾನ' ಎಂದರ್ಥ. ಎಂದರೆ ಇದು ಅಸ್ವಾಭಾವಿಕವಾಗಿರುವ ಆದರೆ ಗಳಿಸಿದ ಅಥವಾ ಸಾಧಿಸಿದ ಸಂಗತಿಗಳಿಗೆ ಸೇರಿದ ಮಾನವೀಯ ಅಂಶಗಳಿಗೆ ಸಂಬಂಧಿಸಿದ ಜ್ಞಾನವಾಗಿದೆ. ಇದು ಪರಸ್ಪರ ಹಂಚಲ್ಪಟ್ಟಿರುವ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಲ್ಪಡುವ ಆರ್ಜಿತ ನಡವಳಿಕೆಯಾಗಿದೆ. ಮಾನವರು ಸಮಾಜದ ಸದಸ್ಯರಾಗಿ ಸಂಸ್ಕೃತಿಯನ್ನು ಗಳಿಸಿ ಸಾಮಾಜೀಕರಣದ ಮೂಲಕ ಅದನ್ನು ಬಳಸಿಕೊಳ್ಳುತ್ತಾರೆ. ಆ ಮೂಲಕ ತನ್ನ ವ್ಯಕ್ತಿತ್ವವನ್ನು ವಿಕಸಿಸಿಕೊಳ್ಳುತ್ತಾರೆ. ಜ್ಞಾನ, ಸಂಕೇತಗಳು, ನಿಯಮಗಳು, ನಂಬಿಕೆಗಳು, ಮೌಲ್ಯಗಳು, ಮೌಖಿಕ ಪರಂಪರೆ, ಕಾನೂನು, ಧರ್ಮ, ಸಂಸ್ಥೆಗಳೇ ಇತ್ಯಾದಿ ಸಂಸ್ಕೃತಿಯ ವಿವಿಧ ಪ್ರಕಾರಗಳಾಗಿವೆ. ಹಾಗಾಗಿ ಸಂಸ್ಕೃತಿಯು ಒಂದು ಸಮೂಹದ ಸದಸ್ಯರಿಂದ ವ್ಯವಸ್ಥಿತವಾಗಿ ಕಲಿಯಲ್ಪಟ್ಟ, ಇತರರೊಂದಿಗೆ ಹಂಚಿಕೊಳ್ಳಲ್ಪಟ್ಟ ಮತ್ತು ವರ್ಗಾವಣೆಗೊಳಿಸಲ್ಪಟ್ಟ ಅಂಶವಾಗಿದೆ.

ಮೆಲಿನೋವ್‌ಸ್ಕಿ ಅವರ ಪ್ರಕಾರ "ಮಾನವನು ತನ್ನ ಗುರಿಗಳನ್ನು ಸಾಧಿಸಲು ರೂಪಿಸಿಕೊಂಡಿರುವ ಮಾಧ್ಯಮವೇ ಸಂಸ್ಕೃತಿ".

ಎಡ್ವರ್ಡ್ ಇ.ಬಿ. ಟೈಲರ್ ರವರ ಅಭಿಪ್ರಾಯದಲ್ಲಿ "ಸಂಸ್ಕೃತಿ ಎಂಬುದು ಮಾನವನು ಸಮಾಜದ ಸದಸ್ಯನಾಗಿ ಗಳಿಸಿಕೊಂಡ ಜ್ಞಾನ, ನಂಬಿಕೆ, ಕಲೆ, ನೈತಿಕ ನಿಯಮಗಳು, ಕಾನೂನು, ಪದ್ಧತಿ ಮತ್ತು ಇತರ ಯಾವುದೇ ಸಾಮರ್ಥ್ಯ ಹಾಗೂ ರೂಢಿಗಳನ್ನೊಳಗೊಂಡ ಒಂದು ಸಂಕೀರ್ಣವಾಗಿದೆ".

ಗ್ರಹಾಂ ವ್ಯಾಲಸ್ ಅವರು ವ್ಯಾಖ್ಯಾನಿಸಿದಂತೆ "ಸಂಸ್ಕೃತಿಯು ಸಾಂಪ್ರದಾಯಿಕವಾಗಿ ಬಂದ ಪದ್ಧತಿಗಳ, ಜೀವನ ಮೌಲ್ಯಗಳ ಮತ್ತು ಆದರ್ಶಗಳ ಸಂಗ್ರಹವಾಗಿದೆ. ಈ ಸಾಮಾಜಿಕ ಪರಂಪರೆಯನ್ನು ನಾವು ಹಿಂದಿನ ತಲೆಮಾರುಗಳಿಂದ ಮತ್ತು ಜ್ಞಾನಾರ್ಜನೆಯಿಂದ ಹೊಂದಿರುತ್ತೇವೆ".

ಸಂಸ್ಕೃತಿಯ ಗುಣಲಕ್ಷಣಗಳು

ಜನಾಂಗೀಯಶಾಸ್ತ್ರದಲ್ಲಿ ಸಂಸ್ಕೃತಿಯು ನಮಗೆ ಕಾಣುವ 'ಅತೀತ ಜೈವಿಕ' (Super-Organic)ವಾದ ಸಂಗತಿಯಾಗಿದೆ. ಸಂಸ್ಕೃತಿಶಾಸ್ತ್ರಜ್ಞರಿಗೆ ಸಂಸ್ಕೃತಿಯು ಅಂತ್ಯದ ವಾಸ್ತವತೆಯಾಗಿದ್ದು ಸಮಾಜವೇ ಸಂಸ್ಕೃತಿಯ ವಾಹನವಾಗಿದೆ. ಆದರೆ ಸಾಮಾಜಿಕ ಸಂಸ್ಥೆಗಳಿಂದ ನಿಯಂತ್ರಿಸಲ್ಪಟ್ಟ, ಮಾನವನ ಸ್ವಭಾವಗಳನ್ನು ಕಾಣುವ ಸಮಾಜವೇ ಅಂತ್ಯದ ವಾಸ್ತವತೆ ಎಂದು ಸಮಾಜಶಾಸ್ತ್ರಜ್ಞರು ಪರಿಗಣಿಸುತ್ತಾರೆ. ಸಮಾಜಶಾಸ್ತ್ರಜ್ಞರು ಸಮಾಜವನ್ನು

ಸಂಸ್ಕೃತಿಯ ಸೃಷ್ಟಿಕರ್ತ ಎಂದು ಪರಿಗಣಿಸಿದರೆ ಮಾನವಶಾಸ್ತ್ರಜ್ಞರು ಸಮಾಜದ ವ್ಯವಸ್ಥೆ ನಡೆಯುವುದೇ ಸಂಸ್ಕೃತಿಯಿಂದ ಎಂದು ತಿಳಿಯುತ್ತಾರೆ. ಈ ವಿಜ್ಞಾನಗಳು ಸಂಸ್ಕೃತಿಯನ್ನು ವಿವರಿಸುವ ವಿಧಾನದಲ್ಲಿ ವ್ಯತ್ಯಾಸವಿದ್ದರೂ ತಾತ್ವಿಕವಾಗಿ ಅವುಗಳಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಸಂಸ್ಕೃತಿಯು ಸಮಾಜಕ್ಕೆ ಸೇರಿದ್ದಾಗಿರುವುದು ಒಂದು ಅತ್ಯಂತ ಮುಖ್ಯವಾದ ಲಕ್ಷಣವಾಗಿದೆ. ಹಾಗೆಯೇ ಸಮಾಜವಿಲ್ಲದೆ ಸಂಸ್ಕೃತಿ ಇರಲಾರದು ಮತ್ತು ಸಂಸ್ಕೃತಿ ಇಲ್ಲದೆ ಸಮಾಜವಿಲ್ಲ.

ಸಂಸ್ಕೃತಿಯ ಪ್ರಮುಖ ಲಕ್ಷಣಗಳು ಈ ಕೆಳಗಿನಂತಿವೆ.

೧. ಸಂಸ್ಕೃತಿಯು ಸಾಮಾಜಿಕವಾದುದು

ಸಂಸ್ಕೃತಿಯು ಸಾಮಾಜಿಕವಾದುದು. ಏಕೆಂದರೆ ಇದು ಸಮಾಜದ ಕೊಡುಗೆಯಾಗಿದೆ ಮತ್ತು ಸಮಾಜದ ಒಂದು ಉತ್ಪನ್ನವಾಗಿದೆ. ಇದು ವೈಯಕ್ತಿಕ ಅಥವಾ ವ್ಯಕ್ತಿಗತವಾದುದಲ್ಲ. ಸಮೂಹದ ಸದಸ್ಯರು ಸಂಸ್ಕೃತಿಯನ್ನು ಅನುಸರಿಸುತ್ತಾರೆ ಮತ್ತು ಸಂಸ್ಕೃತಿಯು ಎಲ್ಲೆಡೆ ಸಮಾಜದ ಸದಸ್ಯರೊಳಗೆ ಹಂಚಲ್ಪಟ್ಟಿದೆ.

೨. ಸಂಸ್ಕೃತಿಯು ಚಲನಶೀಲವೂ ಮತ್ತು ಒಂದು ಪ್ರಕ್ರಿಯೆಯೂ ಆಗಿದೆ

ಸಂಸ್ಕೃತಿಯು ಸದಾ ಬದಲಾವಣೆಗೊಳ್ಳುತ್ತಿರುತ್ತದೆ. ಕಾಲ ಕಾಲಕ್ಕೆ ಮತ್ತು ಸಮಾಜದಿಂದ ಸಮಾಜಕ್ಕೆ ಅದರ ಬದಲಾವಣೆಯ ದಿಕ್ಕು ಮತ್ತು ವೇಗವು ವ್ಯತ್ಯಾಸಗೊಳ್ಳುತ್ತದೆ. ಪರಂಪರೆಗಳು ಬದಲಾವಣೆ ಹೊಂದಿ ಹೊಸ ಪರಂಪರೆಗಳು ಹುಟ್ಟಿಕೊಳ್ಳುತ್ತವೆ. ನಿರಂತರತೆ ಮತ್ತು ಬದಲಾವಣೆಯಿಂದಾಗಿ ಸಂಸ್ಕೃತಿಯು ಒಂದು ಪ್ರಕ್ರಿಯೆಯೂ ಆಗಿದೆ.

೩. ಸಂಸ್ಕೃತಿಯು ಆರ್ಜಿತವಾದುದು

ಸಂಸ್ಕೃತಿ ಹುಟ್ಟಿನಿಂದ ಬಂದುದಲ್ಲ. ಅದು ಸಾಮಾಜೀಕರಣದ ಪ್ರಕ್ರಿಯೆ ಮತ್ತು ಕಲಿಕೆಯಿಂದ ಪಡೆದಂತಾಗಿದೆ. ಭಾಷೆಯು ಸಂಸ್ಕೃತಿಯ ಒಂದು ಮುಖ್ಯ ಅಂಶವಾಗಿದ್ದು, ನಾವು ಭಾಷೆಯನ್ನು ಕಲಿತು ಆ ಮೂಲಕ ಸಂಸ್ಕೃತಿಯನ್ನು ಅಂತರ್ಗತಗೊಳಿಸುತ್ತೇವೆ. ಭಾಷೆಯು ಸಂಸ್ಕೃತಿಯನ್ನು ಗಳಿಸಿಕೊಳ್ಳುವ ಮುಖ್ಯ ಸಾಧನವಾಗಿದೆ.

೪. ಸಂಸ್ಕೃತಿಯು 'ಅತೀತ ಜೈವಿಕ' ಮತ್ತು 'ಅತೀತ ವ್ಯಕ್ತಿಗತ'ವಾಗಿದೆ

ಹೆಚ್ಚಿನ ಎಲ್ಲಾ ಸಾಮಾಜಿಕ ಮಾನವಶಾಸ್ತ್ರಜ್ಞರು ಸಂಸ್ಕೃತಿಯು ಸಮಾಜಕ್ಕಿಂತಲೂ ಮಿಗಿಲಾದ ಒಂದು ಸಂಗತಿ ಎಂದು ಪರಿಗಣಿಸಿದ್ದಾರೆ. ಇದು ಸಾಮಾಜಿಕವಾಗಿ ಗಳಿಸಿಕೊಂಡಿರುವ ಒಂದು ಪರಂಪರೆಯಾಗಿದೆ. ಎಮಿಲಿ **ಡರ್ಖೆಮ್**‌ರ ಪ್ರಕಾರ ಇದು ಸಾಮಾಜಿಕ ಸತ್ಯ ಸಂಗತಿಯಾಗಿದ್ದು ವ್ಯಕ್ತಿಗಿಂತ ಮಿಗಿಲಾಗಿದೆ.

೫. ಸಂಸ್ಕೃತಿಯು ಕಲ್ಪನೆಗಳಿಂದ ಕೂಡಿದೆ

ಸಂಸ್ಕೃತಿಯು ಅಮೂರ್ತ ಮತ್ತು ಮೂರ್ತ ಕಲ್ಪನೆಗಳಿಂದ ಕೂಡಿದೆ. ಉದಾಹರಣೆಗೆ

ಭೂತದ ನಂಬಿಕೆಯು ಒಂದು ಮೂರ್ತ ಕಲ್ಪನೆಯಾಗಿದೆ. ಹಾಗೆಯೇ ಸಂಸ್ಕೃತಿಯು ಮೂರ್ತ ವರ್ತನೆಯ ಅಮೂರ್ತತೆಯಾಗಿದೆ. ಉದಾಹರಣೆಗೆ ಧ್ವಜ ಎಂಬುವುದೇ ಸಂಸ್ಕೃತಿಯಲ್ಲ. ಆದರೆ ಒಂದು ರಾಷ್ಟ್ರದ ಎಲ್ಲರೂ ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸುವುದು ಸಂಸ್ಕೃತಿಯಾಗಿದೆ.

೬. ಸಂಸ್ಕೃತಿಯು ದ್ವಿಮುಖವಾದುದು

ಎರಿಕ್‌ಸನ್ ಎಂಬ ಮಾನವಶಾಸ್ತ್ರಜ್ಞನ ಪ್ರಕಾರ ಸಂಸ್ಕೃತಿಗೆ ಎರಡು ಮುಖಗಳಿವೆ. ಉದಾಹರಣೆಗೆ ವಿವಾಹದಲ್ಲಿ ಸಂಗಾತಿಯನ್ನು ಆಯ್ಕೆ ಮಾಡುವುದು ಎಲ್ಲಾ ಸಂಸ್ಕೃತಿಯಲ್ಲಿ ಸಾಮಾನ್ಯವಾದರೂ ಅದರ ವಿಧಾನಗಳಲ್ಲಿ ಮತ್ತು ನಿಯಮಗಳಲ್ಲಿ ವ್ಯತ್ಯಾಸಗಳಿವೆ. ಹಾಗಾಗಿ ನಾವು ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಬೇರೆ ಬೇರೆ ಸಮಾಜದ ಸಂಸ್ಕೃತಿಗಳಲ್ಲಿ ಕಾಣಬಹುದು.

೭. ಸಂಸ್ಕೃತಿಯು ವರ್ಗಾಯಿಸಲ್ಪಡುವಂತಹದು

ಸಂಸ್ಕೃತಿಯು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾಯಿಸಲ್ಪಡುತ್ತದೆ. ಆದುದರಿಂದ ಇದು ಸಂಚಲನಾತ್ಮಕವಾದುದು. ಹೆತ್ತವರು ತಮ್ಮ ಹೆತ್ತವರಿಂದ, ಹಿಂದಿನ ತಲೆಮಾರಿನಿಂದ ಪಡೆದುಕೊಂಡ ಸಂಸ್ಕೃತಿಯ ಅಂಶಗಳನ್ನು ಮುಂದೆ ತಮ್ಮ ಮಕ್ಕಳಿಗೆ, ಮರಿ ಮಕ್ಕಳಿಗೆ ವರ್ಗಾಯಿಸುತ್ತಾರೆ. ಈ ರೀತಿ ಸಂಸ್ಕೃತಿ ಹಾಗೆಯೇ ಮುಂದುವರಿಯುವುದು.

೮. ನಿರಂತರವಾದುದು ಮತ್ತು ಸಂಗ್ರಹಕಾರಕವಾದುದು

ಸಂಸ್ಕೃತಿಯೂ ಹೊಸ ಹೊಸ ಅಂಶಗಳ ಸೇರ್ಪಡೆಯಿಂದ ಸದಾ ಬೆಳೆಯುತ್ತಿದ್ದು ಅದಕ್ಕೆ ಅಂತ್ಯ ಎಂಬುವುದೇ ಇಲ್ಲವಾಗಿದೆ. ಸಂಸ್ಕೃತಿಯು ಒಂದು ಸಂಗ್ರಹಕಾರಕವಾಗಿ ಬೆಳೆದು ಬಂದಿದೆ. ಜ್ಞಾನ, ಕಲ್ಪನೆಗಳು, ನಂಬುಗೆಗಳು, ನಿಯಮಗಳು, ಮೌಲ್ಯಗಳು, ಸಂಸ್ಥೆಗಳೆಲ್ಲವನ್ನೂ ಸಂಸ್ಕೃತಿಯ ಒಂದು ಸಂಯೋಜಿತ ವ್ಯವಸ್ಥೆಯೊಂದರಲ್ಲಿ ಕಾಣಬಹುದು.

೯. ಸಂಸ್ಕೃತಿಯು ಹೊಂದಾಣಿಕೆಯಿಂದ ಕೂಡಿದೆ

ಸಂಸ್ಕೃತಿಯು ಬದಲಾವಣೆ ಹೊಂದುತ್ತಿದ್ದರೂ ಪರಿಸ್ಥಿತಿಗನುಗುಣವಾಗಿ ಹೊಂದಿಕೊಳ್ಳುತ್ತದೆ. ಇದು ಹೊಂದಾಣಿಕೆಗೆ ಅನುಕೂಲಕರವಾದುದು.

೧೦. ತೃಪ್ತಿದಾಯಕ ಅಥವಾ ಅವಶ್ಯಕತೆಗಳ ಈಡೇರಿಕೆ

ಸಂಸ್ಕೃತಿಯು ಮಾನವನ ಅಥವಾ ವೈಯಕ್ತಿಕ ಅವಶ್ಯಕತೆಗಳನ್ನು ಮತ್ತು ಅಗತ್ಯತೆಗಳನ್ನು ಈಡೇರಿಸುತ್ತದೆ. ಮಾನವನಿಗೆ ಸಹಜವಾಗಿರುವ ಬಯಕೆ, ಆಸಕ್ತಿ, ಆಸೆ-ಆಕಾಂಕ್ಷೆಗಳನ್ನು ಸಂಸ್ಕೃತಿಗೆ ಅನುಗುಣವಾಗಿ ತೃಪ್ತಿಪಡಿಸಿಕೊಳ್ಳಬೇಕಾಗುತ್ತದೆ. ಉದಾಹರಣೆ ಹಬ್ಬಗಳಲ್ಲಿ ಸಿದ್ಧಪಡಿಸುವ ತಿನಸುಗಳು. ಪ್ರಾದೇಶಿಕ ಅಥವಾ ಜಾತಿ, ಧರ್ಮಗಳ ಸಂಸ್ಕೃತಿಯವರಿಗೆ ಅನುಗುಣವಾಗಿರುತ್ತದೆ. ಹಾಗೆಯೇ ಲೈಂಗಿಕ ಆಸಕ್ತಿಯು ವಿವಾಹದ ಮೂಲಕವೇ ಈಡೇರುತ್ತದೆ.

೧೧. ಸಂಸ್ಕೃತಿಯು ಏಕರೂಪವಾಗಿಲ್ಲ

ಸಂಸ್ಕೃತಿಯು ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿದೆ. ಪ್ರತಿಯೊಂದು ಸಮಾಜಕ್ಕೂ ತನ್ನದೇ ಆದ ನಿರ್ದಿಷ್ಟವಾದ ಸಂಸ್ಕೃತಿ ಇದೆ. ಆದುದರಿಂದ ಸಂಸ್ಕೃತಿಯು ಏಕರೂಪದ್ದಾಗಿಲ್ಲ.

೧೨. ಸಂಸ್ಕೃತಿಯು ಆದರ್ಶ ಸೂಚಕವಾದುದು

ಸಂಸ್ಕೃತಿಯನ್ನು ಎಲ್ಲಾ ಸಮಾಜವು ತನ್ನ ಒಂದು 'ಆದರ್ಶ' ಅಥವಾ 'ಒಂದು ಗುಣಮಟ್ಟ' ಎಂಬುವುದಾಗಿ ಪರಿಗಣಿಸುತ್ತದೆ. ಸಂಸ್ಕೃತಿಯು ಆಂತರಿಕ ಮೌಲ್ಯವನ್ನು ಹೊಂದಿದ್ದು ಅದನ್ನು ಆದರ್ಶವೆಂದು ಕರೆಯಲಾಗುವುದು. ಜನರು ಈ ತಮ್ಮ ಸಂಸ್ಕೃತಿಯನ್ನು ಆದರ್ಶವಾಗಿಟ್ಟು ಅದರಂತೆ ಬದುಕುತ್ತಾರೆ. ಹಾಗೆಯೇ ಅಭಿಮಾನ ಪಡುತ್ತಾರೆ.

೧೩. ಸಂಸ್ಕೃತಿಯು ಒಂದು ಪರಂಪರೆ

ಸಂಸ್ಕೃತಿಯು ಸಮಗ್ರ ವ್ಯವಸ್ಥೆಯಾದರೂ ಪರಂಪರೆಯು ಅದರ ಒಂದು ಬಹುಮುಖ್ಯ ಭಾಗವಾಗಿದೆ. ಉದಾ: ಭಾರತದ ಪರಂಪರೆಯು ನಮ್ಮ ಸಂಸ್ಕೃತಿಗೆ ಒಳ್ಳೆಯ ಉದಾಹರಣೆಯಾಗಿದೆ.

೪.೨ ಸಂಸ್ಕೃತಿಯ ಪರಿಸೂಚಿ

ಸಂಸ್ಕೃತಿಯು ಸಮಗ್ರತಾ ವ್ಯವಸ್ಥೆಯನ್ನು ಹೊಂದಿದೆ. ಅದು ನಮ್ಮ ಚಿಂತನೆ, ಅಭಿಪ್ರಾಯ, ರೂಢಿ, ಸಂಸ್ಕಾರ, ನೈತಿಕನಿಯಮ ಮೌಲ್ಯಗಳು, ಜ್ಞಾನ, ಆದರ್ಶಗಳು ಮುಂತಾದ ಅಂಶಗಳನ್ನೊಳಗೊಂಡಿದೆ. ಹಾಗೆಯೇ ಸಂಸ್ಕೃತಿಯು ವೈಜ್ಞಾನಿಕ ಶೋಧನೆಗಳು, ಯಂತ್ರಗಳು, ಇಲೆಕ್ಟ್ರಾನಿಕ್ ಸಾಧನೆಗಳು, ಕಂಪ್ಯೂಟರ್ ಇತ್ಯಾದಿಗಳನ್ನು ಒಳಗೊಂಡಿದೆ. ಆದರೆ ಈ ಎಲ್ಲಾ ಅಂಶಗಳು ಒಂದೇ ರೀತಿಯದ್ದಲ್ಲ. ಈ ಆಧಾರದಲ್ಲಿ ಸಮಾಜಶಾಸ್ತ್ರಜ್ಞರು ಸಂಸ್ಕೃತಿಯನ್ನು ಎರಡು ಪ್ರಮುಖ ಬಗೆಗಳನ್ನಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ ೧. ಭೌತ ಮತ್ತು ೨. ಅಭೌತ ಸಂಸ್ಕೃತಿ. ಕಣ್ಣಿಗೆ ನೇರವಾಗಿ ಕಾಣುವ, ನಾವು ಬಳಸುವ ವಸ್ತುಗಳೆಲ್ಲ ಭೌತ ಸಂಸ್ಕೃತಿಗೆ ಸೇರಿವೆ. ಉದಾ: ಕಟ್ಟಡಗಳು, ಅಣೆಕಟ್ಟು, ಕಂಪ್ಯೂಟರ್, ರೇಡಿಯೋ, ಪುಸ್ತಕ, ಮೋಟಾರುಕಾರು ಇತ್ಯಾದಿ, ಅಮೂರ್ತವಾಗಿದ್ದು ನಮ್ಮ ಮನಸ್ಸಿಗೆ ಭಾವನೆಗಳಿಗೆ ಸಂಬಂಧಿಸಿದ ಅಂಶಗಳೆಲ್ಲಾ ಅಭೌತ ಸಂಸ್ಕೃತಿಯಾಗಿದೆ. ಉದಾ: ನಂಬಿಕೆಗಳು, ಜ್ಞಾನ, ಸಂಸ್ಕಾರಗಳು, ನಿಯಮಗಳು, ಕಾನೂನು ಇತ್ಯಾದಿ. ಈ ರೀತಿ ಭೌತ ಮತ್ತು ಅಭೌತ ಅಂಶಗಳನ್ನೊಳಗೊಂಡಿರುವ 'ಒಟ್ಟು ಸಂಸ್ಕೃತಿ' ಅಥವಾ ಸಮುಚ್ಚಯವನ್ನು 'ಸಂಸ್ಕೃತಿ ಪರಿಸೂಚಿ' ಎಂದು ಕರೆಯುತ್ತೇವೆ.

ಸಂಸ್ಕೃತಿ ಪರಿಸೂಚಿಯು ಎರಡು ಮುಖ್ಯ ಭಾಗಗಳಾದ ಭೌತ ಸಂಸ್ಕೃತಿ ಮತ್ತು ಅಭೌತ ಸಂಸ್ಕೃತಿಗಳ ಕುರಿತು ಸಮಾಜಶಾಸ್ತ್ರಜ್ಞರು ವಿಭಿನ್ನ ಅಧ್ಯಯನ ನಡೆಸಿದ್ದಾರೆ. ಇ.ಬಿ. ಟೈಲರ್ ಮತ್ತು ರೆಡ್‌ಫೀಲ್ಡ್ ಅವರು ಭೌತಿಕ ಸಂಗತಿಗಳನ್ನು ಸಂಸ್ಕೃತಿಯ ಒಂದು ಭಾಗವೆಂಬುವುದಾಗಿ ಒಪ್ಪುವುದಿಲ್ಲ. ರಾಬರ್ಟ್ ಬೈರ್‌ಸ್ಟಡ್ ಅವರ ಪ್ರಕಾರ ಭೌತ ಸಂಸ್ಕೃತಿಯ ಕಲ್ಪನೆಯು

ಸರಳ ಹಾಗೂ ಸ್ಪಷ್ಟವಾದುದು. ಆದರೆ ಅಭೌತ ಸಂಸ್ಕೃತಿಯ ಕಲ್ಪನೆ ಮಾತ್ರ ಹೆಚ್ಚು ಅಸ್ಪಷ್ಟವಾಗಿದೆ.

ಭೌತ ಮತ್ತು ಅಭೌತ ಸಂಸ್ಕೃತಿಯ ನಡುವಿನ ವ್ಯತ್ಯಾಸಗಳು

೧. ಭೌತ ಸಂಸ್ಕೃತಿಯು ಮಾನವ ತಯಾರಿಸಿದ ವಸ್ತುಗಳ ರೂಪದಲ್ಲಿರುತ್ತದೆ. ಅವುಗಳು ಮಾನವನ ಬಾಹ್ಯ ವಿಚಾರಗಳಿಗೆ ಸಂಬಂಧಿಸಿದ್ದಾಗಿವೆ. ಉದಾ: ರೇಡಿಯೋ, ದೂರದರ್ಶನ, ಕಂಪ್ಯೂಟರ್, ಪುಸ್ತಕ, ಗಡಿಯಾರ ಇತ್ಯಾದಿಗಳು. ಅಭೌತ ಸಂಸ್ಕೃತಿಯು ವಸ್ತುರೂಪದಲ್ಲದ ಅಂಶವಾಗಿದೆ. ಅದು ಅಮೂರ್ತ ಸ್ವರೂಪದ ಗಹನ ಅಭಿಪ್ರಾಯಕ್ಕೆ ಸಂಬಂಧಿಸಿದ್ದಾಗಿದೆ. ಉದಾ: ಜ್ಞಾನ, ನಂಬಿಕೆಗಳು, ಮೌಲ್ಯಗಳು ಇತ್ಯಾದಿ.

೨. ಭೌತ ಸಂಸ್ಕೃತಿಯು ಸುಲಭವಾಗಿ ವಿಕ್ರಯಿಸಬಹುದಾದ, ವರ್ಗಾವಣೆಗೊಳಿಸ ಬಹುದಾದ ಅಥವಾ ಪರಸ್ಪರ ಬದಲಿಸಬಹುದಾದ ವಿಭಿನ್ನ ಉತ್ಪಾದಿತ ವಸ್ತುಗಳನ್ನು ಹೊಂದಿರುತ್ತದೆ. ಉದಾ: ಮೋಟಾರುಕಾರು.

ಅಭೌತ ಸಂಸ್ಕೃತಿಯು ಸುಲಭವಾಗಿ ತಿಳಿಯಲು ಅಸಾಧ್ಯವಾದ ಅಥವಾ ಅಳತೆ ಮಾಡಲಾಗದ ಅಥವಾ ವರ್ಗಾವಣೆಗೊಳಿಸಲು ಅಸಾಧ್ಯವಾದುದು ಆಗಿದೆ. ಉದಾ: ಧರ್ಮ ಅಥವಾ ಧಾರ್ಮಿಕ ಆಚರಣೆ.

೩. ಭೌತ ಸಂಸ್ಕೃತಿಗೆ ಸೇರಿದ ವಸ್ತುರೂಪಗಳ ಸಾಮರ್ಥ್ಯ ಮತ್ತು ಗುಣಮಟ್ಟವನ್ನು ಹೆಚ್ಚಿಸಲು ಅವಕಾಶ - ಅನುಕೂಲಗಳಿವೆ.

ಆದರೆ ಅಭೌತ ಸಂಸ್ಕೃತಿಯು ಮಾನವನ ಆಂತರಿಕ ವಿಚಾರಗಳಿಗೆ ಸಂಬಂಧಿಸಿದ ಕಾರಣ ಅದರ ಸಾಮರ್ಥ್ಯ ಮತ್ತು ಗುಣಮಟ್ಟವನ್ನು ಹೆಚ್ಚಿಸಲು ಅವಕಾಶಗಳಿಲ್ಲ. ಅಭೌತ ಸಂಸ್ಕೃತಿಯು ಸಮಯಕ್ಕನುಗುಣವಾಗಿ ಅಭಿವೃದ್ಧಿಗೊಳ್ಳುತ್ತದೆ.

೪. ಭೌತ ಸಂಸ್ಕೃತಿಗೆ ಸೇರಿದ ವಿವಿಧ ಸಾಧನಗಳು, ಯಂತ್ರೋಪಕರಣಗಳು, ಸಲಕರಣೆಗಳು ಇತ್ಯಾದಿಗಳನ್ನು ವರ್ಗಾಯಿಸಿದಾಗ ಅಥವಾ ಇತರರಿಗೆ ಹಂಚಿದಾಗ ಅದನ್ನು ವ್ಯಕ್ತಿಯು ಕಳಕೊಳ್ಳುತ್ತಾನೆ.

ಆದರೆ ಅಭೌತ ಸಂಸ್ಕೃತಿಯನ್ನು ಹೊಂದಿರುವವರು ಇತರರೊಂದಿಗೆ ಹಂಚಿಕೊಂಡಾಗ ಅವರು ಅದನ್ನು ಕಳೆದುಕೊಳ್ಳಲಾರರು.

೫ **ಮೆಕೈವರ್** ಅವರು 'ನಾವು ಏನನ್ನು ಹೊಂದಿದ್ದೇವೆ' ಎಂಬುದು ನಾಗರಿಕತೆ ಎಂದಿದ್ದಾರೆ. ಅರ್ಥಾತ್ ಇದು ಭೌತ ಸಂಸ್ಕೃತಿಯನ್ನು ತಿಳಿಸುತ್ತದೆ. ಏಕೆಂದರೆ ಭೌತಸಂಸ್ಕೃತಿಯನ್ನು ಅಥವಾ ವಸ್ತುಸಂಸ್ಕೃತಿಯನ್ನು ನಾವು ಕಣ್ಣಿನಿಂದ ನೋಡಬಹುದು ಅಥವಾ ಮುಟ್ಟಬಹುದು.

ಹಾಗೆಯೇ **ಮೆಕೈವರ್** ಅವರು ''ನಾವು ಏನಾಗಿದ್ದೇವೆ' ಎಂಬುದು ಸಂಸ್ಕೃತಿ ಎಂದಿದ್ದಾರೆ. ಅರ್ಥಾತ್ ಇದು ಅಭೌತ ಸಂಸ್ಕೃತಿಯಾಗಿದೆ.

ಭೌತ ಮತ್ತು ಅಭೌತ ಸಂಸ್ಕೃತಿಯ ನಡುವಣ ಸಂಬಂಧ

ಭೌತ ಮತ್ತು ಅಭೌತ ಸಂಸ್ಕೃತಿಯ ನಡುವೆ ವಿವಿಧ ವ್ಯತ್ಯಾಸಗಳಿದ್ದರೂ ಅವೆರಡೂ ಪರಸ್ಪರ ಪೂರಕವಾಗಿಯೂ ಇವೆ. ಅವೆರಡೂ ಪರಸ್ಪರ ಸಂಬಂಧ ಉಳ್ಳವುಗಳಾಗಿವೆ. ಒಂದರ ಸಹಾಯವಿಲ್ಲದೆ ಇನ್ನೊಂದನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ಭೌತ ಮತ್ತು ಅಭೌತ ಸಂಸ್ಕೃತಿಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಉದಾ: ಒಂದು ಮಂಚ ಅಥವಾ ಕುರ್ಚಿಯನ್ನು ನಿರ್ಮಿಸುವಾಗ ವ್ಯಕ್ತಿಯ ಜ್ಞಾನ ಅಥವಾ ನೈಪುಣ್ಯತೆಯೂ ಒಳಗೊಂಡಿರುತ್ತದೆ. ಹಾಗೆಯೇ ಶಿಲ್ಪಕಲಾಕೃತಿಗಳು, ವಿಗ್ರಹ, ಕೆತ್ತನೆಗಳು ಭೌತಿಕ ಉತ್ಪನ್ನಗಳು. ಇವೆಲ್ಲವೂ ಕಲಾಕಾರನ, ಶಿಲ್ಪಿಯ ಕಲ್ಪನೆಯ ಫಲಶ್ರುತಿಯಾಗಿದ್ದು ಆ ಕಲ್ಪನೆಯು ಅಭೌತಿಕ ಅಂಶಕ್ಕೆ ಸೇರಿದೆ. ಸಂಗೀತ ಉಪಕರಣವು ಭೌತವಸ್ತುವಾಗಿದ್ದು ಅದರಿಂದ ಹೊರಬರುವ ಸಂಗೀತವು ಅಭೌತಿಕವಾಗಿದೆ.

ಆದುದರಿಂದ ಅಭೌತ ಮತ್ತು ಭೌತ ಸಂಸ್ಕೃತಿಗಳು ಜತೆ ಜತೆಯಾಗಿಯೇ ಇರುತ್ತವೆ ಮತ್ತು ಒಂದನ್ನೊಂದು ಅವಲಂಬಿಸಿವೆ. ಅಭೌತ ಸಂಸ್ಕೃತಿ ಇಲ್ಲದೆ ಭೌತ ಸಂಸ್ಕೃತಿ ಬೆಳೆಯಲು, ಪ್ರಗತಿ ಹೊಂದಲು ಸಾಧ್ಯವಿಲ್ಲ. ಉದಾ: ಜ್ಞಾನ, ಶಿಕ್ಷಣ, ಸಂಶೋಧನೆ, ವಿಚಾರಶಕ್ತಿ ಇಲ್ಲದೆ ಭೌತ ಸಂಸ್ಕೃತಿ ಸೃಷ್ಟಿಯಾಗಲಾರದು. ಹಾಗೆಯೇ ಭೌತ ಸಂಸ್ಕೃತಿಯ ಸಹಾಯ, ಸಹಕಾರವಿಲ್ಲದೆ ಅಭೌತ ಸಂಸ್ಕೃತಿಯೂ ಬೆಳವಣಿಗೆಯೂ ಅಸಾಧ್ಯ, ಉದಾ: ಮುದ್ರಣಯಂತ್ರ, ಗಣಕಯಂತ್ರ ಇಲ್ಲದೆ ನಮ್ಮ ಜ್ಞಾನ, ವಿಚಾರಗಳನ್ನು ಮುದ್ರಿಸಲು ಹಂಚಿಕೊಳ್ಳಲು ಆಗದು. ಹಾಗೆಯೇ ಕಂಪ್ಯೂಟರ್‌ನಿಂದ ಚೆಸ್ ಆಟದ ತಂತ್ರಗಳನ್ನು ಕಲಿಯಬಹುದು. ಸಿಡಿ, ವೀಡಿಯೋ ಸಹಾಯದಿಂದ ನೃತ್ಯ, ಸಂಗೀತದ ಜ್ಞಾನವನ್ನು ಪಡೆಯಬಹುದು ಅಥವಾ ಹೆಚ್ಚಿಸಿಕೊಳ್ಳಬಹುದು.

ಸಂಸ್ಕೃತಿಯ ಹಿಂಬೀಳಿಕೆ

ಸಂಸ್ಕೃತಿಯ ಹಿಂಬೀಳಿಕೆ ಪರಿಕಲ್ಪನೆಯನ್ನು ಮೊಟ್ಟ ಮೊದಲು ಪರಿಚಯಿಸಿದವರು **ವಿಲಿಯಂ. ಎಫ್. ಆಗ್ಬರ್ನ್** ಎಂಬ ಅಮೆರಿಕದ ಸಮಾಜಶಾಸ್ತ್ರಜ್ಞ. ಆಗ್ಬರ್ನ್ ತನ್ನ 'ಸೋಶಿಯಲ್ ಚೇಂಜ್' (೧೯೨೨) ಎಂಬ ಕೃತಿಯಲ್ಲಿ ಈ ಕಲ್ಪನೆಯನ್ನು ಪ್ರಸ್ತಾಪಿಸಿ ಸಂಸ್ಕೃತಿಯನ್ನು ಭೌತ ಮತ್ತು ಅಭೌತ ಎಂಬುವುದಾಗಿ ವಿಭಜಿಸಿದ್ದಾನೆ. ಆಗ್ಬರ್ನ್‌ನ ಬಳಿಕ ಈ ಪರಿಕಲ್ಪನೆಯನ್ನು ಅನೇಕ ಸಮಾಜಶಾಸ್ತ್ರಜ್ಞರು ವಿಭಿನ್ನ ದೃಷ್ಟಿಕೋನಗಳಿಂದ ಚರ್ಚಿಸಿದ್ದಾರೆ.

ಆಗ್ಬರ್ನ್‌ನ ಪ್ರಕಾರ ಯಾವುದೇ ಸಮಾಜ-ಸಂಸ್ಕೃತಿಯ ಅಂತರಸಂಬಂಧದ ಅಂಶಗಳು ಒಂದೇ ಸಮಯದಲ್ಲಿ ಒಂದೇ ಗತಿಯಲ್ಲಿ ಬದಲಾಗುವುದಿಲ್ಲ. ಆದುದರಿಂದ ಸಾಂಸ್ಕೃತಿಕ ಮಾದರಿಯ ಯಾವುದಾದರೊಂದು ಭಾಗದಲ್ಲಿ ಉಂಟಾಗುವ ಬದಲಾವಣೆಯು ಅದಕ್ಕೆ ಸಂಬಂಧಿಸಿದ ಇತರ ಭಾಗಗಳಲ್ಲಿ ಒತ್ತಡಗಳು, ಸಮಸ್ಯೆಗಳು ಸೃಷ್ಟಿಯಾಗಬಹುದು. ಸಂಸ್ಕೃತಿಯು ಸದಾ ಬದಲಾವಣೆಗೊಳ್ಳುತ್ತಿರುತ್ತದೆ. ಆದರೆ ಅದರ ಎಲ್ಲಾ ಅಂಶಗಳು

ಒಂದೇ ವೇಗದಲ್ಲಿ ಮಾರ್ಪಾಡು ಹೊಂದುವುದಿಲ್ಲ. ನಾವು ಈ ಹಿಂದೆ ತಿಳಿದುಕೊಂಡಂತೆ ಭೌತ ಸಂಸ್ಕೃತಿ ಅಥವಾ ನಾಗರಿಕತೆಯ ಸಾಧನಗಳು ಅತ್ಯಂತ ವೇಗವಾಗಿ ಬದಲಾವಣೆ ಹೊಂದುತ್ತವೆ. ಆದರೆ ಅದೇ ಗತಿಯಲ್ಲಿ ಅಭೌತ ಸಂಸ್ಕೃತಿಯ ಅಂಶಗಳು ಪರಿವರ್ತನೆಗೊಳ್ಳುವುದಿಲ್ಲ. ಈ ರೀತಿ ಬದಲಾವಣೆಯ ಗತಿಯಲ್ಲಿ ಅಸಮತೋಲನ ಉಂಟಾಗುತ್ತದೆ. ಪರಿಣಾಮವಾಗಿ ಸಂಸ್ಕೃತಿಯ ಎರಡು ಭಾಗ ಅಥವಾ ಅಂಶಗಳಲ್ಲಿ ಅಂತರ ಅಥವಾ ಎಡೆ ಏರ್ಪಡುತ್ತದೆ (Gap or Lag). ಬದಲಾವಣೆಯ ವೇಗದ ಪ್ರಮಾಣ ಮತ್ತು ಅಸಮತೋಲನ ಹೆಚ್ಚಿದಂತೆ ಅದರ ನಡುವಿನ ಅಂತರವೂ ಹೆಚ್ಚುತ್ತಾ ಹೋಗುತ್ತದೆ. ಸಾಮರಸ್ಯ ಅಥವಾ ಸುಭದ್ರತೆಯನ್ನು ಕಾಪಾಡಲು ಹೊಂದಾಣಿಕೆಯನ್ನು ಮಾಡಿಕೊಂಡರೂ, ಸುಭದ್ರತೆಯನ್ನು ಕಾಪಾಡುವ ಮೊದಲೇ ಸಮಯದ ಅಂತರ ಉಂಟಾಗುತ್ತದೆ. ಹೀಗೆ ಅಭೌತ ಸಂಸ್ಕೃತಿಯು ಭೌತ ಸಂಸ್ಕೃತಿಗಿಂತ ಬದಲಾವಣೆಯ ಗತಿಯಲ್ಲಿ ಹಿಂದೆ ಬೀಳುವ ಪ್ರಕ್ರಿಯೆಯನ್ನು **ವಿಲಿಯಂ ಆಗ್ಬರ್ನ್** 'ಸಂಸ್ಕೃತಿಯ ಹಿಂಬೀಳಿಕೆ' ಎಂದು ಕರೆದಿದ್ದಾರೆ.

'ಸಂಸ್ಕೃತಿಯ ಹಿಂಬೀಳಿಕೆ'ಗೆ ಅನೇಕ ಉದಾಹರಣೆಗಳನ್ನು ನೀಡಬಹುದು. ಸರಿಯಾದ ಬಂಡವಾಳದ ಕೊರತೆಯಿಂದಾಗಿ ಭಾರತದಲ್ಲಿ ಕೈಗಾರಿಕಾ ಪ್ರಗತಿಯು ಕುಂಠಿತಗೊಂಡಿದೆ. ಹಾಗೆಯೇ ನಮ್ಮ ಕಟ್ಟಡ ನಿರ್ಮಾಣದಲ್ಲಿ ಆಗುವಷ್ಟು ಬದಲಾವಣೆಯು ವಿವಾಹದ ವಿಧಿಗಳಲ್ಲಿ ಕಾಣುವುದಿಲ್ಲ. ನಮ್ಮ ಉಡುಗೆ ತೊಡುಗೆಯಲ್ಲಿ ಆಗುವಷ್ಟು ಬದಲಾವಣೆಗಳು ಧಾರ್ಮಿಕ ಪದ್ಧತಿಗಳಲ್ಲಿರುವುದಿಲ್ಲ. ಹಾಗೆಯೇ ಕುಟುಂಬ ಯೋಜನೆಯ ವಿಧಾನಗಳಲ್ಲಿ ಬಹಳ ಅಭಿವೃದ್ಧಿಗಳನ್ನು ಕಾಣಬಹುದಾದರೂ ಕೆಲವು ಧರ್ಮ-ಸಮುದಾಯಗಳು ಇನ್ನು ಕೃತಕ ಜನನ ನಿಯಂತ್ರಣ ವಿಧಾನವನ್ನು ಒಪ್ಪುವುದಿಲ್ಲ.

ಆಗ್ಬರ್ನ್‌ನ ಪ್ರಕಾರ ತಾಂತ್ರಿಕ ಪ್ರಗತಿಯು ಭೌತಿಕ ಅಂಶಗಳಲ್ಲಿ ತೀವ್ರಗತಿಯ ಬದಲಾವಣೆಗಳನ್ನು ಮಾಡುತ್ತದೆ. ಆದರೆ ಅಭೌತ ಸಂಸ್ಕೃತಿಯ ಅಂಶಗಳು ಹೊಂದಿಕೊಳ್ಳಲು ವಿಫಲಗೊಳ್ಳುತ್ತವೆ ಅಥವಾ ಸಾಕಷ್ಟು ಸಮಯದ ಅಂತರದಲ್ಲಿ ಹೊಂದಿಕೊಳ್ಳುತ್ತವೆ. ಇದರಿಂದಾಗಿ ಅನೇಕ ಸಾಮಾಜಿಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಅಭೌತ ಸಂಸ್ಕೃತಿಯನ್ನು ಭೌತ ಸಂಸ್ಕೃತಿಯೊಂದಿಗೆ ಹೊಂದಿಸುವ ಸಮಸ್ಯೆಯೇ ಇಂದಿನ ಆಧುನಿಕ ಬದುಕಿನ ಹೊಂದಾಣಿಕೆಯ ಸಮಸ್ಯೆಯಾಗಿದೆ ಎಂದು **ಸ್ಯಾಮುಯಿಲ್ ಕ್ವೊನಿಗ್**‌ರವರ ಅಭಿಪ್ರಾಯಪಡುತ್ತಾರೆ.

ವಿಮರ್ಶೆ

ಆಗ್ಬರ್ನ್‌ರ 'ಸಾಂಸ್ಕೃತಿಕ ಹಿಂಬೀಳಿಕೆ' ತತ್ವವನ್ನು ಅನೇಕ ಸಮಾಜಶಾಸ್ತ್ರಜ್ಞರು ವಿಮರ್ಶಿಸಿದ್ದಾರೆ. **ಕಿಂಗ್ಸ್‌ಲೇ ಡೇವಿಸ್** ಅವರ ಅಭಿಪ್ರಾಯದಂತೆ ಸಂಸ್ಕೃತಿಯನ್ನು ಭೌತ ಮತ್ತು ಅಭೌತ ಎಂದು ಖಚಿತವಾಗಿ ವಿಭಾಗಿಸುವುದು ಕಷ್ಟಕರ. ಪರಿವರ್ತನೆಗಳು ಯಾವಾಗಲೂ ಭೌತ ಸಂಸ್ಕೃತಿಯ ಕ್ಷೇತ್ರದಲ್ಲಿಯೇ ಮೊದಲು ಉಂಟಾಗುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ನಮ್ಮ ವಿಚಾರಗಳು, ತತ್ವಗಳು, ಮೌಲ್ಯ ಅಥವಾ ಆದರ್ಶಗಳು

ಭೌತ ಸಂಸ್ಕೃತಿಯ ಪರಿವರ್ತನೆಗೆ ಕಾರಣವಾಗಬಹುದು ಅಥವಾ ಪ್ರೇರಣೆ ನೀಡಬಹುದು. ಅದೇ ರೀತಿ ಭೌತ-ಅಭೌತ ಸಂಸ್ಕೃತಿಗಳನ್ನು ಸಮಾನ ರೀತಿಯಲ್ಲಿ ಪರಿಗಣಿಸುವುದು ಅಥವಾ ಅವೆರಡನ್ನು ಒಂದೇ ಸಾಧನದಿಂದ ಅಳೆಯುವುದು ಸರಿಯಾದ ಕ್ರಮವಲ್ಲ ಎಂದು ಮೆಕೈವರ್ ಅವರ ಅಭಿಪ್ರಾಯವಾಗಿದೆ. 'ಸಾಂಸ್ಕೃತಿಕ ಹಿಂಬೀಳಿಕೆ' ಪರಿಕಲ್ಪನೆಯಂತೆ 'ತಾಂತ್ರಿಕ ಹಿಂಬೀಳಿಕೆ' ಮತ್ತು 'ನಾಗರಿಕತೆಯ ಹಿಂಬೀಳಿಕೆ' ಎಂಬ ಕಲ್ಪನೆಗಳನ್ನು ಯಾಕೆ ಬಳಸಬಾರದೆಂಬುವುದು ಅವರ ತರ್ಕವಾಗಿದೆ. ಆಗ್ಬರ್ನ್‌ರ 'ಸಾಂಸ್ಕೃತಿಕ ಹಿಂಬೀಳಿಕೆ' ತತ್ವವು ಹಲವಾರು ಟೀಕೆಗಳಿಗೆ ಗುರಿಯಾದರೂ, ಈ ಪರಿಕಲ್ಪನೆಯ ಬೆಳವಣಿಗೆಯು ಸಮಾಜ ಶಾಸ್ತ್ರಜ್ಞರಿಗೆ ಮುಂದೆ ಸಂಶೋಧನೆಗಳನ್ನು ನಡೆಸಲು ಸಹಕಾರಿಯಾಗಿದೆ.

ಸಂಸ್ಕೃತಿ ಮತ್ತು ನಾಗರಿಕತೆ

ಸಂಸ್ಕೃತಿಯು ಒಂದು ಸಮೂಹದೊಳಗೆ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಲ್ಪಡುವ ಮೌಲ್ಯಗಳು, ನಂಬಿಕೆಗಳು, ಜ್ಞಾನ, ವಿಚಾರಗಳ ಒಂದು ಒಟ್ಟು ವ್ಯವಸ್ಥೆ ಎಂಬುವುದಾಗಿ ನಾವು ತಿಳಿದುಕೊಂಡಿದ್ದೇವೆ. ಇದು ಹಂಚಲ್ಪಟ್ಟ ವರ್ತನೆಯಿಂದ ಮತ್ತು ಕಲಿಕೆಯಿಂದ ಉಂಟಾದುದು. ಆದರೆ ನಾಗರಿಕತೆಯು ನಮ್ಮ ಬಾಹ್ಯ ಜೀವನಕ್ಕೆ ಸಂಬಂಧಿಸಿದುದಾಗಿದೆ. ನಾಗರಿಕತೆಯು, ಮಾನವನು ಬದುಕಿಗಾಗಿ ಪ್ರಕೃತಿಯ ಶಕ್ತಿಯನ್ನು ಉಪಯೋಗಿಸಿ ನಿರ್ಮಿಸಿಕೊಡಿರುವ ವಿವಿಧ ಉಪಕರಣಗಳು, ಪರಿಕರಗಳು, ತಾಂತ್ರಿಕ ಉತ್ಪನ್ನಗಳನ್ನೊಳಗೊಂಡಿದೆ.

ಪದೋತ್ಪತ್ತಿಶಾಸ್ತ್ರೀಯವಾಗಿ ಆಂಗ್ಲ ಪದ 'ಸಿವಿಲೈಝೇಶನ್' (ನಾಗರಿಕತೆ) ಲ್ಯಾಟಿನ್ ಭಾಷೆಯ 'ಸಿವಿತಾಸ್' ಎಂಬ ಮೂಲಪದದಿಂದ ಹುಟ್ಟಿಕೊಂಡಿದೆ. 'ಸಿವಿತಾಸ್' ಎಂದರೆ ನಗರ ಮತ್ತು ಆಂಗ್ಲ ಪದ 'ಸಿವಿಲೈಝೇಶನ್' ಎಂದರೆ 'ನಾಗರಿಕತೆ' ಎಂದರ್ಥ. ಮೂಲಪದದ ಅರ್ಥದ ಪ್ರಕಾರ ನಗರದಿಂದ ಆರಂಭವಾದುದೇ ನಾಗರಿಕತೆ ಎಂದು ನಾವು ಅರ್ಥೈಸಬೇಕಾಗುತ್ತದೆ. ಸಂಘಟಿತ ನಗರವೊಂದರ ಜನಜೀವನ ಮತ್ತು ಸಮಗ್ರ ಸಾಧನೆಯನ್ನು ಪ್ರತಿಬಿಂಬಿಸುವುದೇ ನಾಗರಿಕತೆ ಎನ್ನಬಹುದು. 'ನಾಗರಿಕತೆ' ಕಲ್ಪನೆಯ ಬಗ್ಗೆ ಸಮಾಜಶಾಸ್ತ್ರಜ್ಞರು, ಸಮಾಜ ವಿಜ್ಞಾನಿಗಳು ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಮತ್ತು ಅವರವರ ದೃಷ್ಟಿಕೋನದ ಪ್ರಕಾರ ನಿರೂಪಣೆಗಳನ್ನು ನೀಡಿದ್ದಾರೆ.

ಈ ಕೆಳಗೆ ನೀಡಿರುವ ಚಿಂತಕರ ವ್ಯಾಖ್ಯೆಗಳು 'ನಾಗರಿಕತೆ'ಯ ಪರಿಕಲ್ಪನೆಯನ್ನು ತಿಳಿದುಕೊಳ್ಳಲು ಸಹಕಾರಿಯಾಗಿವೆ.

ಮೆಕೈವರ್ ಮತ್ತು ಪೇಜ್ ಅವರು ವ್ಯಾಖ್ಯಾನಿಸಿದಂತೆ "ನಮ್ಮ ಗುರಿಗಳನ್ನು ಸಾಧಿಸಲು ಇರುವ ಸಾಧನ ಮತ್ತು ಉಪಕರಣಗಳನ್ನು ನಾಗರಿಕತೆಯು ಒಳಗೊಂಡಿದೆ."

ಗಿಲಿನ್ ಮತ್ತು ಗಿಲಿನ್ ಅವರ ಪ್ರಕಾರ "ಸಂಕೀರ್ಣಮಯವೂ ಮತ್ತು ಹೆಚ್ಚು ವಿಕಸಿತವೂ ಆದ ಸಂಸ್ಕೃತಿಯೇ ನಾಗರಿಕತೆಯಾಗಿದೆ."

ಮ್ಯಾಕ್ಸ್‌ವೆಬರ್ ಹೇಳುವಂತೆ "ನಾಗರಿಕತೆಯು ಉಪಯುಕ್ತ ವಸ್ತುಗಳನ್ನು ಉತ್ಪಾದಿಸುವ ಮತ್ತು ಬಳಸುವ ವಿಧಾನಗಳನ್ನು ಒಳಗೊಂಡಿದೆ."

ವಿಲಿಯಂ ಆಗ್‌ಬರ್ನ್ ಅವರು "ಭೌತಾತೀತ ಅಥವಾ ಇಂದ್ರಿಯಾತೀತ ಸಂಸ್ಕೃತಿಯ ದ್ವಿತೀಯ ಬೆಳವಣಿಗೆಯ ಹಂತವೇ ನಾಗರಿಕತೆ" ಎಂದು ವ್ಯಾಖ್ಯಾನಿಸಿದ್ದಾರೆ.

ಈ ಮೇಲಿನ ನಿರೂಪಣೆಗಳಿಂದ, ನಾಗರಿಕತೆಯು ನಮ್ಮ ಸಾಧನ ಮತ್ತು ಉಪಕರಣಗಳಾದ ಕಂಪ್ಯೂಟರ್, ದೂರದರ್ಶನ, ಮೋಟಾರು ಕಾರು, ಮುದ್ರಣಯಂತ್ರ ಇತ್ಯಾದಿ ತಂತ್ರಜ್ಞಾನ, ತಾಂತ್ರಿಕ ವಸ್ತುಗಳಿಗೆ ಸಂಬಂಧಿಸಿದ ಅಂಶ ಎಂಬುವುದಾಗಿ ತಿಳಿಯುತ್ತೇವೆ. ನಮ್ಮ ಉದ್ದೇಶ ಸಾಧನೆಗೆ ಮತ್ತು ವ್ಯವಸ್ಥಿತವಾದ ಜೀವನಕ್ಕೆ ಈ ಎಲ್ಲಾ ನಾಗರಿಕತೆಯ ಉತ್ಪಾದನೆಗಳು ಸಹಕಾರಿಯಾಗಿವೆ. ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ನಾವು ಈ ಎಲ್ಲಾ ಸಾಧನಗಳನ್ನು ಉಪಯೋಗಿಸುತ್ತೇವೆ. ಭೌತ ಸಂಸ್ಕೃತಿ ಮತ್ತು ಅಭೌತ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಿದ ವಿಲಿಯಂ ಆಗ್‌ಬರ್ನ್ ಅವರು ನಾಗರಿಕತೆಯನ್ನು ಭೌತ ಸಂಸ್ಕೃತಿ ಎಂದು ಕರೆದಿದ್ದಾರೆ.

ಸಂಸ್ಕೃತಿ ಮತ್ತು ನಾಗರಿಕತೆಗಳ ನಡುವಿನ ವ್ಯತ್ಯಾಸಗಳು

ಸಂಸ್ಕೃತಿ ಮತ್ತು ನಾಗರಿಕತೆ ಪರಿಕಲ್ಪನೆಗಳನ್ನು ಕೆಲವೊಮ್ಮೆ ಒಂದೇ ಅರ್ಥದಲ್ಲಿ ಉಪಯೋಗಿಸುದಾದರೂ, ಅವುಗಳ ನಡುವೆ ಸ್ಪಷ್ಟವಾದ ವ್ಯತ್ಯಾಸಗಳನ್ನು ಕಾಣಬಹುದು.

೧. ನಾಗರಿಕತೆಯು ಬಾಹ್ಯವಾದುದು : ಆದರೆ ಸಂಸ್ಕೃತಿಯು ಆಂತರಿಕವಾದದು

ನಾಗರಿಕತೆಯು ಬಾಹ್ಯ ಪ್ರಪಂಚಕ್ಕೆ ಸಂಬಂಧಿಸಿದೆ. ಅದು ಒಂದು ಸಾಧನವಾಗಿದೆ. ನಮ್ಮ ಬಾಹ್ಯ ಜೀವನದ ಅಗತ್ಯತೆಗಳನ್ನು ಈಡೇರಿಸಲು ನಾಗರಿಕತೆಯ ಸಾಧನಗಳನ್ನು, ಉತ್ಪನ್ನಗಳನ್ನು ಬಳಸುತ್ತೇವೆ. ನಾಗರಿಕತೆಯ ಫಲಶ್ರುತಿಗಳಾದ, ಕಂಪ್ಯೂಟರ್, ಮೋಟಾರು ಕಾರು, ಕಟ್ಟಡಗಳು, ದೂರದರ್ಶನ, ಪುಸ್ತಕಗಳು, ಲೇಖನ ಸಾಮಗ್ರಿಗಳು, ಫ್ಯಾನ್, ಅಣೆಕಟ್ಟು ಇತ್ಯಾದಿಗಳನ್ನು ನಮ್ಮ ಹಲವಾರು ಬೇಡಿಕೆಗಳನ್ನು ಪೂರೈಸಲು ಉಪಯೋಗಿಸುತ್ತೇವೆ.

ಆದರೆ ಸಂಸ್ಕೃತಿಯು ಮಾನವನ ಮನಸ್ಸಿಗೆ, ಅಂತರಂಗಕ್ಕೆ ಸಂಬಂಧಿಸಿದ ಅಂಶವಾಗಿದೆ. ನಮ್ಮ ಅಂತರಂಗದ ವಿಚಾರ, ಭಾವನೆ, ಚಿಂತನೆ, ಮೌಲ್ಯ, ನಂಬಿಕೆಗಳೆಲ್ಲವೂ ಸಂಸ್ಕೃತಿಯಲ್ಲಿವೆ. ಸಂಸ್ಕೃತಿಯು ಮಾನವನ ಆಂತರಿಕ ಸಂಪತ್ತಾಗಿದೆ. ಅದರಿಂದ ಆತನು ಅಥವಾ ಆಕೆ ಆತ್ಮ ಸಂತೃಪ್ತಿಯನ್ನು ಪಡೆಯುತ್ತಾನೆ/ಳೆ. **ಮೆಕೈವರ್** ಮತ್ತು **ಪೇಜ್** ಅವರು ಸೂಚಿಸುವಂತೆ "ನಾವು ಹೇಗಿರುತ್ತೇವೆ ಎಂಬುವುದೇ ಸಂಸ್ಕೃತಿಯಾಗಿದೆ ಮತ್ತು ನಾವು ಏನನ್ನು ಉಪಯೋಗಿಸುತ್ತೇವೆ ಎಂಬುದೇ ನಾಗರಿಕೆಯಾಗಿದೆ."

೨. ನಾಗರಿಕತೆಯನ್ನು ಅಳೆಯುವುದು ಸುಲಭ : ಆದರೆ ಸಂಸ್ಕೃತಿಯ ಮಾಪನ ಕಷ್ಟಕರವಾದುದು

ನಾಗರಿಕತೆಯನ್ನು ಒಂದು ನಿರ್ದಿಷ್ಟ ಮಾನದಂಡದಿಂದ ಸುಲಭವಾಗಿ ಅಳೆಯಬಹುದು. ಉದಾಹರಣೆಗೆ ನೇಗಿಲಿಗಿಂತ ಆಧುನಿಕ ಟ್ರ್ಯಾಕ್ಟರ್ ಗುಣಮಟ್ಟದಲ್ಲಿ ಮತ್ತು ಸಾಮರ್ಥ್ಯದಲ್ಲಿ

ಉತ್ತಮವಾದುದೆಂದು ಅಳೆಯಬಹುದು. ಹಾಗೆಯೇ ಹಳೆಯ ಮಾದರಿಯ ಕಾರುಗಳಿಗಿಂತ ಆಧುನಿಕ ಹೊಸ ಹೊಸ ವಿನ್ಯಾಸದ ಕಾರುಗಳು ಉತ್ಕೃಷ್ಟವಾದವು. ಹಳೆಯ ಕಂಪ್ಯೂಟರ್‌ಗಿಂತ ಇತ್ತೀಚೆಗೆ ಬರುತ್ತಿರುವ ಕಂಪ್ಯೂಟರ್‌ಗಳು ಎಲ್ಲಾ ವಿಧಗಳಲ್ಲಿ ಮಿಗಿಲಾದವೆಂದು ಮೌಲ್ಯೀಕರಿಸಬಹುದು.

ಆದರೆ ಸಂಸ್ಕೃತಿಯ ಲಕ್ಷಣ, ಗುಣಮಟ್ಟ, ಪರಿಮಾಣ ಸಂಬಂಧ ಮಾಪನ ಮಾಡುವುದು ಕಷ್ಟಕರವಾಗಿದೆ. ಸಂಸ್ಕೃತಿಯ ಅಂಶಗಳು ಹೆಚ್ಚು ಅಮೂರ್ತವಾಗಿರುವುದರಿಂದ ಮತ್ತು ಮಾನವನ ಅಂತರಂಗಕ್ಕೆ ಸಂಬಂಧಿಸಿದ ಕಾರಣ ಅದನ್ನು ಅಳತೆ ಮಾಡುವುದು ಅಸಾಧ್ಯ. ನಂಬಿಕೆಗಳು, ಆದರ್ಶಗಳು, ಮೌಲ್ಯಗಳನ್ನು ಮಾಪನ ಮಾಡಲು ನಿರ್ದಿಷ್ಟ ಮಾನದಂಡಗಳಿಲ್ಲ. ಇವುಗಳನ್ನು ಸರ್ವ-ಸಮ್ಮತವಾದ ರೀತಿಯಲ್ಲಿ ಅಳೆಯಲು ಆಗುವುದಿಲ್ಲ.

೩. ನಾಗರಿಕತೆಯು ನಿರಂತರವಾಗಿ ಮುನ್ನಡೆ ಹೊಂದುವುದು : ಆದರೆ ಸಂಸ್ಕೃತಿಯು ಹಾಗಿಲ್ಲ

ನಾಗರಿಕತೆಯ ಸಾಧನಗಳು ಸದಾ ಬದಲಾಗುತ್ತಿರುತ್ತವೆ ಮತ್ತು ಹೆಚ್ಚು ಹೆಚ್ಚು ಸಮರ್ಥಶೀಲಗಳಾಗುತ್ತಾ ಬರುತ್ತವೆ. ನಾಗರಿಕತೆಯ ಕೊಡುಗೆಗಳ ಗುಣಮಟ್ಟದಲ್ಲೂ ಉತ್ತಮತೆಯನ್ನು ಕಾಣಬಹುದು. ಆದುದರಿಂದ ಇದು ಸದಾ ಮುನ್ನಡೆಯುಳ್ಳದ್ದು. ಉದಾ: ಹಂಚಿನ ಮನೆಗಿಂತ ತಾರಸಿ ಮನೆಗಳು ಹಾಗೆಯೇ ಸಿಮೆಂಟ್ ನೆಲಕ್ಕಿಂತ ಆಧುನಿಕ ಕ್ರಮದ ಕಲ್ಲುಗಳು, ಶಿಲೆಗಳು ಉಪಯುಕ್ತವಾಗಿವೆ. ಸಾಂಪ್ರದಾಯಿಕ ಬಿಲ್ಲು ಬಾಣಗಳಿಗಿಂತ ಆಧುನಿಕ ಬಂದೂಕು ಹೆಚ್ಚು ಉತ್ತಮವಾದುದು.

ಆದರೆ ಸಂಸ್ಕೃತಿಯಲ್ಲಿ ಇದೇ ರೀತಿಯ ಮುನ್ನಡೆ, ಉತ್ತಮತೆ ಇದೆ ಎಂದು ಹೇಳಲು ಕಷ್ಟಕರ. ನಮ್ಮ ಪ್ರಾಚೀನ ಸಾಹಿತ್ಯಕ್ಕಿಂತ ಆಧುನಿಕ ಸಾಹಿತ್ಯ ಉತ್ತಮವೆಂದು ಮೌಲ್ಯೀಕರಿಸಲು ಸಾಧ್ಯವಿಲ್ಲ. ಅದೇ ರೀತಿ ಮೌಲ್ಯಗಳ ಬಗ್ಗೆಯಾಗಲೀ, ನಂಬಿಕೆಗಳ ಬಗ್ಗೆಯಾಗಲೀ ಹೇಳಲು ಸಾಧ್ಯವಿಲ್ಲ.

೪. ನಾಗರಿಕತೆಯ ಪ್ರಸಾರ ಮತ್ತು ವಿನಿಮಯ ಸುಲಭ ಸಾಧ್ಯ : ಆದರೆ ಸಂಸ್ಕೃತಿಯು ಹಾಗಿಲ್ಲ

ನಾಗರಿಕತೆಗಳ ಕೊಡುಗೆಗಳನ್ನು ಸಾಧನಗಳನ್ನು ಬಹಳ ಸುಲಭವಾಗಿ ಒಬ್ಬರಿಂದ ಇನ್ನೊಬ್ಬರಿಗೆ ವರ್ಗಾಯಿಸಬಹುದು ಅಥವಾ ವಿನಿಮಯಿಸಿಕೊಳ್ಳಬಹುದು. ನಾಗರಿಕತೆಯ ವಸ್ತುಗಳು ಎಲ್ಲರಿಗೂ ಮುಕ್ತವಾಗಿ ಉಪಯೋಗಕ್ಕೆ ಸಿಗುತ್ತವೆ. ಹಾಗಾಗಿ ಅವುಗಳನ್ನು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸುಲಭವಾಗಿ ರವಾನಿಸಬಹುದು. ಉದಾಹರಣೆಗೆ ಜಪಾನಿನ ದೂರದರ್ಶನಗಳನ್ನು ಸುಲಭವಾಗಿ ನಮ್ಮ ದೇಶಕ್ಕೆ ತರಬಹುದು. ಹಾಗೆಯೇ ಭಾರತದ ಹತ್ತಿಬಟ್ಟೆಗಳನ್ನು ಸುಲಭವಾಗಿ ವಿದೇಶಗಳಿಗೆ ನಾವು ರಫ್ತು ಮಾಡುತ್ತೇವೆ.

ಆದರೆ ಸಂಸ್ಕೃತಿಯನ್ನು ಉದಾ: ಧರ್ಮ, ಸಂಪ್ರದಾಯ, ನಂಬುಗೆಗಳು, ನೈತಿಕ ನಿಯಮಗಳನ್ನು ಸುಲಭವಾಗಿ ಕೊಡಲು ಅಥವಾ ಪಡೆಯಲೂ ಸಾಧ್ಯವಿಲ್ಲ. ಬೇರೊಂದು

ಸಂಸ್ಕೃತಿಯನ್ನಾಗಲೀ ಅದರ ಮೂಲಾಂಶಗಳನ್ನಾಗಲೀ ಸ್ವೀಕರಿಸಲು ಸಾಕಷ್ಟು ಆಂತರಿಕ ಬೆಳವಣಿಗೆಯಾಗಿರಬೇಕು. ಆದರೂ ಕೆಲವು ಸಾಂಸ್ಕೃತಿಕ ಅಂಶಗಳು ಸಮಾನ ಮನಸ್ಕರೊಳಗೆ ಮತ್ತು ಅಂತಹ ಹಿನ್ನೆಲೆ, ಶಿಕ್ಷಣ, ಮನೋಭಾವದವರೊಳಗೆ ಹಂಚಿಕೊಳ್ಳಲು ಸಾಧ್ಯವಿದೆ. ಹಾಗೆ ಸ್ವೀಕರಿಸಬೇಕಾದರೆ ಅದಕ್ಕೆ ಸಾಕಷ್ಟು ಪರಿಶ್ರಮ, ಶಿಕ್ಷಣ ಅಗತ್ಯ.

೫. ತಂತ್ರಜ್ಞಾನವಿಲ್ಲದೆ ನಾಗರಿಕತೆಯ ಸಾಧನಗಳನ್ನು ಬಳಸಬಹುದು : ಆದರೆ ಸಂಸ್ಕೃತಿಯನ್ನಲ್ಲ

ನಾಗರಿಕತೆಯ ಸಾಧನಗಳಾದ ರೇಡಿಯೋ, ಮೋಟಾರು ಕಾರು, ದೂರದರ್ಶನ, ಫ್ರಿಜ್, ದೂರವಾಣಿ ಇತ್ಯಾದಿಗಳನ್ನು ಉಪಯೋಗಿಸಲು ನಮಗೆ ಅವುಗಳ ಉತ್ಪಾದನೆಯ ಅಥವಾ ರಚನೆಯ ಯಾವುದೇ ತಾಂತ್ರಿಕ ಅಥವಾ ಸೈದ್ಧಾಂತಿಕ ಜ್ಞಾನ ಅಗತ್ಯವಿಲ್ಲ. ಅನಕ್ಷರಸ್ಥರೂ, ಅಥವಾ ಶಿಕ್ಷಣದ ಯಾವುದೇ ಜ್ಞಾನವಿಲ್ಲದವರೂ ಮೋಟಾರುಕಾರನ್ನು ಓಡಿಸಬಲ್ಲರು. ಹಾಗೆಯೇ ದೂರದರ್ಶನವನ್ನು ಉಪಯೋಗಿಸಬಲ್ಲರು. ಆದರೆ ಸಂಸ್ಕೃತಿಯ ಅಂಶಗಳನ್ನು ಅಥವಾ ಸಾಧನಗಳನ್ನು ಅಷ್ಟು ಸರಳವಾಗಿ ಉಪಯೋಗಿಸಲು ಸಾಧ್ಯವಿಲ್ಲ. ಉದಾ: ಒಂದು ಕವಿತೆಯ ಅಥವಾ ಕಲೆಯ ಆನಂದ ಪಡೆಯಲು ನಮಗೆ ಶಿಕ್ಷಣಬೇಕು. ಸಂಸ್ಕಾರಗಳನ್ನು ಆಚರಿಸಲು ಅದನ್ನು ಸಾಮಾಜೀಕರಣದ ಮೂಲಕ ಕಲಿಯಬೇಕು.

೬. ನಾಗರಿಕತೆಯನ್ನು ನಷ್ಟ ಅಥವಾ ಮಾರ್ಪಾಡು ಮಾಡದೆ ಎರವಲು ಪಡೆಯಬಹುದು : ಆದರೆ ಸಂಸ್ಕೃತಿಯನ್ನಲ್ಲ

ನಾಗರಿಕತೆಯ ಸಾಧನಗಳನ್ನು ಹಾನಿಗೊಳಿಸದೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದವರು ಎರವಲು ಪಡೆಯಬಹುದು. ಉದಾ: ವಿದೇಶದ ಕಾರುಗಳನ್ನು ಯಾವುದೇ ನಷ್ಟವಿಲ್ಲದೆ ನಾವು ನಮ್ಮ ದೇಶದಲ್ಲಿ ಪಡೆಯಬಹುದು.

ಆದರೆ ಸಂಸ್ಕೃತಿಯ ಅಂಶಗಳಾದ ರೂಢಿ, ನಂಬಿಕೆ, ಕಲೆ, ಧರ್ಮ, ಆದರ್ಶ ಮುಂತಾದವುಗಳನ್ನು ಅವುಗಳ ಮೂಲ ಸ್ವರೂಪದಲ್ಲೇ ಎರವಲು ಪಡೆಯಲು ಸಾಧ್ಯವಿಲ್ಲ. ಆ ಕಾರಣದಿಂದ ನಾಗರಿಕತೆಯ ಪ್ರಸಾರದ ಸಾಮರ್ಥ್ಯ ಹೆಚ್ಚು ವ್ಯಾಪಕವಾಗಿದೆ.

ಸಂಸ್ಕೃತಿ ಮತ್ತು ನಾಗರಿಕತೆಗಳ ನಡುವಿನ ಸಂಬಂಧ

ಸಂಸ್ಕೃತಿ ಮತ್ತು ನಾಗರಿಕತೆಗಳ ನಡುವೆ ಅನೇಕ ವ್ಯತ್ಯಾಸಗಳಿದ್ದರೂ ಅವೆರೆಡರ ನಡುವೆ ಪರಸ್ಪರ ಸಂಬಂಧವೂ ಇದೆ. ಸಂಸ್ಕೃತಿ ಮತ್ತು ನಾಗರಿಕತೆಗಳೆರಡೂ ಮಾನವ ನಿರ್ಮಿತ ಸಂಗತಿಗಳಾಗಿವೆ. ನಾಗರಿಕತೆಯಿಂದ ನಾವು ಸುಖ-ಸಂತೋಷ ಪಡೆದರೆ, ಸಂಸ್ಕೃತಿಯು ನಮಗೆ ಆತ್ಮತೃಪ್ತಿ ನೀಡುತ್ತದೆ. ಮಾನವನ ಬದುಕಿಗೆ ಇವೆರಡೂ ಸಮಾನವಾಗಿ ಮುಖ್ಯವಾಗಿವೆ.

ನಾಗರಿಕತೆಯ ಸಾಧನಗಳಿಗೆ, ವಸ್ತುಗಳಿಗೆ ಕಾಲಕ್ರಮೇಣ ಸಾಂಸ್ಕೃತಿಕ ಸ್ವರೂಪ ಬರುತ್ತದೆ. ಉದಾಹರಣೆಗೆ ಕಟ್ಟಡ, ವಾಹನ, ಉಡುಗೆ-ತೊಡುಗೆ ಇತ್ಯಾದಿಗಳಲ್ಲಿ ಬಗೆ ಬಗೆಯ ವಿನ್ಯಾಸ, ನೂತನ ಶೈಲಿಗಳನ್ನು ಕಾಣುತ್ತೇವೆ. ಹೊಸ ಹೊಸ ವಿನ್ಯಾಸಗಳನ್ನು, ಶೈಲಿಗಳನ್ನು ನಾವು

ಸದಾ ಬಯಸುತ್ತೇವೆ. ಹಾಗೆಯೇ ಕೆಲವೊಂದು ಪರಿಕರಗಳು, ಭೌತಿಕ ವಸ್ತುಗಳು ಹಳೆಯದಾಗುತ್ತಾ ಬಂದಂತೆ ಅವುಗಳು ಸಾಂಸ್ಕೃತಿಕ ಮಹತ್ವವನ್ನು ಪಡೆಯುತ್ತವೆ. ಉದಾಹರಣೆಗೆ ಪ್ರಾಚೀನ ಪರಿಕರಗಳು, ಹಳೆಯ ಕಾಲದ ಮೋಟಾರು ಕಾರುಗಳು, ಹಳೆಯ ನಾಣ್ಯಗಳು, ಹಳೆಯ ಅಂಚೆ ಚೀಟಿಗಳು, ಪ್ರಾಚೀನ ರಾಜರು, ರಾಣಿಯರು ಉಪಯೋಗಿಸುತ್ತಿದ್ದ ಸಾಧನಗಳು ಆಧುನಿಕ ಸಮಾಜದಲ್ಲಿ ಹೆಚ್ಚಿನ ಸಾಂಸ್ಕೃತಿಕ ಮಹತ್ವ ಪಡೆಯಬಹುದು. ಪ್ರಪಂಚದ ಎಲ್ಲಾ ಪ್ರಾಚೀನ ನಾಗರಿಕತೆಗಳು, ಸ್ಮಾರಕಗಳು, ಶಿಲ್ಪ ಕಲಾಕೃತಿಗಳು, ಕಟ್ಟಡಗಳು ಇಂದು ಸಾಂಸ್ಕೃತಿಕ ಮಹತ್ವ ಪಡೆದಿವೆ.

ನಾಗರಿಕತೆಯ ಸಾಧನಗಳು ನಮ್ಮ ಚಿಂತನೆ ಹಾಗೂ ಮೌಲ್ಯಗಳ ಮೇಲೆ ಪ್ರಭಾವ ಬೀರಬಲ್ಲವು. ನಮ್ಮ ನೈತಿಕತೆ, ಧ್ಯೇಯಧೋರಣೆಗಳು ನಾಗರಿಕ ಪರಿಸರದ ಪ್ರಭಾವದಿಂದ ಪರಿವರ್ತನೆಯಾಗುತ್ತವೆ. ಯಾಂತ್ರಿಕ ಉತ್ಪನ್ನಗಳು ಸಮಾಜದಲ್ಲಿ ನವೀನ ರೀತಿಯ ಮೌಲ್ಯಗಳನ್ನು, ಹವ್ಯಾಸಗಳನ್ನು, ಮನೋರಂಜನೆಗಳನ್ನು ಸೃಷ್ಟಿಸಬಲ್ಲವು, ದೂರದರ್ಶನದ ಉಪಯೋಗದಿಂದ ನಮ್ಮ ದೈನಂದಿನ ಚಟುವಟಿಕೆಗಳಲ್ಲಿ, ಸಂಬಂಧಗಳಲ್ಲಿ, ಓದುವ ಹವ್ಯಾಸಗಳಲ್ಲಿ ಬದಲಾವಣೆಗಳನ್ನು ಕಾಣಬಹುದು. ಸಾಂಸ್ಕೃತಿಕವಾಗಿ ನಾವು ಯಾವುದು 'ನೈತಿಕ'ವೆಂದು ಗುರುತಿಸುವ ಚಟುವಟಿಕೆಗಳು, ವರ್ತನೆಗಳು ನಾಗರಿಕ ಜಗತ್ತಿನಲ್ಲಿ ಜನತೆಗೆ ಅವು ಅನೈತಿಕ ಎಂದು ಅನ್ನಿಸಬಹುದು. ಭೌತಿಕ ಜಗತ್ತಿನಲ್ಲಿ ಸ್ವಂತ ಸುಖ-ಸಂತೋಷಗಳೇ ಜೀವನದ ಪ್ರಮುಖ ಉದ್ದೇಶಗಳಾಗಬಹುದು.

ಅದೇ ರೀತಿ ಸಂಸ್ಕೃತಿಯೂ ನಮ್ಮ ನಾಗರಿಕತೆಯ ಮೇಲೆ ಪ್ರಭಾವ ಬೀರುತ್ತದೆ. ಹೊಸ ಹೊಸ ಸಂಶೋಧನೆಗಳು, ನಾಗರಿಕತೆಗಳು, ಸಾಧನಗಳು ನಮ್ಮ ವಿಚಾರಗಳಿಂದ, ಮೌಲ್ಯಗಳ ಹಿನ್ನೆಲೆಗಳಿಂದ ಹುಟ್ಟಿಕೊಳ್ಳುತ್ತವೆ. ನಮ್ಮ ಹೊಸ ಹೊಸ ಆಸಕ್ತಿಗಳು, ವಿಚಾರಗಳು, ಆಸೆಗಳು ನವೀನ ನಾಗರಿಕತೆಯನ್ನು ನಿರ್ಮಾಣ ಮಾಡಬಹುದು. ಸಂಸ್ಕೃತಿಯು ನಾಗರಿಕತೆಯ ಉತ್ಪಾದನಾ ಕೇಂದ್ರವೆಂದು ಹೇಳಬಹುದು. ನಾಗರಿಕತೆಯನ್ನು ಮಾನವನ ದೇಹಕ್ಕೆ ಹೋಲಿಸಿದರೆ, ಆತನ/ವಳ ಆತ್ಮವು ಸಂಸ್ಕೃತಿಯಾಗುತ್ತದೆ.

ವಿಲಿಯಂ ಆಗ್‌ಬರ್ನ್‌ರ ಅಭಿಪ್ರಾಯದಲ್ಲಿ ನಾಗರಿಕತೆ ಮತ್ತು ಸಂಸ್ಕೃತಿಗಳು ಎರಡೂ ಸಂಸ್ಕೃತಿಯ ಎರಡು ಪ್ರಮುಖ ರೂಪಗಳಾಗಿವೆ. ನಾಗರಿಕತೆಯನ್ನು "ಭೌತ ಸಂಸ್ಕೃತಿ" ಎಂದೂ, ಸಂಸ್ಕೃತಿಯನ್ನು 'ಅಭೌತ ಸಂಸ್ಕೃತಿ" ಎಂದು ಕರೆದಿದ್ದಾರೆ. **ಮೆಕೈವರ್** ಮತ್ತು **ಪೇಜ್** ಅವರ ಪ್ರಕಾರ "ನಾಗರಿಕತೆಯು ಒಂದು ಹಡಗಿನಂತಿದ್ದರೆ, ಅದನ್ನು ನಡೆಸುವ ಚುಕ್ಕಾಣಿಯು ಸಂಸ್ಕೃತಿಯಾಗಿದೆ."

೪.೩. ಸಾಮಾಜೀಕರಣ

ಅರ್ಥ ಮತ್ತು ವ್ಯಾಖ್ಯೆ

ಪ್ರಾಣಿ ಜಗತ್ತಿನಲ್ಲಿ ಮಾನವನು ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದ್ದಾನೆ. ಮಾನವನು ಮಾತ್ರ ಮಾತನಾಡುವ ಮತ್ತು ಕಲಿಯುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಮಾನವರು

ಮಾತ್ರ ಸಂಸ್ಕೃತಿಯನ್ನು ಹೊಂದಿ ಇತರರಿಗೆ ಅದನ್ನು ವರ್ಗಾಯಿಸಬಲ್ಲರು. ಮಾನವ ವರ್ತನೆಯು ಕಲಿಕೆಗೆ ಸಂಬಂಧಿಸಿದ್ದು. ಮಾನವನು ಮನುಷ್ಯ/ಳು ಆಗುವುದು ಸಾಮಾಜೀಕರಣದ ಪ್ರಕ್ರಿಯೆಯಿಂದಲೇ. ಅವನು/ವಳು ಒಬ್ಬ ಸಾಂಸ್ಕೃತಿಕ ಜೀವಿಯಾಗುವುದೂ ಸಾಮಾಜೀಕರಣದ ಪ್ರಕ್ರಿಯೆಯ ಮೂಲಕವೇ.

ಹುಟ್ಟಿನಿಂದ ಮಾನವನು ಕೇವಲ ಜೈವಿಕ ಗುಣಗಳನ್ನು ಹೊಂದಿರುವ ಒಬ್ಬ ಜೀವಿ. ಅವನು/ಳು ಹುಟ್ಟುವಾಗಲೇ ಸಾಮಾಜಿಕ ಜೀವಿಯಾಗಿರುವುದಿಲ್ಲ. ಜೈವಿಕ ಆಸಕ್ತಿ, ಪ್ರೇರಣೆಗಳನ್ನು ಹೊಂದಿರುವ ಈ ಮಾನವ ಜೀವಿಯು ಕಾಲಕ್ರಮೇಣ ಸಾಮಾಜಿಕ ಜೀವಿಯಾಗಿ ರೂಪುಗೊಳ್ಳುತ್ತಾನೆ/ಳೆ. ಅವನಿಗೆ/ಅವಳಿಗೆ ಸಮಾಜದ ನಿಯಮಾನುಸಾರವಾಗಿ ಸಾಮಾಜಿಕ ನಿಯಮಗಳನ್ನು ಕಲಿಸಿ ಅವನ/ಳ ನಿರೀಕ್ಷೆಗಳು ಅದಕ್ಕೆ ಸರಿಯಾಗಿ ರೂಪುಗೊಳ್ಳುತ್ತವೆ. ಪ್ರತಿಯೊಂದು ಸಮಾಜ ಅಥವಾ ಸಂಸ್ಕೃತಿಯು ತನ್ನದೇ ಆದ ವಿಧಾನಗಳಲ್ಲಿ ನವಜಾತ ಮಕ್ಕಳನ್ನು, ವ್ಯಕ್ತಿಗಳನ್ನು ಪಾಲಿಸಿ-ಪೋಷಿಸಿ ಶಿಕ್ಷಣವನ್ನು ನೀಡುತ್ತದೆ. ಆ ಮೂಲಕ ಸಮಾಜದಲ್ಲಿ ವ್ಯಕ್ತಿಗಳ ವ್ಯಕ್ತಿತ್ವಗಳು ಬೆಳೆಯುತ್ತವೆ. ಈ ಒಂದು ಪ್ರಕ್ರಿಯೆಯನ್ನು ಸಾಮಾಜೀಕರಣ ಎಂದು ಕರೆಯಲಾಗಿದೆ. ಸಾಮಾಜಿಕ ಬದುಕಿಗೆ ವ್ಯಕ್ತಿಯನ್ನು ಸಿದ್ಧಪಡಿಸುವ ಈ ಕ್ರಿಯೆಯನ್ನು ಸಮಾಜಶಾಸ್ತ್ರಜ್ಞರು ಮತ್ತು ಸಾಮಾಜಿಕ ಮನಃಶಾಸ್ತ್ರಜ್ಞರು ಸಾಮಾಜೀಕರಣ ಎಂದು ನಮೂದಿಸಿದ್ದಾರೆ. ಈ ಒಂದು ನಿರಂತರ ಪ್ರಕ್ರಿಯೆ ಇಲ್ಲದಿದ್ದರೆ ಸಮಾಜವೂ ಇರಲಾರದು, ಅದು ಮುಂದುವರಿಯಲೂ ಸಾಧ್ಯವಿಲ್ಲ ಮತ್ತು ಸಂಸ್ಕೃತಿಯೂ ಇರಲು ಅಸಾಧ್ಯ. ಸಾಮಾಜೀಕರಣದಿಂದಲೇ ಮಾನವನಾಗಿ ಹುಟ್ಟಿದ ಜೀವಿಯು ಸಮಾಜಜೀವಿಯಾಗಿ ರೂಪಾಂತರಗೊಳ್ಳುವನು. ಭಾವನೆಗಳು, ಪ್ರೇರಣೆಗಳು, ಮೌಲ್ಯಗಳು, ಮನೋಪ್ರವೃತ್ತಿಗಳು ಹಾಗೂ ಆಸಕ್ತಿಗಳೊಂದಿಗೆ ಜೈವಿಕ ವ್ಯಕ್ತಿಯು ಒಬ್ಬ ಮಾನವ ವ್ಯಕ್ತಿತ್ವವಾಗಿ ರೂಪಾಂತರಗೊಳ್ಳುವ ಇದೊಂದು ಪ್ರಕ್ರಿಯೆಯಾಗಿದೆ.

ಒಟ್ಟು ಜೈವಿಕ ಪ್ರಪಂಚದಲ್ಲಿ ಮಾನವನಿಗೆ ಅತ್ಯುನ್ನತ ಸ್ಥಾನವಿದ್ದರೂ, ಬೇರೆಲ್ಲಾ ಪ್ರಾಣಿಗಳಿಗಿಂತ ಮಾನವ ಶಿಶುವು ತನ್ನ ಹೆತ್ತವರೊಂದಿಗೆ ಅಥವಾ ಇತರ ಹಿರಿಯರೊಂದಿಗೆ ಹೆಚ್ಚಿನ ಅವಧಿಯಲ್ಲಿ ಅವಲಂಬಿತವಾಗಿರುತ್ತದೆ. ತಾನು ಸ್ವತಂತ್ರವಾಗಿ ಬದುಕಲು ಅನೇಕ ವರ್ಷಗಳು ಬೇಕಾಗುತ್ತವೆ. ಮಗುವು ಶಾರೀರಿಕವಾಗಿ ಬೆಳೆಯಬೇಕಾಗುತ್ತದೆ. ಆ ಮೂಲಕ ತಾನು ಪಡೆದುಕೊಂಡಂತಹ ಜೈವಿಕ ಸಾಮರ್ಥ್ಯಗಳೊಂದಿಗೆ ಬುದ್ಧಿವಂತಿಕೆ, ಕೌಶಲ್ಯಗಳನ್ನು ನಿಯಮಗಳನ್ನು ಮತ್ತು ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಹಲವಾರು ಸಂಕೇತಗಳಿಂದ, ಶಿಕ್ಷಣದಿಂದ, ಭಾಷೆಯನ್ನು ಕಲಿಯುವುದರಿಂದ ಮಗುವು ಸಾಮಾಜಿಕ ಅನನ್ಯತೆಯನ್ನು ಗಳಿಸಿಕೊಳ್ಳುತ್ತದೆ. ಸಾಮಾಜೀಕರಣವನ್ನು 'ಸಾಂಸ್ಕೃತಿಕ ಕಲಿಕೆ' ಎಂದೂ ಕರೆಯುತ್ತೇವೆ. 'ಸ್ವಯಂ' ಅಥವಾ ತಾನು ಎನ್ನುವ ಪ್ರಜ್ಞೆಯ ಬೆಳವಣಿಗೆಯೊಂದಿಗೆ ವ್ಯಕ್ತಿಯು ಸಾಮಾಜೀಕರಣಗೊಳ್ಳುತ್ತಾನೆ/ಳೆ.

ವ್ಯಾಖ್ಯೆಗಳು

ಸಾಮಾಜೀಕರಣವು ಒಂದು ಸಂಕೀರ್ಣವಾದ ಪ್ರಕ್ರಿಯೆಯಾಗಿದೆ. ಆದುದರಿಂದ ಬೇರೆ ಬೇರೆ ಲೇಖಕರು, ಸಮಾಜವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು ಈ ಪರಿಕಲ್ಪನೆಯನ್ನು ವಿಭಿನ್ನವಾಗಿ ವ್ಯಾಖ್ಯಾನಿಸಿದ್ದಾರೆ. ತಮ್ಮ ವ್ಯಾಖ್ಯೆಗಳಲ್ಲಿ ಅವರು ಸಾಮಾಜೀಕರಣದ ವಿವಿಧ ಅಂಶಗಳನ್ನು ಎತ್ತಿಹಿಡಿದಿದ್ದಾರೆ.

ಮೆಟಾ ಸ್ಪೆನ್ಸರ್ ಅವರ ಪ್ರಕಾರ "ವ್ಯಕ್ತಿಯು ಒಂದು ಸಮಾಜದ ಸದಸ್ಯನಾಗಿ ಕಾರ್ಯನಿರ್ವಹಿಸಲು ಅಗತ್ಯವುಳ್ಳ ಮೌಲ್ಯಗಳನ್ನು, ನಿಯಮಗಳನ್ನು, ಪಾತ್ರ ಮತ್ತು ನೈಪುಣ್ಯಗಳನ್ನು ಪಡೆದುಕೊಳ್ಳುವ ಮೂಲಕ ನಡೆಯುವ ಪ್ರಕ್ರಿಯೆಯೇ ಸಾಮಾಜೀಕರಣ ವಾಗಿದೆ."

ಆಗ್ಬರ್ನ್ ಮತ್ತು ನಿಂಕಾಫ್ ರ ಅಭಿಪ್ರಾಯದಲ್ಲಿ "ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದ ನಿಯಮಗಳಿಗನುಸಾರವಾಗಿ ತನ್ನ ನಡತೆಯನ್ನು ರೂಢಿಸಿಕೊಳ್ಳುವ ಪ್ರಕ್ರಿಯೇ ಸಾಮಾಜೀಕರಣವಾಗಿದೆ."

ಹ್ಯಾರಿ ಎಮ್. ಜಾನ್‌ಸನ್ ಅರ್ಥೈಸಿದಂತೆ "ಸಾಮಾಜೀಕರಣವು ವ್ಯಕ್ತಿಗೆ ಸಾಮಾಜಿಕ ಪಾತ್ರಗಳನ್ನು ನಿರ್ವಹಿಸಲು ನೀಡುವ ಶಿಕ್ಷಣದ ಪ್ರಕ್ರಿಯೆ ಆಗಿದೆ. ಈ ಪ್ರಕ್ರಿಯೆಯ ಮೂಲಕ ವ್ಯಕ್ತಿಗಳು ಆಗಲೇ ಅಸ್ತಿತ್ವದಲ್ಲಿರುವ ಸಾಮಾಜಿಕ ಸಮೂಹಗಳ ಸಂಸ್ಕೃತಿಯನ್ನು ಗ್ರಹಿಸುವರು ಅಥವಾ ಸಂಪಾದಿಸುವರು."

ಸಾಮಾಜೀಕರಣದ ಪ್ರಾಮುಖ್ಯತೆ

ಸಾಮಾಜೀಕರಣವು ವ್ಯಕ್ತಿ ಮತ್ತು ಸಮಾಜ ಎರಡಕ್ಕೂ ಅತೀ ಅಗತ್ಯವಾಗಿದೆ. ವ್ಯಕ್ತಿಯು ಸಾಮಾಜೀಕರಣಗೊಳ್ಳುವುದರಿಂದ ಸಮಾಜದ ಸ್ಥಿತಿ ಹಾಗೂ ಪರಿಸರಕ್ಕೆ ಹೊಂದಿಕೊಳ್ಳಲು ಅನುಕೂಲವಾಗುತ್ತದೆ. ಸಾಮಾಜೀಕರಣ ಪ್ರಕ್ರಿಯೆಗೆ ಒಳಗಾಗದಿದ್ದರೆ ಅವನು/ಳು ಅಪವರ್ತಿಯಾಗಬಹುದು. ಸಾಮಾಜೀಕರಣದ ಪ್ರಕ್ರಿಯೆಯ ಮೂಲಕ ವ್ಯಕ್ತಿಯು ಪ್ರೌಢ ಪಾತ್ರಗಳನ್ನು ನಿರ್ವಹಿಸಲು ಸಮರ್ಥನಾಗುವನು. ಸಾಮಾಜೀಕರಣದ ಪ್ರಕ್ರಿಯೆಯ ಮೂಲಕ ಸಮಾಜಕ್ಕೆ ನಿಯಮಗಳನ್ನು ಜಾರಿಗೊಳಿಸಲು ಸಾಧ್ಯವಾಗುವುದು.

ಅನೇಕ ಸಮಾಜಶಾಸ್ತ್ರಜ್ಞರು, ಮನಃಶಾಸ್ತ್ರಜ್ಞರು ಸಾಮಾಜೀಕರಣವು ವ್ಯಕ್ತಿಯ ಬೆಳವಣಿಗೆಗೆ ಪೂರಕವಾಗಿದೆ ಎಂದು ಹೇಳಿದ್ದಾರೆ. ಸಿಗ್ಮಂಡ್ ಫ್ರಾಯ್ಡ್, ಮೆಟಾಸ್ಪೆನ್ಸರ್, ಆಗ್ಬರ್ನ್, ನಿಂಕಾಫ್, ಅಲೆಕ್ಸ್ ಇಂಕೆಲ್ಸ್, ಸಿ.ಹೆಚ್. ಕೂಲೆ, ಜಿ.ಹೆಚ್. ಮೀಡ್, ಪಿಗೆಟ್, ಜಿ ಮರ್ಫಿ, ಲಂಡ್‌ಬರ್ಗ್, ಕಿಂಗ್‌ಸ್ಲೆ ಡೇವಿಸ್, ಮುಂತಾದ ಸಮಾಜಶಾಸ್ತ್ರಜ್ಞರು ಸಾಮಾಜೀಕರಣದ ಕಲ್ಪನೆಯನ್ನು ವಿಸ್ತರಿಸಿ ಅದರ ಪ್ರಾಮುಖ್ಯತೆಯನ್ನು ತಮ್ಮ ಸಿದ್ಧಾಂತಗಳಲ್ಲಿ, ಬರವಣಿಗೆಗಳಲ್ಲಿ ತಿಳಿಸಿದ್ದಾರೆ.

ಈ ಕೆಳಗಿನವುಗಳು ಸಾಮಾಜೀಕರಣದ ಪ್ರಾಮುಖ್ಯತೆಯನ್ನು ತಿಳಿಸುತ್ತವೆ.

೧. ಸಾಮಾಜಿಕ ಜೀವಿಯಾಗಿ ಬೆಳವಣಿಗೆ

ಮಾನವ ಶಿಶುವು ಹುಟ್ಟಿದಾಗ ಜೈವಿಕ ಜೀವಿಯಾಗಿರುತ್ತದೆ. ಅದು ಸಾಮಾಜೀಕರಣದ ಪ್ರಕ್ರಿಯೆಯಿಂದ ಸಮಾಜಜೀವಿಯಾಗಿ ರೂಪಾಂತರಗೊಳ್ಳುತ್ತದೆ. ಈ ಪ್ರಕ್ರಿಯೆಯನ್ನು, ಸಾಮಾಜಿಕ ಅಂತಃಕ್ರಿಯೆ ಹಾಗೂ ಸಂಪರ್ಕವು ಅತಿ ಮಹತ್ವದಾಗಿದೆ. ಅನೇಕ ಪಳಗದ ಅಥವಾ ಕಾಡಿನಲ್ಲಿ ಲಭ್ಯವಾದ ಪ್ರಕರಣಗಳಿಂದ ಇದು ಸ್ಪಷ್ಟವಾಗಿದೆ. ಕಾಡಿನಲ್ಲಿ ತೋಳಗಳ ಜೊತೆ ಬೆಳೆದ ಕಮಲಾ ಎಂಬ ಆರು ವರ್ಷದ ಮಗುವನ್ನು ಪ್ರಥಮ ಬಾರಿಗೆ ಅವಲೋಕಿಸಿದಾಗ, ಆ ಮಗು ಯಾವುದೇ ಮಾನವ ಗುಣಗಳನ್ನು ಕಲಿತಿರಲಿಲ್ಲ. ಅವಳಲ್ಲಿ ಭಯ ಮಿಶ್ರಿತ ಕ್ರೂರ ಗುಣಗಳಿದ್ದವು ಮತ್ತು ಹಸಿಮಾಂಸಗಳನ್ನು ನೇರವಾಗಿ ಪ್ರಾಣಿಗಳಂತೆ ಬಾಯಿಯಿಂದಲೇ ತಿನ್ನುತ್ತಿದ್ದಳು. ಅದೇ ರೀತಿ ಮಾನವರಿಂದ ಪ್ರತ್ಯೇಕಿಸಲ್ಪಟ್ಟ ಕಾನೂನುಬಾಹಿರವಾಗಿ ಹುಟ್ಟಿದ ಮಕ್ಕಳಾದ ಅನ್ನಾ ಮತ್ತು ಇಸಬೆಲ್ಲಾ ಪ್ರಕರಣಗಳೂ ಸಾಮಾಜೀಕರಣದ ಮಹತ್ವವನ್ನು ಸಾಬೀತುಪಡಿಸುತ್ತವೆ.

೨. ವ್ಯಕ್ತಿತ್ವ ವಿಕಸನ

ಸಾಮಾಜಿಕ ವಾತಾವರಣ ಅಥವಾ ಸಮೂಹ ಜೀವನದ ಹೊರತಾಗಿ ವ್ಯಕ್ತಿತ್ವ ವಿಕಸನ ಹೊಂದಲು ಸಾಧ್ಯವಿಲ್ಲ. ಜೈವಿಕ ಅಂಶಗಳು ವ್ಯಕ್ತಿತ್ವ ಬೆಳವಣಿಗೆಗೆ ಮುಖ್ಯವಾದರೂ ಪರಿಸರದ ಅಂಶಗಳು ಮಹತ್ವದ ಪಾತ್ರವಹಿಸಬಲ್ಲವು. ಬುದ್ಧಿವಂತಿಕೆ, ಆಸಕ್ತಿಗಳು, ಸಾಮರ್ಥ್ಯಗಳು, ಭಾವನೆಗಳು, ಪ್ರೇರಣೆಗಳು, ಮನಃಪ್ರವೃತ್ತಿ ಮುಂತಾದ ವ್ಯಕ್ತಿತ್ವದ ಅಂಶಗಳು, ಪ್ರಕ್ರಿಯೆಯಿಂದಲೇ ರೂಪುಗೊಳ್ಳುತ್ತವೆ.

೩. ಭದ್ರತೆ, ಅನುವರ್ತನೆ ಮತ್ತು ಸಮಾಜದ ಮುಂದುವರಿಕೆಗೆ ಸಹಕಾರಿ

ಸಾಮಾಜೀಕರಣವು ಸಾಂಸ್ಕೃತಿಕ ಪರಂಪರೆಯ ಮುಂದುವರಿಕೆಯ ಜೊತೆ, ವ್ಯವಸ್ಥೆಯ ಭದ್ರತೆಗೆ ಮತ್ತು ಸ್ಥಿರತೆಗೆ ಸಹಾಯಕವಾಗಿದೆ. ವ್ಯಕ್ತಿಗಳು ನಿಯಮಾನುಸಾರವಾಗಿ ವರ್ತಿಸಲು ಸಾಮಾಜೀಕರಣವು ಸಹಕಾರಿಯಾಗಿದೆ. ಹೊಸ ಹೊಸ ಸಾಧನಗಳಿಗೆ ಮತ್ತು ಅವಿಷ್ಕಾರಗಳಿಗೂ ಸಾಮಾಜೀಕರಣ ಅಗತ್ಯವಾಗಿದೆ.

೪. ಸಾಮಾಜಿಕ ಪಾತ್ರಗಳ ನಿರ್ವಹಣೆಯನ್ನು ಕಲಿಸುತ್ತದೆ

ಸಾಮಾಜೀಕರಣವು ಸಾಮಾಜಿಕ ಪಾತ್ರಗಳನ್ನು ಮತ್ತು ಅವುಗಳಿಗೆ ಪೂರಕವಾಗುವ ಮನಃಪ್ರವೃತ್ತಿಗಳನ್ನು ಕಲಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಅವನ/ಳ ಸ್ಥಾನಮಾನಕ್ಕೆ ಸರಿಯಾಗಿ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ಉದಾಹರಣೆಗೆ ಮನೆಯಲ್ಲಿ ಒಬ್ಬ ವ್ಯಕ್ತಿಯು ತಂದೆಯಾಗಿ, ಕುಟುಂಬದ ಯಜಮಾನನಾಗಿ ಅಥವಾ ಗಂಡನಾಗಿ ಪಾತ್ರವಹಿಸುತ್ತಾನೆ. ಸಾಮಾಜೀಕರಣದ ಮೂಲಕವೇ ಒಬ್ಬ ವ್ಯಕ್ತಿಯು ತನ್ನ ಪಾತ್ರಕ್ಕೆ ಸಂಬಂಧಿಸಿದ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ಅರಿತುಕೊಳ್ಳುತ್ತಾನೆ.

೫. ಕೌಶಲ್ಯಗಳ ವರ್ಗಾವಣೆ

ವಿವಿಧ ಕುಶಲತೆಗಳ ಜ್ಞಾನವನ್ನು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ

ಕಳುಹಿಸುವಿಕೆಯು ಸಾಮಾಜೀಕರಣದ ಒಂದು ಮುಖ್ಯ ಕಾರ್ಯವಾಗಿದೆ. ಮಾನವನ ಬದುಕಿಗೆ ಕೌಶಲ್ಯಗಳ ಜ್ಞಾನ ಅಗತ್ಯಗತ್ಯವಾಗಿದೆ. ಸಾಂಪ್ರದಾಯಿಕ ಅಥವಾ ಪ್ರಾಚೀನ ಸಮಾಜಗಳಲ್ಲಿ ಅನುಕರಣೆ ಅಥವಾ ರೂಢಿಯ ಪ್ರಕ್ರಿಯೆಯ ಮೂಲಕ ಜೀವನ ಕೌಶಲ್ಯಗಳು ವರ್ಗಾಯಿಸಲ್ಪಡುತ್ತವೆ. ಆದರೆ ಆಧುನಿಕ ಸಮಾಜದಲ್ಲಿ ಔಪಚಾರಿಕ ಶಿಕ್ಷಣದಿಂದ ಪರಿಣತಿ- ಜ್ಞಾನಗಳನ್ನು ವ್ಯವಸ್ಥಿತವಾಗಿ ನೀಡಲಾಗುತ್ತದೆ.

೬. ಶಿಸ್ತನ್ನು ಕಲಿಸುತ್ತದೆ

ಸಾಮಾಜೀಕರಣದ ಮೂಲಕ ವ್ಯಕ್ತಿಯು ಸಮಾಜದ ರೀತಿ-ನೀತಿಗಳನ್ನು ರೂಢಿ-ಸಂಪ್ರದಾಯಗಳನ್ನು ಕಲಿತುಕೊಳ್ಳುತ್ತಾನೆ/ಳೆ. ಅವನು/ಳು ಸಮಾಜದ ನಿರೀಕ್ಷೆಗೆ ಅನುಗುಣವಾಗಿ ಬದುಕುತ್ತಾನೆ/ಳೆ. ಇದರಿಂದಾಗಿ ಜೀವನದ ಗುರಿಗಳನ್ನು ಈಡೇರಿಸಿಕೊಳ್ಳಲು ಅನುಕೂಲವಾಗುವುದು.

೭. ಸರಿಯಾದ ಆಕಾಂಕ್ಷೆಗಳನ್ನು ಬೆಳೆಸುತ್ತದೆ

ಸಾಮಾಜೀಕರಣವು ಸರಿಯಾದ ಆಕಾಂಕ್ಷೆಗಳನ್ನು ಬೆಳೆಸಲು ಸಹಾಯ ಮಾಡುತ್ತದೆ. ಸಾಮಾಜೀಕರಣದಿಂದ ವ್ಯಕ್ತಿಗಳು ಸಮಾಜದ ನಿರೀಕ್ಷೆಗಳಿಗೆ ಅನುಗುಣವಾಗಿ ತಮ್ಮ ಆಸೆ-ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಸಹಕಾರಿಯಾಗುವುದು. ಉದಾಹರಣೆಗೆ, ಧರ್ಮ ನಿರ್ದೇಶಿತ ಸಮಾಜದಲ್ಲಿ ಕೆಲವರು ಧರ್ಮ ಗುರುಗಳಾಗುವಂತೆ ಪ್ರೇರೇಪಿಸಲ್ಪಡುತ್ತಾರೆ. ಹಾಗೆಯೇ ಮುಂದುವರಿದ ತಂತ್ರಜ್ಞಾನ ಆಧಾರಿತ ಅರ್ಥವ್ಯವಸ್ಥೆಯು ಜನರು ಇಂಜಿನಿಯರ್ ಅಥವಾ ವಿಜ್ಞಾನಿಗಳಾಗಲು ಪ್ರೇರೇಪಿಸುತ್ತದೆ.

೮. ಸಾಮಾಜಿಕ ಅಂತರವನ್ನು ಕಡಿಮೆಗೊಳಿಸುತ್ತದೆ

ಸಾಮಾಜೀಕರಣವು ವಿಭಿನ್ನ ಸಮೂಹಗಳ ನಡುವಿನ ಅಂತರವನ್ನು ತಗ್ಗಿಸುತ್ತದೆ. ಸರಿಯಾದ ಶಿಕ್ಷಣದಿಂದ ಮತ್ತು ಸಾಮಾಜೀಕರಣದ ಪ್ರಕ್ರಿಯೆಯ ಮೂಲಕ ಬೇರೆ ಬೇರೆ ಮತಗಳ, ಜನಾಂಗಗಳ ನಡುವಿನ ವ್ಯತ್ಯಾಸಗಳು, ಅಸಮಾನತೆಗಳು ಕಡಿಮೆಗೊಳ್ಳುತ್ತವೆ.

೯. ಸಾಮಾಜೀಕರಣವು ಭವಿಷ್ಯವನ್ನು ರೂಪಿಸುತ್ತದೆ

ಸಾಮಾಜೀಕರಣವನ್ನು ಉತ್ತಮಗೊಳಿಸುವುದರಿಂದ ಸಮಾಜದ, ದೇಶದ ಹಾಗೂ ಜಗತ್ತಿನ ದಿಕ್ಕನ್ನು, ದಿಸೆಯನ್ನು ಬದಲಾಯಿಸಲು ಸಾಧ್ಯವಿದೆ. ಭವಿಷ್ಯದಲ್ಲಿ ನಿರೀಕ್ಷಿತ ಮಾರ್ಪಾಡುಗಳನ್ನು ತರುವಲ್ಲಿ ಸಾಮಾಜೀಕರಣವು ಒಂದು ಮುಖ್ಯ ಸಾಧನವಾಗಿದೆ.

೧೦. ಸಂಸ್ಕೃತಿಯ ವರ್ಗಾವಣೆ

ಸಾಮಾಜೀಕರಣವು ಸಂಸ್ಕೃತಿಯ ನಿರಂತರ ಮುಂದುವರಿಯುವಿಕೆಗೆ ಸಹಕಾರಿಯಾಗಿದೆ. ಸಾಮಾಜೀಕರಣದ ಮೂಲಕ, ಸಮಾಜದ ಸಾಂಸ್ಕೃತಿಕ ಅಂಶಗಳಾದ ನಂಬಿಕೆಗಳು, ಮೌಲ್ಯಗಳು, ಆದರ್ಶಗಳು, ಆಚರಣೆಗಳು, ಭಾಷೆ, ಕೌಶಲ್ಯಗಳು ಪೀಳಿಗೆಯಿಂದ ಪೀಳಿಗೆಗೆ ಸಾಗಿ ಹೋಗುತ್ತವೆ.

ಸಾಮಾಜೀಕರಣದ ಹಂತಗಳು

ಸಾಮಾಜೀಕರಣವು ಜೀವನದ ಬೇರೆ ಬೇರೆ ಹಂತಗಳಲ್ಲಿ ನಿರಂತರವಾಗಿ ಸಾಗುವ ಒಂದು ಪ್ರಕ್ರಿಯೆಯಾಗಿದೆ. ನವಜಾತ ಶಿಶು ಅಸಹಾಯಕವೂ ಅಬಲವೂ ಆಗಿರುವುದರಿಂದ ಜೀವನ ಶಿಕ್ಷಣವನ್ನು ಒಂದೇ ಬಾರಿಗೆ ನೀಡಲು ಅಸಾಧ್ಯ. ಅದು ಹಂತ ಹಂತವಾಗಿ ಸರಳತೆಯಿಂದ ಸಾಗಿ ಸಂಕೀರ್ಣಗೊಳ್ಳುತ್ತದೆ. ಬಾಲ್ಯಾವಸ್ಥೆಯ ಹಂತದ ಜೀವನದಲ್ಲಿ ಸಾಮಾಜೀಕರಣವು ಒಂದು 'ಸರಳವಾದ' ಸಾಮಾಜಿಕ ಜಗತ್ತಿನಲ್ಲಿ ನಡೆಯುತ್ತದೆ. ಅತ್ಯಂತ ಸೀಮಿತವಾಗಿರುವ ಮಗುವಿನ ಸಾಮಾಜಿಕ ಜಗತ್ತು ಕಾಲಾನುಕ್ರಮದಲ್ಲಿ ವಿಸ್ತೃತಗೊಳ್ಳುತ್ತಾ ಹೋಗುತ್ತದೆ.

ಸಾಮಾಜಿಕ ಜೀವನದಲ್ಲಿ ಭಾಗಿಯಾಗುವುದನ್ನು ಕಲಿತುಕೊಳ್ಳುವುದೇ ಸಾಮಾಜೀಕರಣವಾಗಿರುವುದರಿಂದ ಸಾಮಾಜಿಕ ಪಾತ್ರಗಳನ್ನು ಕಲಿತುಕೊಳ್ಳುವುದು ಬಹಳ ಮುಖ್ಯವಾದ ಉದ್ದೇಶವಾಗಿರುತ್ತದೆ. ಪ್ರತಿಯೊಂದು ಹಂತದಲ್ಲಿ ಮಗು ಕೇವಲ ಒಂದು ಪಾತ್ರವನ್ನು ಮಾತ್ರ ಕಲಿಯುವುದಲ್ಲದೆ, ಪಾತ್ರಗಳ ವ್ಯವಸ್ಥೆಯನ್ನೇ ಕಲಿತುಕೊಳ್ಳುತ್ತದೆ.

ಖ್ಯಾತ ಮನಃಶಾಸ್ತ್ರಜ್ಞ **ಸಿಗ್ಮಂಡ್ ಫ್ರಾಯ್ಡ್**, ಮಗು ನಾಲ್ಕು ಮುಖ್ಯ ಹಂತಗಳ ಮೂಲಕ ಸಾಮಾಜಿಕ ಗುಣಗಳನ್ನು, ಪಾತ್ರಗಳನ್ನು ಅಂತರ್ಗತವಾಗಿಸಿಕೊಳ್ಳುತ್ತದೆ ಎಂದು ತಿಳಿಸಿದ್ದಾರೆ. ಈ ನಾಲ್ಕು ಮುಖ್ಯ ಹಂತಗಳು ಈ ರೀತಿ ಇವೆ. ೧. ವಾಚಿಕ ಹಂತ, ೨. ಶೌಚ ಶಿಕ್ಷಣದ ಹಂತ, ೩. ಸುಪ್ತ ಅಥವಾ ಗುಪ್ತ ಹಂತ ಮತ್ತು ೪. ಯೌವನಾವಸ್ಥೆ. ಫ್ರಾಯ್ಡ್ ಮನೋವಿಶ್ಲೇಷಣೆಗೆ ಸಂಬಂಧಿಸಿ ವಿವರಿಸಿದ ಈ ಹಂತಗಳು ಸಾಮಾಜೀಕರಣಕ್ಕೆ ಸಂಬಂಧಿಸಿದ ಅಧ್ಯಯನದಲ್ಲಿ ಮಹತ್ವ ಪಡೆದಿವೆ.

ಈ ಎಲ್ಲಾ ಹಂತಗಳಲ್ಲಿ ಪ್ರಥಮ ಮೂರು ಹಂತಗಳಾದ ವಾಚಿಕ, ಶೌಚಶಿಕ್ಷಣ, ಗುಪ್ತ ಹಂತಗಳಲ್ಲಿ ಕುಟುಂಬವೇ ಪ್ರಮುಖವಾದ ಸಾಮಾಜೀಕರಣದ ಸಮೂಹವಾಗಿದೆ.

೧. ವಾಚಿಕ ಹಂತ

ವಾಚಿಕ ಹಂತವು ಸಾಮಾಜೀಕರಣದ ಪ್ರಥಮ ಹಂತವಾಗಿದೆ. ಈ ಹಂತವು ಮಗು ಹುಟ್ಟಿದ ನಂತರ ಪ್ರಾರಂಭಗೊಂಡು ಒಂದು ವರ್ಷದವರೆಗೆ ಮುಂದುವರಿಯುತ್ತದೆ. ತನ್ನ ಜನನದ ಮುಂಚೆ ಶಿಶುವು ತಾಯಿಯ ಗರ್ಭಕೋಶದಲ್ಲಿ ಬೆಚ್ಚಗೆ ಹಾಗೂ ಸುಖಕರವಾಗಿದ್ದು ಹುಟ್ಟಿದ ತಕ್ಷಣ ಗೊಂದಲಗಳನ್ನು ಎದುರಿಸಬೇಕಾಗುತ್ತದೆ ಮತ್ತು ಹೊಸ ವಾತಾವರಣಕ್ಕೆ ಹೊಂದಿಕೊಳ್ಳಬೇಕಾಗುತ್ತದೆ. ಈ ಹಂತದಲ್ಲಿ ಮಗುವು ತನ್ನ ಎಲ್ಲಾ ಜೈವಿಕ ಅಗತ್ಯತೆಗಳಿಗೆ ಅಳುತ್ತದೆ. ಮಗುವು ಆಹಾರಕ್ಕಾಗಿ ತಾಯಿಯನ್ನು ಅಥವಾ ಜವಾಬ್ದಾರಿ ಹೊತ್ತ ಇತರ ಹಿರಿಯರನ್ನು ಅವಲಂಬಿಸಿರುತ್ತದೆ. ಆದುದರಿಂದ 'ವಾಚಿಕ ಅವಲಂಬನೆ'ವನ್ನು ಸ್ಥಾಪಿಸುವುದೇ ಈ ಹಂತದ ಅಗತ್ಯದ ಉದ್ದೇಶವಾಗಿದೆ.

ಮಗು ತನ್ನ ಎಲ್ಲಾ ಅಗತ್ಯಗಳ ಮತ್ತು ಅವಶ್ಯಕತೆಗಳ ಬಗ್ಗೆ ಸಂಕೇತಗಳನ್ನು ನೀಡುವುದನ್ನು ಕಲಿಯುತ್ತದೆ. ಉದಾಹರಣೆಗೆ ಚಳಿಯಾದಾಗ, ಬಟ್ಟೆ ಒದ್ದೆಯಾಗಿರುವಾಗ,

ಅಸ್ವಸ್ಥತೆಯಾದಾಗ, ಹೆದರಿಕೆಯಾದಾಗ ಪ್ರತಿಕ್ರಿಯೆಗಳನ್ನು ತೋರಿಸುತ್ತದೆ. ಈ ಹಂತದಲ್ಲಿ ತನ್ನ ತಾಯಿಯೊಂದಿಗೆ ಮಾತ್ರ ಮಗುವು ಹೆಚ್ಚು ಸಂಪರ್ಕ ಹೊಂದಿರುತ್ತದೆ. ಹೀಗೆಯೇ ತಾಯಿ-ಮಗು ಮಾತ್ರ ಹೊಂದಿಕೊಂಡು ಇರುವ ಒಂದು ಚಿಕ್ಕ ವೃತ್ತವು ಕುಟುಂಬದೊಳಗಿನ ಒಂದು ಉಪವ್ಯವಸ್ಥೆಯಾಗಿರುತ್ತದೆ. ಈ ವ್ಯವಸ್ಥೆಯೊಳಗೆ ಮಗುವು ತಾಯಿಯೊಂದಿಗೆ ಸಂಪೂರ್ಣವಾಗಿ ಹೊಂದಿಕೊಂಡು ತನ್ನ ಹಸಿವಿನ ಬಯಕೆಯನ್ನು ಹತೋಟಿಯಲ್ಲಿಡುವುದನ್ನು ಕಲಿತುಕೊಳ್ಳುತ್ತದೆ. ತಂದೆ-ತಾಯಿಯರಿಬ್ಬರೂ ಮಗುವಿನ ಪಾಲನೆ ಪೋಷಣೆಯಲ್ಲಿ ತೊಡಗಿಸಿಕೊಂಡಿದ್ದು ಅವರಿಬ್ಬರ ಪಾತ್ರ ನಿರ್ವಹಣೆಯಲ್ಲಿ ವ್ಯತ್ಯಾಸಗಳಿರುವುದಿಲ್ಲ. ತಾಯಿ ಮಗು-ಇಬ್ಬರೂ ಒಂದುಗೂಡುವ ಈ ಹಂತವನ್ನು ಸಿಗ್ಮಂಡ್ ಫ್ರಾಯ್ಡ್ "ಪ್ರಾಥಮಿಕ ಗುರುತಿಸುವಿಕೆ' ಎಂದು ಕರೆದಿದ್ದಾರೆ.

೨. ಶೌಚ ಶಿಕ್ಷಣದ ಹಂತ

ಸಾಮಾಜೀಕರಣದ ದ್ವಿತೀಯ ಹಂತವೇ ಶೌಚ ಶಿಕ್ಷಣದ ಹಂತವಾಗಿದೆ. ಈ ಹಂತವು ಮಗುವಿನ ಎರಡನೇ ವರ್ಷದ ಪ್ರಾರಂಭದಿಂದ ಮೂರನೇ ವರ್ಷ ಮುಗಿಯುವವರೆಗೆ ಮುಂದುವರಿಯುವುದು. ಈ ಹಂತದಲ್ಲಿ ಮಗುವು ತನ್ನ ಆಸೆ, ಅಗತ್ಯಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಕಲಿತುಕೊಳ್ಳುತ್ತದೆ. ಈ ಹಂತದ ಸಾಮಾಜೀಕರಣವು ಕುಟುಂಬದ ರೀತಿ, ಕ್ರಮ, ಸಾಮಾಜಿಕ ವರ್ಗಗಳಿಗನುಗುಣವಾಗಿ ಸಮಾಜದಿಂದ ಸಮಾಜಕ್ಕೆ ವ್ಯತ್ಯಾಸ ಗೊಳ್ಳುತ್ತದೆ.

ಶೌಚ ಶಿಕ್ಷಣವು ಈ ಹಂತದ ಒಂದು ಮುಖ್ಯ ಚಟುವಟಿಕೆಯಾಗಿದೆ. ಶೌಚ ಶಿಕ್ಷಣದ ಜೊತೆಗೆ ಮಗುವು ತನ್ನ ಮತ್ತು ತಾಯಿಯ ಪಾತ್ರಗಳನ್ನು ಪ್ರತ್ಯೇಕವಾಗಿ ತಿಳಿದುಕೊಳ್ಳುತ್ತದೆ. ತಾಯಿಯಿಂದ ಪಾಲನೆ ಮತ್ತು ವಾತ್ಸಲ್ಯವನ್ನು ಪಡೆಯುತ್ತಾ, ತಾಯಿಯನ್ನು ಪ್ರೀತಿಸುವುದನ್ನು ಮಗುವು ಕಲಿಯುತ್ತದೆ. ಮಗುವು ತನ್ನ ಸರಿಯಾದ ವರ್ತನೆಗೆ ಮೆಚ್ಚುಗೆಯನ್ನು, ತಪ್ಪಿಗೆ ಶಿಕ್ಷೆಯನ್ನು ಪಡೆಯುತ್ತಾ ಯಾವುದು 'ಸರಿ' ಅಥವಾ 'ತಪ್ಪು' ಎಂಬುವುದನ್ನು ಕಲಿತು ಕೊಳ್ಳುತ್ತದೆ.

೩. ಸುಪ್ತ ಹಂತ

ಈ ಹಂತವನ್ನು 'ಗುಪ್ತಹಂತ' ಅಥವಾ 'ಈಡಿಪಸ್ ಹಂತ' ಎಂದೂ ಕರೆಯುತ್ತೇವೆ. ಈ ಹಂತದಲ್ಲಿ ಬಾಲಕ ಅಥವಾ ಬಾಲಕಿಯರಲ್ಲಿ ಅನೇಕ ಬಯಕೆಗಳು ಮುಖ್ಯವಾಗಿ ಲೈಂಗಿಕ ಆಸಕ್ತಿಗಳು ಮೂಡಿ ಅವು ಪ್ರಕಟಗೊಳ್ಳದೆ ಗುಪ್ತವಾಗಿರುವುದರಿಂದ ಈ ಹಂತವನ್ನು ಸುಪ್ತ ಅಥವಾ ಗುಪ್ತಹಂತ ಎಂದು ಕರೆಯಲಾಗಿದೆ. ಮಗುವು ನಾಲ್ಕನೇ ವರ್ಷಕ್ಕೆ ಕಾಲಿಡುತ್ತಲೇ ಆರಂಭವಾಗುವ ಈ ಹಂತವು ಪ್ರೌಢಾವಸ್ಥೆಯವರೆಗೆ, ಸುಮಾರು ೧೩-೧೪ ವರ್ಷಗಳವರೆಗೆ ಮುಂದುವರಿಯುತ್ತದೆ.

ಈ ಹಂತದಲ್ಲಿ ಬಾಲಕ-ಬಾಲಕಿಯರು ಕುಟುಂಬದ ಪೂರ್ಣ ಪ್ರಮಾಣದ ಸದಸ್ಯರಾಗುತ್ತಾರೆ ಮತ್ತು ಲಿಂಗಕ್ಕೆ (ಹೆಣ್ಣು ಅಥವಾ ಗಂಡು) ಅನುಸಾರವಾಗಿ ನೀಡಲಾದ

ಸಾಮಾಜಿಕ ಪಾತ್ರಗಳನ್ನು ನಿರ್ವಹಿಸಲು ಕಲಿಯುತ್ತಾರೆ. ಫ್ರಾಯ್ಡ್‌ರ ವಾದದಂತೆ ಈ ಹಂತದಲ್ಲಿ ಮಗ ತಂದೆಯ ಬಗ್ಗೆ ಅಸೂಯೆಪಡುತ್ತಾ ತಾಯಿಯನ್ನು ಪ್ರೀತಿಸುವನೆಂದೂ ಮತ್ತು ಮಗಳು ತಂದೆಯನ್ನು ಪ್ರೀತಿಸುತ್ತಾ ತಾಯಿಯ ಬಗ್ಗೆ ಅಸೂಯೆ ಪಡುತ್ತಾಳೆಂದು ತಿಳಿಸಲಾಗಿದೆ. ಈ ಭಾವನೆಗಳು ಲೈಂಗಿಕ ಆಸಕ್ತಿಯಿಂದಲೇ ಹುಟ್ಟಿಕೊಂಡಿರುತ್ತದೆ ಎಂಬುವುದು ಫ್ರಾಯ್ಡ್‌ನ ವಾದವಾಗಿದೆ. ಕಾಲಕ್ರಮದಲ್ಲಿ ಮಾನಸಿಕ ಬೆಳವಣಿಗೆಯೊಂದಿಗೆ ಈ ಭಾವನೆಗಳು ಕಡಿಮೆಯಾಗಿ, ಇಲ್ಲವಾಗುತ್ತವೆ.

ಈ ಹಂತದಲ್ಲಿ ಬಾಲಕ-ಬಾಲಕಿಯರು ಕುಟುಂಬದ ಒಟ್ಟು ಸದಸ್ಯರಾಗಿ ಉಳಿದ ಸದಸ್ಯರೆಲ್ಲರ ಪಾತ್ರಗಳನ್ನು ಅರಿತುಕೊಳ್ಳುತ್ತಾರೆ. ಉದಾಹರಣೆಗೆ ಪತಿ ಮತ್ತು ತಂದೆ, ಪತ್ನಿ ಮತ್ತು ತಾಯಿ, ಮಗ ಮತ್ತು ಸಹೋದರ, ಮಗಳು ಮತ್ತು ಸಹೋದರಿ ಇತ್ಯಾದಿ. ಹಾಗೆಯೇ ಹೆತ್ತವರು ತಮ್ಮ ಮಕ್ಕಳಿಗೆ ಅವರವರ ಲಿಂಗಕ್ಕೆ ಅನುಸಾರವಾಗಿ ಹೇಗೆ ಪಾತ್ರಗಳನ್ನು ನಿರ್ವಹಿಸಬೇಕು, ಹೇಗೆ ನಡೆದುಕೊಳ್ಳಬೇಕು, ಎಂದು ತಿಳಿಸಿ ಅವರ ಒಳ್ಳೆಯ ವರ್ತನೆಗಳನ್ನು ಪುರಸ್ಕರಿಸುತ್ತಾರೆ. ಮಗನು ತಂದೆಯನ್ನು ಮತ್ತು ಮಗಳು ತಾಯಿಯನ್ನು ಅನುಕರಿಸಬಹುದು.

೪. ಯೌವನಾವಸ್ಥೆ ಅಥವಾ ಕಿಶೋರಹಂತ

ಸಾಮಾಜೀಕರಣದ ನಾಲ್ಕನೇ ಹಂತವು ಕಿಶೋರಾವಸ್ಥೆಯಾಗಿದೆ. ಈ ಹಂತವು ಸಾಧಾರಣ ೧೩-೧೪ನೇ ಪ್ರಾಯದ ಬಳಿಕ ಪ್ರಾರಂಭಗೊಂಡು ೨೧ನೇ ಪ್ರಾಯದವರೆಗೆ ಮುಂದುವರಿಯುತ್ತದೆ. ಬಾಲಕ-ಬಾಲಕಿಯರಲ್ಲಿ ಉಂಟಾಗುವ ಅನೇಕ ಮಾನಸಿಕ ಮತ್ತು ದೈಹಿಕ ಬದಲಾವಣೆಗಳಿಂದಾಗಿ ಈ ಹಂತವು ಬಹಳ ಮುಖ್ಯವಾಗಿದೆ. ಬಾಲಕ-ಬಾಲಕಿಯರು ಈ ಹಂತದಲ್ಲಿ ತಂದೆ-ತಾಯಿಯರ ಹಿಡಿತದಿಂದ ಮುಕ್ತರಾಗಲು ಬಯಸುತ್ತಾರೆ. ಆದರೂ ಅವರನ್ನು ಅವಲಂಬಿಸದಿರಲು ಸಾಧ್ಯವಿಲ್ಲ. ಹಾಗಾಗಿ ಬಾಲಕ-ಬಾಲಕಿಯರು ಒಂದು ಬಗೆಯ ಆಂತರಿಕ ಸಂಘರ್ಷಕ್ಕೆ-ಒತ್ತಡಕ್ಕೆ ಒಳಗಾಗುತ್ತಾರೆ. ಅವರು ಸ್ವತಂತ್ರವಾಗಿ ಅನೇಕ ಕೆಲಸಗಳನ್ನು, ಸೃಜನಾತ್ಮಕ ಕಾರ್ಯಗಳನ್ನು ಮಾಡಲು ಬಯಸುತ್ತಾರೆ. ತಂದೆ ತಾಯಿಯರು, ಹಿರಿಯರು ತಮ್ಮ ಯುವಕ, ಯುವತಿ, ಮಕ್ಕಳ ಚಟುವಟಿಕೆಗಳ ಮೇಲೆ ನಿಯಂತ್ರಣವನ್ನು ಇಟ್ಟುಕೊಂಡು ಅವರಿಗೆ ಸರಿಯಾದ ಮಾರ್ಗದರ್ಶನವನ್ನು, ಶಿಕ್ಷಣವನ್ನು ನೀಡುತ್ತಾರೆ. ಶಿಕ್ಷಣ, ಉದ್ಯೋಗ ಹಾಗೂ ಬಾಳ-ಸಂಗಾತಿಯ ಆಯ್ಕೆಯಂತಹ ಪ್ರಮುಖ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳಲು ಅವರಿಗೆ ಹೆಚ್ಚು ಪ್ರೋತ್ಸಾಹ ನೀಡುತ್ತಾರೆ. ಯುವಕ-ಯುವತಿಯರು ಹೆಚ್ಚು ಜವಾಬ್ದಾರಿಯಿಂದ ತಮ್ಮ ಪಾತ್ರಗಳನ್ನು, ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಬೇಕೆಂದು ನಿರೀಕ್ಷಿಸುತ್ತಾರೆ. ಈ ಹಂತದ ಸಾಮಾಜಿಕ ಪರಿಸರವು ಗಾತ್ರದಲ್ಲಿ ದೊಡ್ಡದಾಗಿದ್ದು ಯುವಕ-ಯುವತಿಯರ ಸಾಮಾಜಿಕ ಅಗತ್ಯತೆಗಳು, ಆಸಕ್ತಿಗಳು ಹೆಚ್ಚಾಗಿರುತ್ತವೆ. ಸರಿಯಾದ ಮಾರ್ಗದರ್ಶನ, ಹತೋಟಿ, ಪೋಷಣೆ, ಪ್ರೀತಿ ವಿಶ್ವಾಸ ವಿಲ್ಲದಿದ್ದರೆ ಅಥವಾ ಅದರ ಕೊರತೆಯಿಂದಾಗಿ ಈ ಹಂತದಲ್ಲಿ ಯುವಕ ಯುವತಿಯರು

ದಾರಿತಪ್ಪಿ ಮುಂದೆ ಅಪವರ್ತಿಗಳಾಗಲು ಈ ರೀತಿಯ ದೋಷಪೂರಿತ ಸಾಮಾಜೀಕರಣವು ಕಾರಣವಾಗಬಹುದು.

ಪ್ರೌಢರ ಸಾಮಾಜೀಕರಣ

ಸಾಮಾಜೀಕರಣದ ಪ್ರಕ್ರಿಯೆಯು ಯೌವನಾವಸ್ಥೆಯಲ್ಲಿ ಸಂಪೂರ್ಣವಾಗಿ ಕೊನೆಗೊಳ್ಳುವುದಿಲ್ಲ. ಸಾಮಾಜೀಕರಣವು ಒಂದು ನಿರಂತರವಾದ ಪ್ರಕ್ರಿಯೆಯಾದುದರಿಂದ ಪ್ರೌಢಾವಸ್ಥೆಯಲ್ಲಿ ಯುವಕ-ಯುವತಿಯರು ಜೀವನ ಮೌಲ್ಯಗಳನ್ನು, ಸಾಮಾಜಿಕ ಗುಣಗಳನ್ನು ಕಲಿಯಬೇಕಾಗುತ್ತದೆ. ಜೀವನದಲ್ಲಿ ಮಹತ್ವದ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುವುದರಿಂದ ಬಹಳಷ್ಟು ಸಂಗತಿಗಳನ್ನು, ವಿಚಾರಗಳನ್ನು ತಿಳಿದುಕೊಳ್ಳಬೇಕಾಗುತ್ತದೆ.

ಈ ಹಂತದಲ್ಲಿ ಯುವಕ-ಯುವತಿಯರು ಉದ್ಯೋಗಸ್ಥರಾಗಿಯೂ-ಸಂಸಾರಿಗಳಾಗಿಯೂ ತಮ್ಮ ಪಾತ್ರಗಳನ್ನು ನಿರ್ವಹಿಸುತ್ತಾರೆ. ಇದಕ್ಕೆ ಬೇಕಾಗುವ ನೈಪುಣ್ಯತೆ ಮತ್ತು ತಯಾರಿ ಯೌವನ್ಯಾವಸ್ಥೆಯಲ್ಲಿ ಲಭಿಸಿರುತ್ತದೆ. ಪ್ರೌಢರ ಸಾಮಾಜೀಕರಣವು ಯುವಕ-ಯುವತಿಯರ ಬಾಹ್ಯ ವರ್ತನೆಯನ್ನು ಬದಲಿಸಲು ಹೆಚ್ಚು ಗಮನಹರಿಸುತ್ತದೆ. ಹಾಗೆಯೇ ಈ ಹಂತದಲ್ಲಿ ಸಾಮಾಜಿಕ ಅನೌಪಚಾರಿಕ ಸ್ವರೂಪವನ್ನು ಒತ್ತಿ ಹೇಳಲಾಗುತ್ತದೆ. ಉದಾಹರಣೆಗೆ ಪ್ರೌಢರು ತಮ್ಮಂತಹ ಇತರ ವ್ಯಕ್ತಿಗಳನ್ನು ಸಮಾನರಾಗಿ ಕಂಡು ಪರಸ್ಪರ ಗೌರವಿಸುವ ಗುಣವನ್ನು ಬೆಳೆಸಿಕೊಳ್ಳುತ್ತಾರೆ. ಅದೇ ರೀತಿ ಸಮಾಜದ ಆದರ್ಶಾತ್ಮಕ ನಡತೆ ಮತ್ತು ವಾಸ್ತವಿಕವಾಗಿರುವ ನಡತೆಯ ನಡುವಿನ ವ್ಯತ್ಯಾಸವನ್ನು ಪ್ರೌಢರು ಅರಿತು ಆ ರೀತಿ ನಡೆದುಕೊಳ್ಳುತ್ತಾರೆ. ಪ್ರೌಢರ ಸಾಮಾಜೀಕರಣವು ವಿಭಿನ್ನ ಪಾತ್ರಗಳ ಪರಸ್ಪರ ಸಂಘರ್ಷಾತ್ಮಕ ಬೇಡಿಕೆಗಳನ್ನು ಒಳಗೊಂಡಿರುತ್ತದೆ. ಪ್ರೌಢರು ಸಮಾಜದಲ್ಲಿ, ಬೇರೆ ಬೇರೆ ಪಾತ್ರಗಳನ್ನು ವಹಿಸಿಕೊಂಡು ಕೆಲವೊಮ್ಮೆ ಈ ಪಾತ್ರಗಳ ನಡುವೆ ಸಂಘರ್ಷ ಉಂಟಾಗಿ ಎದುರಿಸುವ ಸ್ಥಿತಿ ಉಂಟಾಗಬಹುದು. ಈ ಹಂತದಲ್ಲಿ ಪ್ರೌಢರು ಕೈಗೊಳ್ಳಬೇಕಾಗಿರುವ ಕಾರ್ಯದಲ್ಲಿ ನೈಪುಣ್ಯತೆಯನ್ನು ಗಳಿಸಲು ಅಗತ್ಯವಾದ ತರಬೇತಿ ಬೇಕಾಗುತ್ತದೆ. ಉದಾಹರಣೆಗೆ ಈ ಹಂತದಲ್ಲಿ ಶಿಕ್ಷಕನಾಗಲು ಅಥವಾ ವ್ಯಾಪಾರ ಕೈಗೊಳ್ಳಲು, ವೈದ್ಯನಾಗಲು, ಇಂಜಿನಿಯರ್ ಆಗಲು ಅಥವಾ ಚಿತ್ರಕಲಾವಿದನಾಗಲು ಸರಿಯಾದ ಶಿಕ್ಷಣ, ತರಬೇತಿ ನೀಡಲಾಗುವುದು. ವ್ಯಕ್ತಿಯೊಬ್ಬನು ಸ್ವತಂತ್ರವಾಗಿ ಜೀವನ ನಡೆಸಲು ಸಿದ್ಧನಾದಾಗ ಆತನು ಪ್ರೌಢ ಹಂತವನ್ನು ತಲುಪಿದ್ದಾನೆಂದು ಹೇಳಬಹುದು.

೪.೪. ಸಾಮಾಜೀಕರಣದ ನಿಯೋಗಗಳು

ಅನೌಪಚಾರಿಕ ಮತ್ತು ಔಪಚಾರಿಕ

ಸಾಮಾಜೀಕರಣ ಪ್ರಕ್ರಿಯೆಯು ನಿರಂತರವಾಗಿ ಬಹಳ ದೀರ್ಘಕಾಲದ ವರೆಗೆ ನಡೆಯುವುದರಿಂದ ಈ ಪ್ರಕ್ರಿಯೆಯು ಅನೇಕ ವ್ಯಕ್ತಿಗಳು, ಸಮೂಹಗಳು ಮತ್ತು ಸಂಸ್ಥೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಮಗುವು ತನ್ನದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳ

ಬೇಕಾದರೆ ಸಾಮಾಜೀಕರಣವು ಕ್ರಮಬದ್ಧವಾಗಿ, ವ್ಯವಸ್ಥಿತವಾಗಿ ನಡೆಯಬೇಕಾಗುತ್ತದೆ. ಮಗುವು ಮುಂದೆ ಹೇಗೆ, ಏನಾಗಬೇಕು ಎನ್ನುವುದು ಅದರ ಸಾಮಾಜೀಕರಣವನ್ನು ಅವಲಂಬಿಸಿದೆ. ಮಗುವು ಹೇಗಿದೆ ಎಂಬುವುದಕ್ಕಿಂತ ಮುಂದೆ ಏನಾಗಬೇಕು ಎನ್ನುವುದು ಬಹಳ ಮುಖ್ಯವಾಗಿದೆ. ಆದುದರಿಂದ ಮಗುವನ್ನು ಬೇರೆ ಬೇರೆ ಸಂಸ್ಥೆಗಳ ಮೂಲಕ ನಿಯಂತ್ರಣದಲ್ಲಿ ಇಡಬೇಕಾಗುತ್ತದೆ. ಸಾಮಾಜೀಕರಣದ ಮೂಲಕವೇ ಮಗುವು ಒಬ್ಬ ಸಮಾಜದ ಉಪಯುಕ್ತ ಸದಸ್ಯನಾಗುವುದು. ಆದುದರಿಂದ ಮಗುವು ಹೇಗೆ ಸಾಮಾಜೀಕರಣ ಗೊಳ್ಳುತ್ತದೆ ಮತ್ತು ಯಾರು ಸಾಮಾಜೀಕರಣಗೊಳಿಸುತ್ತಾರೆ ಎಂಬುವುದು ಅಗತ್ಯವಾಗಿದೆ.

ಮಗುವು ಸಮೂಹದ ಸಂಸ್ಕೃತಿಯ ಅಂಶಗಳನ್ನು ಕಲಿಯುವುದರಲ್ಲಿ ಎರಡು ರೀತಿಯ ವ್ಯಕ್ತಿಗಳು ತೊಡಗಿರುತ್ತಾರೆ. ೧. ಒಂದನೇದಾಗಿ ಮಗುವಿನ/ಯುವಕರ/ಯುವತಿಯರ ಮೇಲೆ ಅಧಿಕಾರ ಹೊಂದಿದ ವ್ಯಕ್ತಿಗಳು ೨. ಎರಡನೇದಾಗಿ ಮಗುವಿಗೆ/ಯುವಕ/ಯುವತಿಯರಿಗೆ ಸಮಾನರಾದಂತಹ ವ್ಯಕ್ತಿಗಳು.

ಒಂದನೇ ವರ್ಗದ ವ್ಯಕ್ತಿಗಳು ಒತ್ತಡದಿಂದ ಮತ್ತು ಭಯ ಸೃಷ್ಟಿಸುವುದರಿಂದ ಮಗುವಿನ ವರ್ತನೆಯ ಮೇಲೆ ಹತೋಟಿ ಇಟ್ಟುಕೊಳ್ಳುತ್ತಾರೆ. ಹೆತ್ತವರು, ಅಧ್ಯಾಪಕರು, ಹಿರಿಯರು ಈ ವರ್ಗಕ್ಕೆ ಸೇರಿದವರಾಗಿದ್ದಾರೆ. ಎರಡನೇ ವರ್ಗದವರು ಮಿತ್ರರು, ಸಮವಯಸ್ಕರು, ಆಟದ ಜತೆಗಾರರು, ಒಂದೇ ತರಗತಿಯವರು, ಸಂಘ ಸಂಸ್ಥೆಗಳು, ಸ್ನೇಹಿತರು ಇತ್ಯಾದಿ. ಸಹಕಾರ, ಸ್ನೇಹ, ಉತ್ತಮ ಬಾಂಧವ್ಯರಿಂದ ವ್ಯಕ್ತಿಗಳು ಈ ವರ್ಗದಲ್ಲಿ ಸಾಮಾಜೀಕರಣ ಗೊಳ್ಳುತ್ತಾರೆ.

ಮಗು, ಬಾಲಕ, ಬಾಲಕಿಯರು ಔಪಚಾರಿಕ ಮತ್ತು ಅನೌಪಚಾರಿಕವಾಗಿ ಸಾಮಾಜೀಕರಣಗೊಳ್ಳುತ್ತಾರೆ. ಕುಟುಂಬ, ಸಮವಯಸ್ಕರ ಸಮೂಹ, ಧರ್ಮ ಸಂಸ್ಥೆಗಳಲ್ಲಿ ಅನೌಪಚಾರಿಕ ರೀತಿಯಲ್ಲಿ ಮಕ್ಕಳು, ಯುವಕರು ಸಾಮಾಜೀಕರಣಗೊಳ್ಳುತ್ತಾರೆ. ಪ್ರಾಚೀನ ಸಮಾಜದಲ್ಲಿ ಮಕ್ಕಳು ಅನೌಪಚಾರಿಕವಾಗಿಯೇ ಸಾಮಾಜೀಕರಣಗೊಳ್ಳುತ್ತಿದ್ದರು. ಹಾಗೆಯೇ ಶಾಲೆ, ರಾಜ್ಯ, ಸಮೂಹ ಮಾಧ್ಯಮಗಳು ಔಪಚಾರಿಕ ಸಂಸ್ಥೆಗಳಾಗಿವೆ. ಆಧುನಿಕ ಸಮಾಜದಲ್ಲಿ ಮಕ್ಕಳು, ಯುವಜನರು ಔಪಚಾರಿಕ ಮತ್ತು ಅನೌಪಚಾರಿಕ ಎರಡು ರೀತಿಯ ನಿಯೋಗಗಳ ಮೂಲಕ ಸಾಮಾಜೀಕರಣಗೊಳ್ಳುತ್ತಾರೆ.

ಸಾಮಾನ್ಯವಾಗಿ, ಕುಟುಂಬ, ಕುಟುಂಬದ ಹಿರಿಯರು, ನೆರೆಹೊರೆಯವರು, ಆಟದ ಜತೆಗಾರರು, ಸಮವಯಸ್ಕರರು, ಶಾಲೆ ಮತ್ತು ಶಿಕ್ಷಕರು, ಧರ್ಮ, ಸಮುದಾಯ, ರಾಜ್ಯ, ಸಾಹಿತ್ಯ ಮತ್ತು ಸಮೂಹ ಮಾಧ್ಯಮಗಳು ಸಾಮಾಜೀಕರಣದ ಪ್ರಮುಖ ಸಾಧನಗಳು ಅಥವಾ ನಿಯೋಗಗಳಾಗಿವೆ.

ಅ. ಕುಟುಂಬ

ಕುಟುಂಬವು ಒಂದು ಅತ್ಯಂತ ಪರಿಣಾಮಕಾರಿಯಾದ ಸಾಮಾಜೀಕರಣದ ನಿಯೋಗವಾಗಿದೆ. ಮಗುವಿನ ಸಾಮಾಜೀಕರಣ ಪ್ರಾರಂಭವಾಗಿರುವುದು ಕುಟುಂಬದಿಂದಲೇ.

ಕುಟುಂಬವು ಮಗುವಿನ ಪ್ರಥಮ ಜಗತ್ತು ಮತ್ತು ನೇರ ಸಾಮಾಜೀಕರಣ ಆರಂಭವೂ ಇಲ್ಲಿಯೇ ನಡೆಯುವುದು. ಮಗುವು ಸಮಾಜದ ರೀತಿ ನೀತಿಗಳನ್ನು, ಮೌಲ್ಯಾದರ್ಶನಗಳನ್ನು, ಪ್ರಥಮ ಪ್ರಾರಂಭಿಕ ಶಿಕ್ಷಣವನ್ನು ಕುಟುಂಬದಲ್ಲೇ ಪಡೆದುಕೊಳ್ಳುತ್ತದೆ. ತಂದೆ-ತಾಯಿ, ಅಣ್ಣ-ಅಕ್ಕಂದಿರು ಮತ್ತು ಇತರ ಹಿರಿಯ ಸದಸ್ಯರು ಮಗುವಿಗೆ ಸಾಮಾಜಿಕ ನಡವಳಿಕೆಯ ಬಗ್ಗೆ ಶಿಕ್ಷಣ ನೀಡುತ್ತಾರೆ. ಅನೇಕ ನಾಗರಿಕ ಸದ್ಗುಣಗಳನ್ನು ಮಗು ಕುಟುಂಬದಲ್ಲಿಯೇ ಕಲಿಯುವುದರಿಂದ ಕುಟುಂಬವನ್ನು "ಸಾಮಾಜಿಕ ಸದ್ಗುಣಗಳ ತೊಟ್ಟಿಲು" ಎಂದು ಕರೆಯಲಾಗಿದೆ.

ಆ. ಸಮವಯಸ್ಕರ ಸಮೂಹ

ತನ್ನ ಹೆತ್ತವರಿಂದ ಮನೆಯ ಇತರರಿಂದ ಕಲಿತುಕೊಳ್ಳಲಾಗದ ಅನೇಕ ಅಂಶಗಳನ್ನು ಮಕ್ಕಳು, ಬಾಲಕ-ಬಾಲಕಿಯರು ತಮ್ಮ ಸಮವಯಸ್ಕರಿಂದ ಕಲಿತುಕೊಳ್ಳುತ್ತಾರೆ. ಶಾಲೆಯಲ್ಲಿ ಸಹಪಾಠಿಗಳು, ಆಟದ ಜೊತೆಗಾರರು ಮತ್ತು ಇತರ ಸ್ನೇಹಿತರು ಅನೇಕ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಒಬ್ಬರು ಇನ್ನೊಬ್ಬರಿಗೆ ರೀತಿ ನೀತಿಗಳ ಬಗ್ಗೆ, ನಿಯಮಗಳ ಬಗ್ಗೆ, ವರ್ತನೆಗಳ ಬಗ್ಗೆ ತಿಳಿಸುತ್ತಾರೆ. ಕಾಲಾನುಕ್ರಮದಲ್ಲಿ ಈ 'ಸಮವಯಸ್ಕರ ಸಂಸ್ಕೃತಿ'ಯು ಹೆತ್ತವರ ಸಂಸ್ಕೃತಿಗಿಂತಲೂ ಮಕ್ಕಳಿಗೆ, ಬಾಲಕ ಬಾಲಕಿಯರಿಗೆ ಮುಖ್ಯವಾಗಬಹುದು. ಸಮವಯಸ್ಕರ ಸಲಹೆ, ಮಾರ್ಗದರ್ಶನ, ಅಭಿಪ್ರಾಯಗಳು ಸೂಚನೆಗಳು ಬಾಲಕ-ಬಾಲಕಿಯರ ಮೇಲೆ ಪ್ರಭಾವಗೊಂಡು ಸಾಮಾಜೀಕರಣಗೊಳ್ಳಲು ಸಹಕಾರಿಯಾಗುತ್ತದೆ. ಸಮವಯಸ್ಕರಿಂದ ಅಪವರ್ತನೆಯನ್ನು ಕಲಿತುಕೊಳ್ಳುವ ಪ್ರವೃತ್ತಿಯೂ ಈ ಹಂತದಲ್ಲಿರುವುದರಿಂದ ಅವರನ್ನು ಅನುವರ್ತನೆಗೆ ಬದ್ಧರನ್ನಾಗಿಸುವ ಹೊಣೆ ಹೆತ್ತವರ, ಶಿಕ್ಷಕರ ಮತ್ತು ಹಿರಿಯರ ಮೇಲಿದೆ.

ಇ. ಧರ್ಮ

ಧರ್ಮವು ಸಾಮಾಜೀಕರಣದ ಅನೌಪಚಾರಿಕ ನಿಯೋಗವಾಗಿದೆ. ಮಕ್ಕಳು, ಬಾಲಕ ಬಾಲಕಿಯರು ತಾವು ಸೇರಿರುವ ಧರ್ಮದ ಬಗ್ಗೆ, ಅದರ ಮೌಲ್ಯಗಳನ್ನು ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಪಡೆದುಕೊಳ್ಳುತ್ತಾರೆ. ತಮ್ಮ ಹೆತ್ತವರು, ಸಂಬಂಧಿಕರು, ಹಿರಿಯರು ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಳ್ಳುವ ರೀತಿಯನ್ನು ಮಕ್ಕಳು ಅವಲೋಕಿಸುತ್ತಾರೆ ಮತ್ತು ವಿವಿಧ ವಿಧಿವಿಧಾನಗಳಲ್ಲಿ, ಸಂಸ್ಕಾರಗಳಲ್ಲಿ, ಹಬ್ಬದ ಆಚರಣೆಗಳಲ್ಲಿ ಭಾಗವಹಿಸಿ ಅದರ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುತ್ತಾರೆ. ಧರ್ಮವು ಅನೇಕ ನೈತಿಕ ನಿಯಮಗಳನ್ನು ಸದ್ಗುಣಗಳನ್ನು ಬೋಧಿಸಿ ವ್ಯಕ್ತಿಗಳನ್ನು ನಿಯಂತ್ರಣದಲ್ಲಿಡುತ್ತದೆ. ಆ ಮೂಲಕ ಮಕ್ಕಳು, ಯುವಜನರು ಸಾಮಾಜೀಕರಣಗೊಳ್ಳುತ್ತಾರೆ.

ಈ. ಶಾಲೆ

ಮಕ್ಕಳು, ಯುವಕ-ಯುವತಿಯರು ತಮ್ಮ ದಿನದ ಬಹುಮುಖ್ಯ ಅವಧಿಯನ್ನು ಶಾಲೆಯಲ್ಲಿ ಕಳೆಯುವುದರಿಂದ ಶಾಲೆ ಸಾಮಾಜೀಕರಣದ ಒಂದು ಪ್ರಮುಖ

ನಿಯೋಗಿಯಾಗಿದೆ. ಇಂದಿನ ಆಧುನಿಕ ಸಂಕೀರ್ಣ ಸಮಾಜಗಳಲ್ಲಿ ಮಕ್ಕಳು, ಯುವಜನರು ಶಾಲೆ ಅಥವಾ ಶೈಕ್ಷಣಿಕ ಸಂಸ್ಥೆಗಳ ಮೂಲಕ ಸಾಮಾಜೀಕರಣಗೊಳ್ಳುತಾರೆ. ಶಾಲೆಯಲ್ಲಿ ಮಕ್ಕಳು ಶಿಕ್ಷಕರ ಮೂಲಕ ಜ್ಞಾನ ಸಂಪಾದನೆ ಮಾಡಿಕೊಂಡು ತಮ್ಮ ಸಂಸ್ಕೃತಿಯ ನೈತಿಕ ನಿಯಮಗಳು, ರೂಢಿ-ಸಂಪ್ರದಾಯಗಳು, ಸಾಮಾಜಿಕ ಮೌಲ್ಯಗಳನ್ನು, ಆದರ್ಶಗಳನ್ನು ತಿಳಿದುಕೊಳ್ಳುತ್ತಾರೆ. ಮಕ್ಕಳು ಪುಸ್ತಕಗಳ ಮೂಲಕ, ಶಿಕ್ಷಕರ ಮೂಲಕ ಮತ್ತು ತಮ್ಮ ಸಹಪಾಠಿಗಳ, ಸ್ನೇಹಿತರ ಮೂಲಕ ಜ್ಞಾನ ಮತ್ತು ವರ್ತನಾ ಮಾದರಿಗಳನ್ನು ಕಲಿತುಕೊಳ್ಳುತ್ತಾರೆ. ಒಳ್ಳೆಯ ಶಿಕ್ಷಣ ಮತ್ತು ಉತ್ತಮ ಶಾಲಾ ವಾತಾವರಣವು ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿ ಮಾಡುತ್ತವೆ. ಆದುದರಿಂದ ಶಾಲೆ ಅಥವಾ ಔಪಚಾರಿಕ ಶಿಕ್ಷಣವು ಮಕ್ಕಳ ವ್ಯಕ್ತಿತ್ವ ವಿಕಸನದಲ್ಲಿ ಪರಿಣಾಮಕಾರಿ ಕಾರ್ಯವೆಸಗುತ್ತದೆ. ಇದೊಂದು ಪ್ರಥಮ ಬೃಹತ್ ಮಾಧ್ಯಮಿಕ ಸಮೂಹವಾಗಿದ್ದು ಮಗು ಪ್ರಥಮ ಬಾರಿಗೆ ಇದನ್ನು ಪರಿಚಯಿಸಿ ಕೊಳ್ಳುತ್ತದೆ. ಪ್ರಶಂಸೆ ಮತ್ತು ಶಿಕ್ಷೆಯ ವಿಧಾನದಿಂದ ವಿದ್ಯಾರ್ಥಿಗಳು ಶಾಲೆಯಲ್ಲಿ ಸಾಮಾಜೀಕರಣಗೊಳ್ಳುತ್ತಾರೆ.

ಉ. ರಾಜ್ಯ

ರಾಜ್ಯವು ಇನ್ನೊಂದು ಪ್ರಭಾವಿ ಮತ್ತು ವ್ಯವಸ್ಥಿತವಾದ ಸಾಮಾಜೀಕರಣದ ನಿಯೋಗಿಯಾಗಿದೆ. ಮಕ್ಕಳ, ಯುವಜನರ ಮತ್ತು ಸಮಾಜದ ಸದಸ್ಯರೆಲ್ಲರ ಮೇಲೆ ರಾಜ್ಯವು ಒತ್ತಡ ಅಥವಾ ಬಲದಿಂದ ನಿಯಂತ್ರಣದಲ್ಲಿಟ್ಟು ಅವರೆಲ್ಲರೂ ಸರಿಯಾದ ಮಾರ್ಗದಲ್ಲಿ ನಡೆದುಕೊಳ್ಳುವಂತೆ ವಾತಾವರಣವನ್ನು ಸೃಷ್ಟಿಸುತ್ತದೆ. ಅನೈತಿಕ ದಾರಿಯಲ್ಲಿ ನಡೆಯುವವರು ಅಥವಾ ನಿಯಮಗಳ ವಿರುದ್ಧವಾಗಿ ವರ್ತಿಸುವ ವ್ಯಕ್ತಿಗಳಿಗೆ ಕಾನೂನು, ನ್ಯಾಯಾಲಯಗಳ ಮೂಲಕ ಶಿಕ್ಷೆಗೆ ಗುರಿಪಡಿಸಲಾಗುವುದು. ಕಾನೂನು, ನಿಯಮಗಳ ಮೂಲಕ ರಾಜ್ಯವು ಸದಸ್ಯರೆಲ್ಲರನ್ನು ನೇರವಾಗಿ ನಿಯಂತ್ರಣದಲ್ಲಿಡುವುದರಿಂದ ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾಗಿ ಸಾಮಾಜೀಕರಣಗೊಳ್ಳಲು ರಾಜ್ಯವು ಸಹಕಾರಿಯಾಗಿದೆ. ಆಧುನಿಕ ಸಮಾಜದಲ್ಲಿ ಸಾಮಾಜಕೀರಣದ ಪ್ರಕ್ರಿಯೆ ಮತ್ತು ನಿಯಂತ್ರಣದಲ್ಲಿ ರಾಜ್ಯವು ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ.

ಊ. ಸಮೂಹ ಮಾಧ್ಯಮಗಳು

ಸಮೂಹ ಮಾಧ್ಯಮಗಳಾದ ಸಿನೇಮಾ, ದೈನಿಕಗಳು, ಪತ್ರಿಕೆಗಳು, ದೂರದರ್ಶನ, ರೇಡಿಯೋ, ಗಣಕಯಂತ್ರ, ಅಂತರ್‌ಜಾಲಗಳು ಶ್ರವಣ-ದೃಶ್ಯ ಕಾರ್ಯಕ್ರಮಗಳು ಇತ್ಯಾದಿಗಳು ಆಧುನಿಕ ಸಮಾಜದಲ್ಲಿ ಬಹಳ ಪ್ರಾಮುಖ್ಯವಾದ ಸಾಮಾಜೀಕರಣದ ನಿಯೋಗಗಳಾಗಿವೆ. ಸಮೂಹ ಮಾಧ್ಯಮದ ಶಿಕ್ಷಣದಿಂದ ಅಥವಾ ಮಾಹಿತಿಗಳಿಂದ ವ್ಯಕ್ತಿಗಳ ಅಭಿಪ್ರಾಯಗಳು ರೂಪಗೊಳ್ಳುತ್ತವೆ, ಅಭಿರುಚಿಗಳು ಮಾರ್ಪಾಡುಗೊಳ್ಳುತ್ತವೆ ಮತ್ತು ಆಸಕ್ತಿಗಳು ಪಕ್ವಗೊಳ್ಳುತ್ತವೆ.

ಇಂದಿನ ಸಮಾಜದಲ್ಲಿ ವೃತ್ತಪತ್ರಿಕೆಗಳು, ಸಿನೇಮಾ, ದೂರದರ್ಶನ ಮತ್ತು ಗಣಕಯಂತ್ರ

ಅಂತರ್‌ಜಾಲಗಳು ವ್ಯಕ್ತಿಗಳನ್ನು ಶಿಕ್ಷಿತರನ್ನಾಗಿ ಮಾಡುವಲ್ಲಿ, ಅವರ ಮನಃಪ್ರವೃತ್ತಿಯನ್ನು ಬದಲಿಸುವಲ್ಲಿ ಮತ್ತು ಸಾರ್ವಜನಿಕ ಅಭಿಪ್ರಾಯಗಳನ್ನು ಮೂಡಿಸುವಲ್ಲಿ ಮಹತ್ತರ ಪಾತ್ರವಹಿಸುತ್ತವೆ. ಸಮೂಹ ಮಾಧ್ಯಮಗಳು ಎಲ್ಲಾ ವ್ಯಕ್ತಿಗಳ ಮೇಲೆ ಏಕಪ್ರಕಾರವಾದ ಪ್ರಭಾವ ಬೀರುವುದಿಲ್ಲ. ವ್ಯಕ್ತಿಗಳ ಸ್ವಭಾವ, ಪ್ರವೃತ್ತಿಗಳಿಗೆ ಅನುಸಾರವಾಗಿ ಅದು ಬೇರೆ. ಬೇರೆ ಆಗಬಹುದು.

ಈ ಎಲ್ಲಾ ಮೇಲೆ ನಮೂದಿಸಿರುವ ನಿಯೋಗಗಳು ಯಶಸ್ವಿಯಾಗಿ ತಮ್ಮ ಪಾತ್ರವನ್ನು ನಿರ್ವಹಿಸಿದರೂ ಕೆಲವೊಮ್ಮೆ ವ್ಯಕ್ತಿಗಳು ಅನೇಕ ಹೊಂದಾಣಿಕೆಯ ಸಮಸ್ಯೆಗಳನ್ನು ಎದುರಿಸಬಹುದು. ಕೆಲವು ವ್ಯಕ್ತಿಗಳು ಅಪವರ್ತಿಗಳಾಗಬಹುದು. ಅವರು ಸಮಾಜದ ನಿರೀಕ್ಷೆಗೆ ತಕ್ಕಂತೆ ವರ್ತಿಸಲು ಅಸಮರ್ಥರಾಗಬಹುದು. ಅದಕ್ಕೆ ದೋಷಪೂರಿತ ಸಾಮಾಜೀಕರಣ ಅಥವಾ ನಿಯಮರಾಹಿತ್ಯ ಸ್ಥಿತಿ ಕಾರಣವಾಗಬಹುದು. ಈ ಎಲ್ಲಾ ತೊಂದರೆಗಳಿದ್ದರೂ ವ್ಯಕ್ತಿಗಳು ಸಮಾಜದಲ್ಲಿ ಪರಿಣಾಮಕಾರಿಯಾಗಿ ವರ್ತಿಸಲು, ಭಾಗವಹಿಸಲು ಸಾಮಾಜೀಕರಣದ ಪ್ರಕ್ರಿಯೆಯು ನಿರಂತರವಾಗಿ ವ್ಯವಸ್ಥಿತವಾಗಿ ನಡೆಯುತ್ತಾ ಇರುತ್ತದೆ.

೪.೫. ಸಾರಾಂಶ

ಸಂಸ್ಕೃತಿಯು ಮಾನವನ ಸೃಷ್ಟಿಯಾಗಿದ್ದು. ಅವನು ಅದರನ್ವಯ ಬದುಕುವನು. ಸಂಸ್ಕೃತಿಯು ಆಚಾರ-ವಿಚಾರ, ನೀತಿ-ನಿಯಮಗಳು, ಕಲೆ, ಸಾಹಿತ್ಯ ಮುಂತಾದವುಗಳನ್ನು ಒಳಗೊಂಡಿರುವುದು. ಮಾನವನು ಸಾಮಾಜೀಕರಣದ ಪ್ರಕ್ರಿಯೆ ಮತ್ತು ಕಲಿಕೆಯ ಮುಖಾಂತರ ಸಂಸ್ಕೃತಿಯನ್ನು ರೂಢಿಸಿಕೊಳ್ಳುವನು. ಅಂದರೆ ಸಂಸ್ಕೃತಿಯು ಮಾನವನಿಗೆ ರಕ್ತಗತವಾಗಿ, ನೈಸರ್ಗಿಕವಾಗಿ ಬಾರದೆ ಕಲಿಯುವಿಕೆಯ ಪ್ರಕ್ರಿಯೆಯಿಂದಾಗಿ ಲಭಿಸುವುದು. ಭಾಷೆಯೆಂಬ ಸಾಧನದ ಮೂಲಕ ಸಂಸ್ಕೃತಿಯು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಸಾಗಿಸಲ್ಪಡುವುದು. ಸಂಸ್ಕೃತಿಯು ಸಾಮಾಜಿಕವಾದುದು. ಅದು ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುವುದು. ಅಲ್ಲದೆ ಪ್ರತಿಯೊಂದು ಸಂಸ್ಕೃತಿಯಲ್ಲಿ ಕಾಲಕಾಲಕ್ಕೆ ಬದಲಾವಣೆಗಳು ಉಂಟಾಗುತ್ತಿರುತ್ತವೆ. ಬ್ರಿಟಿಷರ ಸಂಪರ್ಕದಿಂದಾಗಿ ನಮ್ಮ ದೇಶದ ಸಂಸ್ಕೃತಿಯಲ್ಲಿ ಅನೇಕ ಬದಲಾವಣೆಗಳಾದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಮಾನವನು ಬಳಸುವ ರೇಡಿಯೋ, ದೂರದರ್ಶನ, ಮೋಟಾರುಕಾರು, ವಿಮಾನ, ಕಂಪ್ಯೂಟರ್ ಇತ್ಯಾದಿ ಉಪಕರಣಗಳೆಲ್ಲವೂ ನಾಗರಿಕತೆಗೆ ಸಂಬಂಧಪಟ್ಟಿವೆ. ಸಂಸ್ಕೃತಿಯು ಆಂತರಿಕ ಜೀವನಕ್ಕೆ ಸಂಬಂಧಪಟ್ಟಿದ್ದು, ನಾಗರಿಕತೆಯು ಬಾಹ್ಯ ಜೀವನಕ್ಕೆ ಸಂಬಂಧಿಸಿದ್ದಾಗಿದೆ. ನಾಗರಿಕತೆಯು ಸಮಾಜದಿಂದ ಸಮಾಜಕ್ಕೆ ಸುಲಭವಾಗಿ ಮತ್ತು ತೀವ್ರವಾಗಿ ಹರಡುವುದು. ಆದರೆ ಸಂಸ್ಕೃತಿಯು ನಿಧಾನ ಗತಿಯಿಂದ ಪ್ರಸರಣ ಹೊಂದುವುದು.

ಸಾಮಾಜಿಕ ಬದುಕಿಗೆ ವ್ಯಕ್ತಿಯನ್ನು ಅಣಿಗೊಳಿಸುವ ಕ್ರಿಯೆಯೇ ಸಾಮಾಜೀಕರಣವಾಗಿದೆ. ಈ ಸಾಮಾಜೀಕರಣವು ಜೀವನದ ವಿಭಿನ್ನ ಹಂತಗಳಲ್ಲಿ ಸತತವಾಗಿ ಸಾಗುವ ಒಂದು ಪ್ರಕ್ರಿಯೆಯಾಗಿದೆ. ಸಿಗ್ಮಂಡ್ ಫ್ರಾಯ್ಡ್ ಎಂಬ ಮನೋವಿಜ್ಞಾನಿಯ ಪ್ರಕಾರ ಮಗು

ನಾಲ್ಕು ಹಂತಗಳ ಮೂಲಕ ಸಾಮಾಜಿಕ ಗುಣಗಳನ್ನು ಮತ್ತು ಪಾತ್ರಗಳನ್ನು ಅಂತರ್ಗತವಾಗಿಸಿಕೊಳ್ಳುವುದು. ಅವುಗಳೆಂದರೆ ೧. ವಾಚಿಕ ಹಂತ ೨. ಶೌಚ ಶಿಕ್ಷಣದ ಹಂತ ೩. ಸುಪ್ತ ಹಂತ ೪. ಯೌವನಾವಸ್ಥೆ. ವಾಚಿಕ ಹಂತವು ಮಗುವು ಹುಟ್ಟಿದಂದಿನಿಂದ ಮೊದಲ್ಗೊಂಡು ಒಂದು ವರ್ಷದವರೆಗೆ ಮುಂದುವರಿಯುತ್ತದೆ. ಈ ಹಂತದಲ್ಲಿ ಮಗುವು ತನ್ನ ಅವಶ್ಯಕತೆಗಳ ಬಗ್ಗೆ ಸಂಕೇತಗಳನ್ನು ನೀಡುವುದನ್ನು ಕಲಿತುಕೊಳ್ಳುತ್ತದೆ. ಶೌಚ ಶಿಕ್ಷಣದ ಹಂತವು ಮಗುವಿನ ಎರಡನೇ ವರ್ಷದಿಂದ ಆರಂಭಗೊಂಡು ಮೂರನೇಯ ವರ್ಷ ಪ್ರಾಯದ ಮುಕ್ತಾಯದವರೆಗೆ ಮುಂದುವರಿಯುವುದು. ಈ ಹಂತದಲ್ಲಿ ಮಗುವು ಶೌಚ ಶಿಕ್ಷಣವನ್ನು ಪಡೆಯುವುದರ ಜೊತೆಗೆ ತನ್ನ ಮತ್ತು ತಾಯಿಯ ವಿಭಿನ್ನ ಪಾತ್ರಗಳ ಬಗೆಗಿನ ಜ್ಞಾನವನ್ನು ಪಡೆಯುವುದು. ಸುಪ್ತ ಹಂತವು ಮಗುವಿನ ನಾಲ್ಕನೆಯ ವರ್ಷದಿಂದ ಪ್ರಾರಂಭಗೊಂಡು ೧೩-೧೪ ವರ್ಷಗಳವರೆಗೆ ಸಾಗುವುದು. ಈ ಹಂತದಲ್ಲಿ ಬಾಲಕ-ಬಾಲಕಿಯರು ತಮ್ಮ ಲಿಂಗಕ್ಕನುಗುಣವಾಗಿ ನೀಡಲಾದ ಸಾಮಾಜಿಕ ಪಾತ್ರಗಳನ್ನು ನಿರ್ವಹಿಸಲು ಕಲಿತುಕೊಳ್ಳುವರು. ಯೌವನಾವಸ್ಥೆಯು ೧೪ನೇ ವರ್ಷ ವಯಸ್ಸಿನ ನಂತರ ಪ್ರಾರಂಭವಾಗಿ ೨೧ನೇ ವರ್ಷದವರೆಗೆ ಮುಂದುವರಿಯುತ್ತದೆ. ಈ ಹಂತದಲ್ಲಿ ಬಾಲಕ ಬಾಲಕಿಯರಲ್ಲಿ ದೈಹಿಕ ಮತ್ತು ಮಾನಸಿಕ ಬದಲಾವಣೆಗಳು ಉಂಟಾಗುವವು. ಯೌವನದ ಭರದಲ್ಲಿ ಅನೇಕ ಕಾರ್ಯಗಳನ್ನು ಸ್ವತಂತ್ರವಾಗಿ ಮಾಡಲು ಅವರು ಬಯಸುವರು. ಕುಟುಂಬ, ಸಮವಯಸ್ಕರ ಸಮೂಹ, ನೆರೆಹೊರೆ, ಶಾಲೆ, ಧರ್ಮ, ರಾಜ್ಯ ಮತ್ತು ಸಮೂಹ ಮಾಧ್ಯಮಗಳು ಸಾಮಾಜೀಕರಣದ ಪ್ರಮುಖ ನಿಯೋಗಿಗಳಾಗಿ ಕಾರ್ಯನಿರ್ವಹಿಸುವವು. ಸಿನೇಮಾ, ರೇಡಿಯೋ, ದೂರದರ್ಶನ, ಪತ್ರಿಕೆ ಮುಂತಾದವುಗಳು ಒದಗಿಸುವ ಮಾಹಿತಿಗಳಿಂದ ವ್ಯಕ್ತಿಗಳ ಅಭಿಪ್ರಾಯಗಳು ರೂಪುಗೊಳ್ಳುವವು, ಅಭಿರುಚಿಗಳು ಮಾರ್ಪಾಡುಗೊಳ್ಳುತ್ತವೆ. ಈ ವಿಧದ ಮಾಧ್ಯಮಗಳು ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿವೆ.

೪.೬. ಪಾರಿಭಾಷಿಕ ಪದಕೋಶ

೧. Adolescence = ಯೌವ್ವನಾವಸ್ಥೆ

೨. Anal Stage = ಶೌಚ ಶಿಕ್ಷಣದ ಹಂತ

೩. Content = ಪರಿಸೂಚಿ

೪. Culture Crisis = ಸಂಸ್ಕೃತಿ ಬಿಕ್ಕಟ್ಟು

೫. Cultural Lag = ಸಂಸ್ಕೃತಿಯ ಹಿಂಬೀಳಿಕೆ

೬. Civilizational Lag = ನಾಗರಿಕತೆಯ ಹಿಂಬೀಳಿಕೆ

೭. Formal = ಔಪಚಾರಿಕ

೮. Informal = ಅನೌಪಚಾರಿಕ

೯. Material Culture = ಭೌತ ಸಂಸ್ಕೃತಿ

೧೦. Mass Media = ಸಮೂಹ ಮಾಧ್ಯಮಗಳು
೧೧. Non-Material Culture = ಅಭೌತ ಸಂಸ್ಕೃತಿ
೧೨. Oedipus Stage = ಸುಪ್ತಹಂತ
೧೩. Oral Stage = ವಾಚಿಕ ಹಂತ
೧೪. Primary Identification = ಪ್ರಾಥಮಿಕ ಗುರುತಿಸುವಿಕೆ
೧೫. Social Distance = ಸಾಮಾಜಿಕ ಅಂತರ
೧೬. Super-Organic = ಅತೀತ ಜೈವಿಕ
೧೭. Social Identity = ಸಾಮಾಜಿಕ ಅನನ್ಯತೆ
೧೮. Sub-System = ಉಪವ್ಯವಸ್ಥೆ
೧೯. Technological lag = ತಾಂತ್ರಿಕ ಹಿಂಬೀಳಿಕೆ

೪.೭. ಪ್ರಶ್ನೆಗಳು

I. ಒಂದು ಅಂಕದ ಪ್ರಶ್ನೆಗಳು

೧. ಸಂಸ್ಕೃತಿಯ ಒಂದು ವ್ಯಾಖ್ಯೆ ನೀಡಿ.
೨. ನಾಗರಿಕತೆಯೆಂದರೇನು?
೩. 'ಸಂಸ್ಕೃತಿಯ ಹಿಂಬೀಳಿಕೆ' ಪರಿಕಲ್ಪನೆಯನ್ನು ಯಾರು ಮೊದಲು ಪರಿಚಯಿಸಿದರು?
೪. ಅಭೌತ ಸಂಸ್ಕೃತಿಗೆ ಒಂದು ಉದಾಹರಣೆ ನೀಡಿ.
೫. ಸಂಸ್ಕೃತಿಯು ಹುಟ್ಟಿನಿಂದ ಬರುವಂತಹುದೆ?
೬. ಸಂಸ್ಕೃತಿಯ ಎರಡು ಬಗೆಗಳಾವವು?
೭. ಸಾಮಾಜೀಕರಣದ ವ್ಯಾಖ್ಯೆಯನ್ನು ನೀಡಿ.
೮. ಸಾಮಾಜೀಕರಣದ ಯಾವುದಾದರೂ ಒಂದು ಹಂತವನ್ನು ಹೆಸರಿಸಿ.
೯. ಸಾಮಾಜೀಕರಣದ ನಿಯೋಗಿಯೊಂದನ್ನು ಸೂಚಿಸಿ.
೧೦. ಸಮವಯಸ್ಕರ ಸಮೂಹವೆಂದರೇನು?
೧೧. ವಾಚಿಕ ಹಂತವು ಯಾವಾಗ ಪ್ರಾರಂಭಗೊಂಡು ಮಗುವಿನ ಎಷ್ಟನೇ ಪ್ರಾಯದವರೆಗೆ ಮುಂದುವರಿಯುತ್ತದೆ?
೧೨. ಭೌತ ಸಂಸ್ಕೃತಿಗೆ ಎರಡು ಉದಾಹರಣೆಗಳನ್ನು ಕೊಡಿ.
೧೩. 'ಕಲ್ಚರ್' ಎಂಬ ಪದವನ್ನು ಹೇಗೆ ವ್ಯುತ್ಪತ್ತಿ ಮಾಡಲಾಗಿದೆ?
೧೪. 'ಕಲ್ಚರ್' ಎಂಬ ಪದದ ಶಾಸ್ತ್ರೀಯ ಅರ್ಥವೇನು?
೧೫. ಸಂಸ್ಕೃತಿಯ ಒಂದು ಗುಣಲಕ್ಷಣವನ್ನು ನಮೂದಿಸಿ.

II. ಎರಡು ಅಂಕದ ಪ್ರಶ್ನೆಗಳು

೧. 'ಸಂಸ್ಕೃತಿಯ ಹಿಂಬೀಳಿಕೆ' ಎಂದರೇನು?

೨. ಸಂಸ್ಕೃತಿಯ ಎರಡು ಲಕ್ಷಣಗಳನ್ನು ತಿಳಿಸಿ.
೩. ಸಂಸ್ಕೃತಿಯ ಎರಡು ವಿಧಗಳು ಯಾವುವು?
೪. ಭೌತ ಮತ್ತು ಅಭೌತ ಸಂಸ್ಕೃತಿಯ ನಡುವಿನ ಎರಡು ವ್ಯತ್ಯಾಸಗಳನ್ನು ಗುರುತಿಸಿ.
೫. 'ನಾಗರಿಕತೆ'ಯನ್ನು ವ್ಯಾಖ್ಯಾನಿಸಿ.
೬. ಭೌತ ಸಂಸ್ಕೃತಿಗೆ ನಾಲ್ಕು ಉದಾಹರಣೆಗಳನ್ನು ಕೊಡಿ.
೭. ಸಂಸ್ಕೃತಿಯ ಎರಡು ವ್ಯಾಖ್ಯೆಗಳನ್ನು ನೀಡಿ.
೮. 'ಇಲೆಕ್ಟ್ರಾಕಾಂಪ್ಲೆಕ್ಸ್' ಎಂದರೇನು?
೯. 'ಈಡಿಪಸ್ ಕಾಂಪ್ಲೆಕ್ಸ್' ಎಂದರೇನು?
೧೦. ಸಾಮಾಜೀಕರಣದ ಎರಡು ನಿಯೋಗಿಗಳನ್ನು ಹೆಸರಿಸಿ.
೧೧. ಸಾಮಾಜೀಕರಣದ ನಾಲ್ಕು ಹಂತಗಳಾವವು?
೧೨. ಸಮವಯಸ್ಕರ ಸಮೂಹಕ್ಕೆ ಎರಡು ಉದಾಹರಣೆಗಳನ್ನು ಕೊಡಿ.
೧೩. ಸಾಮಾಜೀಕರಣವು ವ್ಯಕ್ತಿಗೆ ಏಕೆ ಅಗತ್ಯವಾಗಿದೆ?
೧೪. ಎರಡು ಸಮೂಹ ಮಾಧ್ಯಮಗಳನ್ನು ಹೆಸರಿಸಿ.
೧೫. ಶೌಚ ಶಿಕ್ಷಣ ಹಂತದಲ್ಲಿ ಮಗುವು ಯಾವ ಎರಡು ಪಾತ್ರಗಳ ಬಗ್ಗೆ ತಿಳಿದುಕೊಳ್ಳುತ್ತದೆ?

III. ಐದು ಅಂಕಗಳ ಪ್ರಶ್ನೆಗಳು

೧. ಸಂಸ್ಕೃತಿ ಮತ್ತು ನಾಗರಿಕತೆಗಳ ಮಧ್ಯದ ವ್ಯತ್ಯಾಸಗಳನ್ನು ತಿಳಿಸಿರಿ.
೨. ಸಂಸ್ಕೃತಿಯ ಹಿಂಬೀಳಿಕೆ ಪರಿಕಲ್ಪನೆಯನ್ನು ವಿವರಿಸಿರಿ.
೩. ಸಂಸ್ಕೃತಿಯ ಐದು ಗುಣಲಕ್ಷಣಗಳನ್ನು ವಿವರಿಸಿ.
೪. ಭೌತ ಮತ್ತು ಅಭೌತ ಸಂಸ್ಕೃತಿಯ ನಡುವಿನ ವ್ಯತ್ಯಾಸಗಳನ್ನು ತಿಳಿಸಿರಿ.
೫. ಸಾಮಾಜೀಕರಣದ ಅರ್ಥ ಮತ್ತು ವ್ಯಾಖ್ಯೆಗಳನ್ನು ನೀಡಿ.
೬. ಸಾಮಾಜೀಕರಣದ ಪ್ರಾಮುಖ್ಯತೆಯನ್ನು ವಿಶದಪಡಿಸಿ.
೭. ಸಾಮಾಜೀಕರಣದಲ್ಲಿ ಸಮೂಹ ಮಾಧ್ಯಮಗಳ ಪಾತ್ರವನ್ನು ವಿವರಿಸಿರಿ.
೮. ಮಗುವಿನ ಸಾಮಾಜೀಕರಣದಲ್ಲಿ ಕುಟುಂಬದ ಪಾತ್ರವನ್ನು ವಿವರಿಸಿರಿ.
೯. ಸಾಮಾಜೀಕರಣ ನಿಯೋಗಿಯಾಗಿ ಶಾಲೆಯ ಪಾತ್ರವನ್ನು ವಿವರಿಸಿ.
೧೦. ಸಾಮಾಜೀಕರಣದಲ್ಲಿ ಸಮವಯಸ್ಕ ಸಮೂಹಗಳ ಪಾತ್ರವನ್ನು ವಿವರಿಸಿ.
೧೧. ಸಾಮಾಜೀಕರಣವು ನಿರಂತರವಾದ ಪ್ರಕ್ರಿಯೆಯೆ? ಚರ್ಚಿಸಿ.
೧೨. ಸಂಸ್ಕೃತಿಯು ನಾಗರಿಕತೆಗಿಂತ ಹೇಗೆ ಭಿನ್ನವಾಗಿದೆ?

IV. ಹತ್ತು ಅಂಕದ ಪ್ರಶ್ನೆಗಳು

೧. ಸಂಸ್ಕೃತಿಯ ವಿವಿಧ ಲಕ್ಷಣಗಳನ್ನು ವಿವರಿಸಿರಿ.
೨. ಸಂಸ್ಕೃತಿಯ ಹಿಂಬೀಳಿಕೆಯೆಂದರೇನು? ಉದಾಹರಣೆ ಸಹಿತ ವಿವರಿಸಿರಿ.

೩. ಸಂಸ್ಕೃತಿಯನ್ನು ವ್ಯಾಖ್ಯಾನಿಸಿ. ಸಂಸ್ಕೃತಿಯು ನಾಗರಿಕತೆಗಿಂತ ಹೇಗೆ ಭಿನ್ನವಾಗಿದೆಯೆಂಬುದನ್ನು ಸ್ಪಷ್ಟಪಡಿಸಿ.

೪. ಸಾಮಾಜೀಕರಣದ ನಿಯೋಗಿಗಳನ್ನು ವಿವರಿಸಿರಿ.

೫. ಸಾಮಾಜೀಕರಣದ ವಿವಿಧ ಹಂತಗಳ ಕುರಿತು ಚರ್ಚಿಸಿರಿ.

ಅಭ್ಯಾಸ/ಚಟುವಟಿಕೆಗಳು

೧. ಯುವ ಪೀಳಿಗೆಯ ಮೇಲಾಗುತ್ತಿರುವ ದೂರದರ್ಶನದ ಪ್ರಭಾವವನ್ನು ಚಿತ್ರಿಸಿ.

೨. ಭಾರತೀಯ ಸಂಸ್ಕೃತಿಯು ಪಾಶ್ಚಾತ್ಯ ಸಂಸ್ಕೃತಿಗಿಂತ ಹೇಗೆ ಭಿನ್ನವಾಗಿದೆಯೆಂಬುದನ್ನು ವಿವರಿಸಿರಿ.

೩. ಬ್ರಿಟಿಷರ ಸಂಪರ್ಕದಿಂದಾಗಿ ನಮ್ಮ ಸಂಸ್ಕೃತಿಯಲ್ಲುಂಟಾದ ಬದಲಾವಣೆಗಳ ಕುರಿತು ಚರ್ಚಿಸಿ.

ಅಧ್ಯಾಯ ೫

ಸಾಮಾಜಿಕ ನಿಯಂತ್ರಣ

ಪೀಠಿಕೆ

ಬಹಳಷ್ಟು ಹಿಂದೆಯೇ ಅರಿಸ್ಟಾಟಲ್‌ರು ಮಾನವನನ್ನು ಸಮಾಜಜೀವಿ ಎಂಬುದಾಗಿ ಕರೆದರು. ಇದು ಅಕ್ಷರಶಃ ಸಮರ್ಪಕವಾದ ಹೇಳಿಕೆ. ಯಾಕೆಂದರೆ ಮಾನವನು ಯಾವತ್ತೂ ಏಕಾಂಗಿಯಾಗಿ ಜೀವಿಸಲಾರ. ಅವನು ಸದಾ ಸಮೂಹದಲ್ಲಿ ಜೀವಿಸುತ್ತಾನೆ. ಕುಟುಂಬದಲ್ಲಿ ಜನಿಸಿದ ಮಗುವು ಬೆಳೆದು ದೊಡ್ಡದಾದಂತೆ ವಿವಿಧ ಸಮೂಹಗಳಲ್ಲಿ ಬೆರೆತು ತನ್ನ ಅಪರಿಮಿತ ಅಗತ್ಯಗಳನ್ನು ಪೂರೈಸಿಕೊಳ್ಳಲು ಯತ್ನಿಸುತ್ತದೆ. ಹೀಗೆ ಜೀವನ ಪರ್ಯಂತ ಸಾಂಘಿಕ ಜೀವನ ನಡೆಸುವ ಮಾನವ ಯಾವತ್ತೂ ಸಂಪೂರ್ಣ ಸ್ವಾವಲಂಬಿಯಾಗಿರದೆ ಜೀವನದುದ್ದಕ್ಕೂ ಪರಸ್ಪರಾವಲಂಬಿಯಾಗಿರುತ್ತಾನೆ. ಇಂತಹ ಸಾಮಾಜಿಕ ಜೀವನದ ಅಸ್ತಿತ್ವಕ್ಕೆ ಸಾಮಾಜಿಕ ನಿಯಂತ್ರಣ ಅತ್ಯಗತ್ಯವಾಗಿರುತ್ತದೆ.

ವ್ಯಕ್ತಿಯು ಏಕಾಂಗಿಯಾಗಿದ್ದಾಗ ತನಗಿಷ್ಟ ಬಂದಂತೆ ವರ್ತಿಸುತ್ತಾನೆ. ಆದರೆ ಆತನು ನಿರಂತರವಾಗಿ ಯಾವತ್ತೂ ಏಕಾಂಗಿಯಾಗಿರಲಾರ. ಸಾಂಘಿಕ ಜೀವನ ಅವನಿಗೆ ಅತೀ ಅಗತ್ಯವಾಗಿರುತ್ತದೆ. ಸಮೂಹದಲ್ಲಿ ಜೀವಿಸುವಾಗ ಅಲ್ಲಿ ಉದ್ಭವಿಸುವ ಸಾಮೂಹಿಕ ಜೀವನದ ಸರಳ ನಿಯಮಗಳನ್ನು ಆತನು ಪಾಲಿಸಬೇಕಾಗುತ್ತದೆ. ಅವುಗಳು ಲೋಕರೂಢಿ, ಲೋಕನೀತಿ, ಪದ್ಧತಿಗಳು, ನೈತಿಕ ನಿಯಮ ಹಾಗೂ ಶಾಸನಗಳ ರೂಪದಲ್ಲಿ ಅಸ್ತಿತ್ವದಲ್ಲಿ ರುತ್ತವೆ. ಸಾಂಘಿಕ ಜೀವನದ ಮೂಲಕವೇ ಅವುಗಳನ್ನು ತಿಳಿದುಕೊಂಡು ಮಾನವ ತನ್ನ ವರ್ತನೆಯನ್ನು ಮೈಗೂಡಿಸಿಕೊಳ್ಳುತ್ತಾನೆ. ಹೀಗೆ ತನ್ನ ವರ್ತನೆಯ ಮೇಲೆ ಸ್ವಯಂ ಪ್ರೇರಣೆಯಿಂದ ನಿಯಂತ್ರಣವನ್ನು ಸಾಧಿಸುತ್ತಾನೆ. ಆದರೆ ಸಂಕೀರ್ಣ ಸಾಮಾಜಿಕ ವ್ಯವಸ್ಥೆ ಗಳಲ್ಲಿ ಸ್ವಯಂ ನಿಯಂತ್ರಣವು ಪರಿಪೂರ್ಣವಾಗಿರಲಾರದು. ಎಲ್ಲಿ ವ್ಯಕ್ತಿಯು ಸ್ವನಿಯಂತ್ರಣವನ್ನು ಕಳೆದುಕೊಂಡು ಸಾಮಾಜಿಕ ಜೀವನದ ನಿಯಮಗಳನ್ನು ಮೀರಿ ವರ್ತಿಸಬಹುದಾದ ಸಾಧ್ಯತೆಗಳಿವೆಯೋ ಅಲ್ಲಿ ಸಮಾಜವೇ ಆತನ ಮೇಲೆ ನಿಯಂತ್ರಣವನ್ನು ಸ್ಥಾಪಿಸುತ್ತದೆ. ಇದನ್ನೇ ನಾವು ಸಾಮಾಜಿಕ ನಿಯಂತ್ರಣ ಎಂದು ಕರೆಯುತ್ತೇವೆ.

೫.೧. ಸಾಮಾಜಿಕ ನಿಯಂತ್ರಣದ ಅರ್ಥ ಮತ್ತು ವ್ಯಾಖ್ಯೆಗಳು

ಮಾನವ ಸಮಾಜದ ಮುಖ್ಯ ಲಕ್ಷಣ ವ್ಯವಸ್ಥೆ, ಪ್ರಕ್ರಮ ಹಾಗೂ ಸಮತೋಲನ. ಸಮಾಜದ ಜನರು ಯಾವಾಗಲೂ ಸ್ವೇಚ್ಛಾಚಾರಿಗಳಾಗಿ ವರ್ತಿಸದೆ ಸಮಾಜದ ನಿಯಮಗಳಿಗೆ

ಬದ್ಧರಾಗಿ ತಮ್ಮ ವರ್ತನೆಯನ್ನು ಪ್ರದರ್ಶಿಸುತ್ತಾರೆ. ಆದರೂ ಕೂಡ ಕೆಲವೊಂದು ಸಂದರ್ಭದಲ್ಲಿ ಸಾಮಾಜಿಕ ಅಸಮಾನತೆ, ಅವ್ಯವಸ್ಥೆ ಹಾಗೂ ಬಿಕ್ಕಟ್ಟು ಉಂಟಾಗಬಹುದು. ಆದರೆ ಇದು ನಿರಂತರವಾಗಿ ಮುಂದುವರಿಯಲಾರದು. ಸಮಾಜದಲ್ಲಿ ವ್ಯವಸ್ಥೆ, ಪ್ರಕ್ರಮ ಹಾಗೂ ಸಮತೋಲನ ಪುನಸ್ಥಾಪಿಸಲ್ಪಡುತ್ತದೆ.

ವ್ಯಕ್ತಿಯ ವರ್ತನೆಯು ಬಾಹ್ಯ ಪ್ರಚೋದನೆಗೆ ಆತನಿಂದ ಉಂಟಾಗುವ ಪ್ರತಿಕ್ರಿಯೆಯ ರೂಪದಲ್ಲಿರುತ್ತದೆ. ನಿರ್ದಿಷ್ಟ ಸನ್ನಿವೇಶದಲ್ಲಿ ಒಬ್ಬನು ಬಾಹ್ಯ ಪ್ರಚೋದನೆಗಳಿಗೆ ಹೇಗೆ ಪ್ರತಿಕ್ರಿಯಿಸುತ್ತಾನೆ ಎಂಬುದೇ ಆತನ ವರ್ತನೆಯಾಗಿರುತ್ತದೆ. ಪ್ರಾಣಿಗಳ ವರ್ತನೆಯಲ್ಲಿ ನಿರ್ದಿಷ್ಟ ಪ್ರಚೋದನೆಗಳಿಗೆ ನಿಶ್ಚಿತ ಹಾಗೂ ಏಕರೂಪದ ಪ್ರತಿಕ್ರಿಯೆಗಳು ಕಂಡುಬರುತ್ತವೆ. ಆದರೆ ಮಾನವನ ವರ್ತನೆಯಲ್ಲಿ ಪ್ರಚೋದನೆಗಳು ಮೊದಲೇ ಗ್ರಹಿಸಬಹುದಾದ ನಿಶ್ಚಿತ ಪ್ರತಿಕ್ರಿಯೆಗಳನ್ನು ಉಂಟುಮಾಡಲಾರವು. ಅಂದರೆ, ಮಾನವ ತನ್ನ ಮೇಲೆ ಉಂಟಾಗುವ ಪ್ರಚೋದನೆಗಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನು ನಿರ್ಧರಿಸಬಲ್ಲ. ಇಲ್ಲಿ ತನ್ನ ವರ್ತನೆಯನ್ನು ತಾನೇ ನಿಯಂತ್ರಿಸಬಲ್ಲ. ಆತನ ಜ್ಞಾನ, ವಿವೇಚನೆ ಹಾಗೂ ವಿವೇಕ ಆತನು ನಿರ್ದಿಷ್ಟ ಸನ್ನಿವೇಶದಲ್ಲಿನ ಪ್ರಚೋದನೆಗಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನು ನಿಯಂತ್ರಿಸುತ್ತದೆ. ಇದು ಸ್ವನಿಯಂತ್ರಣ ಎಂಬುದಾಗಿ ಕರೆಯಲ್ಪಡುತ್ತದೆ. ಆದರೆ ಮಾನವನ ಸಾಮಾಜಿಕ ಜೀವನ ಇನ್ನಷ್ಟೂ ಸಂಕೀರ್ಣವಾದುದರಿಂದ ಆತನ ವರ್ತನೆಯ ಮೇಲೆ ಸಮಾಜವು ನಿಯಂತ್ರಣವನ್ನಿರಿಸುತ್ತದೆ. ಲೋಕರೂಢಿ, ಲೋಕನೀತಿ, ಪದ್ಧತಿ ಹಾಗೂ ಶಾಸನಗಳೇ ಸಾಮಾಜಿಕ ನಿಯಂತ್ರಣವನ್ನು ಉಂಟುಮಾಡುವ ಸಾಧನಗಳಾಗಿ ವರ್ತಿಸುತ್ತವೆ.

ಸಾಮಾಜಿಕ ನಿಯಂತ್ರಣವು ಮಾನವನ ಸಾಮಾಜಿಕ ಜೀವನದ ಪ್ರಮುಖ ಅಂಶವಾಗಿದ್ದು ಸಮಾಜಶಾಸ್ತ್ರಜ್ಞರು ಅದನ್ನು ಹಲವಾರು ರೀತಿಯಲ್ಲಿ ವ್ಯಾಖ್ಯಾನಿಸಿರುತ್ತಾರೆ. ಆದರೆ ಸಾಮಾಜಿಕ ನಿಯಂತ್ರಣವನ್ನು ವಿಸ್ತಾರವಾಗಿ ವ್ಯಾಖ್ಯಾನಿಸುವ ಹಾಗೂ ಸಾರ್ವತ್ರಿಕವಾಗಿ ಅಂಗೀಕೃತವಾದ ವ್ಯಾಖ್ಯೆಗಳಿಲ್ಲ. ಸಾಮಾಜಿಕ ನಿಯಂತ್ರಣದ ಕೆಲವು ಪ್ರಮುಖ ವ್ಯಾಖ್ಯೆಗಳನ್ನು ಈ ಕೆಳಗೆ ನೀಡಲಾಗಿದೆ.

೧. **ಮಾನ್ ಹೈಯರ್** ಪ್ರಕಾರ ಸಾಮಾಜಿಕ ನಿಯಂತ್ರಣವು "ಒಂದು ನಿರ್ದಿಷ್ಟ ವ್ಯವಸ್ಥೆಯನ್ನು ಕಾಯ್ದುಕೊಳ್ಳಲು ಸಮಾಜ ತನ್ನ ಸದಸ್ಯರ ವರ್ತನೆಯ ಮೇಲೆ ಪ್ರಭಾವ ಬೀರಲು ಬಳಸುವ ವಿಧಾನಗಳ ಒಟ್ಟು ಮೊತ್ತವೇ ಆಗಿರುತ್ತದೆ."

೨ **ಆಗ್ಬರ್ನ್** ಮತ್ತು **ನಿಮ್ಕಾಫ್‌ರ್** ವಾಕ್ಯದಲ್ಲಿ ಹೇಳುವುದಾದರೆ, 'ಸಾಮಾಜಿಕ ಪ್ರಕ್ರಮವನ್ನು ಕಾಯ್ದುಕೊಳ್ಳಲು ಹಾಗೂ ನಿಯಮಗಳನ್ನು ಸ್ಥಾಪಿಸಲು ಸಮಾಜವು ಬೀರುವ ಒತ್ತಡ ವಿನ್ಯಾಸಗಳೇ ಸಾಮಾಜಿಕ ನಿಯಂತ್ರಣವಾಗಿರುತ್ತದೆ."

೩. **ಗಿಲಿನ್** ಮತ್ತು **ಗಿಲಿನ್** ರವರ ವ್ಯಾಖ್ಯೆಯಂತೆ ಸಾಮಾಜಿಕ ನಿಯಂತ್ರಣ ಎಂದರೆ "ಒಂದು ಸಮಾಜವು ಸ್ವೀಕೃತ ವರ್ತನಾ ನಮೂನೆಗಳಿಗೆ ಅನುವರ್ತನೆಯನ್ನು ತರಲು ದೈಹಿಕ ಶಿಕ್ಷೆಯೂ ಸೇರಿದಂತೆ ಬಳಸುವ ಬಲಪ್ರಯೋಗ, ನಿರ್ಬಂಧನೆ, ಮನವೊಲಿಕೆ, ಸಲಹೆಗಳು ಹಾಗೂ ಕ್ರಮಗಳಿಂದ ಕೂಡಿದ ಸಮಗ್ರ ವ್ಯವಸ್ಥೆಯೇ ಆಗಿರುತ್ತದೆ."

೪. **ಮೆಕೈವರ್** ಮತ್ತು **ಪೇಜರ್** ಪ್ರಕಾರ "ಸಮಗ್ರ ಸಾಮಾಜಿಕ ಪ್ರಕ್ರಮವು ಹೇಗೆ ಸಮನ್ವಯಗೊಂಡು ತನ್ನಷ್ಟಕ್ಕೆ ನಿರ್ವಹಿಸಲ್ಪಡುತ್ತದೆ - ಅದು ಹೇಗೆ ಸಮಗ್ರತೆಯಲ್ಲಿ ಕಾರ್ಯವೆಸಗುತ್ತದೆ, ಹೇಗೆ ಪರಿವರ್ತನಾಶೀಲ ಸಮತೋಲನದಂತಿರುತ್ತದೆ ಎಂಬುದೇ ಸಾಮಾಜಿಕ ನಿಯಂತ್ರಣವಾಗಿದೆ."

ಮೇಲಿನ ವ್ಯಾಖ್ಯೆಗಳ ಮೂಲಕ ಸಾಮಾಜಿಕ ನಿಯಂತ್ರಣದ ಅರ್ಥವನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾಗಿದೆ. ಸಮಾಜವು ತನ್ನ ಸದಸ್ಯರು ಸ್ವೇಚ್ಛಾಚಾರದಿಂದ ವರ್ತಿಸುವುದನ್ನು ತಡೆಗಟ್ಟಿ, ಸಾಮಾಜಿಕ ಸಂಸ್ಥೆಗಳು, ಸಮೂಹ ಹಾಗೂ ಸಂಘಟನೆಗಳು ನಿರ್ದೇಶಿಸುವ ಕರ್ತವ್ಯಗಳನ್ನು ಅಥವಾ ಕಾರ್ಯಗಳನ್ನು ನಿರ್ವಹಿಸುವಂತೆ ಮಾಡುವ ವ್ಯವಸ್ಥೆಯೇ ಸಾಮಾಜಿಕ ನಿಯಂತ್ರಣವಾಗಿದೆ. ಜನರು ನಿಯಮಾವಳಿಗಳಿಗೆ ಬದ್ಧರಾಗಿ ವರ್ತಿಸುವಂತೆ ಹಾಗೂ ಅಪರಾಧದಂತಹ ದುರ್ನಡತೆಗಳಲ್ಲಿ ತೊಡಗದಂತೆ ನೋಡಿಕೊಳ್ಳುವ ಸಮಾಜ ವ್ಯವಸ್ಥೆಯೇ ಸಾಮಾಜಿಕ ನಿಯಂತ್ರಣ.

ಸಾಮಾಜಿಕ ನಿಯಂತ್ರಣದ ಲಕ್ಷಣಗಳು

ಸಾಮಾಜಿಕ ಜೀವನದ ನಿರ್ವಹಣೆಗೆ ಸಾಮಾಜಿಕ ನಿಯಂತ್ರಣ ಅತ್ಯಾವಶ್ಯಕವಾದುದು. ಸಮಾಜದಲ್ಲಿ ಜನರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾ ನಿರೀಕ್ಷಿತ ರೀತಿಯಲ್ಲಿ ವರ್ತಿಸುವಂತೆ ಮಾಡಲು ಸಮಾಜ ತನ್ನದೇ ನಿಯೋಗಗಳ ಮೂಲಕ ನಿಯಂತ್ರಣವನ್ನು ಸಾಧಿಸುತ್ತದೆ. ಅದುವೇ ಸಾಮಾಜಿಕ ನಿಯಂತ್ರಣ. ಇದರ ಮುಖ್ಯ ಲಕ್ಷಣಗಳೆಂದರೆ -

೧. ಸಾಮಾಜಿಕ ನಿಯಂತ್ರಣವು ಸಾಮಾಜಿಕವಾದುದು

ಜನರ ವೈಯಕ್ತಿಕ ವರ್ತನೆಯನ್ನು ಉದ್ದೇಶಿತ ದಿಕ್ಕಿನಲ್ಲಿ ಸಾಗುವಂತೆ ನಿರ್ದೇಶಿಸುವ ವಿಧಾನಗಳೇ ಸಾಮಾಜಿಕ ನಿಯಂತ್ರಣ. ಇದನ್ನು ಸಾಮೂಹಿಕ ನಿಯಂತ್ರಣ ಎನ್ನುತ್ತೇವೆ. ವ್ಯಕ್ತಿಯು ತನ್ನ ವರ್ತನೆಯನ್ನು ಸ್ವಇಚ್ಛೆಯಿಂದ ನಿಗ್ರಹಿಸುವುದನ್ನು ಸ್ವನಿಯಂತ್ರಣ ಎಂಬುದಾಗಿಯೂ, ಆತನು ಸದಸ್ಯನಾಗಿರುವ ಸಮಾಜವು ಆತನ ಮೇಲೆ ಸಾಧಿಸುವ ನಿಯಂತ್ರಣವನ್ನು ಸಾಮಾಜಿಕ ನಿಯಂತ್ರಣ ಎನ್ನುತ್ತೇವೆ. ಆದ್ದರಿಂದ ಅದು ವ್ಯಕ್ತಿಗೆ ಬಾಹ್ಯವಾದುದೂ, 'ಸಾಮಾಜಿಕ'ವಾದುದೂ ಆಗಿರುತ್ತದೆ.

೨. ಸಾಮಾಜಿಕ ನಿಯಂತ್ರಣವು ಎಲ್ಲರ ಒಳಿತಿಗಾಗಿರುತ್ತದೆ

ಸಮಾಜ ತನ್ನ ಸದಸ್ಯರ ಮೇಲೆ ಇಟ್ಟುಕೊಂಡಿರುವ ನಿಯಂತ್ರಣದ ಮುಖ್ಯ ಗುರಿಗಳೇನೆಂದರೆ ನಿಯಮಾವಳಿಗಳಿಗೆ ಅನುವರ್ತನೆ, ಸಾಮಾಜಿಕ ದೃಢತೆ ಹಾಗೂ ನಿರಂತರತೆ. ಇವು ಸಮಾಜದ ಸಮಗ್ರ ಏಳಿಗೆಗಾಗಿರುತ್ತವೆ. ಆದ್ದರಿಂದ ಸಾಮೂಹಿಕ ನಿಯಂತ್ರಣವು ಎಲ್ಲರ ಒಳಿತಿಗಾಗಿರುವ ವ್ಯವಸ್ಥೆಯೇ ಆಗಿರುತ್ತದೆ.

೩. ಸಾಮಾಜಿಕ ನಿಯಂತ್ರಣವು ಹಲವಾರು ವಿಧಾನಗಳನ್ನು ಒಳಗೊಂಡಿರುತ್ತದೆ

ಸಮಾಜ ತನ್ನ ಸದಸ್ಯರ ಮೇಲೆ ನಿಯಂತ್ರಣವನ್ನು ಸಾಧಿಸಲು ಹಲವಾರು ವಿಧಾನಗಳನ್ನು

ಬಳಸುತ್ತದೆ. ಅಂದರೆ ಸಮಾಜವು ಕೈಗೊಳ್ಳುವ ವಿವಿಧ ಕ್ರಮಗಳು, ಸಲಹೆ, ಮನವೊಲಿಕೆ, ನಿರ್ಬಂಧನೆಗಳು ಹಾಗೂ ಬಲಪ್ರಯೋಗಗಳೆಲ್ಲವೂ ಸಾಮಾಜಿಕ ನಿಯಂತ್ರಣದ ವಿವಿಧ ವಿಧಾನಗಳಾಗಿವೆ. ಉದಾಹರಣೆಗೆ, ಶಿಕ್ಷಣ ಎಂಬುದು ಸಮಾಜವು ತನ್ನ ಸದಸ್ಯರ ವರ್ತನೆಯ ಮೇಲೆ ನಿಯಂತ್ರಣವನ್ನು ಉಂಟುಮಾಡಲು ಕೈಗೊಳ್ಳುವ ಒಂದು ಕಾರ್ಯಕ್ರಮವೆನಿಸಿದರೆ, ಜಾಹೀರಾತು, ಪ್ರಚಾರ ಮುಂತಾದವುಗಳು ಕೆಲವು ವಿಧದ ಸಲಹೆಗಳಾಗಿವೆ. ಕಾನೂನಿನ ಮೂಲಕ ನಿರ್ಬಂಧನೆ ಹಾಗೂ ಬಲಪ್ರಯೋಗಗಳನ್ನು ಬಳಸಲಾಗುತ್ತದೆ. ಇವೆಲ್ಲವೂ ಸಾಮಾಜಿಕ ನಿಯಂತ್ರಣದ ವಿವಿಧ ವಿಧಾನಗಳಾಗಿವೆ.

೪. ಸಾಮಾಜಿಕ ನಿಯಂತ್ರಣವನ್ನು ವಿವಿಧ ನಿಯೋಗಗಳ ಮೂಲಕ ಸ್ಥಾಪಿಸಲಾಗುತ್ತದೆ

ಸಮಾಜವು ತನ್ನ ಸದಸ್ಯರ ವರ್ತನೆಯನ್ನು ನಿಯಂತ್ರಿಸಲು ಹಲವಾರು ವಿಧಿ ವಿಧಾನಗಳು ಹಾಗೂ ಕ್ರಮಗಳನ್ನು ಅನುಸರಿಸುತ್ತದೆ. ಆದರೆ ಈ ಹೊಣೆಗಾರಿಕೆಯನ್ನು ಸಮಾಜವು ತನ್ನದೇ ಆದ ನಿಯೋಗಗಳಿಗೆ ವಹಿಸಿರುತ್ತದೆ. ಸಮಾಜದಿಂದ ಸೂಚಿಸಲ್ಪಟ್ಟ ನಿಯೋಗಗಳೇ ಸಾಮಾಜಿಕ ನಿಯಂತ್ರಣವನ್ನು ಕೈಗೊಳ್ಳಲು ಅರ್ಹತೆಯನ್ನು ಪಡೆದಿರುತ್ತದೆ. ಅಂತಹ ನಿಯೋಗಗಳನ್ನು ಔಪಚಾರಿಕ ಹಾಗೂ ಅನೌಪಚಾರಿಕ ನಿಯೋಗಗಳಾಗಿ ವಿಂಗಡಿಸಬಹುದು. ಪದ್ಧತಿಗಳು, ಲೋಕರೂಢಿ, ಲೋಕನೀತಿ, ಮುಂತಾದವುಗಳು ಅನೌಪಚಾರಿಕ ನಿಯೋಗಗಳಾದರೆ ಕಾನೂನು, ರಾಜ್ಯ ಹಾಗೂ ಆರಕ್ಷಕ ವ್ಯವಸ್ಥೆಗಳು ಸಾಮಾಜಿಕ ನಿಯಂತ್ರಣದ ಔಪಚಾರಿಕ ನಿಯೋಗಗಳಾಗಿ ಕೆಲಸ ನಿರ್ವಹಿಸುತ್ತವೆ.

೫. ಸಾಮಾಜಿಕ ನಿಯಂತ್ರಣವು ಸಾರ್ವತ್ರಿಕವೂ, ಅನಿವಾರ್ಯವೂ ಆಗಿದೆ

ಸಾಮಾಜಿಕ ನಿಯಂತ್ರಣ ಸಾರ್ವತ್ರಿಕವಾದುದು. ಸಂಪೂರ್ಣ ಸ್ವಾತಂತ್ರ್ಯದಿಂದ ಕೂಡಿದ ಸಮಾಜದಲ್ಲೂ ಸಾಮಾಜಿಕ ನಿಯಂತ್ರಣ ಇದ್ದೇ ಇರುತ್ತದೆ. ಅದು ಸಮತೋಲನದಿಂದ ಕೂಡಿದ ಸಾಮಾಜಿಕ ಜೀವನಕ್ಕೆ ಅಗತ್ಯವೂ ಅನಿವಾರ್ಯವೂ ಆಗಿದೆ.

೫.೨. ಸಾಮಾಜಿಕ ನಿಯಮಗಳ ಸ್ವರೂಪ-ಅನುವರ್ತನೆ ಮತ್ತು ಅಪವರ್ತನೆ

ಮಾನವ ಸಮಾಜದ ಪ್ರಮುಖ ಲಕ್ಷಣವೇನೆಂದರೆ ಅಲ್ಲಿ ಅರಾಜಕತೆ ಹಾಗೂ ಗೊಂದಲಕ್ಕೆ ಬದಲಾಗಿ ಯಾವಾಗಲೂ ದೃಢತೆ ಹಾಗೂ ಪ್ರಕ್ರಮವಿರುತ್ತದೆ. ಆದರೆ ದಂಗೆಯಂತಹ ಸಂದರ್ಭಗಳಲ್ಲಿ ಗಲಭೆ ಹಾಗೂ ಕ್ಷೋಭೆ ಸಂಭವಿಸಿದರೂ ಪ್ರಕ್ರಮ ಹಾಗೂ ದೃಢತೆ ಕೂಡಲೆ ಮರುಕಳಿಸುತ್ತದೆ. ಇದಕ್ಕೆ ಮುಖ್ಯ ಕಾರಣ ಸಾಮಾಜಿಕ ನಿಯಮಾವಳಿಗಳು.

ಸಾಮಾನ್ಯ ಅರ್ಥದಲ್ಲಿ ನಿಯಮ ಅಂದರೆ ಏನನ್ನಾದರೂ ಅಳೆಯಲು ಇರುವ ಮಾಪನವಾಗಿದೆ. ಕಟ್ಟಡ, ಪೀಠೋಪಕರಣ, ರಸ್ತೆ, ಮುಂತಾದವುಗಳಿಗೆ ನಿರ್ದಿಷ್ಟ ಮಾಪನವಿರುತ್ತದೆ. ಅದರಂತೆ ವರ್ತನೆಗೂ ಒಂದು ಮಾಪನವಿರಬೇಕು. ಅದುವೇ ಸಾಮಾಜಿಕ ನಿಯಮಾವಳಿ. ಅಂದರೆ ಸಾಮಾಜಿಕ ವರ್ತನೆಯನ್ನು ನಿಯಮಾವಳಿಗಳಿಗೆ ಎದುರಾಗಿ ಅಳೆಯಲಾಗುತ್ತದೆ.

ಸಾಮಾಜಿಕ ನಿಯಮಾವಳಿಗಳನ್ನು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಮಿಖಾಯಿಲ್ ಹರಲಾಂಬೋಪರ ಪ್ರಕಾರ ನಿಯಮ ಎಂದರೆ "ನಿರ್ದಿಷ್ಟ ಸನ್ನಿವೇಶಗಳಲ್ಲಿ ಸ್ವೀಕೃತ ಹಾಗೂ ಸಮಂಜಸ ವರ್ತನೆ ಯಾವುದೆಂದು ವ್ಯಾಖ್ಯಾನಿಸುವ ಒಂದು ನಿಶ್ಚಿತ ಮಾರ್ಗಸೂಚಿಯಾಗಿದೆ." ಬ್ರೂಮ್ ಮತ್ತು ಸೆಲ್ಜ್ನಿಕ್‌ರ ಪದಗಳಲ್ಲಿ "ನಿಯಮಗಳೆಂದರೆ ವರ್ತನೆಗಿರುವ ನೀಲಿ ನಕಾಶೆಗಳಾಗಿದ್ದು ಅವುಗಳ ಪರಿಮಿತಿಗಳೊಳಗೆ ವ್ಯಕ್ತಿಗಳು ತಮ್ಮ ಗುರಿಗಳ ಸಾಧನೆಗೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಬಹುದಾಗಿದೆ".

ಮೇಲಿನ ವ್ಯಾಖ್ಯೆಗಳ ಮೂಲಕ ಸಾಮಾಜಿಕ ನಿಯಮಾವಳಿಗಳ ಸ್ವರೂಪವನ್ನು ತಿಳಿದುಕೊಳ್ಳಬಹುದಾಗಿದೆ. ಮೊದಲನೆಯದಾಗಿ, ನಿಯಮಾವಳಿಗಳು ವರ್ತನೆಯ ಮೌಲ್ಯೀಕರಣ ಮಾಡುವ ಮಾಪನಗಳಾಗಿವೆ. ಎರಡನೆಯದಾಗಿ, ಅವುಗಳು ನಿರ್ದಿಷ್ಟ ಸನ್ನಿವೇಶಗಳಲ್ಲಿ ಹೇಗೆ ವರ್ತಿಸಬೇಕೆಂದು ನಿರ್ದೇಶಿಸುವ ಮಾರ್ಗಸೂಚಿಗಳಾಗಿವೆ. ಮೂರನೆಯದಾಗಿ, ವ್ಯಕ್ತಿಗಳು ತಮ್ಮ ಗುರಿಗಳನ್ನು ಯಾವ ಮಿತಿಯೊಳಗೆ ಕಾರ್ಯವೆಸಗಬಹುದೆಂದು ಅವು ಸೂಚಿಸುತ್ತವೆ.

ಕೊನೆಯದಾಗಿ, ಅವುಗಳು ವರ್ತನೆಯ ನಿಯಂತ್ರಕಗಳಾಗಿವೆ.

ಸಾಮಾಜಿಕ ನಿಯಮಾವಳಿಗಳ ಜೊತೆಗೆ ನಿರ್ಬಂಧನೆಗಳಿರುತ್ತವೆ. ಸಾಮಾಜಿಕ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದವರು ಸಮಾಜದ ಪುರಸ್ಕಾರಕ್ಕೆ ಅರ್ಹರಾಗುತ್ತಾರೆ. ನಿಯಮಾವಳಿಗಳನ್ನು ಉಲ್ಲಂಘಿಸಿದವರು ಶಿಕ್ಷೆಗೆ ಒಳಗಾಗುತ್ತಾರೆ. ಆದ್ದರಿಂದ ನಿಯಮಾವಳಿಗಳ ಹಿಂದೆ ಧನಾತ್ಮಕ ಹಾಗೂ ಋಣಾತ್ಮಕ ನಿರ್ಬಂಧನೆಗಳು ಕೆಲಸ ಮಾಡುತ್ತಿರುತ್ತವೆ.

ಸಾಮಾಜಿಕ ನಿಯಮಾವಳಿಗಳಲ್ಲಿ ಹಲವಾರು ವಿಧಗಳಿವೆ. ಆದರೆ ಅವುಗಳು ವರ್ತನೆಯನ್ನು ಹೇಗೆ ನಿರ್ದೇಶಿಸುತ್ತವೆ ಎಂಬುದರ ಆಧಾರದಲ್ಲಿ ನಿಯಮಾವಳಿಗಳನ್ನು ಎರಡು ವಿಧಗಳಾಗಿ ವರ್ಗೀಕರಿಸಬಹುದು.

ಎ. ಧನಾತ್ಮಕ ಅಥವಾ ಸಲಹಾತ್ಮಕ ನಿಯಮಾವಳಿಗಳು

ನಿರ್ದಿಷ್ಟ ಸನ್ನಿವೇಶದಲ್ಲಿ ವರ್ತನೆ ಹೇಗಿರಬೇಕು ಎಂಬುದಾಗಿ ಸೂಚಿಸುವ ನಿಯಮಗಳು ಸಲಹಾತ್ಮಕ ನಿಯಮಗಳು.

ಬಿ. ಋಣಾತ್ಮಕ ಅಥವಾ ನಿಷೇಧಾತ್ಮಕ ನಿಯಮಾವಳಿಗಳು

ನಿರ್ದಿಷ್ಟ ಸನ್ನಿವೇಶದಲ್ಲಿ ವರ್ತನೆ ಹೇಗಿರಬಾರದು ಎಂಬುದಾಗಿ ಸೂಚಿಸುವ ನಿಯಮಗಳು ನಿಷೇಧಾತ್ಮಕ ನಿಯಮಗಳಾಗಿವೆ.

ಅನುವರ್ತನೆ

ಸಾಮಾಜಿಕ ನಿಯಮವು ವರ್ತನೆಗಿರುವ ಮಾಪನವಾಗಿದೆ. ಅದು ವಿಧೇಯತೆಯ ಪ್ರಜ್ಞೆಯನ್ನು ಒಳಗೊಂಡಿದೆ. ಹೀಗಾಗಿ ಜನರು ನಿಯಮಗಳನ್ನು ಪಾಲಿಸುತ್ತಾರೆ. ನಿಯಮಗಳ

ಪಾಲನೆಯನ್ನು ಅನುವರ್ತನೆ ಎನ್ನುತ್ತೇವೆ. ಯಾವ ವರ್ತನೆಯು ನಿಯಮಗಳಿಗೆ ಬದ್ಧವಾಗಿರುತ್ತದೊ ಅದನ್ನು ಅನುವರ್ತನೆ ಎನ್ನಬಹುದು.

ಜನರು ನಿಯಮಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಅಂತರ್ಗತಗೊಳಿಸಿಕೊಂಡಿರುತ್ತಾರೆ. ಹಾಗೆಯೇ ನಿಯಮಗಳು ಉಲ್ಲಂಘಟನೆಯು ತರಬಹುದಾದ ಶಿಕ್ಷೆಯ ಭಯದಿಂದಲೂ ನಿಯಮದ ಅನುವರ್ತನೆ ಉಂಟಾಗುತ್ತದೆ.

ಎಚ್.ಎಂ. ಜಾನ್ಸನ್‌ರ ಪ್ರಕಾರ ಅನುವರ್ತನೆ ಎಂದರೆ ೧. ಸಾಮಾಜಿಕ ನಿಯಮಗಳಿಂದ ನಿರ್ದೇಶಿತವಾದ ವರ್ತನೆ; ಹಾಗೂ ೨. ಸಾಮಾಜಿಕ ನಿಯಮಾವಳಿಗಳು ಅನುಮತಿಸುವ ವರ್ತನೆಯ ವ್ಯಾಪ್ತಿಯೊಳಗೆ ಬರುವ ವರ್ತನೆ.

ಅನುವರ್ತನೆ ಎಂದರೆ ಕೇವಲ ಸಮಾಜವು ಅನುಮತಿಸುವ ವರ್ತನೆಯ ಚೌಕಟ್ಟಿನೊಳಗೆ ಬರುವ ಕ್ರಿಯೆಗಳಾಗಿರದೆ ವ್ಯಕ್ತಿಯು ಪ್ರಜ್ಞಾಪೂರ್ವಕವಾಗಿ ಹಾಗೂ ಉದ್ದೇಶಪೂರ್ವಕವಾಗಿ ನಿಯಮಗಳಿಗೆ ಅನುಗುಣವಾಗಿ ವರ್ತಿಸುವ ವರ್ತನೆಯೇ ಅನುವರ್ತನೆಯಾಗಿದೆ.

ಸಮಾಜದಲ್ಲಿ ನಿಯಮಾವಳಿಗಳು ಇರುವಾಗ ಅವುಗಳನ್ನು ಜನರು ಪಾಲಿಸುತ್ತಾರೆ. ನಿಯಮಗಳಿಗಿರುವ ಅನುವರ್ತನೆಯು ಸಹಜವಾದುದು, ಅನುವರ್ತನೆಗೆ ಹಲವಾರು ಕಾರಣಗಳನ್ನು ಕೊಡಬಹುದು.

ಜಾನ್ಸನರು ಅನುವರ್ತನೆಗಿರುವ ಕಾರಣಗಳನ್ನು ಈ ಕೆಳಗಿನಂತೆ ವಿವರಿಸುತ್ತಾರೆ.

೧. ಸಾಮಾಜೀಕರಣ

ವ್ಯಕ್ತಿಯನ್ನು ಸಾಮಾಜಿಕ ಜೀವಿಯನ್ನಾಗಿಸಿ ಸಮಾಜಕ್ಕೆ ಸೇರ್ಪಡೆಗೊಳಿಸುವ ಪ್ರಕ್ರಿಯೆಯೇ ಸಾಮಾಜೀಕರಣ. ಇದು ವ್ಯಕ್ತಿಯ ಸಾಮಾಜಿಕ ವ್ಯಕ್ತಿತ್ವವನ್ನು ರೂಪಿಸುತ್ತದೆ. ಸಾಮಾಜೀಕರಣದ ಮೂಲಕ ವ್ಯಕ್ತಿಯು ಸಾಮಾಜಿಕ ನಿಯಮಗಳನ್ನು ತನ್ನ ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಂಡು ಪ್ರಜ್ಞಾರಹಿತವಾಗಿ ಪಾಲಿಸುತ್ತಾನೆ. ಆದ್ದರಿಂದ ಸಾಮಾಜೀಕರಣವು ಅನುವರ್ತನೆಯನ್ನು ಉಂಟು ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

೨. ಸಂಘರ್ಷ ನಿವಾರಣೆ

ಜನರು ಸಾಮಾಜಿಕ ಜೀವನದಲ್ಲಿ ಹೆಚ್ಚು ಹೆಚ್ಚು ಚಟುವಟಿಕೆಗಳಲ್ಲಿ ತೊಡಗಿದಂತೆ ಪಾತ್ರ ಸಂಘರ್ಷ ಉಂಟಾಗುತ್ತದೆ. ಒಬ್ಬನು ಎರಡು ಅಥವಾ ಅಧಿಕ ಅಂತಸ್ಥನ್ನು ಏಕಕಾಲದಲ್ಲಿ ಹೊಂದಿದ್ದು ಅವುಗಳಿಗೆ ಅವಲಂಬಿಸಿರುವ ಹೊಣೆಗಾರಿಕೆಯನ್ನು ನಿಭಾಯಿಸು ವಂತಹ ಸಂದರ್ಭ ಉಂಟಾದಾಗ ವಿಭಿನ್ನ ಪಾತ್ರಗಳೊಳಗೆ ಸಂಘರ್ಷ ಉಂಟಾಗುತ್ತದೆ. ಅಂತಹ ಸಂದರ್ಭದಲ್ಲಿ ಸಮಾಜವು ಸಂಘರ್ಷ ನಿವಾರಣೆಗಾಗಿ ಕೆಲವು ಉಪಾಯಗಳನ್ನು ಅನುಸರಿಸುತ್ತದೆ. ಉದಾಹರಣೆಗೆ, ಕೆಲವು ವಿಧದ ವಿನಾಯತಿ, ರಿಯಾಯಿತಿ ಹಾಗೂ ಪರ್ಯಾಯ ವ್ಯವಸ್ಥೆಗಳು ಸಂಘರ್ಷ ನಿವಾರಣಾ ತಂತ್ರವಾಗಿ ಕಾರ್ಯವೆಸಗುತ್ತವೆ. ಉದಾಹರಣೆಗೆ, ರಾಜ್ಯದ ಪ್ರಜೆಯಾಗಿದ್ದು ಒಬ್ಬ ವ್ಯಕ್ತಿಯು ಚುನಾವಣೆಯಲ್ಲಿ ಮತ

ಚಲಾಯಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾನೆ. ಆದರೆ ಆತನು ಚುನಾವಣಾಧಿಕಾರಿಯಾಗಿ ಬೇರೆಡೆಗೆ ಕರ್ತವ್ಯದ ಮೇಲೆ ನಿಯೋಜಿಸಲ್ಪಟ್ಟಾಗ ಮತ ಚಲಾಯಿಸಲು ಅಶಕ್ತನಾಗಬಹುದು. ಅದಕ್ಕಾಗಿ ಆತನಿಗೆ ಅಂಚೆ ಮತದಾನದ ಸೌಲಭ್ಯವನ್ನು ನೀಡಲಾಗುತ್ತದೆ. ಈ ಮೂಲಕ ಆತನ ಕರ್ತವ್ಯಗಳೊಳಗಿನ ಸಂಘರ್ಷವು ನಿವಾರಣೆಯಾದಂತಾಗುತ್ತದೆ. ಈ ರೀತಿಯಾಗಿ ನಿಯಮಗಳೊಳಗೆ ಸಂಘರ್ಷ ಉಂಟಾಗದಂತೆ ಹಾಗೂ ಅನುವರ್ತನೆಯನ್ನು ಉಂಟು ಮಾಡುವಂತೆ ಮಾಡಲಾಗುತ್ತದೆ.

೩. ಶ್ರೇಣಿಕೃತ ವ್ಯವಸ್ಥೆ

ಒಂದು ಸಮಾಜದಲ್ಲಿ ಅಸಂಖ್ಯಾತ ನಿಯಮಗಳಿರುತ್ತವೆ. ಒಬ್ಬನು ನಿಶ್ಚಿತ ಸನ್ನಿವೇಶದಲ್ಲಿ ವಿಭಿನ್ನ ನಿಯಮಾವಳಿಗಳನ್ನು ಪಾಲಿಸಬೇಕಾದ ಸಂದರ್ಭಗಳು ಉಂಟಾಗುತ್ತವೆ. ಒಂದು ನಿಯಮವನ್ನು ಬದಿಗೊತ್ತಿ ಇನ್ನೊಂದನ್ನು ಪಾಲಿಸುವಂತಿರುವುದಿಲ್ಲ. ಹಾಗಾಗಿ ವ್ಯಕ್ತಿಯು ನಿಯಮಗಳ ಪಾಲನೆಯಲ್ಲಿ ಸಂದಿಗ್ಧತೆಗೆ ಒಳಗಾಗಬಹುದು. ಅಂತಹ ಸಂದರ್ಭಗಳಲ್ಲಿ ನಿಯಮಗಳನ್ನು ಅವುಗಳ ಆದ್ಯತೆಯ ಮೇರೆಗೆ ಅನುಸರಿಸಬೇಕಾಗುತ್ತದೆ. ಆದ್ದರಿಂದ ಸಮಾಜವು ನಿಯಮಗಳೊಳಗೆ ಆದ್ಯತೆ ಮೇರೆಗೆ ಶ್ರೇಣೀಕೃತ ವ್ಯವಸ್ಥೆಯನ್ನು ಉಂಟು ಮಾಡುತ್ತದೆ. ಇದು ಎಲ್ಲಾ ನಿಯಮಗಳನ್ನೂ ಪಾಲಿಸಲು ಅನುಕೂಲತೆಯನ್ನು ಸೃಷ್ಟಿಸುತ್ತದೆ.

೪. ಸಾಮಾಜಿಕ ನಿಯಂತ್ರಣ

ಸಾಮಾಜಿಕ ಅನುವರ್ತನೆಗಿರುವ ಇನ್ನೊಂದು ಪ್ರಮುಖ ಕಾರಣ ಸಾಮಾಜಿಕ ನಿಯಂತ್ರಣ. ಜನರು ನಿಯಮಗಳನ್ನು ಪಾಲಿಸುವಂತಾಗಲು ಇರುವ ಪ್ರಮುಖ ಕಾರಣವೇ ಸಾಮಾಜಿಕ ನಿಯಂತ್ರಣಾ ವ್ಯವಸ್ಥೆ. ಇದರಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕ ಸಾಮಾಜಿಕ ನಿಯಂತ್ರಣ ಎಂಬ ಎರಡು ಪ್ರಕಾರಗಳಿವೆ. ವ್ಯಕ್ತಿಗಳ ವರ್ತನೆಯ ಮೇಲೆ ನಿಯಮ ಹಾಗೂ ನಿಬಂಧನೆಗಳ ಪ್ರತ್ಯಕ್ಷ ಹೇರುವಿಕೆಯನ್ನು ಒಳಗೊಂಡಿರುವ ಸಾಮಾಜಿಕ ನಿಯಂತ್ರಣಾ ವ್ಯವಸ್ಥೆಯನ್ನು ಔಪಚಾರಿಕ ಸಾಮಾಜಿಕ ನಿಯಂತ್ರಣ ಎನ್ನುತ್ತೇವೆ. ಇಲ್ಲಿ ನಿಯಮ ಹಾಗೂ ನಿಬಂಧನೆಗಳನ್ನು ಹಾಗೂ ಅವುಗಳನ್ನು ಹೇರುವ ನಿಯೋಗಗಳನ್ನು ಉದ್ದೇಶಪೂರ್ವಕವಾಗಿ ಹಾಗೂ ಎಚ್ಚರಿಕೆಯಿಂದ ರೂಪಿಸಲಾಗಿರುತ್ತದೆ. ಇವುಗಳು ನಿಶ್ಚಿತ ಪುರಸ್ಕಾರ ಹಾಗೂ ಶಿಕ್ಷೆಗಳನ್ನು ಹಾಗೂ ಅವುಗಳನ್ನು ನೀಡುವ ನಿಶ್ಚಿತ ವಿಧಾನಗಳ್ನು ಒಳಗೊಂಡಿವೆ. ಅನೌಪಚಾರಿಕ ಸಾಮಾಜಿಕ ನಿಯಂತ್ರಣದಲ್ಲಿ ನಿಯಮ ಹಾಗೂ ನಿಬಂಧನೆಗಳ ನೇರ ವಿಧಿಸುವಿಕೆ ಇರುವುದಿಲ್ಲ. ಬದಲಿಗೆ ಅದು ಅತ್ಯಂತ ಸಹಜ, ಪರೋಕ್ಷ ಹಾಗೂ ಪ್ರಜ್ಞಾರಹಿತ ಸ್ಥಿತಿಯಲ್ಲಿ ಉಂಟಾಗುತ್ತದೆ. ಸಾಮಾಜಿಕ ನಿಯಂತ್ರಣವು ಅನುವರ್ತನೆಯನ್ನು ಉಂಟು ಮಾಡುವ ಒಂದು ಪ್ರಮುಖ ಸಾಧನವಾಗಿದೆ.

೫. ಆದರ್ಶವಾದಗಳು

ಸಾಮಾಜಿಕ ವ್ಯವಸ್ಥೆ ಹಾಗೂ ಜೀವನದ ಬಗೆಗಿನ ಉನ್ನತ ವಿಚಾರಗಳನ್ನು ಒಳಗೊಂಡಿರುವ ಸಂಕೀರ್ಣ ಹಾಗೂ ವ್ಯವಸ್ಥಿತ ಚಿಂತನೆಯೇ ಆದರ್ಶವಾದ. ಕೆಲವು ಆದರ್ಶವಾದಿ

ಸಿದ್ಧಾಂತಗಳು ನಿಶ್ಚಿತ ಮೌಲ್ಯಗಳು, ಧ್ಯೇಯೋದ್ದೇಶಗಳು ಹಾಗೂ ನಿಯಮಗಳನ್ನು ಪ್ರತಿಪಾದಿಸುತ್ತವೆ. ಅಂತಹ ಆದರ್ಶವಾದಗಳಲ್ಲಿ ವಿಶ್ವಾಸ ಉಳ್ಳವರು ಅಲ್ಲಿ ಕಂಡುಬರುವ ನಿಯಮಗಳನ್ನು ಸ್ವಯಂ ಪ್ರೇರಣೆಯಿಂದ ಅನುಸರಿಸುತ್ತಾರೆ. ಹೀಗೆ ಆದರ್ಶವಾದಗಳು ನಿಯಮಗಳಿಗೆ ಅನುವರ್ತನೆಯನ್ನು ಉಂಟು ಮಾಡುವ ಸಾಧನಗಳಂತೆ ವರ್ತಿಸುತ್ತವೆ. ಅವುಗಳು ಸಾಮಾಜಿಕ ನಿಯಮಗಳಿಗಿರುವ ಬೌದ್ಧಿಕ ಬೆಂಬಲಗಳಾಗಿವೆ.

೬. ಸ್ಥಾಪಿತ ಹಿತಾಸಕ್ತಿ

ಸಾಮಾಜಿಕ ನಿಯಮಾವಳಿಗಳು ಸಾಮಾನ್ಯವಾಗಿ ಸಮಾಜದ ಎಲ್ಲಾ ಜನರ ಏಳಿಗೆಗಾಗಿರುತ್ತವೆ. ಆದರೆ ಕೆಲವೊಂದು ಸಂದರ್ಭಗಳಲ್ಲಿ ಕೆಲವು ನಿಯಮಗಳ ಇರುವಿಕೆ ಯಿಂದ ಒಂದು ನಿಶ್ಚಿತ ವರ್ಗವು ಹೆಚ್ಚಿನ ಪ್ರಯೋಜನ ಅಥವಾ ಲಾಭವನ್ನು ಪಡೆಯ ಬಹುದು. ಆದ್ದರಿಂದ ಅಂತಹ ಸಮೂಹವು ಆ ನಿಯಮದ ಅನುವರ್ತನೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತದೆ. ಅಂತಹ ಸಮೂಹಗಳನ್ನು ಸ್ಥಾಪಿತ ಹಿತಾಸಕ್ತಿ ಸಮೂಹ ಎನ್ನಬಹುದು. ಉದಾಹರಣೆಗೆ ದ್ವಿಚಕ್ರ ವಾಹನ ಸವಾರರು ಶಿರಸ್ತ್ರಾಣವನ್ನು ಕಡ್ಡಾಯವಾಗಿ ಧರಿಸಬೇಕೆಂಬ ನಿಯಮವು ದ್ವಿಚಕ್ರ ವಾಹನ ಸವಾರರ ಸುರಕ್ಷತೆಗಾಗಿ ಇರುತ್ತದೆ. ಆದರೆ ಅಂತಹ ನಿಯಮದ ಇರುವಿಕೆಯಿಂದ ಶಿರಸ್ತ್ರಾಣ ಉತ್ಪಾದನಾ ಘಟಕಗಳು ಲಾಭಗಳಿಸುತ್ತವೆ. ಇಲ್ಲಿ ಶಿರಸ್ತ್ರಾಣ ಉತ್ಪಾದಕರು ಒಂದು ಸ್ಥಾಪಿತ ಹಿತಾಸಕ್ತಿ ಸಮೂಹವಾಗಿದ್ದು ಅಂತಹ ನಿಯಮವನ್ನು ಜಾರಿಗೊಳಿಸುವಂತೆಯೂ ಅದರ ಅನುವರ್ತನೆಯನ್ನು ಕಾದುಕೊಳ್ಳುವ ಸಮೂಹವಾಗಿ ವರ್ತಿಸುತ್ತದೆ.

ಅಪವರ್ತನೆ

ಸಮಾಜದಲ್ಲಿ ನಿಯಮಗಳಿದ್ದಾಗ ಹೆಚ್ಚಿನ ಜನರು ಅದನ್ನು ಪಾಲಿಸುತ್ತಾರೆ. ನಿಯಮಗಳ ಅನುವರ್ತನೆಯು ಸಹಜವೂ, ವ್ಯಾಪಕವೂ ಆಗಿರುತ್ತದೆ. ಆದರೆ ನಿಯಮಗಳ ಉಲ್ಲಂಘನೆಯೂ ಸಂಭವಿಸುತ್ತದೆ. ನಿಯಮಗಳನ್ನು ಮೀರಿ ವರ್ತಿಸುವಿಕೆಯು ಕನಿಷ್ಟಮಟ್ಟ ದಲ್ಲಿದ್ದಾಗ ಅದು ಸಹಜ ಹಾಗೂ ನಗಣ್ಯವಾಗಿರುತ್ತದೆ. ಆದರೆ ಅದು ಅಸಹಜ ಮಟ್ಟಕ್ಕೆ ತಲಪಿದಾಗ ಸಮಾಜ ಅದನ್ನು ಅಪವರ್ತನೆ ಎಂಬುದಾಗಿ ಪರಿಗಣಿಸುತ್ತದೆ.

ಮಾರ್ಶಲ್ ಕ್ಲಿನಾರ್ಡ್‌ರ ಪ್ರಕಾರ ಅಪವರ್ತನೆಯು "ಸಮುದಾಯದ ಸಹನೆಯ ಮಿತಿಯನ್ನು ಸಾಕಷ್ಟು ಪ್ರಮಾಣದಲ್ಲಿ ಮೀರಿ ಮುಂದುವರಿಯುವ ಅಸ್ವೀಕೃತ ದಿಕ್ಕಿನೆಡೆಗೆ ಸಾಗುವ ವರ್ತನೆ"ಯಾಗಿರುತ್ತದೆ. ಈ ಅರ್ಥದಲ್ಲಿ ಅಪರಾಧ ಹಾಗೂ ಬಾಲಾಪರಾಧಗಳು ಅಪವರ್ತನೆಯಾಗಿವೆ.

ಅಪವರ್ತನೆಯ ಲಕ್ಷಣಗಳು

ಅಪವರ್ತನೆ ಎಂದರೆ ದುರ್ನಡತೆ. ಸಮಾಜದ ನಿಯಮಗಳನ್ನು ಉಲ್ಲಂಘಿಸಿ ಸಂಭವಿಸುವ ನಡತೆಯನ್ನು ಅಪವರ್ತನೆ ಎನ್ನುತ್ತೇವೆ. ಅಪವರ್ತನೆ ರಹಿತವಾದ ಸಮಾಜವು ಕಲ್ಪನಾತೀತ

ವಾಗಿದೆ. ಆದರೆ ಎಲ್ಲಾ ಕಡೆಗಳಲ್ಲಿ ಅದು ಒಂದೇ ತೆರನಾಗಿರಲಾರದು ಅಪವರ್ತನೆಯ ಪ್ರಮುಖ ಲಕ್ಷಣಗಳೆಂದರೆ :

೧. ಅಪವರ್ತನೆಯು ಸಾಪೇಕ್ಷವಾದುದು

ಯಾವುದೇ ನಿರ್ದಿಷ್ಟ ವರ್ತನೆಯನ್ನು ನಾವು ಸಾರ್ವತ್ರಿಕವಾಗಿ ಅಪವರ್ತನೆ ಎಂದು ಹೇಳಲಾರೆವು. ಯಾಕೆಂದರೆ ಅದು ಸಮಾಜದ ನಿಯಮಕ್ಕೆ ಅನುಗುಣವಾಗಿ ವ್ಯಾಖ್ಯಾನಿಸಲ್ಪಡುತ್ತದೆ. ಎಲ್ಲಿ ಒಂದು ನಿರ್ದಿಷ್ಟ ನಿಯಮ ಅಸ್ತಿತ್ವದಲ್ಲಿದೆಯೋ ಅಲ್ಲಿ ಅದರ ಉಲ್ಲಂಘನೆಯು ಅಪವರ್ತನೆ ಎಂಬುದಾಗಿ ಗುರುತಿಸಲ್ಪಡುತ್ತದೆ. ನಿಯಮವೇ ಅಸ್ತಿತ್ವದಲ್ಲಿ ಇರದಿದ್ದಾಗ ಅದರ ಉಲ್ಲಂಘನೆಯ ಪ್ರಶ್ನೆಯೇ ಉದ್ಭವಿಸಲಾರದು. ಆದ್ದರಿಂದ ಯಾವುದೇ ನಿರ್ದಿಷ್ಟ ವರ್ತನೆಯು ಸ್ವಭಾವತಃ ಅಪವರ್ತನೆಯಾಗಿರದೆ ಸಮಾಜದ ವ್ಯಾಖ್ಯೆಯಿಂದ ಆ ರೀತಿ ಗುರುತಿಸಲ್ಪಡುತ್ತದೆ.

೨. ಅಪವರ್ತನೆಯು ಸಾರ್ವತ್ರಿಕವಾದುದು

ಅಪವರ್ತನೆಯು ಎಲ್ಲಾ ಕಡೆಗಳಲ್ಲಿ ಸಂಭವಿಸುತ್ತದೆ. ಯಾವುದೇ ಸಮಾಜವು ಇದಕ್ಕೆ ಹೊರತಾಗಿಲ್ಲ. ಹೇಗೆ ಎಲ್ಲಾ ಸಮಾಜಗಳಲ್ಲಿ ತಮ್ಮದೇ ಆದ ನಿಯಮಾವಳಿಗಳಿವೆಯೋ ಹಾಗೆಯೇ ಎಲ್ಲೆಡೆಗಳಲ್ಲೂ ಒಂದಲ್ಲೊಂದು ರೀತಿಯ ಅಪರಾಧಗಳು ಕಂಡುಬರುತ್ತವೆ. ಆದ್ದರಿಂದ ಅಪರಾಧ ಅಥವಾ ಅಪವರ್ತನೆ ರಹಿತ ಸಮಾಜವನ್ನು ನಾವು ಯಾವತ್ತೂ ಊಹಿಸಲಾರೆವು.

೩. ಅಪವರ್ತನೆಯು ಸಹಜವಾದುದು

ನಿಶ್ಚಿತ ಪ್ರಮಾಣದಲ್ಲಿ ಅಪವರ್ತನೆಯು ಎಲ್ಲಾ ಸಮಾಜಗಳಲ್ಲಿ ಇದ್ದೇ ಇರುತ್ತದೆ. ಅದು ಸಮಾಜದ ನೀತಿ ನಿಯಮಾವಳಿಗಳ ಇರುವಿಕೆಯನ್ನು ಜಾಗೃತಗೊಳಿಸುತ್ತದೆ. ಸಂಪೂರ್ಣ ಅಪವರ್ತನಾ ರಹಿತ ಸಮಾಜವನ್ನು ನಾವು ಯಾವತ್ತೂ ಕಾರಣಲಾರೆವು. ಆದರೆ ಅಪವರ್ತನೆಯು ಮಿತಿಮೀರಿದಾಗ ಮಾತ್ರ ಅದು ಅಸಹಜ ಎನಿಸುತ್ತದೆ.

ಅಪವರ್ತನೆಗೆ ಅನುಕೂಲವಾಗುವ ಅಂಶಗಳು

ಅಪವರ್ತನೆಯು ಎಲ್ಲಾ ಸಮಾಜಗಳಲ್ಲಿ ಒಂದೇ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಹಾಗೆಯೇ ಎಲ್ಲಾ ನಿಯಮಗಳೂ ಕೂಡ ಒಂದೇ ಪ್ರಮಾಣದಲ್ಲಿ ಉಲ್ಲಂಘಿಸಲ್ಪಡುವುದಿಲ್ಲ. ಕೆಲವೊಂದು ಕಡೆಗಳಲ್ಲಿ ಅಪವರ್ತನೆಯ ಪ್ರಮಾಣ ಅಧಿಕವಾಗಿದ್ದರೆ ಇನ್ನು ಕೆಲವೆಡೆ ಅದು ಕಡಿಮೆ ಪ್ರಮಾಣದಲ್ಲಿರಬಹುದು. ಹಾಗೆಯೇ ಅದು ಕಾಲದಿಂದ ಕಾಲಕ್ಕೆ ಬದಲಾಗಬಹುದು. ಅಪವರ್ತನೆಯ ಪ್ರಮಾಣವನ್ನು ಗಣನೀಯವಾಗಿ ನಿರ್ಧರಿಸುವ ಪ್ರಮುಖ ಅಂಶಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ದೋಷಪೂರಿತ ಸಾಮಾಜೀಕರಣ

ಹೆತ್ತವರು ತಮ್ಮ ಮಕ್ಕಳಲ್ಲಿ ನಿಯಮಗಳಿಗೆ ಸಂಬಂಧಿಸಿದಂತೆ ನಿರ್ಲಿಪ್ತ ಮನೋಭಾವ

ವನ್ನು ರೂಪಿಸಿದಾಗ ಅದು ದೋಷಪೂರಿತ ಸಾಮಾಜೀಕರಣ ಎನಿಸುತ್ತದೆ. ಅಂತಹ ಸಂದರ್ಭಗಳಲ್ಲಿ ಮಕ್ಕಳು ನಿಯಮದ ಬಗೆಗಿನ ಗೌರವವನ್ನು ಕಳೆದುಕೊಳ್ಳುವ ಸಾಧ್ಯತೆಗಳಿದ್ದು ಅಪವರ್ತನೆಯು ಹೆಚ್ಚಬಹುದು. ಅದರಂತೆ ಮನೆಯಲ್ಲಿಯೇ ಅಪರಾಧಿ ಪರಿಸರವಿದ್ದಾಗ ಮಕ್ಕಳು ದುರ್ನಡತೆಯನ್ನು ಸುಲಭದಲ್ಲಿ ಮೈಗೂಡಿಸಿಕೊಳ್ಳುತ್ತಾರೆ.

೨. ದುರ್ಬಲ ನಿರ್ಬಂಧನೆಗಳು

ಅಪವರ್ತನೆಗೆ ನೀಡುವ ಶಿಕ್ಷೆಯು ದುರ್ಬಲವಾಗಿದ್ದಾಗ ನಿಯಮಗಳ ಉಲ್ಲಂಘನೆಯು ಹೆಚ್ಚುತ್ತದೆ. ನಿಯಮಗಳು ಎಷ್ಟೇ ಶ್ರೇಷ್ಠವಾಗಿದ್ದು ಕಟ್ಟುನಿಟ್ಟಾಗಿದ್ದರೂ ಅದರ ಹಿಂದಿರುವ ನಿರ್ಬಂಧನೆಗಳು ದುರ್ಬಲವಾಗಿದ್ದರೆ ಅಪವರ್ತನೆಯ ಪ್ರಮಾಣ ಕಡಿಮೆಯಾಗಲಾರದು.

೩. ದುರ್ಬಲ ಹೇರುವಿಕೆ

ನಿಯಮವು ಕಟ್ಟುನಿಟ್ಟಾಗಿದ್ದು ನಿರ್ಬಂಧನೆಯು ಪ್ರಬಲವಾಗಿದ್ದಾಗಿಯೂ ಅದರ ಹೇರುವಿಕೆಯು ಬಹಳ ದುರ್ಬಲವಾಗಿದ್ದಾಗ ಅಪವರ್ತನೆಯು ಹೆಚ್ಚುತ್ತದೆ. ಆದ್ದರಿಂದ ಸಮಾಜದಲ್ಲಿ ಕಟ್ಟುನಿಟ್ಟಾದ ನಿಯಮ ಹಾಗೂ ಪ್ರಬಲ ನಿರ್ಬಂಧನೆಗಳು ಇದ್ದರೆ ಸಾಲದು. ಅವುಗಳ ಹೇರುವಿಕೆಯೂ ಕೂಡ ಬಲಶಾಲಿಯಾಗಿರಬೇಕು.

೪. ಸುಲಭ ಸಮರ್ಥನೆ

ಅಪರಾಧ ಎಸಗಿದವರು ಸಾಮಾನ್ಯವಾಗಿ ತಮ್ಮ ವರ್ತನೆಯನ್ನು ಸಮರ್ಥಿಸಲು ಯತ್ನಿಸುತ್ತಾರೆ. ಹೆಚ್ಚು ಕಡಿಮೆ ನಂಬಲರ್ಹ ವಿವೇಚನೆಯನ್ನು ಅಥವಾ ವಿವರಣೆಯನ್ನು ನೀಡಿ ತಮ್ಮ ವರ್ತನೆಯು ಸರಿ ಎಂದು ವಾದಿಸಲು ತೊಡಗುತ್ತಾರೆ. ಅಪವರ್ತನೆಗೆ ಸಮಾಜವು ನೀಡುವ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಪ್ರತಿಯೊಬ್ಬ ಅಪರಾಧಿಯು ಪ್ರಯತ್ನಿಸುತ್ತಾನೆ. ಈ ನಿಟ್ಟಿನಲ್ಲಿ ಆತನು ತನ್ನ ನಡತೆಗೆ ಸಮರ್ಥನೆಯನ್ನು ಹುಡುಕುತ್ತಾನೆ. ಅಂತಹ ಸಮರ್ಥನೆಗೆ ಸಾಕಷ್ಟು ಸುಲಭ ಅವಕಾಶಗಳಿದ್ದಾಗ ಅಪವರ್ತನೆಯ ಪ್ರಮಾಣ ಅಧಿಕವಾಗುತ್ತದೆ.

೫. ನಿಯಮಾವಳಿಗಳ ಅಪರಿಮಿತ ವ್ಯಾಪ್ತಿ

ನಿಯಮಗಳು ನಿರ್ದಿಷ್ಟವೂ, ಸಂಕ್ಷಿಪ್ತ ಹಾಗೂ ನಿಖರವೂ ಆಗಿರಬೇಕು. ನಿಯಮದ ವ್ಯಾಪ್ತಿಯು ಅನಿಶ್ಚಿತ ಹಾಗೂ ಅಸ್ಪಷ್ಟವಾಗಿದ್ದಾಗ ಅಪರಾಧಿಗಳು ಅದರ ದುರುಪಯೋಗವನ್ನು ಮಾಡುತ್ತಾರೆ.

೬. ಉಲ್ಲಂಘನೆಯ ಗೌಪ್ಯತೆ

ನಿಯಮದ ಉಲ್ಲಂಘನೆಯನ್ನು ಒಳಗೊಂಡ ಕ್ರಿಯೆಯು ಇತರರ ಅಥವಾ ಕಾನೂನಿನ ಕಣ್ಣಿಗೆ ಕಾಣಿಸದಂತೆ ತನ್ನ ಗೌಪ್ಯತೆಯನ್ನು ಕಾಯ್ದುಕೊಳ್ಳಲು ಅವಕಾಶ ಹೊಂದಿದ್ದರೆ ಅಂತಹ ಅಪರಾಧಗಳು ಸಮಾಜದಲ್ಲಿ ಹೆಚ್ಚುವ ಸಾಧ್ಯತೆಗಳಿರುತ್ತವೆ. ಲೈಂಗಿಕ ಅಪರಾಧಗಳು, ಕಳ್ಳಸಾಗಾಣಿಕೆ ಮುಂತಾದವುಗಳು ಹೆಚ್ಚಿನ ಗೌಪ್ಯತೆಗೆ ಒಳಗಾಗುವ ಅಪರಾಧಗಳಾಗಿರುತ್ತವೆ.

೭. ಅನ್ಯಾಯಯುತ ಅಥವಾ ದೋಷಪೂರಿತ ಹೇರುವಿಕೆ

ನಿಯಮಗಳ ಹೇರುವಿಕೆಯಲ್ಲಿ ಅಸಮಾನತೆ, ಅವ್ಯವಹಾರ, ಹಾಗೂ ಲಂಚಗುಳಿತನ ದಂತಹ ದೋಷಗಳಿದ್ದಾಗ ಜನರಿಗೆ ನಿಯಮಗಳ ಮೇಲಿರುವ ಗೌರವವು ಕಡಿಮೆಯಾಗುತ್ತದೆ. ಅಂತಹ ಸಂದರ್ಭಗಳಲ್ಲಿ ನಿಯಮದಿಂದ ವಂಚಿತರಾದವರು ಅಪವರ್ತನೆಯಲ್ಲಿ ತೊಡಗುವ ಸಾಧ್ಯತೆಗಳಿರುತ್ತವೆ.

೮. ಬಲಿಪಶುವಿನ ಸಹಕಾರ

ಕೆಲವೊಂದು ವಿಧದ ಅಪರಾಧಗಳಲ್ಲಿ ಬಲಿಪಶುಗಳು ಅಪರಾಧಿಗಳ ಜೊತೆಗೆ ಸಹಕರಿಸಿ ರುವುದು ಕಂಡುಬರುತ್ತದೆ. ಉದಾಹರಣೆಗೆ, ಜೂಜಾಟ, ವೇಶ್ಯಾವಾಟಿಕೆ ಮುಂತಾದ ಅಪರಾಧಗಳು ಬಲಿಪಶುವಿನ ಸಹಕಾರವಿಲ್ಲದೆ ಸಂಭವಿಸಲಾರವು.

೯. ಸಾಮಾಜಿಕ ನಿಯಂತ್ರಣ-ನಿಯೋಗಗಳ ನಿರ್ಲಿಪ್ತತೆ

ಸಮಾಜದಲ್ಲಿ ಸಾಮಾಜಿಕ ನಿಯಂತ್ರಣ-ನಿಯೋಗಗಳಂತಿರುವ ಪಾಲಕರು, ಪೋಷಕರು, ಶಿಕ್ಷಕರು, ಆರಕ್ಷಕರು, ಅಧಿಕಾರಿಗಳು ಮುಂತಾದವರು ನಿಯಮಗಳ ಬಗ್ಗೆ ನಿರ್ಲಿಪ್ತ ಭಾವನೆಯನ್ನು ಹೊಂದಿದ್ದರೆ ಅವರು ಪರೋಕ್ಷವಾಗಿ ಹಾಗೂ ಪ್ರಜ್ಞಾರಹಿತವಾಗಿ ನಿಯಮಗಳ ಉಲ್ಲಂಘನೆಯನ್ನು ಪ್ರಚೋದಿಸಿದಂತಾಗುತ್ತದೆ.

೧೦. ಉಪಸಂಸ್ಕೃತಿಯ ಮೂಲಕ ಅಪವರ್ತನೆಯ ನ್ಯಾಯಸಮ್ಮತತೆ

ಬಾಹ್ಯ ಸಮಾಜಕ್ಕೆ ಅಪವರ್ತನೆ ಎನಿಸಿರುವ ಅಂಶಗಳನ್ನು ಕೆಲವೊಂದು ಉಪಸಂಸ್ಕೃತಿಯ ಸಮೂಹಗಳು ಅಂಗೀಕರಿಸಿರುತ್ತವೆ. ಉದಾಹರಣೆಗೆ ಭೂಗತ ಜಗತ್ತು, ಡಕಾಯಿತರ ಸಮೂಹ ಹಾಗೂ ಮಾಫಿಯಾ ದಳಗಳು ಹೊರ ಸಮಾಜದ ನಿಯಮಗಳಿಗೆ ವ್ಯತಿರಿಕ್ತವಾದ ನಿಯಮಗಳನ್ನು ಹೊಂದಿರುತ್ತವೆ. ಉಪಸಂಸ್ಕೃತಿಯನ್ನು ಪಾಲಿಸುವವರು ಅಪವರ್ತನೆಯಲ್ಲಿ ತೊಡಗುತ್ತಾರೆ.

೧೧. ಅಪವರ್ತನಾ ಸಮೂಹಗಳಿಗಿರುವ ವಿಧೇಯತಾ ಭಾವನೆ

ಅಪವರ್ತನೆಯ ಸಮೂಹವನ್ನು ಸೇರಿದ ವ್ಯಕ್ತಿಯು ಅಲ್ಲಿನ ನಿಯಮಗಳಿಗೆ ವಿಧೇಯ ನಾಗಿರಲು ತೊಡಗುತ್ತಾನೆ. ಅಲ್ಲಿನ ನಿಯಮಗಳಿಗೆ ಅವಿಧೇಯತೆಯನ್ನು ತೋರಿದವರಿಗೆ ಕಠಿಣ ಶಿಕ್ಷೆಯು ಲಭಿಸುತ್ತದೆ. ಉದಾಹರಣೆಗೆ ಭಯೋತ್ಪಾದಕ ಗುಂಪುಗಳಲ್ಲಿನ ಸದಸ್ಯರು ತಮ್ಮದೇ ಆದ ನಿಯಮಗಳಿಗೆ ಬದ್ಧರಾಗಿರುತ್ತಾರೆ. ಅವರ ಅತಿಯಾದ ಏಕತಾಭಾವನೆಯು ತಾವು ಕೈಗೊಳ್ಳುವ ಕೃತ್ಯಗಳಲ್ಲಿ ಅವರಿಗೆ ಅತಿಹೆಚ್ಚು ಸಮರ್ಪಣಾ ಭಾವವನ್ನು ಉಂಟು ಮಾಡುತ್ತದೆ. ಅವರು ತಾವು ಕೈಗೊಳ್ಳುವ ಅಪರಾಧಗಳಲ್ಲಿ ಆತ್ಮ ತ್ಯಾಗಕ್ಕೂ ಸಿದ್ಧರಾಗುತ್ತಾರೆ.

೫.೩. ಸಾಮಾಜಿಕ ನಿಯಂತ್ರಣದ ನಿಯೋಗಗಳು

ಸಾಮಾಜಿಕ ನಿಯಂತ್ರಣವು ಸಾರ್ವತ್ರಿಕವಾದುದು. ಯಾಕೆಂದರೆ ಅದು ಎಲ್ಲಾ ಸಮೂಹಗಳಲ್ಲೂ, ಸಮಾಜಗಳಲ್ಲೂ ಕಂಡುಬರುವ ಒಂದು ವ್ಯವಸ್ಥೆಯಾಗಿದೆ. ಆದರೆ

ಅದು ಸಮೂಹದಿಂದ ಸಮೂಹಕ್ಕೂ, ಸಮಾಜದಿಂದ ಸಮಾಜಕ್ಕೆ ಹಾಗೂ ಸಮಯದಿಂದ ಸಮಯಕ್ಕೆ ಬದಲಾಗುತ್ತದೆ. ಆದ್ದರಿಂದ ಸಾಮಾಜಿಕ ನಿಯಂತ್ರಣದ ವಿಧಾನಗಳಲ್ಲಿ ಹಾಗೂ ನಿಯೋಗಗಳಲ್ಲಿ ವಿವಿಧ ಪ್ರಕಾರಗಳು ಕಂಡುಬರುತ್ತವೆ. ಸಮಾಜದ ವಿವಿಧ ವಿಭಾಗಗಳು ತನ್ನ ಸದಸ್ಯರ ಮೇಲೆ ನಿಯಂತ್ರಣವನ್ನು ಸಾಧಿಸುತ್ತದೆ. ಅದು ನೇರ ಅಥವಾ ಪರೋಕ್ಷವು, ಉದ್ದೇಶಪೂರ್ವಕ ಅಥವಾ ಅತಿ ಸಹಜವೂ ಆಗಿರಬಹುದು. ಆದ್ದರಿಂದ ಸಾಮಾಜಿಕ ನಿಯಂತ್ರಣದಲ್ಲಿ ವಿವಿಧ ವಿಧಗಳು ಹುಟ್ಟಿಕೊಂಡಿರುತ್ತವೆ.

ಸಮಾಜಶಾಸ್ತ್ರಜ್ಞರು ಸಾಮಾಜಿಕ ನಿಯಂತ್ರಣವನ್ನು ಔಪಚಾರಿಕ ಹಾಗೂ ಅನೌಪಚಾರಿಕ ಸಾಮಾಜಿಕ ನಿಯಂತ್ರಣ ಎಂಬುದಾಗಿ ವಿಂಗಡಿಸುತ್ತಾರೆ.

ಅ. ಔಪಚಾರಿಕ ಸಾಮಾಜಿಕ ನಿಯಂತ್ರಣಾ ನಿಯೋಗಗಳು

ಸಮಾಜವು ಅಸಂಖ್ಯಾತ ವ್ಯಕ್ತಿಗಳಿಂದ ಕೂಡಿದೆ. ವ್ಯಕ್ತಿಗಳು ಒಬ್ಬರಿಗೊಬ್ಬರು ಪರಸ್ಪರ ವಿಭಿನ್ನ ಸ್ವಭಾವದವರಾಗಿರುತ್ತಾರೆ. ಅವರವರ ಆಸಕ್ತಿ, ಸಾಮರ್ಥ್ಯ ಹಾಗೂ ಮನೋಭಾವ ಗಳಿಗೆ ಅನುಗುಣವಾಗಿ ವ್ಯಕ್ತಿಗಳ ನಡುವೆ ಸಾಕಷ್ಟು ವ್ಯತ್ಯಾಸ ಉಂಟಾಗುತ್ತದೆ. ಆದರೂ ಕೂಡ ಅವರು ಸ್ವೇಚ್ಛಾಚಾರದಿಂದ ವರ್ತಿಸದೆ ಸಮಾಜದಲ್ಲಿ ಸಾಮೂಹಿಕವಾಗಿ ಅಂಗೀಕೃತ ವಿಧಾನಗಳನ್ನು ಪಾಲಿಸುತ್ತಾರೆ. ಇದಕ್ಕೆ ಕಾರಣ ಸಮಾಜದಲ್ಲಿ ಸಾಮಾಜಿಕ ನಿಯಂತ್ರಣವೇ ಆಗಿದೆ.

ಸಾಮಾಜಿಕ ನಿಯಂತ್ರಣವನ್ನೆ, ತನ್ನ ಉದ್ದೇಶಿತ ಹಾಗೂ ಪ್ರತ್ಯಕ್ಷ ಕಾರ್ಯವನ್ನಾಗಿ ನಿರ್ವಹಿಸುವ ಸಮಾಜದ ಘಟಕವನ್ನು ಸಾಮಾಜಿಕ ನಿಯಂತ್ರಮದ ಔಪಚಾರಿಕ ನಿಯೋಗ ಎಂಬುದಾಗಿ ಕರೆಯಲಾಗುತ್ತದೆ. ರಾಜ್ಯ, ಆರಕ್ಷಕ ವ್ಯವಸ್ಥೆ, ಕಾನೂನು, ಮುಂತಾದವುಗಳು ಸಾಮಾಜಿಕ ನಿಯಂತ್ರಣದ ಔಪಚಾರಿಕ ನಿಯೋಗಗಳಾಗಿವೆ.

ಸಾಮಾಜಿಕ ನಿಯಂತ್ರಣದ ನಿಯೋಗವಾಗಿ ರಾಜ್ಯ

ರಾಜಕೀಯವಾಗಿ ವ್ಯವಸ್ಥಿತವಾದ ಸಮಾಜವೇ ರಾಜ್ಯ. ಆಧುನಿಕ ರಾಜ್ಯದ ಉಗಮವನ್ನು ಪ್ರಾಚೀನ ಗ್ರೀಕ್ 'ನಗರ ರಾಜ್ಯ'ದ ಪರಿಕಲ್ಪನೆಯಲ್ಲಿ ಕಾಣಬಹುದು. ಹಲವಾರು ರಾಜಕೀಯ ತತ್ವಜ್ಞಾನಿಗಳು ರಾಜ್ಯದ ಉಗಮದ ಬಗೆಗೆ ವಿವಿಧ ಸಿದ್ಧಾಂತಗಳನ್ನು ಪ್ರತಿಪಾದಿಸಿರುತ್ತಾರೆ. ಅರಾಜಕತೆ ಹಾಗೂ ಅನಾಗರಿಕತೆಯಿಂದ ಜರ್ಜರಿತವಾದ ಪುರಾತನ ಸಮಾಜದಲ್ಲಿ ವ್ಯವಸ್ಥಿತ ಸಾಮಾಜಿಕ ಜೀವನವನ್ನು ರೂಪಿಸಲು ರಾಜ್ಯದ ಉಗಮ ಉಂಟಾಯಿತು.

ಆಧುನಿಕ ಕಾಲದ ರಾಜ್ಯವು ನಾಲ್ಕು ಪ್ರಮುಖ ಘಟಕಗಳನ್ನು ಒಳಗೊಂಡಿದೆ :

ಎ. ಜನಸಂಖ್ಯೆ

ರಾಜ್ಯವು ಜನರಿಂದ ತುಂಬಿದೆ. ಅಸಂಖ್ಯಾತ ಜನರು ಒಟ್ಟು ಸೇರಿ ಒಂದೆಡೆ ಜೀವಿಸುವುದೇ ರಾಜ್ಯದ ಅಸ್ತಿತ್ವಕ್ಕೆ ಕಾರಣವಾಗಿದೆ. ರಾಜ್ಯದ ಸದಸ್ಯರಾದ ಜನರನ್ನು ಪ್ರಜೆಗಳು ಎಂಬುದಾಗಿ ಕರೆಯಲಾಗುತ್ತದೆ. ಅದು ತನ್ನ ಪ್ರಜೆಗಳಿಗೆ 'ಪೌರತ್ವ'ವನ್ನು ನೀಡುವ ನಿಯಮಗಳ ಮೂಲಕ

ತನ್ನ ಸದಸ್ಯರ ಸಂಖ್ಯೆಯನ್ನು ನಿಯಂತ್ರಿಸುತ್ತದೆ. ಈ ರೀತಿಯಾಗಿ ಗುರುತಿಸಲ್ಪಟ್ಟ ಪ್ರಜೆಗಳು ಆ ರಾಜ್ಯದ ಶಾಸನಗಳಿಗೆ ಬದ್ಧರಾಗಿರುತ್ತಾರೆ.

ಬಿ. ಭೂಪ್ರದೇಶ

ರಾಜ್ಯ ಎಂಬ ಸಮೂಹವು ನಿರ್ದಿಷ್ಟ ಭೂ ಪ್ರದೇಶವನ್ನು ಹೊಂದಿರುತ್ತದೆ. ರಾಜ್ಯದ ಮೇರೆಗಳನ್ನು ಗಡಿಗಳು ಎಂಬುದಾಗಿ ಹೇಳಬಹುದು. ರಾಜ್ಯದ ಗಡಿಗಳನ್ನು ಮೀರಿ ಸಂಚರಿಸುವುದು ನಿಷಿದ್ಧವಾಗಿರುತ್ತದೆ. ನೆರೆ ರಾಜ್ಯಗಳು ತಮ್ಮ ತಮ್ಮ ಭೂಪ್ರದೇಶದ ಮಿತಿಗಳನ್ನು ಪರಸ್ಪರ ಒಪ್ಪಿತವಾದ ಗಡಿಗಳಿಂದ ನಿರ್ಧರಿಸುತ್ತವೆ.

ಸಿ. ಸರಕಾರ

ರಾಜ್ಯವೆಂಬ ಸಮೂಹದ ಕಾರ್ಯವೆಸಗುವಿಕೆಗೆ ಅಗತ್ಯವಿರುವ ಸಂಘಟನೆಯೇ ಸರಕಾರ. ರಾಜ್ಯದ ಆಡಳಿತದ ಹೊಣೆ ಹೊತ್ತಿರುವ ನಿಯೋಗವೇ ಸರಕಾರ. ಪ್ರಾಚೀನ ಕಾಲದಲ್ಲಿ, ರಾಜಮಹಾರಾಜರುಗಳ ಆಳ್ವಿಕೆಯ ಕಾಲದಲ್ಲಿ ಏಕಾಧಿಪತ್ಯದಂತಹ ಆಡಳಿತ ವ್ಯವಸ್ಥೆಯೇ ಅಂದಿನ ಸರಕಾರವಾಗಿತ್ತು. ಅದರಂತೆ ಶ್ರೀಮಂತರ ಆಳ್ವಿಕೆ, ಸಾಮೂಹಿಕ ಆಡಳಿತ ವ್ಯವಸ್ಥೆ, ನಿರಂಕುಶವಾದ ಹಾಗೂ ಅತ್ಯಾಧುನಿಕ ಆಡಳಿತ ಕ್ರಮವಾದ ಪ್ರಜಾಪ್ರಭುತ್ವವು ಸರಕಾರದ ವಿವಿಧ ಪ್ರಕಾರಗಳಾಗಿವೆ.

ಡಿ. ಸಾರ್ವಭೌಮ ಅಧಿಕಾರ

ರಾಜ್ಯದ ನಾಲ್ಕನೇ ಪ್ರಮುಖ ಅಂಶವೇ ಸಾರ್ವಭೌಮ ಅಧಿಕಾರ. ರಾಜ್ಯವು ತನ್ನ ಪ್ರಜೆಗಳ ಮೇಲೆ ಅತ್ಯುನ್ನತ ಅಧಿಕಾರವನ್ನು ಹೊಂದಿದೆ. ಅದುವೆ ಸಾರ್ವಭೌಮ ಅಧಿಕಾರ. ಅದು ರಾಜ್ಯದ ನಿಯೋಗವಾದ ಸರಕಾರದಲ್ಲಿ ಅಸ್ತಿತ್ವನ್ನು ಹೊಂದಿರುತ್ತದೆ. ಸರಕಾರವು ಈ ಅಧಿಕಾರವನ್ನು ಕಾನೂನಿನ ಮೂಲಕ ಜಾರಿಗೆ ತರುತ್ತದೆ.

ಸಾಮಾಜಿಕ ನಿಯಂತ್ರಣದ ನಿರ್ಯೋಗವಾಗಿ ರಾಜ್ಯವು ನಿರ್ವಹಿಸುವ ಕಾರ್ಯಗಳನ್ನು ಈ ಕೆಳಗಿನಂತೆ ಗುರುತಿಸಬಹುದು. ರಾಜ್ಯವು ಸಮಾಜದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗುವುದರ ಮೂಲಕ ಹಾಗೂ ಸಾಮಾಜಿಕ ಆಗುಹೋಗುಗಳಿಂದ ದೂರವಿರುವ ಮೂಲಕವೂ ಸಾಮಾಜಿಕ ನಿಯಂತ್ರಣದಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

೧. ಸಮಾಜದ ಕೆಲವೊಂದು ವ್ಯವಹಾರಗಳಿಗೆ ರಾಜ್ಯವೇ ಏಕೈಕ ಜವಾಬ್ದಾರಿಯುತ ನಿಯೋಗವಾಗಿರುತ್ತದೆ. ಉದಾಹರಣೆಗೆ ಕಾನೂನು ಹಾಗೂ ಶಿಸ್ತುಪಾಲನೆ, ನ್ಯಾಯ ತೀರ್ಮಾನ ಹಾಗೂ ಸಮಾನತೆಯನ್ನು ಸ್ಥಾಪಿಸುವುದು, ಮುಂತಾದ ಕಾರ್ಯಗಳನ್ನು ರಾಜ್ಯವೇ ಕೈಗೊಳ್ಳಬೇಕಾಗಿರುತ್ತದೆ. ಸಮಾಜದ ಇನ್ಯಾವುದೇ ನಿಯೋಗಗಳು ಈ ಕ್ಷೇತ್ರದಲ್ಲಿ ಹಸ್ತಕ್ಷೇಪವೆಸಗಬಾರದು.

೨. ಸಮಾಜದ ಕೆಲವು ವ್ಯವಹಾರಗಳನ್ನು ಇತರ ನಿಯೋಗಗಳಿಂದ ಉತ್ತಮ ರೀತಿಯಲ್ಲಿ ನಿರ್ವಹಿಸಲು ರಾಜ್ಯವೇ ಯೋಗ್ಯವಾಗಿರುತ್ತದೆ. ಶಿಕ್ಷಣ, ಆರ್ಥಿಕ ಸಮಾನತೆ, ಸಾರ್ವಜನಿಕ

ಕಲ್ಯಾಣ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಸಾಮಾಜಿಕ ಭದ್ರತೆ ಒದಗಿಸುವುದು ಮುಂತಾದ ವಿಚಾರಗಳು ಖಾಸಗಿ ಕ್ಷೇತ್ರದಲ್ಲಿರುವುದಕ್ಕಿಂತಲೂ ಸಾರ್ವಜನಿಕ ಕ್ಷೇತ್ರದಲ್ಲಿದ್ದರೆ ಹೆಚ್ಚು ಪರಿಣಾಮಕಾರಿಯಾಗಿರಬಹುದು.

೩. ಸಮಾಜ ಇನ್ನು ಕೆಲವು ಕಾರ್ಯಗಳಲ್ಲಿ ರಾಜ್ಯವು ಪ್ರವೇಶಿಸದಿರುವುದೇ ಸಾಮಾಜಿಕ ನಿಯಂತ್ರಣದ ಹಿತದೃಷ್ಟಿಯಿಂದ ಯೋಗ್ಯವಾಗಿರುತ್ತದೆ. ಉದಾಹರಣೆಗೆ ಮತಧರ್ಮ, ಕಲೆ, ಸಂಪ್ರದಾಯ, ಕೋಮು ಸಮುದಾಯದ ಸಂಸ್ಕೃತಿಯ ಸಂರಕ್ಷಣೆಯಂತಹ ವ್ಯವಹಾರಗಳಲ್ಲಿ ರಾಜ್ಯವು ಹಸ್ತಕ್ಷೇಪ ನಡೆಸಿದರೆ ಸಮಾಜದ ಜನರಲ್ಲಿ ಒಡಕು ಹಾಗೂ ಭಿನ್ನತೆಯು ಉಂಟಾಗಬಹುದು. ಆದ್ದರಿಂದ ಇಂತಹ ಕ್ಷೇತ್ರಗಳಿಂದ ಸರಕಾರವು ದೂರವಿರುವುದೇ ಸಮರ್ಥ ಸಾಮಾಜಿಕ ನಿಯಂತ್ರಣಕ್ಕೆ ಅಗತ್ಯವಾಗಿರುತ್ತದೆ.

೪. ಸಮಾಜದ ಇನ್ನು ಕೆಲವು ವಿಚಾರಗಳನ್ನು ರಾಜ್ಯವು ಕಡ್ಡಾಯವಾಗಿ ಸ್ಪರ್ಶಿಸಬಾರದು. ಜನಾಭಿಪ್ರಾಯವನ್ನು ರೂಪಿಸುವ ಕಾರ್ಯಗಳಂತಹ ವಿಷಯಗಳಲ್ಲಿ ರಾಜ್ಯವು ಯಾವತ್ತೂ ಪ್ರವೇಶಿಸಬಾರದು.

ಸಾಮಾಜಿಕ ನಿಯಂತ್ರಣದ ನಿಯೋಗವಾಗಿ ಕಾನೂನು

ರಾಜಕೀಯವಾಗಿ ವ್ಯವಸ್ಥಿತ ಸಮಾಜವೇ ರಾಜ್ಯ. ಅದರ ಅಧಿಕೃತ ನಿಯೋಗವೇ ಸರಕಾರ. ರಾಜ್ಯದ ಪ್ರಮುಖ ಘಟಕವಾದ ಸಾರ್ವಭೌಮ ಅಧಿಕಾರವು ಅದರ ಸರಕಾರದಲ್ಲಿ ಅಸ್ತಿತ್ವ ಹೊಂದಿರುತ್ತದೆ. ಸರಕಾರ ಈ ಅಧಿಕಾರವನ್ನು ಕಾನೂನಿನ ಮೂಲಕ ಚಲಾಯಿಸುತ್ತದೆ.

ರಾಜ್ಯವೆಂಬ ಪರಿಕಲ್ಪನೆಯು ಸಮಾಜದಲ್ಲಿ ಮೂಡಿ ಬಂದಾಗಿನಿಂದಲೇ ಕಾನೂನಿನ ಅಸ್ತಿತ್ವವು ಉಂಟಾಗಿರುತ್ತದೆ. ಮಾನವನ ವರ್ತನೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ನಿಯಂತ್ರಿಸಬಲ್ಲ ನಿಯೋಗವೇ ಕಾನೂನು.

ಕಾನೂನಿನ ಅರ್ಥ ವಿವರಣೆಯನ್ನು ಎರಡು ಪ್ರಮುಖ ದೃಷ್ಟಿಕೋನಗಳ ಮೂಲಕ ಕೈಗೊಳ್ಳಬಹುದು. ಮೊದಲನೆಯದು ನ್ಯಾಯಶಾಸ್ತ್ರೀಯ ದೃಷ್ಟಿಕೋನವಾಗಿರುತ್ತದೆ. ಅದು ಕಾನೂನನ್ನು ಒಂದು ಆದೇಶ ಅಥವಾ ರಾಜಾಜ್ಞೆ ಎಂದು ವ್ಯಾಖ್ಯಾನಿಸುತ್ತದೆ. ಉದಾಹರಣೆಗೆ **ರೋಸ್ಕೊ ಪೌಂಡರ** ಪ್ರಕಾರ, "ರಾಜಕೀಯವಾಗಿ ವ್ಯವಸ್ಥಿತವಾದ ಸಮಾಜದ ಬಲಪ್ರಯೋಗ ದಿಂದ ಉಂಟಾಗುವ ಸಾಮಾಜಿಕ ನಿಯಂತ್ರಣವೇ ಕಾನೂನು". **ಸಾಲ್ಮಂಡ** ಮಾತಿನಲ್ಲಿ ಹೇಳುವುದಾದರೆ "ನ್ಯಾಯ ನಿರ್ವಹಣೆಯಲ್ಲಿ ರಾಜ್ಯವು ಮಾನ್ಯತೆಗೊಳಿಸುವ ಹಾಗೂ ಅನ್ವಯಗೊಳಿಸುವ ತತ್ವಗಳ ಒಂದು ವ್ಯವಸ್ಥೆಯೇ ಕಾನೂನು". **ಇಮಾನ್ಯೂವಲ್ ಕಾಂಟರ** ಅಭಿಪ್ರಾಯದಲ್ಲಿ ಕಾನೂನು ಎಂದರೆ "ಒಂದು ಕ್ರಿಯೆಯ ಅಗತ್ಯತೆಯನ್ನು ಪ್ರಕಟಿಸುವ ಸೂತ್ರವೇ ಆಗಿದೆ". **ಆಸ್ಟಿನರ** ಪ್ರಕಾರ ಕಾನೂನು ಎಂಬುದು ಶ್ರೇಷ್ಠ ವ್ಯಕ್ತಿಯು ನಿಕೃಷ್ಟ ವ್ಯಕ್ತಿಯ ಮೇಲೆ ಹೇರುವ ಆದೇಶವೇ ಆಗಿದೆ. ಎರಡನೆಯದು ಸಮಾಜಶಾಸ್ತ್ರೀಯ ದೃಷ್ಟಿಕೋನವಾಗಿದೆ. ಇಲ್ಲಿ ಕಾನೂನನ್ನು ಉತ್ತಮ ನಡತೆಯ ಆಳ್ವಿಕೆ ಎಂದು ಪರಿಗಣಿಸಲಾಗಿದೆ. **ಮೆಕೈವರ್** ಮತ್ತು **ಪೇಜರು** ಕಾನೂನನ್ನು ಈ ರೀತಿ ವ್ಯಾಖ್ಯಾನಿಸುತ್ತಾರೆ, "ರಾಜ್ಯದ

ನ್ಯಾಯಾಲಯವು ನಿರ್ದಿಷ್ಟ ಸನ್ನಿವೇಶಗಳಲ್ಲಿ ಅನ್ವಯವಾಗುವಂತೆ ಮಾನ್ಯತೆ ಮಾಡಿ ಅರ್ಥವಿವರಣೆ ನೀಡುವ ನಿಯಮಾವಳಿಗಳ ಸಮುಚ್ಚಯವಾಗಿದೆ". ಈ ದೃಷ್ಟಿಯಲ್ಲಿ ಕಾನೂನು ಎಂಬುದು ನಡತೆಯ ನಿಯಮಗಳು ಅಥವಾ ವರ್ತನೆಯ ಮಾದರಿ ಅಥವಾ ಮಾಪನಗಳು ಎಂಬುದಾಗಿ ಪರಿಗಣಿಸಬಹುದಾದ ಅಂಶವಾಗಿರುತ್ತದೆ. ಹೋಬೆಲ್‌ರ ಪ್ರಕಾರ "ಕಾನೂನು ಸಾಮಾಜಿಕ ನಿಯಮಾವಳಿಗಳ ಅಂಗವೇ ಆಗಿರುತ್ತದೆ". ಯಾವ ಸಾಮಾಜಿಕ ನಿಯಮದ ಉಲ್ಲಂಘನೆಯು ಅಥವಾ ಕಡೆಗಣಿಸುವಿಕೆಯು ನಿಶ್ಚಿತವಾದ ಶಿಕ್ಷೆ ಅಥವಾ ಶಿಕ್ಷೆಯ ಹೇರುವಿಕೆಯ ಭಯದಿಂದ ನಿಯಂತ್ರಿತವಾಗುತ್ತದೆಯೋ ಅಂತಹ ನಿಯಮವನ್ನು 'ಕಾನೂನು' ಎಂದು ಹೇಳಬಹುದು. ಇಲ್ಲಿ ಶಿಕ್ಷೆಯನ್ನು ನೀಡುವ ಅಧಿಕಾರವನ್ನು ಸಮಾಜವು ಸಾಮಾಜಿಕವಾಗಿ ಮಾನ್ಯತೆ ಪಡೆದ ವ್ಯಕ್ತಿ ಅಥವಾ ಸಮೂಹಕ್ಕೆ ನಿಯೋಜಿಸಿದ್ದು ಆ ಶಿಕ್ಷೆಯು ಕಠಿಣ ದೈಹಿಕ ಶಿಕ್ಷೆ ಅಥವಾ ದಂಡವೂ ಆಗಿರಬಹುದು.

ಸಾಮಾಜಿಕ ನಿಯಂತ್ರಣದ ನಿಯೋಗವಾಗಿ ಕಾನೂನಿನ ಮುಖ್ಯ ಲಕ್ಷಣಗಳೇನೆಂದರೆ :

೧. ಅದು ರಾಜ್ಯವು ತನ್ನ ಪ್ರಜೆಗಳಿಗೆ ಸಲಹೆ ಮಾಡುವ ವರ್ತನಾ ನಿಯಮಗಳು ಹಾಗೂ ವ್ಯವಹಾರಗಳ ನಿಬಂಧನೆಗಳನ್ನು ಒಳಗೊಂಡಿರುತ್ತದೆ.

೨. ರಾಜ್ಯದ ನಿರ್ದಿಷ್ಟ ಪ್ರಾಧಿಕಾರದ ಮೂಲಕ ರೂಪಿಸಲ್ಪಟ್ಟ, ಜಾರಿಗೊಳಿಸಲ್ಪಟ್ಟ ನಿಯಮಗಳೇ ಶಾಸನಗಳಾಗಿವೆ.

೩. ಕಾನೂನು ನಿಶ್ಚಿತ, ಸ್ಪಷ್ಟ ಹಾಗೂ ಸಂಕ್ಷಿಪ್ತ ರೀತಿಯಲ್ಲಿ ರೂಪಿಸಲ್ಪಟ್ಟಿರುತ್ತದೆ.

೪. ಕಾನೂನು ನಡತೆಯ ಬಾಹ್ಯ ಅಂಶಗಳನ್ನು ಮಾತ್ರ ನಿಯಂತ್ರಿಸಬಲ್ಲುದಾಗಿದೆ.

೫. ಕಾನೂನು ಸಮಾನ ಸನ್ನಿವೇಶದಲ್ಲಿ ಎಲ್ಲರಿಗೂ ಒಂದೇ ರೀತಿಯಲ್ಲಿ ಅನ್ವಯವಾಗುತ್ತದೆ.

೬. ಪ್ರತಿಯೊಬ್ಬರೂ ಕಾನೂನಿನ ಇರುವಿಕೆಯನ್ನು ತಿಳಿದಿರಲೇಬೇಕು ಹಾಗೂ ಕಾನೂನಿನ ಉಲ್ಲಂಘನೆಯು ಶಿಕ್ಷೆಯನ್ನು ದೊರಕಿಸುವಂತಾಗಿಸುತ್ತದೆ.

ಸಾಮಾಜಿಕ ನಿಯಂತ್ರಣದ ಒಂದು ನಿಯೋಗವಾಗಿ ಕಾನೂನು ನಿರ್ವಹಿಸುವ ಪ್ರಮುಖ ಕಾರ್ಯಗಳನ್ನು ಈ ಕೆಳಗಿನಂತೆ ವಿವರಿಸಬಹುದು.

೧. ಕಾನೂನು ಸಹಜೀವನದ ಕೆಲವು ಸರಳ ನಿಯಮಗಳನ್ನು ಸ್ಥಾಪಿಸಲು ಹಾಗೂ ನಿರ್ವಹಿಸಲು ಉದ್ದೇಶಿಸಿರುತ್ತದೆ.

೨. ಸಂಘರ್ಷ ನಿವಾರಣೆಯ ಕೆಲವು ತತ್ವಗಳನ್ನು ಹಾಗೂ ವಿಧಾನಗಳನ್ನು ಕಾನೂನು ಒದಗಿಸುತ್ತದೆ.

೩. ರಚನಾತ್ಮಕ ಹಾಗೂ ಉತ್ಪಾದಕ ಸಂಬಂಧಗಳನ್ನು ರಕ್ಷಿಸುವ ಹಾಗೂ ಖಚಿತಗೊಳಿಸುವ ಕಾರ್ಯವನ್ನು ಕಾನೂನು ನಿರ್ವಹಿಸುತ್ತದೆ.

ಔಪಚಾರಿಕ ಸಾಮಾಜಿಕ ನಿಯಂತ್ರಣವು ಬಲಪ್ರಯೋಗಾತ್ಮಕ ಸ್ವರೂಪದಿಂದ ಕೂಡಿರುತ್ತದೆ. ಅದು ಒತ್ತಡ ಹೇರುವಿಕೆ, ನಿರ್ದಿಷ್ಟ ತರಬೇತಿ ನೀಡುವಿಕೆ, ನಿಷೇಧ ಹಾಗೂ

ನಿರ್ಬಂಧ ವಿಧಿಸುವಿಕೆ, ಬಹಿಷ್ಕಾರ, ಶಿಸ್ತುಕ್ರಮ, ಎಚ್ಚರಿಕೆ, ದಂಡ ಹಾಗೂ ದೈಹಿಕ ಹಿಂಸೆ ನೀಡುವಿಕೆಯಂತಹ ಉಗ್ರಕ್ರಮಗಳಿಂದ ಕೂಡಿರುತ್ತದೆ.

ಆ. ಅನೌಪಚಾರಿಕ ಸಾಮಾಜಿಕ ನಿಯಂತ್ರಣ

ಸಮಾಜದಲ್ಲಿ ತನಗೆ ವಹಿಸಲ್ಪಟ್ಟ ಇತರ ಕಾರ್ಯಗಳನ್ನು ನಿರ್ವಹಿಸುವಾಗ ಪರೋಕ್ಷವಾಗಿ ಹಾಗೂ ಪ್ರಜ್ಞಾರಹಿತವಾಗಿ ಸಾಮಾಜಿಕ ನಿಯಂತ್ರಣವನ್ನು ನಿರ್ವಹಿಸುವ ನಿಯೋಗಗಳನ್ನು ಅನೌಪಚಾರಿಕ ನಿಯೋಗಗಳು ಎಂಬುದಾಗಿ ಕರೆಯುತ್ತೇವೆ. ಇಲ್ಲಿ ಬಲಪ್ರಯೋಗಕ್ಕೆ ಬದಲಾಗಿ ನಿಯಮಗಳ ಮೈಗೂಡಿಸುವಿಕೆ ಹಾಗೂ ಸಾಮಾಜಿಕ ಮೌಲ್ಯ ಹಾಗೂ ವರ್ತನಾ ನಮೂನೆಗಳ ಅಂತರ್ಗತಗೊಳಿಸಿಕೊಳ್ಳುವಿಕೆಗೆ ಹೆಚ್ಚಿನ ಒತ್ತು ನೀಡುತ್ತದೆ. ಇದು ಸಾಮಾಜೀಕರಣ, ಮೌಲ್ಯಗಳ ಹಾಗೂ ವರ್ತನಾ ನಮೂನೆಗಳ ಅಂತರ್ಗತ ಗೊಳಿಸಿಕೊಳ್ಳುವಿಕೆ, ಸಾಮಾಜಿ ಕ್ರಮಗಳು, ವಿಧಿಗಳು, ನಿಯಮ ಹಾಗೂ ಕಾನೂನುಗಳಿಗೆ ಗೌರವ ಹಾಗೂ ಐಚ್ಛಿಕ ವಿಧೇಯತೆಯಂತಹ ಕ್ರಮಗಳ ಮೂಲಕ ನಿಯಂತ್ರಣವನ್ನು ಸಾಧಿಸುತ್ತದೆ.

ಅನೌಪಚಾರಿಕ ಸಾಮಾಜಿಕ ನಿಯಂತ್ರಣದ ನಿಯೋಗವಾಗಿ ಪದ್ಧತಿಗಳು

ನಮ್ಮ ದಿನನಿತ್ಯದ ಜೀವನದಲ್ಲಿ ನಾವು ಅಪರಿಮಿತ ಚಟುವಟಿಕೆಗಳಲ್ಲಿ ತೊಡಗಿರುತ್ತೇವೆ. ಆಹಾರ ಸೇವಿಸುವುದು, ಸಂಭಾಷಣೆ ಮಾಡುವುದು, ಭೇಟಿಯಾಗುವುದು, ಮನರಂಜನೆಯಲ್ಲಿ ತೊಡಗುವುದು, ಹೀಗೆ ಹತ್ತು ಹಲವು ವಿಧದ ಕ್ರಿಯೆಗಳೇ ನಮ್ಮ ದಿನನಿತ್ಯದ ಜೀವನದಲ್ಲಿ ತುಂಬಿರುತ್ತವೆ. ಆದರೆ ಇದ್ಯಾವುದನ್ನೂ ನಾವು ನಮಗೆ ಇಷ್ಟ ಬಂದ ರೀತಿಯಲ್ಲಿ ಕೈಗೊಳ್ಳುವುದಿಲ್ಲ. ಬದಲಿಗೆ, ನಮ್ಮಲ್ಲಿ ಕೆಲವು ಸಾಮಾನ್ಯವಾಗಿ ಪಾಲಿಸಲ್ಪಡುವ ವರ್ತನಾ ಕ್ರಮಗಳೂ ಹವ್ಯಾಸೀ ರೂಪದ ನಡವಳಿಕೆಗಳಿರುತ್ತವೆ. ಅವುಗಳು ಜನಾಭಿಪ್ರಾಯದ ಬೆಂಬಲವನ್ನು ಪಡೆದ ಹಾಗೂ ಸಾಮಾನ್ಯ ಅಂಗೀಕಾರಕ್ಕೊಳಗಾದ ಅಂಶಗಳಾಗಿವೆ. ಇವುಗಳನ್ನೇ ನಾವು ಪದ್ಧತಿಗಳು, ಲೋಕರೂಢಿ ಹಾಗೂ ಲೋಕನೀತಿಗಳೆಂಬುದಾಗಿ ಹೆಸರಿಸುತ್ತೇವೆ. ಇವೆಲ್ಲವೂ ಸಾಮಾಜಿಕ ನಿಯಂತ್ರಣದ ಅನೌಪಚಾರಿಕ ನಿಯೋಗಗಳಾಗಿರುತ್ತವೆ. ಪದ್ಧತಿಗಳನ್ನು ಹಲವಾರು ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ.

ಕಿಂಗ್ಸ್‌ಲೇ ಡೇವಿಸರು ಪದ್ಧತಿಗಳನ್ನು "ತಲೆಮಾರುಗಳಿಂದೀಚೆಗೆ ಪುನರಾವರ್ತನೆಗೊಂಡು ಬೆಳೆದು ಬಂದಿರುವ ಆಚರಣೆಗಳು" ಎಂದು ವ್ಯಾಖ್ಯಾನಿಸುತ್ತಾರೆ. ಅವುಗಳು ಗತಕಾಲದಲ್ಲಿ ಅನುಸರಿಸಲ್ಪಟ್ಟು ಬೆಳೆದು ಬಂದಿರುವ ಆಚರಣೆಗಳಾದ್ದರಿಂದಲೇ ಪಾಲಿಸಬೇಕಾದವುಗಳೆಂದು ಪರಿಗಣಿಸಲ್ಪಡುತ್ತವೆ.

ಮೆಕೈವರ್ ಮತ್ತು **ಪೇಜ**ರು ಪದ್ಧತಿಗಳನ್ನು ಸಾಮಾಜಿಕವಾಗಿ ಮಾನ್ಯತೆ ಪಡೆದ ಕ್ರಿಯಾ ವಿಧಾನಗಳು ಎಂದು ಉಲ್ಲೇಖಿಸುತ್ತಾರೆ. **ಬೊಗಾರ್ಡ**ಸರ ಮಾತಿನಲ್ಲಿ ಹೇಳುವುದಾದರೆ "ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಗೊಂಡಿರುವ, ಅಂತೆಯೇ ಸ್ವೀಕರಿಸಲ್ಪಟ್ಟ ಹಾಗೂ ಉತ್ತಮ ರೀತಿಯಲ್ಲಿ ಸ್ಥಾಪಿಸಲ್ಪಟ್ಟ ಸಮೂಹದಿಂದ ಅಂಗೀಕೃತವಾದ ಸಾಮಾಜಿಕ

ನಿಯಂತ್ರಣದ ತಂತ್ರಗಳೇ ಪದ್ಧತಿಗಳು". ಪದ್ಧತಿಗಳು ಸಾರ್ವತ್ರಿಕವಾಗಿವೆ. ಎಲ್ಲಾ ಸಮಾಜಗಳಲ್ಲೂ ಪದ್ಧತಿಗಳು ಇದ್ದೇ ಇರುತ್ತವೆ. ಆದರೆ ಅವುಗಳು ಸಮಾಜದಿಂದ ಸಮಾಜಕ್ಕೆ, ಸಮೂಹದಿಂದ ಸಮೂಹಕ್ಕೆ ಹಾಗೂ ಸಮಯದಿಂದ ಸಮಯಕ್ಕೆ ಬದಲಾಗುತ್ತವೆ. ಉದಾಹರಣೆಗೆ ಕೆಲವೆಡೆ ಬಹುಪತ್ನಿತ್ವ ಆಚರಣೆಯಲ್ಲಿದ್ದರೆ ಕೆಳವೆಡೆ ಏಕಪತ್ನಿತ್ವ, ಕೆಲವೆಡೆ ವರದಕ್ಷಿಣೆಯೂ ಇನ್ನು ಕೆಲವೆಡೆ ವಧುದಕ್ಷಿಣೆ ಪದ್ಧತಿ ಆಚರಣೆ ಯಲ್ಲಿರುತ್ತದೆ. ಅಂತೆಯೇ, ಕುಟುಂಬ, ಶಿಕ್ಷಣ, ಉದ್ಯೋಗ, ವಾಣಿಜ್ಯ, ಮನರಂಜನೆ, ಇತ್ಯಾದಿ ಎಲ್ಲಾ ಕ್ಷೇತ್ರಗಳಲ್ಲಿ ವಿಶಿಷ್ಟ ಪದ್ಧತಿಗಳಿರುತ್ತವೆ. ಆದ್ದರಿಂದ ಪದ್ಧತಿಗಳು ಸಾಮಾಜಿಕ ಜೀವನದ ಅತಿ ಪ್ರಮುಖ ಘಟಕವಾಗಿರುತ್ತವೆ. ಪದ್ಧತಿಗಳು ಕೆಲವು ಪ್ರಮುಖ ಲಕ್ಷಣಗಳನ್ನು ಒಳಗೊಂಡಿರುತ್ತವೆ.

೧. ಪದ್ಧತಿಗಳು ಸಾಮಾಜಿಕವಾದ ಸಂಗತಿಗಳು

ವ್ಯಕ್ತಿಯೊಬ್ಬನಿಗೆ ಹವ್ಯಾಸವಿದ್ದಂತೆ ಸಮೂಹಕ್ಕೆ ಪದ್ಧತಿ ಇರುತ್ತದೆ. ಒಂದು ನಿರ್ದಿಷ್ಟ ಕ್ರಿಯಾ ವಿಧಾನ ಅಥವಾ ಆಚರಣೆಯನ್ನು ಒಂದು ಸಮೂಹ ಅಥವಾ ಸಮುದಾಯದವರು ದೀರ್ಘಕಾಲದಿಂದ ಪಾಲಿಸುತ್ತಾ ಬಂದರೆ ಅದು ಪದ್ಧತಿ ಎನಿಸುತ್ತದೆ. ಹವ್ಯಾಸವು ವೈಯಕ್ತಿಕ ಲಕ್ಷಣವಾಗಿದ್ದರೆ ಪದ್ಧತಿಯು ಸಾಮಾಜಿಕ ವಿಷಯವಾಗಿರುತ್ತದೆ. ಪದ್ಧತಿಗಳು ಮಾನವನ ಸಾಮಾಜಿಕ ವರ್ತನೆಯನ್ನು ಎಲ್ಲಾ ಕ್ಷೇತ್ರಗಳಲ್ಲಿ ನಿಯಂತ್ರಿಸುತ್ತವೆ ಹಾಗೂ ಅವುಗಳು ಸಮಾಜದ ಸಾಂಸ್ಕೃತಿಕ ಪರಂಪರೆಯ ಉತ್ಪನ್ನಗಳಾಗಿರುತ್ತವೆ. ಅವು ಗತಕಾಲದ ಉನ್ನತ ಅಂಶಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುತ್ತವೆ.

೨. ಪದ್ಧತಿಗಳು ಏಕಪ್ರಕಾರದ ಕ್ರಿಯಾ ವಿಧಾನಗಳನ್ನು ಸೃಷ್ಟಿಸುತ್ತವೆ

ಜನರ ಜೀವನದಲ್ಲಿ ಎದುರಾಗುವ ಎಲ್ಲಾ ಸನ್ನಿವೇಶಗಳಲ್ಲೂ ಹೇಗೆ ವರ್ತಿಸಬೇಕು ಎಂಬುದಕ್ಕೆ ಈಗಾಗಲೇ ಸಿದ್ಧಪಡಿಸಿದ ವರ್ತನಾ ಕ್ರಮಗಳಂತಿರುವ ಪದ್ಧತಿಗಳು ಸೂಕ್ತ ಮಾರ್ಗದರ್ಶನವನ್ನು ಒದಗಿಸುತ್ತವೆ. ವ್ಯಕ್ತಿಗೆ ನಿರ್ದಿಷ್ಟ ಸನ್ನಿವೇಶವು ಹೊಸತೆನಿಸಿದರೂ ಪದ್ಧತಿಯನ್ನು ಪಾಲಿಸುವುದರ ಮೂಲಕ ಅದು ಆತನಿಗೆ ಕಷ್ಟ ಎನಿಸಲಾರದು. ಅಲ್ಲದೆ, ಎಲ್ಲರೂ ನಿರ್ದಿಷ್ಟ ಸನ್ನಿವೇಶದಲ್ಲಿ ಹೇಗೆ ವರ್ತಿಸಬೇಕು ಎಂಬುದಕ್ಕೆ ಪದ್ಧತಿಗಳು ಮಾರ್ಗದರ್ಶನ ನೀಡುವುದರಿಂದ ಎಲ್ಲರ ವರ್ತನೆಯಲ್ಲಿ ಏಕರೂಪತೆ ಉಂಟಾಗುತ್ತದೆ. ಇತರರ ವರ್ತನೆಯನ್ನು ನಿರೀಕ್ಷಿಸುವುದೂ ಇದರಿಂದ ಸಾಧ್ಯವಾಗುತ್ತದೆ.

೩. ಪದ್ಧತಿಗಳನ್ನು ಪಾಲಿಸಲೇಬೇಕೆಂಬ ನಿರ್ಬಂಧನೆಗಳಿರುವುದರಿಂದ ಅವುಗಳು ನಿಯಮಾತ್ಮಕ ಮೌಲ್ಯವುಳ್ಳವುಗಳಾಗಿರುತ್ತವೆ. ಪದ್ಧತಿಗಳನ್ನು ಉಲ್ಲಂಘಿಸುವಂತಿಲ್ಲ. ಪದ್ಧತಿಗಳ ಉಲ್ಲಂಘನೆಗೆ ಸಮಾಜವೇ ನಿರ್ದಿಷ್ಟ ಶಿಕ್ಷೆ ನೀಡುತ್ತದೆ. ಪದ್ಧತಿಗಳನ್ನು ಸಾಮಾನ್ಯವಾಗಿ ಎಲ್ಲರೂ ಪಾಲಿಸುತ್ತಾರೆ. ಯಾಕೆಂದರೆ ಪದ್ಧತಿಗಳ ಹಿಂದೆ ನಾಲ್ಕು ಪ್ರಮುಖ ಬಲಗಳು ಕಂಡುಬರುತ್ತವೆ : ಎ. ಹವ್ಯಾಸದ ಬಲ, ಬಿ. ಅಲೌಕಿಕ ಶಕ್ತಿಯ ಭಯ, ಸಿ. ಜನಾಭಿಪ್ರಾಯದ ಬೆಂಬಲ ಹಾಗೂ ಡಿ. ಸಂಪ್ರದಾಯದ ಗೌರವ.

ಪದ್ಧತಿಗಳು ಸಮಾಜದ ಸಾಮಾಜಿಕ ಹಿನ್ನೆಲೆಯ ಖಜಾನೆ ಇದ್ದಂತಿರುತ್ತವೆ. ಸಮಾಜದ ಹಳೆ ತಲೆಮಾರಿನ ಜನರ ಅನುಭವದ ಉತ್ತಮ ಅಂಶಗಳನ್ನು ಅವು ಸಂರಕ್ಷಿಸುತ್ತವೆ. ಪದ್ಧತಿಗಳು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುತ್ತವೆ. ಪದ್ಧತಿಗಳನ್ನು ಪಾಲಿಸುವುದರ ಮೂಲಕ ವ್ಯಕ್ತಿಯ ವ್ಯಕ್ತಿತ್ವವು ಪರಿಪೂರ್ಣಗೊಳ್ಳುತ್ತದೆ. ಪದ್ಧತಿಗಳು ಜನರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತವೆ. ಸಾಮಾಜಿಕ ಜೀವನದ ಪ್ರಮುಖ ಕ್ಷೇತ್ರಗಳಿಗೆ ಸುತ್ತುವರಿದು ಪದ್ಧತಿಗಳು ಬೆಳೆದು ಬರುವುದರಿಂದ ಅವುಗಳು ಮಾನವನ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತವೆ.

ಸಾಮಾಜಿಕ ನಿಯಂತ್ರಣದಲ್ಲಿ ಪದ್ಧತಿಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಪದ್ಧತಿಗಳ ಲಕ್ಷಣಗಳ ಅಧ್ಯಯನದ ಮೂಲಕ ಅವುಗಳು ಸಾಮಾಜಿಕ ನಿಯಂತ್ರಣದ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಗಮನಿಸಬಹುದಾಗಿದೆ.

ಮೊದಲನೆಯದಾಗಿ, ಪದ್ಧತಿಗಳು ಸಾಮಾಜಿಕವಾದುದಾಗಿರುವುದರಿಂದ ಜನರಲ್ಲಿ ಐಕ್ಯತೆ, ಏಕರೂಪತೆ ಹಾಗೂ ದೃಢತೆಯನ್ನು ಉಂಟುಮಾಡುತ್ತವೆ. ಈ ಮೂಲಕ ವ್ಯಕ್ತಿಗಳು ಸ್ವೇಚ್ಛಾಚಾರದಿಂದ ವರ್ತಿಸುವುದನ್ನು ತಡೆಗಟ್ಟಿ, ವರ್ತನೆಯಲ್ಲಿ ಸಮನ್ವಯತೆಯನ್ನು ಮೂಡಿಸುತ್ತವೆ.

ಎರಡನೆಯದಾಗಿ, ಏಕಪ್ರಕಾರದ ಕ್ರಿಯಾವಿಧಾನಗಳನ್ನು ಹಾಗೂ ಸಿದ್ಧಪಡಿಸಿದ ವರ್ತನಾಕ್ರಮಗಳನ್ನು ಒದಗಿಸುವುದರ ಮೂಲಕ ಪದ್ಧತಿಗಳು ಅಪರಿಚಿತ ಹಾಗೂ ಅನಿರೀಕ್ಷಿತ ಸನ್ನಿವೇಶಗಳನ್ನು ಸರಳಗೊಳಿಸುತ್ತವೆ. ಅದು ವ್ಯಕ್ತಿಯು ತಿಳುವಳಿಕೆಯ ಕೊರತೆಯಿಂದ ಎಸಗಬಹುದಾದ ತಪ್ಪುಗಳನ್ನು ಕಡಿಮೆಗೊಳಿಸುತ್ತದೆ.

ಕೊನೆಯದಾಗಿ, ಹಿಂದಿನ ಅನುಭವದ ಉತ್ತಮ ಅಂಶಗಳನ್ನೇ ಒಳಗೊಂಡಿರುವ ಪದ್ಧತಿಗಳು ಸಮಾಜದ ಕಾನೂನು, ಆಡಳಿತ ಹಾಗೂ ವ್ಯವಹಾರಗಳಿಗೆ ಭದ್ರ ಬುನಾದಿಯನ್ನು ಹಾಕಿಕೊಡುತ್ತವೆ. ಈ ಮೂಲಕ ಪದ್ಧತಿಗಳು ಸಾಮಾಜಿಕ ನಿಯಂತ್ರಣವನ್ನು ಕೈಗೊಳ್ಳುತ್ತವೆ.

ಲೋಕರೂಢಿಗಳು

ನಮ್ಮ ಸಾಮಾಜಿಕ ಜೀವನವು ಹಲವಾರು ಸಾಮಾನ್ಯ ಸಮಸ್ಯೆಗಳಿಂದಲೇ ತುಂಬಿದೆ. ಬಟ್ಟೆಬರೆಗಳನ್ನು ಉಡುವುದು, ಸಂಭಾಷಣೆ ನಡೆಸುವುದು, ಆಹಾರ ಸೇವಿಸುವುದು, ಗೌರವ ಸೂಚಿಸುವುದು, ಸಭೆ ನಡೆಸುವುದು, ಹೀಗೆ ಹಲವಾರು ಸಾಮಾನ್ಯ ಸಮಸ್ಯೆಗಳು ಎದುರಾಗುತ್ತವೆ. ಆದರೆ ನಾವು ಯಾವತ್ತೂ ಇವುಗಳನ್ನು ನಮಗಿಷ್ಟ ಬಂದಂತೆ ನಿರ್ವಹಿಸುವುದಿಲ್ಲ. ಬದಲಿಗೆ. ನಮ್ಮಲ್ಲಿ ಹಲವಾರು ಮಾನ್ಯತೆ ಪಡೆದ ಹಾಗೂ ವ್ಯಾಪಕವಾಗಿ ಸ್ವೀಕೃತ ವಿಧಾನಗಳಿರುತ್ತವೆ. ಅವುಗಳೇ ಲೋಕರೂಢಿಗಳು.

ಲೋಕರೂಢಿಯು ಆಂಗ್ಲ ಪದವಾದ 'ಫೋಕ್‌ವೇಸ್' ಎಂಬ ಪದವನ್ನು ಡಬ್ಲ್ಯೂ.ಜಿ. ಸಮ್ನರರು ರಚಿಸಿದರು. 'ಫೋಕ್‌ವೇಸ್' (೧೯೦೬) ಎಂಬ ತಮ್ಮ ಕೃತಿಯಲ್ಲಿ ಅವರು ಈ ಕೆಳಗಿನಂತೆ ವ್ಯಾಖ್ಯಾನಿಸುತ್ತಾರೆ. "ಸಾಮಾನ್ಯ ಕ್ರಿಯೆಗಳು ಪದೇ ಪದೇ ಪುನರಾವರ್ತನೆ

ಗೊಂಡಾಗ ಉತ್ಪನ್ನವಾಗುವ ಹಾಗೂ ಅಧಿಕ ಸಂಖ್ಯೆಯಲ್ಲಿ ಜನರು ಸಾಮರಸ್ಯದಿಂದ ವರ್ತಿಸುವ ಅಥವಾ ಸಮಾನ ಬೇಡಿಕೆಗಳಿಗೆ ಎದುರಾಗಿ ಸಮಾನ ರೀತಿಯಲ್ಲಿ ನಿರ್ವಹಿಸುವ ಕ್ರಿಯಾ ವಿಧಾನಗಳೇ ಲೋಕರೂಢಿಗಳು". ಗಿಲಿನ್ ಹಾಗೂ ಗಿಲಿನ್‌ರ ಪ್ರಕಾರ "ಒಂದು ಸಮೂಹದಲ್ಲಿ ಪ್ರಜ್ಞಾರಹಿತವಾಗಿ ಉದ್ಭವವಾಗುವ ದಿನನಿತ್ಯ ಜೀವನದ ವರ್ತನಾ ನಮೂನೆಗಳೇ ಲೋಕರೂಢಿಗಳು".

ಮೆಕೈವರ್ ಮತ್ತು ಪೇಜರ ಪ್ರಕಾರ "ಸ್ವೀಕೃತ ಹಾಗೂ ಮಾನ್ಯತೆ ಪಡೆದ ವರ್ತನಾ ವಿಧಾನಗಳೇ ಲೋಕರೂಢಿಗಳು".

ಮೇಲಿನ ವ್ಯಾಖ್ಯೆಗಳ ಮೂಲಕ ತಿಳಿದುಕೊಳ್ಳಬಹುದೇನೆಂದರೆ ಲೋಕರೂಢಿಗಳು ನಮ್ಮ ದಿನನಿತ್ಯ ಜೀವನದಲ್ಲಿ ವಿಕಸನಗೊಳ್ಳುವ ವರ್ತನಾ ನಮೂನೆಗಳಾಗಿವೆ. ಸಾಮಾಜಿಕ ಜೀವನದ ವ್ಯವಹಾರಗಳನ್ನು ಸುಲಭಗೊಳಿಸುತ್ತವೆ. ಶಬ್ದಾರ್ಥದ ಪ್ರಕಾರ ಲೋಕರೂಢಿ ಎಂದರೆ ಲೋಕದ ಜನತೆಯ ವಿಧಾನಗಳೇ ಆಗಿವೆ.

ಲೋಕರೂಢಿಯ ಪ್ರಕಾರಗಳು

ಸಾಮಾಜಿಕ ಜೀವನದ ಅತಿ ಸಾಮಾನ್ಯ ವಿಚಾರಗಳಲ್ಲೂ ಲೋಕರೂಢಿಗಳೇ ತುಂಬಿರುವುದರಿಂದ ಸಮಗ್ರ ಸಾಮಾಜಿಕ ಜೀವನ ಇವುಗಳಿಂದ ನಿಯಂತ್ರಿತವಾಗುತ್ತದೆ. ಸಾಮಾಜಿಕ ಜೀವನವು ಅತ್ಯಂತ ವಿಸ್ತಾರವೂ-ವ್ಯಾಪಕವೂ ಆಗಿರುವುದರಿಂದ ವಿವಿಧ ವಿಭಾಗಗಳಿಗೆ ಸಂಬಂಧಿಸಿದ ವಿವಿಧ ಲೋಕರೂಢಿಗಳನ್ನು ದೈನಂದಿನ ಜೀವನದಲ್ಲಿ ನಾವು ಕಾಣಬಹುದು. ಅವು ಸ್ಥಳದಿಂದ ಸ್ಥಳಕ್ಕೆ ಹಾಗೂ ಕಾಲದಿಂದ ಕಾಲಕ್ಕೆ ಬದಲಾಗುತ್ತವೆ. ದಿನನಿತ್ಯ ಹಲ್ಲುಜ್ಜುವುದು, ಹಸ್ತಲಾಘವ ಮಾಡುವುದು, ನಮಸ್ಕರಿಸುವ ವಿಧಾನ, ಆಹಾರ ಸೇವನಾಕ್ರಮ, ವಾಹನ ಚಲಾಯಿಸುವಾಗ ಅನುಸರಿಸುವ ಕ್ರಮಗಳು, ಮುಂತಾದವುಗಳು ಕೆಲವು ಲೋಕರೂಢಿಗಳಾಗಿವೆ. ಒಂದು ಭಾಷೆಯನ್ನು ಮಾತನಾಡುವಾಗಲೂ ನಾವು ಹಲವಾರು ಲೋಕರೂಢಿಗಳನ್ನು ಬಳಸುತ್ತೇವೆ. ಉದಾಹರಣೆಗೆ ವ್ಯಾಕರಣ, ಅಲಂಕಾರ ಹಾಗೂ ಬಳಕೆಗಳು. ವಾಹನವನ್ನು ಸ್ವಚ್ಛವಾಗಿಡುವುದು, ಸ್ತ್ರೀಯರು ಉದ್ದನೆಯ ಕೂದಲನ್ನು ಬೆಳೆಸುವುದು ಮುಂತಾದವುಗಳೂ ಲೋಕರೂಢಿಗಳೇ. ಲೋಕರೂಢಿಯು ಸಾಮಾಜಿಕ ನಿಯಂತ್ರಣದ ನಿಯೋಗವಾಗಿ ಕಾರ್ಯನಿರ್ವಹಿಸುತ್ತದೆ. ಈ ನಿಟ್ಟಿನಲ್ಲಿ ಲೋಕರೂಢಿಗಳ ಪ್ರಮುಖ ಲಕ್ಷಣಗಳೇನೆಂದರೆ :

೧. ಲೋಕರೂಢಿಗಳು ಸ್ವಯಂ ಪ್ರೇರಿತ ಉಗಮವನ್ನು ಹೊಂದಿದ್ದು ಸಹಜವಾಗಿ ವಿಕಸನಗೊಳ್ಳುತ್ತವೆ. ಅವುಗಳನ್ನು ಜನರು ಪ್ರಜ್ಞಾರಹಿತವಾಗಿ ಪಾಲಿಸುತ್ತಾರೆ.

೨. ಲೋಕರೂಢಿಗಳು ಮಾನ್ಯತೆ ಪಡೆದ ವರ್ತನೆಗಳನ್ನು ಸೂಚಿಸುತ್ತವೆ. ಅವುಗಳು ಸಾಪೇಕ್ಷವಾಗಿ ಬಾಳ್ವಿಕೆ ಬರುವ ಮಾದರಿ ಕ್ರಮಗಳಾಗಿವೆ. ಲೋಕರೂಢಿಗಳಿಗಿರುವ ವಿಧೇಯತೆಯು ಸಂಪೂರ್ಣ ಕಡ್ಡಾಯವಲ್ಲದಿದ್ದರೂ ಜನರು ಅವುಗಳನ್ನು ಸಹಜವಾಗಿ ಪಾಲಿಸುತ್ತಾರೆ.

೩. ಲೋಕರೂಢಿಗಳ ಹಿಂದೆ ಅನೌಪಚಾರಿಕ ನಿರ್ಬಂಧನೆಗಳು ಅಡಗಿರುತ್ತವೆ. ಕೆಲವು ಲೋಕರೂಢಿಗಳ ಉಲ್ಲಂಘನೆಗೆ ಇರುವ ನಿರ್ಬಂಧನೆಗಳೂ ಕೂಡ ಲೋಕರೂಢಿಗಳೇ ಆಗಿವೆ. ಉದಾಹರಣೆಗೆ ಟೀಕೆ ಮಾಡುವುದು, ಅಪಹಾಸ್ಯ ಮಾಡುವುದು ಇತ್ಯಾದಿ.

೪. ಲೋಕರೂಢಿಗಳ ಹಿಂದಿರುವ ನಿರ್ಬಂಧನೆಗಳು ಅತ್ಯಂತ ದುರ್ಬಲವಾಗಿರುತ್ತವೆ. ಆದರೂ ಕೂಡ ಅವುಗಳು ಗರಿಷ್ಟಮಟ್ಟದ ವಿಧೇಯತೆಯನ್ನು ಹೊಂದಿರುತ್ತವೆ. ಕೆಲವೊಂದು ಲೋಕರೂಢಿಗಳನ್ನು ಉಲ್ಲಂಘಿಸುವುದು ಸಾಧ್ಯ. ಆದರೆ ಎಲ್ಲಾ ಲೋಕರೂಢಿಗಳನ್ನು ನಾವು ಉಲ್ಲಂಘಿಸಲಾರೆವು.

ಲೋಕ ನೀತಿ

ಸಮೂಹದ ಹಿತದೃಷ್ಟಿಯಿಂದ ಅನಿವಾರ್ಯ ಹಾಗೂ ಪ್ರಾಮುಖ್ಯವಾಗಿರುವ ಲೋಕರೂಢಿಗಳನ್ನು **ಸಮ್ನರರು** "ಲೋಕನೀತಿ" ಎಂದು ಕರೆದರು. ಅವರ ಪ್ರಕಾರ "ಲೋಕರೂಢಿಗಳು ಸಾಮೂಹಿಕ ಹಿತದೃಷ್ಟಿ ಅಥವಾ ಕಲ್ಯಾಣವನ್ನು ಉತ್ತಮ ಜೀವನದ ತತ್ವವನ್ನು ತನ್ನದಾಗಿಸಿದಾಗ ಅವುಗಳು ಲೋಕ ನೀತಿಗಳಾಗುತ್ತವೆ".

ಲೋಕನೀತಿಗಳು ಸ್ವೀಕೃತ ಹಾಗೂ ಸಾಂಪ್ರದಾಯಿಕ ಕ್ರಿಯೆಗಳಾಗಿವೆಯಲ್ಲದೆ ಆಜ್ಞಾಪಿಸಿದವುಗಳೂ ಆಗಿವೆ. **ಡಾಸನ್** ಮತ್ತು **ಗೆಟ್ಟಿಯವರ** ಪ್ರಕಾರ "ಕೆಲವು ಪ್ರತಿ ಛಾಯೆಯ ಮೂಲಕ ಸಾಮೂಹಿಕ ಹಿತದೃಷ್ಟಿಯು ಅವುಗಳನ್ನೇ ಅವಲಂಬಿಸಿವೆ ಎಂಬ ತೀರ್ಮಾನವನ್ನು ತಮ್ಮ ಜೊತೆಗೆ ಸೇರಿಸಿಕೊಂಡಿರುವ ಲೋಕರೂಢಿಗಳನ್ನು ಲೋಕನೀತಿ ಎನ್ನಬಹುದು".

ಮೆಕೈವರ್ ಮತ್ತು **ಪೇಜರ** ಪ್ರಕಾರ "ಯಾವಾಗ ಲೋಕರೂಢಿಗಳು ಸಮೂಹ ಕಲ್ಯಾಣ, ಸರಿ ಹಾಗೂ ತಪ್ಪು ಎಂಬ ಮಾಪನಗಳನ್ನು ತಮ್ಮಲ್ಲಿ ಸೇರ್ಪಡೆಗೊಳಿಸಿಕೊಂಡಾಗ ಅವುಗಳು ಲೋಕನೀತಿಗಳಾಗಿ ಪರಿವರ್ತನೆಗೊಳ್ಳುತ್ತವೆ".

ಲೋಕನೀತಿಗಳು ಮೌಲಿಕ ತೀರ್ಮಾನವನ್ನು ಹೊಂದಿವೆ. ಸರಿ, ತಪ್ಪು ಹಾಗೂ ಸಾಮೂಹಿಕ ಹಿತದೃಷ್ಟಿ ಲೋಕನೀತಿಗಳಲ್ಲಿವೆ.

ಸಾಮಾಜಿಕ ನಿಯಂತ್ರಣದ ನಿಯೋಗವಾಗಿ ಲೋಕನೀತಿಗಳ ಪ್ರಮುಖ ಲಕ್ಷಣಗಳೇನೆಂದರೆ :

೧. ಅವುಗಳು ಲೋಕರೂಢಿಗಳಿಗಿಂತ ಅತ್ಯಂತ ಸಾಮಾನ್ಯ ಹಾಗೂ ವ್ಯಾಪಕವಾದವು.
೨. ಮೌಲಿಕ ತೀರ್ಮಾನವನ್ನು ಒಳಗೊಂಡಿವೆ.
೩. ಲೋಕನೀತಿಗಳು ವರ್ತನೆಯನ್ನು ನಿಯಂತ್ರಿಸುವಲ್ಲಿ ಹೆಚ್ಚು ಪರಿಣಾಮಕಾರಿ.
೪. ಲೋಕನೀತಿಗಳು ಬೇಗನೆ ಬದಲಾಗಲಾರವು.
೫. ಲೋಕನೀತಿಗಳ ಉಲ್ಲಂಘನೆಯನ್ನು ಸಮಾಜಕ್ಕೆ ಅಪಾಯಕರ ಎಂದು ಭಾವಿಸಲಾಗುತ್ತದೆ.

ಮಾನ ರಕ್ಷಣೆಗಾಗಿ ಬಟ್ಟೆ ಧರಿಸುವುದು, ನಿಕಟ ರಕ್ತ ಸಂಬಂಧಿಕರ ನಡುವೆ ವಿವಾಹವನ್ನು ನಿಷೇಧಿಸುವುದು ಇತ್ಯಾದಿಗಳು ಲೋಕನೀತಿಗಳಾಗಿವೆ.

೫.೪. ಸಾರಾಂಶ

ವ್ಯಕ್ತಿಗೆ ಸಮೂಹ ಜೀವನ ಅನಿವಾರ್ಯ. ಸಮೂಹದಲ್ಲಿ ಬಾಳಿ ಬದುಕುವಾಗ ಅಲ್ಲಿ ಉದ್ಭವಿಸುವ ಸಾಮೂಹಿಕ ಜೀವನದ ನಿಯಮಗಳನ್ನು ಪರಿಪಾಲಿಸಬೇಕಾಗುತ್ತದೆ. ಪದ್ಧತಿಗಳು, ಲೋಕರೂಢಿಗಳು, ಲೋಕನೀತಿಗಳು ಮತ್ತು ಕಾಯ್ದೆ ಕಾನೂನುಗಳಿಗೆ ವ್ಯಕ್ತಿಗಳು ಬದ್ಧವಾಗಿ ನಡೆದುಕೊಳ್ಳಬೇಕಾಗುತ್ತದೆ. ಸಮಾಜದ ಸದಸ್ಯರು ನಿರೀಕ್ಷಿತ ರೀತಿಯಲ್ಲಿ ವರ್ತಿಸುವಂತೆ ಮಾಡಲೋಸುಗ ಸಮಾಜವು ತನ್ನದೇ ನಿಯೋಗಿಗಳ ಮೂಲಕ ನಿಯಂತ್ರಣ ವನ್ನು ಸಾಧಿಸುವುದು. ಇದುವೇ ಸಾಮಾಜಿಕ ನಿಯಂತ್ರಣ. ಸಾಮಾಜಿಕ ನಿಯಂತ್ರಣವು ಸಾರ್ವತ್ರಿಕವೂ, ಅನಿವಾರ್ಯವೂ ಆಗಿರುವುದು. ಸಾಮಾಜಿಕ ನಿಯಂತ್ರಣವು ಎಲ್ಲ ಸಮೂಹಗಳಲ್ಲೂ, ಸಮಾಜಗಳಲ್ಲೂ ಕಾಣಬರುವ ಒಂದು ವ್ಯವಸ್ಥೆಯಾಗಿದೆ. ಆದರೆ ಅದು ಸಮಾಜದಿಂದ ಸಮಾಜಕ್ಕೆ ಹಾಗೂ ಒಂದು ಸಮಯದಿಂದ ಇನ್ನೊಂದು ಸಮಯಕ್ಕೆ ಭಿನ್ನವಾಗಿರುವುದು. ಆದುದರಿಂದ ಸಾಮಾಜಿಕ ನಿಯಂತ್ರಣದ ವಿಧಾನಗಳಲ್ಲಿ ಮತ್ತು ನಿಯೋಗಗಳಲ್ಲಿ ಹಲವು ಪ್ರಕಾರಗಳು ಕಂಡುಬರುತ್ತವೆ.

ಸಮಾಜವು ಸದಸ್ಯರ ವರ್ತನೆಗಳ ಮೇಲೆ ಹತೋಟಿ ಸಾಧಿಸಲು ಅನೇಕ ಸಾಧನಗಳನ್ನು ಬಳಸಿಕೊಳ್ಳುತ್ತದೆ. ಸಾರ್ವಜನಿಕ ಅಭಿಪ್ರಾಯ, ಕಾನೂನು, ಧರ್ಮ, ಪದ್ಧತಿ, ಸಾಮಾಜಿಕ ಸೂಚ್ಯತೆ, ಲೋಕನೀತಿಗಳು, ಲೋಕರೂಢಿಗಳು ಮುಂತಾದವು ಸಾಮಾಜಿಕ ನಿಯಂತ್ರಣದ ಪ್ರಮುಖ ಸಾಧನಗಳಾಗಿವೆ. ಕೆಲವು ಸಮಾಜಶಾಸ್ತ್ರಜ್ಞರು ಈ ಸಾಧನಗಳನ್ನು ಔಪಚಾರಿಕ ಮತ್ತು ಅನೌಪಚಾರಿಕ ಸಾಧನಗಳೆಂಬುದಾಗಿ ವಿಭಜಿಸಿದ್ದಾರೆ. ಲೋಕರೂಢಿಗಳು, ಲೋಕನೀತಿಗಳು, ಸಾರ್ವಜನಿಕ ಅಭಿಪ್ರಾಯ, ನಂಬಿಕೆ, ಧರ್ಮ ಮುಂತಾದವುಗಳು ಅನೌಪಚಾರಿಕ ಸಾಧನಗಳಾಗಿದ್ದು; ಕಾನೂನು, ಶಿಕ್ಷಣ, ಬಲಪ್ರಯೋಗ, ರಾಜ್ಯ ಇತ್ಯಾದಿ ಔಪಚಾರಿಕ ಸಾಧನಗಳಾಗಿವೆ. ಸಮಾಜದಲ್ಲಿರುವ ನಿಯಮಾವಳಿಗಳನ್ನು ಜನರು ಪರಿಪಾಲಿಸುವರು. ನಿಯಮಗಳಿಗೆ ಅನುಗುಣವಾದ ವರ್ತನೆಯನ್ನು ತೋರುವರು. ಅವರ ಇಂತಹ ವರ್ತನೆಯೇ ಅನುವರ್ತನೆ. ನಿಯಮಗಳನುಸಾರ ವರ್ತಿಸುವವರು ಸಮೂಹದಲ್ಲಿ ಉತ್ತಮ ಗೌರವ, ಘನತೆಯನ್ನು ಕಾಪಾಡಿಕೊಳ್ಳುವುದರ ಜೊತೆಗೆ ಉಳಿದವರಿಂದ ನಿರೀಕ್ಷಿತ ಪ್ರಮಾಣದ ಸಹಕಾರವನ್ನು ದೊರಕಿಸಿಕೊಳ್ಳುವರು, ಅವರ ಪ್ರ ಶಂಸೆಗೂ ಪಾತ್ರರಾಗುವರು. ನಿಯಮಗಳ ಉಲ್ಲಂಘನೆಗೆ ವಿಧಿಸುವ ಶಿಕ್ಷೆಯ ಭಯದಿಂದಾಗಿ ಕೆಲವರು ಅನುವರ್ತನೆಯನ್ನು ತೋರುವರು. ಜಾನ್ಸನ್‌ರ ಪ್ರಕಾರ ಸಾಮಾಜೀಕರಣ, ಸಂಘರ್ಷ ನಿವಾರಣೆ, ಶ್ರೇಣೀಕೃತ ವ್ಯವಸ್ಥೆ, ಸಾಮಾಜಿಕ ನಿಯಂತ್ರಣ, ಆದರ್ಶವಾದಗಳು, ಸ್ಥಾಪಿತ ಹಿತಾಸಕ್ತಿಗಳು ಅನುವರ್ತನೆಗಿರುವ ಪ್ರಮುಖ ಕಾರಣಗಳಾಗಿವೆ.

ಪ್ರತಿಯೊಂದು ಸಮಾಜವು ಸಾಮಾಜಿಕ ನಿಯಮಗಳನುಸಾರವಾದ ವರ್ತನೆಯನ್ನು ತನ್ನ ಸದಸ್ಯರಿಂದ ನಿರೀಕ್ಷಿಸುವುದು. ಆದಾಗ್ಯೂ ಹಲಕೆಲವರು ಸಮಾಜದ ನಿಯಮಗಳನ್ನು ಧಿಕ್ಕರಿಸಿ ನಡೆಯುವರು, ಅವುಗಳ ಉಲ್ಲಂಘನೆ ಮಾಡುವರು. ಜನರ ಈ ರೀತಿಯ

ದುರ್ನಡತೆಯೇ ಅಪವರ್ತನೆಯಾಗಿದೆ. ದೋಷಪೂರಿತ ಸಾಮಾಜೀಕರಣ, ದುರ್ಬಲ ನಿರ್ಬಂಧನೆಗಳು, ದುರ್ಬಲ ಹೇರುವಿಕೆ, ಸುಲಭ ಸಮರ್ಥನೆ, ನಿಯಮಾವಳಿಗಳ ಅಪರಿಮಿತ ವ್ಯಾಪ್ತಿ, ಉಲ್ಲಂಘನೆಯ ಗೌಪ್ಯತೆ, ಅನ್ಯಾಯಯುತ ಹೇರುವಿಕೆ, ಸಾಮಾಜಿಕ ನಿಯಂತ್ರಣ ನಿಯೋಗಗಳ ನಿರ್ಲಿಪ್ತತೆ ಮುಂತಾದವು ಅಪವರ್ತನೆಯ ಪ್ರಮಾಣವನ್ನು ಗಣನೀಯವಾಗಿ ನಿರ್ಧರಿಸುವ ಪ್ರಮುಖ ಅಂಶಗಳಾಗಿವೆ.

೫.೫. ಪಾರಿಭಾಷಿಕ ಪದಕೋಶ

೧. Agency = ನಿಯೋಗ

೨. Conformity = ಅನುವರ್ತನೆ

೩. Customs = ಪದ್ಧತಿಗಳು

೪. Deviance = ಅಪವರ್ತನೆ

೫. Faulty Socialisaltion = ದೋಷಪೂರಿತ ಸಾಮಾಜೀಕರಣ

೬. Formal = ಔಪಚಾರಿಕ

೭. Informal = ಅನೌಪಚಾರಿಕ

೮. Mores = ಲೋಕನೀತಿಗಳು

೯. Negative = ಋಣಾತ್ಮಕ

೧೦. Police = ಆರಕ್ಷಕ

೧೧. Positive = ಧನಾತ್ಮಕ

೧೨. Social Security = ಸಾಮಾಜಿಕ ಭದ್ರತೆ

೧೩. Sovereign Power = ಸಾರ್ವಭೌಮ ಅಧಿಕಾರ

೧೪. Sub-Culture = ಉಪ-ಸಂಸ್ಕೃತಿ

೫.೬. ಪ್ರಶ್ನೆಗಳು

I. ಒಂದು ಅಂಕದ ಪ್ರಶ್ನೆಗಳು

೧. ಔಪಚಾರಿಕ ಸಾಮಾಜಿಕ ನಿಯಂತ್ರಣದ ಒಂದು ಸಾಧನವನ್ನು ತಿಳಿಸಿ.

೨. ಅನೌಪಚಾರಿಕ ಸಾಮಾಜಿಕ ನಿಯಂತ್ರಣದ ಒಂದು ಸಾಧನವನ್ನು ನಮೂದಿಸಿ.

೩. ಸಾಮಾಜಿಕ ಅಪವರ್ತನೆಗೆ ಒಂದು ಉದಾಹರಣೆಯನ್ನು ಕೊಡಿ.

೪. 'ಸಾಮಾಜಿಕ ನಿಯಂತ್ರಣ' ಎಂಬ ಶಬ್ದವನ್ನು ಮೊದಲ ಬಾರಿಗೆ ಯಾರು ಪರಿಚಯಿಸಿದರು?

೫. ಸಾಮಾಜಿಕ ನಿಯಂತ್ರಣದ ಒಂದು ವ್ಯಾಖ್ಯೆಯನ್ನು ನೀಡಿ.

೬. 'ಫೋಕ್‌ವೇಸ್' ಎಂಬ ಗ್ರಂಥವನ್ನು ಬರೆದವರು ಯಾರು?

೭. ಸಾಮಾಜಿಕ ನಿಯಂತ್ರಣದ ಒಂದು ಲಕ್ಷಣವನ್ನು ತಿಳಿಸಿ.

೮. ರಾಜ್ಯದ ಒಂದು ಘಟಕವನ್ನು (ಮೂಲಾಂಶ) ನಮೂದಿಸಿ.

೯. ಸಾರ್ವಭೌಮ ಅಧಿಕಾರವೆಂದರೇನು?

೧೦. ಪದ್ಧತಿಗಳು ಸಾರ್ವತ್ರಿಕವಾದವುಗಳೇ?

೧೧. ಸುಮ್ನರ್‌ನ ಒಂದು ಗ್ರಂಥವನ್ನು ಹೆಸರಿಸಿ.

೧೨. ಸುಮ್ನರ್ 'ಫೋಕ್‌ವೇಸ್' ಎಂಬ ಪುಸ್ತಕವು ಯಾವ ಇಸ್ವಿಯಲ್ಲಿ ಪ್ರಕಟಗೊಂಡಿತು?

೧೩. ಲೋಕರೂಢಿಯನ್ನು ವ್ಯಾಖ್ಯಾನಿಸಿ.

೧೪. ಋಣಾತ್ಮಕ ಅಥವಾ ನಿಷೇಧಾತ್ಮಕ ನಿಯಮಗಳೆಂದರೇನು?

೧೫. ಅನುವರ್ತನೆಗಿರುವ ಕಾರಣವೊಂದನ್ನು ತಿಳಿಸಿ.

II. ಎರಡು ಅಂಕದ ಪ್ರಶ್ನೆಗಳು

೧. ಸಾಮಾಜಿಕ ನಿಯಮಗಳೆಂದರೇನು?

೨. ಸಾಮಾಜಿಕ ನಿಯಂತ್ರಣದ ಎರಡು ಲಕ್ಷಣಗಳನ್ನು ತಿಳಿಸಿ.

೩. ಅನುವರ್ತನೆಯೆಂದರೇನು?

೪. ಅಪವರ್ತನೆಗೆ ಅನುಕೂಲವಾಗುವ ಎರಡು ಅಂಶಗಳನ್ನು ನಮೂದಿಸಿ.

೫. ಲೋಕನೀತಿಯ ವ್ಯಾಖ್ಯೆ ನೀಡಿ.

೬. ಕಾನೂನಿನ ಎರಡು ವ್ಯಾಖ್ಯೆಗಳನ್ನು ನೀಡಿ.

೭. ಲೋಕರೂಢಿಗೆ ಎರಡು ಉದಾಹರಣೆಗಳನ್ನು ನೀಡಿ.

೮. ಸಾಮಾಜಿಕ ಅಪವರ್ತನೆಯೆಂದರೇನು?

೯. ಸಾಮಾಜಿಕ ನಿಯಂತ್ರಣದ ಎರಡು ಬಗೆಯ ಸಾಧನಗಳಾವುವು?

೧೦. ಪದ್ಧತಿಗಳ ಎರಡು ವ್ಯಾಖ್ಯೆಗಳನ್ನು ನೀಡಿ.

೧೧. ಸಾಮಾಜಿಕ ಅನುವರ್ತನೆಗಿರುವ ಎರಡು ಕಾರಣಗಳನ್ನು ಕೊಡಿ.

೧೨. ಅಪವರ್ತನೆಯ ಎರಡು ಲಕ್ಷಣಗಳನ್ನು ತಿಳಿಸಿ.

III. ಹತ್ತು ಅಂಕಗಳ ಪ್ರಶ್ನೆಗಳು

೧. ಸಾಮಾಜಿಕ ನಿಯಂತ್ರಣದ ಅನೌಪಚಾರಿಕ ಸಾಧನಗಳ ಕುರಿತಾದ ವಿವರಣೆ ನೀಡಿ.

೨. ಅಪವರ್ತನೆಯೆಂದರೇನು? ಅಪವರ್ತನೆಗೆ ಅನುಕೂಲವಾಗುವ ಅಂಶಗಳ ಕುರಿತು ವಿವರಿಸಿ.

೩. ಲೋಕರೂಢಿಯ ವ್ಯಾಖ್ಯೆಗಳನ್ನು ನೀಡಿ ಅದರ ಪ್ರಮುಖ ಲಕ್ಷಣಗಳ ಕುರಿತು ಬರೆಯಿರಿ.

೪. ಅನುವರ್ತನೆಯೆಂದರೇನು? ಅನುವರ್ತನೆಗಿರುವ ಕಾರಣಗಳನ್ನು ತಿಳಿಸಿ.

ಚಟುವಟಿಕೆಗಳು/ಅಭ್ಯಾಸ

೧. ಸಾಮಾಜಿಕ ನಿಯಂತ್ರಣದಲ್ಲಿ ಧರ್ಮದ ಪಾತ್ರವನ್ನು ವಿವರಿಸಿ.

೨. ನಿಮ್ಮ ಸುತ್ತಮುತ್ತಲಿನ ಗ್ರಾಮೀಣ ಭಾಗಗಳ ಜನರಲ್ಲಿ ರೂಢಿಯಲ್ಲಿರುವ ಪದ್ಧತಿಗಳ ಪಟ್ಟಿ ಮಾಡಿ.

೩. ನಿಮ್ಮ ಸುತ್ತಮುತ್ತಲಿನ ಪರಿಸರದ ಜನರಲ್ಲಿ ಕಂಡುಬರುವ ಕುರುಡು ನಂಬಿಕೆಗಳನ್ನು ಪಟ್ಟಿಮಾಡಿ, ಒಂದರ ಬಗ್ಗೆ ವಿವರಣೆ ನೀಡಿ.

ಅಧ್ಯಾಯ ೬

ವಿವಾಹ ಮತ್ತು ಕುಟುಂಬ

ವಿವಾಹವನ್ನು ಕುಟುಂಬದ ಒಂದು ಬಹುಮುಖ್ಯ ಸಂಸ್ಥೆ ಎಂಬುದಾಗಿ ಹೇಳಲಾಗಿದೆ. ಆದರೆ ಕುಟುಂಬವನ್ನು ಸಂಘವೆಂಬುದಾಗಿಯೂ ಸಂಸ್ಥೆ ಎಂಬುದಾಗಿಯೂ ವಿವರಿಸಲಾಗಿದೆ. ಕುಟುಂಬದ ಸದಸ್ಯರ ಸಂಘಟನಾತ್ಮಕ ರಚನೆಯನ್ನು ಹೇಳುವಾಗ ಕುಟುಂಬವು ಒಂದು ಸಂಘವೆಂತಲೂ ಅದರ ಕಾರ್ಯ ವಿಧಾನವನ್ನು ಹೇಳುವಾಗ ಅದು ಒಂದು ಸಂಸ್ಥೆ ಎಂದೂ ವ್ಯಾಖ್ಯಾನಿಸಲಾಗಿದೆ. ವಿವಾಹ ಮತ್ತು ಕುಟುಂಬ ಇವುಗಳು ಪ್ರತಿಯೊಬ್ಬ ವ್ಯಕ್ತಿಯ ಬದುಕನ್ನು ರೂಪಿಸುವ ಮತ್ತು ಪ್ರಭಾವಿಸುವ ಸಂಸ್ಥೆಗಳಾಗಿವೆ.

೬.೧. ವಿವಾಹದ ಅರ್ಥ ಮತ್ತು ಕಾರ್ಯಗಳು

ವಿವಾಹವೆಂಬುದು ಪ್ರಪಂಚದಾದ್ಯಂತ ಕಂಡುಬರುವ ಸಾಮಾಜಿಕ ಸಂಸ್ಥೆಯಾಗಿದೆ. ಅದಕ್ಕೆ ಸಂಬಂಧಿಸಿದ ನಿಯಮಗಳು ಹಾಗೂ ಪ್ರಕಾರಗಳು ಅನೇಕವಿದ್ದರೂ ಕುಟುಂಬದ ತಳಹದಿಯಾಗಿ ವಿವಾಹವು ಸಾರ್ವತ್ರಿಕವಾಗಿದೆ. ವಿವಾಹವು ಗಂಡು-ಹೆಣ್ಣು ಕೂಡಿ ಕುಟುಂಬವನ್ನು ಸ್ಥಾಪಿಸಿ, ಮಕ್ಕಳನ್ನು ಪಡೆಯಲು ಅನುಮತಿ ಹೊಂದಿರುವ ಸಾಮಾಜಿಕ ಸಂಸ್ಥೆಯಾಗಿದೆ. ಮಕ್ಕಳನ್ನು ಪಡೆಯುವ ಹಕ್ಕು ಎಂದರೆ ವಾಸ್ತವವಾಗಿ ಲೈಂಗಿಕ ಸಂಬಂಧವನ್ನು ಹೊಂದುವ ಅವಕಾಶವಾಗಿದೆ. ವಿವಾಹದ ಹುಟ್ಟು, ಸ್ವರೂಪ, ವಿಧಿ ವಿಧಾನಗಳು, ವೈವಿಧ್ಯತೆ ಮುಂತಾದವುಗಳ ಬಗ್ಗೆ ತಿಳಿಯುವ ಕುತೂಹಲದಿಂದ ಅನೇಕ ಮಾನವಶಾಸ್ತ್ರಜ್ಞರು ಪ್ರಪಂಚದಾದ್ಯಂತ ಅನೇಕ ಗುಡ್ಡಗಾಡು ಜನಾಂಗಗಳಲ್ಲಿ ಅಧ್ಯಯನಗಳನ್ನು ನಡೆಸಿ ವಿವಾಹವನ್ನು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

ಎಡ್ವರ್ಡ್ ವೈಸ್ಟರ್‌ಮಾರ್ಕ್‌ರವರು ತಮ್ಮ 'ಮಾನವರ ವಿವಾಹದ ಇತಿಹಾಸ'ದಲ್ಲಿ ವಿವಾಹವನ್ನು ಈ ರೀತಿ ವ್ಯಾಖ್ಯಾನಿಸಿದ್ದಾರೆ : "ಗಂಡು ಮತ್ತು ಹೆಣ್ಣುಗಳ ಸುದೀರ್ಘವಾದ ಅಥವಾ ಸುದೀರ್ಘವಲ್ಲದ ಮತ್ತು ವಂಶಾಭಿವೃದ್ಧಿಯನ್ನು ಹಾಗೂ ಲೈಂಗಿಕ ಸಂಬಂಧಗಳನ್ನೇರ್ಪಡಿಸಿಕೊಳ್ಳಲು ಮಾಡಿಕೊಂಡ ವ್ಯವಸ್ಥೆಯೇ ವಿವಾಹವಾಗಿದೆ". ಅಂದರೆ ವಿವಾಹವು ವ್ಯಕ್ತಿಗಳ ಲೈಂಗಿಕ ಆಸೆ, ಆಕಾಂಕ್ಷೆಗಳನ್ನು ಪೂರೈಸುತ್ತದಷ್ಟೇ ಅಲ್ಲ, ಸಮಾಜದ ಮೂಲಭೂತ ಸಾಮಾಜಿಕ ಸಂಸ್ಥೆಯಾದ ಕುಟುಂಬದ ಅಸ್ತಿತ್ವಕ್ಕೆ ಅವಕಾಶ ನೀಡುತ್ತದೆ.

ಬ್ರಾನಿಸ್ಲೂ ಮಲಿನೋವಸ್ಕಿ ಪ್ರಕಾರ, "ವಿವಾಹವು ಸಂತಾನೋತ್ಪತ್ತಿ, ಲೈಂಗಿಕ ತೃಪ್ತಿ, ಮಕ್ಕಳ ಪಾಲನೆ ಪೋಷಣೆ, ನಿರಂತರ ಒಡನಾಟ ಇವುಗಳಿಗಾಗಿ ಮಾನವನು ಏರ್ಪಡಿಸಿಕೊಂಡ

ಒಪ್ಪಂದವಾಗಿದೆ". ಅಂದರೆ ವಿವಾಹವೊಂದು ಸಂಸ್ಥೆಯಾಗಿದ್ದು, ಅದು ಸ್ತ್ರೀ-ಪುರುಷರನ್ನು ವಿವಾಹದ ತರುವಾಯ ಕುಟುಂಬ ಜೀವನಕ್ಕೆ ಅಳವಡಿಸುತ್ತದೆ. ಇದಕ್ಕೆ ಧಾರ್ಮಿಕ ಅನುಮೋದನೆ ಹಾಗೂ ಸಾಮಾಜಿಕ ಅಂಗೀಕಾರವಿರುತ್ತದೆ. ಇದು ಸರ್ವವ್ಯಾಪ್ತಿಯಾಗಿದ್ದು, ಸಮಾಜದ ವಿವಿಧ ಪ್ರಕಾರಗಳಲ್ಲಿ ಯಾವುದೇ ರೂಪದಲ್ಲಾದರೂ ಅಸ್ತಿತ್ವದಲ್ಲಿರುತ್ತದೆ. ಸ್ತ್ರೀ-ಪುರುಷರು ಸ್ಥಿರವಾದ ವೈವಾಹಿಕ ಬಾಂಧವ್ಯದಿಂದ ಮಕ್ಕಳನ್ನು ಪಡೆಯಬಹುದಾಗಿದೆ.

ರಾಬರ್ಟ್ ಎಚ್. ಲೂಯಿಯವರು, "ಲೈಂಗಿಕ ಇಚ್ಛೆಯ ಪೂರೈಕೆಯ ಜೊತೆಗೆ ಸ್ತ್ರೀ-ಪುರುಷರಲ್ಲಿ ಶಾಶ್ವತ ಸಂಬಂಧವನ್ನು ರೂಪಿಸಿ, ಕೌಟುಂಬಿಕ ಜೀವನಕ್ಕೆ ಹೊಂದಾಣಿಕೆ ಮತ್ತು ಮಹತ್ವ ನೀಡುವುದೇ ವಿವಾಹ" ಎಂದು ತಿಳಿಸಿರುತ್ತಾರೆ. ಇದರಿಂದ ವಿವಾಹವು ಉತ್ತಮ ಸಂಬಂಧ ನಿರೂಪಿತವಾಗುವ ಅಂಶವನ್ನು ಪ್ರತಿಪಾದಿಸುತ್ತಿದೆ.

ಹಾರ್ಟನ್ ಮತ್ತು ಹಂಟ್ ಇವರ ಪ್ರಕಾರ, "ವಿವಾಹವು ಸಾಮಾಜಿಕ ವಿಧಾನದ ಅನುಮೋದನೆಯಲ್ಲಿ ಇಬ್ಬರು ಅಥವಾ ಹೆಚ್ಚಿನವರು ಕುಟುಂಬವನ್ನು ಸ್ಥಾಪಿಸಬಹುದಾಗಿದೆ".

ಈ ವ್ಯಾಖ್ಯೆಗಳಿಂದ ವಿವಾಹದಲ್ಲಿ ಈ ಕೆಳಗಿನ ಗುಣಲಕ್ಷಣಗಳು ಮಹತ್ವದ್ದೆನಿಸಿವೆ :

೧. ಇದು ಧಾರ್ಮಿಕ ಕ್ರಮಬದ್ಧ ವಿಧಾನವಾಗಿದೆ.

೨. ಪುರುಷ ಮತ್ತು ಸ್ತ್ರೀಯರ ಸಂಬಂಧವು ಸ್ಥಿರವಾಗಿರುತ್ತದೆ.

೩. ಆರ್ಥಿಕ, ಸಾಮಾಜಿಕ ಮತ್ತು ಜೈವಿಕ ಕ್ಷೇತ್ರಗಳಲ್ಲಿ ಸ್ತ್ರೀ-ಪುರುಷರು ಪರಸ್ಪರ ಸಂಬಂಧದಿಂದಾಗಿ ಉತ್ತಮ ಸ್ಥಾನವನ್ನು ಪಡೆಯುವ ಅವಕಾಶವಿರುತ್ತದೆ.

ವಿವಾಹವು ಶಾಶ್ವತ ಸ್ವರೂಪದಲ್ಲಿ ಒಬ್ಬ ಪುರುಷನು ಒಬ್ಬಳು ಸ್ತ್ರೀಯೊಂದಿಗೆ, ಸಾಮಾಜಿಕ ಅನುಮೋದನೆಯಿಂದ ಸಂತಾನಾಭಿವೃದ್ಧಿ, ಜೈವಿಕ ಮತ್ತು ಸಾಮಾಜಿಕ ಅವಶ್ಯಕತೆಗಳನ್ನು ತೃಪ್ತಿಕರವಾಗಿ ಪಡೆದು, ಧಾರ್ಮಿಕ ರೀತಿಯಲ್ಲಿ ಉತ್ತಮ ಜೀವನದ ವ್ಯವಸ್ಥೆಯನ್ನು ರೂಪಿಸುತ್ತದೆ.

ಭಾರತೀಯ ದೃಷ್ಟಿಕೋನದಲ್ಲಿ ವಿವಾಹವು ಜನ್ಮಜನ್ಮಾಂತರದ ಒಂದು ಪವಿತ್ರ ಬಂಧನವಾಗಿದ್ದು ಅದು ಧರ್ಮಾಚರಣೆ, ವಂಶದ ಬೆಳವಣಿಗೆ ಹಾಗೂ ಲೈಂಗಿಕ ಸಂತೃಪ್ತಿಗಳ ಉದ್ದೇಶವನ್ನು ಹೊಂದಿದೆ. ಆದುದರಿಂದ ಪರಂಪರಾಗತ ವ್ಯಾಖ್ಯೆಯಂತೆ ಹಿಂದೂ ವಿವಾಹದಲ್ಲಿ ವಿಚ್ಛೇದನಕ್ಕೆ ಅವಕಾಶವಿಲ್ಲ. ಇಸ್ಲಾಂ ಧರ್ಮವು ವಿವಾಹವನ್ನು ಗಂಡಿನ ಮತ್ತು ಹೆಣ್ಣಿನ ತಂದೆ ಅಥವಾ ರಕ್ಷಕರ ನಡುವಿನ ಒಂದು ಒಪ್ಪಂದವೆಂಬುದಾಗಿ ಪರಿಗಣಿಸಿದ್ದು ವರನು ವಧುವಿಗೆ ನಿಶ್ಚಿತ ಆಪದ್ಧನ ನೀಡಿದಾಗಲೇ ಅದನ್ನು ಪರಿಪೂರ್ಣವೆಂದು ಪರಿಗಣಿಸಲಾಗುತ್ತದೆ. ಹೀಗೆ ವಿವಿಧ ದೇಶ-ಸಂಸ್ಕೃತಿಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ವಿವಾಹವು ವಿಭಿನ್ನ ಅರ್ಥಗಳನ್ನೂ, ಆಚರಣಾ ವಿಧಾನಗಳನ್ನೂ ಹೊಂದಿತ್ತೆಂಬುದು ಅಧ್ಯಯನಗಳಿಂದ ತಿಳಿದುಬರುತ್ತದೆ.

ಮೇಲೆ ನೀಡಿದ ವ್ಯಾಖ್ಯೆಗಳಿಂದ ನಾವು ವಿವಾಹದ ಅರ್ಥವನ್ನು ಗ್ರಹಿಸಬಹುದಾಗಿದೆ. ದೈಹಿಕವಾಗಿ ಬಾಲ್ಯದಿಂದ ಯೌವನಾವಸ್ಥೆ ತಲುಪಿದಾಗ ವ್ಯಕ್ತಿಗೆ ಲೈಂಗಿಕಾಸಕ್ತಿ

ಉಂಟಾಗುತ್ತದೆ; ಗಂಡು-ಹೆಣ್ಣುಗಳ ನಡುವೆ ಪರಸ್ಪರ ಆಕರ್ಷಣೆ ಬೆಳೆಯುತ್ತದೆ. ಪ್ರಾಚೀನ ಗುಡ್ಡಗಾಡು ಸಮುದಾಯಗಳಲ್ಲಿ ಆಹಾರ-ನಿದ್ರೆಗಳಂತೆ ಲೈಂಗಿಕತೆಯೂ ಅನಿರ್ಬಂಧಿತ ಕ್ರಿಯೆಯಾಗಿತ್ತು. ಜಾತಿ, ವರ್ಗ, ಜನಾಂಗ ಇತ್ಯಾದಿ ಭೇದಗಳಿಲ್ಲದಿದ್ದ ಸಮಾಜಗಳಲ್ಲಿ ಎಲ್ಲರೂ ಎಲ್ಲವನ್ನೂ ಹಂಚಿಕೊಳ್ಳುತ್ತಿದ್ದರು. ಎಳೆಯರು ಇಡೀ ಸಮುದಾಯದ ಮಕ್ಕಳಾಗಿ, ತರುಣ ಮತ್ತು ನಡುವಯಸ್ಸಿನವರು ಎಲ್ಲ ಎಳೆಯರ ತಂದೆ-ತಾಯಿಗಳಾಗಿ, ಇಳಿವಯಸ್ಕರು ಎಲ್ಲರಿಗೂ ಹಿರಿಯರಾಗಿ ಬಹಳ ಸರಳವಾದ ಸಂಬಂಧಗಳನ್ನು ಹೊಂದಿದ್ದರು. ಅವರ ನಡುವೆ ಮಗು-ಮೊಮ್ಮಗು, ಅಪ್ಪ-ಅಮ್ಮ, ಅಜ್ಜ-ಅಜ್ಜಿ ಎಂಬಷ್ಟೇ ಸಂಬಂಧ ವಾಚಕ ಗಳಿದ್ದವು. ಇಂತಹ ಸಮುದಾಯಗಳಲ್ಲಿ ಗಂಡು-ಹೆಣ್ಣಿನ ನಡುವಿನ ಸಂಬಂಧಗಳಿಗೆ ಶಾಶ್ವತತೆ ನೀಡುವ ನಿಯಮದ ಅಗತ್ಯ ಕಂಡುಬಂದಿರಲಿಲ್ಲ. ಆದರೆ ಇಲ್ಲಿಯೂ ದೀರ್ಘಕಾಲ ಅನ್ಯೋನ್ಯತೆಯನ್ನು ಹೊಂದಿ ಪರಸ್ಪರ ನಿಷ್ಠರಾದ ಜೋಡಿಗಳಿರುತ್ತಿದ್ದವು. ಏಕೆಂದರೆ ಲೈಂಗಿಕ ಕ್ರಿಯೆ ಸಾರ್ವತ್ರಿಕವಾಗುವುದು ಸಾಧ್ಯವಿಲ್ಲ. ಅದಕ್ಕೆ ಭಾವನಾತ್ಮಕತೆಯ ತಳಹದಿ ಇರುತ್ತದೆ. ಗಂಡು-ಹೆಣ್ಣು ನಿಶ್ಚಿತ ಸಂಗಾತಿಗಳನ್ನು ಬಯಸುತ್ತಾರೆ. ಅಲ್ಲದೆ ಲೈಂಗಿಕತೆಯು ಊಟ-ನಿದ್ರೆಗಳಂತೆ ನಿರಂತರತೆ ಹೊಂದಿರುವುದಿಲ್ಲ. ಅದು ಪರಸ್ಪರ ಆಸಕ್ತಿ, ಅಪೇಕ್ಷೆಗಳನ್ನು ಅವಲಂಬಿಸಿರುತ್ತದೆ. ಇನ್ನು, ಹುಟ್ಟುವ ಮಕ್ಕಳ ಜವಾಬ್ದಾರಿ ಇಡೀ ಸಮುದಾಯಕ್ಕೆ ಸೇರಿದ್ದಾಗಿದ್ದರೂ ತಾಯಿ-ಮಗುವಿನ ಭಾವನಾತ್ಮಕ ಸಂಬಂಧ ಬೇರೆಯೇ ಇರುತ್ತದೆ. ಆದರೆ ಅವಳಿಗೂ ತನ್ನ ತಾಯ್ತನದ ನಿರ್ವಹಣೆಗೆ ಆತ್ಮೀಯವಾಗಿ ನೆರವು ನೀಡುವ ಗಂಡಿನ ಅವಶ್ಯಕತೆ ಇರುತ್ತದೆ. ಗಂಡಸರಿಗೆ ಹೆರುವ ಕಾರ್ಯವಿಲ್ಲದಿದ್ದರೂ ಒಂದು ನಿಶ್ಚಿತ ಮಗುವಿನ ತಂದೆಯೆನಿಸಿಕೊಳ್ಳುವ ಭಾವನಾತ್ಮಕ ಸಂಬಂಧದ ಅವಶ್ಯಕತೆ ಇರುತ್ತದೆ. ಇದನ್ನು ಗರ್ಭಧರಿಸಿ ತಾಯಿಯಾದ ಹೆಣ್ಣು ಮಾತ್ರ ಪೂರೈಸಬಲ್ಲಳು. ಹೀಗಾಗಿ ಗರ್ಭವತಿ ಹೆಣ್ಣೊಬ್ಬಳ ಹೊಟ್ಟೆಯಲ್ಲಿರುವ ಮಗುವಿನ ತಂದೆಯೆನಿಸುವ 'ಬಿಲ್ಲು-ಬಾಣದ ಸಮಾರಂಭ'ದಂತಹ ಆಚರಣೆಗಳು ಪ್ರಾಚೀನ ಸಮುದಾಯಗಳಲ್ಲಿ ರೂಢಿಗತವಾದವು. ಯಾರು ಈ ಸಮಾರಂಭ ವನ್ನು ನಡೆಸಿ ಸಮುದಾಯಕ್ಕೆ ಔತಣವೇರ್ಪಡಿಸುತ್ತಾನೋ ಆತನು ಆ ಮಗುವಿನ ಸಾಮಾಜಿಕ ತಂದೆ ಎನಿಸಿಕೊಳ್ಳುತ್ತಾನೆ. ಇಲ್ಲಿ ಸ್ತ್ರೀಯು ಗರ್ಭಧರಿಸಿದ್ದು ಯಾರಿಂದ ಎನ್ನುವ ಪ್ರಶ್ನೆಯೇ ಏಳುವುದಿಲ್ಲ. ಆದುದರಿಂದ ಜೈವಿಕ ತಂದೆ ಯಾರೇ ಆಗಿದ್ದರೂ ಅದು ಗಣನೆಗೆ ಮುಖ್ಯವಲ್ಲ; ಸಾಮಾಜಿಕ ಪಿತೃತ್ವವೇ ಮುಖ್ಯವಾದುದು. ಹೀಗೆ ಸಂತಾನದ ಅಪೇಕ್ಷೆ, ಮಕ್ಕಳ ಬೆಳವಣಿಗೆ, ವೃದ್ಧಾಪ್ಯದಲ್ಲಿ ಮಕ್ಕಳ ಮೇಲಿನ ಅವಲಂಬನೆ ಇತ್ಯಾದಿ ಅಂಶಗಳು ವ್ಯಕ್ತಿಗಳನ್ನು ಸಣ್ಣ ಸಣ್ಣ ಘಟಕಗಳಲ್ಲಿ ಒಗ್ಗೂಡಿ ಬದುಕುವ ಅನಿವಾರ್ಯತೆಯನ್ನುಂಟುಮಾಡಿದವು. ಈ ಒಗ್ಗೂಡುವಿಕೆಯ ಪರಿಣಾಮವಾಗಿ ವಿವಾಹವೆಂಬ ಸಂಸ್ಥೆ ಉದಯಿಸಿತು. ಹೀಗೆ ವಿವಾಹದ ಅರ್ಥವನ್ನು ಅದು ಗೈಯುವ ಸಾಮಾಜಿಕ ಕಾರ್ಯಗಳಿಂದ ಕಂಡುಕೊಳ್ಳಬೇಕಾಗಿದೆ.

ಸಮುದಾಯಗಳಲ್ಲಿ ಆಸ್ತಿಯ ಕಲ್ಪನೆ, ಶ್ರಮವಿಭಜನೆ, ವಂಶಗತವಾಗಿ ಆಸ್ತಿ ಹಕ್ಕಿನ ಮುಂದುವರಿಯುವಿಕೆ, ತಂದೆಯಿಂದ ಮಕ್ಕಳಿಗೆ ಉದ್ಯೋಗ-ಕೌಶಲ್ಯಗಳ ಸಂವಹನೆ,

ಪರಿಣಾಮವಾಗಿ ಸಾಮಾಜಿಕ ಜಾತಿ ವರ್ಗಗಳ ಸ್ತರ ಭೇದದ ರಚನೆಯುಂಟಾಗಿ ವಿವಾಹವು ಬಹುಮಟ್ಟಿಗೆ ಸಂಕೀರ್ಣಗೊಂಡಿತು. ವಧು-ವರರ ಆಯ್ಕೆಯು ಜಾತಿ-ಅಂತಸ್ತುಗಳಿಂದ ಸೀಮಿತಗೊಂಡಿತು. ಅದರಲ್ಲಿ ಧಾರ್ಮಿಕ ವಿವರಣೆಗಳು, ಪಾತಿವ್ರತ್ಯ, ವೈಧವ್ಯ ಇತ್ಯಾದಿ ನಿಯಮಗಳುಂಟಾದುದ್ದಲ್ಲದೆ ಅದು ಅನೇಕ ವಿಧಗಳಲ್ಲಿರುವುದು ಕಂಡುಬಂತು. ತತ್ಕಾಲೀನ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಪರಿಸ್ಥಿತಿಗೆ ಅನುಗುಣವಾಗಿ ಕುಟುಂಬವು ರೂಪುಗೊಂಡು ವಿವಾಹ ಸಂಪ್ರದಾಯದ ಅರ್ಥದಲ್ಲಿ ವ್ಯತ್ಯಾಸಗಳುಂಟಾದವು. ಅದೇನಿದ್ದರೂ ಮೂಲದಲ್ಲಿ ವಿವಾಹವು ಗಂಡು-ಹೆಣ್ಣಿನ ಲೈಂಗಿಕ ಸಂತೃಪ್ತಿಗೆ ಹಾಗೂ ಮಕ್ಕಳನ್ನು ಪಡೆದು ಕುಟುಂಬ ಸ್ಥಾಪಿಸುವುದಕ್ಕೆ ಅವಕಾಶ ನೀಡುವ ಸಂಸ್ಥೆಯಾಗಿದೆ ಎಂದು ತಿಳಿಯಬಹುದಾಗಿದೆ.

ಗುಣಲಕ್ಷಣಗಳು

ವಿವಾಹವು ಕೆಲವು ನಿರ್ದಿಷ್ಟ ಗುಣಲಕ್ಷಣಗಳನ್ನು ಪಡೆದಿರುತ್ತದೆ.

೧. ವಿಶ್ವವ್ಯಾಪಕತೆ

ಪ್ರತಿಯೊಂದು ಸಮಾಜದಲ್ಲೂ 'ವಿವಾಹವು' ಒಂದು ಪ್ರಧಾನ ಸಂಸ್ಥೆಯಾಗಿದೆ; ಅದು ಮಾನವ ಸಮಾಜದ ಹುಟ್ಟಿನಿಂದ ಅಂತ್ಯದವರೆಗೂ ಮುಂದುವರೆಯುತ್ತದೆ. ಇದೊಂದು ಜೀವನದ ಪ್ರಮುಖ ಹಾಗೂ ಪವಿತ್ರ ಕರ್ತವ್ಯ ಎಂದು ಪರಿಗಣಿಸಲ್ಪಟ್ಟಿದೆ. ಹಿಂದೂಗಳಲ್ಲಿ 'ವಿವಾಹ' ಹದಿನಾರು ಪವಿತ್ರ ಸಂಸ್ಕಾರಗಳಲ್ಲಿ ಪ್ರಮುಖವಾಗಿದೆ.

೨. ಸಾಮಾಜಿಕ ನೀತಿ-ನಿಯಮಗಳು

ವಿವಾಹವು ಸಾಮಾಜಿಕ ನಿಯಮವಾಗಿರುತ್ತದೆ; ಮಾನವರ ಲೈಂಗಿಕ ಬಯಕೆಯ ಪೂರೈಕೆಗೆ ಸಾಮಾಜಿಕ ಸಮ್ಮತಿ ಅಗತ್ಯವಾಗಿರುತ್ತದೆ. ಪದ್ಧತಿ, ನೀತಿ ನಿಬಂಧನೆಗಳಿಂದ ಅದು ಒಂದು ಸಂಸ್ಥೆಯಾಗಿದ್ದು, ಅನುವಂಶೀಯತೆಯ ಹಕ್ಕು ಬಾಧ್ಯತೆಗಳಿಗೆ ಅನ್ವಯವಾಗುತ್ತದೆ.

೩. ಧಾರ್ಮಿಕ ವಿಧಿ-ನಂಬಿಕೆಗಳು

ವಿವಾಹವು ಧಾರ್ಮಿಕ ಕ್ರಿಯೆಗಳನ್ನು ಅವಲಂಬಿಸಿದೆ. ಪ್ರತಿ ಸಮಾಜದಲ್ಲಿ ವಿವಾಹವು ನಂಬಿಕೆ, ಪದ್ಧತಿ, ಸಂಪ್ರದಾಯ, ಆಚರಣೆಗಳಿಂದ ಒಂದು ಸಾರ್ವಜನಿಕ ಸಮಾರಂಭವೆನ್ನಿಸುತ್ತದೆ. ಹಿಂದೂ ವಿವಾಹ ಪದ್ಧತಿಯಲ್ಲಿ ಧಾರೆ ಎರೆದುಕೊಡುವುದು, ಪಾಣಿಗ್ರಹಣ, ಮಾಂಗಲ್ಯಧಾರಣ, ಸಪ್ತಪದಿ ಮುಂತಾದ ವಿಧಿಗಳು ಮಹತ್ವದ್ದಾಗಿವೆ.

೪. ಹಕ್ಕು ಮತ್ತು ಕರ್ತವ್ಯಗಳು

ವಿವಾಹವು ಸ್ತ್ರೀ-ಪುರುಷರಿಗೆ ಅವರ ಹಕ್ಕು ಮತ್ತು ಕರ್ತವ್ಯಗಳನ್ನು ತಿಳಿಸುತ್ತದೆ. ವಿವಾಹದ ತರುವಾಯದ ಘಟ್ಟವಾದ 'ಕುಟುಂಬ'ದಲ್ಲಿ ಪ್ರತಿ ವ್ಯಕ್ತಿಯ ಪ್ರಕಾರ್ಯಗಳೂ ಪೂರ್ವನಿರ್ಧಾರಿತವಾಗಿರುತ್ತವೆ. ಹಿಂದೂ ವಿವಾಹದ ನಂತರ ಪತಿಯು ತನ್ನ ಪತ್ನಿ-ಮಕ್ಕಳ ರಕ್ಷಣೆಗೂ, ಪತ್ನಿಯು ತನ್ನ ಪತಿ-ಮಕ್ಕಳ ಯೋಗಕ್ಷೇಮಕ್ಕೂ ಹೊಣೆಹೊರುತ್ತಾರೆ.

೫. ಸಂಬಂಧ-ಬಾಂಧವ್ಯ

ವಿವಾಹವು ಸ್ತ್ರೀ-ಪುರುಷರಲ್ಲಿ ಬಾಂಧವ್ಯವನ್ನು ಕಲ್ಪಿಸುತ್ತದೆ. ವಿವಾಹದ ನಂತರ ಜೊತೆಗಾರ-ಜೊತೆಗಾತಿಯರ ಸಂಖ್ಯೆಯು ಸಮಾಜದ ವಿವಿಧ ಪ್ರಕಾರಗಳಲ್ಲಿ ಪ್ರಚಲಿತವಿರುವಂತೆ ನಿರ್ಧಾರಿತವಾಗುತ್ತದೆ.

೬. ಶಾಶ್ವತ ಸಹಬಾಳ್ವೆ

ವಿವಾಹ ಸಂಬಂಧವು ಬಹುಮಟ್ಟಿಗೆ ಶಾಶ್ವತವಾಗಿರುತ್ತದೆ. ಏಕೆಂದರೆ ಅದು ಕೇವಲ ಲೈಂಗಿಕ ಸಂತೃಪ್ತಿಗೆ ಮಾತ್ರ ಸೀಮಿತವಾಗಿಲ್ಲ. ಸಂತತಿ, ಪತಿ-ಪತ್ನಿಯರಲ್ಲಿ ಅನುರಾಗ, ಜೀವನಾಧಾರಿತ ಸಹಬಾಳ್ವೆ, ಪ್ರೀತಿ, ಸಹಕಾರ ಮೊದಲಾದುವುಗಳು ಈ ಸಂಬಂಧವನ್ನು ಬಲಪಡಿಸುತ್ತವೆ.

೭. ಸಾಮಾಜಿಕ ಒಕ್ಕೂಟ

ವಿವಾಹವು ಸಾಮಾಜಿಕ ಅನುಮೋದನೆಯ ಒಕ್ಕೂಟವಾಗಿದೆ. ಸಾಮಾಜಿಕ ದೃಷ್ಟಿಕೋನದಲ್ಲಿ ವಿವಾಹದ ಸಂಸ್ಕಾರಗಳು, ಆಚರಣಾ ವಿಧಾನಗಳು, ಸಮಾರಂಭಗಳು ನಿರ್ಧಾರಿತವಾಗಿದ್ದು, ಇವುಗಳಿಲ್ಲದಿದ್ದಲ್ಲಿ ವಿವಾಹವು ಕ್ರಮಬದ್ಧವಾಗಿರುವುದಿಲ್ಲವೆಂದು ವ್ಯಕ್ತವಾಗುತ್ತದೆ.

ವಿವಾಹದ ಪ್ರಕಾರ್ಯಗಳು

ವಿವಾಹವು ಅತ್ಯಂತ ಅವಶ್ಯಕವಾದ ಸಾಮಾಜಿಕ ಸಂಸ್ಥೆಯಾಗಿದ್ದು ವಿಶ್ವವ್ಯಾಪಿಯಾದುದಾಗಿದೆ. ತಾತ್ಕಾಲಿಕ ವಿವಾಹಗಳಿಂದ ತೊಡಗಿ ಜನ್ಮ ಜನ್ಮಾಂತರದ ಸಂಬಂಧವಿದೆಯೆಂದು ನಂಬಿಕೆಯ ಅವಿಚ್ಛಿನ್ನ ವಿವಾಹಗಳವರೆಗೆ, ಏಕಸಂಗಾತಿ ವಿವಾಹದಿಂದ ತೊಡಗಿ ಬಹುಸಂಗಾತಿ ಹಾಗೂ ಗುಂಪು ವಿವಾಹಗಳವರೆಗೆ, ತೀರ ಸರಳವಾದ ಕೈ ಹಿಡಿಯುವ ಆಚಾರದಿಂದ ತೊಡಗಿ ಬಹು ವಿಜೃಂಭಣೆಯಿಂದ ಕೆಲವು ದಿನಗಳ ಆಚರಣೆಗಳುಳ್ಳ ವಿವಾಹವು ಅಸ್ತಿತ್ವದಲ್ಲಿರುವುದನ್ನು ಕಾಣಬಹುದು.

ರಾಬರ್ಟ್ ಲೂಯಿಯವರು ವಿವಾಹ ಮತ್ತು ಕುಟುಂಬಗಳನ್ನು ಸಂಸ್ಕೃತಿಯ ಸೌಧ ನಿರ್ಮಾಣದಲ್ಲಿ ಜೈವಿಕ ಅಸ್ತಿಭಾರವೆಂದು ಪರಿಗಣಿಸಿರುತ್ತಾರೆ. ಬಾಲ್ಯ, ಯೌವನ, ಕೌಮಾರ್ಯ, ವಾರ್ಧಕ್ಯಗಳಂತೆ ವಿವಾಹವು ಮಾನವಜೀವನದಲ್ಲಿ ತೀರ ಸಹಜ ಹಾಗೂ ಸ್ವಾಭಾವಿಕ ಹಂತವಾಗಿರುತ್ತದೆ. ವಿವಾಹವು ಸಾಮಾಜಿಕ ಪ್ರಾಮುಖ್ಯತೆಯನ್ನು ಪಡೆದಿದೆ. ಏಕೆಂದರೆ ಈ ಸಂಸ್ಥೆಯು ಅಸ್ತಿತ್ವದಲ್ಲಿಲ್ಲದಿದ್ದಲ್ಲಿ, ಸಮಾಜದಲ್ಲಿ ಅವ್ಯವಸ್ಥೆಯುಂಟಾಗುತ್ತಿತ್ತು. ಮಾನವನ ವಿವಿಧ ಚಟುವಟಿಕೆಗಳಲ್ಲಿ ಸೃಜನಶೀಲ ಮತ್ತು ರಚನಾತ್ಮಕ ವಿಧಾನಗಳಿದ್ದು, ಇವು ಸಮಾಜಕ್ಕೆ ಉಪಯುಕ್ತವಾಗುವಂತೆ ವಿವಾಹವು ನಿರ್ಧರಿಸುತ್ತದೆ.

ವಿವಾಹವು ಒಂದು ಬಹುಮುಖ್ಯ ಸಾಮಾಜಿಕ ಸಂಸ್ಥೆಯಾಗಿದ್ದು, ಅದರ ಸ್ವರೂಪ ಮತ್ತು ಕರ್ತವ್ಯಗಳು ಸಾಂಸ್ಕೃತಿಕ ಬದಲಾವಣೆಗೆ ಅನುಸಾರವಾಗಿರುತ್ತವೆ. ಇದು ಅನೇಕ ಪ್ರಮುಖ ಕರ್ತವ್ಯಗಳನ್ನು ನಿಭಾಯಿಸುತ್ತದೆ.

೧. ವಿವಾಹವು ಕುಟುಂಬ ಸ್ಥಾಪನೆಗೆ ತಳಹದಿಯನ್ನೊದಗಿಸುತ್ತದೆ

ಕುಟುಂಬದ ಅಸ್ತಿತ್ವದ ಹಿಂದೆ ನೈತಿಕ ಸಂಬಂಧಗಳ ತಳಹದಿಯಿರಬೇಕಾಗುತ್ತದೆ. ಸಮಾಜವು ನವಪೀಳಿಗೆಯ ನಿರ್ಮಾಣದ ಮೂಲಕ ಪುನಾರಚನೆಗೊಳ್ಳುತ್ತದೆ. ಹುಟ್ಟಿದ ಮಗುವಿಗೆ ದೈಹಿಕ ಅವಶ್ಯಕತೆಗಳನ್ನಷ್ಟೇ ಪೂರೈಸಿದರೆ ಸಾಲದು. ಅದಕ್ಕೆ ಹೆಸರು, ಸಾಮಾಜೀಕರಣ, ಶಿಕ್ಷಣ, ಸಾಮಾಜಿಕ ಸ್ಥಾನಮಾನ ಇತ್ಯಾದಿಗಳು ಕುಟುಂಬದಿಂದಲೇ ಲಭಿಸಬೇಕು. ವಿವಾಹದ ಮೂಲಕ ಸ್ಥಾಪಿಸಲಾದ ಸಂಬಂಧದಲ್ಲಿ ಹುಟ್ಟಿದ ಮಗು ಮಾತ್ರ ವಂಶಾಧಿಕಾರಕ್ಕೆ ಬಾಧ್ಯಸ್ಥವಾಗುತ್ತದೆ. ಹಾಗಾಗಿ ಕುಟುಂಬ ಸ್ಥಾಪನೆಯ ಮಹತ್ವಪೂರ್ಣವಾದ ಕಾರ್ಯವನ್ನು ವಿವಾಹವು ನಿರ್ವಹಿಸುತ್ತದೆ.

೨. ಲೈಂಗಿಕ ಆಕಾಂಕ್ಷೆಗಳ ತೃಪ್ತಿ

ವಿವಾಹವು ವ್ಯವಸ್ಥಿತ ರೀತಿಯಲ್ಲಿ ವ್ಯಕ್ತಿಯ ಲೈಂಗಿಕ ಆಸೆ ಮತ್ತು ಆಕಾಂಕ್ಷೆಗಳನ್ನು ಈಡೇರಿಸುತ್ತದೆ. ಮಾನವರಲ್ಲಿ ಈ ಬಯಕೆಗಳು ಸದಾಕಾಲಕ್ಕೂ ವ್ಯಾಪಕವಾಗಿರುವುದರಿಂದ ಇದರ ನಿಯಂತ್ರಣವು ಅವಶ್ಯಕ. ವಿವಾಹವು ಕೆಲವು ನಿರ್ಬಂಧಿತ ನೀತಿನಿಯಮಗಳಿಗೆ ಅನುಗುಣವಾಗಿ ಈ ಬಯಕೆಗಳನ್ನು ನೆರವೇರಿಸುತ್ತದೆ. ಇದರಿಂದ ಮಾನವ ಜೀವನವು ವಿವಾಹಪೂರ್ವ ಹಾಗೂ ವಿವಾಹ ನಂತರದಲ್ಲಿ ನೀತಿಯುತ ಹಾಗೂ ಶಾಂತಿಯುತವಾಗಿದ್ದು, ವ್ಯವಸ್ಥಿತವಾಗಿರುತ್ತದೆ.

೩. ವಿವಾಹವು ಅಗಮ್ಯಗಮನದ ನಿಷೇಧಗಳನ್ನು ವಿಧಿಸುತ್ತದೆ

ಒಂದು ಕುಟುಂಬವು ವ್ಯವಸ್ಥಿತವಾಗಿ ಸಾಗಲು ಅಗಮ್ಯಗಮನದ (ತೀರ ಸಮೀಪದ ಸಂಬಂಧಿಗಳ ನಡುವೆ ಲೈಂಗಿಕ ಸಂಪರ್ಕ ನಿಷೇಧ) ವಿರುದ್ಧ ಇರುವ ನಿಯಮಗಳು ಸಹಕಾರಿಯಾಗಿವೆ. ಯಾರ ಜತೆಯಲ್ಲಿ ವಿವಾಹ ಸಂಬಂಧವನ್ನು ನಿಷೇಧಿಸಲಾಗಿದೆಯೋ ಅವರೊಡನೆ ಲೈಂಗಿಕ ಸಂಬಂಧದ ಬಯಕೆಯೇ ಹುಟ್ಟುವುದಿಲ್ಲ. ಆದುದರಿಂದ ತಂದೆ-ಮಗಳು, ತಾಯಿ-ಮಗ, ಅಣ್ಣ-ತಂಗಿ ಇವರ ನಡುವೆ ಲೈಂಗಿಕ ಆಕರ್ಷಣೆಗಾಗಿ ಪೈಪೋಟಿ ಅಥವಾ ದ್ವೇಷಾಸೂಯೆ ಹುಟ್ಟುವುದಿಲ್ಲ. ಇದಕ್ಕೆ ವಿವಾಹದ ನಿಯಮಗಳೇ ಕಾರಣವಾಗಿವೆ. ಇದಲ್ಲದೆ ಸ್ವಜಾತಿ ವಿವಾಹವನ್ನು ವಿಧಿಸಲಾಗಿದ್ದು ಸಗೋತ್ರ ವಿವಾಹಕ್ಕೆ ನಿಷೇಧವಿದೆ. ಇದರಿಂದಾಗಿ ವಿವಾಹ ಸಂಬಂಧಿಗಳು ಯಾರಾಗಿರಬೇಕೆಂಬ ಕುಲಗೋತ್ರ-ರಕ್ತಸಂಬಂಧದ ನಿಯಮಗಳು ಸಮಾಜದಲ್ಲಿ ಯಥಾಸ್ಥಿತಿಯ ಮುಂದುವರಿಕೆಗೆ ಸಹಾಯಕವಾಗಿವೆ.

೪. ವಿವಾಹವು ದಂಪತಿಗಳಲ್ಲಿ ಭಾವನಾತ್ಮಕ ಸಂಬಂಧವನ್ನು ಬೆಳೆಸುತ್ತದೆ

ಗಂಡ ಹೆಂಡತಿಯ ಸಂಬಂಧದಲ್ಲಿ ಲೈಂಗಿಕ ತೃಪ್ತಿಯಷ್ಟೇ ಮುಖ್ಯವಾಗುವುದಿಲ್ಲ. ಪರಸ್ಪರ ಪ್ರೇಮ, ಅನುಕಂಪ, ಸೇವೆ, ನಿಷ್ಠೆ, ತ್ಯಾಗ ಇತ್ಯಾದಿಗಳು ದಂಪತಿಗಳ ನಡುವೆ ಭಾವನಾತ್ಮಕ ಸಂಬಂಧವನ್ನು ಬೆಳೆಸುತ್ತವೆ. ಮುಖ್ಯವಾಗಿ ವೃದ್ಧಾಪ್ಯದಲ್ಲಿ ಸಹಬಾಳ್ವೆ, ಸಹಚಿಂತನೆ,

ಸಮಾಧಾನ-ಸಹಕಾರಗಳು ಗಂಡ-ಹೆಂಡಿರ ನಡುವೆ ತೀರ ಸಹಜವಾಗಿವೆ. ವ್ಯಕ್ತಿಯ ಅಪೂರ್ಣತೆಯನ್ನು ತುಂಬುವ ಈ ಬಗೆಯ ಸಂಬಂಧಕ್ಕೆ ವಿವಾಹವೇ ಕಾರಣವಾಗಿದೆ.

೫. ವಿವಾಹವು ಆರ್ಥಿಕ ಸಹಕಾರದ ನೆಲೆಯಾಗಿದೆ

ವಿವಾಹದ ಮೂಲಕ ಸಂಗಾತಿಗಳಾದ ದಂಪತಿಗಳು ಪರಸ್ಪರ ಪೂರಕವಾದ ಕಾರ್ಯಗಳನ್ನು ಹಂಚಿಕೊಂಡು ಮಾಡುತ್ತಾರೆ. ಇದು ಸ್ತ್ರೀ-ಪುರುಷರ ನಡುವಿನ ಶ್ರಮವಿಭಜನೆಗೆ ಮೂಲವಾಗಿದೆ. ಆದಿಮ ಸಮುದಾಯಗಳಲ್ಲೂ ಆಧುನಿಕ ಯುಗದಲ್ಲೂ ಗಂಡು-ಹೆಣ್ಣುಗಳ ನಡುವೆ ಸ್ಪಷ್ಟವಾದ ಶ್ರಮವಿಭಜನೆ ಇರುವುದು ಕಂಡುಬರುತ್ತದೆ.

೬. ವಿವಾಹವು ಸಾಮಾಜಿಕ ಸಮಗ್ರತೆಗೆ ಕಾರಣವಾಗಿದೆ

ವಿವಾಹವೆಂದರೆ ಅದು ಕೇವಲ ಎರಡು ವ್ಯಕ್ತಿಗಳ ನಡುವೆ ಜರುಗುವ ಕ್ರಿಯೆಯಲ್ಲ. ಅದು ಎರಡು ಕುಟುಂಬಗಳು ಹಾಗೂ ಎರಡು ಸಮುದಾಯಗಳ ನಡುವೆ ಸಂಬಂಧ ಏರ್ಪಡುವ ಮಾಧ್ಯಮವಾಗಿದೆ. ವಧೂವರರ ಆಯ್ಕೆ, ಮದುವೆಯ ನಿಶ್ಚಿತಾರ್ಥ ಹಾಗೂ ಏರ್ಪಾಡುಗಳಲ್ಲಿ ಅನೇಕ ಸಂಬಂಧಿಗಳು ಪಾಲ್ಗೊಳ್ಳುತ್ತಾರೆ ಹಾಗೂ ಸಂಭ್ರಮ ಪಡುತ್ತಾರೆ. ವಿವಾಹವು ಅನೇಕ ವೈಮನಸ್ಸುಗಳನ್ನು ಪರಿಹರಿಸುವ ಸಂದರ್ಭವೂ ಆಗಿರುತ್ತದೆ. ಹಿಂದೆ ಯುದ್ಧಗಳು ಒಪ್ಪಂದದಲ್ಲಿ ಕೊನೆಗೊಂಡ ಸಂದರ್ಭಗಳಲ್ಲಿ ರಾಜಕುಟುಂಬಗಳ ನಡುವೆ ವೈವಾಹಿಕ ಸಂಬಂಧಗಳೇರ್ಪಡುತ್ತಿದ್ದುದೂ ಇದೆ.

೭. ದೈಹಿಕ ಮತ್ತು ಮಾನಸಿಕ ಶಾಂತಿ

ಸ್ತ್ರೀ-ಪುರುಷರಿಗೆ ವಿವಾಹದಿಂದ ದೈಹಿಕ ಹಾಗೂ ಮಾನಸಿಕ ಶಾಂತಿ ದೊರಕುತ್ತದೆ. ಪ್ರೇಮ ಮತ್ತು ಮಧುರದಾಂಪತ್ಯ ಉಳ್ಳ ಪತಿ-ಪತ್ನಿಯರು ಭಾವೋದ್ವೇಗಗಳನ್ನು ನಿಯಂತ್ರಿಸಬಹುದಾಗಿದೆ. ಜೀವನದಲ್ಲಿ ಪತಿ-ಪತ್ನಿಯರು ಸಹಜೀವನ, ತಮಗೆ ಸೇರಿದ ಆಸ್ತಿಯ ಬಗ್ಗೆ ಅಭಿಮಾನ ಮತ್ತು ಸಾಮಾಜಿಕ-ಆರ್ಥಿಕ ಭದ್ರತೆಯನ್ನು ಪಡೆಯಬಹುದಾಗಿದೆ.

ಹೀಗೆ ವಿವಾಹವು ಸಾಮಾಜಿಕ-ರಾಜಕೀಯ ಸಮಗ್ರತೆಗೆ ಕಾರಣವಾಗುತ್ತದೆ. ಅದು ವ್ಯಕ್ತಿಯ ಸಾಮಾಜಿಕ ಹಾಗೂ ವೈಯಕ್ತಿಯ ಅಗತ್ಯಗಳನ್ನು ಪೂರೈಸುವ ಸಂಸ್ಥೆಯಾಗಿ ತುಂಬಾ ಮಹತ್ವವನ್ನು ಪಡೆದಿದೆ.

೬.೨. ವಿವಾಹದ ವಿಧಗಳು

ವಿವಾಹವು ಒಂದು ಸಾರ್ವತ್ರಿಕ ಸಾಮಾಜಿಕ ಸಂಸ್ಥೆಯಾಗಿದೆ. ಪ್ರಪಂಚದಲ್ಲಿ ವಿವಿಧ ರೀತಿಯ ವಿವಾಹ ಪ್ರಕಾರಗಳನ್ನು ನಾವು ಕಾಣಬಹುದು. ವಿವಾಹದ ನಾಲ್ಕು ಮುಖ್ಯ ವಿಧಗಳೆಂದರೆ : ಬಹುಪತ್ನಿತ್ವ, ಬಹುಪತಿತ್ವ, ಏಕಸಂಗಾತಿ ವಿವಾಹ ಹಾಗೂ ಸಾಮೂಹಿಕ ವಿವಾಹ.

ಬಹುಪತ್ನಿತ್ವ ವಿವಾಹದ ಪ್ರಕಾರದಲ್ಲಿ ಒಬ್ಬ ಪುರುಷನು ಎರಡು ಅಥವಾ ಹೆಚ್ಚು ಸ್ತ್ರೀಯರನ್ನು ಪತ್ನಿಯರನ್ನಾಗಿ ಹೊಂದಿರುತ್ತಾನೆ. ಈ ಪದ್ಧತಿ ಎಸ್ಕಿಮೋಗಳು, ನೀಗ್ರೋಗಳು,

ನಾಗಾ ಬುಡಕಟ್ಟಿನವರು ಹಾಗೂ ಮಧ್ಯಪ್ರಾಚ್ಯದ ಅರಬ್‌ರಲ್ಲಿ ವ್ಯಾಪಕವಾಗಿದೆ. ಒಬ್ಬ ಸ್ತ್ರೀಯು ಒಬ್ಬನಿಗಿಂತ ಹೆಚ್ಚು ಪುರುಷರನ್ನು ಏಕಕಾಲದಲ್ಲಿ ಮದುವೆಯಾದರೆ ಆ ವಿವಾಹ ರೀತಿಯು ಬಹುಪತಿತ್ವ ಎನ್ನಿಸಿಕೊಳ್ಳುತ್ತದೆ. ನೀಲಗಿರಿಯ ತೋಡರು, ಟಿಬೆಟ್‌ನ ಕೆಲವು ಬುಡಕಟ್ಟು ಜನಾಂಗಗಳಲ್ಲಿ ಈ ವಿಧಾನವು ಬಳಕೆಯಲ್ಲಿದೆ. ಏಕಸಂಗಾತಿ ವಿವಾಹದಲ್ಲಿ ಸ್ತ್ರೀ ಅಥವಾ ಪುರುಷನು ಕೇವಲ ಒಬ್ಬ ಪುರುಷ ಅಥವಾ ಸ್ತ್ರೀಯೊಡನೆ ವಿವಾಹವಾಗುತ್ತಾನೆ. ಇದು ಸರ್ವಸಮ್ಮತವಾಗಿದ್ದು ವಿಶ್ವವ್ಯಾಪಿಯಾಗಿದೆ. ಸಮೂಹ ವಿವಾಹದಲ್ಲಿ ಇಬ್ಬರು ಅಥವಾ ಹೆಚ್ಚು ಸ್ತ್ರೀಯರು ಇಬ್ಬರು ಅಥವಾ ಹೆಚ್ಚು ಪುರುಷರನ್ನು ಏಕಕಾಲದಲ್ಲಿ ವಿವಾಹ ವಾಗುತ್ತಾರೆ. ಇಲ್ಲಿ ಗಂಡಸರು ಸಾಮಾನ್ಯ ಪತಿಯರಾಗಿದ್ದರೆ, ಹೆಂಗಸರು ಸಾಮಾನ್ಯ ಪತ್ನಿಯರಾಗಿರುತ್ತಾರೆ.

ಈ ನಾಲ್ಕು ಪ್ರಮುಖ ವಿಧಗಳಲ್ಲದೆ, ವಿವಾಹಗಳನ್ನು ಇನ್ನೂ ಅನೇಕ ಪ್ರಕಾರಗಳಾಗಿ ವಿಂಗಡಿಸಬಹುದು. ಇವುಗಳಲ್ಲಿ ಒಂದು ವಿಧವೆಂದರೆ ಒಳಬಾಂಧವ್ಯ ಮತ್ತು ಹೊರ ಬಾಂಧವ್ಯ. ಒಂದು ಜಾತಿ ಅಥವಾ ವರ್ಗದೊಳಗೆ ವಿವಾಹ ಸಂಬಂಧ ಬೆಳೆಸುವುದೇ ಒಳಬಾಂಧವ್ಯ, ಉಪಜಾತಿ ಒಳಬಾಂಧವ್ಯ ಹಾಗೂ ಜನಾಂಗ ಒಳಬಾಂಧವ್ಯ ಇವು ಒಳಬಾಂಧವ್ಯದ ವಿಧಗಳಾಗಿವೆ. ತನ್ನ ಕುಲ ಅಥವಾ ಸಮೂಹವನ್ನು ಬಿಟ್ಟು ಇತರ ಕುಲ ಅಥವಾ ಸಮೂಹಗಳಲ್ಲಿ ವಿವಾಹವಾಗುವ ಪದ್ಧತಿಯು ಹೊರಬಾಂಧವ್ಯವಾಗಿದೆ. ಒಳಬಾಂಧವ್ಯವು ಸಂಪ್ರದಾಯಬದ್ಧವೂ, ಹೊರಬಾಂಧವ್ಯವು ಪ್ರಗತಿದಾಯಕವೂ ಆಗಿವೆ.

ಇನ್ನು ಭಿನ್ನಭಿನ್ನ ಜಾತಿಗಳಿಗೆ ಸೇರಿದ ಸ್ತ್ರೀ-ಪುರುಷರು ಪರಸ್ಪರ ವಿವಾಹವಾದರೆ ಅದು ಅಂತರಜಾತೀಯ ವಿವಾಹ ಎನಿಸಿಕೊಳ್ಳುತ್ತದೆ. ಅನುಲೋಮ ಮತ್ತು ಪ್ರತಿಲೋಮ ಪದ್ಧತಿಗಳು ಅನುಮೋದಿತ ಅಂತರಜಾತೀಯ ವಿವಾಹದ ಸ್ವರೂಪವಾಗಿವೆ. ಅನುಲೋಮ ವಿವಾಹ ಪದ್ಧತಿಯಲ್ಲಿ ಉತ್ತಮಕುಲದ ಪುರುಷನು ಕೆಳವರ್ಗದ ಸ್ತ್ರೀಯನ್ನು ವಿವಾಹ ವಾಗುವನು; ಪ್ರತಿಲೋಮ ಪದ್ಧತಿಯು ಉತ್ತಮಕುಲದ ಸ್ತ್ರೀ ಕೆಳವರ್ಗದ ಪುರುಷನನ್ನು ವಿವಾಹವಾಗುವ ಕ್ರಮವಾಗಿದೆ.

ಒಬ್ಬ ಪುರುಷನು ಮೃತಳಾದ ತನ್ನ ಸ್ತ್ರೀಯ ತಂಗಿಯನ್ನು ವಿವಾಹವಾದರೆ ಅದು ಜಾಯಭಗನಿ (ಸೊರೋರೇಟ್) ವಿವಾಹವೆಂದು ಕರೆಯಲಾಗುವುದು. ಅಂತೆಯೇ ಅಣ್ಣನ ವಿಧವೆಯನ್ನು ತಮ್ಮನು ವಿವಾಹವಾಗುವುದಕ್ಕೆ ಮೈದುನ ವಿವಾಹ (ಲೆವಿರೇಟ್) ಪದ್ಧತಿ ಎಂದು ಹೆಸರು.

ಅ. ಬಹುಪತ್ನಿತ್ವ

ಒಬ್ಬ ಗಂಡು ಏಕಕಾಲದಲ್ಲಿ ಅನೇಕ ಹೆಣ್ಣುಗಳನ್ನು ಮನೆಪತ್ನಿಯರನ್ನಾಗಿ ಪಡೆಯುವುದಕ್ಕೆ ಬಹುಪತ್ನಿತ್ವ ವಿವಾಹವೆನ್ನಲಾಗಿದೆ. ಆದುದರಿಂದ ಬಹುಪತ್ನಿತ್ವವೆಂದರೆ ಗಂಡಿಗೆ ಏಕಕಾಲದಲ್ಲಿ ಒಬ್ಬಳಿಗಿಂತ ಹೆಚ್ಚು ಹೆಂಡರನ್ನು ಹೊಂದಲು ಅವಕಾಶವಿದೆಯೆಂದರ್ಥ. ಆದರೆ ಈ ಅವಕಾಶ ಹೆಣ್ಣುಗಳಿಗಿರುವುದಿಲ್ಲ. ಹಿಂದಿನ ಕಾಲದಲ್ಲಿ ಬಹುಪತ್ನಿತ್ವಕ್ಕೆ ಸಮಾಜ

ಅವಕಾಶ ನೀಡಿತ್ತು. ಇಸ್ಲಾಂ ಧರ್ಮವು ಬಹುಪತ್ನಿತ್ವವನ್ನು ಈಗಲೂ ಪುರಸ್ಕರಿಸುತ್ತದೆ. ರಾಜಮಹಾರಾಜರು ಮತ್ತು ಶ್ರೀಮಂತರು ಬಹುಪತ್ನಿತ್ವ ಪದ್ಧತಿಯನ್ನು ಅನುಸರಿಸಿದ್ದರು. ಅಲ್ಲದೆ ಭಾರತದ ನಾಗಾ, ಬೈಗಾ ಮತ್ತು ಗೊಂಡರಲ್ಲಿ, ಆಫ್ರಿಕಾದ ನೀಗ್ರೋಗಳಲ್ಲಿ, ಅಮೆರಿಕನ್ ಇಂಡಿಯನ್‌ರಲ್ಲಿ, ಎಸ್ಕಿಮೊಗಳಲ್ಲಿ ಹೀಗೆ ಅನೇಕ ಬುಡಕಟ್ಟು ಜನಾಂಗಗಳಲ್ಲಿ ಬಹುಪತ್ನಿತ್ವ ಬಳಕೆಯಲ್ಲಿತ್ತು.

ಮರ್‌ಡೋಕ್, ಫೋರ್ಡ್, ಬೀಚ್, ರಾಲ್ಫ್, ಲಿಂಟನ್, ವೆರಿಯರ್ ಎಲ್ವಿನ್, ವೆಸ್ಟರ್‌ಮಾರ್ಕ್, ಮಾರ್ಗರೇಟ್ ಮೀಡ್, ಇವಾನ್ಸ್ ಪ್ರಿಚಾರ್ಡ್, ರೇಡ್ ಕ್ಲಿಫ್ ಬ್ರೌನ್, ಮಲಿನೊವ್‌ಸ್ಕಿ ಮುಂತಾದ ಅನೇಕ ಮಾನವಶಾಸ್ತ್ರಜ್ಞರು ಗುಡ್ಡಗಾಡು ಜನರ ವಿವಾಹದ ವಿಧಗಳನ್ನು ದಾಖಲಿಸಿದ್ದಾರೆ. ಅವರ ಅಧ್ಯಯನಗಳಲ್ಲಿ ಕಂಡುಬಂದಂತೆ ಬಹುತೇಕ ಬುಡಕಟ್ಟುಗಳಲ್ಲಿ ಬಹುಪತ್ನಿತ್ವ ಪದ್ಧತಿಯೇ ಬಳಕೆಯಲ್ಲಿತ್ತು. ಉದಾಹರಣೆಗೆ, ಮರ್‌ಡೋಕ್‌ರವರು ಅಧ್ಯಯನ ಮಾಡಿದ ೨೩೮ ಬುಡಕಟ್ಟುಗಳಲ್ಲಿ ೧೯೩ ಬುಡಕಟ್ಟುಗಳು ಬಹುಪತ್ನಿತ್ವ ಪದ್ಧತಿ ಹೊಂದಿದ್ದವು. ಆದರೆ ವಸ್ತುಸ್ಥಿತಿ ಏನೆಂದರೆ ಇಂತಹ ಬುಡಕಟ್ಟುಗಳಲ್ಲಿ ಕೂಡ ಬಹುಪತ್ನಿತ್ವವೆಂಬುದು ಸರ್ವೇಸಾಮಾನ್ಯ ಪದ್ಧತಿಯಾಗಿರಲಿಲ್ಲ. ಬದಲಾಗಿ ಏಕಸಂಗಾತಿ ವಿವಾಹಗಳೇ ಅಧಿಕ ಪ್ರಚಲಿತವಿದ್ದುವು. ಹೆಚ್ಚಾಗಿ ಸಮುದಾಯದ ಮುಖ್ಯಸ್ಥರು, ಉನ್ನತ ಸ್ಥಾನಗಳಲ್ಲಿದ್ದವರು ಹಾಗೂ ಶ್ರೀಮಂತರು ಇಂತಹ ಬಹುಪತ್ನಿತ್ವ ಪದ್ಧತಿಯನ್ನು ಆಚರಿಸುತ್ತಿದ್ದರು. ಆದ್ದರಿಂದಲೇ ಅದಕ್ಕೆ ಸಾಮಾಜಿಕ ಅನುಮೋದನೆ ಇದ್ದಿತು. ನಮ್ಮ ದೇಶದಲ್ಲಿ 'ರಾಜಾನಾಂ ಬಹುವಲ್ಲಭ' ಎಂಬ ಮಾತೇ ಪ್ರಚಲಿತವಿದೆ. ಹೀಗೆ ಬಹುಪತ್ನಿತ್ವ ವೆಂಬುದು ವಿಶಿಷ್ಟ ವ್ಯಕ್ತಿಗಳಿಗೆ ಹಾಗೂ ಕುಲಗಳಿಗೆ ಮಾತ್ರ ಸಂಬಂಧಿಸಿ ಬಳಕೆಯಲ್ಲಿ ದ್ದುದಾದರೂ ಇಡೀ ಸಮುದಾಯವೇ ಆ ಪದ್ಧತಿಯಿಂದ ಗುರುತಿಸಲ್ಪಡುತ್ತಿತ್ತು.

ಏಕಸಂಗಾತಿ ವಿವಾಹದ ಸಂಸ್ಕೃತಿಯಲ್ಲಿ ಬೆಳೆದ ಹೆಣ್ಣು ತನ್ನ ಗಂಡನನ್ನು ಬೇರೆ ಹೆಣ್ಣುಗಳೊಂದಿಗೆ ಹಂಚಿಕೊಂಡು ಬಾಳಲಿಚ್ಛಿಸುವುದಿಲ್ಲ. ಅಂದರೆ ತನಗೆ ಸವತಿಯರಿ ರುವುದನ್ನು ಸಾಮಾನ್ಯವಾಗಿ ಯಾವ ಹೆಣ್ಣೂ ಸಹಿಸಲಾರಳು. ಆದರೆ ಮಾನವಶಾಸ್ತ್ರಜ್ಞರು ವರದಿ ಮಾಡಿರುವಂತೆ ಬಹುಪತ್ನಿತ್ವವಿರುವಲ್ಲಿ ಹೆಂಡತಿಯರು ತಾವಾಗಿಯೇ ಗಂಡನನ್ನು ಇನ್ನೊಂದು ವಿವಾಹವಾಗುವಂತೆ ಒತ್ತಾಯಿಸುತ್ತಾರಂತೆ. ಅಲ್ಲಿ ಅವರಿಗೆ ಒಬ್ಬ ಗಂಡನ ಅನೇಕ ಪತ್ನಿಯರಲ್ಲಿ ಒಬ್ಬಳಾಗಿರುವುದೇ ಆತ್ಮ ಪ್ರತಿಷ್ಠೆಯ ಸಂಗತಿಯಾಗಿರುತ್ತದಂತೆ. ಹಾಗಿದ್ದರೂ ಸವತಿ ಮಾತ್ಸರ್ಯ ಹಾಗೂ ಗಂಡನ ಪ್ರೀತಿ ಹಾಗೂ ವಾತ್ಸಲ್ಯಗಳಿಗಾಗಿ ಸ್ಪರ್ಧೆಯಿರುವುದೂ ಅಪರೂಪವಲ್ಲವೆಂಬುದು ಮಾನವಶಾಸ್ತ್ರಜ್ಞರ ಅಧ್ಯಯನಗಳಿಂದ ತಿಳಿದುಬರುವ ಅಂಶವಾಗಿದೆ. ಇದಕ್ಕೆ ಪರಿಹಾರವಾಗಿ ಪ್ರತಿ ಹೆಂಡತಿಯು ಬೇರೆ ಬೇರೆ ಮನೆಗಳಲ್ಲಿ ತನ್ನ ಮಕ್ಕಳೊಂದಿಗೆ ಇರುವಂತೆ ವ್ಯವಸ್ಥೆಯಾಗುವುದೂ ಇದೆ. ಇಂಥಲ್ಲಿ ನಿಗದಿತ ಅವಧಿಗಳಲ್ಲಿ ಗಂಡನು ಪ್ರತಿಯೊಬ್ಬ ಹೆಂಡತಿಯೊಡನೆಯೂ ಬಾಳುತ್ತಾನೆ. ಹೀಗೆ

ಗಂಡನು ತನ್ನ ಪತ್ನಿಯರ ನಡುವೆ ಅಸಮಾನತೆ ತೋರಿಸಬಾರದೆಂಬ ಮೌಲ್ಯವನ್ನು ಪಾಲಿಸಲಾಗುತ್ತದೆ.

ಬಹುಪತ್ನಿತ್ವವು ಗುಲಾಮಗಿರಿಗೂ ಸಂಬಂಧಿಸಿದುದಾಗಿದೆ. ಯುದ್ಧದಲ್ಲಿ ಗೆದ್ದವರು ಸೋತ ರಾಜ್ಯದ ಸಂಪತ್ತಿನೊಡನೆ ಅಲ್ಲಿಯ ಹೆಣ್ಣುಮಕ್ಕಳನ್ನು ದೋಚಿಕೊಂಡು ಒಯ್ಯುತ್ತಿದ್ದರು. ಅಂತಹವರಲ್ಲಿ ಸುಂದರ ಸ್ತ್ರೀಯರು ರಾಜರ ಹಾಗೂ ಸೇನಾಧಿಕಾರಿಗಳ ಪತ್ನಿಯರಾಗಿ ಅಥವಾ ಉಪಪತ್ನಿಯರಾಗಿ ಅಂತಃಪುರವನ್ನು ಸೇರುತ್ತಿದ್ದರು. ಕೆಲವೊಂದು ಸಂದರ್ಭಗಳಲ್ಲಿ ಹೆಣ್ಣುಗಳನ್ನು ಖರೀದಿಸಿ ಹೆಂಡತಿಯರನ್ನಾಗಿ ಸ್ವೀಕರಿಸುವುದೂ ಇತ್ತು. ಹಿಂದೂ ಹಾಗೂ ಮುಸ್ಲಿಂ ಅರಸರು ಈ ಬಗೆಯ ಬಹುಪತ್ನಿತ್ವವನ್ನು ಆಚರಿಸುತ್ತಿದ್ದರು. ಕೆಲವು ನವಾಬರಿಗೆ ನೂರಕ್ಕಿಂತಲೂ ಹೆಚ್ಚು ಪತ್ನಿಯರಿದ್ದರೆಂದು ಇತಿಹಾಸದಿಂದ ತಿಳಿಯಬಹುದಾಗಿದೆ.

ಬಹುಪತ್ನಿತ್ವದಲ್ಲಿಯೂ ಎರಡು ವಿಧಗಳಿವೆ :

೧. **ಭಗಿನೀ ಬಹುಪತ್ನಿತ್ವ :** ವ್ಯಕ್ತಿಯೊಬ್ಬನು ಸೋದರಿಯರನ್ನು ಒಮ್ಮೆಲೇ ಅಥವಾ ಕಾಲಾಂತರದಲ್ಲಿ ವಿವಾಹವಾಗುವುದು ಭಗಿನೀ ಬಹುಪತ್ನಿತ್ವವೆನಿಸುವುದು. ಕನ್ಯಾಶುಲ್ಕ ಪರಿಪಾಟಿಯಿಂದ ಸಮುದಾಯಗಳು ಈ ಪದ್ಧತಿಯನ್ನು ಅನುಸರಿಸುತ್ತವೆ. ಹಿರಿಯಕ್ಕ ವಿವಾಹದ ತರುವಾಯ ನಿಧನ ಹೊಂದಿದರೆ ಅಥವಾ ಆಕೆಗೆ ಬಹುಕಾಲ ಸಂತತಿ ಪ್ರಾಪ್ತಿಯಾಗಿರದಿದ್ದರೆ, ಆಕೆಯ ತಂಗಿಯನ್ನೇ ಅಕ್ಕನ ಗಂಡನಿಗೆ ಮದುವೆ ಮಾಡಿಕೊಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಕನ್ಯಾಶುಲ್ಕವನ್ನು ಮರಳಿಸುವ ಅಗತ್ಯವಿರುವುದಿಲ್ಲ. ಅಲ್ಲದೆ, ಸಹೋದರಿಯರು ಪರಸ್ಪರ ಸಾಮರಸ್ಯದಿಂದ ಒಬ್ಬನೇ ಪತಿಯೊಡನೆ ವಾಸಿಸುವರು ಎಂಬ ಭಾವನೆಯಿದೆ.

೨. **ಭಗಿನೇತರ ಬಹುಪತ್ನಿತ್ವ :** ಬಹುಪತಿತ್ವ ವಿವಾಹದಲ್ಲಿ ಒಬ್ಬನೇ ಪುರುಷನನ್ನು ವಿವಾಹವಾಗುವ ಸ್ತ್ರೀಯರು ಪರಸ್ಪರ ಸೋದರಿಯರಾಗಿಲ್ಲದಿದ್ದಲ್ಲಿ, ಅದನ್ನು ಭಗಿನೇತರ ಬಹುಪತ್ನಿತ್ವ ವಿವಾಹ ಎನ್ನುವರು. ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಕಾರಣಗಳಿಂದಾಗಿ ಈ ಪದ್ಧತಿ ಬಳಕೆಗೆ ಬಂದಿದೆ. ಈ ಕುಟುಂಬದ ಪತ್ನಿಯರೊಳಗೆ ವಿರಸ ಅಥವಾ ಕಲಹ ಉಂಟಾಗುವ ಸಂಭವ ಅಧಿಕ.

ಬಹುಪತ್ನಿತ್ವಕ್ಕೆ ಕಾರಣಗಳು

ಯಾವುದೇ ಸಾಮಾಜಿಕ ಸಂಸ್ಥೆಯು ಒಂದು ಸಮಾಜವು ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಹಾಗೂ ಅವಶ್ಯಕತೆಗಳ ಪೂರೈಕೆಗಾಗಿ ಹುಟ್ಟಿಕೊಳ್ಳುತ್ತದೆಂಬುದನ್ನು ನಾವು ಮೊದಲೇ ತಿಳಿದಿದ್ದೇವೆ. ಬಹುಪತ್ನಿತ್ವವು ಅಂತಹ ಯಾವ ಕಾರಣಗಳಿಂದಾಗಿ ಪ್ರಚಲಿತವಾಯಿತೆಂಬುದನ್ನು ತಿಳಿಯೋಣ.

೧. **ಹೆಚ್ಚು ಸ್ತ್ರೀಯರು ಮತ್ತು ಕಡಿಮೆ ಪುರುಷರು :** ಸಮುದಾಯದೊಳಗೆ ಸ್ತ್ರೀ-ಪುರುಷರ ಪ್ರಮಾಣದಲ್ಲಿ ಅಸಮತೋಲವಿದ್ದಾಗ ಬಹುಸಂಗಾತಿ ವಿವಾಹಕ್ಕೆ ಅವಕಾಶ

ವಾಗುತ್ತದೆ. ಯುದ್ಧದಲ್ಲಿ ಹೆಚ್ಚು ಯುವಕರ ಸಾವು ಸಂಭವಿಸಿದರೆ ಅವಿವಾಹಿತ ತರುಣಿಯರ ಹಾಗೂ ತರುಣ ವಿಧವೆಯರ ಪ್ರಮಾಣ ಹೆಚ್ಚಾಗುತ್ತದೆ. ಈ ಪರಿಸ್ಥಿತಿಯು ಬಹುಪತ್ನಿತ್ವಕ್ಕೆ ಅವಕಾಶ ಮಾಡಿಕೊಡುತ್ತದೆ.

೨. ಆರ್ಥಿಕ ಅವಶ್ಯಕತೆ : "ಬೆಳೆದ ಹೆಣ್ಣೊಬ್ಬಳು ಮದುವೆಯಾಗಿ ಮನೆಗೆ ಬಂದಾಗ ದುಡಿಯುವ ಎರಡು ಕೈಗಳು ಬಂದಂತೆ" ಎಂಬುದು ವಾಸ್ತವ. ಅಂತಹ ಅನೇಕ ಜೋಡಿ ಕೈಗಳು ವಿವಾಹದ ಮೂಲಕ ಮನೆಸೇರಿದಾಗ, ಉಚಿತ ದುಡಿಮೆಯಾಳುಗಳು ದೊರೆಯುತ್ತವೆ. ಕೃಷಿ ಸಮುದಾಯಗಳಲ್ಲಿ ದುಡಿಯುವ ಮಂದಿಯಿದ್ದಷ್ಟೂ ಕುಟುಂಬದ ಆದಾಯ ಹೆಚ್ಚುತ್ತದೆ. ಹಿಮಾಲಯದ ತಪ್ಪಲಿನ ಬುಡಕಟ್ಟುಗಳಲ್ಲಿ ಕೃಷಿ ಕೆಲಸಕ್ಕಾಗಿಯೇ ಬಹುಪತ್ನಿತ್ವ ಪದ್ಧತಿ ಬಳಕೆಯಲ್ಲಿದೆ. ಕೆಲವು ಕಡೆಗಳಲ್ಲಿ ಮೊದಲ ಹೆಂಡತಿಯೇ ಗಂಡನನ್ನು ಎರಡನೇ ವಿವಾಹಕ್ಕೆ ಒತ್ತಾಯಿಸುತ್ತಾಳೆ. ಇದರಿಂದ ಅವಳ ಕೆಲಸದ ಹೊರೆಯನ್ನು ಕಡಿಮೆ ಮಾಡಿಕೊಳ್ಳುವ ಸಾಧ್ಯತೆಯಿದೆ.

೩. ಬಲವಂತದ ಬ್ರಹ್ಮಚರ್ಯ : ಹೆಂಡತಿ ಗರ್ಭವತಿಯಾಗಿದ್ದಾಗ ಹಾಗೂ ಬಾಣಂತಿಯಾದ ಬಳಿಕ ಮಗುವಿಗೆ ಮೊಲೆ ಹಾಲು ನೀಡುತ್ತಿರುವ ತನಕ ಲೈಂಗಿಕ ಸಂಪರ್ಕವು ನಿಷಿದ್ಧವಾಗಿರುತ್ತದೆ. ಈ ಕಾಲದಲ್ಲಿ ಗಂಡನು ಕಡ್ಡಾಯ ಬ್ರಹ್ಮಚರ್ಯವನ್ನು ಆಚರಿಸಬೇಕಾಗುತ್ತದೆ. ಇದು ಗಂಡಸಿನಲ್ಲಿ ಲೈಂಗಿಕ ಅತೃಪ್ತಿಯನ್ನುಂಟುಮಾಡುವುದರಿಂದ ಈ ಸಮಸ್ಯೆಗೆ ಮತ್ತೊಂದು ಮದುವೆ ಮಾಡಿಕೊಳ್ಳುವುದೆ ಪರಿಹಾರವಾಗಿ ಬಹುಪತ್ನಿತ್ವಕ್ಕೆ ಕಾರಣವಾಗುತ್ತದೆ.

೪. ಸಾಮಾಜಿಕ ಪ್ರತಿಷ್ಠೆ : ಕೆಲವು ಬುಡಕಟ್ಟು ಸಮುದಾಯಗಳ ಮುಖಂಡರು ಅನೇಕ ಹೆಂಡಿರನ್ನು ಹೊಂದಿರುತ್ತಿದ್ದರು. ಇದು ಅವರ ಪ್ರತಿಷ್ಠೆಯ ಸಂಕೇತವಾಗಿತ್ತು. ಅದೇ ರೀತಿ ರಾಜರು, ನವಾಬರು, ಸೇನಾ ಪ್ರಮುಖರು, ಶ್ರೀಮಂತರಿಗೆ ತಮ್ಮ ಹೆಂಡಿರ ಸಂಖ್ಯೆ ಪ್ರತಿಷ್ಠೆಯ ಮಾನದಂಡವಾಗಿತ್ತು. ಬಹು ಹೆಂಡತಿ ಉಳ್ಳವನು ಹೆಚ್ಚು ಸಮರ್ಥನೆಂಬ ಗೌರವ ಪಡೆಯುತ್ತಿದ್ದನು. ಅವಿವಾಹಿತನಾಗಿರುವುದು, ಒಬ್ಬಳೇ ಹೆಂಡತಿಯನ್ನು ಹೊಂದಿರುವುದು ಬಡತನದ ಸಂಕೇತವಾಗಿತ್ತು.

೫. ಹೆಚ್ಚು ಮಕ್ಕಳ ಅಪೇಕ್ಷೆ : ಹಿಂದಿನ ಕಾಲದಲ್ಲಿ ಮಕ್ಕಳ ಅಧಿಕ ಮರಣ ಪ್ರಮಾಣವು ಹೆಚ್ಚು ಮಕ್ಕಳನ್ನು ಪಡೆಯುವ ಪ್ರೇರಣೆ ನೀಡುತ್ತಿತ್ತು. ಒಬ್ಬಳೇ ಹೆಂಡತಿಯಲ್ಲಿ ಪಡೆಯುವ ಮಕ್ಕಳಿಗಿಂತ ಬಹುಪತ್ನಿತ್ವ ಪದ್ಧತಿ ಹೆಚ್ಚು ಮಂದಿ ಮಕ್ಕಳನ್ನು ಪಡೆಯಲು ಸಹಕಾರಿಯಾಗಿತ್ತು.

೬. ಹೆಂಡತಿಯ ಕಳೆಗುಂದುವಿಕೆ : ದೈಹಿಕ ಶ್ರಮ, ನಿಯಮಿತ ಗರ್ಭಧಾರಣೆ, ಹೆರಿಗೆ, ಮಗುವಿನ ಪಾಲನೆ ಪೋಷಣೆ ಇತ್ಯಾದಿ ಹೆಣ್ಣಿನ ದೈಹಿಕ ಸ್ವರೂಪದ ಮೇಲೆ ತೀವ್ರ ಪರಿಣಾಮ ಬೀರುತ್ತವೆ. ಹೆಂಡತಿ ಬಹುಬೇಗ ಪ್ರಾಯವಾದಂತೆ ಕಂಡಾಗ ಗಂಡು ಬೇರೆ ಹೆಣ್ಣುಗಳಿಂದ ಆಕರ್ಷಿತನಾಗುವುದು ಹೆಚ್ಚುಮಂದಿ ಪತ್ನಿಯರನ್ನು ಹೊಂದಲು ಒಂದು ಕಾರಣವಾಗಿದೆ.

೭. ಬಂಜೆತನ : ಹೆಂಡತಿಯು ಮಕ್ಕಳನ್ನು ಹಡೆಯಲು ವಿಫಲವಾದಾಗ ಇನ್ನೊಬ್ಬಳನ್ನು ಮದುವೆಯಾಗುವುದು ಕಂಡುಬರುತ್ತದೆ. ಹೀಗೆ ಸ್ತ್ರೀಯರ ಬಂಜೆತನವೂ ಬಹುಪತ್ನಿತ್ವಕ್ಕೆ ಕಾರಣವಾಗಿದೆ. ಬಂಜೆತನವು ಪುರುಷರಲ್ಲೂ ಕಾಣಿಸಿಕೊಳ್ಳಬಹುದುದಾಗಿಯೂ ಮಕ್ಕಳಾಗದಿರಲು ಗಂಡನೂ ಕಾರಣನಿರುತ್ತಾನೆಂಬ ಆಧುನಿಕ ವೈಜ್ಞಾನಿಕ ದೃಷ್ಟಿಕೋನ ಹಿಂದೆ ಇರಲಿಲ್ಲ. ಹೀಗಾಗಿ ಬಂಜೆತನವನ್ನು ಸ್ತ್ರೀಯರಿಗೆ ಮಾತ್ರ ಆರೋಪಿಸಿ ಗಂಡಸರು ಮತ್ತೆ ವಿವಾಹವಾಗುತ್ತಿದ್ದರು.

೮. ವೈವಿಧ್ಯತೆಯ ಅಪೇಕ್ಷೆ : ಹೆಣ್ಣಿಗಿಂತ ಗಂಡು ಹೆಚ್ಚು ಲೈಂಗಿಕ ಆಸಕ್ತಿಯುಳ್ಳವನಾಗಿರುತ್ತಾನೆಂದು ಹೇಳಲಾಗಿದೆ. ಹೆಣ್ಣು ಬಹುಬೇಗ ಲೈಂಗಿಕವಾಗಿ ನಿರುತ್ಸಾಹಗೊಳ್ಳುತ್ತಾಳೆ. ಹಾಗಾಗಿ ಗಂಡು ತನ್ನ ತೃಪ್ತಿಗಾಗಿ ಒಂದಕ್ಕಿಂತ ಅಧಿಕ ಹೆಣ್ಣುಗಳ ಸಂಬಂಧ ಬಯಸುತ್ತಾನೆ. ಇದಲ್ಲದೆ ವೈವಿಧ್ಯತೆಯ ಅಪೇಕ್ಷೆಯೂ ಗಂಡಸರನ್ನು ಕಾಡಿ, ಹೆಚ್ಚು ಮಂದಿ ಹೆಂಡಿರನ್ನು ಹೊಂದಲು ಪ್ರೇರೇಪಿಸುತ್ತದೆ. ತಮ್ಮ ಪುರುಷತ್ವವನ್ನು ಮೆರೆಯುವುದಕ್ಕಾಗಿಯೂ ಕೆಲವು ಗಂಡಸರು ಬಹುಪತ್ನಿತ್ವ ಇಚ್ಛಿಸುತ್ತಾರೆ ಎಂದು ಹೇಳಲಾಗಿದೆ. ಹೀಗೆ ಸಮುದಾಯಗಳ ವಿವಿಧ ಸಾಮಾಜಿಕ-ರಾಜಕೀಯ-ಆರ್ಥಿಕ ಪರಿಸ್ಥಿತಿಗಳಲ್ಲಿ ಬಹುಪತ್ನಿತ್ವವು ಬೇರೆ ಬೇರೆ ಕಾರಣಗಳಿಂದಾಗಿ ಕಂಡುಬಂದಿದೆ.

ಬಹುಪತ್ನಿತ್ವದ ಅನುಕೂಲಗಳು

೧. ಬಹುಪತ್ನಿತ್ವವು ಸಮಾಜದಲ್ಲಿ ವೇಶ್ಯಾವೃತ್ತಿಯನ್ನು ನಿರುತ್ತೇಜನಗೊಳಿಸುತ್ತದೆ. ಗಂಡು ತನ್ನ ಕಾಮವಾಂಛೆಯನ್ನು ಬಹುಪತ್ನಿಯರ ಸಹವಾಸದಲ್ಲೇ ತೀರಿಸಿಕೊಳ್ಳಲು ಸಾಧ್ಯವಿದೆ.

೨. ಸಮಾಜದಲ್ಲಿ ಹೆಂಗಸರ ಸಂಖ್ಯೆ ಹೆಚ್ಚಿದ್ದು ಗಂಡಸರ ಪ್ರಮಾಣ ಕಡಿಮೆ ಇದ್ದಾಗ ಎಲ್ಲಾ ಹೆಣ್ಣುಗಳಿಗೂ ಮದುವೆಯ ಭಾಗ್ಯ ದೊರಕಿಸಲು ಬಹುಪತ್ನಿತ್ವ ಪದ್ಧತಿಯಿಂದ ಮಾತ್ರ ಸಾಧ್ಯ. ಇಲ್ಲವಾದರೆ ಹೆಣ್ಣುಮಕ್ಕಳು ಅವಿವಾಹಿತೆಯರಾಗಿ ಅಥವಾ ಬೆಲೆವೆಣ್ಣುಗಳಾಗಿಯೇ ಉಳಿಯಬೇಕಾಗುತ್ತದೆ.

೩. ಶ್ರೀಮಂತರು ಮಾತ್ರ ಬಹುಪತ್ನಿತ್ವ ಹೊಂದಬಹುದಾದ್ದರಿಂದ ಇಂತಹ ವಿವಾಹಗಳಿಂದ ಹುಟ್ಟುವ ಮಕ್ಕಳು ಹೆಚ್ಚು ದೃಢಕಾಯರಾಗಿರುತ್ತಾರೆ. ಅಲ್ಲದೆ ಮನೆಯಲ್ಲಿ ಅನೇಕ ಹೆಂಗಸರು ಇರುವುದರಿಂದ ಮಕ್ಕಳ ಪಾಲನೆ ಪೋಷಣೆ ಚೆನ್ನಾಗಿ ಆಗುತ್ತದೆ.

ಬಹುಪತ್ನಿತ್ವದ ಪ್ರತಿಕೂಲಗಳು

೧. ಬಹುಪತ್ನಿತ್ವವು ಕುಟುಂಬದ ಮುಖ್ಯಸ್ಥನ ಮೇಲೆ ಅಧಿಕ ಆರ್ಥಿಕ ಹೊರೆಯನ್ನುಂಟು ಮಾಡುತ್ತದೆ.

೨. ಮನೆಯಲ್ಲಿ ಅನೇಕ ಮಕ್ಕಳಿದ್ದಾಗ ಇವರೆಲ್ಲರ ಬೌದ್ಧಿಕ ಬೆಳವಣಿಗೆಯ ಕಡೆಗೆ ಸೂಕ್ತ ಗಮನ ಹರಿಸಲಾಗುವುದಿಲ್ಲ.

೩. ಸವತಿ ಮಾತ್ಸರ್ಯ ಹಾಗೂ ಮಕ್ಕಳ ನಡುವೆ ದ್ವೇಷಾಸೂಯೆ ಬಹಳ ಬೇಗನೇ ಬೆಳೆದು ಮನೆಯ ವಾತಾವರಣ ಕೆಡುತ್ತದೆ.

೪. ಬಹುಪತ್ನಿತ್ವದಲ್ಲಿ ಮಹಿಳೆಯು ಕೆಳಮಟ್ಟದ ಸ್ಥಾನಮಾನವನ್ನು ಹೊಂದಿ ಶೋಷಣೆಗೊಳಗಾಗುವ ಸಂಭವ ಹೆಚ್ಚು.

ಬಹುಪತ್ನಿತ್ವದಲ್ಲಿ ಕೆಡುಕುಗಳೇ ಹೆಚ್ಚಾಗಿರುವುದರಿಂದ, ಅಲ್ಲದೆ ಅದು ಮಹಿಳೆಯರ ಸ್ಥಾನಮಾನ ಹಾಗೂ ಮಕ್ಕಳ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವುದರಿಂದ ಆಧುನಿಕ ಸಮಾಜಗಳು ಆ ಪದ್ಧತಿಯನ್ನು ತಿರಸ್ಕರಿಸಿವೆ. ಇಂದು ನಾಗರಿಕ ದೇಶಗಳಲ್ಲಿ ಬಹುಪತ್ನಿತ್ವವನ್ನು ಕಾನೂನುಬಾಹಿರವೆಂದು ಘೋಷಿಸಲಾಗಿದೆ. ಉದಾಹರಣೆಗೆ, ೧೯೫೫ರ ಹಿಂದೂ ವಿವಾಹದ ಶಾಸನದ ಪ್ರಕಾರ ಭಾರತದಲ್ಲಿ ಬಹುಪತ್ನಿತ್ವವನ್ನು ಅಪರಾಧವೆಂದು ಪರಿಗಣಿಸಲಾಗಿದೆ.

ಆ. ಬಹುಪತಿತ್ವ

ಒಂದು ಹೆಣ್ಣು ಒಬ್ಬನಿಗಿಂತ ಹೆಚ್ಚು ಗಂಡಂದಿರನ್ನು ಹೊಂದಲು ಅವಕಾಶ ಇರುವ ವಿವಾಹ ಪದ್ಧತಿಯನ್ನು ಬಹುಪತಿತ್ವ ಎನ್ನಲಾಗುತ್ತದೆ. ಆದರೆ ಇದು ತೀರ ಅಪರೂಪವಾಗಿ ಕಂಡುಬರುವ ವಿವಾಹ ಕ್ರಮವಾಗಿದೆ. ಒಶಿಯಾನಾದ ಮಾರ್ಕ್ವೆಸಾನ್ ದ್ವೀಪವಾಸಿಗಳಲ್ಲಿ, ಆಫ್ರಿಕಾದ ಜರಾವಾ ಮತ್ತು ಬಹಾಮಾ ಬುಡಕಟ್ಟುಗಳಲ್ಲಿ, ಶೊಶೊನಿ ಇಂಡಿಯನ್ನರಲ್ಲಿ, ಸಮೊವನ್ನರಲ್ಲಿ, ಪಶ್ಚಿಮ ಟಿಬೇಟನ್ನರಲ್ಲಿ, ತೋಡ ಜನಾಂಗದವರಲ್ಲಿ ಹಾಗೂ ಕೇರಳದ ನಾಯರ್ ಜಾತಿಯಲ್ಲಿ ಬಹುಪತಿತ್ವವಿದ್ದುದು ಕಂಡುಬರುತ್ತದೆ.

ಬಹುಪತಿತ್ವದಲ್ಲಿ ಅನೇಕ ಬಗೆಗಳಿದ್ದುವು. ಹಿರಿಯಣ್ಣನು ಮದುವೆಯಾದವಳೇ ಆತನ ತಮ್ಮಂದಿರಿಗೆಲ್ಲಾ ಹೆಂಡತಿಯೆನಿಸುವುದು; ಪ್ರಾಯಸ್ಥನೊಬ್ಬನು ಮದುವೆಯಾದ ಹೆಣ್ಣಿಗೆ ತರುಣ ಗಂಡಂದಿರನ್ನು ಕೂಡಲು ಅವಕಾಶ ನೀಡಿದರೂ ಅವಳಲ್ಲಿ ಹುಟ್ಟುವ ಮಕ್ಕಳ ಮೇಲೆ ತನ್ನ ಪೂರ್ಣ ಅಧಿಕಾರ ಹೊಂದುವುದು; ಸಹೋದರರಲ್ಲದ ಅನೇಕ ಮಂದಿಯನ್ನು ಒಬ್ಬಳೇ ವಿವಾಹವಾಗುವುದು ಇತ್ಯಾದಿ ವಿವಿಧ ಪ್ರಕಾರಗಳಿದ್ದುವು. ತೀರ ತಾತ್ಕಾಲಿಕವಾದ ಅಸ್ಪಷ್ಟ ಸಂಬಂಧಗಳೇ ಸಾಮಾನ್ಯವಾಗಿ ಬಹುಪತಿತ್ವದಲ್ಲಿ ಕಂಡುಬರುತ್ತಿದ್ದವೆಂಬುದು ಮಾನವಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ದ್ರೌಪದಿಯು ಪಂಚಪಾಂಡವರನ್ನು ಮದುವೆಯಾದ ಕಥೆಯು ಪುರಾಣಗಳಲ್ಲಿ ಬಹುಪತಿತ್ವಕ್ಕೆ ಉದಾಹರಣೆಯಾಗಿದೆ.

ಬಹುಪತಿತ್ವದಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳಿವೆ :

೧. ಭ್ರಾತ್ರೀಯ ಬಹುಪತಿತ್ವ

ಸ್ತ್ರೀಯೊಬ್ಬಳು ಎಲ್ಲ ಅಣ್ಣತಮ್ಮಂದಿರಿಗೆ ಅಥವಾ ಭ್ರಾತೃಗಳಿಗೆ ಮಡದಿಯೆನಿಸಿದರೆ, ಭ್ರಾತ್ರೀಯ ವಿವಾಹ ಪದ್ಧತಿಯೆನಿಸಿದೆ. ಉದಾಹರಣೆಗೆ, ತೋಡ ಜನಾಂಗದಲ್ಲಿ ಈ ಪದ್ಧತಿ ಬಳಕೆಯಲ್ಲಿದೆ. ವಿವಾಹದ ಬಳಿಕ ಗಂಡನಿಗೆ ತಮ್ಮನು ಜನಿಸಿದರೂ ಆತನು ಆಕೆಯ ಪತಿಯ ಸ್ಥಾನ ಪಡೆಯುತ್ತಾನೆ. ಪತ್ನಿಯೊಡನೆ ತಮ್ಮ ಸಂಬಂಧವನ್ನು ಯಥೋಚಿತವಾಗಿ ಒಪ್ಪಂದದ ಮೂಲಕ ಸಹೋದರರು ಹಂಚಿಕೊಳ್ಳುತ್ತಾರೆ.

೨. ಭ್ರಾತ್ರೇತರ ಬಹುಪತಿತ್ವ

ಈ ಪದ್ಧತಿಯಂತೆ ಹೆಣ್ಣು ಸಹೋದರರಲ್ಲದ ಅನೇಕ ಪುರುಷರನ್ನು ವಿವಾಹವಾಗುತ್ತಾಳೆ. ಆಕೆ ತನ್ನ ಗಂಡಂದಿರೊಡನೆ ಒಂದೇ ಸೂರಿನಡಿ ವಾಸಿಸುವುದಿಲ್ಲ. ಬದಲಾಗಿ ನಿಗದಿತ ಅವಧಿಗಳಲ್ಲಿ ಆಕೆ ಒಬ್ಬೊಬ್ಬರೊಡನೆ ಜೀವಿಸುತ್ತಾಳೆ. ಹಿಂದೆ ಕೇರಳದ ನಾಯರ್‌ರಲ್ಲಿ ಈ ಪದ್ಧತಿ ಇತ್ತು ಎನ್ನಲಾಗಿದೆ. ಟಿಬೇಟಿಯನ್ನರಲ್ಲಿ ಅದು ಇಂದಿಗೂ ಇದೆ. ಇಂತಹ ವಿವಾಹದಲ್ಲಿ ಹುಟ್ಟಿದ ಮಕ್ಕಳಿಗೆ ಸಾಮಾಜಿಕ ಪಿತೃ ಎನಿಸಿಕೊಳ್ಳುವ ಅವಕಾಶವನ್ನು ಅವಳ ಯಾರಾದರೊಬ್ಬ ಗಂಡನು ಪಡೆಯುತ್ತಿದ್ದನು. ಇದಕ್ಕಾಗಿ ಆತನು ಬಿಲ್ಲು-ಬಾಣ ಸಮಾರಂಭವನ್ನು ಏರ್ಪಡಿಸಿ ಸಮುದಾಯಕ್ಕೆ ಔತಣ ನೀಡಬೇಕಾಗಿತ್ತು.

ಅತ್ಯಂತ ಆದಿಮ ಕುಟುಂಬವು ಮಾತೃಮೂಲೀಯವಾಗಿತ್ತೆಂದು ವಾದಿಸುವ ಮಾನವಶಾಸ್ತ್ರಜ್ಞರು ಬಹುಪತಿತ್ವವೇ ಆದಿಕಾಲದ ವಿವಾಹ ಪದ್ಧತಿಯಾಗಿತ್ತೆಂದು ಕೂಡ ವಾದಿಸುತ್ತಾರೆ. ಅವರ ದೃಷ್ಟಿಯಲ್ಲಿ ಮೂಲದಲ್ಲಿ ಎಲ್ಲಾ ಬುಡಕಟ್ಟುಗಳಲ್ಲಿ ಬಹುಪತಿತ್ವ ವನ್ನು ಆಚರಿಸುತ್ತಿದ್ದರು. ಕಾಲಕ್ರಮೇಣ ಇದು ಬಹುಪತ್ನಿತ್ವಕ್ಕೆ ಬದಲಾವಣೆಗೊಂಡಿತೆಂಬುದು ಅವರ ಅಭಿಪ್ರಾಯ. ಆದರೆ ನಾಗರಿಕತೆಯು ಬೆಳೆದಂತೆ ಬಹುಪತಿತ್ವ ಪದ್ಧತಿಯು ಮಾಯವಾಗತೊಡಗಿತು. ಮರ್‌ಡೋಕ್ ಅಧ್ಯಯನ ನಡೆಸಿದ ೨೩೮ ಬುಡಕಟ್ಟುಗಳಲ್ಲಿ ಕೇವಲ ಶೇಕಡ ೧೪ರಷ್ಟು ಪಂಗಡಗಳಲ್ಲಿ ಬಹುಪತಿತ್ವವು ಬಳಕೆಯಲ್ಲಿತ್ತು. ಇದೂ ಕೂಡ ಈಗ ಬದಲಾವಣೆಗೊಂಡಿರುವ ಸಾಧ್ಯತೆ ಇದೆ. ಉದಾಹರಣೆಗೆ, ಕೇರಳದ ನಾಯರ್ ಸಮುದಾಯದಲ್ಲಿ ಈ ಪದ್ಧತಿಯನ್ನು ಪೂರ್ತಿಯಾಗಿ ತೊರೆದು ಏಕಸಂಗಾತಿ ವಿವಾಹಕ್ಕೆ ಬದಲಾಗಿರುವುದು ಕಂಡುಬರುತ್ತದೆ. ಹೀಗೆ ಇಂದು ಬಹುಪತಿತ್ವ ವಿವಾಹ ಪದ್ಧತಿಯು ಅಪ್ರಸ್ತುತವಾಗಿದ್ದರೂ ಸಮಾಜಶಾಸ್ತ್ರೀಯ ಅಧ್ಯಯನ ದೃಷ್ಟಿಯಿಂದ ಅದರ ಕಾರಣಗಳನ್ನು ಹಾಗೂ ಅನುಕೂಲ-ಪ್ರತಿಕೂಲಗಳನ್ನು ನಾವು ತಿಳಿಯುವುದು ಅಗತ್ಯ.

ಬಹುಪತಿತ್ವದ ಕಾರಣಗಳು

೧. ಸ್ತ್ರೀ-ಪುರುಷರ ನಿಷ್ಪತ್ತಿ

ಸಮುದಾಯದಲ್ಲಿ ಪುರುಷರ ಪ್ರಮಾಣಕ್ಕನುಗುಣವಾಗಿ ಸ್ತ್ರೀಯರ ಪ್ರಮಾಣ ಇಲ್ಲದಿದ್ದರೆ ಅದು ಬಹುಪತಿತ್ವಕ್ಕೆ ಎಡೆ ಮಾಡಿಕೊಡುವ ಪರಿಸ್ಥಿತಿಯೆನಿಸುತ್ತದೆ. ಉದಾಹರಣೆಗೆ, ನೀಲಗಿರಿಯ ತೋಡರಲ್ಲಿ ಹೆಣ್ಣು ಶಿಶುಹತ್ಯೆಯ ಮೂಢನಂಬಿಕೆ ಆಚರಣೆಯಲ್ಲಿದ್ದುದರಿಂದ ಪುರುಷ-ಸ್ತ್ರೀಯರ ದಾಮಾಶಯದಲ್ಲಿ ಅಸಮತೋಲನ ಉಂಟಾಗುತ್ತದೆ. ಇದರಿಂದಾಗಿ ಎಲ್ಲಾ ಪುರುಷರಿಗೆ ವಿವಾಹದ ಅವಕಾಶ ಸಿಗಬೇಕಾದ ಒಬ್ಬೊಬ್ಬ ಸ್ತ್ರೀ ಅನೇಕ ಗಂಡಂದಿರನ್ನು ವಿವಾಹವಾಗಬೇಕಾದ ಸಾಮಾಜಿಕ ಅನಿವಾರ್ಯತೆ ಉಂಟಾಗುತ್ತದೆ. ಆದರೆ ಟಿಬೆಟ್, ಸಿಕ್ಕಿಂ, ಲಡ್ಡಾಕ್ ಮುಂತಾದೆಡೆಗಳಲ್ಲಿ ಸ್ತ್ರೀ-ಪುರುಷ ಪ್ರಮಾಣದಲ್ಲಿ ಹೆಚ್ಚು ವ್ಯತ್ಯಾಸಗಳಿಲ್ಲದಿದ್ದಾಗಲೂ ಬಹುಪತಿತ್ವ ಜಾರಿಯಲ್ಲಿತ್ತೆಂದು ಬ್ರಿಫಾಲ್ಟ್ ಎಂಬ ಮಾನವಶಾಸ್ತ್ರಜ್ಞರು ತಿಳಿಸಿದ್ದಾರೆ.

೨. ಬಡತನ

ಆರ್ಥಿಕ ಸಂಪನ್ಮೂಲಗಳ ಕೊರತೆ ಇದ್ದಾಗ ಅಂದರೆ ಸಮುದಾಯದಲ್ಲಿ ತೀರ ಬಡತನವು ವ್ಯಾಪಿಸಿದ್ದಾಗ ಗಂಡಸಿಗೆ ಮದುವೆಯಾಗಿ ಮನೆಯನ್ನು ಸ್ಥಾಪಿಸುವುದು ಹಾಗೂ ಮಕ್ಕಳನ್ನು ಪೋಷಿಸುವುದು ದುಸ್ತರವೆನಿಸುತ್ತದೆ. ಆದರೆ ಎರಡು ಮೂರು ಮಂದಿ ಪುರುಷರು ಸೇರಿಕೊಂಡರೆ ಒಬ್ಬ ಹೆಂಡತಿ ಹಾಗೂ ಆಕೆಯ ಮಕ್ಕಳನ್ನು ಸಾಕುವುದು ಸಾಧ್ಯ. ಇಂತಹ ಪರಿಸ್ಥಿತಿಯು ಬಹುಪತಿತ್ವವನ್ನು ಹುಟ್ಟುಹಾಕುತ್ತದೆ.

೩. ದುಬಾರಿ ಕನ್ಯಾಶುಲ್ಕ

ಬುಡಕಟ್ಟು ಸಮುದಾಯಗಳಲ್ಲಿ ಕನ್ಯಾಶುಲ್ಕ ಪದ್ಧತಿ ಜಾರಿಯಲ್ಲಿತ್ತು. ಅನೇಕ ಪರಿಶಿಷ್ಟ ಜಾತಿಗಳಲ್ಲಿ ಈಗಲೂ ಇದು ಕಂಡುಬರುತ್ತದೆ. ದುಡಿಯುವ ಹೆಣ್ಣನ್ನು ಮದುವೆ ಮಾಡಿಕೊಡುವುದರಿಂದ ಆಕೆಯ ತಂದೆಗೆ ಉಂಟಾಗುವ ನಷ್ಟ ಪರಿಹಾರಕ್ಕಾಗಿ ಆತನಿಗೆ ಕನ್ಯಾಶುಲ್ಕವನ್ನು ಕೊಡಲಾಗುತ್ತದೆ. ವಿವಿಧ ಜನಾಂಗಗಳಲ್ಲಿ ಇದರ ಸ್ವರೂಪ ಹಾಗೂ ಮೊತ್ತ ಭಿನ್ನವಾಗಿರುತ್ತದೆ. ಹೆಣ್ಣುಗಳ ಸಂಖ್ಯೆ ಕಡಿಮೆ ಇದ್ದಲ್ಲಿ ಕನ್ಯಾಶುಲ್ಕವು ತುಂಬಾ ದುಬಾರಿಯಾಗಿರುತ್ತದೆ. ಇದು ಅನೇಕ ಯುವಕರನ್ನು ವಿವಾಹದಿಂದ ವಂಚಿತರನ್ನಾಗಿ ಮಾಡುತ್ತದೆ. ಅದಕ್ಕಾಗಿ ನಾಲ್ಕೈದು ಮಂದಿ ಗೆಳೆಯರು ಅಥವಾ ಅಣ್ಣತಮ್ಮಂದಿರು ಒಟ್ಟು ಸೇರಿ ಹಣ ಸಂಚಯಿಸಿ ಕನ್ಯಾಶುಲ್ಕ ನೀಡಿ ಒಂದು ಹೆಣ್ಣನ್ನು ಮದುವೆಯಾಗಲು ಶಕ್ತರಾಗುತ್ತಾರೆ. ಇದು ಬಹುಪತಿತ್ವದ ಪದ್ಧತಿ ಉಂಟಾಗುವುದಕ್ಕೆ ಇನ್ನೊಂದು ಕಾರಣವಾಗಿದೆ.

೪. ಕುಟುಂಬದ ಐಕ್ಯತೆ

ಒಂದೇ ಹೆಣ್ಣನ್ನು ಮದುವೆಯಾಗಿ ಮಕ್ಕಳನ್ನು ಪಡೆಯುವುದರ ಮೂಲಕ ಅವಿಭಕ್ತ ಕುಟುಂಬದ ಒಗ್ಗಟ್ಟು ಹಾಗೂ ಪರಿಶುದ್ಧತೆಯನ್ನು ಕಾಪಾಡಬಹುದೆಂಬುದೂ ಹೇಳಲಾದ ಒಂದು ಕಾರಣವಾಗಿದೆ.

೫. ಹಿಂದುಳಿದಿರುವಿಕೆ

ಆಧುನಿಕ ಸಂಸ್ಕೃತಿ, ನೀತಿ, ನಾಗರಿಕತೆ, ವ್ಯಕ್ತಿವಾದ, ಆತ್ಮಪ್ರತಿಷ್ಠೆ, ಸ್ತ್ರೀಪುರುಷರ ಸಮಾನತೆ ಮುಂತಾದ ಮೌಲ್ಯಗಳಿಂದ ಸಾಮಾಜಿಕವಾಗಿ ಹಿಂದುಳಿದಿರುವ ಹಾಗೂ ಭೌಗೋಳಿಕವಾಗಿ ದೂರವಾಗಿರುವ ಬುಡಕಟ್ಟುಗಳಲ್ಲಿ ವಿವಾಹವು ಒಂದು ನೈತಿಕ ವಿಷಯವಾಗುವುದಿಲ್ಲ. ಇಂಥಲ್ಲಿ ಬಹುಪತಿತ್ವ ಬಳಕೆಗೆ ಬಂದಿರುವುದುಂಟು. ಹೀಗೆ ವಿವಿಧ ಬುಡಕಟ್ಟುಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಬಹುಪತಿತ್ವವು ರೂಢಿಗೊಂಡಿತೆನ್ನಬಹುದು. ಆಧುನಿಕ ಯುಗದಲ್ಲಿ ನಮಗೆ ಬಹುಪತಿತ್ವದ ಸಾಧ್ಯತೆ ಹಾಗೂ ಸಫಲತೆಗಳ ಬಗ್ಗೆ ಸಂಶಯ ಮೂಡುವುದು ಸಹಜ. ಆದರೆ ಅದೇ ಪದ್ಧತಿಯಲ್ಲಿ ಹುಟ್ಟಿ ಬೆಳೆದ ಮಕ್ಕಳ ಮನಸ್ಸು ಆ ಪದ್ಧತಿಗೆ ಸಾಂಸ್ಕೃತಿಕವಾಗಿ ಒಗ್ಗಿಕೊಂಡಿರುತ್ತದೆ; ಹಾಗಾಗಿ ಸಮಸ್ಯೆಗಳೇಳುವುದಿಲ್ಲ.

ಬಹುಪತಿತ್ವದ ಅನುಕೂಲಗಳು

೧. ಬಹುಪತಿತ್ವದಿಂದಾಗಿ ಜನಸಂಖ್ಯೆಯ ನಿಯಂತ್ರಣವಾಗುತ್ತದೆ. ಗಂಡಂದಿರು ಅನೇಕರಿದ್ದರೂ ಹೆರುವ ಹೆಂಡತಿ ಒಬ್ಬಳೇ ಇರುವುದರಿಂದ ಅವಳ ಗರ್ಭಧಾರಣಾ ಶಕ್ತಿಗನುಗುಣವಾಗಿ ಮಕ್ಕಳು ಹುಟ್ಟುತ್ತಾರೆ. ಇದು ಸಹಜವಾಗಿ ಜನಸಂಖ್ಯೆಯ ಬೆಳವಣಿಗೆಯ ಮೇಲೆ ಕಡಿವಾಣ ಹಾಕುತ್ತದೆ.

೨. ಆವಿಭಕ್ತ ಕುಟುಂಬದ ಆಸ್ತಿ ಅವಿಚ್ಛಿನ್ನವಾಗಿರುತ್ತದೆ. ಸಹೋದರರೆಲ್ಲರೂ ಒಂದಾಗಿ ಒಬ್ಬಳನ್ನೇ ಮದುವೆಯಾಗುವ ಭ್ರಾತ್ರೀಯ ಬಹುಪತಿತ್ವದಲ್ಲಿ ಮಕ್ಕಳು ಎಲ್ಲರಿಗೂ ಸಮಾನವಾಗಿ ಸಲ್ಲುವುದರಿಂದ ಕುಟುಂಬದ ಏಕತೆಯು ಉಳಿಯುತ್ತದಲ್ಲದೆ, ಆಸ್ತಿಯ ವಿಂಗಡಣೆಯಾಗದಂತೆ ತಡೆಯುತ್ತದೆ.

೩. ಕುಟುಂಬದ ಮೇಲಿನ ಆರ್ಥಿಕ ಭಾರವು ಕಡಿಮೆಯಾಗುತ್ತದೆ. ಬಹುಪತಿತ್ವ ಕುಟುಂಬದಲ್ಲಿ ದುಡಿಯುವ ಜನಸಂಖ್ಯೆ ಹೆಚ್ಚಿರುವುದರಿಂದ ಆರ್ಥಿಕ ಸುಭದ್ರತೆ ಇರುತ್ತದೆ. ಮಕ್ಕಳಿಗೆ ಉತ್ತಮ ಪೋಷಣೆ ದೊರೆಯುತ್ತದೆ.

ಪ್ರತಿಕೂಲಗಳು

೧. ಬಹುಪತಿತ್ವವು ಹೆಣ್ಣಿನ ದೈಹಿಕ ಆರೋಗ್ಯದ ಮೇಲೆ ತೀವ್ರ ಪ್ರತಿಕೂಲ ಪರಿಣಾಮಗಳನ್ನುಂಟುಮಾಡುತ್ತದೆ. ಅವಳು ಲೈಂಗಿಕವಾಗಿ ಅನೇಕ ಗಂಡಂದಿರನ್ನು ತೃಪ್ತಿಪಡಿಸಬೇಕಾಗಿರುವುದರಿಂದ ಶಾರೀರಿಕ ದೌರ್ಬಲ್ಯ ಉಂಟಾಗುತ್ತದೆ. ಅಲ್ಲದೆ ನಿರಂತರ ಹೆರಿಗೆಗಳು ಆಕೆಯನ್ನು ಬಹುಬೇಗ ಕಳೆಗುಂದಿಸುತ್ತವೆ.

೨. ಬಹುಪತಿತ್ವವು ಬಂಜೆತನವನ್ನುಂಟು ಮಾಡಬಹುದಾಗಿದೆ : ಜೀವಶಾಸ್ತ್ರಜ್ಞರ ಪ್ರಕಾರ ಬಹುಮಂದಿ ಗಂಡಂದಿರನ್ನು ಕೂಡುವ ಹೆಣ್ಣು ಗರ್ಭಧರಿಸಲಾರದೆ ಬಂಜೆಯಾಗುವ ಸಂಭವವೂ ಇದೆ.

೩. ಜನಸಂಖ್ಯೆಯಲ್ಲಿ ತೀವ್ರ ಇಳಿತವುಂಟಾಗುತ್ತದೆ : ಬಹುಪತಿತ್ವದಿಂದಾಗಿ ಜನಸಂಖ್ಯಾ ನಿಯಂತ್ರಣವಾಗುವುದು ನಿಜವಾದರೂ ಅದು ಸಮುದಾಯದ ನಿರ್ನಾಮಕ್ಕೂ ಕಾರಣವಾಗಬಹುದು. ತೀವ್ರ ಜನಸಂಖ್ಯಾ ಇಳಿತದಿಂದಾಗಿ ಒಂದೆರಡು ಶತಕಗಳಲ್ಲಿ ಆ ಸಮುದಾಯವೇ ನಷ್ಟವಾಗಬಹುದು.

೪. ಬಹುಪತಿತ್ವವು ವಿವಾಹ ವಿಚ್ಛೇದನಕ್ಕೆ ಎಡೆ ಮಾಡಿಕೊಡುತ್ತದೆ : ಈ ಪದ್ಧತಿಯಲ್ಲಿ ಹೆಂಡತಿಯನ್ನು ಒಲಿಸಿಕೊಳ್ಳಲು ಗಂಡಂದಿರಲ್ಲಿ ಪೈಪೋಟಿ ಉಂಟಾಗಿ, ಅವರಲ್ಲಿ ಕೆಲವರು ಸಂಬಂಧವನ್ನು ಬಿಡುವ ಸಂದರ್ಭಗಳು ಹೆಚ್ಚಿರುತ್ತವೆ. ಅಲ್ಲದೆ ಹೆಣ್ಣು ಕೂಡ ತನ್ನನ್ನು ನೋಡಿಕೊಳ್ಳಲು ಅನೇಕ ಗಂಡಂದಿರು ಇರುವುದರಿಂದ ತನಗೆ ಇಷ್ಟವಾಗದವರ ಸಂಬಂಧ ಕಡಿದುಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ. ಹೀಗಾಗಿ ಕ್ಷಿಪ್ರವಾಗಿ ಜರುಗುವ ವಿವಾಹ ವಿಚ್ಛೇದನಗಳು ಸಮುದಾಯದ ಶಾಂತಿಗೆ ಭಂಗ ತರುತ್ತವೆ.

ಯಾವಾಗಲೂ ವಿವಾದ, ಸಂಘರ್ಷ, ದ್ವೇಷ ಸಾಧನೆ, ಪ್ರತೀಕಾರ ಇತ್ಯಾದಿಗಳು ಸಾಮುದಾಯಿಕ ಸ್ವಾಸ್ಥ್ಯವನ್ನು ಕದಡುತ್ತವೆ.

೫. ಹೆಣ್ಣುಗಳಿಗೆ ವಿವಾಹಪೂರ್ವ ಸಂಬಂಧಗಳಿಗೆ ಅವಕಾಶವಾಗುತ್ತದೆ : ಬಹುಪತಿತ್ವವು ಸ್ತ್ರೀಯರಿಗೆ ಸ್ವಾತಂತ್ರ್ಯವನ್ನೂ ಪ್ರಾಮುಖ್ಯತೆಯನ್ನೂ ನೀಡುವುದರಿಂದ ಹೆಣ್ಣಿನ ಚಾರಿತ್ರ್ಯ ಕೆಡುವ ಅವಕಾಶಗಳಿವೆ. ಆಕೆ ಲೈಂಗಿಕ ಸಂಬಂಧ ಬೆಳೆಸಿದವನನ್ನು ವಿವಾಹವಾಗಬಹುದು. ಆಗದಿದ್ದರೂ ಆಕೆಗೆ ಬೇರೆ ಗಂಡಂದಿರು ದೊರಕುವುದರಿಂದ ಸ್ತ್ರೀಯರ ಸ್ವಚ್ಛಂದತೆಗೆ ಅವಕಾಶ ಹೆಚ್ಚು ಇದೆ.

ಬಹುಪತಿತ್ವ ಮಾತ್ರವೇ ಕಂಡುಬರುವ ಬುಡಕಟ್ಟುಗಳು ಕಡಿಮೆಯಾದರೂ ಈ ಪದ್ಧತಿಯು ಬಹುಪತ್ನಿತ್ವದ ಜೊತೆಯಲ್ಲಿಯೇ ಇರುವುದು ಕಂಡುಬರುತ್ತದೆ. ಹಿಮಾಲಯದ ತಪ್ಪಲಿನ ಉದ್ದಕ್ಕೂ ಕಂಡುಬರುವ ಅನೇಕ ಬುಡಕಟ್ಟುಗಳಲ್ಲಿ ಈ ಸ್ಥಿತಿ ಇದೆ. ಇಂತಹ ಸಮುದಾಯಗಳಲ್ಲಿ ಶ್ರೀಮಂತರು, ಮುಖ್ಯಸ್ಥರು ಹಾಗೂ ಅಧಿಕಾರಸ್ಥರು ಅನೇಕ ಮಡದಿಯರನ್ನು ಸಾಕಬಲ್ಲವರಾಗಿ ಬಹುಪತ್ನಿತ್ವವನ್ನು ಅನುಸರಿಸುತ್ತಾರೆ. ಇದರಿಂದಾಗಿ ಬಡವರಿಗೆ ಹೆಣ್ಣು ಸಿಕ್ಕುವುದೇ ಕಷ್ಟವಾಗುತ್ತದೆ; ಸ್ತ್ರೀ-ಪುರುಷ ಪ್ರಮಾಣದಲ್ಲೂ ಅಸಮಾನತೆ ಉಂಟಾಗುತ್ತದೆ. ಹೀಗೆ ಬಡತನ ಹಾಗೂ ಹೆಣ್ಣುಗಳ ಅಲಭ್ಯತೆಯು ಸಮುದಾಯದ ಕೆಳವರ್ಗದವರಲ್ಲಿ ಬಹುಪತಿತ್ವಕ್ಕೆ ಎಡೆ ಮಾಡಿಕೊಡುತ್ತದೆ. ಒಂದೇ ಸಮುದಾಯದಲ್ಲಿ ಏಕಕಾಲದಲ್ಲಿ ಬಹುಪತ್ನಿತ್ವವೂ ಬಹುಪತಿತ್ವವೂ ಜೊತೆ ಜೊತೆಯಾಗಿ ಜಾರಿಯಲ್ಲಿದ್ದುದು ಕಂಡುಬಂದಿದೆ. ಹೀಗೆ ಈ ಎರಡು ಪದ್ಧತಿಗಳು ಆರ್ಥಿಕ ಕಾರಣಗಳಿಂದಾಗಿ ಒಂದಕ್ಕೊಂದು ಪೂರಕವಾಗಿ ಕಾರ್ಯಾತ್ಮಕವಾಗಿದ್ದವು. ಆದರೆ ಇವೆರಡಕ್ಕಿಂತಲೂ ಹೆಚ್ಚು ಪ್ರಚಲಿತವಾದ, ಆರೋಗ್ಯಪೂರ್ಣವಾದ ಹಾಗೂ ಬಹುಸಮ್ಮತವಾದ ವಿವಾಹ ಪದ್ಧತಿಯೆಂದರೆ ಏಕಸಂಗಾತಿ ವಿವಾಹವಾಗಿದೆ.

೩. ಏಕಪತ್ನಿತ್ವ/ಏಕಪತಿತ್ವ

ಏಕಪತಿ ಅಥವಾ ಏಕಪತ್ನಿ ವಿವಾಹವನ್ನು ಏಕಸಂಗಾತಿ ವಿವಾಹವೆನ್ನಬಹುದು. ಇದನ್ನು ಏಕಪತ್ನಿತ್ವ ಎಂಬುದಾಗಿಯೂ ಅಥವಾ ಏಕಪತಿತ್ವ ಎಂಬುದಾಗಿಯೂ ಕರೆಯಬಹುದು. ಆದುದರಿಂದ ಈ ವಿವಾಹ ಪದ್ಧತಿಯನ್ನು ಅನುಸರಿಸುವ ಸಮುದಾಯಗಳಲ್ಲಿ ಗಂಡು ತನ್ನ ಹೆಂಡತಿಯ ಹೊರತಾಗಿ ಅನ್ಯ ಹೆಣ್ಣುಗಳೊಂದಿಗೆ ಲೈಂಗಿಕ ಸಂಬಂಧವಿರಿಸಿಕೊಳ್ಳುವುದು ಅಪರಾಧವೂ ಅನೈತಿಕವೂ ಆಗಿ ಪರಿಗಣಿಸಲ್ಪಡುತ್ತದೆ. ಆದುದರಿಂದ ಏಕಸಂಗಾತಿ ವಿವಾಹದಲ್ಲಿ ಗಂಡ ಮತ್ತು ಹೆಂಡತಿಯ ನಡುವಿನ ಪರಸ್ಪರ ನಿಷ್ಠೆಗೆ ಹೆಚ್ಚಿನ ಮಹತ್ವವಿದೆ. ಗಂಡಿಗೆ ಏಕಪತ್ನೀವ್ರತ ಹಾಗೂ ಹೆಣ್ಣಿಗೆ ಪಾತಿವ್ರತ್ಯವೂ ಸಮಾಜದಿಂದ ವಿಧಿಸಲ್ಪಟ್ಟ ನಿಯಮಗಳಾಗಿವೆ.

ಏಕಸಂಗಾತಿ ವಿವಾಹಕ್ಕೆ ಶಾಸ್ತ್ರೀಯವಾಗಿಯೂ ವೈಜ್ಞಾನಿಕವಾಗಿಯೂ ಮಹತ್ವ ದೊರಕಿದೆ. ಶ್ರೀರಾಮನು ಏಕಪತ್ನೀ ವ್ರತವನ್ನು ಪಾಲಿಸುತ್ತಿದ್ದನೆಂಬ ವಿವರಣೆ ರಾಮಾಯಣದಲ್ಲಿ

ಸಿಕ್ಕುತ್ತದೆ. ಶೂರ್ಪನಖಿಯು ಆತನಲ್ಲಿ ವಿವಾಹಾಕಾಂಕ್ಷಿಯಾಗಿ ಬಂದಾಗ ಈ ಕಾರಣಕ್ಕಾಗಿಯೇ ಆಕೆಯನ್ನು ತಿರಸ್ಕರಿಸುತ್ತಾನೆ. ದಶರಥನು ಬಹುಪತ್ನಿತ್ವ ಹೊಂದಿದ್ದರೂ ರಾಮನು ಏಕಪತ್ನಿತ್ವವನ್ನೇ ಆದರ್ಶವನ್ನಾಗಿ ಆಯ್ಕೆ ಮಾಡುತ್ತಾನೆ. ಇದೇ ರೀತಿ ಹಿಂದೂ ಪುರಾಣಗಳು ಹಾಗೂ ಶಾಸ್ತ್ರಗಳು, ಗ್ರೀಕರು, ಯೆಹೂದಿಗಳು ಹಾಗೂ ಕ್ರೈಸ್ತರು ಈ ಪದ್ಧತಿಗೆ ಪ್ರಾಮುಖ್ಯತೆ ನೀಡಿದ್ದಾರೆ. ಅರಿಸ್ಟಾಟಲ್ ಏಕಪತ್ನಿತ್ವದ ಮಹತ್ವವನ್ನು ತನ್ನ ಕೃತಿಗಳಲ್ಲಿ ಪ್ರತಿಪಾದಿಸಿದ್ದಾನೆ.

ಮಾನವಶಾಸ್ತ್ರ ಅಧ್ಯಯನಗಳು ಕೂಡ ಏಕಪತ್ನಿತ್ವವು ಪ್ರಚಲಿತವಾದ ಪದ್ಧತಿ ಯೆಂಬುದಾಗಿ ತಿಳಿಸುತ್ತವೆ. ಬಹುಪತಿತ್ವ ಅಥವಾ ಬಹುಪತ್ನಿತ್ವಕ್ಕೆ ಮನ್ನಣೆ ಇದ್ದ ಸಮುದಾಯಗಳಲ್ಲಿ ಕೂಡ ವಾಸ್ತವಿಕವಾಗಿ ಹೆಚ್ಚಿನ ವಿವಾಹಗಳು ಏಕಸಂಗಾತಿ ವಿವಾಹ ಗಳಾಗಿದ್ದವು. ಈ ಅಂಶವು ಮರ್‌ಡೋಕನು ನಡೆಸಿದ ಬುಡಕಟ್ಟುಗಳ ಅಧ್ಯಯನಗಳಿಂದ ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಸ್ತ್ರೀ ಪುರುಷರ ನಿಷ್ಪತ್ತಿಯು ಸಮಪ್ರಮಾಣದಲ್ಲೇ ಇರುವುದರಿಂದ ಏಕಸಂಗಾತಿ ವಿವಾಹಗಳಿಗೆ ಪೂರಕವಾಗಿದೆ. ಆದುದರಿಂದಲೇ ವೆಸ್ಟರ್ ಮಾರ್ಕ್ ಇದು ಮಾನವ ಜನಾಂಗದಷ್ಟೇ ಪ್ರಾಚೀನವಾದ ಪದ್ಧತಿ ಎಂದಿದ್ದಾನೆ. ಹಲವು ಆದಿವಾಸಿ ಸಮುದಾಯಗಳು ಏಕಪತ್ನಿತ್ವಕ್ಕೆ ಮನ್ನಣೆ ನೀಡಿದ್ದವು.

ವೈಜ್ಞಾನಿಕವಾಗಿಯೂ ಏಕಸಂಗಾತಿ ವಿವಾಹವು ಹೆಚ್ಚು ಪ್ರಶಸ್ತವಾದುದೆಂಬ ಅಭಿಪ್ರಾಯ ವಿದೆ. ಬಹುಸಂಗಾತಿ ವಿವಾಹಗಳು ಅನಿಯಂತ್ರಿತ ಲೈಂಗಿಕತೆಗೆ ಅವಕಾಶ ನೀಡುವುದರಿಂದ ದಂಪತಿಗಳಲ್ಲೊಬ್ಬರು ಬಹುಬೇಗ ಆರೋಗ್ಯವನ್ನು ಕಳೆದುಕೊಳ್ಳುತ್ತಾರೆ. ಆದರೆ ಏಕಸಂಗಾತಿ ವಿವಾಹಗಳು ಆರೋಗ್ಯಪೂರ್ಣ ಲೈಂಗಿಕತೆಗೆ, ಮಾನಸಿಕ ನೆಮ್ಮದಿಗೆ ಹಾಗೂ ಉತ್ತಮ ಕೌಟುಂಬಿಕ ಸಂಬಂಧಗಳಿಗೆ ತಳಹದಿಯಾಗುವುದರಿಂದ ದೈಹಿಕ -ಮಾನಸಿಕ ಸ್ವಾಸ್ಥ್ಯವು ಚೆನ್ನಾಗಿ ಉಳಿಯುತ್ತದೆ. ಹೀಗಾಗಿ ಆಧುನಿಕ ಜಗತ್ತಿನಲ್ಲಿ ಬಹುತೇಕ ದೇಶಗಳು ಏಕಸಂಗಾತಿ ವಿವಾಹವನ್ನಷ್ಟೇ ಕಾನೂನುಬದ್ಧಗೊಳಿಸಿವೆ. ವಿವಾಹಿತರು ವಿವಾಹೇತರ ಸಂಬಂಧದಲ್ಲಿ ಆಸಕ್ತರಾಗಿ ಅನೈತಿಕತೆಯ ದಾರಿ ತುಳಿದರೆ ಆಗ ಅವರ ಸಂಗಾತಿಗಳಿಗೆ ವಿವಾಹದಿಂದ ಬಿಡುಗಡೆ ನೀಡುವ ವಿವಾಹ ವಿಚ್ಛೇದನ ಶಾಸನವೂ ಇಂದು ಜಾರಿಯಲ್ಲಿದೆ. ಹೀಗಾಗಿ ಏಕಪತ್ನಿತ್ವಕ್ಕೆ ಶಾಸನಬದ್ಧ ಮನ್ನಣೆ ಸಿಕ್ಕಿರುವುದಷ್ಟೇ ಅಲ್ಲದೆ ಇಂತಹ ವಿವಾಹದ ಮೂಲಕ ಹುಟ್ಟುವ ಮಕ್ಕಳಿಗೆ ಮಾತ್ರ ವಂಶಪಾರಂಪರ್ಯ ಹಕ್ಕನ್ನು ಕಾನೂನು ನೀಡುತ್ತದೆ. ಈ ರೀತಿ ಆಧುನಿಕ ಯುಗದಲ್ಲಿ ಬಹುಸಂಗಾತಿ ವಿವಾಹವನ್ನು ಪೂರ್ಣವಾಗಿ ನಿರುತ್ತೇಜನ ಗೊಳಿಸಲಾಗಿದ್ದು ಏಕಸಂಗಾತಿ ವಿವಾಹವನ್ನಷ್ಟೇ ಎತ್ತಿ ಹಿಡಿಯಲಾಗಿದೆ.

ಕಾರಣಗಳು

೧. ಸ್ತ್ರೀ-ಪುರುಷ ಪ್ರಮಾಣದಲ್ಲಿ ಸಮಾನತೆ

ಸಮುದಾಯದ ಜನಸಂಖ್ಯೆಯಲ್ಲಿ ಗಂಡು-ಹೆಣ್ಣುಗಳ ಸಂಖ್ಯೆ ಸಮಪ್ರಮಾಣದಲ್ಲಿದ್ದಾಗ

ಪ್ರತಿ ಗಂಡಿಗೂ ಹೆಣ್ಣಿಗೂ ಏಕಸಂಗಾತಿ ವಿವಾಹದ ಅವಕಾಶ ಇರುತ್ತದೆ. ಇಂಥಲ್ಲಿ ಬಹುಸಂಗಾತಿ ವಿವಾಹದ ಅಗತ್ಯ ಬೀಳುವುದಿಲ್ಲ.

೨. ಭಾವನಾತ್ಮಕ ನೆಲೆ

ಸ್ತ್ರೀ ಅಥವಾ ಪುರುಷನು ತನ್ನ ಸಂಗಾತಿಯಲ್ಲಿ ಭಾವನಾತ್ಮಕವಾಗಿ ಹಂಚಿಕೊಳ್ಳುವ ಅನೇಕ ವಿಚಾರಗಳಿರುತ್ತವೆ. ಬಹುಸಂಗಾತಿಗಳಿದ್ದಾಗ ಇದು ಸಾಧ್ಯವಾಗುವುದಿಲ್ಲ. ಆದುದರಿಂದ ಸಾಮಾನ್ಯವಾಗಿ ವ್ಯಕ್ತಿಗಳು ಒಂದೇ ಸಂಗಾತಿಯನ್ನು ಅಪೇಕ್ಷಿಸುತ್ತಾರೆ.

೩. ಆರ್ಥಿಕ ಸುಭದ್ರತೆ

ಗಂಡ-ಹೆಂಡತಿ ಇಬ್ಬರೂ ಸೇರಿ ದುಡಿದು ಮನೆಯ ಖರ್ಚನ್ನು ಸರಿದೂಗಿಸಲು ಸಾಧ್ಯವಿದೆ. ಬಹುಸಂಗಾತಿ ವಿವಾಹದಲ್ಲಿ ಆರ್ಥಿಕ ಅಭದ್ರತೆ ಜಾಸ್ತಿ ಇರುತ್ತದೆ. ಆದರೆ ಏಕಪತ್ನಿತ್ವದಲ್ಲಿ ಆರ್ಥಿಕ ಸುಭದ್ರತೆಯನ್ನು ಸಾಧಿಸುವ ಸಾಧ್ಯತೆಗಳು ಹೆಚ್ಚು ಇವೆ. ಇದು ಕೂಡ ಏಕಸಂಗಾತಿ ವಿವಾಹಕ್ಕೆ ಕಾರಣವಾಗಿದೆ.

೪. ವೃದ್ಧಾಪ್ಯದಲ್ಲಿ ರಕ್ಷಣೆ

ಏಕಸಂಗಾತಿ ವಿವಾಹದಿಂದಾಗಿ ಹೆತ್ತವರ ಮತ್ತು ಮಕ್ಕಳ ನಡುವೆ ಹೆಚ್ಚಿನ ಸಂಬಂಧ-ಸಾಮರಸ್ಯಗಳಿರುತ್ತವೆ. ಹೆತ್ತವರಿಗೆ ಮಕ್ಕಳನ್ನು ಯೋಗ್ಯ ರೀತಿಯಲ್ಲಿ ಬೆಳೆಸುವ ಹೊಣೆಗಾರಿಕೆ ಇದ್ದಂತೆ, ಬೆಳೆದು ನಿಂತ ಮಕ್ಕಳಿಗೆ ವೃದ್ಧರಾದ ಮಾತಾಪಿತರನ್ನು ನೋಡಿಕೊಳ್ಳುವ ಹೊಣೆಗಾರಿಕೆ ಇರುತ್ತದೆ. ಈ ಬಗೆಯಲ್ಲಿ ತಲೆಮಾರುಗಳ ನಡುವೆ ಪರಸ್ಪರ ಬಾಧ್ಯತೆಗಳ ಸಂಬಂಧಕ್ಕೆ ಏಕಸಂಗಾತಿ ವಿವಾಹದಲ್ಲಿದ್ದಷ್ಟು ಅವಕಾಶ ಬೇರಾವುದೇ ವಿವಾಹ ಪದ್ಧತಿಯಲ್ಲಿ ಇರುವುದಿಲ್ಲ. ಹೀಗೆ ವ್ಯಕ್ತಿಯ ಮುಂದಿನ ದೃಷ್ಟಿಯಿಂದಲೂ ಇದು ಸೂಕ್ತವಾಗಿದೆ.

೫. ವ್ಯಕ್ತಿತ್ವ ವಿಕಸನ

ಏಕಸಂಗಾತಿ ವಿವಾಹದಲ್ಲಿ ಗಂಡ ಹೆಂಡತಿ ವ್ಯಕ್ತಿತ್ವದ ವಿಕಾಸಕ್ಕೆ ಪರಸ್ಪರವಾಗಿ ಪೂರಕರಾಗುತ್ತಾರೆ. ಅಲ್ಲದೆ ಮಕ್ಕಳ ಜೈವಿಕ ಹಾಗೂ ಸಾಮಾಜಿಕ ಪಾಲಕರಾಗಿ ಅವರ ಬೆಳವಣಿಗೆಯಲ್ಲಿ ದಂಪತಿಗಳು ಹೆಚ್ಚಿನ ಆಸ್ಥೆ ವಹಿಸಲು ಅವಕಾಶವಿದೆ. ತನ್ನ ಮಗುವೆಂಬ ಹೆಚ್ಚಿನ ಮಮಕಾರದ ಸಂಬಂಧವು ಪ್ರಕಟಗೊಳ್ಳಲು ಇದರಲ್ಲಿ ಸಾಧ್ಯತೆ ಇದೆ. ಈ ದೃಷ್ಟಿಯಿಂದಲೂ ಏಕಸಂಗಾತಿ ವಿವಾಹವನ್ನು ಅಪೇಕ್ಷಿಸಲು ಕಾರಣವಿದೆ.

ಅನುಕೂಲಗಳು

೧. ಗಂಡ-ಹೆಂಡರ ನಡುವೆ ಹೆಚ್ಚಿನ ಆತ್ಮೀಯತೆಗೆ ಅವಕಾಶವಿದೆ. ಅವರೊಳಗೆ ಪರಸ್ಪರ ತ್ಯಾಗ-ಸಹಕಾರಗಳು ಸಂಬಂಧಗಳು ಉಂಟಾಗುತ್ತವೆ.
೨. ಮಕ್ಕಳ ಕಡೆಗೆ ಸಂಪೂರ್ಣ ಗಮನ ಹಾಗೂ ಮಮಕಾರವನ್ನು ತೋರಲು ಅವಕಾಶವಿದೆ. ಅವರ ಬೆಳವಣಿಗೆಯಲ್ಲಿ ಹೆತ್ತವರು ತಮಗೆ ಸಾಧ್ಯವಿರುವ ಎಲ್ಲಾ ಬಗೆಯ ನೆರವನ್ನೂ ನೀಡಬಹುದಾಗಿದೆ. ಹೀಗಾಗಿ ಅವರು ತಮ್ಮ ಇಚ್ಛೆಯಂತೆ ಮಕ್ಕಳನ್ನು ಬೆಳೆಸಬಹುದು.

೩. ಮನೆಯೊಳಗೆ ಹೆಚ್ಚಿನ ಸಾಮರಸ್ಯ, ಶಾಂತಿ, ನೆಮ್ಮದಿ ಸಿಕ್ಕುತ್ತದೆ. ಗಂಡ-ಹೆಂಡರ ನಡುವೆ, ಹೆತ್ತವರು ಮತ್ತು ಮಕ್ಕಳ ನಡುವೆ ಹಾಗೂ ಮಕ್ಕಳೊಳಗೆ ಹೆಚ್ಚಿನ ಸಾಂಸ್ಕೃತಿಕ ಸಾಮರಸ್ಯಕ್ಕೆ ಅವಕಾಶವಿದೆ.

೪. ಆರೋಗ್ಯಕರ ಲೈಂಗಿಕ ಸಂತೃಪ್ತಿಗೆ ಏಕಸಂಗಾತಿ ವಿವಾಹವು ಅತ್ಯಂತ ಸೂಕ್ತವಾಗಿದೆ. ಅತಿಯಾದ ಕಾಮಲಾಲಸೆಯ ನಿಗ್ರಹಕ್ಕೆ ಇದು ಅನುಕೂಲವಾಗಿದೆ. ಬಹುಪತ್ನಿತ್ವ ಹೊಂದಿದಾತನ ಕಾಮವಾಂಛೆಗೆ ಮಿತಿಯೆಂಬುದಿರಲಾರದು. ಆದುದರಿಂದ ಲೈಂಗಿಕ ಸಂಯಮ ಅಗತ್ಯ. ಆಧುನಿಕ ಯುಗದಲ್ಲಿ ಏಡ್ಸ್‌ನಂತಹ ಮಾರಕ ರೋಗಗಳಿಗೆ ಬಲಿಯಾಗದಂತೆ ರಕ್ಷಿಸುವುದೇ ಏಕಸಂಗಾತಿ ವಿವಾಹವೆನ್ನಬಹುದು.

೫. ಸ್ತ್ರೀಯರ ಸ್ಥಾನ : ಬಹುಪತ್ನಿತ್ವಕ್ಕಿಂತ ಏಕಪತ್ನಿತ್ವದಲ್ಲಿ ಸ್ತ್ರೀಯರಿಗೆ ಮೇಲಾದ ಸ್ಥಾನಮಾನವಿದೆ. ಮನೆಯೊಳಗೆ ಅವರಿಗೆ ಪ್ರತಿಸ್ಪರ್ಧಿಗಳಾಗಲೀ ಕಾಲೆಳೆಯುವವರಾಗಲಿ ಇರುವುದಿಲ್ಲ. ಅಲ್ಲದೆ ಆಧುನಿಕ ಯುಗದಲ್ಲಿ ಸುಶಿಕ್ಷಿತ ಸ್ತ್ರೀಯು ಪುರುಷರಿಗೆ ಸಮಾನವಾಗಿ ನಿಲ್ಲಲು ಈ ವಿವಾಹ ಪದ್ಧತಿ ಅನುಕೂಲಕರವಾಗಿದೆ.

ಹೀಗೆ ಅನೇಕ ದೃಷ್ಟಿಗಳಿಂದ ಏಕಸಂಗಾತಿ ವಿವಾಹವು ಅನುಕೂಲಕರವಾಗಿದ್ದು ಇಂದು ಅದು ಸಾರ್ವತ್ರಿಕವಾಗಿದೆ. ಎಲ್ಲಾ ದೇಶಗಳಲ್ಲಿ ಹಾಗೂ ಸಂಸ್ಕೃತಿಗಳಲ್ಲಿ ಸ್ವೀಕೃತವಾದ ವಿವಾಹ ಪದ್ಧತಿ ಇದಾಗಿದೆ. ಮಲಿನೋವ್‌ಸ್ಕಿಯವರು "ಏಕಸಂಗಾತಿ ವಿವಾಹವಷ್ಟೇ ನಿಜವಾದ ವಿವಾಹವಾಗಿದ್ದು ಅದು ಹಿಂದೆಯೂ ಇತ್ತು, ಮುಂದೆಯೂ ಇರುವುದು" ಎಂದಿದ್ದಾರೆ. ಹಾಗೆಂದು ಏಕಸಂಗಾತಿ ವಿವಾಹದಲ್ಲಿಯೂ ಪ್ರತಿಕೂಲಗಳಿಲ್ಲವೆಂದಿಲ್ಲ. ಕೆಲವು ಸಮಸ್ಯೆಗಳು ಅದರಿಂದ ಉಂಟಾಗುತ್ತವೆ. ಉದಾಹರಣೆಗೆ, ಗಂಡ ಅಥವಾ ಹೆಂಡತಿ ಕುಡಿತ, ಕಳವು ಮೊದಲಾದ ದುರಾಚಾರಗಳಿಗೆ ಬಲಿಯಾದರೆ ಅವರ ಸಂಗಾತಿಗೆ ಮಾನಸಿಕವಾಗಿಯೂ ಆರ್ಥಿಕವಾಗಿಯೂ ಕಷ್ಟನಷ್ಟಗಳುಂಟಾಗುತ್ತವೆ. ದಂಪತಿಗಳಲ್ಲಿ ಒಬ್ಬರು ಮೃತರಾದರೆ ಬದುಕುಳಿದವರು ಏಕಾಂಗಿಯಾಗುತ್ತಾರೆ; ಬಹು ಸಂಗಾತಿ ವಿವಾಹದಲ್ಲಿ ಈ ಸಮಸ್ಯೆ ಇಲ್ಲ. ಮಕ್ಕಳಿಗೂ ತಂದೆ-ತಾಯಿಗಳಲ್ಲೊಬ್ಬರ ಅಥವಾ ಈರ್ವರ ಮರಣ, ಅವರ ಅಪಮಾರ್ಗ ಇತ್ಯಾದಿಗಳಿಂದ ಸಮಸ್ಯೆಯಾಗುತ್ತವೆ. ಇನ್ನು ಹೆಂಡತಿ ಸತ್ತ ಬಳಿಕ ಗಂಡು ಇನ್ನೊಂದು ಮದುವೆಯಾಗಬಹುದಾದರೂ ಹೆಣ್ಣು ಮಾತ್ರ ಗಂಡ ನಿಧನವಾದಾಗ ವಿಧವೆಯಾಗಿ ಬಾಳಬೇಕಾದ ಪರಿಸ್ಥಿತಿಯು ಏಕಸಂಗಾತಿ ವಿವಾಹದಲ್ಲಿದೆ. ಇದಲ್ಲದೆ ಏಕಸಂಗಾತಿ ವಿವಾಹವು ಅವಿಭಕ್ತ ಕುಟುಂಬಗಳ ಅವನತಿಗೆ ಸಹಕಾರಿಯಾದ ಅಂಶವಾಗಿದೆ. ಅಣುಕುಟುಂಬಗಳ ಸ್ಥಾಪನೆಗೆ ಈ ಬಗೆಯ ವಿವಾಹವು ಕಾರಣವಾಗಿದೆ. ಹೀಗೆ ಕೆಲವೊಂದು ದೋಷಗಳು ಏಕಸಂಗಾತಿ ವಿವಾಹದಲ್ಲಿರುವುದಾದರೂ ಅದಕ್ಕೆ ಪರಿಹಾರವು ಬಹುಸಂಗಾತಿ ವಿವಾಹಗಳಲ್ಲ; ಬದಲಾಗಿ ಶಾಸನಾತ್ಮಕವಾಗಿ ವಿಚ್ಛೇದನ, ಪುನರ್ವಿವಾಹ, ಸ್ತ್ರೀಯರ ಸ್ಥಾನಮಾನ ಇತ್ಯಾದಿಗಳಿಗೆ ಅವಕಾಶ ಕಲ್ಪಿಸುವುದಾಗಿದೆ. ಒಟ್ಟು ಸಮಾಜವನ್ನು ಗಮನಿಸಿದರೆ ಈ

ದೋಷಗಳು ಕಂಡುಬರುವ ಪ್ರಮಾಣವು ಅತ್ಯಲ್ಪವೆನ್ನಬಹುದು. ಆದುದರಿಂದ ಏಕಸಂಗಾತಿ ವಿವಾಹವೇ ಸಾಮಾಜಿಕವಾಗಿಯೂ, ಶಾಸನಾತ್ಮಕವಾಗಿಯೂ ನೈತಿಕವೆಂಬುದಾಗಿ ಅಂಗೀಕರಿಸಲ್ಪಟ್ಟಿದೆ. ಇದರ ಮಹತ್ವವೆಷ್ಟಿದೆಯೆಂದರೆ ಅನೇಕ ರಾಜಕಾರಣಿಗಳು, ಅಧಿಕಾರಿಗಳು, ಶಿಕ್ಷಕರು ಮತ್ತಿತರ ಜವಾಬ್ದಾರಿಯ ಸ್ಥಾನಗಳನ್ನು ಹೊಂದಿರುವವರು ದ್ವಿಪತ್ನಿತ್ವ ಅಥವಾ ಬಹುಪತ್ನಿತ್ವವನ್ನು ಆಚರಿಸಿದ್ದು ಸಾಬೀತಾದರೆ ಅವರಿಗೆ ಶಾಸನಾತ್ಮಕವಾಗಿ ಸ್ಥಾನಚ್ಯುತಿಯಾಗುತ್ತದೆ. ಇದು ಮುಕ್ತಸಮಾಜವೆನ್ನಿಸಿರುವ ಯುರೋಪಿನಲ್ಲೂ ಅಮೆರಿಕದಲ್ಲೂ ಪಾಲಿಸಲ್ಪಡುವ ನಿಯಮವಾಗಿದೆ. ಇದೇ ಏಕಸಂಗಾತಿ ವಿವಾಹದ ಮಹತ್ವಕ್ಕೆ ನೀಡಬಹುದಾದ ಪುರಾವೆಯಾಗಿದೆ.

ಸಮೂಹ ವಿವಾಹ

ಇಬ್ಬರು ಅಥವಾ ಹೆಚ್ಚುಮಂದಿ ಸ್ತ್ರೀಯರು ಒಟ್ಟಾಗಿ ಒಂದೇ ಕಾಲದಲ್ಲಿ ಇಬ್ಬರು ಅಥವಾ ಹೆಚ್ಚುಮಂದಿ ಪುರುಷರನ್ನು ವಿವಾಹವಾಗುವುದೇ ಸಮೂಹ ವಿವಾಹವಾಗಿದೆ. ಇಂತಹ ವಿವಾಹ ಪದ್ಧತಿಯಲ್ಲಿ ಗಂಡಸರು ಸಾಮಾನ್ಯಪತಿಯರೂ, ಹೆಂಗಸರು ಸಾಮಾನ್ಯಪತ್ನಿಯರೂ ಆಗಿರುತ್ತಾರೆ. ಇಲ್ಲಿ ಹುಟ್ಟುವ ಮಕ್ಕಳು ಇಡಿಯ ಸಮೂಹದ ಮಕ್ಕಳಾಗಿರುತ್ತಾರೆ. ಈ ಮಕ್ಕಳಿಗೆ ಎಲ್ಲ ಪುರುಷರೂ 'ತಂದೆ', ಸ್ತ್ರೀಯರೆಲ್ಲರೂ 'ತಾಯಿ'. ಮಕ್ಕಳಿಗೆ ತಮ್ಮದೇ ತಂದೆ-ತಾಯಿಯಾಗಲಿ, ಸ್ತ್ರೀ-ಪುರುಷರಿಗೆ ತಮ್ಮದೇ ಆದ ಮಕ್ಕಳಾಗಲೀ ಇರುವುದಿಲ್ಲ.

ಒಳಬಾಂಧವ್ಯ ಮತ್ತು ಹೊರಬಾಂಧವ್ಯ : ನಾವೀಗ ವಿವಾಹದ ನಾಲ್ಕು ಪ್ರಮುಖ ವಿಧಗಳನ್ನು ಅಭ್ಯಸಿಸಿದೆವು. ಈ ಅಧ್ಯಾಯ ಕೊನೆಗೊಳ್ಳುವ ಮೊದಲು ವಿವಾಹದ ಎರಡು ಪ್ರಕಾರಗಳು - ಒಳಬಾಂಧವ್ಯ ಮತ್ತು ಹೊರಬಾಂಧವ್ಯಗಳನ್ನು ಅಧ್ಯಯನ ಮಾಡೋಣ.

ಒಳಬಾಂಧವ್ಯ : ಒಳಬಾಂಧವ್ಯವು ವ್ಯಕ್ತಿಗಳು ತಮ್ಮ ಜಾತಿ ಅಥವಾ ವರ್ಗದಿಂದಲೇ ಹೆಣ್ಣು ಕೊಟ್ಟು - ತರುವ ವಿವಾಹ ಪದ್ಧತಿಯನ್ನು ಸೂಚಿಸುತ್ತದೆ. ಇಲ್ಲಿಯೂ ತೀರ ಸಮೀಪದ ರಕ್ತಸಂಬಂಧಿಗಳೊಳಗೆ ವಿವಾಹಕ್ಕೆ ಅವಕಾಶವಿರುವುದಿಲ್ಲ. ಸಾಮಾನ್ಯವಾಗಿ ಗೋತ್ರ, ಪ್ರವರ, ಕುಲದೇವತಾ ಸಮೂಹ, ಪಿಂಡ ಇವುಗಳಲ್ಲದೆ ಹೊರಬಾಂಧವ್ಯವೂ, ಜಾತಿ, ಬುಡಕಟ್ಟು, ವರ್ಗ, ಉಪಜಾತಿ, ಜನಾಂಗದಲ್ಲಿ ಒಳಬಾಂಧವ್ಯವೂ ಹೆಚ್ಚಾಗಿ ಬಳಕೆಯಲ್ಲಿರುವುದು ಕಂಡುಬರುತ್ತದೆ.

ಒಳಬಾಂಧವ್ಯದಿಂದ ಕೆಲವು ಅನುಕೂಲತೆಗಳಿವೆ :

೧. ಸಮೂಹದ ಐಕ್ಯತೆ ಮತ್ತು ಆಂತರಿಕ ಭದ್ರತೆಗೆ ಇದು ಸಹಾಯಕವಾಗಿದೆ.

೨. ಸಮೂಹದ ಪರಿಶುದ್ಧತೆ ಮತ್ತು ಪವಿತ್ರತೆಗಳು ಬದಲಾಗುವುದಿಲ್ಲ.

೩. ಸಮೂಹದ ಲೋಪದೋಷಗಳು ಬಹುಮಟ್ಟಿಗೆ ರಹಸ್ಯವಾಗಿಯೇ ಉಳಿಯುತ್ತವೆ.

೪. ಸಮೂಹದ ಆಸ್ತಿ ಸಮೂಹದಲ್ಲಿಯೇ ಸ್ಥಿರವಾಗಿ ಉಳಿಯುತ್ತದೆ.

ಒಳಬಾಂಧವ್ಯದಿಂದ ಕೆಲವು ಅನನುಕೂಲತೆಗಳು ಇವೆ :

೧. ಒಳಬಾಂಧವ್ಯಗಳಿಂದಾಗಿ ಸಮಾಜವು ಅನೇಕ ಘಟಕಗಳಲ್ಲಿ ಒಡೆದು, ಐಕ್ಯತೆ ಮತ್ತು ಸಮಗ್ರತೆಗೆ ಆತಂಕವಾಗಬಹುದು.

೨. ವಧುವಿನ ಆಯ್ಕೆಗೆ ಸೀಮಿತ ವ್ಯಾಪ್ತಿಯಿರುವುದರಿಂದ ವರದಕ್ಷಿಣೆ, ಕನ್ಯಾಶುಲ್ಕ, ಬಹುಪತ್ನಿತ್ವ ಮೊದಲಾದವುಗಳು ಪ್ರಭಾವೀಯಾಗುತ್ತವೆ.

೩. ಸಮೂಹಗಳಲ್ಲಿ ಪರಸ್ಪರ ದ್ವೇಷ, ಅಸೂಯೆ, ತಿರಸ್ಕಾರಗಳಿಗೆ ಅವಕಾಶವಾಗುತ್ತದೆ.

೪. ಮಕ್ಕಳ ದೈಹಿಕ ಮತ್ತು ಮಾನಸಿಕ ಪ್ರೌಢತೆಯು ಹೊರಬಾಂಧವ್ಯದಷ್ಟು ಪರಿಣಾಮಕಾರಿಯಾಗಿರುವುದಿಲ್ಲ.

ಹೊರಬಾಂಧವ್ಯ : ವ್ಯಕ್ತಿಯು ತನ್ನ ಕುಲದ ಹೊರಗೆ ಅಂದರೆ ಇತರ ಕುಲಗಳಿಂದ ವಿವಾಹ ಸಂಬಂಧ ಹೊಂದಿರುವ ಪದ್ಧತಿಗೆ ಹೊರಬಾಂಧವ್ಯ ಎನ್ನುವರು. ಸಾಮಾನ್ಯವಾಗಿ ಜನರು ತಮ್ಮ ಸಮೀಪದ ರಕ್ತಸಂಬಂಧ ಮತ್ತು ತೀರ ಆತ್ಮೀಯರ ಸಮೂಹಗಳಲ್ಲಿ ವಿವಾಹವಾಗುವುದಿಲ್ಲ. ಕೆಲವು ಸಂಬಂಧಿಗಳೊಳಗೆ ವಿವಾಹ ನಿಷೇಧಿಸಲಾಗಿದೆ. ಪಾಲಕ ಅಥವಾ ಪೋಷಕನು ತನ್ನ ಮಕ್ಕಳೊಂದಿಗೆ ವಿವಾಹವಾಗುವುದನ್ನು ವ್ಯಾಪಕವಾಗಿ ಬಹಿಷ್ಕರಿಸಲಾಗುತ್ತದೆ.

ಹೊರಬಾಂಧವ್ಯದ ಅನುಕೂಲತೆಗಳು ಈ ರೀತಿ ಇರುತ್ತವೆ :

೧. ಪತಿ-ಪತ್ನಿಯರಲ್ಲಿ ಹೆಚ್ಚಿನ ಪ್ರೇಮವಾತ್ಸಲ್ಯಗಳ ಭಾವನೆ ಬೆಳೆದು, ಸುಖದುಃಖಗಳಲ್ಲಿ ಸಮಾನತೆಯಿರುತ್ತದೆ. ಏಕೆಂದರೆ ಇಂತಹ ಬಾಂಧವ್ಯದಲ್ಲಿ ಹೆಚ್ಚಿನ ಮಮತೆ ಬೆಳೆಸಲು ಸಾಧ್ಯ.

೨. ಮಕ್ಕಳು ಧೃಡಕಾಯರೂ ಬುದ್ಧಿವಂತರೂ ಆಗಿರುತ್ತಾರೆ.

೩. ಸಮೂಹಗಳಲ್ಲಿ ತಿಳುವಳಿಕೆ, ಮಧುರಬಾಂಧವ್ಯ ಮೊದಲಾದವು ಉತ್ತಮವಾಗಿರುತ್ತವೆ.

೪. ಪ್ರತಿಯೊಬ್ಬ ವ್ಯಕ್ತಿಗೂ ತಮ್ಮ ಜೀವನ ಸಂಗಾತಿಯನ್ನು ಆಯ್ಕೆ ಮಾಡುವ ಸೂಕ್ತ ಅವಕಾಶ ದೊರಕುತ್ತದೆ.

೬.೩. ಕುಟುಂಬ

ಕುಟುಂಬ ಒಂದು ಸಮೂಹ ಅಥವಾ ಸಂಘಟನೆಯ ಸ್ವರೂಪ ಪಡೆದಿದ್ದು, ಅದರ ಸದಸ್ಯರ ವಿವಾಹ ಅಥವಾ ರಕ್ತಸಂಬಂಧದಿಂದ ಕನಿಷ್ಠ ಎರಡು ಪೀಳಿಗೆಗಳಿಗೆ ಸೇರಿದವರಾಗಿರುತ್ತಾರೆ.

ಅಣು ಅಥವಾ ಮೂಲ ಕುಟುಂಬವು ತಂದೆ, ತಾಯಿ ಮತ್ತು ಮಕ್ಕಳು ಮಾತ್ರ ಕೂಡಿರುವ ಚಿಕ್ಕಗಾತ್ರದ ಕುಟುಂಬ.

ಕೂಡು ಕುಟುಂಬ ಎರಡು ಮೂರು ತಲೆಮಾರುಗಳಿಗೆ ಸೇರಿದ ರಕ್ತಸಂಬಂಧಿಗಳು-ಅಣು ಕುಟುಂಬಗಳು ಒಟ್ಟಾಗಿ ವಾಸಿಸುವ ವಿಸ್ತೃತ ಕುಟುಂಬ; ಇದನ್ನು ಅವಿಭಕ್ತ ಕುಟುಂಬವೆನ್ನುತ್ತಾರೆ.

ಮಾತೃಸ್ಥಾನೀಯ ಕುಟುಂಬದಲ್ಲಿ ವಿವಾಹದ ನಂತರ ಗಂಡನು ಹೆಂಡತಿಯ ತವರು ಮನೆಯಲ್ಲಿ ವಾಸಿಸುತ್ತಾನೆ.

ಪಿತೃಸ್ಥಾನೀಯ ಕುಟುಂಬದಲ್ಲಿ ವಿವಾಹದ ನಂತರ ಹೆಣ್ಣು ತನ್ನ ಮನೆಯನ್ನು ತೊರೆದು ಗಂಡನ ಮನೆ ಸೇರುತ್ತಾಳೆ.

ಮಾತೃಮೂಲೀಯ ಕುಟುಂಬ ತಾಯಿಯ ವಂಶದಿಂದ ಗುರುತಿಸಲ್ಪಡುತ್ತದೆ.

ಪಿತೃಮೂಲೀಯ ಕುಟುಂಬ ತಂದೆಯ ವಂಶದಿಂದ ಗುರುತಿಸಲ್ಪಡುತ್ತದೆ.

ಪಿತೃಪ್ರಧಾನ ಪದ್ಧತಿಯಲ್ಲಿ ಕುಟುಂಬದ ಹಿರಿಯ ಗಂಡಸು ಕುಟುಂಬದ ನಿರ್ವಹಣೆಯಲ್ಲಿ ಸರ್ವಾಧಿಕಾರ ಹೊಂದಿರುತ್ತಾನೆ.

ಕುಟುಂಬದ ಅರ್ಥ ಮತ್ತು ವ್ಯಾಖ್ಯೆ

ಅರ್ಥ : ಮಾನವ ಸಮಾಜದ ಸಮಗ್ರ ಸಮೂಹಗಳಲ್ಲಿ ಕುಟುಂಬವು ಬಹುಮುಖ್ಯವಾದ ಸಾಮಾಜಿಕ ಸಮೂಹವಾಗಿದೆ. ಇದು ಚಿಕ್ಕಗಾತ್ರ ಹೊಂದಿದ್ದು ತಂದೆ, ತಾಯಿ ಮತ್ತು ಮಕ್ಕಳನ್ನು ಹೊಂದಿರುತ್ತದೆ. **ಮೆಕೈವರ್** ಪ್ರಕಾರ, "ಕುಟುಂಬವು ನಿರ್ಧಾರಿತ ಲೈಂಗಿಕ ಸಂಬಂಧವನ್ನು, ಸಂತಾನೋತ್ಪತ್ತಿ ಮತ್ತು ಮಕ್ಕಳ ಪಾಲನೆ ಪೋಷಣೆಗಳನ್ನು ಒಳಗೊಂಡಿರುತ್ತದೆ". ಕುಟುಂಬ ಎಂಬುದರ ಮೂಲಪದ ರೋಮನ್ ಭಾಷೆಯ ಫ್ಯಾಮುಲಸ್. ಇದಕ್ಕೆ 'ಸೇವಕ' ಎಂಬ ಅರ್ಥ ಸಂಕೇತವಿದೆ.

ಸಮಾಜಶಾಸ್ತ್ರದಲ್ಲಿ ಕುಟುಂಬದ ಕುರಿತಾದ ಅಧ್ಯಯನಕ್ಕೆ ಮಹತ್ವಪೂರ್ಣವಾದ ಸ್ಥಾನವಿದೆ. ಏಕೆಂದರೆ ಅದು ಜೈವಿಕ ಮಾನವನನ್ನು ಸಾಮಾಜಿಕ ಮಾನವನನ್ನಾಗಿ ರೂಪಿಸುವ ಒಂದು ಸಂಸ್ಥೆಯಾಗಿದೆ. ಐತಿಹಾಸಿಕವಾಗಿ ನೋಡಿದರೆ ಕುಟುಂಬವು ತನ್ನ ಸ್ವರೂಪ ಹಾಗೂ ಅರ್ಥವಿವರಣೆಯಲ್ಲಿ ಅನೇಕ ಪರಿವರ್ತನೆಗಳನ್ನು ಕಂಡಿದೆ. ಆದರೆ ತನ್ನ ಮೂಲಭೂತವಾದ ಕೆಲವು ಪ್ರಕಾರ್ಯಗಳನ್ನು ಉಳಿಸಿಕೊಂಡು ಎಲ್ಲಾ ಸಮಾಜಗಳಲ್ಲಿಯೂ ಪ್ರಸ್ತುತವಾಗಿರುವ ಕುಟುಂಬದ ಬಗ್ಗೆ ಮಾನವಶಾಸ್ತ್ರಜ್ಞರೂ ಸಮಾಜಶಾಸ್ತ್ರಜ್ಞರೂ ವ್ಯಾಪಕವಾದ ಅಧ್ಯಯನಗಳನ್ನು ನಡೆಸಿದ್ದಾರೆ ಹಾಗೂ ನಡೆಸುತ್ತಿದ್ದಾರೆ. ಅವರು ನೀಡಿದ ಕೆಲವೊಂದು ವ್ಯಾಖ್ಯಾನಗಳನ್ನು ನಾವು ಈಗ ಪರಿಶೀಲಿಸಬಹುದು.

ವ್ಯಾಖ್ಯೆಗಳು

ಮೆಕೈವರ್ರವರ ವಿವರಣೆಯಂತೆ, "ಕುಟುಂಬವೆಂದರೆ ಮಕ್ಕಳ ಜನನ ಹಾಗೂ ಪೋಷಣೆಗೆ ಅನುಮತಿ ನೀಡುವ, ನಿಖರವಾದ ಹಾಗೂ ದೀರ್ಘಕಾಲಿಕ ಲೈಂಗಿಕ ಸಂಬಂಧಗಳಿಗೆ ಅವಕಾಶ ಹೊಂದಿರುವ ಸಮೂಹವಾಗಿದೆ".

ಸುಮ್ನರ್ ಮತ್ತು ಕೆಲ್ಲರ್ರವರ ಪ್ರಕಾರ "ಕುಟುಂಬವೆಂದರೆ ರಕ್ತಸಂಬಂಧದ ನೆಲೆಯ ಮೇಲೆ ರಚಿತವಾದ ಕನಿಷ್ಠ ಎರಡು ತಲೆಮಾರುಗಳ ಜನರುಳ್ಳ ಒಂದು ಕಿರು ಸಾಮಾಜಿಕ ಸಂಘಟನೆಯಾಗಿದೆ".

ಎಲಿಯಟ್ ಮತ್ತು ಮೆರ್‍ರಿಲ್‌ರವರ ಅಭಿಪ್ರಾಯದಲ್ಲಿ "ಕುಟುಂಬವೆಂದರೆ ಗಂಡ-ಹೆಂಡತಿ-ಮಕ್ಕಳಿಂದೊಡಗೂಡಿದ ಜೈವಿಕ ಸಾಮಾಜಿಕ ಘಟಕವಾಗಿದೆ". "ರಕ್ತ, ವೈವಾಹಿಕ ಹಾಗೂ ಶಾಸನಾತ್ಮಕ ಸಂಬಂಧಗಳನ್ನುಳ್ಳ ವ್ಯಕ್ತಿಗಳ ಸಮೂಹವೇ ಕುಟುಂಬ" ಎಂಬುದಾಗಿ ಎಂಡರ್‌ಸನ್ ಮತ್ತು ಪಾರ್ಕರ್ ಹೇಳಿದ್ದಾರೆ.

ಎಂ.ಎಫ್. ನಿಮ್‌ಕಾಫ್‌ರವರ ಪ್ರಕಾರ "ಸಂತತಿಸಹಿತ ಅಥವಾ ರಹಿತವಾದ ಗಂಡಹೆಂಡಿರು ದೀರ್ಘಕಾಲ ಜೊತೆಯಾಗಿ ಬಾಳುವ ಅಥವಾ ಪುರುಷನೊಬ್ಬ ಅಥವಾ ಸ್ತ್ರೀಯೋರ್ವಳೇ ತನ್ನ ಮಕ್ಕಳೊಡನೆ ಬಾಳುವ ಸಮೂಹವನ್ನು ಕುಟುಂಬ" ಎನ್ನಬಹುದು.

ಹೀಗೆ ಕುಟುಂಬದ ಬಗ್ಗೆ ದೊರೆಯುವ ವಿವಿಧ ವ್ಯಾಖ್ಯೆಗಳು ಅದರ ಅರ್ಥವನ್ನು ತಿಳಿಸುತ್ತವೆ. ವಿವಾಹವು ಹೇಗೆ ಒಂದು ಸಾರ್ವತ್ರಿಕವಾದ ಸಂಸ್ಥೆಯೋ ಹಾಗೆಯೇ ಕುಟುಂಬವು ಕೂಡ ಸಾರ್ವತ್ರಿಕವಾದ ಸಂಸ್ಥೆಯೇ ಆಗಿದೆ. ತನ್ನ ರಚನೆಯಲ್ಲಿ ಕುಟುಂಬವು ವಿವಿಧ ರೂಪಗಳಲ್ಲಿ ಕಂಡುಬಂದರೂ ಮೂಲಭೂತವಾಗಿ ಇದು ಅಣು ಕುಟುಂಬವೇ ಆಗಿರುತ್ತದೆ. ಉದಾಹರಣೆಗೆ, ಬಹುಪತ್ನಿತ್ವದಲ್ಲಿ ಎಲ್ಲಾ ಪತ್ನಿಯರ ಮಕ್ಕಳು ಸಮಾನರೆಂದು ಪರಿಗಣಿಸಲ್ಪಟ್ಟಿದ್ದರೂ ಪ್ರತಿಯೊಬ್ಬ ತಾಯಿಗೂ ತನ್ನ ಮಕ್ಕಳು ಯಾರೆಂದು ತಿಳಿದಿದ್ದು ಅವರ ಬಗ್ಗೆ ಆಕೆ ವಿಶೇಷ ಎಚ್ಚರಿಕೆ ವಹಿಸುತ್ತಾಳೆ. 'ಗಂಡ, ತಾಯಿ ಮತ್ತು ಮಕ್ಕಳು' ಇದು ಅಣುಕುಟುಂಬವಾಗಿರುತ್ತದೆ. ಇನ್ನು ತಂದೆ-ಮಗಳು, ತಾಯಿ-ಮಗ, ಅಣ್ಣ-ತಂಗಿ ಇತ್ಯಾದಿ ರಕ್ತಸಂಬಂಧಿಕರು ವಿವಾಹವಾಗಬಾರದೆಂಬುದಾಗಿ ಅಗಮ್ಯಗಮನವನ್ನು ನಿಷೇಧಿಸುವ ನಿಯಮವಿರುವುದರಿಂದ ಪ್ರತಿಯೊಬ್ಬ ವಿವಾಹಿತನೂ ಎರಡು ಅಣುಕುಟುಂಬಗಳಿಗೆ ಸೇರಿರುತ್ತಾನೆಂಬುದಾಗಿ ಡಬ್ಲ್ಯೂ.ಎಲ್. ವಾರ್ನರ್ ಹೇಳುತ್ತಾನೆ : ಒಂದು ತಾನು ಹುಟ್ಟಿ ಬೆಳೆದ ಕುಟುಂಬ ಇನ್ನೊಂದು ತಾನು ಹುಟ್ಟಿಸಿ ಬೆಳೆಸಿದ ಕುಟುಂಬ. ಸಂರಚನೆಯಲ್ಲಿ ಈ ಎರಡು ಕುಟುಂಬಗಳೂ ಸಮಾನವಾಗಿರುತ್ತವೆ. ಆದರೆ ವ್ಯತ್ಯಾಸವೆಂದರೆ ವ್ಯಕ್ತಿಗಳು ಮೊದಲ ಕುಟುಂಬದಲ್ಲಿ ಮಗ ಅಥವಾ ಮಗಳಾಗಿದ್ದು ಎರಡನೆಯದರಲ್ಲಿ ತಂದೆ ಅಥವಾ ತಾಯಿಯ ಪಾತ್ರ ಹೊಂದಿರುತ್ತಾರೆ.

ವಾಸ್ತವಿಕ ಪ್ರಪಂಚದಲ್ಲಿ ನಮಗೆ ಕುಟುಂಬಗಳಲ್ಲಿ ಈ ಕೆಳಗಿನ ವಿಧಗಳು ಕಾಣಸಿಗುತ್ತವೆ:

೧. ವಿವಾಹಿತ ತಂದೆ-ತಾಯಿ ಮತ್ತು ಮಕ್ಕಳಿರುವ ಅಣುಕುಟುಂಬ.

೨. ಅಜ್ಜ-ಅಜ್ಜಿ, ಮಗಂದಿರು-ಸೊಸೆಯರು, ಮೊಮ್ಮಕ್ಕಳು, ಮರಿಮಕ್ಕಳು ಇರುವ ಮೂರು ನಾಲ್ಕು ತಲೆಮಾರುಗಳ ಕೂಡು ಕುಟುಂಬ.

೩. ತಂದೆಯ ಮರಣ ಅಥವಾ ವಿವಾಹ ವಿಚ್ಛೇದನದಿಂದಾಗಿ ತಾಯಿ ಮತ್ತು ಮಕ್ಕಳು ಮಾತ್ರ ಇರುವ ಕುಟುಂಬ.

೪. ತಾಯಿಯ ಮರಣ ಅಥವಾ ವಿವಾಹ ವಿಚ್ಛೇದನದಿಂದಾಗಿ ತಂದೆ ಮತ್ತು ಮಕ್ಕಳು ಮಾತ್ರ ಇರುವ ಕುಟುಂಬ.

೫. ವಿವಾಹಿತ ಆದರೆ ಸಂತತಿರಹಿತ ದಂಪತಿಗಳ ಕುಟುಂಬ.

೬. ಮಕ್ಕಳಿರುವ ಅಥವಾ ಇಲ್ಲದಿರುವ ಅವಿವಾಹಿತ ಸ್ತ್ರೀ-ಪುರುಷನಿರುವ ಕುಟುಂಬ.
೭. ಮಕ್ಕಳಿರುವ ಅಥವಾ ಇಲ್ಲದಿರುವ ಬಹುಪತ್ನಿತ್ವದ ಕುಟುಂಬ ಇತ್ಯಾದಿ.

ಇವುಗಳಲ್ಲಿ ಮೊದಲನೇ ವಿಧದ ಕುಟುಂಬಗಳು ಅತಿ ಹೆಚ್ಚು ಪ್ರಮಾಣದಲ್ಲಿ ಕಾಣ ಸಿಗುತ್ತವೆ.

ಹೀಗೆ ಕುಟುಂಬವು ಲೈಂಗಿಕ ತೃಪ್ತಿ, ಸಂತಾನಾಭಿಲಾಷೆ, ಮಕ್ಕಳ ಪಾಲನೆ-ಪೋಷಣೆ, ಕುಟುಂಬದ ಸದಸ್ಯರ ಆರ್ಥಿಕ ಭದ್ರತೆ ಮುಂತಾದವುಗಳನ್ನು ಪೂರೈಸುವ ಸಾಮಾಜಿಕ ಸಂಸ್ಥೆಯಾಗಿದೆ. ಒಂದೆಡೆ ನೆಲಸಿರುವ ಕುಟುಂಬವು ವ್ಯಕ್ತಿಗೆ 'ಮನೆತನ'ವನ್ನು ನೀಡುವುದು. ಅಲ್ಲದೆ, ಸಾಮಾಜಿಕ ಜೀವನಕ್ಕೆ ಸ್ಥಿರತೆಯನ್ನೂ, ವೈಯಕ್ತಿಕ ಬದುಕಿಗೆ ರಕ್ಷಣೆಯನ್ನೂ ನೀಡುವುದು. ವ್ಯಕ್ತಿಯು ಹುಟ್ಟಿನಿಂದಲೇ ಒಂದು ಕುಟುಂಬದ ಸದಸ್ಯನಾಗಿ ತನ್ನ ಜೀವನದುದ್ದಕ್ಕೂ ಅದರ ಸದಸ್ಯನಾಗಿಯೇ ಉಳಿಯುತ್ತಾನೆ. ಇತರ ಸಾಮಾಜಿಕ ಸಮೂಹಗಳ ಸದಸ್ಯತನ ಐಚ್ಛಿಕವಾಗಿದ್ದು, ತನ್ನ ಧ್ಯೇಯೋದ್ದೇಶಗಳು ಈಡೇರಿದಾಕ್ಷಣ ಅದರ ಸದಸ್ಯತ್ವ ವನ್ನು ತ್ಯಜಿಸಬಹುದಾಗಿದೆ. ಆದರೆ ಕುಟುಂಬದ ಸದಸ್ಯತ್ವವನ್ನು ಯಾವತ್ತೂ ಕಳೆಯು ವಂತಿಲ್ಲ. ಅದರಿಂದಾಗಿಯೇ ಕುಟುಂಬವು ಒಂದು ಶಾಶ್ವತ ಸಾಮಾಜಿಕ ಸಂಸ್ಥೆ ಯಾಗಿದೆ. ಕುಟುಂಬದ ಸದಸ್ಯನಾಗಿ ವ್ಯಕ್ತಿ ತನ್ನ ಕರ್ತವ್ಯಗಳನ್ನು ಹಾಗೂ ಸಾಮಾಜಿಕ ಹೊಣೆಗಳನ್ನು ಪೂರೈಸಿದಾಗಲೇ ಆತನ ಜೀವನ ಸಾರ್ಥಕವೆನಿಸುವುದು.

ಕುಟುಂಬವು ಒಂದು ಸಂಘವೇ ಅಥವಾ ಸಂಸ್ಥೆಯೇ ಎಂಬ ಪ್ರಶ್ನೆ ಏಳುತ್ತದೆ. ಸಂಘವು ಸಮಾನ ಆಸಕ್ತಿಗಳನ್ನು ಹೊಂದಿರುವ ವ್ಯಕ್ತಿಗಳ ಸಂಘಟಿತ ಸಮೂಹವಾಗಿದೆ. ಇದು ತನ್ನದೇ ಆದ ಕರ್ತವ್ಯಗಳನ್ನು ಹೊಂದಿರುತ್ತದೆ. ಆದುದರಿಂದ ಕುಟುಂಬವೂ ಸಹ ಒಂದು 'ಸಂಘ'ವೆನ್ನಬಹುದು. ಸಂಸ್ಥೆಯಲ್ಲಿ ಕೆಲವು ನಿರ್ದಿಷ್ಟ ನೀತಿನಿಯಮಗಳಿದ್ದು, ಅವುಗಳನ್ನು ಎಲ್ಲರೂ ಪಾಲಿಸಬೇಕಾಗುತ್ತದೆ. ಅದು ವ್ಯಕ್ತಿಗಳ ಅವಶ್ಯಕತೆಗಳಾದ ಲೈಂಗಿಕತೃಪ್ತಿ, ಸಂತಾನಾಭಿಲಾಷೆ, ಮಕ್ಕಳ ಪಾಲನೆ-ಪೋಷಣೆ ಮುಂತಾದವುಗಳನ್ನು ಪೂರೈಸುವುದರಿಂದ ಕುಟುಂಬವು ಒಂದು ಸಂಸ್ಥೆಯಾಗಿದೆ. ಈ ರೀತಿಯಲ್ಲಿ ಕುಟುಂಬವು ಸಂಘ ಹಾಗೂ ಸಂಸ್ಥೆಯ ರೂಪದಲ್ಲಿದೆ.

ಕುಟುಂಬದ ಲಕ್ಷಣಗಳು

ವ್ಯಕ್ತಿಯ ಜೀವನವನ್ನು ಸಂಪೂರ್ಣವಾಗಿ ಪ್ರಭಾವಿಸುವ ಕುಟುಂಬದ ಲಕ್ಷಣಗಳನ್ನು ಸಾಮಾನ್ಯ ಗುಣಲಕ್ಷಣಗಳು ಮತ್ತು ವಿಶಿಷ್ಟ ಗುಣಲಕ್ಷಣಗಳು ಎಂದು ಎರಡು ವರ್ಗಗಳಾಗಿ ವಿವರಿಸಬಹುದು.

ಸಾಮಾನ್ಯ ಗುಣಲಕ್ಷಣಗಳು

ಗಂಡ-ಹೆಂಡತಿ ಮತ್ತು ಮಕ್ಕಳನ್ನೊಳಗೊಂಡಿರುವ ಜೈವಿಕ-ಸಾಮಾಜಿಕ ಘಟಕವೇ ಕುಟುಂಬ (ಇಲಿಟ್ ಮತ್ತು ಮೆರಿಟ್). ಮೆಕೈವರ್ ಮತ್ತು ಪೇಜ್ ಇವರ ಪ್ರಕಾರ ಕುಟುಂಬದ ಸಾಮಾನ್ಯ ಗುಣಲಕ್ಷಣಗಳು ಈ ಕೆಳಗಿನಂತಿವೆ :

ಕುಟುಂಬ ಎಂಬುದು ಗಂಡು-ಹೆಣ್ಣಿನ ನಡುವಣ ಶಾಶ್ವತ ಸಂಬಂಧವಾಗಿದೆ. ಪ್ರತಿಯೊಬ್ಬರಿಗೂ ತಮ್ಮ ಸಮಾಜದ ಧೋರಣೆಗನುಸಾರವಾಗಿ ಸಂಗಾತಿಗಳನ್ನು ಆಯ್ಕೆ ಮಾಡುವ ಅವಕಾಶ ಇರುತ್ತದೆ. ಸಂಗಾತಿಯ ಆಯ್ಕೆ ಮಾಡಿದ ಬಳಿಕ ವಿವಾಹ ದೀಕ್ಷೆಯನ್ನು ನೀಡಿ, ಇವರ ಪತಿ-ಪತ್ನಿ ಸಂಬಂಧಕ್ಕೆ ಸಮಾಜವು ಮನ್ನಣೆ ನೀಡುವುದು. ಪ್ರತಿಯೊಂದು ಕುಟುಂಬಕ್ಕೂ ತನ್ನದೇ ಆದ ಕೌಟುಂಬಿಕ ಹಿನ್ನೆಲೆ ಹಾಗೂ ಮನೆತನದ ಹೆಸರು ಇದ್ದು, ಒಬ್ಬ ವ್ಯಕ್ತಿಯು ಇಂತಹ ಮನೆತನದ ಸದಸ್ಯನೆಂದೇ ಗುರುತಿಸಲ್ಪಡುತ್ತಾನೆ. ಕುಟುಂಬದ ಸದಸ್ಯರೆಲ್ಲರೂ ಒಟ್ಟಾಗಿ ವಾಸಿಸುತ್ತಾರೆ. ಕುಟುಂಬವು ವಂಶಾವಳಿಯನ್ನು ಅರ್ಥಾತ್ ವ್ಯಕ್ತಿಗಳ ನಡುವಣ ಜೈವಿಕ ಸಂಬಂಧವನ್ನು ಸಾಮಾಜಿಕವಾಗಿ ಗುರುತಿಸುತ್ತದೆ. ಕುಟುಂಬದ ಸದಸ್ಯರ ಆರ್ಥಿಕ ಭದ್ರತೆಯ ಹೊಣೆಯನ್ನು, ಕುಟುಂಬದ ಸದಸ್ಯರು ಪರಸ್ಪರ ಅರಿತುಕೊಂಡು ನಿಭಾಯಿಸುವರು.

ವಿಶಿಷ್ಟ ಗುಣಲಕ್ಷಣಗಳು

ಮೆಕೈವರ್ ಮತ್ತು ಪೇಜ್ ಇವರು ಕುಟುಂಬದ ಸಮಾಜಶಾಸ್ತ್ರೀಯ ಗುಣಲಕ್ಷಣಗಳನ್ನು ಈ ಕೆಳಗಿನಂತೆ ವಿವರಿಸಿದ್ದಾರೆ.

೧. **ಸಾರ್ವತ್ರಿಕ :** ಕುಟುಂಬವು ಎಲ್ಲ ಸಮುದಾಯಗಳಲ್ಲಿ ಎಲ್ಲ ಕಾಲಗಳಲ್ಲಿ ಒಂದಿಲ್ಲೊಂದು ರೂಪದಲ್ಲಿ ಕಂಡುಬರುವ ಸಂಸ್ಥೆಯಾಗಿದೆ. ಕುಟುಂಬದ ಹಿನ್ನೆಲೆಯಿರದ ವ್ಯಕ್ತಿಗಳಿರುವುದು ತೀರ ಅಪರೂಪ. ಪಿ.ಜಿ. ಮರ್ಡರ್ ಇವರು ಕುಟುಂಬವು ಒಂದು ಸಾರ್ವತ್ರಿಕವಾದ ಸಂಸ್ಥೆ ಎಂಬುದಾಗಿ ಹೇಳಿದ್ದಾರೆ.

೨. **ದಾಂಪತ್ಯ ಸಂಬಂಧ ಮತ್ತು ಭಾವನಾತ್ಮಕತೆ :** ವಿವಾಹದ ಮೂಲಕ ಉಂಟಾಗುವ ದಾಂಪತ್ಯ ಸಂಬಂಧದಿಂದಾಗಿ ಕುಟುಂಬವು ಸ್ಥಾಪನೆಗೊಳ್ಳುತ್ತದೆ. ಈ ಸಂಬಂಧವು ಲೈಂಗಿಕ ತೃಪ್ತಿ, ಸಂತಾನ ಪ್ರಾಪ್ತಿ, ಮಕ್ಕಳನ್ನು ಪಾಲಿಸಿ, ಪೋಷಿಸುವ ಹೊಣೆ ಇತ್ಯಾದಿಗಳನ್ನು ಒದಗಿಸುವುದರಿಂದ ಕುಟುಂಬದ ಸದಸ್ಯರ ನಡುವೆ ಭಾವನಾತ್ಮಕ ಸಂಬಂಧ ಇರುತ್ತದೆ. ಅಲ್ಲದೆ ಕುಟುಂಬವೇ ಬೆಳೆದು ನಿಂತ ಸದಸ್ಯರಿಗೆ ಸೂಕ್ತಪದ್ಧತಿಯಂತೆ ವಿವಾಹವನ್ನೇರ್ಪಡಿಸುವ ಹೊಣೆ ಹೊತ್ತಿದೆ. ಮಾನವನು ತನ್ನ ಭಾವನೆಗಳನ್ನು ಕುಟುಂಬದಲ್ಲಿಯೇ ಕಲಿತುಕೊಳ್ಳುತ್ತಾನೆ.

೩. ಸೀಮಿತ ಗಾತ್ರ : ಕುಟುಂಬದ ಸದಸ್ಯತ್ವವು ದಾಂಪತ್ಯ ಸಂಬಂಧ ಹಾಗೂ ಜೈವಿಕ ಜನನದ ತಳಹದಿಯನ್ನು ಹೊಂದಿರುವುದರಿಂದ ಅದರ ಗಾತ್ರಕ್ಕೆ ನಿಶ್ಚಿತ ಮಿತಿ ಇರುತ್ತದೆ. ವಿವಾಹದ ಮೂಲಕ ಒಂದು ಹೆಣ್ಣು ತಂದೆಯ ಮನೆಯ ಸದಸ್ಯತ್ವ ತ್ಯಜಿಸಿ ಗಂಡನ ಮನೆಯ ಸದಸ್ಯತ್ವ ಪಡೆಯಬಹುದು. ಒಂದು ನಿರ್ದಿಷ್ಟ ಮನೆಯಲ್ಲಿ ಹುಟ್ಟುವ ಮೂಲಕ ಮಗುವಿಗೆ ಆ ಮನೆಯ ಸದಸ್ಯತ್ವ ದೊರಕಬಹುದು. ಇನ್ನು ಸಂತತಿಹೀನ ದಂಪತಿಗಳು ದತ್ತು ಸ್ವೀಕಾರದ ಮೂಲಕ ಮಾತ್ರ ಬೇರೊಂದು ಮನೆಯ ಮಗುವಿಗೆ ತಮ್ಮ ಕುಟುಂಬದ ಸದಸ್ಯತ್ವ ನೀಡಬಹುದು. ಏನಿದ್ದರೂ ಕುಟುಂಬವು ಸದಸ್ಯತ್ವದ ವಿಚಾರದಲ್ಲಿ ವಿವಾಹ,

ಜನ್ಮ ಮತ್ತು ದತ್ತು ಸ್ವೀಕಾರಕ್ಕೆ ಮಾತ್ರ ಅವಕಾಶ ನೀಡುವುದರಿಂದ ಅದರ ಗಾತ್ರವು ಸೀಮಿತವಾದುದಾಗಿದೆ.

೪. ವ್ಯಕ್ತಿತ್ವದ ಮೇಲೆ ಪ್ರಭಾವ : ಜೈವಿಕ ಜೀವಿಯಾದ ಶಿಶುವನ್ನು ಮಾನವ ಜೀವಿಯನ್ನಾಗಿಸುವ ಹೊಣೆ ಕುಟುಂಬದ್ದು. ಮಗುವಿಗೆ ಭಾಷೆ, ನಡತೆ, ಲೋಕರೂಢಿಗಳು, ನೈತಿಕ ನಿಯಮಗಳು, ಪದ್ಧತಿಗಳು, ಕಾನೂನು ಇತ್ಯಾದಿಗಳನ್ನು ಕಲಿಸುವ ಮೂಲಕ ಕುಟುಂಬವು ವ್ಯಕ್ತಿಯ ಬೆಳವಣಿಗೆಯನ್ನು ಪ್ರಭಾವಿಸುತ್ತದೆ. ತಂದೆ-ತಾಯಿಯಿಂದ ತನ್ನ ದೈಹಿಕ ರೂಪವನ್ನು ಪಡೆದ ಮಗು ತನ್ನ ಕುಟುಂಬದ ಪ್ರಭಾವದಿಂದ ನಡತೆಗಳನ್ನು ರೂಪಿಸಿಕೊಳ್ಳುತ್ತದೆ. ಕುಟುಂಬದ ಹೆಸರು, ಘನತೆ, ಸಾಮಾಜಿಕ ಪ್ರತಿಷ್ಠೆ ಇತ್ಯಾದಿಗಳು ವ್ಯಕ್ತಿತ್ವದ ರೂಪೀಕರಣದಲ್ಲಿ ಪ್ರಭಾವಿಸುವ ಅಂಶಗಳಾಗಿವೆ. ಕುಟುಂಬವು ಮಗುವಿಗೆ ಶಾರೀರಿಕ, ಮಾನಸಿಕ, ಬೌದ್ಧಿಕ, ನೈತಿಕ ಬೆಳವಣಿಗೆಗೆ ಅವಕಾಶವೀಯುವುದು.

೫. ಸಮೂಹಗಳ ಕೇಂದ್ರಬಿಂದು : ನಾವು ಅನೇಕ ಸಮೂಹಗಳ ಸದಸ್ಯರಾಗಿರುತ್ತೇವೆ. ಆದರೆ ಕುಟುಂಬವು ಎಲ್ಲಾ ಸಮೂಹಗಳ ಕೇಂದ್ರಬಿಂದುವಾಗಿದೆ. ನಾವು ಯಾವ ಸಮೂಹಗಳಿಗೆ ಸೇರಬಹುದು, ಸೇರಬಾರದು, ಯಾವ ಆಸಕ್ತಿಗಳನ್ನು ಬೆಳೆಸಿಕೊಳ್ಳಬೇಕು, ಯಾವ ಅಭ್ಯಾಸಗಳು ಒಳ್ಳೆಯದಲ್ಲವೆಂಬ ವಿಚಾರಗಳ ನಿರ್ದೇಶನವು ಕುಟುಂಬದಿಂದ ದೊರೆಯುತ್ತದೆ. ನಮಗೆ ನಮ್ಮ ಕುಟುಂಬದ ಪ್ರೀತ್ಯಾದರವು ಮತ್ತೆ ಯಾವುದೇ ಸಮೂಹದ ಸದಸ್ಯತ್ವಕ್ಕಿಂತ ಹೆಚ್ಚಿನದಾಗಿರುತ್ತದೆ. ಹಾಗಾಗಿ ಕುಟುಂಬವನ್ನು ಸಾಮಾಜಿಕ ಸಮೂಹಗಳ ಕೇಂದ್ರಬಿಂದು ಎನ್ನಬಹುದು.

೬. ಆರ್ಥಿಕ ಮೂಲ : ನಮ್ಮ ಮೂಲ ಅವಶ್ಯಕತೆಗಳಾದ ಅಶನ, ವಸನ ಹಾಗೂ ವಸತಿಗಳ ಅವಶ್ಯಕತೆಯನ್ನು ಸಮರ್ಪಕವಾಗಿ ಪೂರೈಸುವ ಪ್ರಾಥಮಿಕ ಸಮೂಹವು ಕುಟುಂಬವೇ ಆಗಿದೆ. ನಮ್ಮ ಕುಟುಂಬದ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ನಮ್ಮ ಜೀವನಾವಶ್ಯಕ ವಸ್ತುಗಳ ಪೂರೈಕೆಯಾಗುತ್ತದೆ. ಆದರೆ ಕುಟುಂಬದ ಹೊರತಾಗಿ ನಮ್ಮ ಆರ್ಥಿಕ ಅವಶ್ಯಕತೆಗಳನ್ನು ಪೂರೈಸುವ ಸಂಸ್ಥೆ ಬೇರೊಂದಿಲ್ಲ. ಆದುದರಿಂದ ನಾವು ನಮ್ಮ ಮನೆಯಲ್ಲಿ "ಸಾಮರ್ಥ್ಯಕ್ಕನುಗುಣವಾಗಿ ದುಡಿದು, ಅಗತ್ಯಕ್ಕನುಗುಣವಾಗಿ ಪಡೆಯುವ" ನೀತಿಯನ್ನು ಅನುಸರಿಸುತ್ತೇವೆ.

೭. ಹೊಣೆಗಾರಿಕೆ : ಕುಟುಂಬದಲ್ಲಿ ಪ್ರತಿಯೊಬ್ಬ ಸದಸ್ಯನಿಗೂ ನಿಶ್ಚಿತ ಹೊಣೆಗಾರಿಕೆಗಳಿರುತ್ತವೆ. ಶ್ರಮವಿಭಜನೆಯ ಆಧಾರದಲ್ಲಿ ಕಾರ್ಯಗಳು ಜರುಗುವುದರಿಂದ ಕುಟುಂಬದಲ್ಲಿ ಪ್ರತಿಯೊಬ್ಬರೂ ತಂತಮ್ಮ ಕಾರ್ಯಗಳನ್ನು ಸಮರ್ಪಕವಾಗಿ ಪೂರೈಸಬೇಕಾಗುತ್ತದೆ. ಕುಟುಂಬದ ಕಷ್ಟಕಾಲದಲ್ಲಿ ಎಲ್ಲರೂ ತ್ಯಾಗ-ಸೇವೆಗಳ ಮನೋಭಾವದಿಂದ ದುಡಿಯಲೇಬೇಕಾಗುತ್ತದೆ.

೮. ಸಾಮಾಜಿಕ ನಿಯಂತ್ರಣ : ಬೇರೆ ಬೇರೆ ಕುಟುಂಬಗಳಿಂದ ಬಂದ ವ್ಯಕ್ತಿಗಳು

ವಿಶಾಲ ಸಮಾಜದ ನಿಯಮಗಳಿಗೆ, ಪದ್ಧತಿಗಳಿಗೆ ಹಾಗೂ ಕಾನೂನುಗಳಿಗೆ ಬದ್ಧರಾಗಿ ನಡೆಯಬೇಕು. ಯಾವುದೇ ಕುಟುಂಬದ ಸದಸ್ಯರ ವಿಪರೀತ ನಡೆವಳಿಕೆಯಿಂದ ಸಾಮಾಜಿಕ ಸಮತೋಲನ ಕೆಡಲು ಕಾರಣವಾಗಬಹುದು. ಕುಟುಂಬವು ಲೋಕರೂಢಿಗಳನ್ನು, ನೈತಿಕ ನಿಯಮಗಳನ್ನು ಹಾಗೂ ಕಾನೂನುಗಳನ್ನು ಗೌರವಿಸಿ ಪಾಲಿಸುವುದರಿಂದ ವ್ಯಕ್ತಿಗಳಲ್ಲೂ ಇವು ಸಹಜವಾಗಿ ಬೇರೂರುತ್ತವೆ. ಸಾಮಾಜಿಕ ನಿಯಂತ್ರಣಕ್ಕೆ ಇದು ಸಹಕಾರಿಯಾಗಿದೆ.

೯. ವಂಶಾವಳಿ : ಕುಟುಂಬದ ಮುಂದುವರಿಕೆಯು ವಂಶಾವಳಿಯ ಮೂಲಕ ಆಗುತ್ತದೆ. ಕುಟುಂಬಕ್ಕೆ ಒಂದು ಹೆಸರು ಇರುತ್ತದೆ. ಕೆಲವು ಕಡೆ ತಂದೆಯಿಂದ ಮಗನಿಗೆ ಹೆಸರು ಮುಂದುವರಿದರೆ ಇನ್ನು ಕೆಲವು ಕಡೆ ತಾಯಿಯಿಂದ ಮಗಳಿಗೆ ವಂಶಾವಳಿ ಮುಂದುವರಿಯ ಬಹುದು. ಏನಿದ್ದರೂ ಕುಟುಂಬದ ರಕ್ತಸಂಬಂಧವು ವಂಶಾವಳಿಯ ತಳಹದಿಯಾಗಿದೆ.

೧೦. ಶಾಶ್ವತತೆ : ಕುಟುಂಬದ ಸದಸ್ಯರನ್ನು ಮಾತ್ರ ಗಮನದಲ್ಲಿರಿಸಿಕೊಂಡು ಅದನ್ನು ಒಂದು ಸಂಘವೆಂತಲೂ, ಅದರ ಕಾರ್ಯನಿರ್ವಹಣಾ ವಿಧಾನವನ್ನು ಗುರುತಿಸಿ ಸಂಸ್ಥೆಯೆಂದೂ ಕರೆಯುತ್ತಾರೆ. ಕುಟುಂಬದ ಸದಸ್ಯರು ಹುಟ್ಟಿ ಬೆಳೆದು ವೃದ್ಧರಾಗಿ, ಸಾಯುತ್ತಾರೆ. ಹೊಸ ಸದಸ್ಯರು ಹುಟ್ಟುತ್ತಾರೆ; ವಿವಾಹದ ಮೂಲಕ ಕುಟುಂಬಕ್ಕೆ ಸೇರುತ್ತಾರೆ, ಸಾವಿನಿಂದಾಗಿ ಕುಟುಂಬ ಬಿಡುತ್ತಾರೆ. ಹೀಗೆ ಒಂದು ಸಂಘವಾಗಿ ಕುಟುಂಬವು ಅಶಾಶ್ವತವೆನಿಸಬಹುದು. ಆದರೆ ಒಂದು ಸಂಸ್ಥೆಯಾಗಿ ಅದಕ್ಕೆ ಶಾಶ್ವತತೆ ಇದೆ.

೧೧. ರಾಜ್ಯದ ಪಾತ್ರ : ಸಾಮಾಜಿಕ ಕಾಯ್ದೆ ಮತ್ತು ನಿಯಮಗಳ ಮೂಲಕ ಕುಟುಂಬದ ರಕ್ಷಣೆಯಾಗುತ್ತದೆ. ಕುಟುಂಬದ ಗಾತ್ರ, ವಿವಾಹ ನಿಯಮಗಳು, ಆಸ್ತಿಯ ಪರಭಾರೆ, ವಿವಾಹ ವಿಚ್ಛೇದನಾ ಷರತ್ತುಗಳು ಕುರಿತಾಗಿ ರಾಜ್ಯವು ಕಾನೂನುಗಳನ್ನು ರಚಿಸುತ್ತದೆ. ಅಲ್ಲದೆ ಮಕ್ಕಳ ಕಲ್ಯಾಣಕೇಂದ್ರ, ಶಿಶುವಿಹಾರ, ಆರೋಗ್ಯಕೇಂದ್ರ, ಕುಟುಂಬ ಮಾರ್ಗದರ್ಶನ ಮತ್ತು ಸಲಹಾಕೇಂದ್ರಗಳ ಮೂಲಕ ಕುಟುಂಬದ ರಕ್ಷಣೆಗೆ ರಾಜ್ಯವು ಶ್ರಮವಹಿಸುತ್ತದೆ.

೬.೪. ಕುಟುಂಬದ ಪ್ರಕಾರ್ಯಗಳು

ನಮ್ಮ ಸಾಮಾಜಿಕ ಜೀವನಕ್ಕೆ ಸೂಕ್ತವಾದ ತಳಹದಿಯನ್ನು ಒದಗಿಸುವ ಕುಟುಂಬವು ನಮ್ಮ ಬದುಕಿನ ಮೇಲೂ ಗಾಢ ಪ್ರಭಾವವನ್ನು ಬೀರುತ್ತದೆ. ನಾವು ಬೇರೆ ಬೇರೆ ಉದ್ದೇಶಗಳಿಗಾಗಿ ಅನೇಕ ಸಂಘ ಸಂಸ್ಥೆಗಳನ್ನು ಸೇರಬಹುದಾದರೂ ಅಥವಾ ಬೇಡೆಂದಾಗ ಬಿಡಬಹುದಾದರೂ ಕುಟುಂಬದೊಂದಿಗಿನ ನಮ್ಮ ಸಂಬಂಧ ಮಾತ್ರ ನಿರಂತರವಾದುದು. ಹುಟ್ಟಿದ ಮಗುವಿನಿಂದ ಮುಪ್ಪಿನ ಮುದುಕರ ತನಕವೂ ನಮ್ಮ ಸುತ್ತಲೂ ಇರುವುದು ನಮ್ಮ ಕುಟುಂಬದವರೇ. ಹೀಗಾಗಿ ಕುಟುಂಬವು ವ್ಯಕ್ತಿಗಾಗಿ ಹಾಗೂ ಸಮಾಜಕ್ಕಾಗಿ ಅನೇಕ ಪ್ರಕಾರ್ಯಗಳನ್ನು ನಿರ್ವಹಿಸುತ್ತದೆಂಬುದು ಸ್ಪಷ್ಟ. ಆದರೆ ನಾಗರಿಕತೆಯ ವಿವಿಧ ಹಂತಗಳಲ್ಲಿ ಕುಟುಂಬದ ಪ್ರಕಾರ್ಯಗಳು ಬದಲಾಗುತ್ತ ಸಾಗಿವೆ. ಉದಾಹರಣೆಗೆ, ಹಿಂದಿನ ಕಾಲದಲ್ಲಿ ವ್ಯಕ್ತಿಗೆ ಸಂಬಂಧಿಸಿದಂತೆ ಕುಟುಂಬವು ನಿರ್ವಹಿಸುತ್ತಿದ್ದ ಕೆಲವು ಪ್ರಕಾರ್ಯಗಳು ಈಗ

ಮಾಧ್ಯಮಿಕ ಸಮೂಹಗಳಿಗೆ ವರ್ಗಾಯಿಸಲ್ಪಟ್ಟಿವೆ. ಹಾಗಾಗಿ ಕುಟುಂಬದ ಪ್ರಕಾರ್ಯಗಳ ಕುರಿತಾಗಿ ವಿವಿಧ ಸಮಾಜಶಾಸ್ತ್ರಜ್ಞರು ವಿಶ್ಲೇಷಣಾತ್ಮಕ ವಿವರಣೆಗಳನ್ನು ನೀಡಿದ್ದಾರೆ.

ಕಿಂಗ್‌ಸ್ಲೆ ಡೇವಿಸ್‌ರವರು ಕುಟುಂಬದ ಕಾರ್ಯಗಳನ್ನು ವ್ಯಕ್ತಿಗೆ ಸಂಬಂಧಪಟ್ಟ ಕಾರ್ಯಗಳು ಹಾಗೂ ಸಮಾಜಕ್ಕೆ ಸಂಬಂಧಪಟ್ಟ ಕಾರ್ಯಗಳೆಂಬುದಾಗಿ ವಿಂಗಡಿಸಿದ್ದಾರೆ. ವ್ಯಕ್ತಿಗೆ ಸಂಬಂಧಿಸಿದ ಕಾರ್ಯಗಳು ಸಾಮಾಜಿಕ ಕಾರ್ಯಗಳಿಗೆ ಪೂರಕವಾಗಿವೆ. ಅವರ ದೃಷ್ಟಿಯಲ್ಲಿ ಸಾಮಾಜಿಕ ಕಾರ್ಯಗಳನ್ನು ೧. ಸಂತಾನೋತ್ಪತ್ತಿ, ೨. ಪೋಷಣೆ, ೩. ಸ್ಥಾನಮಾನ ಪ್ರಧಾನ ಹಾಗೂ ೪. ಸಾಮಾಜೀಕರಣದ ಕಾರ್ಯಗಳೆಂಬುದಾಗಿ ನಾಲ್ಕು ವಿಭಾಗಗಳಲ್ಲಿ ಅಭ್ಯಸಿಸಬಹುದು.

ಲಂಡ್‌ಬರ್ಗ್‌ರವರು ಈ ಕೆಳಗಿನಂತೆ ಕುಟುಂಬದ ಪ್ರಕಾರ್ಯಗಳನ್ನು ವಿವರಿಸಿದ್ದಾರೆ.

೧. ವ್ಯಕ್ತಿಗಳಲ್ಲಿ ಲೈಂಗಿಕತೆಯ ನಿಯಂತ್ರಣ ಹಾಗೂ ಪುನರುತ್ಪತ್ತಿಯ ಕಾರ್ಯ.

೨. ಮಕ್ಕಳ ಲಾಲನೆ-ಪಾಲನೆ ಹಾಗೂ ತರಬೇತಿಯ ಕಾರ್ಯ.

೩. ಸಹಕಾರ ಮತ್ತು ಶ್ರಮವಿಭಜನೆಯ ಕಾರ್ಯ.

೪. ಪ್ರಾಥಮಿಕ ಸಮೂಹದ ಅಪೇಕ್ಷೆಗಳನ್ನು ಪೂರೈಸುವ ಕಾರ್ಯ.

ಇವುಗಳಿಗೆ ಪೂರಕವಾಗಿರುವ ಆರು ಮುಖ್ಯ ಕಾರ್ಯಗಳನ್ನು **ಆಗ್‌ಬರ್ನ್** ಮತ್ತು **ನಿಮ್‌ಕಾಫ್**‌ರವರು ಈ ಕೆಳಗಿನಂತೆ ಪಟ್ಟಿ ಮಾಡಿದ್ದಾರೆ. ೧. ವಾತ್ಸಲ್ಯ-ಮಮಕಾರಗಳ ಸಂಬಂಧ, ೨. ಆರ್ಥಿಕತೆಯ ಪೂರೈಕೆ, ೩. ಮನರಂಜನೆ, ೪. ಭದ್ರತೆ ಒದಗಿಸುವಿಕೆ, ೫. ಧಾರ್ಮಿಕತೆ ಹಾಗೂ ೬. ಶೈಕ್ಷಣಿಕ ಕಾರ್ಯಗಳು. ಇದೇ ರೀತಿ ಕುಟುಂಬದ ಕಾರ್ಯಗಳನ್ನು ವಿಸ್ತೃತವಾಗಿ ಕೆಲವು ಸಮಾಜಶಾಸ್ತ್ರಜ್ಞರು ವಿವರಿಸಿದ್ದಾರೆ.

ಆದರೆ **ಮೆಕೈವರ್**‌ರವರು ಕುಟುಂಬದ ಕಾರ್ಯಗಳನ್ನು ೧. ಅವಶ್ಯಕವಾದ ಕಾರ್ಯಗಳು ಹಾಗೂ ೨. ಅತ್ಯವಶ್ಯಕವಲ್ಲದ ಕಾರ್ಯಗಳೆಂಬುದಾಗಿ ವಿಭಾಗಿಸಿದ್ದಾರೆ. ಈ ಪ್ರಭೇದಗಳನ್ನು ಪ್ರಾಥಮಿಕ ಕಾರ್ಯಗಳು ಮತ್ತು ಮಾಧ್ಯಮಿಕ ಕಾರ್ಯಗಳೆಂಬುದಾಗಿ ಅವುಗಳ ಪ್ರಾಮುಖ್ಯತೆಯ ಆಧಾರದಲ್ಲಿ ಕರೆಯುವುದೂ ಇದೆ. ಮೊದಲ ವರ್ಗದ ಕಾರ್ಯಗಳಲ್ಲಿ ೧. ಸ್ಥಿರವಾದ ಲೈಂಗಿಕ ಸಂತೃಪ್ತಿ, ೨. ಸಂತಾನೋತ್ಪತ್ತಿ ಮತ್ತು ಮಕ್ಕಳ ಪಾಲನೆ ಹಾಗೂ ೩. ಮನೆಯ ಪೂರೈಕೆ - ಇವು ಸೇರಿವೆ. ಇನ್ನು ಎರಡನೇ ವರ್ಗದಲ್ಲಿ ಧಾರ್ಮಿಕ ಚಟುವಟಿಕೆ, ಶಿಕ್ಷಣ, ಆರ್ಥಿಕತೆ, ಆರೋಗ್ಯ ಹಾಗೂ ಮನರಂಜನೆಯ ಕಾರ್ಯಗಳು ಸೇರಿವೆ.

ಮೆಕೈವರ್‌ರವರ ಅಭಿಪ್ರಾಯದಲ್ಲಿ ದ್ವಿತೀಯ ವರ್ಗದ ಕಾರ್ಯಗಳು ಕೂಡ ಹಿಂದೆ ಕುಟುಂಬದಲ್ಲೇ ನಿರ್ವಹಿಸಲ್ಪಡುತ್ತಿದ್ದವು. ಆದರೆ ಆಧುನಿಕ ಕಾಲದಲ್ಲಿ ದೇವಾಲಯಗಳು, ಶಾಲೆ-ಕಾಲೇಜುಗಳು, ಬ್ಯಾಂಕು-ಸಹಕಾರಿ ಸಂಘಗಳು, ಆಸ್ಪತ್ರೆಗಳು, ನಾಟಕ-ಸಿನೆಮಾಗಳು ಮುಂತಾದ ಮಾಧ್ಯಮಿಕ ಸಂಸ್ಥೆಗಳು ಭಾಗಶಃ ಈ ಪ್ರಕಾರ್ಯಗಳನ್ನು ಪೂರೈಸುತ್ತವೆ. ಆದುದರಿಂದ ಕುಟುಂಬದಲ್ಲಿ ಇವು ಒಂದು ವೇಳೆ ಪೂರೈಸಲ್ಪಡದಿದ್ದರೂ ಅವುಗಳ ಪೂರೈಕೆಗೆ ಆಧುನಿಕ ಸಮಾಜದಲ್ಲಿ ವ್ಯವಸ್ಥೆ ಇದೆ. ಆದರೆ ಮೆಕೈವರ್ ಹೇಳಿದ ಕುಟುಂಬದ

ಅತ್ಯಾವಶ್ಯಕವಾದ ಕಾರ್ಯಗಳನ್ನು ಕುಟುಂಬದ ಹೊರತಾಗಿ ಬೇರೆ ಯಾವ ಸಂಸ್ಥೆಯಿಂದಲೂ ಪೂರೈಸಲು ಸಾಧ್ಯವಿಲ್ಲ. ಹಾಗಾಗಿ ಸಮಾಜದಲ್ಲಿ ಕುಟುಂಬ ಅನಿವಾರ್ಯವಾಗಿದೆ.

ವಿವಿಧ ಸಮಾಜಶಾಸ್ತ್ರಜ್ಞರು ನೀಡಿರುವ ವಿಶ್ಲೇಷಣೆಗಳನ್ನು ಕ್ರೋಢೀಕರಿಸಿ ನಾವು ಕುಟುಂಬದ ಒಟ್ಟು ಪ್ರಕಾರ್ಯಗಳನ್ನು ಈ ಕೆಳಗಿನಂತೆ ವಿವರಿಸಬಹುದು.

೧. ಲೈಂಗಿಕ ಸಂತೃಪ್ತಿ

ಕುಟುಂಬದ ಒಂದು ಪ್ರಮುಖ ಪ್ರಕಾರ್ಯವೆಂದರೆ ಮಾನವನ ಲೈಂಗಿಕ ಬಯಕೆಯ ನಿಯಂತ್ರಣ ಹಾಗೂ ಸಮರ್ಪಕವಾದ ರೀತಿಯಲ್ಲಿ ಅದರ ಈಡೇರಿಕೆಯೇ ಆಗಿದೆ. ಯೌವನಾವಸ್ಥೆಯಲ್ಲಿ ಆರೋಗ್ಯಪೂರ್ಣ ವ್ಯಕ್ತಿಗೆ ಲೈಂಗಿಕ ಬಯಕೆಯು ಸಹಜವಾದುದು. ಇದನ್ನು ನಿಗ್ರಹಿಸಿದಾಗ ಅದು ವ್ಯಕ್ತಿತ್ವದ ನಾಶ ಹಾಗೂ ಸಾಮಾಜಿಕ ಅನಿಷ್ಟವಾಗಿ ಪರಿಣಮಿಸುವುದು. ಹಾಗೆಂದು ಲೈಂಗಿಕ ಪ್ರವೃತ್ತಿಯು ಸ್ವಚ್ಛಂದತೆಗೆ ಅವಕಾಶವೀಯು ವಂತಿರಬಾರದು. ಇದಲ್ಲದೆ ಲೈಂಗಿಕ ಪ್ರವೃತ್ತಿಯ ಹಿಂದೆ ಭಾವಾವೇಶಗಳೂ ಇರುತ್ತವೆ. ಭಾವನಾತ್ಮಕ ಮಿಲನವು ಹೆಚ್ಚಿನ ಸಂತೃಪ್ತಿಯನ್ನು ನೀಡಬಲ್ಲುದಾಗಿದೆ. ಇದು ಗಂಡ-ಹೆಂಡಿರ ನಡುವಿನ ಮಧುರ ಸಂಬಂಧವು ಸುದೀರ್ಘವಾಗಿ ಸಾಗಲು ಕಾರಣವಾಗಿದೆ. ಕಾಮತೃಪ್ತಿಯು ವಿವಾಹ ಹಾಗೂ ಕುಟುಂಬದ ಒಂದು ಉದ್ದೇಶವಾಗಿದೆಯೆಂದು ಮನುಧರ್ಮಶಾಸ್ತ್ರದಲ್ಲಿ ಹೇಳಲಾಗಿದೆ. ಲೈಂಗಿಕ ಬಯಕೆಯ ಸಮರ್ಪಕವಾದ ತೃಪ್ತಿಯು ಯಶಸ್ವೀ ದಾಂಪತ್ಯ ಜೀವನದ ಮೊದಲ ಮೆಟ್ಟಿಲೆಂಬುದಾಗಿ ವಾತ್ಸ್ಯಾಯನನು ತಿಳಿಸಿದ್ದಾನೆ. ಹೀಗೆ ಲೈಂಗಿಕ ಬಯಕೆಯ ಈಡೇರಿಕೆಯು ಕುಟುಂಬದ ಒಂದು ಪ್ರಮುಖ ಪ್ರಕಾರ್ಯವಾಗಿದೆ.

೨. ಸಂತಾನೋತ್ಪತ್ತಿ

ಲೈಂಗಿಕ ಬಯಕೆ ಈಡೇರಿದಾಗ, ಮಾನವನು ತನ್ನ ಮನೆತನವನ್ನು ಮುಂದುವರಿಸಿಕೊಂಡು ಹೋಗಲು ಇಚ್ಛಿಸುತ್ತಾನೆ. ತನ್ನ ಪ್ರತಿರೂಪವಾದ ಮಕ್ಕಳನ್ನು ಹುಟ್ಟಿಸಿ, ಪಾಲಿಸಿ-ಪೋಷಿಸಿ, ಬೆಳೆಸುವುದರಲ್ಲಿ ವ್ಯಕ್ತಿಯು ಪಡೆಯುವ ತೃಪ್ತಿ ಅಪಾರವಾಗಿದೆ. ಅಲ್ಲದೆ, ಮಾನವ ಸಮಾಜದ ಮುಂದುವರಿಕೆಗೂ ಸಂತಾನೋತ್ಪತ್ತಿ ಅತ್ಯಗತ್ಯ. ಇದನ್ನು ಕುಟುಂಬವೇ ಪೂರೈಸುತ್ತದೆ.

೩. ಮಕ್ಕಳ ಪಾಲನೆ-ಪೋಷಣೆ

ಮಗುವಿಗೆ ಜನ್ಮವಿತ್ತಾಕ್ಷಣ ಹೆತ್ತವರ ಕರ್ತವ್ಯ ಮುಗಿಯಲಾರದು. ನವಜಾತ ಶಿಶುವು ಒಂದು 'ಜೈವಿಕ ಜೀವಿ' ಮಾತ್ರವಾಗಿರುತ್ತದೆ. ಅದು ಅಸಹಾಯಕವೂ ಆಗಿರುತ್ತದೆ. ಅದಕ್ಕೆ ಕೌಟುಂಬಿಕ ರಕ್ಷಣೆ, ಹೆತ್ತವರ ಮಮತೆ ಒದಗಿಸಿ, ಅದನ್ನು 'ಸಾಮಾಜಿಕ ಜೀವಿ'ಯನ್ನಾಗಿಸಿ ಸಾಮಾಜೀಕರಣ ಮಾಡುವ ಗುರುತರ ಹೊಣೆ ಕುಟುಂಬದ್ದಾಗಿದೆ.

೪. ವಾಸ್ತವ್ಯ

ಕುಟುಂಬವು ವ್ಯಕ್ತಿಗೆ ನೆಲೆಸಲು 'ಮನೆ'ಯನ್ನೊದಗಿಸುತ್ತದೆ. ಉತ್ತಮ ಹುದ್ದೆ, ಸ್ಥಾನಮಾನಗಳಿದ್ದರೂ, ವ್ಯಕ್ತಿಗೆ ಮನೆಯು ತೀರ ಅಗತ್ಯವಾಗಿದೆ. ದಿನವಹಿ ಕಾರ್ಯಗಳಾದ

ಊಟ, ತಿಂಡಿ, ನಿದ್ರೆ ಇವುಗಳ ಪೂರೈಕೆಗೆ ಮನೆಯೇ ಬೇಕು. ಮನೆಯು ನಿಶ್ಚಿಂತೆ, ನೆಮ್ಮದಿ ನೀಡುವ ನೆಲೆಯಾಗಿದೆ.

೫. ಸಾಮಾಜೀಕರಣದ ಸಾಧನ

ಕೇವಲ ಜೈವಿಕ ಜೀವಿಯಾಗಿರುವ ಶಿಶುವನ್ನು ಸಾಮಾಜಿಕ ಜೀವಿಯನ್ನಾಗಿ ಪರಿವರ್ತಿಸುವ ಸಾಮಾಜೀಕರಣದ ಪ್ರಕ್ರಿಯೆಯು ಆರಂಭವಾಗುವುದು ಕುಟುಂಬದಲ್ಲಿಯೇ ಆಗಿದೆ. ತೊದಲ್ನುಡಿಗಳಿಂದ ತೊಡಗಿ ಭಾಷೆ ಹಾಗೂ ಓಡಾಟ ಕಲಿಸುವುದರ ಮೂಲಕ ನಡೆನುಡಿಗಳ ಆರಂಭಿಕ ಶಿಕ್ಷಣವು ಕುಟುಂಬದಲ್ಲೇ ಜರುಗುತ್ತದೆ. ಆದುದರಿಂದಲೇ "ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು" ಎಂಬ ನಾಣ್ಣುಡಿ ಪ್ರಚಲಿತವಿದೆ. ಸಮಾಜದ ಪದ್ಧತಿ, ಸಂಪ್ರದಾಯಗಳು, ನೀತಿ-ನಿಯಮಗಳು, ಮೌಲ್ಯ-ಆದರ್ಶಗಳು ಇತ್ಯಾದಿಗಳನ್ನು ಕಲಿಸುವುದರ ಮೂಲಕ ಸಮರ್ಪಕವಾದ ಸಾಮಾಜಿಕ ಅಂತರಕ್ರಿಯೆಗೆ ಕುಟುಂಬವು ವ್ಯಕ್ತಿಯನ್ನು ಸಿದ್ಧಗೊಳಿಸುತ್ತದೆ. ಹೀಗೆ ವ್ಯಕ್ತಿಯ ಸಾಮಾಜೀಕರಣದಲ್ಲಿ ಕುಟುಂಬವು ಪ್ರಮುಖ ಕಾರಕವಾಗಿದೆ. ಮಗುವಿನ ವ್ಯಕ್ತಿತ್ವವನ್ನು ರೂಪಿಸಿ, ಅದು ಸಮುದಾಯ ಜೀವನಕ್ಕೆ ಸಿದ್ಧವಾಗುವಂತೆ ಮಾಡುವ ಮಹತ್ವದ ಕಾರ್ಯ ಕುಟುಂಬದ್ದಾಗಿದೆ.

೬. ಸ್ಥಾನಮಾನ ಪ್ರಧಾನ

ಯಾವನೇ ವ್ಯಕ್ತಿಯು ತನ್ನ ಕುಟುಂಬದ ಹೆಸರಿನಿಂದಲೇ ಗುರುತಿಸಲ್ಪಡುತ್ತಾನೆ. ಶಾಲೆಗೆ ಸೇರಿಸಲು, ಉದ್ಯೋಗ ಪಡೆಯಲು, ಆಸ್ತಿ ಕ್ರಯಚೀಟು ಬರೆಸುವಾಗ, ಜನಗಣತಿಯಲ್ಲಿ ನಮೂದಿಸುವಾಗ - ಹೀಗೆ ಅನೇಕ ಸಂದರ್ಭಗಳಲ್ಲಿ ನಮ್ಮ ಹೆತ್ತವರ ಹೆಸರಿನೊಂದಿಗೆ ನಮ್ಮ ಹೆಸರು ದಾಖಲಾಗುತ್ತದೆ. ಇದರಿಂದಾಗಿ ನಾವು ಯಾವತ್ತೂ ನಮ್ಮ ಕುಟುಂಬ ದೊಂದಿಗೆ ಜೋಡಿಸಲ್ಪಟ್ಟ ವ್ಯಕ್ತಿಗಳಾಗಿರುತ್ತೇವೆ. ನಮ್ಮ ಕುಟುಂಬದ ಘನತೆ, ಗೌರವ, ಸಾಮಾಜಿಕ ಮಾನ್ಯತೆಗಳಿಗನುಸಾರ ನಮಗೂ ಸಮಾಜದಲ್ಲಿ ಸ್ಥಾನಮಾನಗಳು ಲಭ್ಯವಾ ಗುತ್ತವೆ.

೭. ಸಹಕಾರ-ಶ್ರಮವಿಭಜನೆ

ಕುಟುಂಬದ ಒಟ್ಟು ಪ್ರಕಾರ್ಯಗಳು ಪರಸ್ಪರ ಸಹಕಾರ ಹಾಗೂ ಶ್ರಮವಿಭಜನೆಯ ತತ್ವವನ್ನಾಧರಿಸಿವೆ. ವ್ಯಕ್ತಿಗಳು ಇಲ್ಲಿ ಸಹಕಾರ ತತ್ವದ ಅನುಕೂಲಗಳನ್ನು ಅರಿತುಕೊಳ್ಳುತ್ತಾರೆ. ಅಂತೆಯೇ ಗಂಡು-ಹೆಣ್ಣು, ಹಿರಿಯರು-ಕಿರಿಯರು, ಕುಶಲಕರ್ಮಿಗಳು-ಅಕುಶಲ ಕಾರ್ಮಿಕರು ಇವರೊಳಗೆ ವಿವಿಧ ಕೆಲಸಗಳನ್ನು ಹಂಚಿಕೊಂಡೆ ಕುಟುಂಬವು ಮುನ್ನಡೆಯುತ್ತದೆ. ಸಮಾಜದಲ್ಲಿಯೂ ಕಛೇರಿ-ಕಾರ್ಖಾನೆಗಳಲ್ಲಿಯೂ ಶ್ರಮವಿಭಜನೆಯೇ ಕಾರ್ಯ ಸಾಧನೆಯ ಮಾರ್ಗವಾಗಿದೆ. ಇದರಿಂದಾಗಿ ಕುಟುಂಬವು ವ್ಯಕ್ತಿಯನ್ನು ಸಮಾಜದಲ್ಲಿ ವ್ಯವಹಾರ ಕುಶಲನನ್ನಾಗಿ ಮಾಡುತ್ತದೆ.

೮. ಸಂಪ್ರದಾಯ-ಸಂಸ್ಕೃತಿಗಳ ಸಂವಹನ

ಸಾಮಾಜಿಕ ಪರಂಪರೆಯ ಕೊಡುಗೆಯನ್ನು ಹಳೆಯ ತಲೆಮಾರಿನಿಂದ ಹೊಸ ತಲೆಮಾರಿಗೆ ಸಾಗಿಸುವ ಕಾರ್ಯವು ಕುಟುಂಬದ ಮೂಲಕ ಜರುಗುತ್ತದೆ. ನಮ್ಮ ಅನೇಕ ನಂಬಿಕೆ, ಆಚಾರ, ವಿಚಾರ, ಸಂಪ್ರದಾಯಗಳು ಸಾವಿರಾರು ವರ್ಷಗಳಿಂದ ಆಚರಣೆಯಲ್ಲಿ ಉಳಿದು ಬಂದಿರುವುದಕ್ಕೆ ಕೌಟುಂಬಿಕ ಜೀವನವೇ ಕಾರಣವಾಗಿದೆ. ಒಂದೊಂದು ತಲೆಮಾರಿನಲ್ಲಿಯೂ ಸಂಸ್ಕೃತಿಯು ವಿಕಸನಗೊಳ್ಳುತ್ತ ಸಾಗಲು ಕುಟುಂಬವು ನೀಡುವ ಹಳೆಯ ಸಂಸ್ಕೃತಿಯ ಅರಿವೇ ಕಾರಣವಾಗುತ್ತದೆ. ಹೀಗೆ ಪ್ರತಿಯೊಂದು ಪೀಳಿಗೆಯೂ ತನ್ನ ಹಿಂದಿನ ಮತ್ತು ಮುಂದಿನ ಪೀಳಿಗೆಗಳ ನಡುವಿನ ಕೊಂಡಿಯಾಗಿ ಪ್ರವರ್ತಿಸುತ್ತದೆ.

೯. ಧಾರ್ಮಿಕತೆ

ಹೆತ್ತವರ ನಂಬಿಕೆ, ಆಚರಣೆಗಳು ಹಾಗೂ ಅವರು ಹೇಳುವ ಕತೆ-ಪುರಾಣಗಳು ಮಕ್ಕಳ ಧಾರ್ಮಿಕ ಭಾವನೆಗಳನ್ನು ರೂಪಿಸುತ್ತವೆ. ನಮಗೆ ಕಾಣುವ ಪ್ರಪಂಚವನ್ನು ಮೀರಿ ಒಂದು ಜಗತ್ತು ಇದೆ ಹಾಗೂ ಮಾನವಾತೀತ ಶಕ್ತಿಗಳಿವೆಯೆಂಬ ಅರಿವು ಉಂಟಾಗುವುದು ಕುಟುಂಬದಲ್ಲೇ. ಸ್ವರ್ಗ, ನರಕ, ಪಾಪ, ಪುಣ್ಯ, ಆತ್ಮ, ಪುನರ್ಜನ್ಮ, ಮೋಕ್ಷ ಮುಂತಾದ ಕಲ್ಪನೆಗಳು ಮನೆಯಲ್ಲೇ ಬೆಳೆಯುತ್ತವೆ. ವ್ಯಕ್ತಿಯು ಬೆಳೆದು ಆತನಿಗೆ ವಿಸ್ತೃತ ಪ್ರಪಂಚದ ಪರಿಚಯವಾದಂತೆ ಈ ಧಾರ್ಮಿಕ ನಂಬಿಕೆಗಳು ಪುಷ್ಟಿಗೊಳ್ಳಲೂಬಹುದು ಅಥವಾ ಬುಡಮೇಲಾಗಲೂಬಹುದು. ಆದರೆ ಅವುಗಳ ಬೀಜ ಬಿತ್ತುವ ಕಾರ್ಯವು ಕುಟುಂಬದಲ್ಲೇ ಜರುಗುತ್ತದೆ.

೧೦. ಆರ್ಥಿಕ ಪ್ರಕಾರ್ಯಗಳು

ಕುಟುಂಬವು ಕೇವಲ ಸಾಮಾಜಿಕ ಘಟಕವಾಗಿರದೆ ಆರ್ಥಿಕ ಘಟಕವೂ ಆಗಿದೆ. ಪ್ರತಿಯೊಬ್ಬನೂ ತನ್ನ ಸಾಮರ್ಥ್ಯಕ್ಕನುಗುಣವಾಗಿ ಕುಟುಂಬದ ಆರ್ಥಿಕ ನಿಧಿಗೆ ಕೊಡುಗೆ ನೀಡುತ್ತಾನೆ ಹಾಗೂ ತನಗೆ ಅಗತ್ಯವಿರುವಷ್ಟನ್ನು ಪಡೆಯುತ್ತಾನೆ. ಹೀಗೆ ಕುಟುಂಬವು ಏಕಕಾಲದಲ್ಲಿಯೇ ಉತ್ಪಾದನಾ ಘಟಕವೂ ಅನುಭೋಗೀ ಘಟಕವೂ ಆಗಿದೆ. ಶ್ರಮ ವಿಭಜನೆಯ ಮೂಲಕ ಕುಟುಂಬದ ಆದಾಯ ಗಳಿಕೆ, ಆಸ್ತಿ ಸಂಪಾದನೆ ಮತ್ತು ಭದ್ರತೆ ಹಾಗೂ ಪೀಳಿಗೆಯಿಂದ ಪೀಳಿಗೆಗೆ ಆಸ್ತಿಯ ಹಕ್ಕು ಮುಂದುವರಿಕೆ ಇವು ಅದರ ಮುಖ್ಯ ಆರ್ಥಿಕ ಕಾರ್ಯಗಳಾಗಿವೆ. ಇಂದು ಕೃಷಿಯೇತರ ಆದಾಯ ಮೂಲಗಳೇ ಹೆಚ್ಚಾಗಿ ರುವುದರಿಂದ ಕುಟುಂಬವು ಒಂದು ಉತ್ಪಾದನಾ ಘಟಕವಾಗಿ ಉಳಿದಿಲ್ಲ. ಆದುದರಿಂದ ಅದರ ಆರ್ಥಿಕ ಕಾರ್ಯಗಳು ಆಂಶಿಕವಾಗಿಯಷ್ಟೆ ಪ್ರಸ್ತುತವಾಗುತ್ತವೆ.

೧೧. ಶೈಕ್ಷಣಿಕ ಪ್ರಕಾರ್ಯಗಳು

ಕುಟುಂಬವು ಶಿಕ್ಷಣದ ಪ್ರಮುಖ ಕಾರಕವಾಗಿದೆ. ಮಕ್ಕಳು ಓದು, ಬರೆಹ ಹಾಗೂ ಮಾತುಗಳನ್ನು ಮೊದಲು ಕುಟುಂಬದಲ್ಲೇ ಕಲಿಯುತ್ತಾರೆ. ಕುಟುಂಬದ ಸದಸ್ಯರ

ಒಡನಾಟದಿಂದ ಮಗು ಬೌದ್ಧಿಕ ಹಾಗೂ ಭಾವನಾತ್ಮಕ ಬೆಳವಣಿಗೆ ಹೊಂದುವುದು. ಆದರೆ ಈಗ ನಗರ ಹಾಗೂ ಗ್ರಾಮೀಣ ಸಮಾಜಗಳಲ್ಲಿ ಶೈಕ್ಷಣಿಕ ಕಾರ್ಯವನ್ನು ಶಿಕ್ಷಣ ಸಂಸ್ಥೆಗಳೇ ನಿರ್ವಹಿಸುತ್ತವೆ. ಪ್ರಾಥಮಿಕಪೂರ್ವ ಶಿಕ್ಷಣದಿಂದ ಹಿಡಿದು ಪ್ರಾಥಮಿಕ, ಪ್ರೌಢ, ಕಾಲೇಜು ಶಿಕ್ಷಣ ನೀಡುವ ಶಿಕ್ಷಣ ಸಂಸ್ಥೆಗಳಿವೆ.

೧೨. ಆರೋಗ್ಯ

ಉತ್ತಮ ಆಹಾರ ಹಾಗೂ ಆಟೋಟಗಳ ಮೂಲಕ ಆರೋಗ್ಯವಂತ ಶಿಶುವನ್ನು ಬೆಳೆಸುವುದು ಕುಟುಂಬದ ಕಾರ್ಯವಾಗಿದೆ. ಮಗುವಿನ ಆರೋಗ್ಯ ಮತ್ತು ಪೋಷಣೆಗಾಗಿ ಹೆತ್ತವರು ಯಾವ ತ್ಯಾಗಕ್ಕೂ ಸಿದ್ಧರಾಗಿರುತ್ತಾರೆ. ಅದೇ ರೀತಿ ಕುಟುಂಬದ ಯಾವನೇ ಸದಸ್ಯನು ಅನಾರೋಗ್ಯಕ್ಕೆ ಈಡಾದರೆ ಇನ್ನುಳಿದ ಸದಸ್ಯರು ಆತನ/ಆಕೆಯ ಸೇವೆ ಮಾಡುತ್ತಾರೆ. ಚಿಕಿತ್ಸೆ ಹಾಗೂ ವೈದ್ಯಕೀಯ ಸೌಲಭ್ಯಗಳಿಗಾಗಿ ಇಂದು ಆಸ್ಪತ್ರೆಗಳಿರುವುದಾದರೂ ಆತ್ಮೀಯ ಸೇವೆ ಹಾಗೂ ಮಾನಸಿಕ ಸ್ಥೈರ್ಯ ನೀಡಲು ಕುಟುಂಬದ ಸದಸ್ಯರೇ ಬೇಕು. ಹೀಗೆ ಆಂಶಿಕವಾಗಿ ಆರೈಕೆಯ ಕಾರ್ಯವು ಕುಟುಂಬದಲ್ಲೇ ಜರುಗಬೇಕಾಗಿದೆ.

೧೩. ಮನೋರಂಜನೆ

ಹಾಡು, ಕುಣಿತ, ಕತೆ ಹೇಳುವುದು, ಒಗಟು ಬಿಡಿಸುವುದು ಇತ್ಯಾದಿ ಮನೋರಂಜನೆಯ ಪ್ರಕಾರಗಳಿಗೆ ಮನೆಯೇ ನೆಲೆವೀಡಾಗಿತ್ತು. ಕೃಷಿಕರ ಕೂಡು ಕುಟುಂಬಗಳಲ್ಲಿ ಈ ಬಗೆಯ ಮನರಂಜನೆಗೆ ಸಾಕಷ್ಟು ಅವಕಾಶವಿದೆ. ಆದರೆ ಇಂದು ಹೆಚ್ಚಾಗಿ ಹಬ್ಬಿರುವ ಅಣು ಕುಟುಂಬಗಳಲ್ಲಿ ಮನರಂಜನೆ ದೊರೆಯುವುದು ಅಪರೂಪವಾಗಿದೆ. ಆಟೋಟಗಳು, ನಾಟಕ, ನೃತ್ಯ, ಸಿನೆಮಾ, ಮೊದಲಾದುವು ಮನರಂಜನೆಯ ಸಾಧನಗಳಾಗಿವೆ. ಮನೆಯ ಹಜಾರದಲ್ಲೇ ಟೆಲಿವಿಜನ್ ಬಂದ ಬಳಿಕ ಬಾಹ್ಯ ಮನೋರಂಜನೆಯ ಪ್ರಭಾವ ಹೆಚ್ಚಾಗಿದೆ. ಇದು ಕುಟುಂಬದ ಮನೋರಂಜನೆಯ ಪ್ರಕಾರ್ಯವನ್ನು ತೀರಾ ಕಡಿಮೆಗೊಳಿಸಿದೆ ಮಾತ್ರವಲ್ಲ ಮಕ್ಕಳಲ್ಲಿ ಟೆಲಿವಿಜನ್ನಿನ ವ್ಯಸನವನ್ನು ಹೆಚ್ಚಿಸಿದೆ. ಈ ಸಂದರ್ಭದಲ್ಲಿ ಕುಟುಂಬದ ಮುಖ್ಯವಾದ ಕಾರ್ಯವೆಂದರೆ ಮಕ್ಕಳಿಗೆ ಆಧುನಿಕ ಮನರಂಜನೆ ಅತಿಯಾಗದಂತೆ ನಿಯಂತ್ರಿಸುವುದೇ ಆಗಿದೆ.

೧೪. ರಾಜನೈತಿಕ ಪ್ರಕಾರ್ಯ

ಪ್ರತಿಯೊಬ್ಬ ವ್ಯಕ್ತಿಯನ್ನು ಉತ್ತಮ ಪ್ರಜೆ ಅಥವಾ ಪೌರನನ್ನಾಗಿ ರೂಪಿಸುವ ಕಾರ್ಯವು ಕುಟುಂಬದ್ದಾಗಿದೆ. ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಪ್ರಜೆಗೂ ಅನೇಕ ಹಕ್ಕುಬಾಧ್ಯತೆಗಳಿರುತ್ತವೆ. ಅವುಗಳನ್ನು ತಿಳಿಸಿಕೊಡುವ ಕಾರ್ಯವು ಕುಟುಂಬದಲ್ಲಿ ಆಗಬೇಕಾಗಿದೆ. ಹಿಂದಿನ ಕಂದಾಚಾರಗಳನ್ನು ಹಾಗೂ ಸಾಮಾಜಿಕ ಅಸಮಾನತೆಗಳನ್ನು ನಿವಾರಿಸುವ ಅನೇಕ ಶಾಸನಗಳು ಇಂದು ರೂಪುಗೊಂಡಿವೆ. ಉದಾಹರಣೆಗೆ, ಅಸ್ಪೃಶ್ಯತೆಯ

ನಿವಾರಣೆ ಹಾಗೂ ಸ್ತ್ರೀ ಸಮಾನತೆಗಳನ್ನು ಶಾಸನಬದ್ಧವಾಗಿ ಜಾರಿಗೆ ತರಲಾಗಿದೆ. ಬದಲಾದ ಈ ನಿಯಮಗಳ ಪಾಲನೆಯು ಕುಟುಂಬದಲ್ಲೇ ಆರಂಭವಾಗಬೇಕು. ಈ ವಿಚಾರದಲ್ಲಿ ಕುಟುಂಬ ಹಾಗೂ ಸರಕಾರ ಪರಸ್ಪರ ಸಂಬಂಧ ಹೊಂದಿವೆ. ಹಾಗಾಗಿ ಪರಿವರ್ತನಶೀಲ ಸಮಾಜದಲ್ಲಿ ಹೊಂದಿಕೊಳ್ಳುವ ರಾಜನೈತಿಕತೆಯ ವ್ಯಾಖ್ಯೆಗಳು ಮಕ್ಕಳಿಗೆ ಕುಟುಂಬದಲ್ಲೇ ಸಿಗಬೇಕಾಗಿದೆ.

ಕುಟುಂಬದ ಕಾರ್ಯಗಳು ಈ ರೀತಿ ಅನೇಕವಿವೆ. ಮೇಲೆ ಹೇಳಿದವುಗಳಲ್ಲಿ ಮೊದಲ ಎಂಟು ಕಾರ್ಯಗಳು ಪ್ರಾಥಮಿಕ ಕಾರ್ಯಗಳಾಗಿ ಈಗಲೂ ಬಹುತೇಕ ಕುಟುಂಬಗಳಲ್ಲಿ ನಿರ್ವಹಿಸಲ್ಪಡುತ್ತವೆ. ಇನ್ನುಳಿದ ಆರು ಕಾರ್ಯಗಳನ್ನು ಕುಟುಂಬವು ಶಾಲೆ, ಬ್ಯಾಂಕು, ದೇವಾಲಯ, ಆಸ್ಪತ್ರೆ, ಸಿನೇಮಾ ಮಂದಿರ ಮುಂತಾದ ಮಾಧ್ಯಮಿಕ ಸಮೂಹಗಳೊಂದಿಗೆ ಸೇರಿ ನಿರ್ವಹಿಸುತ್ತದೆ. ಕುಟುಂಬದ ಕಾರ್ಯಗಳು ಸಮರ್ಪಕವಾಗಿ ಜರುಗಿದಷ್ಟೂ ಸಮಾಜದಲ್ಲಿ ಸುಭದ್ರತೆಯಿರುತ್ತದೆ. ಆದರೆ ತಮ್ಮ ಕಾರ್ಯನಿರ್ವಹಣೆಯಲ್ಲಿ ಕುಟುಂಬಗಳು ವಿಫಲವಾದರೆ ಆಗ ವ್ಯಕ್ತಿಗಳು ಅಪವರ್ತನೆಯ ದಾರಿ ಹಿಡಿದು ಸಮಾಜದಲ್ಲಿ ಅಭದ್ರತೆ ಹೆಚ್ಚುತ್ತದೆ. ಆದುದರಿಂದ ಸರಿಯಾದ ಪೋಷಣೆ, ಮಮಕಾರ, ಅನುಕಂಪ, ತ್ಯಾಗ, ಸೇವೆ, ಶಿಕ್ಷಣ, ಮಾರ್ಗದರ್ಶನ ಇತ್ಯಾದಿಗಳು ಕುಟುಂಬದಿಂದಲೇ ದೊರೆಯಬೇಕು. ಈ ದೃಷ್ಟಿಯಿಂದ ಕುಟುಂಬದ ಪ್ರಕಾರ್ಯಗಳ ಮಹತ್ವವೆಷ್ಟಿದೆಯೆಂಬುದನ್ನು ನಾವು ಅರಿತುಕೊಳ್ಳಬಹುದು.

೬.೫. ಕುಟುಂಬದ ವಿಧಗಳು

ಕುಟುಂಬವು ಸಾರ್ವತ್ರಿಕವಾಗಿ ಕಂಡುಬರುವ ಸಂಸ್ಥೆಯಾದರೂ ಅದು ಪ್ರಪಂಚದಲ್ಲಿ ಎಲ್ಲೆಡೆ ಒಂದೇ ತೆರನಾಗಿಲ್ಲ. ವಿವಿಧ ಪ್ರಕಾರಗಳ ಕುಟುಂಬಗಳು ವಿಶ್ವಾದ್ಯಂತ ಕಂಡುಬಂದಿವೆ. ಕುಟುಂಬದ ಸ್ವರೂಪದಲ್ಲಿರುವ ವ್ಯತ್ಯಾಸಗಳಿಗೆ ವಿವಿಧ ಕಾರಣಗಳನ್ನು ನೀಡಲಾಗಿದೆ.

೧. ವಾಸ್ತವ್ಯದ ಆಧಾರದಲ್ಲಿ ಕುಟುಂಬವನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ.

(i) ಮಾತೃಸ್ಥಾನೀಯ ಕುಟುಂಬದಲ್ಲಿ ವಿವಾಹಾನಂತರ ಗಂಡನು ಹೆಂಡತಿಯ ತವರು ಮನೆಯಲ್ಲಿ ವಾಸಿಸುತ್ತಾನೆ.

(ii) ಪಿತೃಸ್ಥಾನೀಯ ಕುಟುಂಬದಲ್ಲಿ ವಿವಾಹಾನಂತರ ಗಂಡನು ತನ್ನ ತಂದೆಯ ಮನೆಯಲ್ಲೇ ವಾಸಿಸುತ್ತಾನೆ. ಇಲ್ಲಿ ಹೆಣ್ಣು ತಾಯಿ ಮನೆಯನ್ನು ತೊರೆದು ಗಂಡನ ಮನೆ ಸೇರುತ್ತಾಳೆ.

(iii) ಸ್ಥಾನ ಬದಲಾವಣೆಯ ಕುಟುಂಬದಲ್ಲಿ ಗಂಡಸು ಕೆಲವು ದಿನ ತನ್ನ ಹೆಂಡತಿಯ ತವರಲ್ಲಿ, ಮತ್ತೆ ಕೆಲವು ದಿನ ತನ್ನ ತಂದೆಯ ಮನೆಯಲ್ಲಿ ವಾಸಿಸುವ ಪದ್ಧತಿ ಇದೆ.

೨. ಕುಟುಂಬದ ಸದಸ್ಯರ ಮೇಲಿನ ಅಧಿಕಾರದ ಆಧಾರದಲ್ಲಿ ಎರಡು ವಿಧಗಳಿರುವುದು ಕಂಡುಬಂದಿದೆ :

(i) ಪಿತೃಪ್ರಧಾನ ಕುಟುಂಬ

(ii) ಮಾತೃಪ್ರಧಾನ ಕುಟುಂಬ

೩. ರಚನೆಯ ಆಧಾರದಲ್ಲಿ ಕುಟುಂಬದಲ್ಲಿ ಎರಡು ಪ್ರಕಾರಗಳಿವೆ :

(i) ಅಣು ಕುಟುಂಬ (Nuclear family) ತಂದೆ-ತಾಯಿ ಮತ್ತು ಮಕ್ಕಳು ಮಾತ್ರ ಇರುವ ಕುಟುಂಬ.

(ii) ಕೂಡು ಕುಟುಂಬ : ಎರಡು ಮೂರು ತಲೆಮಾರುಗಳಿಗೆ ಸೇರಿದ ರಕ್ತಸಂಬಂಧಿಗಳ ಅನೇಕ ಅಣು ಕುಟುಂಬಗಳು ಒಟ್ಟಾಗಿ ವಾಸಿಸುವ ವಿಸ್ತೃತ ಕುಟುಂಬ. ಇದನ್ನು ಅವಿಭಕ್ತ ಕುಟುಂಬವೆನ್ನುತ್ತಾರೆ.

೪. ವಿವಾಹದ ವಿವಿಧ ಆಧಾರದಲ್ಲಿ ಮೂರು ಪ್ರಕಾರದ ಕುಟುಂಬಗಳಿವೆ :

(i) ಏಕಸಂಗಾತಿ ವಿವಾಹದ ಕುಟುಂಬ

(ii) ಬಹುಪತ್ನಿತ್ವ ವಿವಾಹದ ಕುಟುಂಬ

(iii) ಬಹುಪತಿತ್ವ ವಿವಾಹದ ಕುಟುಂಬ

೫. ವಿವಾಹದ ವಿವಿಧ ಆಧಾರದಲ್ಲಿ ಮೂರು ಪ್ರಕಾರದ ಕುಟುಂಬಗಳಿವೆ :

(i) ಮಾತೃಮೂಲೀಯ ಅಂದರೆ ತಾಯಿಯ ವಂಶದಿಂದ ಗುರುತಿಸಲ್ಪಡುವ ಕುಟುಂಬ

(ii) ಪಿತೃಮೂಲೀಯ ಅಂದರೆ ತಂದೆಯ ವಂಶದಿಂದ ಗುರುತಿಸಲ್ಪಡುವ ಕುಟುಂಬ

೬. ಒಳಸಮೂಹ ಹಾಗೂ ಹೊರಸಮೂಹದ ಆಧಾರದಲ್ಲಿ ಕುಟುಂಬವನ್ನು (i) ಒಳಬಾಂಧವ್ಯ ವಿವಾಹದ ಕುಟುಂಬ ಹಾಗೂ (ii) ಹೊರಬಾಂಧವ್ಯ ವಿವಾಹದ ಕುಟುಂಬವೆಂಬುದಾಗಿ ವಿಂಗಡಿಸಲಾಗಿದೆ.

೭. ರಕ್ತ ಸಂಬಂಧದ ನೆಲೆಯಲ್ಲಿ ಕುಟುಂಬವನ್ನು - (i) ರಕ್ತಸಂಬಂಧೀ ಕುಟುಂಬ ಮತ್ತು (ii) ದಾಂಪತ್ಯ ಕುಟುಂಬ ಎಂಬುದಾಗಿ ವರ್ಗೀಕರಿಸಲಾಗಿದೆ. ರಕ್ತಸಂಬಂಧೀ ಕುಟುಂಬದಲ್ಲಿ ಸಹೋದರ, ಸಹೋದರಿ ಹಾಗೂ ಸಹೋದರಿಯ ಮಕ್ಕಳು ಒಂದೇ ಮನೆಯಲ್ಲಿ ವಾಸಿಸುತ್ತಾರೆ. ಸಹೋದರಿಯ ಗಂಡನು ತನ್ನ ಸಹೋದರಿಯ ಮನೆಯಲ್ಲಿರುತ್ತಾನೆ. ಅಳಿಯಕಟ್ಟು ಪದ್ಧತಿಯಲ್ಲಿ ಈ ಬಗೆಯ ವ್ಯವಸ್ಥೆ ಕಂಡುಬರುತ್ತದೆ. ದಾಂಪತ್ಯ ಕುಟುಂಬದಲ್ಲಿ ಗಂಡ-ಹೆಂಡತಿ ಬೇರೆ ಬೇರೆ ರಕ್ತಸಂಬಂಧಗಳಿಗೆ ಸೇರಿದವರಾಗಿದ್ದರೂ ಅವರ ನಡುವಿನ ಅನ್ಯೋನ್ಯ ಸಂಬಂಧಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ.

೮. ಅವಲಂಬನೆಯ ಆಧಾರದಲ್ಲಿ - (i) ಬೆಳೆದ ಕುಟುಂಬ ಹಾಗೂ (ii) ಬೆಳೆಸಿದ ಕುಟುಂಬ ಎಂಬುದಾಗಿ ಎರಡು ವಿಧಗಳಿವೆ. ವ್ಯಕ್ತಿಗೆ ತನ್ನ ತಂದೆತಾಯಿಗಳ ಕುಟುಂಬ (ಬೆಳೆದ ಕುಟುಂಬ) ಪ್ರಾಥಮಿಕವಾಗಿದ್ದು ಹಾಗೂ ತಾನು ಮದುವೆಯಾಗಿ ಮಕ್ಕಳನ್ನು ಪಡೆದ ಕುಟುಂಬ (ಬೆಳೆಸಿದ ಕುಟುಂಬ) ಅನಂತರ ಬರುತ್ತದೆ.

೯. ನಾಮಕರಣದ ಆಧಾರದಲ್ಲಿ - (i) ಮಾತೃವಂಶಾವಳಿಯ (ii) ಪಿತೃವಂಶಾವಳಿಯ ಕುಟುಂಬ ಎಂಬುದಾಗಿ ವರ್ಗೀಕರಿಸಲಾಗಿದೆ.

ಇನ್ನು ಸಾಹಚರ್ಯ ಕುಟುಂಬ, ರಮ್ಯ ಕುಟುಂಬ, ಪ್ರಯೋಗಾತ್ಮಕ ಕುಟುಂಬ, ಸಮತ್ವಾ ಕುಟುಂಬ ಇತ್ಯಾದಿ ವಿವಿಧ ಪ್ರಕಾರಗಳ ಆಧುನಿಕ ಶೈಲಿಯ ಕುಟುಂಬಗಳು ಪಾಶ್ಚಿಮಾತ್ಯ ಸಮಾಜಗಳಲ್ಲಿ ಹಾಗೂ ದೊಡ್ಡ ನಗರಗಳಲ್ಲಿ ಕಂಡುಬರುತ್ತವೆ. ಅಂತೂ ವಿವಿಧ ದೃಷ್ಟಿಕೋನಗಳಿಂದ ಕುಟುಂಬದ ಪ್ರಕಾರಗಳನ್ನು ಗುರುತಿಸಲಾಗಿದ್ದರೂ ಕೆಲವೊಂದು ಪ್ರಕಾರಗಳು ತಮ್ಮ ಲಕ್ಷಣಗಳಲ್ಲಿ ತೀರ ಹತ್ತಿರವಾಗಿವೆ. ಉದಾಹರಣೆಗೆ, ಮಾತೃಸ್ಥಾನೀಯ, ಮಾತೃವಂಶೀಯ, ಮಾತೃಮೂಲೀಯ ಹಾಗೂ ರಕ್ತಸಂಬಂಧೀ ಕುಟುಂಬಗಳು ಅನೇಕ ಸಾಮ್ಯತೆಗಳನ್ನು ಹೊಂದಿವೆ. ಅಂತೆಯೇ ಪಿತೃಸ್ಥಾನೀಯ, ಪಿತೃಮೂಲೀಯ, ಪಿತೃವಂಶೀಯ, ಪಿತೃಪ್ರಧಾನ ಹಾಗೂ ದಾಂಪತ್ಯ ಕುಟುಂಬಗಳ ನಡುವೆ ಅನೇಕ ಸಾಮ್ಯತೆಗಳಿವೆ. ಆದುದರಿಂದ ಈ ಎರಡು ಪ್ರಧಾನವಾದ ಪ್ರಕಾರಗಳನ್ನು ತಿಳಿಯಲು ನಾವು ಮಾತೃಮೂಲೀಯ ಕುಟುಂಬ ಹಾಗೂ ಪಿತೃಪ್ರಧಾನ ಕುಟುಂಬಗಳ ಕುರಿತಾಗಿ ಸ್ವಲ್ಪ ವಿಸ್ತಾರವಾಗಿ ಅಭ್ಯಸಿಸೋಣ.

೬.೫.೮. ಮಾತೃಪ್ರಧಾನ

ಮಾತೃಪ್ರಧಾನ ಕುಟುಂಬ ಮತ್ತು ಮಾತೃಮೂಲೀಯ ಕುಟುಂಬ ಪದ್ಧತಿಗಳು ಅನೇಕ ಅಂಶಗಳಿಂದ ಸಮಾನವಾದವು. ಆದರೆ ಅನೇಕ ಮಾನವಶಾಸ್ತ್ರಜ್ಞರು ಹಾಗೂ ಸಮಾಜಶಾಸ್ತ್ರಜ್ಞರು ಮಾತೃಪ್ರಧಾನ ಕುಟುಂಬವೆಂಬ ಪರಿಕಲ್ಪನೆಯನ್ನೇ ಹೆಚ್ಚಾಗಿ ಬಳಸಿದ್ದಾರೆ. ಇನ್ನು ಕೆಲವರಿಗೆ ಮಾತೃಪ್ರಧಾನ ಅಥವಾ ಮಾತೃಸತ್ತಾತ್ಮಕ ಕುಟುಂಬವಿದ್ದಿತೇ ಎಂಬ ಸಂಶಯವಿದೆ. ಅವರ ದೃಷ್ಟಿಯಲ್ಲಿ ಸ್ತ್ರೀಯರು ಸಂಪೂರ್ಣವಾಗಿ ಕುಟುಂಬದ ಜವಾಬ್ದಾರಿಯನ್ನು ವಹಿಸಿಕೊಂಡು ಮನೆಯನ್ನು ನಡೆಸುವ ಅಧಿಕಾರ ಹೊಂದಿದ್ದ ಸಾಧ್ಯತೆಗಳಿಲ್ಲ. ಹಾಗಾಗಿ ಪಿತೃಪ್ರಧಾನ ಪದ್ಧತಿಗೆ ಸಂವಾದಿಯಾದ ಮಾತೃಪ್ರಧಾನ ಪದ್ಧತಿ ಇದ್ದಿತೆಂಬುದು ಕೇವಲ ಊಹಾತ್ಮಕವಾದವೇ ಹೊರತು ವಾಸ್ತವಿಕ ಸಂಗತಿಯಾಗಿರಲು ಸಾಧ್ಯವಿಲ್ಲ. 'ಹೆಣ್ಣು ಅಧಿಕಾರ ಹೊಂದಿರುವುದು' ಹಾಗೂ 'ಹೆಣ್ಣಿನಿಂದ ಅಧಿಕಾರದ ಚಲಾವಣೆ' ಇವು ಎರಡೂ ಒಂದೇ ಸಂಗತಿಗಳಲ್ಲ. ಆದುದರಿಂದ ಮಾತೃಪ್ರಧಾನ ಪದ್ಧತಿಯವು ಎಂದು ಹೇಳಲಾದ ಕುಟುಂಬಗಳಲ್ಲಿ ಆಸ್ತಿಯ ಹಕ್ಕು, ವಂಶಾವಳಿ, ವಾಸಸ್ಥಾನ ಮುಂತಾದ ವಿಚಾರಗಳಲ್ಲಿ ಹೆಣ್ಣಿನ ಮೂಲವೇ ಮುಖ್ಯವಾಗಿದ್ದರೂ ಕುಟುಂಬದ ಜವಾಬ್ದಾರಿ ಹಾಗೂ ಅಧಿಕಾರದ ನಿರ್ವಹಣೆಯಲ್ಲಿ ಸೋದರರ ಸಹಕಾರವನ್ನು ಪಡೆಯಲಾಗುತ್ತಿತ್ತು. ಹೀಗಾಗಿ ತಾಯಿಗೆ ಪ್ರಾಧಾನ್ಯತೆ ಇದ್ದ ಮಾತೃಮೂಲೀಯ ಕುಟುಂಬಗಳೆಂಬ ಪರಿಕಲ್ಪನೆಯನ್ನು ಬಳಸಿ ನಾವು ಅವುಗಳನ್ನು ಅಭ್ಯಸಿಸಬಹುದಾಗಿದೆ.

ಕುಟುಂಬದ ಉಗಮದ ಕುರಿತಾಗಿ ಸಿದ್ಧಾಂತಗಳನ್ನು ಮಂಡಿಸಿದ ಮಾನವಶಾಸ್ತ್ರಜ್ಞರಾದ ಎಲ್.ಎಚ್. ಮೋರ್ಗನ್, ಮೆಕ್‌ಲೇನನ್, ಬೆಚೊಫೆನ್, ಬ್ರಿಫಾಲ್ಟ್ ಮುಂತಾದವರು ಮಾತೃಮೂಲೀಯ ಕುಟುಂಬವೇ ಆದಿಮ ಕುಟುಂಬ ಪದ್ಧತಿ ಎಂದಿದ್ದಾರೆ. ಲೈಂಗಿಕ ಸ್ವಚ್ಛಂದತೆಯ ಹಂತದಿಂದ ಮುಂದುವರಿದ ಮಾನವರು ಮೊದಲಾಗಿ ಮಾತೃಮೂಲೀಯ

ಕುಟುಂಬವನ್ನು ಸ್ಥಾಪಿಸಿದರು ಎಂಬುದು ಅವರ ವಾದವಾಗಿದೆ. ಆದಿವಾಸಿ ಸಮುದಾಯಗಳಲ್ಲಿ ಬೇಟೆ ಹಾಗೂ ಆಹಾರ ಸಂಗ್ರಹಕ್ಕಾಗಿ ಗಂಡಸರು ವ್ಯಾಪಕವಾದ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದರು. ಅವರಿಗೆ ನಿಶ್ಚಿತ ನೆಲೆಯೆಂಬುದಿರಲಿಲ್ಲ. ಆದರೆ ಹೆಣ್ಣಿಗೆ ಆ ಬಗೆಯ ಅಲೆಮಾರಿತನ ಸಾಧ್ಯವಿರಲಿಲ್ಲ. ಅಲ್ಲದೆ ಹೆಣ್ಣು ಗರ್ಭಿಣಿಯಾದಾಗ ಹಾಗೂ ಮಕ್ಕಳ ಪಾಲನೆಯ ಜವಾಬ್ದಾರಿಯನ್ನು ಹೊತ್ತಿರುವಾಗ ಒಂದು ನಿಶ್ಚಿತ ನೆಲೆ ಹೊಂದಿರುವುದು ಅನಿವಾರ್ಯವಾಯಿತು. ಸಹಜವಾಗಿಯೇ ಮನೆಗೆ ಸಂಬಂಧಿಸಿದ ವಸ್ತುಗಳು, ಸುತ್ತಲಿನ ಭೂಮಿ, ಕೃಷಿ, ಇತ್ಯಾದಿ ಅವಳ ಸೊತ್ತುಗಳಾದವು. ಆಹಾರ ತಂದುಕೊಟ್ಟು, ತನ್ನನ್ನು ಹಾಗೂ ಮಕ್ಕಳನ್ನು ಸಾಕುವ ಜವಾಬ್ದಾರಿ ಹೊತ್ತವರು ಅವಳ ಗಂಡಂದಿರಾಗುತ್ತಿದ್ದರು. ಗಂಡನು ಬೇಟೆಯಾಡಲು ಹೋದವನು ಕೆಲಕಾಲದ ಬಳಿಕ ಹಿಂತಿರುಗದೇ ಇದ್ದಾಗ ಹೆಣ್ಣು ಬೇರೊಬ್ಬನನ್ನು ಗಂಡನಾಗಿ ಸ್ವೀಕರಿಸುವ ಅನಿವಾರ್ಯತೆಗೆ ಒಳಗಾಗುತ್ತಿದ್ದಳು. ಹೀಗೆ ಬಹುಪತಿತ್ವಕ್ಕೆ ಅವಕಾಶವಾಯಿತು. ಅಂದರೆ ಮನೆಯ ಸ್ಥಿರತೆಯು ಹೆಣ್ಣಿನ ಹೊಣೆಗಾರಿಕೆಯಾಗಿ ಗಂಡಿಗೆ ನಿಗದಿತ ಜವಾಬ್ದಾರಿಗಳಿಲ್ಲದ ಕುಟುಂಬ ಪದ್ಧತಿಯು ರೂಪುಗೊಂಡಿತು. ಹುಟ್ಟಿದ ಗಂಡುಮಕ್ಕಳು ಅಲೆಮಾರಿಗಳಾಗಿ ಹೆಣ್ಣುಮಕ್ಕಳು ಮಾತ್ರ ತಾಯಿಯ ಬಳಿ ಇದ್ದು ಮುದಿಪ್ರಾಯದಲ್ಲಿ ಆಕೆಗೆ ನೆರವಾಗುತ್ತಿದ್ದರು. ಹೀಗಾಗಿ ಮನೆಯ ಮುಂದುವರಿಕೆಯು ಹೆಣ್ಣುಮಕ್ಕಳ ಮೂಲಕವೇ ಆಗುತ್ತಿತ್ತು. ಅಂದರೆ ತಾಯಿಯಿಂದ ಮಗಳಿಗೆ ಮನೆಯ ಹಕ್ಕು ವರ್ಗಾವಣೆಯಾಗುತ್ತಿತ್ತು. ಹೀಗೆ ಮಾತೃಮೂಲೀಯ ಪದ್ಧತಿಯ ಉಗಮವಾಯಿತು.

ಅಲೆಮಾರಿ ಗಂಡಸರಿಗೆ ನಿರ್ದಿಷ್ಟ ಹೆಂಡತಿಯಾಗಲೀ ಗುರುತಿಸಲ್ಪಡುವ ಮಕ್ಕಳೆಂಬು ದಾಗಿಯಾಗಲೀ ಇಲ್ಲದಿದ್ದುದರಿಂದ ವೃದ್ಧಾವಸ್ಥೆಯಲ್ಲಿ ಸಹೋದರಿಯರ ಮನೆಗಳೇ ನೆಲೆಗಳಾಗುತ್ತಿದ್ದುವು. ಅಕ್ಕ-ತಂಗಿಯರ ಆಸ್ತಿ-ಮನೆಗಳ ನಿರ್ವಹಣೆಯಲ್ಲಿ ಅವರು ನೆರವಾಗುತ್ತಿದ್ದರು. ಹೀಗೆ ಸೋದರ-ಸೋದರಿ ಹಾಗೂ ಸೋದರಿಯರ ಮಕ್ಕಳನ್ನು ಕೂಡಿದ ರಕ್ತಸಂಬಂಧೀ ಕುಟುಂಬದ ಸ್ಥಾಪನೆಯಾಯಿತು. ಆದರೆ ಆಸ್ತಿಯ ಹಕ್ಕು, ವಂಶದ ಹೆಸರು, ಹೆಣ್ಣುಮಕ್ಕಳ ವಾಸ್ತವ್ಯ ಇತ್ಯಾದಿಗಳಿಗೆಲ್ಲ ಮಾತೃಮೂಲವೇ ಉಳಿದು ಬಂತು. ಕುಟುಂಬದ ಯಜಮಾನಿಕೆ ಹೆಣ್ಣಿನ ಕೈಯಲ್ಲೇ ಇದ್ದು ಆಕೆಯ ಸಹೋದರ ಕೃಷಿಕಾರ್ಯಗಳ ಹಾಗೂ ಇನ್ನಿತರ ವ್ಯವಹಾರಗಳ ನಿರ್ವಹಣೆಗೆ ಆಕೆಗೆ ಸಹಾಯ ನೀಡುವ ಪರಿಪಾಟವುಂಟಾಯಿತು. ಈ ಬಗೆಯ ಕುಟುಂಬಗಳು ಪ್ರಪಂಚದ ಹೆಚ್ಚಿನ ಭಾಗಗಳ ಆದಿವಾಸಿ ಸಮುದಾಯಗಳಲ್ಲಿ ಕಂಡುಬಂದಿವೆ. ಉತ್ತರ ಅಮೇರಿಕ, ಆಫ್ರಿಕಾ, ಆಸ್ಟ್ರೇಲಿಯಾ ಹಾಗೂ ಭಾರತದ ಅನೇಕ ಬುಡಕಟ್ಟುಗಳಲ್ಲಿ, ಎಸ್ಕಿಮೊ ಜನರಲ್ಲಿ, ಪುಲೈದ್ವೀಪ ನಿವಾಸಿಗಳಲ್ಲಿ, ಹೊಪಿ ಇಂಡಿಯನ್ನರಲ್ಲಿ, ಜುನಿ, ಚಂಬುಲಿ, ಒಡಾಮಾ ಇಂಡಿಯನ್ನರಲ್ಲಿ, ಟ್ರೊಬ್ರಿಯಾಂಡ್ ದ್ವೀಪನಿವಾಸಿಗಳಲ್ಲಿ, ಕೇರಳದ ನಾಯರರಲ್ಲಿ, ಖಾಸಿ, ಗಾರೋ ಮುಂತಾದ ಅಸ್ಸಾಮಿನ ಬುಡಕಟ್ಟುಗಳಲ್ಲಿ ಈ ಬಗೆಯ ಕುಟುಂಬಗಳು ಕಂಡುಬಂದಿವೆ. ಕೇರಳದ ಮರುಮಕ್ಕತ್ತಾಯಂ

ಹಾಗೂ ದಕ್ಷಿಣ ಕನ್ನಡದಲ್ಲಿ ಕಂಡುಬರುವ ಅಳಿಯಕಟ್ಟು ಪದ್ಧತಿಗಳು ಮಾತೃಮೂಲೀಯವಾಗಿವೆ. ಇವುಗಳಲ್ಲಿ ಸ್ತ್ರೀಯು ಮುಖ್ಯವಾಗಿ, ಆಸ್ತಿಯ ಒಡೆತನವನ್ನು ಪೀಳಿಗೆಯಿಂದ ಪೀಳಿಗೆಗೆ ಹಸ್ತಾಂತರಿಸುವ ಕಾರಕರಾಗಿರುತ್ತಾಳೆ ಹೊರತು ಅಧಿಕಾರ ಚಲಾಯಿಸುವುದಿಲ್ಲ. ಹೀಗೆ ಮಾತೃಮೂಲೀಯ ಕುಟುಂಬಗಳಲ್ಲಿ 'ತಾಯಿಯ ಆಡಳಿತಕ್ಕಿಂತ, ತಾಯಿಯ ಹಕ್ಕಿನ ತತ್ವ'ವೇ ಮುಖ್ಯವಾಗಿದೆ.

ಮಾತೃಮೂಲೀಯ ಕುಟುಂಬದ ಲಕ್ಷಣಗಳು ಈ ಕೆಳಗಿನಂತಿವೆ :

೧. **ಮಾತೃ ವಂಶಾವಳಿ :** ಮಕ್ಕಳ ವಂಶಾವಳಿಯನ್ನು ತಾಯಿಯ ಮೂಲಕ ಗುರುತಿಸಲಾಗುವುದು. ಆಸ್ತಿ-ಅಧಿಕಾರಗಳೂ ತಾಯಿಯಿಂದ ಮಗಳಿಗೆ ವರ್ಗಾಯಿಸಲ್ಪಡುತ್ತವೆ. ಸದಸ್ಯರ ಸ್ಥಾನವೂ ಸ್ತ್ರೀಯರ ಕಡೆಯಿಂದಲೇ ನಿರ್ಧರಿಸಲ್ಪಡುತ್ತದೆ. ಇಲ್ಲಿ ಮಗನ ಸ್ಥಾನ ಗೌಣ.

೨. **ಮಾತೃಸ್ಥಾನೀಯ ನಿವಾಸ :** ಈ ಕುಟುಂಬಗಳಲ್ಲಿ ಮಗಳು ಮದುವೆಯ ನಂತರವೂ ತಾಯಿಮನೆಯಲ್ಲೇ ಮುಂದುವರಿಯುವಳು; ಅವಳ ಮಕ್ಕಳೂ ಅವಳೊಡನೆ ವಾಸಿಸುವರು. ಗಂಡನು ಆಕೆಯ ಮನೆಗೆ ಆಗಾಗ ಭೇಟಿಕೊಡುವ ಸಂದರ್ಶಕನಾಗಿರುತ್ತಾನೆ. ಗಂಡನು ತನ್ನ ತಾಯಿಮನೆಯಲ್ಲೇ ವಾಸಿಸಿ, ತನ್ನ ಸೋದರಿಯ ಆಸ್ತಿ-ವಹಿವಾಟುಗಳನ್ನು ನೋಡಿಕೊಳ್ಳುವ ಪಾರುಪತ್ಯಗಾರನಾಗಿರುತ್ತಾನೆಯಷ್ಟೇ.

೩. **ಮಾತೃ ಅಧಿಕಾರ :** ಮನೆಯ ಎಲ್ಲ ವ್ಯವಹಾರಗಳಲ್ಲಿ ತಾಯಿಯ ತೀರ್ಮಾನವೇ ಅಂತಿಮವಾದುದು. ಆಕೆಯ ಹೆಸರಲ್ಲಿ ಸಹೋದರರು ವ್ಯವಹಾರಗಳನ್ನು ನಿರ್ವಹಿಸುವರಾದರೂ, ಅವರಿಗೆ ಯಾವುದೇ ರೀತಿಯ ಅಧಿಕಾರವಿರುವುದಿಲ್ಲ.

೪. **ಕುಟುಂಬದ ರಚನೆ :** ರಕ್ತಸಂಬಂಧವು ತಾಯಿಯ ಮೂಲಕ ನಿರ್ಧರಿಸಲ್ಪಡುವುದು.

ಮಾತೃಮೂಲೀಯ ಕುಟುಂಬದ ಈ ಲಕ್ಷಣಗಳು ಇಂದಿಗೂ ಕೆಲವು ಭಾಗಗಳಲ್ಲಿ ಕಂಡುಬರುತ್ತವೆ. ಖಾಸಗಿ ಆಸ್ತಿಯ ಹಕ್ಕು ಸರಕಾರದ ಕಂದಾಯ ಇಲಾಖೆಯ ಕಡತಗಳಲ್ಲಿ ದಾಖಲಾದಾಗ ಸ್ತ್ರೀಯರ ಹೆಸರಲ್ಲೇ ನಮೂದಿಸಲ್ಪಟ್ಟಿದೆ. ವಂಶಾವಳಿಯಂತೆ ಆಸ್ತಿಯು ಹೆಣ್ಣುಮಕ್ಕಳಿಗೆ ಸೇರುವುದರಿಂದ ಮದುವೆಯ ಬಳಿಕ ಹೆಣ್ಣು ತನ್ನ ಗಂಡನ ಮನೆಗೆ ಹೋಗಿ ನೆಲಸುವುದಿಲ್ಲ. ಅಕ್ಕ-ತಂಗಿಯರು ಸೇರಿ ತಮ್ಮ ಸಹೋದರರು ಹಾಗೂ ಮಕ್ಕಳ ನೆರವಿನಿಂದ ಕೃಷಿ ಕಾರ್ಯಗಳನ್ನು ನಡೆಸುತ್ತಾರೆ. ತಾತ್ಕಾಲಿಕವಾಗಿ ಗಂಡನ ಮನೆಗೆ ಹೋಗಿ ಉಳಿದುಕೊಂಡಿರುವ ಸ್ತ್ರೀಯರೂ ಕೂಡ ಮಳೆಗಾಲ ಹಿಡಿದು ಕೃಷಿ ಕೆಲಸಗಳಿರುವಾಗ ಆದ್ಯತೆಯ ನೆಲೆಯಲ್ಲಿ ತವರು ಮನೆಗೆ ಮರಳುತ್ತಾರೆ. ಅವಕಾಶವಿದ್ದರೆ ಹಿಂದಿರುಗಿ ಗಂಡನ ಮನೆಯ ಹೊಲಗಳಲ್ಲೂ ದುಡಿಯುತ್ತಾರೆ. ಗಂಡುಮಕ್ಕಳು ತಮ್ಮ ಹೆಸರಿನೊಂದಿಗೆ ತಾಯಿಯ ಮನೆತನದ ಹೆಸರನ್ನೇ ಹಚ್ಚಿಕೊಳ್ಳುತ್ತಾರೆ. ವಿವಾಹವು ಹೆಚ್ಚಾಗಿ ಸೋದರ ಸಂಬಂಧದಲ್ಲೇ ಜರುಗುತ್ತದೆ. ಅಂದರೆ ತಂದೆಯ ಸೋದರಿಯರ ಮಕ್ಕಳಲ್ಲಿ ಅಥವಾ ತಾಯಿಯ ಸೋದರರ

ಮಕ್ಕಳ ಪೈಕಿ ವಿವಾಹ ಸಂಗಾತಿಯನ್ನು ಆಯ್ಕೆ ಮಾಡಲಾಗುತ್ತದೆ. ಇನ್ನು ವಿವಾಹದ ನಿಶ್ಚಯದಲ್ಲಿ ಹಾಗೂ ಏರ್ಪಾಡಿನಲ್ಲಿ ತಂದೆಗಿಂತಲೂ ಸೋದರಮಾವನ ಪಾತ್ರವೇ ದೊಡ್ಡದು. ಆಮಂತ್ರಣ ಪತ್ರಿಕೆಗಳೂ ಸೋದರಮಾವನ ಹೆಸರಿನಲ್ಲಿ ಪ್ರಕಟವಾಗಿ ಇಂತಹವರ ಅಳಿಯ/ಸೊಸೆಯ ವಿವಾಹವೆಂತಲೇ ಮುದ್ರಿಸುತ್ತಾರೆ. ವ್ಯಕ್ತಿ ತೀರಿಕೊಂಡಾಗ ಅಪರ ಕ್ರಿಯೆಗಳನ್ನು ಮಾಡುವ ಹಕ್ಕು ಮಗನದ್ದಲ್ಲ; ಬದಲಾಗಿ ಸಹೋದರಿಯ ಮಕ್ಕಳಿಗೆ ಸೇರಿದೆ. ಮಾತೃಮೂಲೀಯ ಪದ್ಧತಿಯದೇ ವಿಸ್ತೃತರೂಪವಾದ ಅಳಿಯಕಟ್ಟಿನಲ್ಲಿ ಹಕ್ಕುಗಳು, ಕೂಡ ಮಾವನಿಂದ ಸೋದರಳಿಯನಿಗೆ ಹೋಗುತ್ತವೆ. ಉದಾಹರಣೆಗೆ, ಭೂತಕಟ್ಟುವಾತನ ಪರಂಪರಾಗತ ಸ್ಥಾನಗಳ ಹಕ್ಕು ಅಕ್ಕ-ತಂಗಿಯರ ಮಕ್ಕಳಿಗೆ ಹೋಗುತ್ತದೆ. ತೀರ ಇತ್ತೀಚೆಗೆ ಈ ಪದ್ಧತಿಗಳನ್ನು ಆಚರಿಸುವವರಲ್ಲೂ ಬದಲಾವಣೆಗಳು ಕಂಡುಬಂದಿದ್ದು ಪಿತೃಪ್ರಧಾನ ಕುಟುಂಬದ ಲಕ್ಷಣಗಳನ್ನು ಸ್ವೀಕರಿಸಿದ್ದಾದರೂ ಅನೇಕ ಸಾಂಪ್ರದಾಯಿಕ ಆಚರಣೆಗಳಲ್ಲಿ ಅಳಿಯಕಟ್ಟಿನ ಅಥವಾ ಮಾತೃಮೂಲೀಯ ಛಾಯೆ ಇನ್ನೂ ಇದೆ.

ಬೆಚೊಫೆನ್, ಬ್ರಿಫಾಲ್ಟ್, ಮೋರ್ಗನ್ ಮೊದಲಾದವರು ಮಾತೃಪ್ರಧಾನ ಅಥವಾ ಮಾತೃಮೂಲೀಯ ಕುಟುಂಬಗಳ ಬಳಿಕ ಪಿತೃಪ್ರಧಾನ ಕುಟುಂಬದ ಉಗಮವಾಯಿತು ಎಂಬುದು ಅವರ ವಾದವಾಗಿದೆ. ಬೇರೆ ಕೆಲವು ಮಾನವಶಾಸ್ತ್ರಜ್ಞರು ಈ ಅಭಿಪ್ರಾಯವನ್ನು ಒಪ್ಪದೆ ಕೃಷಿ ಸಂಸ್ಕೃತಿ ಬೆಳೆದು ಅಲೆಮಾರಿತನವನ್ನು ನಿಲ್ಲಿಸಿ ಒಂದೆಡೆ ಸ್ಥಿರವಾಗಿ ಗಂಡಸರು ನಿಂತ ಬಳಿಕವೇ ಮೂಲ ಸ್ವಚ್ಛಂದತೆಯ ಹಂತದಿಂದ ಪಿತೃಪ್ರಧಾನ ಕುಟುಂಬ ಹುಟ್ಟಿಕೊಂಡಿತೆಂದು ಹೇಳುತ್ತಾರೆ. ಈ ಸಿದ್ಧಾಂತಕಾರರ ಚರ್ಚೆಗಳೇನೇ ಇದ್ದರೂ ನಾಗರಿಕತೆಯಲ್ಲಿ ಪಿತೃಪ್ರಧಾನ ಕುಟುಂಬವು ಸುದೀರ್ಘವಾದ ಇತಿಹಾಸ ಹೊಂದಿದೆಯೆಂಬುದು ನಿಜ. ಆದುದರಿಂದ ನಾವು ಅದರ ಸ್ವರೂಪವನ್ನು ವಿವರವಾಗಿ ತಿಳಿಯುವುದು ಅಗತ್ಯವಾಗಿದೆ.

೬.೫.ಆ. ಪಿತೃಪ್ರಧಾನ ಕುಟುಂಬ

ಪ್ರಪಂಚಾದ್ಯಂತ ಹೆಚ್ಚು ವ್ಯಾಪಕವಾದ ಪದ್ಧತಿಯೆಂದರೆ ಪಿತೃಪ್ರಧಾನ ಕುಟುಂಬವೇ ಆಗಿದೆ. ಪ್ರಾಚೀನ ನಾಗರಿಕತೆಗಳಲ್ಲಿ ಹಾಗೂ ಊಳಿಗಮಾನ್ಯ ಸಮಾಜಗಳಲ್ಲಿ ಈ ಬಗೆಯ ಕುಟುಂಬಕ್ಕೆ ಹೆಚ್ಚಿನ ಮಾನ್ಯತೆ ಇತ್ತು. ಶಾಸ್ತ್ರ ಪುರಾಣಗಳಲ್ಲಿಯೂ ಕ್ರಿಶ್ಚಿಯನ್ನರ ಹಳೆ ಒಡಂಬಡಿಕೆಯಲ್ಲಿಯೂ ಕುರಾನಿನಲ್ಲಿಯೂ ಪುರುಷಪ್ರಧಾನ ಕುಟುಂಬ ಪದ್ಧತಿಯನ್ನೇ ಎತ್ತಿ ಹಿಡಿದಿರುವುದು ಕಂಡುಬರುತ್ತದೆ. ಭಾರತದ ಆರ್ಯರು, ಹಿಬ್ರೂಗಳು, ಗ್ರೀಕರು ಹಾಗೂ ರೋಮನ್ನರಲ್ಲಿ ಪಿತೃಪ್ರಧಾನ ಕುಟುಂಬ ಪದ್ಧತಿಯೇ ಜಾರಿಯಲ್ಲಿತ್ತು.

ಪಿತೃಪ್ರಧಾನ ಪದ್ಧತಿ ಎಂದರೇನು? ಯಾವ ಕುಟುಂಬದಲ್ಲಿ ಹಿರಿಯ ಗಂಡಸು ಕುಟುಂಬದ ನಿರ್ವಹಣೆಯ ಪೂರ್ಣಾಧಿಕಾರ ಹೊಂದಿರುತ್ತಾನೋ ಅಂತಹ ಕುಟುಂಬವು ಪಿತೃಪ್ರಧಾನ ಪದ್ಧತಿ ಅನುಸರಿಸುತ್ತಿದೆಯೆನ್ನಬಹುದು. ಆತನು ಕುಟುಂಬದ ಆಸ್ತಿಯ ಏಕಮಾತ್ರ ಹಕ್ಕುದಾರನಾಗಿ ಕುಟುಂಬದ ನಿರ್ವಹಣೆಗಾರನು ಆಗಿರುತ್ತಾನೆ. ಆತನಿಗೆ

ಕುಟುಂಬದ ಎಲ್ಲ ಸದಸ್ಯರೂ ವಿಧೇಯರಾಗಿರಬೇಕು. ಕುಟುಂಬದ ಧಾರ್ಮಿಕ ಆಚರಣೆಗಳಲ್ಲಿ ಆತನೇ ಯಜಮಾನನಾಗಿರುತ್ತಾನೆ.

ಹಿಂದಿನ ಕಾಲದಲ್ಲಿ ಪಿತೃಪ್ರಧಾನ ಕುಟುಂಬದ ಯಜಮಾನನ ಅಧಿಕಾರವು ಪ್ರಶ್ನಾತೀತ ವಾಗಿತ್ತು. ಹಿಬ್ರೂಗಳಲ್ಲಿ ಕುಟುಂಬ ಮುಖ್ಯಸ್ಥನು ನಿರಂಕುಶ ಅಧಿಕಾರವನ್ನು ಹೊಂದಿದ್ದನು. ರೋಮ್‌ನಲ್ಲಿ 'ಪೇಟರ್ ಫೆಮಿಲಿಯಾಸ್' ಎಂಬುದಾಗಿ ಕರೆಸಿಕೊಳ್ಳ ಲ್ಪಡುತ್ತಿದ್ದ ಪಿತೃಪ್ರಧಾನನು ಕುಟುಂಬದ ಏಕಮಾತ್ರ ಮಾಲೀಕನೂ ಅತ್ಯುಚ್ಚ ಒಡೆಯನೂ ದೇಶದ ಕಾನೂನಿನಂತೆ ಕುಟುಂಬವನ್ನು ಪ್ರತಿನಿಧಿಸತಕ್ಕವನೂ ಆಗಿದ್ದನು. ಆತನು ಹೆಂಡತಿ, ಮಕ್ಕಳು ಹಾಗೂ ಅವಲಂಬಿತರ ಮೇಲೆ ಅನಿಯಂತ್ರಿತ ಅಧಿಕಾರ ಹೊಂದಿದ್ದನಲ್ಲದೆ ಅವರಿಗೆ ಯಾವುದೇ ನ್ಯಾಯಬದ್ಧ ಅಸ್ತಿತ್ವವನ್ನು ನಿರಾಕರಿಸಲಾಗಿತ್ತು. ಪ್ರಾಚೀನ ರೋಮ್‌ನಲ್ಲಿ ಕುಟುಂಬ ಮುಖ್ಯಸ್ಥನ ಅಧಿಕಾರದ ವ್ಯಾಪ್ತಿ ಎಷ್ಟಿತ್ತೆಂದರೆ ಆತನು ಇಚ್ಛಿಸಿದರೆ ತನ್ನ ಹೆಂಡತಿ ಮಕ್ಕಳನ್ನು ಕೊಲ್ಲಬಹುದಿತ್ತು ಅಥವಾ ಮಾರುಕಟ್ಟೆಯಲ್ಲಿ ಮಾರಬಹುದಿತ್ತು. ದೇಶದ ಕಾನೂನು ಇದಕ್ಕೆ ಅಡ್ಡಿ ಬರುತ್ತಿರಲಿಲ್ಲ.

ವೇದಗಳ ಕಾಲ ಭಾರತದಲ್ಲಿಯೂ ಪಿತೃಪ್ರಧಾನ ಪದ್ಧತಿ ಜಾರಿಯಲ್ಲಿತ್ತು. ಕುಟುಂಬದ ಉಳಿದ ಯಾವ ಸದಸ್ಯರಿಗೂ ಆಸ್ತಿ ಹಕ್ಕು ಇರಲಿಲ್ಲ. ಸ್ತ್ರೀಯರಂತೂ ಆಸ್ತಿಯನ್ನು ಹೊಂದುವಂತೆಯೇ ಇರಲಿಲ್ಲ. ಹೆಣ್ಣು ಬಾಲ್ಯದಲ್ಲಿ ತಂದೆಯ ಅಧೀನಳಾಗಿ, ಯೌವನದಲ್ಲಿ ಗಂಡನ ಅಧೀನಳಾಗಿ, ವೃದ್ಧಾಪ್ಯದಲ್ಲಿ ಮಗನ ಅಧೀನಳಾಗಿ ಬಾಳಬೇಕಿತ್ತು. ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಕಾರ್ಯಕ್ರಮಗಳಲ್ಲಿ ಮನೆತನದ ಸ್ತ್ರೀಯರು ಕಾಣಿಸಿಕೊಳ್ಳುವುದು ನಿಷಿದ್ಧವಾಗಿತ್ತು.

ಪ್ರಾಚೀನ ಅಥೆನ್ಸ್‌ನಲ್ಲಿ ಸ್ತ್ರೀಯರು ಹಾಗೂ ಹೆಣ್ಣು ಶಿಶುಗಳಿಗೆ ಮನೆಯಲ್ಲಿ ಪ್ರತ್ಯೇಕ ವಾಸಸ್ಥಾನ ಇದ್ದಿತು. ಅವರು ಯಜಮಾನನ ಅಪ್ಪಣೆಯ ವಿನಃ ಎಲ್ಲಿಗೂ ಹೊರಗೆ ಹೋಗುವಂತಿರಲಿಲ್ಲ. ಚೀನಾದಲ್ಲಿಯೂ ಪಿತೃಪ್ರಧಾನ ಕುಟುಂಬಗಳಲ್ಲಿ ಸ್ತ್ರೀಯರ ಸ್ಥಾನಮಾನ ಬಹಳ ಕೀಳುಮಟ್ಟದಲ್ಲಿತ್ತು. ಯಾವುದೇ ರೀತಿಯ ಸ್ವಾತಂತ್ರ್ಯ ಅವರಿಗಿರಲಿಲ್ಲ. ಹೀಗೆ ಪಿತೃಪ್ರಧಾನ ಕುಟುಂಬ ಪದ್ಧತಿ ಜಾರಿಯಲ್ಲಿದ್ದ ಅನೇಕ ಸಮಾಜಗಳಲ್ಲಿ ಕುಟುಂಬದ ಯಜಮಾನನ ಸರ್ವಾಧಿಕಾರಕ್ಕೆ ಉಳಿದ ಸದಸ್ಯರು ತಲೆಬಾಗಿ ನಡೆಯಬೇಕಾಗಿತ್ತು.

ಪಿತೃಪ್ರಧಾನ ಕುಟುಂಬದ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ಹೇಳಬಹುದು:

೧. ಪಿತೃವಂಶಾವಳಿಯ ಮುಂದುವರಿಕೆ

ವಂಶಾವಳಿಯನ್ನು ತಂದೆಯ ಮೂಲಕ ಗುರುತಿಸಲಾಗುತ್ತದೆ. ಆಸ್ತಿ-ಅಧಿಕಾರಗಳೂ ತಂದೆಯಿಂದ ಹಿರಿಯ ಮಗನಿಗೆ ವರ್ಗಾಯಿಸಲ್ಪಡುತ್ತವೆ. ಕುಟುಂಬದ ಸದಸ್ಯರ ಸ್ಥಾನಮಾನ ಗಳು ತಂದೆಯ ಕಡೆಯಿಂದಲೇ ನಿರ್ಧಾರವಾಗುತ್ತಿತ್ತು. ಇಲ್ಲಿ ಮಗಳ ಸ್ಥಾನ ಗೌಣವಾಗಿತ್ತು.

೨. ಪಿತೃಸ್ಥಾನೀಯ ನಿವಾಸ

ವಿವಾಹದ ತರುವಾಯ ಸ್ತ್ರೀ ತನ್ನ ಗಂಡನ ಮನೆ ಸೇರುತ್ತಿದ್ದಳು. ಗಂಡ, ಮಕ್ಕಳು

ವಿವಾಹದ ನಂತರ ತಮ್ಮ ಮನೆಯಲ್ಲೇ ಮುಂದುವರಿದರೆ, ಹೆಣ್ಣು ಮದುವೆಯಾಗಿ ಆತನ ಮನೆಗೆ ಹೋಗಬೇಕಾಗಿತ್ತು. ಆಕೆ ತನ್ನ ತವರುಮನೆಗೆ ಬಂದು ಹೋಗುವ ಸಂದರ್ಶಕಳಾಗುತ್ತಿದ್ದಳು.

೩. ಪಿತೃ ಅಧಿಕಾರ

ಕುಟುಂಬದ ಸದಸ್ಯರೆಲ್ಲರೂ ಕುಟುಂಬದ ಹಿರಿಯ ಗಂಡಸಿನ ಆಜ್ಞಾನುವರ್ತಿಗಳಾಗಿದ್ದರು. ಎಲ್ಲ ಅಧಿಕಾರಗಳು ಆತನ ಕೈಯಲ್ಲೇ ಸೇರಿದ್ದುವು. ಆರ್ಥಿಕ ವ್ಯವಹಾರಗಳ ನಿರ್ವಹಣೆಯೂ ಅವನಿಗೇ ಸೇರಿದ್ದಿತು. ಸ್ತ್ರೀಗೆ ಇದರಲ್ಲಿ ಯಾವ ಪಾಲೂ ಇದ್ದಿರಲಿಲ್ಲ. ಕುಟುಂಬದ ಸರ್ವಸದಸ್ಯರ ಮೇಲೆ ಸರ್ವಾಧಿಕಾರ ನಡೆಸುವ ಹಕ್ಕು ಹಿರಿಯ ಗಂಡಸು ಅಥವಾ ತಂದೆಯದಾಗಿತ್ತು. ತಂದೆಯಿಂದ ಈ ಅಧಿಕಾರ ಹಿರಿಯ ಗಂಡುಮಗನಿಗೆ ವರ್ಗಾಯಿಸಲ್ಪಡುತ್ತಿತ್ತು.

೪. ಸ್ತ್ರೀಯ ಕೀಳುಸ್ಥಾನಮಾನ

ಪಿತೃಪ್ರಧಾನ ಕುಟುಂಬಗಳಲ್ಲಿ ಸ್ತ್ರೀಯ ಸ್ಥಾನಮಾನ ಕೆಳಮಟ್ಟದ್ದಾಗಿತ್ತು. ಆಕೆಗೆ ಆಸ್ತಿ-ಅಧಿಕಾರಗಳಲ್ಲಿ ಯಾವ ಪಾಲೂ ಇದ್ದಿರಲಿಲ್ಲ. ಆಕೆ ತಂದೆ, ಗಂಡ ಅಥವಾ ಮಗನ ಮೇಲೆ ನಿರ್ಭರವಾಗಿರಬೇಕಾಗಿತ್ತು.

೫. ಕುಟುಂಬದ ಪಾವಿತ್ರ್ಯ

ಕುಟುಂಬವು ದೈವನಿರ್ಮಿತವಾಗಿದ್ದು, ಕುಟುಂಬದ ಮುಖ್ಯಸ್ಥನು ದೇವರ ಸಂಕೇತವೆಂಬ ಭಾವನೆಗೆ ಉಚ್ಚ ಸ್ಥಾನವಿತ್ತು.

ಪಿತೃಪ್ರಧಾನ ಕುಟುಂಬವು ಯುರೋಪಿನಲ್ಲಿ ಊಳಿಗಮಾನ್ಯ ಯುಗದಲ್ಲಿ ಬೆಳೆದು ಹೆಚ್ಚು ಬಲಿಷ್ಠವಾಯಿತು. ಏಕೆಂದರೆ ಯಜಮಾನನಲ್ಲಿ ಅಧಿಕಾರದ ಕೇಂದ್ರೀಕರಣವು ಊಳಿಗಮಾನ್ಯ ಪದ್ಧತಿಯ ಒಂದು ಪ್ರಮುಖ ಲಕ್ಷಣವಾಗಿದೆ. ರೋಮ್ ಹಾಗೂ ಉಳಿದ ಯುರೋಪ್‌ನಲ್ಲಿದ್ದಷ್ಟು ಪಿತೃಪ್ರಧಾನ ಪದ್ಧತಿಯು ಕ್ರೌರ್ಯವು ಭಾರತ, ಚೀನಾಗಳಲ್ಲಿ ಕಂಡುಬರಲಿಲ್ಲ. ಅಂತೂ ಈ ಪದ್ಧತಿಯ ಕುಟುಂಬದ ಕಿರಿಯರಿಗೆ ಹಾಗೂ ಸ್ತ್ರೀಯರಿಗೆ ಮಾರಕವಾಗಿದ್ದುದು ನಿಜ.

ಪಿತೃಪ್ರಧಾನ ಪದ್ಧತಿಯ ಅವನತಿ

ಯುರೋಪಿನಲ್ಲಿ ಸಾಂಸ್ಕೃತಿಕ ಪುನರುಜ್ಜೀವನ ಹಾಗೂ ಸುಧಾರಣಾ ಚಳುವಳಿಗಳ ಫಲಸ್ವರೂಪವಾಗಿ ಪಿತೃಪ್ರಧಾನ ಪದ್ಧತಿಯ ತಳಹದಿಯು ಅಲುಗಾಡತೊಡಗಿತು. ಔದ್ಯೋಗೀಕರಣ ಹಾಗೂ ನಗರೀಕರಣದ ಪ್ರಕ್ರಿಯೆಗಳು ಕೂಡ ಕುಟುಂಬದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ವರೂಪವನ್ನು ಬದಲಾಯಿಸಿದವು. ಪಿತೃಪ್ರಧಾನ ಪದ್ಧತಿಯ ನಿಷ್ಠುರತೆಯನ್ನು ತೀವ್ರತೆಯನ್ನು ಮಾರ್ಪಡಿಸಿದ ಅಂಶಗಳಾವುವೆಂಬುದನ್ನು ನಾವಿಲ್ಲಿ ಅಭ್ಯಸಿಸುತ್ತೇವೆ.

೧. **ಆರ್ಥಿಕ ಅಂಶಗಳು :** ಕೈಗಾರಿಕಾ ಕ್ರಾಂತಿಯಿಂದಾಗಿ ಮಾನವ ಶ್ರಮಕ್ಕೆ ಬದಲಾಗಿ ಯಂತ್ರ ಶ್ರಮವನ್ನು ಅಳವಡಿಸಿದ್ದಲ್ಲದೆ ಅನೇಕ ರೀತಿಯ ಉದ್ಯೋಗಾವಕಾಶಗಳನ್ನು ನಿರ್ಮಿಸಲಾಯಿತು. ಇದು ಕುಟುಂಬದ ಆರ್ಥಿಕ ಮೂಲಗಳ ಮತ್ತು ಕಾರ್ಯಗಳ ಮೇಲೂ ಪ್ರಭಾವ ಬೀರಿತು. ಕೈಗಾರಿಕೆಗಳಲ್ಲಿ ದುಡಿಯಲು ವ್ಯಕ್ತಿಗತ ನಿಪುಣತೆಯೇ ಪ್ರಧಾನವಾಗಿರುವುದರಿಂದ ಸ್ತ್ರೀ-ಪುರುಷರು ತಮ್ಮ ಅರ್ಹತೆಗೆ ಸರಿಯಾದ ಉದ್ಯೋಗ ಹೊಂದಿ ಸಂಪಾದನೆಗೆ ತೊಡಗಿದರು. ಮಹಿಳೆಯರಿಗೆ ಮನೆಯಿಂದ ಹೊರಬಿದ್ದು ದುಡಿಯಲು ಅವಕಾಶವಾದದ್ದಲ್ಲದೆ ಹೆಚ್ಚಿನ ಸ್ವಾತಂತ್ರ್ಯವೂ ಲಭಿಸಿತು. ಹೀಗೆ ಯಜಮಾನನ ಅಧಿಕಾರ ಚಲಾವಣೆಗೆ ಆಸ್ಪದವಿಲ್ಲದಾಯಿತು.

೨. **ರಾಜಕೀಯ ಅಂಶಗಳು :** ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯು ಸರ್ವರಿಗೂ ಸಮಾನತೆಯನ್ನು ಒದಗಿಸಿ, ಸ್ವತಂತ್ರ ಚಿಂತನೆಗೂ ಅವಕಾಶ ನೀಡಿತು. ಚುನಾವಣೆಗಳಲ್ಲಿ ಎಲ್ಲ ವಯಸ್ಕರಿಗೂ ಮತ ಚಲಾವಣೆಯ ಅಧಿಕಾರ ಒದಗಿಸಿತು. ಮಹಿಳೆಯರೂ ರಾಜಕೀಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕುಟುಂಬದೊಳಗೆಯೇ ತಂದೆಯ ಸರ್ವಾಧಿಕಾರವನ್ನು ಪ್ರಶ್ನಿಸುವ ಹಾಗೂ ಸ್ವಂತಿಕೆಯನ್ನು ಪ್ರತಿಷ್ಠಾಪಿಸುವ ಪ್ರವೃತ್ತಿ ಬೆಳೆದುಬಂದಿತು. ಕುಟುಂಬದೊಳಗಿನ ಸಂಬಂಧಗಳು ಸಾಂಪ್ರದಾಯಿಕ ನಿಯಮಗಳನ್ನು ಮೀರಿ ಆಧುನಿಕ ಔಪಚಾರಿಕ ಕಾನೂನಿನ ಕಕ್ಷೆಯೊಳಗೆ ಸೇರಿದುವು. ಯಜಮಾನನ ಸರ್ವಾಧಿಕಾರಿತ್ವವು ಸಹಜವಾಗಿ ಪ್ರಶ್ನಾರ್ಹವೂ ಅಪ್ರಸ್ತುತವೂ ಆಯಿತು.

೩. **ಸಾಂಸ್ಕೃತಿಕ ಚಳುವಳಿಗಳು :** ವಿಜ್ಞಾನದ ಬೆಳವಣಿಗೆಯು ತಾಂತ್ರಿಕ ಅಭಿವೃದ್ಧಿಗೆ ಮೂಲವಾಯಿತು. ಆರ್ಥಿಕ ಪರಿವರ್ತನೆಗಳಿಂದಾಗಿ ಸಾಮಾಜಿಕ ಸಂಬಂಧಗಳು, ಆಚಾರ ವಿಚಾರಗಳು, ಮೌಲ್ಯ-ಆದರ್ಶಗಳು ಬದಲಾಗಿವೆ. ಒಟ್ಟಿನಲ್ಲಿ ಸಾಂಸ್ಕೃತಿಕ ಬದಲಾವಣೆ ಸಂಭವಿಸಿದ್ದಲ್ಲದೆ ಹೆಣ್ಣಿನ ಸ್ಥಾನಮಾನಗಳು ಗಂಡಿಗೆ ಸಮಾನವಾಗಿ ನೆಲೆಸಿದುವು. ಇದರಿಂದಾಗಿ ನವವಿವಾಹಿತ ದಂಪತಿಗಳು ತಮ್ಮ ಹೆತ್ತವರ ಮನೆಯನ್ನು ಆಶ್ರಯಿಸದೆ ಸ್ವಂತ ಮನೆ ಸ್ಥಾಪಿಸಿದ ಕುಟುಂಬಗಳಾಗಿದ್ದವು. ಇಂಥಲ್ಲಿ ಹೆಚ್ಚು ಆತ್ಮೀಯವಾದ ಹಾಗೂ ಸಮಾನತೆಯ ಸಂಬಂಧಗಳು ಕಂಡುಬಂದವು. ಹೀಗೆ ಪಿತೃಪ್ರಧಾನ ಕುಟುಂಬವು ಆಧುನಿಕ ಯುಗದಲ್ಲಿ ತನ್ನ ಮೂಲದ ಅರ್ಥವನ್ನೂ, ಸ್ವರೂಪವನ್ನೂ ಕಳೆದುಕೊಂಡಿದೆ.

ಸಮಾನತೆಯ ಹೊಸ ಮೌಲ್ಯಗಳುಳ್ಳ ಸಮಾಜದಲ್ಲೂ ಪಿತೃಪ್ರಧಾನ ಕುಟುಂಬದ ಅನೇಕ ಲಕ್ಷಣಗಳು ಮುಂದುವರಿದು ಬಂದಿವೆಯೆನ್ನಬಹುದು. ಉದಾಹರಣೆಗೆ, ಪಿತೃ ವಂಶಾವಳಿಯ ಅನುಸರಣೆ, ತಂದೆಯಿಂದ ಗಂಡುಮಕ್ಕಳಿಗೆ ಆಸ್ತಿಹಕ್ಕು (ಇತ್ತೀಚೆಗೆ ಹೆಣ್ಣು ಮಕ್ಕಳಿಗೂ ಆಸ್ತಿ ಹಕ್ಕಿನ ಶಾಸನ ಬಂದಿದೆ), ವಿವಾಹಾನಂತರ ಹೆಣ್ಣು ತನ್ನ ತವರುಮನೆಯ ಹೆಸರನ್ನು ಬಿಟ್ಟು ಗಂಡನ ಮನೆತನದ ಹೆಸರನ್ನು ಪಡೆಯುವುದು, ಸ್ವಲ್ಪಮಟ್ಟಿಗೆ ಗಂಡನ ಅವಲಂಬಿಯಾಗಿ ಕುಟುಂಬದ ಕಾರ್ಯಗಳನ್ನು ನಿರ್ವಹಿಸುವುದು, ಗಂಡುಮಗು ಬೇಕೆಂಬ ಬಯಕೆ ಇತ್ಯಾದಿ ಈಗಲೂ ಕಂಡುಬರುವ ಪಿತೃಪ್ರಧಾನ ಕುಟುಂಬದ ಲಕ್ಷಣಗಳಾಗಿವೆ.

ಕುಟುಂಬದಲ್ಲಿ ಇತ್ತೀಚಿನ ಪರಿವರ್ತನೆಗಳು

ಈ ಮೊದಲು ಕುಟುಂಬದ ಎರಡು ಮುಖ್ಯ ವಿಧಗಳಾದ ಮಾತೃಮೂಲೀಯ ಕುಟುಂಬ ಮತ್ತು ಪಿತೃಪ್ರಧಾನ ಕುಟುಂಬಗಳ ಬಗ್ಗೆ ವಿವರವಾಗಿ ಅಧ್ಯಯನ ನಡೆಸಿದೆವು. ಇವಲ್ಲದೆ, ಕುಟುಂಬದ ಇನ್ನೂ ಎರಡು ಪ್ರಧಾನ ಪ್ರಕಾರಗಳಿವೆ. ಅವುಗಳೆಂದರೆ, ೧. ಅವಿಭಕ್ತ ಕುಟುಂಬ ಮತ್ತು ೨. ಅಣುಕುಟುಂಬ. ಈ ಎರಡು ವಿಧಗಳನ್ನು ಈಗ ಅಭ್ಯಸಿಸೋಣ.

೧. ಅವಿಭಕ್ತ ಕುಟುಂಬ

ನಿಕಟ ರಕ್ತಸಂಬಂಧಿಗಳ ಸಮೂಹವು ಒಂದೇ ಮನೆಯಲ್ಲಿ ವಾಸಿಸಿ, ಒಂದೇ ಒಲೆಯಲ್ಲಿ ತಯಾರಿಸಿದ ಅಡುಗೆ ಉಂಡು, ಆಸ್ತಿಯ ಮೇಲೆ ಸಮಾನ ಒಡೆತನ ಹೊಂದಿರುತ್ತ, ಕುಟುಂಬದ ಪೂಜಾಕಾರ್ಯಗಳಲ್ಲಿ ಸಾಮೂಹಿಕವಾಗಿ ಪಾಲ್ಗೊಳ್ಳುತ್ತಿದ್ದರೆ ಅದನ್ನು ಅವಿಭಕ್ತ ಕುಟುಂಬ ಎಂದು ಕರೆಯಬಹುದು ಎಂಬುದಾಗಿ ಪ್ರಸಿದ್ಧ ಸಮಾಜಶಾಸ್ತ್ರಜ್ಞೆ **ಇರಾವತಿ ಕರ್ವೆ** ತಿಳಿಸಿದ್ದಾರೆ. ಅವಿಭಕ್ತ ಅಥವಾ ವಿಸ್ತೃತ ಕುಟುಂಬವು ಭಾರತೀಯ ಸಮಾಜದ ಒಂದು ವೈಶಿಷ್ಟ್ಯವಾಗಿದೆ. ಇದರಲ್ಲಿ ಕನಿಷ್ಠ ಮೂರು ಪೀಳಿಗೆಯ ಜನರು ಕೂಡಿರುತ್ತಾರೆ. ವಿವಾಹದ ನಂತರವೂ ಮಗನು ತನ್ನ ಪತ್ನಿಯ ಜೊತೆಯಲ್ಲಿ, ಮಾತಾಪಿತರೊಡನೆ ವಾಸಿಸುತ್ತಾನೆ; ಹಾಗೂ ಊಟೋಪಚಾರ, ಕುಟುಂಬದ ಆಸ್ತಿಗಳಲ್ಲಿ ಸಹಭಾಗಿಯಾಗಿರುತ್ತಾನೆ. ಅವನ ಮಕ್ಕಳು ಸಹ ಅವರೊಡನೆ ವಾಸವಾಗುತ್ತಾರೆ. ಒಮ್ಮೊಮ್ಮೆ ಅವಿಭಕ್ತ ಕುಟುಂಬದಲ್ಲಿ ತಾತ-ಅಜ್ಜಿ, ತಂದೆ-ತಾಯಿ, ಚಿಕ್ಕಪ್ಪ-ಚಿಕ್ಕಮ್ಮ, ಮಕ್ಕಳು, ಮೊಮ್ಮಕ್ಕಳು ಹೀಗೆ ಅನೇಕ ಜನ ಸದಸ್ಯರಿರುತ್ತಾರೆ.

ಅವಿಭಕ್ತ ಕುಟುಂಬದ ಗುಣಲಕ್ಷಣಗಳೆಂದರೆ ವಿಶಾಲ ಗಾತ್ರ, ಸಮಾನ ನೆಲೆ, ಸಮಾನ ಆಸ್ತಿ (ಉತ್ಪಾದನೆ, ಆಸ್ತಿಯ ಹಂಚಿಕೆ, ಅನುಭೋಗಗಳಲ್ಲಿ ಎಲ್ಲರಿಗೂ ಸಹಭಾಗಿತ್ವ), ಸಹಕಾರೀ ಭಾವನೆ ಮತ್ತು ಸಮಾನ ಧಾರ್ಮಿಕ ಸಂಪ್ರದಾಯಗಳು. ಕೃಷಿ ಆಧಾರಿತ ಅವಿಭಕ್ತ ಕುಟುಂಬವು ಒಂದು ಉತ್ಪಾದನಾ ಘಟಕವೆನ್ನಬಹುದು. ಅವಿಭಕ್ತ ಕುಟುಂಬದ ಸದಸ್ಯರೆಲ್ಲರೂ ಕೆಲವು ಕರ್ತವ್ಯಗಳನ್ನೂ, ಹಕ್ಕುಭಾದ್ಯತೆಗಳನ್ನೂ ಹೊಂದಿರುತ್ತಾರೆ. ಕುಟುಂಬದ ಯಜಮಾನರಿಗೆ ಹೆಚ್ಚಿನ ಅಧಿಕಾರಿಗಳೂ, ಸೌಲಭ್ಯಗಳೂ ಇರುತ್ತವೆ. ಶ್ರಮ ವಿಭಜನೆಯಲ್ಲಿ ವಯಸ್ಸು, ಲಿಂಗಗಳನ್ನು ಗಮನಿಸಿ, ಸದಸ್ಯರ ಹೊಣೆಯನ್ನು ನಿಗದಿಪಡಿಸಲಾಗುತ್ತದೆ.

ಅವಿಭಕ್ತ ಕುಟುಂಬಗಳೆಲ್ಲವೂ ಪಿತೃಪ್ರಧಾನವಾಗಿವೆ ಎನ್ನಬಹುದು. ಮನೆಯಲ್ಲಿ ಹಿರಿಯನಾದ ತಂದೆ ಕುಟುಂಬದ ನಿರ್ವಹಣೆ ನೋಡಿಕೊಳ್ಳುತ್ತಾನೆ; ಎಲ್ಲ ವ್ಯವಹಾರಗಳಲ್ಲೂ ಆತನದೇ ಅಂತಿಮ ನಿರ್ಣಯ. ಪುರುಷ ಸದಸ್ಯರು ಕುಟುಂಬದ ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತ, ಸ್ತ್ರೀಯರು ಅಡುಗೆ-ಊಟದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದ ಈ ಬಗೆಯ ಕುಟುಂಬ ಪದ್ಧತಿಯು ವ್ಯವಸಾಯ ಪ್ರಧಾನ ಸಮಾಜಗಳಲ್ಲಿ ಹೆಚ್ಚಾಗಿ ಬಳಕೆಯಲ್ಲಿತ್ತು.

ಕುಟುಂಬದ ಎಲ್ಲ ಸದಸ್ಯರೂ ಒಂದೇ ಮನೆಯಲ್ಲಿ ವಾಸಿಸುತ್ತ, ಒಂದೇ ಅಡುಗೆ ಮನೆ ಮತ್ತು ಪೂಜಾಸ್ಥಾನ ಹೊಂದಿದ್ದರು. ಆಸ್ತಿಯ ಮೇಲೆ ಎಲ್ಲರಿಗೂ ಅಧಿಕಾರವಿತ್ತು. ಎಲ್ಲ ಸದಸ್ಯರಿಗೂ ತಮ್ಮ ಅವಶ್ಯಕತೆಗನುಗುಣವಾಗಿ ವೆಚ್ಚಮಾಡುವ ಅವಕಾಶವಿತ್ತು.

ಅವಿಭಕ್ತ ಕುಟುಂಬ ಅನೇಕ ಅನುಕೂಲತೆಗಳನ್ನು ಹೊಂದಿದೆ. ಕೃಷಿ ಕುಟುಂಬಗಳಾದರೆ, ಶ್ರಮವಿಭಜನೆಯಿಂದಾಗಿ ಬೇಸಾಯದಲ್ಲಿ ಉತ್ಪಾದನೆ ಹೆಚ್ಚುತ್ತದೆ. ಅವಿಭಕ್ತ ಕುಟುಂಬವು ಸದಸ್ಯರ ದೈಹಿಕ ಮತ್ತು ಮಾನಸಿಕ ದುರ್ಬಲರಿಗೆ 'ಜೀವವಿಮೆ'ಯ ರೂಪದಲ್ಲಿ ಭದ್ರತೆಯನ್ನು ಒದಗಿಸುತ್ತದೆ. ಹಿರಿಯರ ಮಾರ್ಗದರ್ಶನದಲ್ಲಿ ಕಿರಿಯರು ನೈತಿಕ ಮೌಲ್ಯಗಳನ್ನು ಬೆಳೆಸಿಕೊಳ್ಳಬಹುದಾದುದರಿಂದ ಅದೊಂದು ಶಾಲೆಯಂತಿದೆ. ಉತ್ತಮ ಗುಣನಡತೆಯ ಬೆಳವಣಿಗೆಗೆ ಅವಿಭಕ್ತ ಕುಟುಂಬದಲ್ಲಿ ಸದವಕಾಶವಿದೆ. ಅದು ಸದಸ್ಯರೊಳಗೆ ಸಹಕಾರವನ್ನು ಬೆಳೆಸುತ್ತದೆ. ಮುಖ್ಯವಾಗಿ ಅವಿಭಕ್ತ ಕುಟುಂಬವು ಆಸ್ತಿವಿಭಜನೆಯನ್ನು ತಡೆಗಟ್ಟುವುದರಿಂದ ಕೃಷಿಭೂಮಿಯ ಮರುವಿಭಜನೆ ಮತ್ತು ಛಿದ್ರೀಕರಣಗಳಾಗುವುದಿಲ್ಲ.

ಇಷ್ಟೆಲ್ಲ ಅನುಕೂಲತೆಗಳಿದ್ದರೂ ಅವಿಭಕ್ತ ಕುಟುಂಬದಲ್ಲಿ ಕೆಲವು ಅನನುಕೂಲತೆಗಳೂ ಇರುತ್ತವೆ. ಇಲ್ಲಿ ವ್ಯಕ್ತಿಗಳಿಗೆ ಮುಖ್ಯವಾಗಿ ಕಿರಿಯರಿಗೆ ಸಂಪೂರ್ಣ ಸ್ವಾತಂತ್ರ್ಯ, ಸ್ವಾಯತ್ತತೆಗಳಿರದ ಕಾರಣ ಅವರ ಪುರೋಭಿವೃದ್ಧಿಗೆ ಹೆಚ್ಚಿನ ಅವಕಾಶಗಳು ಒದಗಲಾರವು. ಸ್ತ್ರೀಯರು ಅಡುಗೆ ಮನೆಯ ಪರಿಮಿತಿಯೊಳಗೇ ಸೇರುವುದರಿಂದ ಅವರಿಗೆ ತಮ್ಮ ಪ್ರತಿಭೆಯನ್ನು ವ್ಯಕ್ತಪಡಿಸಲು ಅವಕಾಶವಿರುವುದಿಲ್ಲ. ಅವಿಭಕ್ತ ಕುಟುಂಬದಲ್ಲಿ ಕೆಲ ಸದಸ್ಯರು ಕಷ್ಟಪಟ್ಟು ದುಡಿದರೆ, ಇನ್ನು ಕೆಲವರು ಆಲಸಿಗಳಾಗಿ ಕಾಲಹರಣ ಮಾಡಬಹುದು. ಆದರೆ ಈ ಎರಡು ವರ್ಗಗಳು ಸಮಾನ ಸೌಲಭ್ಯ ಪಡೆಯುವುದರಿಂದ ಸೋಮಾರಿತನಕ್ಕೆ ಉತ್ತೇಜನ ದೊರಕಿದಂತಾಗುತ್ತದೆ. ಮಕ್ಕಳ ಯೋಗಕ್ಷೇಮ ಇಡೀ ಕುಟುಂಬದ ಹೊಣೆಯಾಗಿರುವುದರಿಂದ ಜನನ ನಿಯಂತ್ರಣದ ಬಗ್ಗೆ ಯಾರು ಹೆಚ್ಚಿನ ಆಸಕ್ತಿ ತೋರುವುದಿಲ್ಲ.

ಆಧುನಿಕ ಶಿಕ್ಷಣ, ನಗರೀಕರಣ, ಉದ್ಯೋಗದ ಅವಕಾಶಗಳು ಇವುಗಳಿಂದಾಗಿ ಇಂದು ಅವಿಭಕ್ತ ಕುಟುಂಬ ಪದ್ಧತಿ ತನ್ನ ಪ್ರಾಮುಖ್ಯತೆ ಕಳೆದುಕೊಂಡಿದೆ. ನವ ವಿವಾಹಿತರು ಅವಿಭಕ್ತ ಕುಟುಂಬಗಳನ್ನು ತೊರೆದು ತಮ್ಮದೇ ಆದ ಪ್ರತ್ಯೇಕ ಅಣುಕುಟುಂಬಗಳನ್ನು ಸ್ಥಾಪಿಸಿಕೊಳ್ಳುತ್ತಿದ್ದಾರೆ. ಇದರಿಂದ ವೃದ್ಧ ತಂದೆ-ತಾಯಿ, ವಿಧವೆಯರು, ಅನಾಥರು, ಅಬಲೆಯರಿಗೆ ಹೊಣೆ ಯಾರೆಂಬ ಪ್ರಶ್ನೆ ಬೃಹದಾಕಾರವಾಗಿ ಬೆಳೆದು ನಿಂತಿದೆ.

೨. ಅಣು ಕುಟುಂಬ

ಕುಟುಂಬದಲ್ಲಿ ವಿವಾಹಿತ ಪತಿ-ಪತ್ನಿ, ಇಲ್ಲವೆ ತಂದೆ-ತಾಯಿ, ಮಕ್ಕಳು ಮಾತ್ರ ವಾಸಿಸುತ್ತಿದ್ದಲ್ಲಿ ಅದೊಂದು ಮೂಲ ಅಥವಾ ಪ್ರಾಥಮಿಕ ಕುಟುಂಬವೆನ್ನಿಸಿಕೊಳ್ಳುತ್ತದೆ. ಈ ರೀತಿ ಪತಿ, ಪತ್ನಿ, ಅವಿವಾಹಿತ ಮಕ್ಕಳಿದ್ದು, ಬೇರೆ ಯಾವ ಸಂಬಂಧಿಗಳು ಅಥವಾ ಆಶ್ರಿತರು ನೆಲಸದ ಪಕ್ಷದಲ್ಲಿ ಈ ಘಟಕವು ಅಣುಕುಟುಂಬವೆನ್ನಿಸುತ್ತದೆ.

ಇಂತಹ ಅಣುಕುಟುಂಬವು ಪೂರ್ಣ ಸ್ವಾಯತ್ತತೆ ಪಡೆದಿದ್ದು, ಹಿರಿಯರ ನಿಯಂತ್ರಣದಲ್ಲಿರುವುದಿಲ್ಲ. ನವವಿವಾಹಿತರು ಪ್ರತ್ಯೇಕ ಮನೆಯಲ್ಲಿ, ತಮ್ಮ ತಂದೆ, ತಾಯಿ, ತಾತ, ಅಜ್ಜಿ ಮೊದಲಾದವರಿಂದ ಬೇರೆಯಾಗಿ ವಾಸಿಸುತ್ತಾರೆ ಮತ್ತು ಅವರೊಳಗಿನ ಅವಲಂಬನೆ ಕನಿಷ್ಠ ಪ್ರಮಾಣದಲ್ಲಿರುತ್ತದೆ. ಈ ಕುಟುಂಬದ ಸದಸ್ಯರು ತಮ್ಮ ಅಭಿಪ್ರಾಯ, ನಿರ್ಧಾರ, ತೀರ್ಮಾನಗಳನ್ನು ತಾವೇ ರೂಪಿಸಿಕೊಳ್ಳಲು ಸ್ವತಂತ್ರರಾಗಿದ್ದಾರೆ. ಆದರೆ ಅವಿಭಕ್ತ ಕುಟುಂಬಗಳಿಗೆ ತುಲನೆಮಾಡಿದಾಗ ಈ ಕುಟುಂಬಗಳ ಕಾರ್ಯವ್ಯಾಪ್ತಿಯು ಬಹಳ ಕಡಿಮೆಯಾಗಿರುತ್ತದೆ.

ಅವಿಭಕ್ತ ಕುಟುಂಬದ ಸದಸ್ಯರು ಉದ್ಯೋಗ ನಿಮಿತ್ತ ಹೊರ ಊರುಗಳಲ್ಲಿ ವಾಸಿಸ ಬೇಕಾದಾಗ, ತಮ್ಮದೇ ಆದ ಪ್ರತ್ಯೇಕ ಚಿಕ್ಕ ಸಂಸಾರ ಹೂಡುತ್ತಾರೆ. ಆಧುನಿಕ ಕಾಲದಲ್ಲಿ ಹೆಚ್ಚಿನ ಕುಟುಂಬಗಳು ಇಂತಹ ಅಣುಕುಟುಂಬಗಳೇ ಆಗಿವೆ. ಇಂತಹ ಕುಟುಂಬಗಳಲ್ಲಿ ಗಂಡ-ಹೆಂಡಿರ ನಡುವೆ, ತಂದೆ, ತಾಯಿ, ಮಕ್ಕಳ ನಡುವೆ ಅನ್ಯೋನ್ಯತೆ ಬೆಳೆಯುತ್ತದೆ. ಈಗಿನ ಯುವಕ-ಯುವತಿಯರು ಮದುವೆಯಾಗಿ ಪ್ರತ್ಯೇಕವಾಗಿ ನೆಲಸುವ ಹಂಬಲ ಹೊಂದಿರುತ್ತಾರೆ. ಅವಿಭಕ್ತ ಕುಟುಂಬದ ಸದಸ್ಯರಿಗೆ ಆರ್ಥಿಕ ಅಥವಾ ಇತರ ಸಂಗತಿಗಳಲ್ಲಿ ಯಾವುದೇ ತೀರ್ಮಾನ ಕೈಗೊಳ್ಳುವ ಸ್ವಾತಂತ್ರ್ಯ ಇಲ್ಲದಿರುವುದೂ, ಅಣುಕುಟುಂಬಗಳ ಸ್ಥಾಪನೆಗೆ ಇನ್ನೊಂದು ಪ್ರಮುಖ ಕಾರಣವಾಗಿದೆ. ಪಾಶ್ಚಿಮಾತ್ಯ ಸಾಮಾಜಿಕ ಜೀವನದ ಅನುಕರಣೆಯಿಂದ - ಅವರ ವೈಯಕ್ತಿಕ ಭಾವನೆಗಳು, ಜೀವನದ ರೀತಿ-ನೀತಿಗಳಿಂದ - ಯುವ ಪೀಳಿಗೆ ಪ್ರಭಾವಿತವಾಗುತ್ತಿರುವುದು ಅವಿಭಕ್ತ ಕುಟುಂಬಗಳಿಂದ ಬೇರೆಯಾಗಿ ಅಣು ಕುಟುಂಬಗಳ ಸ್ಥಾಪನೆಗೆ ಕಾರಣವಾಗುತ್ತದೆ.

೩. ಕುಟುಂಬದಲ್ಲಿ ಪರಿವರ್ತನೆ

ಕೈಗಾರಿಕಾ ಕ್ರಾಂತಿಯ ಬಳಿಕ ಉಂಟಾದ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಬದಲಾವಣೆಗಳು ಕುಟುಂಬದ ರಚನೆ ಹಾಗೂ ಕಾರ್ಯಗಳಲ್ಲಿ ಅನೇಕ ಬದಲಾವಣೆಗಳನ್ನುಂಟುಮಾಡಿವೆ. ಕೃಷಿಪ್ರಧಾನ ಸಮಾಜದ ಕೂಡು ಕುಟುಂಬದ ಯುಗವು ಕಳೆದು ಗಂಡ-ಹೆಂಡತಿ, ಮಕ್ಕಳು ಮಾತ್ರ ಇರುವ ಅಣು ಕುಟುಂಬಗಳು ವ್ಯಾಪಕತೆ ಪಡೆದಿವೆ. ಗಂಡು ಮತ್ತು ಹೆಣ್ಣು ಇಬ್ಬರೂ ತಮ್ಮ ಹೆತ್ತವರ ಕುಟುಂಬಗಳಿಂದ ಪ್ರತ್ಯೇಕಗೊಂಡು ತಮ್ಮದೇ ಆದ ಮನೆಯನ್ನು ಸ್ಥಾಪಿಸುವ ಪರಿಪಾಠ ಹೆಚ್ಚಿದೆ. ಈಗ ಹೆಣ್ಣಿಗೆ ವಿವಾಹವು ತ್ಯಾಗ ಮತ್ತು ಕರ್ತವ್ಯಗಳ ಸಂಬಂಧವಾಗಿರದೆ ಹಕ್ಕುಭಾದ್ಯತೆಯ ಸಂಬಂಧವಾಗಿ ಮಾರ್ಪಡುತ್ತಿದೆ. ಇದು ವಿವಾಹ ವಿಚ್ಛೇದನದ ಅನಿವಾರ್ಯತೆಯನ್ನೂ ಮಹತ್ವವನ್ನೂ ಹೆಚ್ಚಿಸಿದೆ. ಹೀಗೆ ಆಧುನಿಕ ಯುಗದಲ್ಲಿ ಪರಿವರ್ತನೆಗೊಳಗಾದ ಕುಟುಂಬದ ಲಕ್ಷಣಗಳನ್ನು ನಾವು ಈ ಕೆಳಗಿನಂತೆ ವಿಶ್ಲೇಷಿಸಬಹುದು :

೧. ಗಂಡ-ಹೆಂಡಿರ ನಡುವೆ ಸಮಾನತೆ

ಆಧುನಿಕ ಕುಟುಂಬದಲ್ಲಿ ಹೆಣ್ಣು ತ್ಯಾಗಮಯಿಯೂ ಅಲ್ಲ, ಸೇವಾಕಾಂಕ್ಷಿಯೂ ಅಲ್ಲ.

ಅವಳು ಕುಟುಂಬದ ನಿರ್ವಹಣೆಯಲ್ಲಿ ಸಮಾನ ಪಾಲುದಾರ(Equal Partner)ಳಾಗಿದ್ದಾಳೆ. ಗಂಡನು ಯಜಮಾನನಂತೆ ಆದೇಶ ನೀಡುವುದಿಲ್ಲ; ತನ್ನ ಅಭಿಪ್ರಾಯ ಹಾಗೂ ವಿಚಾರಗಳನ್ನು ತಿಳಿಸುತ್ತಾನೆ. ಹೀಗೆ ಆಧುನಿಕ ಕುಟುಂಬದಲ್ಲಿ ಗಂಡ ಹೆಂಡಿರ ನಡುವೆ ಸಮಾನತೆಯೂ ಅದರಿಂದಾಗಿ ಸಾಮರಸ್ಯವೂ ಇರುತ್ತದೆ. ಇದಕ್ಕೆ ಸ್ತ್ರೀಯರ ವಿದ್ಯಾಭ್ಯಾಸವೂ ಆತ್ಮಗೌರವದ ಎಚ್ಚರಿಕೆಯೂ ಕಾರಣವಾಗಿದೆಯೆನ್ನಬಹುದು.

೨. ಸಂಗಾತಿಗಳ ಆಯ್ಕೆ

ವಿವಾಹದಲ್ಲಿ ಸಂಗಾತಿಯ ಆಯ್ಕೆಯ ಹೊಣೆಗಾರಿಕೆಯು ತಂದೆ ತಾಯಿಗಳ ಮೇಲೆ ಇರದೆ, ಯುವಕ-ಯುವತಿಯರು ತಾವೇ ಪಡೆದಿದ್ದಾರೆ. ವಿದ್ಯಾವಂತರ ಸಮಾಜದಲ್ಲಿ ಗಂಡು-ಹೆಣ್ಣು ವಿವಾಹ ಪೂರ್ವದಲ್ಲಿ ಸಾಕಷ್ಟು ಪರಿಚಿತರಾಗಿದ್ದು ಪರಸ್ಪರ ಆಸಕ್ತಿ ಒಲವುಗಳನ್ನು ತಿಳಿದ ಬಳಿಕವೇ ವಿವಾಹವಾಗುವ ನಿರ್ಧಾರಕ್ಕೆ ಬರುತ್ತಾರೆ. ಆದುದರಿಂದ ಪ್ರೇಮ ವಿವಾಹದ ತಳಹದಿಯು ಕೌಟುಂಬಿಕ ಹಿನ್ನೆಲೆ; ಜಾತಿ, ಕುಲ ಇತ್ಯಾದಿಗಳಲ್ಲ.

೩. ಆರ್ಥಿಕ ಸ್ವಾವಲಂಬನೆ

ಆಧುನಿಕ ಯುಗದಲ್ಲಿ ಸ್ತ್ರೀಯರೂ ಸಾಕಷ್ಟು ಸಂಖ್ಯೆಯಲ್ಲಿ ಉದ್ಯೋಗಿಗಳಾಗಿದ್ದಾರೆ. ಕಾರ್ಖಾನೆಗಳಲ್ಲಿ, ಕಚೇರಿಗಳಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚಿದೆ. ಉದ್ಯೋಗ ದಲ್ಲಿರುವ ಹೆಣ್ಣನ್ನೇ ವಿವಾಹವಾಗುವ ಪ್ರವೃತ್ತಿ ಯುವಕರಲ್ಲಿ ಬೆಳೆದಿದೆ. ಇದರಿಂದ ವಿವಾಹವಾಗುವ ಪ್ರಾಯವು ಹೆಚ್ಚಿದೆ. ಇಂದಿನ ದಿನಗಳಲ್ಲಿ ಗಂಡ-ಹೆಂಡತಿ ಇಬ್ಬರೂ ದುಡಿದು ಗಳಿಸಿದರೆ ಮಾತ್ರ ಕುಟುಂಬದ ಜೀವನಮಟ್ಟ ಏರುತ್ತದೆ. ಇದು ಕುಟುಂಬದ ಆರ್ಥಿಕ ಉನ್ನತಿಗಷ್ಟೇ ಅಲ್ಲದೆ ಸ್ತ್ರೀಯರ ಆರ್ಥಿಕ ಸ್ವಾವಲಂಬನೆಗೂ ಸಹಕಾರಿಯಾಗಿದೆ. ಪರಿಣಾಮವಾಗಿ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನದಲ್ಲಿ ಸುಧಾರಣೆ ಉಂಟಾಗಿದ್ದು, ಕುಟುಂಬದೊಳಗಿನ ಸಂಬಂಧಗಳನ್ನು ಗುಣಾತ್ಮಕವಾಗಿ ಪ್ರಭಾವಿಸಿದೆ.

೪. ನೈತಿಕ ಮೌಲ್ಯಗಳ ಪುನರ್ ವ್ಯಾಖ್ಯೆ

ಇಂದು ಹೆಣ್ಣು ನಾಲ್ಕು ಗೋಡೆಗಳ ನಡುವೆ ಬದುಕಿರುವ ಜೀವಿಯಲ್ಲ. ಆಧುನಿಕ ಹೆಣ್ಣು ತನ್ನ ಉದ್ಯೋಗದ ಸಂದರ್ಭದಲ್ಲಿ ಪರಪುರುಷರೊಡನೆ ಬೆರೆತು ದುಡಿಯಬೇಕಾಗುತ್ತದೆ. ಗಂಡಿಗೊಂದು ನೀತಿ, ಹೆಣ್ಣಿಗೊಂದು ನೀತಿ ಎಂಬ ಹಿಂದಿನ ಮೌಲ್ಯವು ಮರೆಯಾಗುತ್ತಿದ್ದು ಗಂಡ-ಹೆಂಡತಿಗೆ ಒಂದೇ ನೀತಿ ಎಂಬ ಮೌಲ್ಯವು ಪ್ರಚಲಿತವಾಗುತ್ತಿದೆ.

೫. ಚಿಕ್ಕ ಗಾತ್ರ

ಆಧುನಿಕ ಕುಟುಂಬದಲ್ಲಿ ಮಕ್ಕಳ ಜನನದ ಮೇಲೆ ನಿಯಂತ್ರಣವಿದ್ದು ಅದರ ಗಾತ್ರವು ಸಣ್ಣದಿರುತ್ತದೆ. ಇದು ಕುಟುಂಬದ ತಲಾ ಆದಾಯದ ಮಟ್ಟವನ್ನು ಉನ್ನತಗೊಳಿಸಲು ಸಹಾಯವಾಗುತ್ತದೆ. ಇದರಿಂದಾಗಿ ಮನೆಯಲ್ಲಿ ಅನೇಕ ಸೌಲಭ್ಯಗಳನ್ನು ರೂಪಿಸಿಕೊಳ್ಳಲು

ಬರುತ್ತದೆ. ಅಲ್ಲದೆ ಕುಟುಂಬದ ಕೆಲವೇ ಸದಸ್ಯರ ನಡುವೆ ಗಾಢವಾದ ಪ್ರೀತಿ-ಪ್ರೇಮ, ಸಹಕಾರ, ಅನುಕಂಪಗಳಿಗೆ ಅವಕಾಶವಾಗುತ್ತದೆ.

೬. ಮಾಧ್ಯಮಿಕ ಪ್ರಕಾರ್ಯಗಳಿಂದ ಬಿಡುಗಡೆ

ಕುಟುಂಬವು ನಿರ್ವಹಿಸಬೇಕಾದ ಶಿಕ್ಷಣ, ಆರ್ಥಿಕತೆ, ಧರ್ಮ, ಆರೋಗ್ಯ, ಮನರಂಜನೆ ಮುಂತಾದ ಕಾರ್ಯಗಳನ್ನು ಆಧುನಿಕ ಕುಟುಂಬವು ನಿರ್ವಹಿಸಲಾರದಾಗಿದೆ. ದುಡಿಯಲು ಹೊರಗೆ ಹೋಗಬೇಕಾದ ಕಾರಣ ಯಾರಿಗೂ ಯಾರ ಬಗ್ಗೆ ಲಕ್ಷಕೊಡಲು ಸಮಯ ಇರುವುದಿಲ್ಲ. ಹಾಗಾಗಿ ಮಕ್ಕಳ ಶಿಕ್ಷಣಕ್ಕೆ ಶಾಲೆ, ಆರೋಗ್ಯಕ್ಕೆ ಆಸ್ಪತ್ರೆ, ಮನರಂಜನೆಗೆ ಟಿ.ವಿ., ಕ್ಲಬ್ ಇತ್ಯಾದಿ ಬಾಹ್ಯ ಸಂಸ್ಥೆಗಳನ್ನೇ ಕುಟುಂಬವು ಆಶ್ರಯಿಸಿದೆ. ನಗರಗಳಲ್ಲಿ ತಮ್ಮ ದೈನಂದಿನ ಆಹಾರಕ್ಕೂ ಹೋಟೆಲುಗಳ ಮೇಲೆ ಹೊಂದಿಕೊಂಡಿರುವ ಕುಟುಂಬಗಳೂ ಇವೆ.

೭. ಶಿಶುಕೇಂದ್ರಿತ ಕುಟುಂಬ

ಹಿಂದಿನ ಕಾಲದ ಅಧಿಕಾರಯುತ ನಿಲುವು ಇಂದಿನ ಕುಟುಂಬಗಳಲ್ಲಿಲ್ಲ. ಹಿಂದೆ ಕಿರಿಯರ ಬೇಕು-ಬೇಡಗಳನ್ನೆಲ್ಲಾ ಹಿರಿಯರೇ ನಿರ್ಧರಿಸುತ್ತಿದ್ದರು. ಆದರೆ ಇಂದಿನ ಕುಟುಂಬಗಳಲ್ಲಿನ ಕಿರಿಯರ ಅಪೇಕ್ಷೆಗಳೇನೆಂದು ತಿಳಿದು ಅವುಗಳನ್ನು ಪೂರೈಸುವ ಪ್ರವೃತ್ತಿ ಹೆಚ್ಚಿದೆ. ಮಕ್ಕಳ ಆಸಕ್ತಿ ಹಾಗೂ ಕೌಶಲ್ಯಗಳಿಗೆ ಪ್ರೋತ್ಸಾಹ ಕೊಡುವುದು ಹೆತ್ತವರ ಕರ್ತವ್ಯವೆಂಬ ಪ್ರಜ್ಞೆ ಮೂಡಿದೆ.

ಆಧುನಿಕ ಯುಗಕ್ಕೆ ಸರಿಯಾಗಿ ಆಧುನಿಕ ಅಣು ಕುಟುಂಬದ ರಚನೆ ಹಾಗೂ ಕಾರ್ಯಗಳು ರೂಪುಗೊಂಡಿವೆಯೆನ್ನಬಹುದು. ಇದೊಂದು ಆದರ್ಶಸ್ವರೂಪವಲ್ಲದಿದ್ದರೂ ಇಂದಿನ ಕಾಲಕ್ಕೆ ಸೂಕ್ತವಾದ ಕುಟುಂಬ ಪದ್ಧತಿಯಾಗಿದೆ. ಏನಿದ್ದರೂ ಆಧುನಿಕ ಕುಟುಂಬದ ಸ್ಥಿರತೆ ಕಡಿಮೆಯಾಗುತ್ತಿದೆ. ದಂಪತಿಗಳ ನಡುವೆ ಅಪನಂಬಿಕೆ, ಅನೈತಿಕತೆಗೆ ಅವಕಾಶ, ವಿವಾಹೇರಿತರ ಸಂಬಂಧಗಳ ಬಗ್ಗೆ ಸಡಿಲ ನಿಲುವು, ಮಕ್ಕಳ ಲಾಲನೆ-ಪಾಲನೆಗೆ ಸಮಯದ ಕೊರತೆ ಹಾಗೂ ಮಕ್ಕಳ ಸಾಮಾಜೀಕರಣದಲ್ಲಿ ಅನಾಸಕ್ತಿ ಇತ್ಯಾದಿ ಅನೇಕ ಆಂತರಿಕ ಸಮಸ್ಯೆಗಳು ತೀವ್ರವಾಗಿ ಕಾಡುತ್ತಿವೆ. ಈ ಸಮಸ್ಯೆಗಳು ತೀವ್ರಗೊಂಡು ವಿವಾಹ ಸ್ಫೋಟಿಸಿದಾಗ ವಿಚ್ಛೇದನವೇ ಪರಿಹಾರೋಪಾಯವಾಗುತ್ತದೆ. ಆದರೆ ಹೆಚ್ಚುತ್ತಿರುವ ವಿಚ್ಛೇದನಗಳು ಸಾಮಾಜಿಕ ಅಸ್ಥಿರತೆಗೆ ಅಸ್ತಿವಾರ ಹಾಕುತ್ತವೆ. ಸಮಾಜದಲ್ಲಿ ಅಪಮಾರ್ಗಿಗಳ ಸಂಖ್ಯೆ ಹೆಚ್ಚುತ್ತಿದೆ. ಆದುದರಿಂದ ಆಧುನಿಕ ಕುಟುಂಬದ ಸಮಸ್ಯೆಗಳಿಗೆ ಪರಿಹಾರಗಳನ್ನೂ ಅದರ ಸ್ಥಿರತೆ ಮಾರ್ಗೋಪಾಯಗಳನ್ನೂ ಕಂಡುಕೊಳ್ಳಬೇಕಾದುದು ಇಂದಿನ ಸಾಮಾಜಿಕ ಅಗತ್ಯವಾಗಿದೆ. ಖಂಡಿತವಾಗಿಯೂ ಸಮಾಜಶಾಸ್ತ್ರವು ಈ ವಿಚಾರದಲ್ಲಿ ಉಪಯುಕ್ತ ಸಲಹೆಗಳನ್ನು ಕೊಡಬಲ್ಲುದಾಗಿದೆ.

ಪುರಾತನ ಮತ್ತು ಆಧುನಿಕ ಕುಟುಂಬಗಳ ತುಲನೆ

ಸ್ವರೂಪ, ರಚನೆ ಮತ್ತು ಪ್ರಕಾರ್ಯಗಳಲ್ಲಿ ಪುರಾತನ ಅವಿಭಕ್ತ ಕುಟುಂಬಗಳೊಳಗೂ,

ಆಧುನಿಕ ಅಣುಕುಟುಂಬಗಳೊಳಗೂ ಅನೇಕ ವ್ಯತ್ಯಾಸಗಳಿವೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಕೆಳಗೆ ನಮೂದಿಸಲಾಗಿದೆ :

೧. ಪ್ರಾಚೀನ ಕುಟುಂಬಗಳು ಅವಿಭಕ್ತ ಅಥವಾ ವಿಸ್ತೃತವಾಗಿದ್ದುವು. ಆಧುನಿಕ ಕುಟುಂಬಗಳು ಅಣುಕುಟುಂಬವಾಗಿದ್ದು, ಚಿಕ್ಕಗಾತ್ರ ಹೊಂದಿವೆ.

೨. ಹಿಂದೆ ವಿವಾಹಗಳು ಹಿರಿಯರ ಒಪ್ಪಿಗೆಯಿಂದ ನೆರವೇರಲ್ಪಡುತ್ತಿದ್ದವು. ಇಲ್ಲಿ ಪುರುಷ ಪ್ರಾಧಾನ್ಯತೆ ಮತ್ತು ಸ್ತ್ರೀ ವಿಧೇಯತೆ ಆಧಾರವಾಗಿದ್ದಿತು. ಆಧುನಿಕ ಕುಟುಂಬಗಳಲ್ಲಿ ವ್ಯಕ್ತಿಗಳು ವಿವಾಹದ ವಿಚಾರದಲ್ಲಿ ಪೂರ್ಣ ಸ್ವಾತಂತ್ರ್ಯ ಪಡೆದಿದ್ದಾರೆ. ಇವರ ಒಪ್ಪಿಗೆಯ ಬಳಿಕವೇ ಹಿರಿಯರು ವಿವಾಹ ನಿಷ್ಕರ್ಷೆ ಮಾಡಬಹುದಾಗಿದೆ.

೩. ಆಧುನಿಕ ಕುಟುಂಬದಲ್ಲಿ ಲೈಂಗಿಕ ಇಚ್ಛೆ ಪೂರೈಕೆಗೆ ಹೆಚ್ಚಿನ ನಿರ್ಬಂಧಗಳಿರುವುದಿಲ್ಲ. ಗರ್ಭನಿರೋಧಕ ಸಾಧನಗಳ ಬಳಕೆ ಹೆಚ್ಚಾಗುತ್ತಿರುವುದರಿಂದ ಇದು ಸಾಧ್ಯವಾಗಿದೆ.

೪. ಹಿಂದಿನ ಕುಟುಂಬಗಳಲ್ಲಿ ಮಕ್ಕಳ ಪಾಲನೆ ಪೋಷಣೆಗಳು ಮೂಲಭೂತ ಕರ್ತವ್ಯಗಳಾಗಿದ್ದುವು. ಆಧುನಿಕ ಕುಟುಂಬಗಳು ಪ್ರಸೂತಿಗೃಹ, ಶಿಶುವಿಹಾರ, ಶಿಶುಪಾಲನಾ ಕೇಂದ್ರ ಮುಂತಾದ ಬಾಹ್ಯಘಟಕಗಳ ಮೇಲೆ ಹೆಚ್ಚಾಗಿ ಅವಲಂಬಿಸಿರುತ್ತವೆ.

೫. ಪ್ರಾಚೀನ ಕುಟುಂಬಗಳು ಆರ್ಥಿಕ ಚಟುವಟಿಕೆಯ ಕೇಂದ್ರಗಳಾಗಿ ಸ್ವ-ಪರಿಪೂರ್ಣತೆಯನ್ನು ಹೊಂದಿದ್ದವು. ಆಧುನಿಕ ಕುಟುಂಬದಲ್ಲಿ ಸದಸ್ಯರು ಕುಟುಂಬದ ಹೊರಗೆ ಉದ್ಯೋಗಗಳಲ್ಲಿ ನಿರತರಾಗಿರುತ್ತಾರೆ. ಅದಲ್ಲದೆ ಅನೇಕ ಕೌಟುಂಬಿಕ ಕಾರ್ಯಗಳನ್ನು ನಿರ್ವಹಿಸಲು ಗಿರಣಿ, ಉಪಾಹಾರ ಗೃಹ, ಲಾಂಡ್ರಿ, ಹಾಲಿನಡ್ಯೆರಿ ಮೊದಲಾದ ಘಟಕಗಳಿವೆ.

೬. ಪ್ರಾಚೀನ ಕುಟುಂಬಗಳಲ್ಲಿ ಧಾರ್ಮಿಕ ಪದ್ಧತಿಗಳು, ಆಚಾರ-ಸಂಪ್ರದಾಯಗಳು ಹಾಗೂ ಪೂಜಾವಿಧಿಗಳು ಆಚರಣೆಯಲ್ಲಿದ್ದವು. ಆಧುನಿಕ ಕುಟುಂಬದಲ್ಲಿ ಇವುಗಳ ಬಗ್ಗೆ ನಿಷ್ಠೆ ಕಡಿಮೆಯಾಗುತ್ತಿದೆ; ವಿವಾಹ ಪದ್ಧತಿಗಳಲ್ಲೂ ಅನೇಕ ಪರಿವರ್ತನೆಗಳಾಗ ತೊಡಗಿವೆ.

೭. ಹಿಂದಿನ ಕಾಲದ ಕುಟುಂಬಗಳು ಸ್ವಪರಿಪೂರ್ಣವಾಗಿದ್ದುವು. ಅವುಗಳಲ್ಲಿ ಅಪರಾಧಿಗೆ ಶಿಕ್ಷೆ, ರೋಗಿಗಳಿಗೆ ಶುಶ್ರೂಷೆ, ಅಬಾಲವೃದ್ಧರ ಸಂರಕ್ಷಣೆ ಮೊದಲಾದವುಗಳಿಗೆ ಅವಕಾಶವಿದ್ದಿತು. ಆದರೆ ಆಧುನಿಕ ಕುಟುಂಬಗಳು ಈ ಕರ್ತವ್ಯಗಳಿಂದ ಹೊರತಾಗಿದ್ದು, ಆಸ್ಪತ್ರೆ, ಆಶ್ರಮ, ಆರಕ್ಷಕ ಠಾಣೆಗಳ ಆಶ್ರಯ ಪಡೆಯಬೇಕಾಗುತ್ತಿದೆ.

೮. ಪುರಾತನ ಕುಟುಂಬಗಳು ವಿದ್ಯಾಕೇಂದ್ರಗಳಾಗಿದ್ದುವು. ಮಕ್ಕಳಿಗೆ ಓದುವುದು, ಬರೆಯುವುದು, ಪ್ರಾಯೋಗಿಕ ತರಬೇತಿ ಮುಂತಾದ ವಿಧಾನಗಳಿಂದ ಪರಿಪೂರ್ಣ ಶಿಕ್ಷಣವು ಕುಟುಂಬದಲ್ಲೇ ದೊರೆಯುತ್ತಿದ್ದಿತು. ಆಧುನಿಕ ಕಾಲದಲ್ಲಿ, ಸಂಘಸಂಸ್ಥೆಗಳು, ಶಾಲೆ ವಿದ್ಯಾಲಯಗಳು, ತಾಂತ್ರಿಕ ಸಂಸ್ಥೆ-ತರಬೇತು ಕೇಂದ್ರಗಳು ಈ ಕಾರ್ಯವನ್ನು ನಿರ್ವಹಿಸುತ್ತವೆ.

ಈ ರೀತಿಯಲ್ಲಿ ಸಾಮಾಜಿಕ ಪರಿವರ್ತನೆಯಿಂದಾಗಿ ಪುರಾತನ ಹಾಗೂ ಆಧುನಿಕ ಕುಟುಂಬಗಳಲ್ಲಿನ ಸ್ವರೂಪ ಮತ್ತು ಪ್ರಕಾರ್ಯಗಳಲ್ಲಿ ವ್ಯತ್ಯಾಸಗಳಾಗಿವೆ.

೬.೬. ಸಾರಾಂಶ

ವಿವಾಹ ಮತ್ತು ಕುಟುಂಬಗಳು ಸಾರ್ವತ್ರಿಕವಾದ ಸಂಸ್ಥೆಗಳಾಗಿವೆ; ಪರಸ್ಪರವಾಗಿ ಇಷ್ಟವುಳ್ಳ ಗಂಡು-ಹೆಣ್ಣು ಕೂಡಿ ಕುಟುಂಬವನ್ನು ಸ್ಥಾಪಿಸಿ ಮಕ್ಕಳನ್ನು ಪಡೆಯಲು ಅನುಮತಿ ನೀಡುವ ಸಾಮಾಜಿಕ ಸಂಸ್ಥೆಯಾಗಿದೆ. ಅದರ ನಿಯಮಾವಳಿಗಳಲ್ಲಿ ಹಾಗೂ ಆಚರಣೆಗಳಲ್ಲಿ ವಿಶ್ವಾದ್ಯಂತ ಅನೇಕ ವೈವಿಧ್ಯಗಳಿವೆ. ಹಾಗಾಗಿ ವಿವಾಹದ ವ್ಯಾಖ್ಯೆಗಳೂ ವೈವಿಧ್ಯಮಯ ವಾಗಿವೆ. ಬುಡಕಟ್ಟು ಸಮುದಾಯಗಳು ವಿಕಾಸ ಹೊಂದಿ ಗ್ರಾಮೀಣ ಸಮಾಜಗಳು ಸ್ಥಾಪನೆಗೊಂಡಾಗ ಆಸ್ತಿಹಕ್ಕು, ಶ್ರಮ ವಿಭಜನೆ, ಇತ್ಯಾದಿ ಸಂಸ್ಥೆಗಳಿಗೆ ಹೊಂದಿಕೊಂಡು ವಿವಾಹವೂ ಸಂಕೀರ್ಣಗೊಂಡಿತು. ಅದಕ್ಕೆ ಸಂಕೇತಗಳು, ಪಾತಿವ್ರತ್ಯ ಹಾಗೂ ಧಾರ್ಮಿಕ ವಿವರಣೆಗಳು ಸೇರಿಕೊಂಡವು. ಅಲ್ಲದೆ ವಿವಾಹವು ನಿರ್ದಿಷ್ಟ ಸಾಮಾಜಿಕ ಪ್ರಕಾರ್ಯಗಳನ್ನು ಹೊಂದಿತು. ಮುಖ್ಯವಾಗಿ ವಿವಾಹವು ಕುಟುಂಬದ ಸ್ಥಾಪನೆಗೆ ತಳಹದಿಯನ್ನೊದಗಿಸುತ್ತದೆ. ಅದು ಲೈಂಗಿಕ ಬಯಕೆಯನ್ನು ನಿಯಂತ್ರಿಸುವುದಲ್ಲದೆ ಅಗಮ್ಯಗಮನವನ್ನು ನಿಷೇಧಿಸುತ್ತದೆ. ವಿವಾಹವು ದಂಪತಿಗಳಲ್ಲಿ ಭಾವನಾತ್ಮಕ ಸಂಬಂಧಗಳನ್ನು ಬೆಳೆಸಿ, ಆರ್ಥಿಕ ಸಹಕಾರಕ್ಕೆ ತಳಹದಿಯಾಗಿ ಸಾಮಾಜಿಕ ಸಮಗ್ರತೆಗೆ ಕಾರಣವಾಗುತ್ತದೆ.

ವಿವಾಹದಲ್ಲಿ ಅನೇಕ ಪ್ರಕಾರಗಳಿವೆ. ಬಹುಪತ್ನಿತ್ವ, ಬಹುಪತಿತ್ವ ಹಾಗೂ ಏಕಸಂಗಾತಿ ವಿವಾಹಗಳು ಅವುಗಳಲ್ಲಿ ಪ್ರಮುಖವಾದವುಗಳು. ಈ ವಿವಿಧ ಪ್ರಕಾರಗಳ ವಿವಾಹಗಳಲ್ಲಿ ಗಂಡು-ಹೆಣ್ಣಿನ ಸಂಬಂಧವು ವಿವಿಧ ರೂಪಗಳನ್ನು ಹೊಂದಿದೆ. ಬಹುಪತ್ನಿತ್ವದಲ್ಲಿಯೂ ಭಗಿನೀ ಬಹುಪತ್ನಿತ್ವ ಹಾಗೂ ಭಗಿನೇತರ ಬಹುಪತ್ನಿತ್ವ ಎಂಬ ಎರಡು ವಿಧಗಳಿವೆ. ಇನ್ನು ಬಹುಪತಿತ್ವದಲ್ಲಿ ಭ್ರಾತೃೀಯ ಬಹುಪತಿತ್ವ ಹಾಗೂ ಭ್ರಾತೃೇತರ ಬಹುಪತಿತ್ವ ಎಂಬ ಎರಡು ಪ್ರಕಾರಗಳಿವೆ. ಈ ಪದ್ಧತಿಗಳ ಉಗಮ ಮತ್ತು ವಿಕಾಸಕ್ಕೆ ತಮ್ಮದೇ ಆದ ಕಾರಣಗಳಿವೆ. ಆದರೆ ಇಂತಹ ಪದ್ಧತಿಗಳಿದ್ದಾಗಲೂ ಹೆಚ್ಚು ಪ್ರಚಲಿತವಾಗಿದ್ದುದು ಏಕಸಂಗಾತಿ ವಿವಾಹವೇ ಆಗಿದೆ. ಇದಕ್ಕೆ ಅದರ ಗುಣಾತ್ಮಕ ಅಂಶಗಳೇ ಕಾರಣವಾಗಿವೆ. ಆದುದರಿಂದ ಅದಕ್ಕೆ ಶಾಸ್ತ್ರೀಯವಾಗಿಯೂ ವೈಜ್ಞಾನಿಕವಾಗಿಯೂ ಹಾಗೂ ಸಾಂವಿಧಾನಿಕ ವಾಗಿಯೂ ಮಹತ್ವ ದೊರಕಿದೆ.

ಕುಟುಂಬವು ಮಾನವ ಸಮಾಜದ ಅತ್ಯಂತ ಪ್ರಾಮುಖ್ಯವಾದ ಪ್ರಾಥಮಿಕ ಸಮೂಹ ವಾಗಿದೆ. ಅದು ವಿವಿಧ ಸಮುದಾಯಗಳಲ್ಲಿ ವಿವಿಧ ರೂಪ ತಾಳಿದೆ. ಏನಿದ್ದರೂ ಪ್ರತಿಯೊಬ್ಬನಿಗೂ ತಾನು ಹುಟ್ಟಿದ ಕುಟುಂಬ ಹಾಗೂ ತಾನು ಬೆಳೆಸಿದ ಕುಟುಂಬಗಳಲ್ಲಿ ಮಾತ್ರ ಬದುಕು ಅರ್ಥಪೂರ್ಣವಾಗುತ್ತದೆ. ಕುಟುಂಬದ ಆಸರೆ ಇಲ್ಲದೆ ಬದುಕು ದುಸ್ತರವಾಗುತ್ತದೆ. ಸಾರ್ವತ್ರಿಕತೆ, ಸೀಮಿತ ಗಾತ್ರ, ವ್ಯಕ್ತಿತ್ವದ ಮೇಲೆ ಪ್ರಭಾವ, ಭಾವನಾತ್ಮಕ ಸಂಬಂಧ, ಆರ್ಥಿಕ ಪೂರೈಕೆ, ಸಾಮಾಜಿಕ ನಿಯಂತ್ರಣ ಮುಂತಾದವು ಕುಟುಂಬದ ಮುಖ್ಯ

ಲಕ್ಷಣಗಳಾಗಿವೆ. ವಂಶಾವಳಿಯ ಕ್ರಮದಲ್ಲಿ ಮುಂದುವರಿದುಕೊಂಡು ಬರುವ ಕುಟುಂಬವು ಸಾಮಾಜಿಕ ಸಮೂಹಗಳ ಕೇಂದ್ರಬಿಂದುವಾಗಿದೆ. ಕುಟುಂಬವು ಮುಖ್ಯವಾಗಿ ಲೈಂಗಿಕ ಸಂತೃಪ್ತಿ, ಸಂತಾನೋತ್ಪತ್ತಿ, ಮಕ್ಕಳ ಲಾಲನೆ-ಪಾಲನೆ, ಸಾಮಾಜೀಕರಣ, ಸ್ಥಾನಮಾನ ಪ್ರಧಾನ, ಸಹಕಾರ-ಶ್ರಮ ವಿಭಜನೆ, ಸಂಪ್ರದಾಯ-ಸಂಸ್ಕೃತಿಗಳ ಸಂವಹನ, ಧಾರ್ಮಿಕತೆ, ಆರ್ಥಿಕತೆ, ಶಿಕ್ಷಣ, ಆರೋಗ್ಯ, ಮನರಂಜನೆ ಮುಂತಾದುವನ್ನು ನೀಡುವ ಹಾಗೂ ವ್ಯಕ್ತಿಯನ್ನು ಉತ್ತಮ ಪ್ರಜೆಯನ್ನಾಗಿ ರೂಪಿಸುವ ಕಾರ್ಯಗಳನ್ನು ಹೊಂದಿದೆ. ಕುಟುಂಬದ ಬಗ್ಗೆ ನಡೆಸಲಾದ ಅಧ್ಯಯನಗಳು ಅದರ ವಿವಿಧ ಸ್ವರೂಪಗಳನ್ನು ದಾಖಲಿಸಿ ಕುಟುಂಬವನ್ನು ಅನೇಕ ವಿಧಗಳಾಗಿ ವಿಂಗಡಿಸಿವೆ. ಅವುಗಳಲ್ಲಿ ಮುಖ್ಯವಾದವು ಮಾತೃಮೂಲೀಯ ಕುಟುಂಬ ಹಾಗೂ ಪಿತೃಪ್ರಧಾನ ಕುಟುಂಬ ಪದ್ಧತಿಗಳು. ಮಕ್ಕಳನ್ನು ಹೆತ್ತು, ಸಾಕಿ ಸಲಹುವ ಹೊಣೆಗಾರಿಕೆಯು ಬಹುತರವಾಗಿ ಹೆಣ್ಣಿನ ಮೇಲೆಯೇ ಇದ್ದು ಗಂಡು ಹೆಚ್ಚಾಗಿ ಅಲೆಮಾರಿಯಾಗಿದ್ದುದರಿಂದ ಮಾತೃಮೂಲೀಯ ಕುಟುಂಬವೇ ಮೂಲರೂಪವೆನ್ನಲಾಗಿದೆ. ಇದರಲ್ಲಿ ಕುಟುಂಬದ ಮನೆ, ಆಸ್ತಿ ಹಾಗೂ ಮನೆತನ ಮುಂದುವರಿದುಕೊಂಡು ಬರುತ್ತಿದ್ದವು. ಆದರೆ ಕ್ರಮೇಣ ಕೃಷಿಯಾಧಾರಿತ ಗ್ರಾಮೀಣ ಸಂಸ್ಕೃತಿ ಉದಯಿಸಿದ ಬಳಿಕ ಪಿತೃಪ್ರಧಾನ ಕುಟುಂಬಗಳುಂಟಾದವು. ಇವುಗಳಲ್ಲಿ ಕುಟುಂಬದ ಯಜಮಾನಿಕೆಯು ತಂದೆಯ ಕೈಯಲ್ಲಿರುತ್ತದೆ. ಆತ ನಿರಂಕುಶ ಅಧಿಕಾರ ಹೊಂದಿರುತ್ತಾನೆ. ಮನೆ, ಆಸ್ತಿ ಹಾಗೂ ವಂಶದ ಹೆಸರು ಗಂಡುಮಕ್ಕಳ ಪಾಲಾಗುತ್ತದೆ. ಹೆಣ್ಣು ಮದುವೆಯಾಗಿ ಗಂಡನ ಮನೆಗೆ ಹೋಗುತ್ತಾಳೆ. ಮಕ್ಕಳು ತಂದೆ-ತಾಯಿಗಳ ಆಸರೆಯಲ್ಲಿ ಬೆಳೆಯುತ್ತಾರೆ. ಆದರೆ ಪಿತೃಪ್ರಧಾನ ಕುಟುಂಬದ ಸ್ವರೂಪದಲ್ಲಿಯೂ ಸಮಾಜದಿಂದ ಸಮಾಜಕ್ಕೆ ವ್ಯತ್ಯಾಸಗಳು ಕಂಡುಬಂದಿವೆ. ಕೈಗಾರಿಕೀಕರಣ ಹಾಗೂ ನಗರೀಕರಣದ ಪ್ರಕ್ರಿಯೆಗಳಿಂದಾಗಿ ಕುಟುಂಬದಲ್ಲಿ ವ್ಯಾಪಕ ಪರಿವರ್ತನೆಗಳು ಕಂಡುಬಂದಿವೆ. ಮುಖ್ಯವಾಗಿ ಸ್ತ್ರೀ ವಿದ್ಯಾಭ್ಯಾಸದಿಂದಾಗಿ ಗಂಡ-ಹೆಂಡಿರಲ್ಲಿ ಸಮಾನತೆಯ ಸಂಬಂಧಗಳಿದ್ದು ಚಿಕ್ಕಗಾತ್ರದ ಶಿಶುಕೇಂದ್ರಿತ ಕುಟುಂಬಗಳು ಉಂಟಾಗಿವೆ.

೬.೭. ಪಾರಿಭಾಷಿಕ ಪದಕೋಶ

೧. Endogamy = ಒಳಬಾಂಧವ್ಯ

೨. Exogamy = ಹೊರಬಾಂಧವ್ಯ

೩. Extended family = ಕೂಡು ಕುಟುಂಬ

೪. Family of Orientation = ಬೆಳೆದ ಕುಟುಂಬ

೫. Family of Procreation = ಬೆಳೆಸಿದ ಕುಟುಂಬ

೬. Female infanticide = ಹೆಣ್ಣು ಶಿಶುಹತ್ಯೆ

೭. Franternal Polyandry = ಭ್ರಾತೃೀಯ ಬಹುಪತಿತ್ವ

೮. Matriarchal family = ಮಾತೃಪ್ರಧಾನ ಕುಟುಂಬ

೯. Monogamy = ಏಕಸಂಗಾತಿ ವಿವಾಹ

೧೦. Non-Sororal Polygam = ಭಗಿನೇತರ ಬಹುಪತ್ನಿತ್ವ
೧೧. Non-Fraternal Polyandry = ಭ್ರಾತ್ರೇತರ ಬಹುಪತಿತ್ವ
೧೨. Nuclear family = ಅಣುಕುಟುಂಬ
೧೩. Polygam = ಬಹುಪತ್ನಿತ್ವ
೧೪. Polyandry = ಬಹುಪತಿತ್ವ
೧೫. Regularity = ನಿರಂತರತೆ
೧೬. Sororal Polygam = ಭಗಿನಿ ಬಹುಪತ್ನಿತ್ವ

೬.೮. ಪ್ರಶ್ನೆಗಳು

I. ಒಂದು ಅಂಕದ ಪ್ರಶ್ನೆಗಳು

೧. ವಿವಾಹ ಎಂದರೇನು?
೨. 'ಮಾನವ ವಿವಾಹದ ಇತಿಹಾಸ' ಗ್ರಂಥವನ್ನು ಯಾರು ರಚಿಸಿದರು?
೩. ವೆಸ್ಟರ್ ಮಾರ್ಕ್‌ರವರ ವಿವಾಹದ ವ್ಯಾಖ್ಯೆಯನ್ನು ತಿಳಿಸಿ.
೪. ಲೈಂಗಿಕ ತೃಪ್ತಿಗೆ ಸರ್ವಸಮ್ಮತವಾದ ಸಾಮಾಜಿಕ ವ್ಯವಸ್ಥೆ ಯಾವುದು?
೫. 'ಸಾಮಾಜಿಕ ತಂದೆ' ಎಂದರೇನು?
೬. ವಿವಾಹವು ಯಾವ ಹಂತದಲ್ಲಿ ಸಂಕೀರ್ಣಗೊಂಡಿತು?
೭. ಪ್ರಾಚೀನ ಸಮುದಾಯಗಳಲ್ಲಿ ಬಿಲ್ಲು-ಬಾಣದ ಸಮಾರಂಭ ಏಕಿತ್ತು?
೮. ವಿವಾಹದ ಒಂದು ಲಕ್ಷಣವನ್ನು ತಿಳಿಸಿ.
೯. ವಿವಾಹದ ಯಾವುದಾದರೂ ಒಂದು ಕರ್ತವ್ಯ ತಿಳಿಸಿ.
೧೦. ವಿವಾಹವು ಒಂದು ಸಂಸ್ಥೆಯೇ ಅಥವಾ ಸಂಘವೇ?
೧೧. ಆಗಮ್ಯಗಮನದ ನಿಷೇಧವೆಂದರೇನು?
೧೨. ಅಣು ಕುಟುಂಬ ಎಂದರೇನು?
೧೩. ಶಿಶು ಕೇಂದ್ರಿತ ಕುಟುಂಬವೆಂದರೇನು?
೧೪. ವಿಸ್ತೃತ ಕುಟುಂಬ ಎಂದರೇನು?
೧೫. ಫ್ಯಾಮಿಲಿಯ ಮೂಲಪದ ಯಾವುದು?

II. ಎರಡು ಅಂಕಗಳ ಪ್ರಶ್ನೆಗಳು

೧. ವಿವಾಹದ ಎರಡು ವ್ಯಾಖ್ಯೆಗಳನ್ನು ನೀಡಿ.
೨. ವಿವಾಹದ ಎರಡು ಪ್ರಕಾರ್ಯಗಳನ್ನು ನಮೂದಿಸಿ.
೩. ವಿವಾಹದ ನಾಲ್ಕು ವಿಧಗಳನ್ನು ತಿಳಿಸಿ.
೪. ಭಗಿನೀ ಬಹುಪತ್ನಿತ್ವವೆಂದರೇನು?
೫. ಭಗಿನೇತರ ಬಹುಪತ್ನಿತ್ವವೆಂದರೇನು?
೬. ಬಹುಪತಿತ್ವದ ಎರಡು ಪ್ರಕಾರಗಳಾವುವು?

೭. ಬಹುಪತಿತ್ವದ ಎರಡು ಅನುಕೂಲಗಳನ್ನು ತಿಳಿಸಿ.

೮. ಬಹುಪತಿತ್ವದ ಎರಡು ಪ್ರತಿಕೂಲಗಳನ್ನು ತಿಳಿಸಿ.

೯. ಏಕಸಂಗಾತಿ ವಿವಾಹದ ಎರಡು ಅನುಕೂಲಗಳನ್ನು ನಮೂದಿಸಿ.

೧೦. ಅಣು ಕುಟುಂಬದ ಎರಡು ಲಕ್ಷಣಗಳನ್ನು ತಿಳಿಸಿ.

೧೧. ಅವಿಭಕ್ತ ಕುಟುಂಬದ ಎರಡು ಅನುಕೂಲತೆಗಳಾವುವು?

೧೨. ಅವಿಭಕ್ತ ಕುಟುಂಬದ ಎರಡು ಅನನುಕೂಲತೆ ತಿಳಿಸಿರಿ.

೧೩. ಅವಿಭಕ್ತ ಕುಟುಂಬದ ವ್ಯಾಖ್ಯೆಯನ್ನು ತಿಳಿಸಿ.

೧೪. ಆಧುನಿಕ ಕುಟುಂಬದಲ್ಲಿನ ಎರಡು ಬದಲಾವಣೆಗಳನ್ನು ತಿಳಿಸಿ.

೧೫. ಅವಿಭಕ್ತ ಕುಟುಂಬದ ಎರಡು ಪ್ರಕಾರ್ಯಗಳನ್ನು ತಿಳಿಸಿ.

III. ಐದು ಅಂಕಗಳ ಪ್ರಶ್ನೆಗಳು

೧. ವಿವಾಹದ ಅರ್ಥ ಮತ್ತು ವ್ಯಾಖ್ಯೆ ನೀಡಿ.

೨. ವಿವಾಹದ ಗುಣಲಕ್ಷಣಗಳನ್ನು ವಿವರಿಸಿ.

೩. ಏಕಸಂಗಾತಿ ವಿವಾಹದ ಅನುಕೂಲತೆಗಳನ್ನು ಪಟ್ಟಿಮಾಡಿ.

೪. ಅನುಲೋಮ ಮತ್ತು ಪ್ರತಿಲೋಮ ವಿವಾಹವೆಂದರೇನು?

೫. ಬಹುಪತ್ನಿತ್ವಕ್ಕೆ ಕಾರಣಗಳನ್ನು ವಿವರಿಸಿ.

೬. ಬಹುಪತ್ನಿತ್ವದ ಅನುಕೂಲ ಮತ್ತು ಅನನುಕೂಲತೆಗಳನ್ನು ತಿಳಿಸಿ.

೭. ಏಕಸಂಗಾತಿ ವಿವಾಹಕ್ಕೆ ಕಾರಣಗಳಾವುವು?

೮. ಕುಟುಂಬದ ಸಾಮಾನ್ಯ ಗುಣಲಕ್ಷಣಗಳಾವುವು?

೯. ಕುಟುಂಬದ ಸ್ವಭಾವವನ್ನು ವಿವರಿಸಿ.

೧೦. ಆಧುನಿಕ ಅಣುಕುಟುಂಬಗಳಲ್ಲಾದ ಪರಿವರ್ತನೆಯ ಗುಣಲಕ್ಷಣಗಳನ್ನು ವಿವರಿಸಿ.

೧೧. ಪ್ರಾಚೀನ ಮತ್ತು ಆಧುನಿಕ ಕುಟುಂಬಗಳ ಸ್ವರೂಪ, ರಚನೆ ಮತ್ತು ಪ್ರಕಾರ್ಯಗಳ ತುಲನೆ ಮಾಡಿರಿ.

೧೨. ಪಿತೃಪ್ರಧಾನ ಕುಟುಂಬದ ಅರ್ಥ ಮತ್ತು ಲಕ್ಷಣಗಳನ್ನು ತಿಳಿಸಿ.

೧೩. ಮಾತೃಪ್ರಧಾನ ಕುಟುಂಬ ಕುರಿತು ಟಿಪ್ಪಣಿ ಬರೆಯಿರಿ.

೧೪. ಪಿತೃಪ್ರಧಾನ ಕುಟುಂಬದ ಅವನತಿಯ ಅಂಶಗಳನ್ನು ಚರ್ಚಿಸಿ.

೧೫. ಮಾತೃಪ್ರಧಾನ ಕುಟುಂಬದ ಅರ್ಥ ಮತ್ತು ಗುಣಲಕ್ಷಣಗಳನ್ನು ತಿಳಿಸಿ.

IV. ಹತ್ತು ಅಂಕಗಳ ಪ್ರಶ್ನೆಗಳು

೧. ವಿವಾಹದ ಅರ್ಥವನ್ನು ವಿಶ್ಲೇಷಿಸಿ ಅದರ ಪ್ರಕಾರ್ಯಗಳನ್ನು ಚರ್ಚಿಸಿ.

೨. ವಿವಾಹದ ವಿವಿಧ ರೀತಿಗಳಾವುವು? ವಿವರಿಸಿ.

೩. ಬಹುಪತ್ನಿತ್ವಕ್ಕೆ ಕಾರಣಗಳನ್ನೂ, ಅದರ ವಿಧಗಳನ್ನು ಕುರಿತು ವಿವರಿಸಿ.

೪. ಬಹುಪತಿತ್ವದ ವಿಧಗಳು ಹಾಗೂ ಕಾರಣಗಳನ್ನು ಸಂಗ್ರಹವಾಗಿ ಬರೆಯಿರಿ.

೫. ಕುಟುಂಬದ ಪ್ರಕಾರ್ಯಗಳನ್ನು ವಿವರಿಸಿ.

೬. ಕುಟುಂಬದ ಗುಣಲಕ್ಷಣಗಳನ್ನು ವಿಶದಪಡಿಸಿ.

೭. ಕುಟುಂಬದ ಪ್ರಮುಖ ವಿಧಗಳನ್ನು ವಿವರಿಸಿ.

೮. ಆಧುನಿಕ ಯುಗದಲ್ಲಿ ಕುಟುಂಬ ಹೇಗೆ ಪರಿವರ್ತನೆಗೊಂಡಿದೆ? ಚರ್ಚಿಸಿರಿ.

ಅಭ್ಯಾಸ/ಚಟುವಟಿಕೆಗಳು

೧. ಪ್ರೇಮ ವಿವಾಹದ ಸಾಧಕ ಬಾಧಕಗಳನ್ನು ಚರ್ಚಿಸಿ.

೨. ಭಾರತದಲ್ಲಿ ಅವಿಭಕ್ತ ಕುಟುಂಬಗಳು ನಶಿಸುತ್ತಿವೆಯೆ? ಹೌದಾದರೆ ಅದರ ಕಾರಣಗಳನ್ನು ತಿಳಿಸಿ.

೩. ನೀವು ಪಾಲ್ಗೊಂಡ ವಿವಾಹ ಸಮಾರಂಭದಲ್ಲಿ ತೋರಿ ಬಂದ ಸಂಸ್ಕಾರಗಳ ಬಗೆಗೆ ತಿಳಿಸಿ.

೪. ಕುಟುಂಬವನ್ನು ಪ್ರಾಥಮಿಕ ಸಮೂಹವೆಂಬುದಾಗಿ ಚರ್ಚಿಸಿ.

ಅಧ್ಯಾಯ ೭

ಸಾಮಾಜಿಕ ಬದಲಾವಣೆ

ಮಾನವ ಸಮಾಜ ಯಥಾಸ್ಥಿತಿವಾದಿಯಲ್ಲ. ಅದು ಪರಿವರ್ತನಾಶೀಲವಾದುದು. ಇದರಿಂದಾಗಿ ಸಮಾಜ ನಿರಂತರವಾಗಿ ಪರಿವರ್ತನೆ ಹೊಂದುತ್ತಲೇ ಇರುತ್ತದೆ. ಪರಿವರ್ತನಾಶೀಲ ಗುಣವಿರುವ ಕಾರಣ ಮಾನವಸಮಾಜವನ್ನು ಹರಿಯುವ ನದಿಗೆ ಹೋಲಿಸುತ್ತಾರೆ. ಹೇಗೆ ಹರಿಯುವ ನದಿಯಲ್ಲಿ ಹೊಸನೀರು ಬರುತ್ತಲೇ ಇರುತ್ತದೋ ಹಾಗೆಯೇ ಸಮಾಜ ಬದಲಾವಣೆ ಹೊಂದುತ್ತಲೇ ಇರುತ್ತದೆ. ಬದಲಾವಣೆ ಸಮಾಜದ ಅಂತರ್ಗತ ಗುಣವಾಗಿದೆ.

ಬದಲಾವಣೆ ನಿಸರ್ಗ ಸಹಜವಾದುದು. ಅನಾದಿ ಕಾಲದಿಂದಲೂ ಮಾನವಸಮಾಜ ಬದಲಾವಣೆ ಹೊಂದುತ್ತಲೇ ಬಂದಿದೆ. ಉದಾ:- ಹಿಂದಿನ ಸಮಾಜದಂತೆ ಈಗಿನ ಸಮಾಜವಿಲ್ಲ, ಹೀಗಿರುವಂತೆ ಮುಂದೆ ಇರಲಾರದು. ಇದಕ್ಕೆ ನಿರಂತರ ಬದಲಾವಣೆಯೇ ಕಾರಣ. ಬದಲಾವಣೆಯೂ ಸಮಾಜದ ಮೂಲಭೂತ ಗುಣವಾಗಿದ್ದರೂ, ಪರಿವರ್ತನೆಯ ಗತಿಯಲ್ಲಿ ಏರುಪೇರುಗಳು ಕಂಡುಬರುತ್ತವೆ. ಒಂದು ಸಮಾಜದಲ್ಲಿ ಪರಿವರ್ತನೆಯ ಗತಿ ತೀವ್ರವಾಗಿರಬಹುದು. ಉದಾ: ಕೈಗಾರೀಕರಣಗೊಂಡ, ಔದ್ಯಮಿಕವಾಗಿ ಮುಂದುವರಿದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪರಿವರ್ತನೆಯ ಗತಿ ತೀವ್ರವಾಗಿರುತ್ತದೆ. ಅದೇ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಬದಲಾವಣೆ ಮಂದಗತಿಯಲ್ಲಿರುತ್ತದೆ.

೭.೧. ಅ. ಸಾಮಾಜಿಕ ಬದಲಾವಣೆಯ ಅರ್ಥ ಮತ್ತು ವ್ಯಾಖ್ಯೆ

ಎಲ್ಲ ಬದಲಾವಣೆಗೆಗಳನ್ನು ಸಾಮಾಜಿಕ ಬದಲಾವಣೆ ಎಂದು ಕರೆಯಲಾಗದು. ಸಾಮಾಜಿಕ ವ್ಯವಸ್ಥೆ ಮತ್ತು ಸಾಮಾಜಿಕ ಸಂಘಟನೆಗಳಲ್ಲಿ ಕಂಡು ಬರುವ ಪರಿವರ್ತನೆಯನ್ನು ಸಾಮಾಜಿಕ ಪರಿವರ್ತನೆ ಎನ್ನಬಹುದು. ಉದಾ: ಜಾತಿ ಪದ್ಧತಿಯಲ್ಲಾಗುತ್ತಿರುವ ಬದಲಾವಣೆಗಳು, ಕುಟುಂಬ ವ್ಯವಸ್ಥೆಯಲ್ಲಾಗುತ್ತಿರುವ ಬದಲಾವಣೆಗಳು, ವರ್ಗ ಪದ್ಧತಿಯಲ್ಲಾಗುತ್ತಿರುವ ಬದಲಾವಣೆಗಳು. ಸರಳವಾಗಿ ಹೇಳಬೇಕೆಂದರೆ ಸಾಮಾಜಿಕ ಪ್ರಕ್ರಿಯೆಯಲ್ಲಿ ಕಂಡುಬರುವ ಪರಿವರ್ತನೆಯನ್ನು ಸಾಮಾಜಿಕ ಬದಲಾವಣೆ ಎಂದು ಕರೆಯಲಾಗುವುದು.

ಕಿಂಗ್ಸ್‌ಲೇ ಡೇವಿಸ್ "ಸಾಮಾಜಿಕ ರಚನೆ ಮತ್ತು ಕಾರ್ಯಗಳಲ್ಲಿ ಆಗುವ ಬದಲಾವಣೆ"ಯನ್ನು ಸಾಮಾಜಿಕ ಬದಲಾವಣೆ ಎಂದಿದ್ದಾನೆ.

ಮೆಕೈವರ್ ಮತ್ತು ಪೇಜ್ "ಸಾಮಾಜಿಕ ಸಂಬಂಧಗಳಲ್ಲಾಗುವ ಪರಿವರ್ತನೆ"ಯನ್ನು ಸಾಮಾಜಿಕ ಬದಲಾವಣೆ ಎಂದಿರುವರು.

ಎಮ್.ಇ. ಜೋನ್ಸ್ "ಸಾಮಾಜಿಕ ಪ್ರಕ್ರಿಯೆಗಳು, ಸಾಮಾಜಿಕ ಮಾದರಿಗಳು, ಸಾಮಾಜಿಕ ಅಂತರ್‌ಕ್ರಿಯೆಗಳು ಅಥವಾ ಸಾಮಾಜಿಕ ಸಂಘಟನೆ ಇವುಗಳ ಯಾವುದೇ ಮುಖದಲ್ಲಿ ಉಂಟಾಗುವ ಪರಿವರ್ತನೆ"ಯನ್ನು ಸಾಮಾಜಿಕ ಪರಿವರ್ತನೆ ಎಂದು ಕರೆಯುವರು.

ಆ. ಸಾಮಾಜಿಕ ಬದಲಾವಣೆ, ವಿಕಾಸ, ಪ್ರಗತಿ, ಬೆಳವಣಿಗೆ

ಹೊರನೋಟಕ್ಕೆ ಈ ಎಲ್ಲ ಕಲ್ಪನೆಗಳು ಒಂದೇ ಎಂಬಂತೆ ಕಂಡರೂ ಅವುಗಳ ಅರ್ಥಗಳು ಭಿನ್ನ ಭಿನ್ನವಾಗಿವೆ. ಹೆಚ್ಚಿನ ಸಂದರ್ಭಗಳಲ್ಲಿ ಈ ಎಲ್ಲಾ ಕಲ್ಪನೆಗಳು ಸರ್ವಸಾಮಾನ್ಯ ಎನ್ನುವ ರೀತಿಯಲ್ಲಿ ಉಪಯೋಗಿಸಲಾಗಿದೆ. ಈ ಮೇಲಿನ ಕಲ್ಪನೆಗಳು ಬೇರೆ ಬೇರೆಯಾಗಿದ್ದರೂ ಸಹ ಇವುಗಳು ಒಂದಕ್ಕೊಂದು ಸಂಬಂಧಪಟ್ಟಿವೆ.

ಸಾಮಾಜಿಕ ವಿಕಾಸ : ಇದು ವಿಕಾಸ ಎಂಬರ್ಥ ಕೊಡುತ್ತದೆ. 'ವಿಕಾಸ'ದ ಪರಿಕಲ್ಪನೆಯು ಡಾರ್ವಿನ್ನರ ವಿಕಾಸವಾದದ ಸಿದ್ಧಾಂತದಿಂದ ಪ್ರೇರಣೆಗೊಂಡಿದೆ. ಇದನ್ನೇ ಮಾನವಸಮಾಜಕ್ಕೆ ಅನ್ವಯಿಸಿ, ಸಾಮಾಜಿಕ 'ವಿಕಾಸ'ದ ಸಿದ್ಧಾಂತವನ್ನು ಮಂಡಿಸಿದರು ಹರ್ಬಟ್ ಸ್ಪೆನ್ಸರ್. ವಿಕಾಸವಾದವು ಹೇಗೆ ಸಮಾಜಗಳು ಸರಳತೆಯಿಂದ ಸಂಕೀರ್ಣತೆಯೆಗೆ ಸಾಗುತ್ತವೆ ಎನ್ನುವುದನ್ನು ವಿಷದೀಕರಿಸುತ್ತದೆ. ಯುದ್ಧ ಪ್ರಿಯ ಸಮಾಜವು ಔದ್ಯೋಗಿಕ ಸಮಾಜವಾಗಿ ವಿಕಾಸ ಹೊಂದಿತೆಂಬುದನ್ನು ಸ್ಪೆನ್ಸರ್ ಪ್ರತಿಪಾದಿಸಿದ್ದಾರೆ. ಸಾಮಾಜಿಕ ವಿಕಾಸದ ಕಲ್ಪನೆಯು ಸಾಮಾಜಿಕ ಪರಿವರ್ತನೆಯ ದಿಕ್ಕುದೆಶೆಗಳನ್ನು ಅರಿತುಕೊಳ್ಳಲು ಅನುಕೂಲವಾಗಿದೆ. ಅಗಸ್ಟ್‌ಕೋಮ್ಟ್, ಎಲ್. ಎಚ್. ಮಾರ್ಗನ್, ಇ.ಬಿ. ಟೈಲರ್, ಹರ್ಬಟ್ ಸ್ಪೆನ್ಸರ್‌ರವರು, ಸಾಮಾಜಿಕ ವಿಕಾಸ ಪ್ರಕ್ರಿಯೆಯು ಹೇಗೆ ಸಮಾಜವನ್ನು ಉನ್ನತ ಪಥದತ್ತ ಕೊಂಡೊಯ್ಯುತ್ತದೆ ಎನ್ನುವುದನ್ನು ಚರ್ಚಿಸಿದ್ದಾರೆ. ಉದಾ : ಅಲೆಮಾರಿಯಾಗಿದ್ದ ಮಾನವರು, ಅನಾಗರಿಕರಾಗಿ ಪರಿವರ್ತನೆ ಹೊಂದಿದ್ದು ಮತ್ತು ಅನಾಗರೀಕರಾಗಿದ್ದ ಮಾನವರು ನಾಗರೀಕತೆಯನ್ನು ಬೆಳೆಸಿದ್ದು, ಆಧುನಿಕತೆಯನ್ನು ಮೈಗೂಡಿಸಿಕೊಂಡದ್ದು, ಜಾಗತೀಕರಣದತ್ತ ಒಲವು ತೋರಿಸುತ್ತಿರುವುದು ಇವೆಲ್ಲವೂ ಸಮಾಜ ವಿಕಾಸ ಪ್ರಕ್ರಿಯೆಯು ಹಂತಗಳಾಗಿವೆ. ಸಾಮಾಜಿಕ ವಿಕಾಸವಾದವನ್ನು ಪ್ರತಿಪಾದಿಸಿದ ಹರ್ಬಟ್ ಸ್ಪೆನ್ಸರ್‌ರವರು ಸಮಾಜವನ್ನು ಜೀವಿಗೆ ಹೋಲಿಸಿ ಸಮಾಜ "ಜೀವಿಯಂತಿದೆ" ಎಂದು ಪ್ರತಿಪಾದಿಸಿದರು. ಜೀವಿಗೆ ಹುಟ್ಟು, ಬೆಳವಣಿಗೆ, ಸಾವು ಇರುವ ಹಾಗೆ ಸಮಾಜಕ್ಕೂ ಹುಟ್ಟು, ಬೆಳವಣಿಗೆ, ಸಾವು ಇದೆಯೆಂಬುವುದನ್ನು ಸ್ಪಷ್ಟೀಕರಿಸಿದರು. ಆಗಸ್ಟ್‌ಕೋಮ್ಟನು ಸಮಾಜದ ವಿಕಾಸವನ್ನು ಮೂರು ಅವಸ್ಥೆಗಳಲ್ಲಿ ಗುರುತಿಸಿದ್ದಾನೆ. 'ಮೂರು ಅವಸ್ಥೆಗಳ ನಿಯಮ'ದ ಪ್ರಕಾರ ಮಾನವ ಜ್ಞಾನ ಮತ್ತು ಸಮಾಜವು ಆಧಿದೈವಿಕ, ಆಧ್ಯಾತ್ಮಿಕ ಮತ್ತು ವೈಜ್ಞಾನಿಕ ಎಂಬ ಮೂರು ಅವಸ್ಥೆಗಳಲ್ಲಿ ವಿಕಾಸ ಹೊಂದುತ್ತ ಹೋಗುತ್ತವೆ. ಒಟ್ಟಾರೆ, ಸಾಮಾಜಿಕ ವಿಕಾಸ

ಎಂದರೆ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಏರುವಾಗ ಸಮಾಜದಲ್ಲಾಗುವ ಆಂತರಿಕ ಬೆಳವಣಿಗೆಯೇ ಸಾಮಾಜಿಕ ವಿಕಾಸ.

ಸಾಮಾಜಿಕ ಪ್ರಗತಿ : ಸಾಮಾಜಿಕ ಪ್ರಗತಿ ಎನ್ನುವುದು ಸಾಮಾಜಿಕ ಪರಿವರ್ತನೆಯೊಡನೆ ಬೆಸೆದುಕೊಂಡ ಇನ್ನೊಂದು ಕಲ್ಪನೆ. ಇದೊಂದು ಅಮೂರ್ತವಾದ ಕಲ್ಪನೆ. ಅದರಿಂದಾಗಿ ಈ ಕಲ್ಪನೆಯನ್ನು ವ್ಯಕ್ತಪಡಿಸುವುದು ಕ್ಲಿಷ್ಟಕರವಾಗಿದೆ. ಇಲ್ಲಿ ಗಮನಿಸಬೇಕಾದುದೇನೆಂದರೆ ಇಲ್ಲಿ 'ವಿಕಾಸ'ದಂತೆ ಹಂತಗಳ ಬಗ್ಗೆ ಒತ್ತು ನೀಡಿಲ್ಲ. ಸಾಮಾಜಿಕ ಪ್ರಗತಿಯು, ಆಯಾ ಸಮಾಜದ ಮೌಲ್ಯಗಳ ಮೇಲೆ ಆಧಾರಗೊಂಡಿದೆ. ಉದಾ: ಕೆಲವು ಸಮಾಜದಲ್ಲಿ ಪ್ರಗತಿಯ ದ್ಯೋತಕವಾದ ಕೆಲವು ಅಂಶಗಳು ಇನ್ನೊಂದು ಸಮಾಜದಲ್ಲಿ ಪ್ರಗತಿದಾಯಕವಲ್ಲದೇ ಇರಬಹುದು. ಇದು ಮಾಪನಕ್ಕೆ ನಿಲುಕದ ಕಲ್ಪನೆಯಾಗಿದೆ. ಸಾಮಾಜಿಕ ಪ್ರಗತಿಗೆ ಒಂದು ನಿರ್ದಿಷ್ಟವಾದ ಗುರಿ ಇರುತ್ತದೆ. ಆ ಗುರಿ ಒಳ್ಳೆಯದೇ ಆಗಿರುತ್ತದೆ. ಅದಕ್ಕೆ ಪ್ರಗತಿ ಯಾವಾಗಲೂ ಒಳ್ಳೆಯ ಪರಿಣಾಮಗಳನ್ನು ಕೊಡುವುದು. ಪ್ರಗತಿ ಯಾವಾಗಲೂ ಉನ್ನತ ಮೌಲ್ಯಗಳನ್ನು ಒಳಗೊಂಡಿರುತ್ತದೆ. ಇದಲ್ಲದೆ ಪ್ರಗತಿಯು ಇಡೀ ಸಮುದಾಯಕ್ಕೆ ಸಂಬಂಧಿಸಿದ್ದಾಗಿದೆ. ಒಬ್ಬ ವ್ಯಕ್ತಿಯ ಅಭ್ಯುದಯವನ್ನು ಸಾಧಿಸಿದಲ್ಲಿ ಅದನ್ನು ಪ್ರಗತಿ ಎನ್ನಲಾಗುವುದಿಲ್ಲ.

ಸರಳವಾಗಿ ಹೇಳಬೇಕೆಂದರೆ - ಸಾಮಾಜಿಕ ಮೌಲ್ಯದ ಚೌಕಟ್ಟಿನಲ್ಲಿ, ಒಳ್ಳೆಯ ಗುರಿಯೊಂದನ್ನು ಸಾಧಿಸುವಲ್ಲಿ ಮುನ್ನಡೆಯುವುದಕ್ಕೆ ಸಾಮಾಜಿಕ ಪ್ರಗತಿ ಎನ್ನಬಹುದು. ಉದಾ: ಭಾರತದಲ್ಲಿ ಮಹಿಳೆಯರ ಸಶಕ್ತೀಕರಣ ಸಾಧಿಸುವಲ್ಲಿ ಮುನ್ನಡೆಯುವುದು. ಪ್ರಗತಿಯು ನಿರ್ದಿಷ್ಟ ಗುರಿ ಮತ್ತು ದಿಕ್ಕನ್ನು ಹೊಂದಿದ ಬದಲಾವಣೆಯಾಗಿದೆ. ಗುರಿಯನ್ನು ತಲುಪದೇ ಇದ್ದಲ್ಲಿ ಅದು ಸಾಮಾಜಿಕ ಬದಲಾವಣೆಯಾಗುತ್ತದೆ ವಿನಃ ಸಾಮಾಜಿಕ ಪ್ರಗತಿ ಎನ್ನಲಾಗುದು.

ಪಾರ್ಕ್ ಮತ್ತು ಬರ್ಗೆಸ್‌ರವರು ಸಾಮಾಜಿಕ ಪ್ರಗತಿಯ ಬಗ್ಗೆ ಹೀಗೆ ಹೇಳಿದ್ದಾರೆ: "ಯಾವುದೇ ಬದಲಾವಣೆ ಅಥವಾ ಹೊಂದಾಣಿಕೆಯು ಸದ್ಯದ ಪರಿಸರದೊಂದಿಗೆ ವ್ಯಕ್ತಿ ಇಲ್ಲವೇ ಸಾಮೂಹಿಕ ಜೀವನವನ್ನು ಸುಲಭಗೊಳಿಸುವುದೋ ಅದೇ ಸಾಮಾಜಿಕ ಪ್ರಗತಿ".

ಸಾಮಾಜಿಕ ಪ್ರಗತಿ	**ಸಾಮಾಜಿಕ ವಿಕಾಸ**
೧. ನಿರ್ದಿಷ್ಟ ಗುರಿಯೊಡನೆ ಮುನ್ನಡೆ	೧. ಆಂತರಿಕ ಬೆಳವಣಿಗೆ
೨. ಪ್ರಗತಿಗೆ ಹಂತಗಳಿಲ್ಲ.	೨. ವಿಕಾಸಕ್ಕೆ ಹಂತಗಳಿವೆ.
೩. ಇದು ಉದ್ದೇಶ ಪೂರಿತವಾದುದು	೩. ಸ್ವಾಭಾವಿಕವಾದುದು
೪. ಪ್ರಗತಿಯ ಅರ್ಥ ಒಂದೇ ತೆರನಾಗಿಲ್ಲ.	೪. ಸಾರ್ವತ್ರಿಕವಾಗಿ ಸಮಾನಾರ್ಥ ಹೊಂದಿದೆ.

ಸಾಮಾಜಿಕ ಅಭಿವೃದ್ಧಿ/ಬೆಳವಣಿಗೆ : ಈ ಪರಿಕಲ್ಪನೆಯು ಸಮಾಜದಲ್ಲಿನ ಆರ್ಥಿಕತೆಗೆ ಹೆಚ್ಚಿನ ಒತ್ತನ್ನು ನೀಡುತ್ತದೆ. ಇತ್ತೀಚೆಗೆ ಇದರೊಂದಿಗೆ ತಾಂತ್ರಿಕತೆಯೂ ಬೆಸೆದುಕೊಂಡಿದೆ. ಆರ್ಥಿಕತೆ ಮತ್ತು ತಾಂತ್ರಿಕತೆಯು ಪರಿಣಾಮವಾಗಿ ಸಮಾಜದ ಸಂರಚನೆ ಮತ್ತು ಸಂಘಟನೆಗಳಲ್ಲಿ ಆಗುವ ಬದಲಾವಣೆಯೇ ಸಾಮಾಜಿಕ ಬೆಳವಣಿಗೆ ಎನ್ನಬಹುದು. ಹೆಚ್ಚಿನ ಆರ್ಥಿಕ ಉತ್ಪಾದನೆ, ಸಂಪತ್ತಿನ ಹೆಚ್ಚಳ, ಸಾಮಾಜಿಕ ಸಂರಚನೆ ಮತ್ತು ಸಂಘಟನೆಗಳಲ್ಲಿ ಸಂಕೀರ್ಣತೆ ಇವುಗಳು ಸಾಮಾಜಿಕ ಅಭಿವೃದ್ಧಿಯ ಮುಖ್ಯ ಲಕ್ಷಣಗಳಾಗಿವೆ. ಇವೆಲ್ಲದರ ಒಟ್ಟು ಪರಿಣಾಮವಾಗಿ ಉಂಟಾಗುವ ತೀವ್ರತರನಾದ ಬದಲಾವಣೆಯೇ ಸಾಮಾಜಿಕ ಬದಲಾವಣೆ.

೭.೨. ಸಾಮಾಜಿಕ ಬದಲಾವಣೆಯ ಮೇಲೆ ಪ್ರಭಾವ ಬೀರುವ ಅಂಶಗಳು

ಪರಿವರ್ತನೆ ಸಮಾಜದ ಸಹಜಗುಣ. ಸಮಾಜವು ಪರಿವರ್ತನೆ ಹೊಂದುತ್ತಲೇ ಇರುತ್ತದೆ. ಸಾಮಾಜಿಕ ಬದಲಾವಣೆ ತನ್ನಿಂದ ತಾನೇ ಆಗಲಾರದು. ಅದಕ್ಕೆ ಕೆಲವು ಅಂಶಗಳು ಪ್ರಚೋದನಾತ್ಮಕವಾಗಿ ಪ್ರೇರೇಪಿಸುತ್ತವೆ. ಈ ಅಂಶಗಳು ಬದಲಾವಣೆಯ ಗತಿ ಮತ್ತು ತೀವ್ರತೆಯನ್ನು ನಿರ್ಧರಿಸುತ್ತವೆ. ಇವುಗಳಲ್ಲಿ ಪ್ರಮುಖವಾದ ಕೆಲವನ್ನು ಈ ಕೆಳಗೆ ಕೊಡಲಾಗಿದೆ.

ಅ. ಭೌಗೋಳಿಕ ಅಂಶಗಳು

ಆ. ಜೈವಿಕ ಅಂಶಗಳು

ಇ. ಸಾಂಸ್ಕೃತಿಕ ಅಂಶಗಳು

ಈ. ತಾಂತ್ರಿಕ ಅಂಶಗಳು

ಇದಲ್ಲದೆ ಶೈಕ್ಷಣಿಕ ಅಂಶಗಳು, ಆಧುನೀಕರಣ, ಪಾಶ್ಚಾತೀಕರಣ, ಸಂಸ್ಕೃತೀಕರಣ ಮುಂತಾದವು ಸಾಮಾಜಿಕ ಬದಲಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಅವುಗಳನ್ನು ಪರಿವರ್ತನೆಯ ನಿರ್ಧಾರಕಗಳೆನ್ನಬಹುದು. ಈ ಮೇಲಿನ ಎಲ್ಲ ಅಂಶಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಭಿನ್ನವಾಗಿರುವುದರಿಂದ ಸಾಮಾಜಿಕ ಬದಲಾವಣೆಯೂ ಒಂದೇ ತೆರನಾಗಿರುವುದಿಲ್ಲ.

ಅ. ಭೌಗೋಳಿಕ ಅಂಶಗಳು : ಇದರಲ್ಲಿ ಮುಖ್ಯವಾಗಿ ಸಸ್ಯ ಸಂಕುಲ, ಪ್ರಾಣಿ ಸಂಕುಲ, ನೈಸರ್ಗಿಕ ಸಂಪತ್ತುಗಳು (ಅರಣ್ಯಸಂಪತ್ತು, ಜಲಸಂಪತ್ತು, ಖನಿಜ ಸಂಪತ್ತು) ಮತ್ತು ನೈಸರ್ಗಿಕ ವಿಕೋಪಗಳು ಕೂಡಾ ಸಾಮಾಜಿಕ ಬದುಕಿನ ಮೇಲೆ ಪ್ರಭಾವ ಬೀರುತ್ತವೆ. ಕೆಲಮಟ್ಟಿಗೆ ಈ ಮೇಲಿನ ಅಂಶಗಳು ಸಾಮಾಜಿಕ ಬದಲಾವಣೆಯು ಗತಿ ಹಾಗೂ ತೀವ್ರತೆಯನ್ನು ನಿರ್ಧರಿಸುತ್ತವೆ. ಉದಾ: ಸಸ್ಯ ಸಂಪತ್ತು ಸಮೃದ್ಧವಾಗಿರುವ ಪ್ರದೇಶದಲ್ಲಿ, ನದಿತಟದ ಪ್ರದೇಶದಲ್ಲಿ ಸಾಮಾಜಿಕ ಬದಲಾವಣೆ ತೀವ್ರಗತಿಯಲ್ಲಿರುವುದು ಕಂಡು ಬರುತ್ತದೆ. ಯಾಕೆಂದರೆ ಅರಣ್ಯ ಸಂಪತ್ತು ಹೇರಳವಾಗಿರುವಲ್ಲಿ ಕಾಲ ಕಾಲಕ್ಕೆ ಮಳೆ ಬಂದು ಬೆಳೆಯು ಸಮೃದ್ಧವಾಗಿ ಬೆಳೆದು ಉತ್ತಮ ಫಸಲನ್ನು ನೀಡುತ್ತದೆ. ಆ ಮೂಲಕ

ಆರ್ಥಿಕ ಅಭಿವೃದ್ಧಿಯಾಗಿ ಸಾಮಾಜಿಕ ಪರಿವರ್ತನೆ ಉಂಟಾಗುತ್ತದೆ. ಕಡಲ ತೀರದ ಜನರು ಸಮುದ್ರದ ಸವಾಲನ್ನೆದುರಿಸುತ್ತ ಹೆಚ್ಚು ಚಟುವಟಿಕೆಯುಳ್ಳವರಾಗಿರುತ್ತಾರೆ. ಇದಕ್ಕೆ ಭೌಗೋಲಿಕ ಅಂಶವೇ ಕಾರಣವಾಗುತ್ತದೆ.

ಫಲವತ್ತಾದ ಭೂಮಿ, ಹುಲ್ಲುಗಾವಲುಗಳು ಆ ಪ್ರದೇಶದ ಆರ್ಥಿಕ ಪರಿಸ್ಥಿತಿ ಹಾಗೂ ಜನರ ವೃತ್ತಿಯ ಮೇಲೆ ಪ್ರಭಾವ ಬೀರುತ್ತವೆ. ಉತ್ತಮ ಆರ್ಥಿಕ ಪರಿಸ್ಥಿತಿಯು ಸಾಮಾಜಿಕ ಪರಿವರ್ತನೆಗೆ ಮುಖ್ಯ ಕಾರಣವಾಗುತ್ತದೆ. ಉದಾ: ಅಮೇರಿಕ ದೇಶದ ಸದೃಢ ಆರ್ಥಿಕ ಪರಿಸ್ಥಿತಿಯು ಆ ದೇಶದಲ್ಲಾಗುವ ತೀವ್ರಗತಿಯ ಸಾಮಾಜಿಕ ಬದಲಾವಣೆಗೆ ಮುಖ್ಯ ಕಾರಣವಾಗಿದೆ. ಖನಿಜ ಸಂಪತ್ತು ಸಹ ಸಾಮಾಜಿಕ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಉದಾ:- ಪೆಟ್ರೋಲಿಯಂ ಉತ್ಪನ್ನ ಹೇರಳವಾಗಿರುವ ರಾಷ್ಟ್ರಗಳು ಮುಂದುವರಿದ ರಾಷ್ಟ್ರಗಳಾಗಿವೆ. ಹವಾಮಾನವು ಸಾಮಾಜಿಕ ಪರಿವರ್ತನೆಯನ್ನು ನಿರ್ಧರಿಸುತ್ತದೆ. ಅತೀ ಉಷ್ಣತೆಯ ಪ್ರದೇಶ ಮತ್ತು ಅತೀ ಶೀತ ಪ್ರದೇಶಗಳಲ್ಲಿ ಸಾಮಾಜಿಕ ಬದಲಾವಣೆ ತೀವ್ರತೆರನಾಗಿರುವುದಿಲ್ಲ. ಉದಾ:- ಆರ್ಕ್‌ಟಿಕ್ ಮತ್ತು ಅಂಟಾರ್ಟಿಕ್ ಭೂ ಪ್ರದೇಶದಲ್ಲಿ ಸಾಮಾಜಿಕ ಬದಲಾವಣೆ ಮಂದಗತಿಯಲ್ಲಿರುವುದು ಕಂಡುಬರುತ್ತದೆ.

ಪ್ರಕೃತಿ ವಿಕೋಪಗಳು : ಪ್ರಕೃತಿ ವಿಕೋಪಗಳು ಮಾನವನ ಸಾಮಾಜಿಕ ಜೀವನದಲ್ಲಿ ಮಹತ್ತರ ಬದಲಾವಣೆಗಳನ್ನು ತರಲು ಸಾಧ್ಯವಾಗುತ್ತದೆ. ಉದಾ:- ಪ್ರವಾಹ, ಜ್ವಾಲಾಮುಖಿ, ಭೂಕಂಪ, ಚಂಡಮಾರುತ, ಬಿರುಗಾಳಿ, ಅನಾವೃಷ್ಠಿ ತೀವ್ರಗತಿಯಲ್ಲಿ ಸಾಮಾಜಿಕ ಬದಲಾವಣೆಗೆ ಕಾರಣವಾಗುತ್ತವೆ. ಜಪಾನಿನಲ್ಲಿ ಆಗಾಗ್ಗೆ ಏಳುವ ಜ್ವಾಲಾಮುಖಿಯಿಂದಾಗಿ ಜನರು ಹಗುರ ವಸ್ತುಗಳಿಂದ, ತಾತ್ಕಾಲಿಕ ಮನೆಗಳನ್ನು-ಕಟ್ಟಡಗಳನ್ನು ನಿರ್ಮಿಸಿಕೊಳ್ಳುತ್ತಾರೆ. ತೀವ್ರತರನಾದ ನೈಸರ್ಗಿಕ ವಿಕೋಪಗಳಿಂದಾಗಿ ಮರಣ ಸಂಖ್ಯೆ ಅತಿಯಾಗಿ ಜನಸಂಖ್ಯೆ ರಚನೆಯ ಬದಲಾವಣೆಗೆ ಕಾರಣವಾಗುತ್ತದೆ. ಹೀಗೆ ಭೌಗೋಲಿಕ ವ್ಯತ್ಯಾಸವು ಮಾನವನ ಎಲ್ಲಾ ಚಟುವಟಿಕೆಗಳನ್ನು ನಿರ್ಧರಿಸುವ ಕಾರಣ, ಸಾಮಾಜಿಕ ಬದಲಾವಣೆಯ ಮೇಲೆ ಅವುಗಳ ಪ್ರಭಾವ ಮಹತ್ತರವಾಗಿದೆ. ಜನಸಂಖ್ಯಾ ಹಂಚಿಕೆಯು ಭೌಗೋಲಿಕ ಸನ್ನಿವೇಶಗಳಿಂದ ಪ್ರೇರಿತವಾಗಿದೆ. ತೀರ ಉತ್ತರ ಭಾಗದಲ್ಲಿರುವ ಶೀತಲ ಧ್ರುವ ಪ್ರದೇಶದಲ್ಲಿ ಎಸ್ಕಿಮೊ ಜನರಲ್ಲಿ ಸಾಮಾಜಿಕ ಬದಲಾವಣೆಯು ಅತೀ ಮಂದಗತಿಯಲ್ಲಿರುತ್ತದೆ. ಅದೇ ಆಗ್ನೇಯ ಏಷ್ಯಾ ಮತ್ತು ಯುರೋಪಿನಲ್ಲಿ ಸಾಮಾಜಿಕ ಬದಲಾವಣೆ ತೀವ್ರಗತಿಯಲ್ಲಿರುವುದು. ಸಿದ್ಧಾಂತಕಾರರಾದ ಹಂಟಿಂಗ್‌ಟನ್, ಮೊಂಟೊಸ್ಕೊ, ಲೀಪ್ಲೆ ಮಾನವನ ಜನಜೀವನದ ಮೇಲೆ ಭೌಗೋಲಿಕ ಅಂಶದ ಪ್ರಭಾವನ್ನು ಪ್ರತಿಪಾದಿಸಿರುವರು.

ಆ. ಜೈವಿಕ ಅಂಶಗಳು : ಜೈವಿಕ ಅಂಶಗಳಾದ ಜನಸಂಖ್ಯೆ, ಜನಸಂಖ್ಯೆಯ ಗತಿಯಲ್ಲಾಗುವ ಏರುಪೇರುಗಳು, ಫಲವಂತಿಕೆ, ಜನನ ದರ, ಮರಣದರ, ಲಿಂಗ ಪ್ರಮಾಣ, ಅನುವಂಶೀಯತೆ, ಮದುವೆಯ ವಯಸ್ಸು, ಆರೋಗ್ಯ, ಸಂತಾನ ನಿಯಂತ್ರಣ ಇವೇ ಮುಂತಾದ ಅಂಶಗಳು ಸಾಮಾಜಿಕ ಪರಿವರ್ತನೆಯಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

ಜನಸಂಖ್ಯೆಯಲ್ಲಾಗುವ ಪರಿವರ್ತನೆ : ಜನನ, ಮರಣ ಮತ್ತು ವಲಸೆ ಈ ಮೂರು ಅಂಶಗಳು ಜನಸಂಖ್ಯೆಯಲ್ಲಿನ ಪರಿವರ್ತನೆಗೆ ಕಾರಣವಾಗುತ್ತವೆ. ಉದಾ:- ಜನನ ದರದ ಹೆಚ್ಚಳದಿಂದಾಗಿ ಸಮಾಜದಲ್ಲಿ ಅನೇಕ ಬದಲಾವಣೆಗಳು ಕಂಡುಬರುತ್ತವೆ. ಇದರಿಂದಾಗಿ ಅನೇಕ ಸಮಸ್ಯೆಗಳು ಉದ್ಭವಗೊಂಡಿವೆ. ಉದಾ: ಅನಕ್ಷರತೆ, ಅನಾರೋಗ್ಯ, ನಿರುದ್ಯೋಗ, ಬಡತನ, ಶಿಶುಮರಣ, ಇವೆಲ್ಲವೂ ಜನನ ಪ್ರಮಾಣದ ಹೆಚ್ಚಳದಿಂದಾದ ಬದಲಾವಣೆಗಳಾಗಿವೆ. ಜನಸಂಖ್ಯೆ ಮತ್ತು ಸಂಪನ್ಮೂಲಗಳ ಅಸಮತೋಲದಿಂದಾಗಿ ಅನೇಕ ಬದಲಾವಣೆಗಳು ಕಂಡು ಬರುತ್ತವೆ. ಉದಾ: ಜನಸಂಖ್ಯೆ ಮತ್ತು ಸಂಪನ್ಮೂಲಗಳು ಸಮತೋಲನದಲ್ಲಿದ್ದ ಪ್ರದೇಶದಲ್ಲಿರುವ ಜನರ ಜೀವನಮಟ್ಟದಲ್ಲಿ ಬಹಳಷ್ಟು ಸುಧಾರಣೆಗಳನ್ನು ಕಾಣುತ್ತೇವೆ. ಅದಲ್ಲದೆ ಫಲಿತತೆ ಕಡಿಮೆ ಇರುವ ಪ್ರದೇಶದ ಜನರು ಮಕ್ಕಳ ಲಾಲನೆ-ಪಾಲನೆಯ ಕಡೆ ಹೆಚ್ಚಿನ ಗಮನವನ್ನಿಟ್ಟಕಾರಣ ಶಿಶುಮರಣ ದರದಲ್ಲಿ ತೀವ್ರ ಇಳಿಮುಖ ಕಾಣಬಹುದು.

ವಿಳಂಬ ವಿವಾಹದಿಂದಾಗಿ ಜನನ ಪ್ರಮಾಣದಲ್ಲಿ ಬದಲಾವಣೆಯನ್ನು ಕಾಣಬಹುದು. ನಗರ ಪ್ರದೇಶದ ಜನನ ಪ್ರಮಾಣದ ಇಳಿಮುಖಕ್ಕೆ ಅಲ್ಲಿಯ ತೀವ್ರತರದ ಸಾಮಾಜಿಕ ಬದಲಾವಣೆ ಒಂದು ಕಾರಣವಾಗಿರುತ್ತದೆ. ಕುಟುಂಬದ ಗಾತ್ರದ ಇಳಿಮುಖದಿಂದಾಗಿ ಹತ್ತು ಹಲವು ದಿಶೆಗಳಲ್ಲಿ ಸಾಮಾಜಿಕ ಬದಲಾವಣೆಯಾಗಿದೆ. ಉದಾ: ಮಹಿಳೆಯರ ಆರೋಗ್ಯದಲ್ಲಿ ಸುಧಾರಣೆ, ಮಹಿಳೆಯರ ಸ್ಥಾನಮಾನದಲ್ಲಿ ಮಹತ್ತರ ಬದಲಾವಣೆ, ಉನ್ನತ ಜೀವನಮಟ್ಟ.

ಲಿಂಗಪರಿಮಾಣ : ಒಂದು ಸಾವಿರ ಪುರುಷರಿಗೆ ಎಷ್ಟು ಸ್ತ್ರೀಯರಿದ್ದಾರೆ ಎಂದು ತೋರಿಸುವ ಪರಿಮಾಣವನ್ನು ಲಿಂಗಪರಿಮಾಣ ಎನ್ನುತ್ತಾರೆ. ವಿದೇಶಗಳಲ್ಲಿ ಲಿಂಗಪ್ರಮಾಣವನ್ನು ಒಂದು ಸಾವಿರ ಸ್ತ್ರೀಯರಿಗೆ ಎಷ್ಟು ಪುರುಷರಿದ್ದಾರೆ ಎನ್ನುವುದನ್ನು ತೋರಿಸುತ್ತದೆ. ಈ ಲಿಂಗಪರಿಮಾಣದಲ್ಲಾಗುವ ಏರುಪೇರುಗಳು ಸಮಾಜದಲ್ಲಿ ಅನೇಕ ಮಾರ್ಪಾಡುಗಳನ್ನು ತರುತ್ತವೆ. ಉದಾ:- ಪುರುಷರ ಪ್ರಮಾಣ ಸ್ತ್ರೀಯರಿಗಿಂತಲೂ ಹೆಚ್ಚಾಗಿದ್ದಲ್ಲಿ ಆ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನದಲ್ಲಿ ಬದಲಾವಣೆ ಆಗುವ ಸಾಧ್ಯತೆಗಳು ಹೆಚ್ಚು. ಸ್ತ್ರೀಯರ ಮೇಲಿನ ದೌರ್ಜನ್ಯಕ್ಕೂ ಕಾರಣವಾಗುತ್ತದೆ. ಲಿಂಗಪರಿಮಾಣದಲ್ಲಿನ ಬದಲಾವಣೆ, ವಿವಾಹದ ವಯಸ್ಸು, ಕುಟುಂಬ ನಿರ್ವಹಣೆಯಲ್ಲಿ ಹಲವಾರು ಬದಲಾವಣೆಗಳನ್ನು ತರುತ್ತದೆ. ಇತ್ತೀಚಿಗೆ ಭಾರತದ ಜನಸಂಖ್ಯೆಯಲ್ಲಿ ಸ್ತ್ರೀಯರ ಲಿಂಗಪರಿಮಾಣ ತೀವ್ರ ಇಳಿಮುಖಗೊಂಡಿದ್ದು ಜನಸಂಖ್ಯಾಶಾಸ್ತ್ರಜ್ಞರ ಗಮನ ಸೆಳೆದಿದೆ. ಇದರಿಂದಾಗುವ ಪರಿಣಾಮಗಳನ್ನು ಮನಗಂಡು ಇತ್ತೀಚೆಗೆ ಭ್ರೂಣಪರೀಕ್ಷೆ, ಲಿಂಗಪತ್ತೆ ವಿಧಾನಗಳನ್ನು ನಿರ್ಬಂಧಿಸಲಾಗಿದೆ.

ಜನಸಂಖ್ಯೆಯ ವಯೋರಚನೆಯಲ್ಲಿ ಬದಲಾವಣೆ : ಒಟ್ಟು ಜನಸಂಖ್ಯೆಯನ್ನು ಮೂರು ಮುಖ್ಯ ಗುಂಪುಗಳನ್ನಾಗಿ ವಿಂಗಡಿಸಿದ್ದಾರೆ.

೧ ರಿಂದ ೧೪ ವರ್ಷದ ವರೆಗಿನವರು - ಮಕ್ಕಳು

೧೫ ರಿಂದ ೫೯ ವರ್ಷದವರು - ವಯಸ್ಕರು

೬೦ ರಿಂದ ಮೇಲ್ಪಟ್ಟವರು - ವೃದ್ಧರು

ಒಂದು ಸಮಾಜದಲ್ಲಿ ೧೫ ರಿಂದ ೫೯ ವರ್ಷದ ಜನರು ಅಂದರೆ ವಯಸ್ಕರು, ದುಡಿಯುವವರು, ಉತ್ಪಾದನಾ ಪ್ರಕ್ರಿಯೆಯಲ್ಲಿ ತೊಡಗಿರುವವರು ಹೆಚ್ಚಿನ ಪ್ರಮಾಣದಲ್ಲಿ ಇದ್ದರೆ ಆ ಸಮಾಜದ ಉತ್ಪಾದನೆಯಲ್ಲಿ ಬಹಳಷ್ಟು ಸಕಾರಾತ್ಮಕ ಮತ್ತು ಗುಣಾತ್ಮಕ ಬದಲಾವಣೆಗಳನ್ನು ಕಾಣುತ್ತೇವೆ. ಸಾಮಾಜಿಕ ಜೀವನದಲ್ಲೂ ಈ ಗುಂಪಿನ ಜನರು ಬಹಳ ಚಟುವಟಿಕೆಯುಳ್ಳವರೂ, ಜಾಗೃತರೂ, ಸಾಮರ್ಥ್ಯವುಳ್ಳವರಾದ ಕಾರಣ ಹೆಚ್ಚಿನ ಮಾರ್ಪಾಡುಗಳನ್ನು ಕಾಣಬಹುದು. ಯುವಜನಾಂಗ ಹೆಚ್ಚಾಗಿರುವ ಸಮಾಜ ಹೆಚ್ಚು ಮುಕ್ತವಾಗಿದ್ದು, ಪ್ರಗತಿಶೀಲವಾಗಿರುವುದರಿಂದ ಅಲ್ಲಿ ಸಾಮಾಜಿಕ ಪರಿವರ್ತನೆ ತೀವ್ರಗತಿಯಲ್ಲಿ ಕಂಡುಬರುವುದು. ವೃದ್ಧರು ಹೆಚ್ಚಾಗಿರುವ ಸಮಾಜದಲ್ಲಿ ಪರಂಪರಾಗತ ದೃಷ್ಟಿಕೋನದ ಕಡೆಗೆ ಒಲವು ಜಾಸ್ತಿಯಾಗಿರುತ್ತದೆ. ಅಂತಹ ಸಮಾಜದಲ್ಲಿ ಸಾಮಾಜಿಕ ಪರಿವರ್ತನೆಯ ಗತಿ ತೀವ್ರವಾಗಿರುವುದಿಲ್ಲ. ಮಧ್ಯ ವಯಸ್ಸಿನ ಪ್ರೌಢರು ಹೆಚ್ಚಾಗಿ ಇರುವ ಸಮಾಜದಲ್ಲಿ ಸಮತೋಲನ ಗತಿಯ ಸಾಮಾಜಿಕ ಬದಲಾವಣೆ ಕಂಡುಬರುತ್ತದೆ.

ಜನಸಂಖ್ಯೆಯ ನಿರ್ಧಾರಕಗಳಾದ ಜನನ ಮತ್ತು ಮರಣದರದ ಪರಿಣಾಮವಾಗಿ ವಯೋರಚನೆಯಲ್ಲಿ ಅನೇಕ ಬದಲಾವಣೆಗಳಾಗಿವೆ. ಇವುಗಳಲ್ಲಿ ಎರಡು ಪರಿವರ್ತನೆಗಳು ಪ್ರಮುಖವಾಗಿದೆ.

೧. ಹೆಚ್ಚುತ್ತಿರುವ ವೃದ್ಧರ ಸಂಖ್ಯೆ

೨. ಇಳಿಮುಖಗೊಳ್ಳುತ್ತಿರುವ ಮಕ್ಕಳ ಸಂಖ್ಯೆ

ಈ ತರಹದ ವಯೋರಚನೆಯು ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಿದೆ. ಉದಾ:- ವಯೋವೃದ್ಧರ ಜನಸಂಖ್ಯೆ ಹೆಚ್ಚಿದಂತೆ, ಅವರ ಲಾಲನೆ-ಪಾಲನೆಯ ಜವಾಬ್ದಾರಿಯು ಹೆಚ್ಚಿದೆ. ಅಂತೆಯೇ ವೃದ್ಧಾಶ್ರಮಗಳು ತಲೆ ಎತ್ತುತ್ತಿವೆ. ಹಿಂದಿನ ವಾನಪ್ರಸ್ಥಾಶ್ರಮಕ್ಕೆ ಸರಿಸಮಾನವಾಗಿ ವೃದ್ಧಾಶ್ರಮಗಳು ತಲೆಎತ್ತಿವೆ. ವಯೋಸಂರಚನೆಯಲ್ಲಾದ ಬದಲಾವಣೆಗಳು ಒಟ್ಟಾರೆ ಸಾಮಾಜಿಕ ಜೀವನದಲ್ಲಿ ಹಾಗೂ ಕುಟುಂಬಗಳಲ್ಲಿ ಬದಲಾವಣೆಯ ಬಿರುಗಾಳಿಯನ್ನೇ ಎಬ್ಬಿಸಿವೆ.

ಜನಸಂಖ್ಯಾ ನೀತಿ ಮತ್ತು ಸಾಮಾಜಿಕ ಬದಲಾವಣೆ : ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆಯನ್ನು ಹತೋಟಿಯಲ್ಲಿಡುವ ಸಲುವಾಗಿ ಆವಿಷ್ಕಾರಗೊಂಡಿದ್ದು ಜನಸಂಖ್ಯಾ ನೀತಿ ಅಥವಾ ಧೋರಣೆ. ಪ್ರಪ್ರಥಮವಾಗಿ ಜನಸಂಖ್ಯಾ ಧೋರಣೆಯನ್ನು ಜಾರಿಗೆ ತಂದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ. ಜನಸಂಖ್ಯಾ ಧೋರಣೆ ಜಾರಿಗೆ ಬಂದ ದಿನದಿಂದ ಅನೇಕಾನೇಕ ಬದಲಾವಣೆಗಳಾಗಿವೆ. ಉದಾ: ಜನನ ದರ ಹಾಗೂ ಮರಣ ದರದಲ್ಲಿ ತೀವ್ರ ಬದಲಾವಣೆಗಳಾಗಿವೆ.

ಜನನ ದರ ೧೯೦೧ ರಲ್ಲಿ ೪೯.೨ ಇದ್ದು ೧೯೯೯ ರಲ್ಲಿ ೨೪.೬ರಕ್ಕೆ ಇಳಿದಿದೆ. ಅಂತೆಯೇ ಮರಣ ದರ ೧೯೦೧ ರಲ್ಲಿ ೪೨.೬ ಇತ್ತು, ಅದೇ ೧೯೯೯ರಲ್ಲಿ ೮.೭ಕ್ಕೆ ಇಳಿದಿದೆ. ಇವುಗಳಲ್ಲದೆ, ಶಿಶುಮರಣದಲ್ಲಿ ಇಳಿಮುಖ, ಮದುವೆಯ ವಯಸ್ಸಿನ ಮುಂದೂಡಿಕೆ, ಮಕ್ಕಳ ಜನನದ ನಡುವಿನ ಅಂತರ, ಸಂತಾನಹರಣ ಮತ್ತು ಕುಟುಂಬ ಯೋಜನೆಯ ಬಗ್ಗೆ ತಿಳುವಳಿಕೆಗಳನ್ನು ನಾವು ನೋಡಬಹುದು. ಇವೆಲ್ಲವೂ ಸಾಮಾಜಿಕ ಬದಲಾವಣೆಯ ಕಾರಕಾಂಶಗಳಾಗಿವೆ.

ಸಿ. ಸಾಂಸ್ಕೃತಿಕ ಅಂಶಗಳು : ಕೆಲವು ಸಮಾಜಶಾಸ್ತ್ರಜ್ಞರು ಸಾಂಸ್ಕೃತಿಕ ಪರಿವರ್ತನೆ ಮತ್ತು ಸಾಮಾಜಿಕ ಪರಿವರ್ತನೆ ಒಂದೇ ಎಂಬ ನಿಟ್ಟಿನಲ್ಲಿ ವಾದಿಸುತ್ತಾರೆ. ಉದಾಹರಣೆಗೆ ಕೆ. ಡೇವಿಸ್‌ರವರು ಈ ಅಭಿಪ್ರಾಯ ಹೊಂದಿದ್ದರು. ಸಾಂಸ್ಕೃತಿಕ ಅಂಶಗಳು ಸಾಮಾಜಿಕ ಬದಲಾವಣೆಗೆ ಕಾರಣವಾಗುತ್ತದೆ ಎನ್ನುವುದನ್ನು **ಆಗ್‌ಬರ್ನ್** ಮತ್ತು **ನಿಮ್‌ಕಾಫ್‌**ರವರು ವಿವರಿಸಿದ್ದಾರೆ. ಅವರು ಎರಡು ವಿಧದ ಸಂಸ್ಕೃತಿಯನ್ನು ವಿಶ್ಲೇಷಿಸುವ ಮೂಲಕ ಈ ಅಂಶವನ್ನು ಎತ್ತಿ ಹಿಡಿದ್ದಾರೆ.

೧. ಭೌತ ಸಂಸ್ಕೃತಿ

೨. ಅಭೌತ ಸಂಸ್ಕೃತಿ

ಭೌತ ಸಂಸ್ಕೃತಿ : ಭೌತ ಸಂಸ್ಕೃತಿಯು ವಸ್ತುರೂಪದಲ್ಲಿದ್ದು ಎಲ್ಲಾ ಮಾನವ ನಿರ್ಮಿತ ವಸ್ತುಗಳನ್ನು ಒಳಗೊಂಡಿರುತ್ತದೆ. ಉದಾ: ಕಾಗದ, ಪೆನ್ನು, ಗಣಕಯಂತ್ರ, ಹಡಗುಗಳು, ಗ್ರಂಥಾಲಯ, ಅಂಗಡಿ, ಸೇತುವೆ, ವಾಸಗೃಹಗಳು ಇತ್ಯಾದಿ. ಭೌತ ಸಂಸ್ಕೃತಿಯು ತೀವ್ರಗತಿಯಲ್ಲಿ ಪರಿವರ್ತನೆ ಹೊಂದುತ್ತಿದೆ. ಓಲೆಗರಿಗಳ ಮೇಲೆ ಮೊದಲು ಬರೆಯುತ್ತಿದ್ದರು. ಈಗ ಗಣಕಯಂತ್ರದ ಪರದೆಗಳ ಮೇಲೆ ಮೂಡಿಸುತ್ತೇವೆ.

ಅಭೌತ ಸಂಸ್ಕೃತಿ : ಇವುಗಳು ಮೌಲ್ಯ ಅಥವಾ ಆಧ್ಯಾತ್ಮ ರೂಪದಲ್ಲಿರುತ್ತವೆ. ಇವುಗಳು ಮಾನವ ನಿರ್ಮಿತವಲ್ಲ. ಉದಾ:- ತ್ಯಾಗ, ಸಹಕಾರ, ಮುಂತಾದವು ಜೀವನದ ಮೌಲ್ಯಗಳು. ಇವುಗಳ ಬದಲಾವಣೆಗೆ ತುಂಬಾ ಕಾಲವಾಕಾಶ ಬೇಕು.

ಹೀಗೆ ಎರಡೂ ಸಂಸ್ಕೃತಿಗಳಲ್ಲಿ ಬದಲಾವಣೆ ಒಂದೇ ತೆರನಾಗಿಲ್ಲ. ಒಂದು ತೀವ್ರಗತಿಯಲ್ಲಿ ಬದಲಾವಣೆ ಹೊಂದುತ್ತದೆ. ಹಾಗೇ ಇನ್ನೊಂದು ನಿಧಾನಗತಿಯಲ್ಲಿ ಬದಲಾವಣೆ ಹೊಂದುತ್ತದೆ. ಆ ಕಾರಣ ಎರಡೂ ಸಂಸ್ಕೃತಿಗಳ ನಡುವೆ ಕಂದಕ ಏರ್ಪಡುತ್ತದೆ. ಈ ಎರಡೂ ಸಂಸ್ಕೃತಿಗಳ ನಡುವೆ ಏರ್ಪಡುವ ಕಂದಕವನ್ನು ಸಾಂಸ್ಕೃತಿಕ ಹಿಂಬೀಳುವಿಕೆ ಎಂದು **ಆಗ್‌ಬರ್ನ್** ಮತ್ತು **ನಿಮ್‌ಕಾಫ್‌**ರವರು ಹೆಸರಿಸಿದ್ದಾರೆ. ಈ ವ್ಯತ್ಯಾಸವನ್ನು ಅಥವಾ ಹಿಂಬೀಳುವಿಕೆಯನ್ನು ಇನ್ನೂ ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ತಿಳಿಯುವುದೇನೆಂದರೆ, ಜನರು ಭೌತಸಂಸ್ಕೃತಿಯನ್ನು ಅಷ್ಟೊಂದು ಮುಕ್ತಮನಸ್ಸಿನಿಂದ ಒಪ್ಪಿಕೊಳ್ಳದಿರುವುದು. ಒಮ್ಮೊಮ್ಮೆ ಭೌತಸಂಸ್ಕೃತಿಯನ್ನು ಸಂಶಯಾತ್ಮಕ ದೃಷ್ಟಿಯಿಂದಲೂ ನೋಡಬಹುದು ಅಥವಾ ಕಟ್ಟುನಿಟ್ಟಿನ ಪಾರಂಪರಾಗತ ಸಮಾಜ ಭೌತಸಂಸ್ಕೃತಿಯನ್ನು ಸ್ವೀಕರಿಸಲು ಹಿಂಜರಿಯುವುದು.

ಈ ಎರಡು ಸಂಸ್ಕೃತಿಗಳ ನಡುವೆ ಕಂದಕ ಇದ್ದರೂ, ಸಂಸ್ಕೃತಿ ಬದಲಾಗುತ್ತಲೇ ಇರುತ್ತದೆ. ಹರಿಯುವ ನೀರಿನಂತೆ ಬದಲಾವಣೆ ಅದರ ಸ್ವರೂಪವಾಗಿದೆ. ಸಂಸ್ಕೃತಿಯು ಸಾಮಾಜಿಕ ಬದಲಾವಣೆಯ ದಿಕ್ಕನ್ನು ತೋರಿಸುತ್ತದೆ.

ಭೌತ ಮತ್ತು ಅಭೌತ ಸಂಸ್ಕೃತಿ ವಿಭಿನ್ನವಾಗಿದ್ದರೂ ಅವೆರಡೂ ಒಂದಕ್ಕೊಂದು ಪೂರಕವಾದವುಗಳಾಗಿವೆ. ಏಕೆಂದರೆ ಸಂಸ್ಕೃತಿ ಯಾವಾಗಲೂ ಬದಲಾಗುತ್ತಿರುವ ತಾಂತ್ರಿಕತೆ (ಭೌತ ಸಂಸ್ಕೃತಿ)ಯಿಂದ ಪ್ರಭಾವಿತಗೊಂಡಿರುತ್ತದೆ. ಉದಾ:- ಪತ್ರ ವ್ಯವಹಾರದಲ್ಲಾದ ಬದಲಾವಣೆ ಸಾಮಾಜಿಕ ಸಂಬಂಧಗಳ ಪರಿವರ್ತನೆಗೆ ಕಾರಣವಾಗಿದೆ. (ಕಾಗದ ಪತ್ರಗಳಿಂದ ವಿದ್ಯುನ್ಮಾನ ಪತ್ರಗಳ ಆವಿಷ್ಕಾರ).

ಹೀಗೆ ಭೌತ ಮತ್ತು ಅಭೌತ ಸಂಸ್ಕೃತಿಗಳೆರಡೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಾಮಾಜಿಕ ಬದಲಾವಣೆ ತರಲು ಕಾರಣವಾಗಿದೆ.

ಸಾಮಾಜಿಕ ಶಾಸನಗಳು : ಸಾಮಾಜಿಕ ಶಾಸನಗಳು ಸಾಮಾಜಿಕ ಬದಲಾವಣೆಯಲ್ಲಿ ಅತೀ ಪ್ರಮುಖ ಸ್ಥಾನವನ್ನು ಪಡೆದಿವೆ. ಸಾಮಾಜಿಕ ಶಾಸನಗಳಿಂದಾಗಿ ಸಾಮಾಜಿಕ ಸಂಸ್ಥೆಗಳಾದ ವಿವಾಹ, ಕುಟುಂಬ, ಧರ್ಮ, ಶಿಕ್ಷಣದಲ್ಲಿ ಬದಲಾವಣೆಗಳನ್ನು ಕಾಣುತ್ತೇವೆ. ಸಾಮಾಜಿಕ ಶಾಸನಗಳಿಂದಾಗಿ ಸಾಮಾಜಿಕ ಮೌಲ್ಯಗಳು ಸಾಕಷ್ಟು ಬದಲಾಗಿವೆ. ಇಂದು ವಿವಾಹ ಮತ್ತು ಕುಟುಂಬಗಳು ಹಿಂದಿನಷ್ಟು ಪ್ರಬಲವಾಗಿ ಉಳಿದಿಲ್ಲ. ಉದಾ:- ಮಹಿಳೆಯ ಸ್ಥಾನಮಾನದಲ್ಲಿ ಆದ ಬದಲಾವಣೆ, ಸ್ತ್ರೀ ಪುರುಷರ ಪಾತ್ರಗಳ ಬದಲಾವಣೆ, ಆರ್ಥಿಕ ಸ್ವಾವಲಂಬನೆ, ಹೊಸ ವರ್ಗಗಳ ಉದಯ, ಅಸ್ಪೃಶ್ಯತಾ ನಿವಾರಣೆ, ಶಾಸನ, ಮಹಿಳೆಯ ಆಸ್ತಿಯ ಹಕ್ಕು, ಮಕ್ಕಳ ಹಕ್ಕು ಇವುಗಳ ಬಗ್ಗೆ ಇರುವ ಶಾಸನಗಳು ಸಾಮಾಜಿಕ ಜೀವನದಲ್ಲಿ ಹತ್ತು ಹಲವು ರೀತಿಯ ಪರಿವರ್ತನೆಯನ್ನು ತಂದಿವೆ.

ಸಾಮಾಜಿಕ ಶಾಸನಗಳಿಂದಾಗಿ ಉಂಟಾದ ಬದಲಾವಣೆಗಳೆಲ್ಲವೂ ಯಾವಾಗಲೂ ಸಕಾರಾತ್ಮಕವಾಗಿರುವುದಿಲ್ಲ. ಕೆಲವೊಮ್ಮೆ ಸ್ಥಾಪಿತ ಸಂಘಟನೆಗಳ ಕುಸಿತಕ್ಕೂ ಆಸ್ಪದ ಕೊಟ್ಟು, ಸಾಮಾಜಿಕ ಸಮಸ್ಯೆಯನ್ನೊಡ್ಡುತ್ತವೆ. ಉದಾ:- ಆರ್ಥಿಕ ಸಂಘಟನೆಗಳು ಒಡೆದು ಹೋಗುವುದರಿಂದ ನಿರುದ್ಯೋಗ, ಆರ್ಥಿಕ ಕ್ಲೇಶಗಳು ತಲೆದೋರುವವು.

ಈ. ತಾಂತ್ರಿಕ ಅಂಶಗಳು : ತಾಂತ್ರಿಕ ಅಂಶಗಳೆಂದರೆ ವಿಜ್ಞಾನ ಮತ್ತು ತಂತ್ರಜ್ಞಾನ ಒಂದಕ್ಕೊಂದು ಬೆಸೆದಿರುವ ಸಂಗತಿಗಳು. **ಇಮಾನ್ಯುವೆಲ್ ಮೆಸ್ತೆನ್** "ತಂತ್ರಜ್ಞಾನ ಮಾನವನ ಉಪಕರಣಗಳ ಪೆಟ್ಟಿಗೆ" ಎಂದಿರುವನು. ತಾಂತ್ರಿಕತೆಯು ಸಮಾಜದ ಪರಿಸರವನ್ನು ಬದಲಾಯಿಸುತ್ತದೆ. ಮಾನವನು ತಾಂತ್ರಿಕತೆಯನ್ನು ಬಳಸಿಕೊಂಡು ಅನೇಕ ಹೊಸ ಬದಲಾವಣೆಗಳನ್ನು ಹೊರಹೊಮ್ಮಿಸಿದ್ದಾನೆ. ಉದಾ:- ಸುಧಾರಿತ ತಳಿಗಳ-ಬೀಜಗಳ ಉತ್ಪಾದನೆ, ರಾಸಾಯನಿಕ ಗೊಬ್ಬರಗಳ ಬಳಕೆ, ವ್ಯವಸಾಯದಲ್ಲಿ ಯಂತ್ರೋಪಕರಣಗಳ ಬಳಕೆ ಇವುಗಳೆಲ್ಲದರ ಒಟ್ಟಾರೆ ಪರಿಣಾಮವು ಸಾಮಾಜಿಕ ಜೀವನದಲ್ಲಾದ ಪರಿವರ್ತನೆಯ ರೂಪದಲ್ಲಿ ಕಂಡು ಬರುತ್ತದೆ. ತಾಂತ್ರಿಕ ಅಂಶಗಳಿಂದಾದ ಬದಲಾವಣೆಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು :

೧. ಔದ್ಯೋಗಿಕರಣ

೨. ಕೃಷಿಯಲ್ಲಿ ತಾಂತ್ರಿಕತೆ

೩. ಸಾರಿಗೆ ಸಂಪರ್ಕಗಳ ಸುಧಾರಣೆ

೪. ಸಮೂಹ ಮಾಧ್ಯಮಗಳಲ್ಲಿ ಹೊಸ ಆವಿಷ್ಕಾರಗಳು

೫. ಹೊಸ ಹೊಸ ವಿಚಾರಗಳ ಉದಯ

೬. ನಗರೀಕರಣ

೭. ಜಾತಿಯ ಪ್ರಭಾವ ಕಡಿಮೆಯಾಗುತ್ತಿರುವುದು.

೧. ಔದ್ಯೋಗಿಕರಣ : ಹೊಸ ತಂತ್ರಜ್ಞಾನದ ಆವಿಷ್ಕಾರದಿಂದಾಗಿ ಹೊಸ ಹೊಸ ಉಪಕರಣಗಳನ್ನು ನಿರ್ಮಿಸಲಾಯಿತು. ಮಾನವನ ಕೈಕಸುಬುಗಳೆಲ್ಲವೂ ಮೂಲೆಪಾಲಾದವು. ಕೈಯಿಂದ ಮಾಡುತ್ತಿದ್ದ ಕೆಲಸಗಳೆಲ್ಲವನ್ನೂ ಯಂತ್ರಗಳು ಮಾಡತೊಡಗಿದವು. ಬೃಹತ್ ಯಂತ್ರಗಳ ಆವಿಷ್ಕಾರದಿಂದಾಗಿ ಬೃಹತ್ ಕೈಗಾರಿಕೆಗಳು ಹುಟ್ಟಿಕೊಂಡವು. ಉತ್ಪನ್ನಗಳ ಪರಿಮಾಣ ಹೆಚ್ಚಾಗಿ, ಮಾರುಕಟ್ಟೆಯ ಅಭಿವೃದ್ಧಿಗೆ ಕಾರಣವಾದವು. ಉದ್ಯೋಗಾವಕಾಶಗಳು ಹೆಚ್ಚಾದುವು. ಹೆಚ್ಚಿನ ಸಂಪಾದನೆಯಿಂದಾಗಿ ಮಾನವನ ಜೀವನಮಟ್ಟದಲ್ಲಿ ಏರಿಕೆ ಉಂಟಾಯಿತು.

೨. ಕೃಷಿಯಲ್ಲಿ ತಾಂತ್ರಿಕತೆ : ಯಂತ್ರಗಳ ಆವಿಷ್ಕಾರ ಕೃಷಿ ಜಗತ್ತನ್ನು ಅಲ್ಲೋಲಕಲ್ಲೋಲ ಮಾಡಿದವು. ಸಂಪೂರ್ಣವಾಗಿ ನಿಸರ್ಗವನ್ನೇ ನಂಬಿದಂತಹ ಕೃಷಿಕ ಈಗ ಕೃತಕ ಮಳೆಯನ್ನು ಪಡೆಯುವಂತಾದದ್ದು ನೂತನ ತಾಂತ್ರಿಕತೆಯಿಂದಾಗಿ. ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆ, ಅದರಲ್ಲೂ ಟ್ರಾಕ್ಟರ್‌ನ ಬಳಕೆ, ರಾಸಾಯನಿಕ ಗೊಬ್ಬರ, ವಿವಿಧ ತಳಿಗಳ-ಬೀಜಗಳು, ರಾಸಾಯನಿಕ ಕಳೆ ನಾಶಕಗಳು, ಕ್ರಿಮಿನಾಶಕಗಳು, ನೀರಾವರಿ ಕಾಲುವೆಗಳು, ಆಣೆಕಟ್ಟುಗಳು ಇವೆಲ್ಲವೂ ತಾಂತ್ರಿಕತೆಯಿಂದಾದ ಬದಲಾವಣೆಗಳು. ಈ ಎಲ್ಲಾ ಬದಲಾವಣೆಯಿಂದಾಗಿ ಕೃಷಿಕರು ಹೆಚ್ಚಿನ ಇಳುವರಿಯನ್ನು-ಲಾಭವನ್ನು ಪಡೆಯುವಂತಾಯಿತು. ಪರಿಣಾಮವಾಗಿ ಅವರ ಜೀವನ ಶೈಲಿಯಲ್ಲಿ ಪರಿವರ್ತನೆ ಬಂದಿತು.

೩. ಸಾರಿಗೆ ಸಂಪರ್ಕಗಳ ಸುಧಾರಣೆ : ಸಂಪರ್ಕ ಸಾಧನದ ಬಳಕೆಯು ಸಾರಿಗೆ ಸಂಪರ್ಕದಲ್ಲಿ ಕ್ರಾಂತಿಯನ್ನುಂಟು ಮಾಡಿತು. ಒಂದೂರಿನಿಂದ ಇನ್ನೊಂದು ಊರಿಗೆ ಕಡಿಮೆ ವೇಳೆಯಲ್ಲಿ ಪ್ರಯಾಣಿಸುವಂತಾಯಿತು. ವಾಯುಯಾನ, ಜಲಯಾನ ಮತ್ತು ನೆಲ ಸಂಪರ್ಕದಿಂದಾಗಿ ಮಾನವ ಜನಜೀವನದ ಗತಿಯೇ ಬದಲಾವಣೆ ಹೊಂದಿತು. ಮೆಟ್ರೋರೈಲುಗಳು, ವಿದ್ಯುತ್ ರೈಲುಗಳು ಕಡಿಮೆ ಖರ್ಚಿನಲ್ಲಿ, ಕಡಿಮೆ ಅವಧಿಯಲ್ಲಿ ಪ್ರಯಾಣಿಸುವ ಅವಕಾಶವನ್ನು ಕಲ್ಪಿಸಿವೆ. ಸರಕು ಸಾಗಾಣಿಕೆಯಲ್ಲಿ ಮಹತ್ತರ ಪಾತ್ರವಹಿಸಿ ಆರ್ಥಿಕತೆಯ ದಿಕ್ಕನ್ನೆ ಬದಲಾಯಿಸಿದೆ. ಈ ಎಲ್ಲಾ ಸಂಪರ್ಕ ಸಾಧನಗಳಿಂದಾಗಿ "ಜಗತ್ತು ಚಿಕ್ಕದಾಗಿದೆ" ಎಂಬ ಮಾತು ಸತ್ಯವೆನಿಸುತ್ತದೆ.

೪. ಸಮೂಹ ಮಾಧ್ಯಮಗಳಲ್ಲಿ ಹೊಸ ಆವಿಷ್ಕಾರಗಳು : ರೇಡಿಯೋ, ದೂರದರ್ಶನ, ಗಣಕಯಂತ್ರ, ರೋಬೋಟಾಗಳು, ದೂರ ಸಂಪರ್ಕಗಳೆಲ್ಲವೂ ತಂತ್ರಜ್ಞಾನದ ಫಲಗಳಾಗಿವೆ. ಈಗ ಈ ಎಲ್ಲಾ ಸೌಕರ್ಯಗಳು ಇಲ್ಲದೆ ಹೋದಲ್ಲಿ ಜನಜೀವನವೇ ಸ್ಥಗಿತಗೊಳ್ಳಬಹುದು.

ಒಬ್ಬ ವ್ಯಕ್ತಿ ಜಗತ್ತಿನ ಯಾವ ಮೂಲೆಯಲ್ಲಿದ್ದರೂ ಇನ್ನೊಬ್ಬ ವ್ಯಕ್ತಿಯನ್ನು ಕ್ಷಣ ಮಾತ್ರದಲ್ಲಿ ಸಂಪರ್ಕಿಸಬೇಕಾದ ವ್ಯವಸ್ಥೆ ತಂತ್ರಜ್ಞಾನದ ವಿಸ್ಮಯ ಎಂದರೂ ತಪ್ಪಾಗಲಾರದು. ವೃತ್ತಪತ್ರಿಕೆಗಳು, ದೂರದರ್ಶನವಂತೂ ಸಾಮಾಜಿಕ ಜೀವನದಲ್ಲಿ ಹಾಸುಹೊಕ್ಕಾಗಿ ಹೋಗಿದೆ. ಇವುಗಳಿಂದಾಗಿ ಸಾಮಾಜಿಕ ಮೌಲ್ಯದಲ್ಲಿ ಬಹಳಷ್ಟು ಬದಲಾವಣೆ ಆಗಿದೆ. ಉದಾ: ಈಗ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವ ವಿಚಾರಕ್ಕೆ ಎಲ್ಲರೂ ಬದ್ಧರಾಗಿದ್ದಾರೆ. ಇದೆಲ್ಲ ಪರಿವರ್ತನೆಯೂ ಸಮೂಹ ಮಾಧ್ಯಮಗಳ ಪ್ರಭಾವವೇ ಆಗಿದೆ.

೫. **ಹೊಸ ಹೊಸ ವಿಚಾರಗಳ ಉದಯ** : ತಾಂತ್ರಿಕತೆಯಿಂದಾಗಿ ವೈಚಾರಿಕತೆ ಹುಟ್ಟಿಕೊಂಡು ಹೊಸ ಅಂದೋಲನವನ್ನೇ ಮಾಡಿತು. ಜನರ ನಂಬುಗೆ, ಸಂಪ್ರದಾಯ, ವಿಧಿ-ವಿಧಾನಗಳಲ್ಲಿ ಬದಲಾವಣೆ ಕಂಡು ಬಂತು. ವೈಜ್ಞಾನಿಕ ಹಿನ್ನೆಲೆಯಲ್ಲಿ ವಿಚಾರಧಾರೆ ಹರಿಯತೊಡಗಿತು. ಉದಾ: ಜಾತಿಯನ್ನು ದೇವರೆ ಮಾಡಿದ್ದು, ಮಕ್ಕಳನ್ನು ದೇವರು ಕೊಡುವುದು, ಹೆಣ್ಣು ಗಂಡಿನ ಅಡಿಯಾಳು, ಮಹಿಳೆ ಶಿಕ್ಷಣಕ್ಕೆ, ಸ್ವಾತಂತ್ರ್ಯಕ್ಕೆ ಅರ್ಹಳಲ್ಲ, ಈ ಎಲ್ಲಾ ಕಲ್ಪನೆಗಳನ್ನು ವೈಚಾರಿಕತೆಯ ಹಿನ್ನೆಲೆಯಲ್ಲಿ ಪರಾಮರ್ಶಿಸಲಾಯಿತು. ಪ್ರತಿ ಪ್ರಜೆಯೂ ತಮ್ಮ ಹಕ್ಕುಗಳ ಬಗ್ಗೆ ವಿಚಾರ ಮಾಡುವಂತಾಯಿತು. ಉದ್ದಿಮೆಗಳಲ್ಲಿ ಕಾರ್ಮಿಕ ಸಂಘಟನೆಗಳು ಉದಯವಾದವು.

೬. **ನಗರೀಕರಣ** : ಉದ್ದಿಮೆಗಳು ಹೆಚ್ಚಾಗಿ ನಗರ ಪ್ರದೇಶದಲ್ಲಿ ಕೇಂದ್ರಿಕೃತಗೊಂಡದ್ದರಿಂದ ಗ್ರಾಮ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನರು ನಗರ ಪ್ರದೇಶಗಳಿಗೆ ವಲಸೆ ಹೋದರು. ಇದರಿಂದಾಗಿ ನಗರದ ಜನಸಂಖ್ಯೆ ತೀವ್ರಗತಿಯಲ್ಲಿ ಬೆಳೆಯಲಾರಂಭಿಸಿ ನಗರೀಕರಣದ ಪ್ರಕ್ರಿಯೆ ಆರಂಭವಾಯಿತು. ವಲಸೆಯಿಂದಾಗಿ, ಜನರ ಜೀವನ ಮಟ್ಟದಲ್ಲಿ, ಶಿಕ್ಷಣದಲ್ಲಿ, ವಿಚಾರಧಾರೆಯಲ್ಲಿ ಹಲವಾರು ಬದಲಾವಣೆಗಳುಂಟಾದವು. ನಗರೀಕರಣದ ಪ್ರಕ್ರಿಯೆಯಿಂದಾಗಿ ಹೊಸ ಹೊಸ ಮಹಾನಗರಗಳು ಸೃಷ್ಟಿಯಾದವು. ಮಹಾನಗರಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೆ ಇದೆ. ಹಾಗೆಯೇ ಉದ್ಯೋಗಾವಕಾಶಗಳು ಹೆಚ್ಚಿದವು. ನಗರ ಬೆಳವಣಿಗೆಯೊಂದಿಗೆ ಕೊಳಗೇರಿ, ಅಪರಾಧ, ಭಿಕ್ಷಾಟನೆ ಮುಂತಾದ ಸಮಸ್ಯೆಗಳು ತಲೆ ಎತ್ತಿದವು.

ಜಾತಿಯ ಪ್ರಭಾವ ಕಡಿಮೆಯಾದುದು : ನಗರೀಕರಣ ಮತ್ತು ಔದ್ಯೋಗೀಕರಣದಿಂದಾಗಿ ಎಲ್ಲರೂ ಜಾತಿ, ಮತ ಭೇದವಿಲ್ಲದೆ ಒಂದೇ ಕಡೆ ಸೇರುವಂತಾಯಿತು. ಸಾರ್ವಜನಿಕ ರಂಗದಲ್ಲಿ ಜಾತಿಪದ್ಧತಿಯು ಶಿಥಿಲಗೊಂಡಿತು. ಮೀಸಲಾತಿಯು ಸಹ ಸಮಾಜ ಪರಿವರ್ತನೆಯಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಹಣ, ಸಂಪತ್ತು, ವೈಭವೀಕರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ಬಂದುದರಿಂದ ಜಾತಿಯು ಪ್ರಾಬಲ್ಯತೆ ಮತ್ತು ಪ್ರಾಮುಖ್ಯತೆಯನ್ನು

ಕಳೆದುಕೊಂಡಿತು. ಅದಾಗ್ಯೂ ರಾಜಕೀಯದಲ್ಲಿ ಜಾತಿ ಪ್ರಶ್ನೆ, ನಾಯಿಕೊಡೆಗಳಂತಿರುವ ಜಾತಿ ಸಂಘಗಳು ಜಾತಿಯಲ್ಲಾದ ಪರಿವರ್ತನೆಯ ರೂಪಗಳಾಗಿವೆ.

೭.೩. ಬದಲಾವಣೆಗೆ ಅಡಚಣೆಗಳು

ಸಾಮಾಜಿಕ ಬದಲಾವಣೆ ಯಾವಾಗಲೂ ಸಕಾರಾತ್ಮಕವಾಗಿಯೇ ಇರುವುದಿಲ್ಲ. ಹಾಗೆಯೇ ಬದಲಾವಣೆ ಯಾವಾಗಲೂ, ಎಲ್ಲರಿಗೂ ಸ್ವೀಕೃತವಾಗಿಯೇ ಆಗುತ್ತದೆ ಅಥವಾ ಬದಲಾವಣೆಯನ್ನು ಎಲ್ಲರೂ ಸ್ವೀಕರಿಸುತ್ತಾರೆ ಎಂದು ಭಾವಿಸಬಾರದು. ಸಾಮಾಜಿಕ ಬದಲಾವಣೆಯನ್ನು ತರಲು, ಸ್ವೀಕರಿಸಲು ಅನೇಕ ಅಡಚಣೆಗಳು ಉಂಟಾಗಬಹುದು. ಯಾವುದೇ ನೂತನ ವಿಚಾರಗಳಿಗೆ, ಭಾವನೆಗಳಿಗೆ, ಬೆಳವಣಿಗೆಗಳಿಗೆ ವಿರೋಧ ಇದ್ದೇ ಇರುತ್ತದೆ. ಬದಲಾವಣೆಗೆ ಜನರ ಮನಸ್ಸು ಬೇಗ ಒಪ್ಪುವುದಿಲ್ಲ. ಸಂಶಯ, ಗೊಂದಲ ತಿರಸ್ಕಾರ, ಟೀಕೆ, ವಿರೋಧ, ಅನಿಶ್ಚತತೆ, ಭೀತಿ, ವೆಚ್ಚದಾಯಕ, ಕ್ಲಿಷ್ಮಕರ ಈ ಎಲ್ಲಾ ವಿಚಾರಗಳು ಬರುವುದು ಸರ್ವಸಾಮಾನ್ಯವಾದುದು. ಉದಾ: ಬ್ರಿಟನ್ನಿನ ಮಹಿಳೆಯು ಮತ ಚಲಾಯಿಸುವ ಹಕ್ಕಿಗೆ ೧೯೫೦ರ ವರೆಗೆ ವಿರೋಧವಿತ್ತು.

ವಯಸ್ಸು : ಯುವ ಪೀಳಿಗೆ ಬದಲಾವಣೆಯನ್ನು ಕೂಡಲೇ ಸ್ವೀಕರಿಸಬಹುದು. ಅದೇ ವೃದ್ಧರು ಬದಲಾವಣೆಯನ್ನು ಸ್ವೀಕರಿಸಲು ನಿರಾಕರಿಸಬಹುದು ಅಥವಾ ಒಪ್ಪದೇ ಇರಬಹುದು. ವೃದ್ಧರ ಭಾವನೆಗಳು ಅನೇಕ ವರ್ಷಗಳ ಹಿಂದೆಯೇ ರೂಪುಗೊಂಡಿರುವುದರಿಂದ ಅವರು ಬದಲಾಗುತ್ತಿರುವ ಕಾಲದೊಂದಿಗೆ ಬದಲಾಗದ ಅಭಿಪ್ರಾಯಗಳನ್ನು ಹೊಂದಿರುತ್ತಾರೆ.

ಸಾಮಾಜಿಕ ವ್ಯವಸ್ಥೆ : ಪರಂಪರಾಗತವಾಗಿ ಬಂದ ಕಟ್ಟುನಿಟ್ಟಿನ ಸಾಮಾಜಿಕ ವ್ಯವಸ್ಥೆ ಬದಲಾವಣೆಗೆ ಮೈಯೊಡ್ಡದೇ ಇರಬಹುದು. ಹೊಸ ಬದಲಾವಣೆಗಳನ್ನು ಸಂಶಯಾತ್ಮಕ ದೃಷ್ಟಿಯಿಂದ ನೋಡಬಹುದು. ಅದರ ಒಳಿತಿನ ಬಗ್ಗೆ ಸಂಶಯವಿರಬಹುದು.

ಮೂಢನಂಬಿಕೆಗಳು-ಕಂದಾಚಾರಗಳು : ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ಪದ್ಧತಿಗಳು, ಕಂದಾಚಾರಗಳು ಸಹ ಬದಲಾವಣೆಯನ್ನು ವಿರೋಧಿಸಬಹುದು. ಇದಕ್ಕೆ ಭಯ ಒಂದು ಕಾರಣವಾಗಿರಬಹುದು.

ಅನಕ್ಷರತೆ, ಹಿಂದುಳಿಯುವಿಕೆ : ಹೆಚ್ಚಾಗಿ ಅನಕ್ಷರಸ್ಥರು ಬದಲಾವಣೆಗೆ ವಿರೋಧವಿರುವುದು ಕಂಡು ಬರುತ್ತದೆ. ತಿಳುವಳಿಕೆ ಇಲ್ಲದೆ, ಅವೈಜ್ಞಾನಿಕವಾಗಿ ಪಾಲಿಸಿಕೊಂಡು ಬಂದ ಎಷ್ಟೋ ಸಾಮಾಜಿಕ ಸಂಗತಿಗಳು ಈಗಲೂ ಪ್ರಚಲಿತವಿರುವುದು ಹೊಸ ವಿಚಾರಗಳನ್ನು ಅಳವಡಿಸಿಕೊಳ್ಳದೇ ಇರುವುದು ಕಂಡು ಬರುತ್ತದೆ. ಇದಕ್ಕೆ ಅನಕ್ಷರತೆ ಮತ್ತು ಹಿಂದುಳುವಿಕೆಯು ಕಾರಣ ಆಗಿದೆ.

ಆರ್ಥಿಕ ಮುಗ್ಗಟ್ಟು : ಕೆಲವು ಬದಲಾವಣೆಗಳಿಗೆ ಆರ್ಥಿಕ ವೆಚ್ಚವೇ ಕಾರಣವಾಗಿರುತ್ತದೆ.

ಬದಲಾವಣೆಗೆ ತೆರೆದ ಮನಸ್ಸು ಇದ್ದರೂ ಸಹ ವೆಚ್ಚದಾಯಕವಾಗಿರುವುದರಿಂದ ಬದಲಾವಣೆಯನ್ನು ಸ್ವೀಕರಿಸದೇ ಇರಬಹುದು.

೭.೪. ಸಾರಾಂಶ

ಸಮಾಜವು ನಿತ್ಯ ನೂತನವಾದುದು, ಪರಿವರ್ತನಶೀಲವಾದುದು. ಬದಲಾವಣೆ ರಹಿತ ಸಮಾಜ ದುಸ್ಸಾಧ್ಯ. ವ್ಯಕ್ತಿಗಳ ಪರಸ್ಪರ ಸಂಬಂಧಗಳಲ್ಲಿ ಬದಲಾವಣೆಯಾದಾಗ ಸಮಾಜವು ಬದಲಾವಣೆಗೊಳ್ಳುವುದು. ಅಂದರೆ ಸಾಮಾಜಿಕ ಸಂಬಂಧಗಳಲ್ಲಾಗುವ ಬದಲಾವಣೆಯೇ ಸಾಮಾಜಿಕ ಬದಲಾವಣೆ. ಈ ಬದಲಾವಣೆಯು ಸರ್ವವ್ಯಾಪಿಯಾದುದು. ಆದಾಗ್ಯೂ ಸಾಮಾಜಿಕ ಬದಲಾವಣೆಯ ಗತಿ ಮತ್ತು ವೇಗಗಳು ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತವೆ. ಕೆಲವ ಸಲ ತೀವ್ರತರವಾದ ಬದಲಾವಣೆಗಳು ಸಮಾಜದಲ್ಲಿ ಕಂಡು ಬಂದರೆ ಇನ್ನು ಕೆಲವು ಸಲ ನಿಧಾನಗತಿಯ ಬದಲಾವಣೆಗಳು ತೋರಿಬರುವವು. ಅಂತೂ ಸಮಾಜದಲ್ಲಿ ಬದಲಾವಣೆಯು ಅನಿವಾರ್ಯವಾದುದು.

ಅನೇಕ ಅಂಶಗಳಿಂದಾಗಿ ಸಮಾಜದಲ್ಲಿ ಬದಲಾವಣೆಗಳು ತೋರಿಬರುವವು. ಅವುಗಳಲ್ಲಿ ಭೌಗೋಳಿಕ ಅಂಶಗಳು, ಜೈವಿಕ ಅಂಶಗಳು ಮತ್ತು ತಾಂತ್ರಿಕ ಅಂಶಗಳು ಹಾಗೂ ಸಾಂಸ್ಕೃತಿಕ ಅಂಶಗಳು ಬಹು ಪ್ರಮುಖವಾಗಿವೆ. ಶಾಸನಗಳು ಮತ್ತು ಶಿಕ್ಷಣವೂ ಕೂಡ ಸಮಾಜದಲ್ಲಿ ಹೆಚ್ಚಿನ ಪರಿವರ್ತನೆಯನ್ನು ಉಂಟು ಮಾಡಬಲ್ಲ ಅಂಶಗಳಾಗಿವೆ.

ಭೂಮಿಯ ಗುಣ (ಫಲವತ್ತತೆ), ಹವಾಮಾನ, ಮಳೆನೀರು, ಖನಿಜ ಸಂಪತ್ತು ಮತ್ತು ನೈಸರ್ಗಿಕ ವಿಕೋಪಗಳು ಸಾಮಾಜಿಕ ಬದುಕಿನ ಮೇಲೆ ಪ್ರಭಾವ ಬೀರುವವು. ಅವು ಜನರ ಆರ್ಥಿಕ ಪರಿಸ್ಥಿತಿ ಮತ್ತು ವೃತ್ತಿಯ ಮೇಲೆ ಪರಿಣಾಮ ಬೀರುವವು. ನೈಸರ್ಗಿಕವಾಗಿ ದೊರೆಯುವ ಖನಿಜ ಸಂಪತ್ತಿಗೂ ಕೈಗಾರಿಕೆಗಳ ಅಭಿವೃದ್ಧಿಗೂ ಸಂಬಂಧವಿದೆ. ಖನಿಜಸಂಪತ್ತು ಹೇರಳವಾಗಿ ಸಿಗುವ ದೇಶವು ಕೈಗಾರಿಕಾ ಪ್ರಗತಿಯನ್ನು ಸಾಧಿಸುತ್ತವೆ. ಕೈಗಾರಿಕೆಗಳ ಸ್ಥಾಪನೆಯಿಂದಾಗಿ ನಗರಗಳು ಬೆಳೆದು ಬರುವವು. ಹೀಗೆ ಹಲವಾರು ಬದಲಾವಣೆಗಳು ಗೋಚರಿಸುವವು. ಭೂಕಂಪ, ಚಂಡಮಾರುತ, ಅತಿವೃಷ್ಟಿ ಮತ್ತು ಅನಾವೃಷ್ಟಿಯಂತಹ ನೈಸರ್ಗಿಕ ವಿಕೋಪಗಳು ಜನರ ಜೀವನದಲ್ಲಿ ಬದಲಾವಣೆಯನ್ನುಂಟು ಮಾಡುತ್ತವೆ.

ಜನಸಂಖ್ಯೆ, ಜನನ ದರ, ಮರಣ ದರ, ಲಿಂಗ ಪ್ರಮಾಣ, ಅನುವಂಶೀಯತೆ, ವಿವಾಹ ವಯಸ್ಸು ಮುಂತಾದ ಜೈವಿಕ ಅಂಶಗಳು ಸಾಮಾಜಿಕ ಬದಲಾವಣೆಯನ್ನುಂಟು ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಜನನ ಪ್ರಮಾಣವು ಮರಣ ಪ್ರಮಾಣಕ್ಕಿಂತಲೂ ಅತಿಯಾಗಿ ಹೆಚ್ಚಿದಲ್ಲಿ ಆದೇಶವು ಜನಸಂಖ್ಯಾ ಸ್ಫೋಟದ ಸಮಸ್ಯೆಯನ್ನು ಎದುರಿಸಬೇಕಾಗುವುದು. ಆಗ ಬಡತನ, ನಿರುದ್ಯೋಗ, ಅನಕ್ಷರತೆ, ಭಿಕ್ಷಾಟನೆಯಂತಹ ಸಮಸ್ಯೆಗಳು ಹುಟ್ಟಿಕೊಳ್ಳುವವು. ಜನಸಂಖ್ಯೆ ಹಾಗೂ ಸಂಪನ್ಮೂಲಗಳ ಸಮತೋಲನವಿದ್ದರೆ ಆ ದೇಶದ ಜನರ ಜೀವನಮಟ್ಟ ಹೆಚ್ಚಿ ಅವರು ಆರ್ಥಿಕ ಪ್ರಗತಿಯನ್ನು ಸಾಧಿಸುವರು. ಲಿಂಗ ಪ್ರಮಾಣದ ಏರುಪೇರುಗಳೂ ಸಹ ಸಮಾಜದಲ್ಲಿ ಬದಲಾವಣೆಗಳನ್ನುಂಟು ಮಾಡುವವು.

ಹೊಸ ಅನ್ವೇಷಣೆಗಳು, ಹೊಸ ಹೊಸ ಯಂತ್ರಗಳ ಬಳಕೆಗಳು ಸಮಾಜದಲ್ಲಿ ತೀವ್ರತರವಾದ ಬದಲಾವಣೆಗಳನ್ನು ತರುವವು. ಸುಧಾರಿತ ತಳಿಗಳು-ಬೀಜಗಳ ಉಪಯೋಗ, ರಾಸಾಯನಿಕ ಗೊಬ್ಬರಗಳ ಬಳಕೆ, ಕ್ರಿಮಿನಾಶಕ ಔಷಧಿಗಳ ಸಿಂಪರಣೆ ಮತ್ತು ಯಂತ್ರೋಪಕರಣಗಳ ಬಳಕೆಯಿಂದ ಕೃಷಿ ಉತ್ಪನ್ನಗಳನ್ನು ಭಾರೀ ಪ್ರಮಾಣದಲ್ಲಿ ಹೆಚ್ಚಿಸಿಕೊಳ್ಳಬಹುದಾಗಿದೆ. ಬೃಹತ್ ಕೈಗಾರಿಕೆಗಳ ಸ್ಥಾಪನೆಯಿಂದ ಕೈಗಾರಿಕಾ ಉತ್ಪಾದನೆಯನ್ನು ಅಮೂಲಾಗ್ರವಾಗಿ ಹೆಚ್ಚಿಸಿಕೊಳ್ಳಬಹುದಾಗಿದೆ.

ಒಂದು ಸಂಸ್ಕೃತಿಯು ಇನ್ನೊಂದು ಸಂಸ್ಕೃತಿಯ ಸಂಪರ್ಕಕ್ಕೆ ಒಳಗಾದಾಗ ಜನರ ನಂಬಿಕೆ, ಆಚರಣೆ, ರೂಢಿಗಳಲ್ಲಿ ಬದಲಾವಣೆಗಳುಂಟಾಗುವವು. ಪೂರ್ವಗ್ರಹ ಪೀಡಿತತೆ, ಅನಕ್ಷರತೆ, ಕಂದಾಚಾರ, ಜನರ ಹಿಂಜರಿಕೆಯ ಸ್ವಭಾವ, ಹಿರಿಯ ತಲೆಮಾರಿನ ಜನಗಳ ಸಂಪ್ರದಾಯ ಶರಣ ಮನೋಭಾವನೆ, ಬಡತನ ಹಾಗೂ ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವ ಮುಂತಾದವು ತೀವ್ರತರವಾದ ಸಾಮಾಜಿಕ ಬದಲಾವಣೆಗೆ ಅಡಚಣೆಯನ್ನುಂಟು ಮಾಡುವವು.

೭.೫. ಪಾರಿಭಾಷಿಕ ಪದಕೋಶ

೧. E-Mail = ವಿದ್ಯುನ್ಮಾನ ಪತ್ರಗಳು

೨. Evolution = ವಿಕಾಸ

೩. Industrial Society = ಔದ್ಯೋಗಿಕ ಸಮಾಜ

೪. Metaphysical= ಆಧ್ಯಾತ್ಮಿಕ

೫. Militaristic Society = ಯುದ್ಧ ಪ್ರಿಯ ಸಮಾಜ

೬. Natural Calamities= ನೈಸರ್ಗಿಕ ವಿಕೋಪಗಳು

೭. Population Policy = ಜನಸಂಖ್ಯಾನೀತಿ

೮. Progress = ಪ್ರಗತಿ

೯. Sanskritisation = ಸಂಸ್ಕೃತಾನುಕರಣ

೧೦. Scientific = ವೈಜ್ಞಾನಿಕ

೧೧. Theological = ಆದಿ ದೈವಿಕ

೭.೬. ಪ್ರಶ್ನೆಗಳು

I. ಒಂದು ಅಂಕದ ಪ್ರಶ್ನೆಗಳು

೧. ಸಾಮಾಜಿಕ ಬದಲಾವಣೆಯ ಒಂದು ವ್ಯಾಖ್ಯೆಯನ್ನು ನೀಡಿ.

೨. ಸಾಂಸ್ಕೃತಿಕ ಹಿಂಬೀಳಿಕೆ ಸಿದ್ಧಾಂತವನ್ನು ಯಾರು ನೀಡಿದ್ದಾರೆ?

೩. ಸಂಸ್ಕೃತಿಯ ಎರಡು ವಿಧಗಳಾವುವು?

೪. ಸಾಮಾಜಿಕ ಪ್ರಗತಿ ಹಾಗೂ ಸಾಮಾಜಿಕ ವಿಕಾಸದ ನಡುವಿನ ಒಂದು ವ್ಯತ್ಯಾಸವನ್ನು ತಿಳಿಸಿ.

೫. ಪ್ರಕೃತಿ ವಿಕೋಪಗಳಿಗೆ ಎರಡು ಉದಾಹರಣೆಗಳನ್ನು ಕೊಡಿರಿ.

೬. ತಾಂತ್ರಿಕತೆ ಎಂದರೇನು?

೭. ಪ್ರಪ್ರಥಮವಾಗಿ ಜನಸಂಖ್ಯಾ ಧೋರಣೆಯನ್ನು ಜಾರಿಗೆ ತಂದ ದೇಶ ಯಾವುದು?

೮. ಭೌತ ಸಂಸ್ಕೃತಿಗೆ ಒಂದು ಉದಾಹರಣೆ ಕೊಡಿ.

೯. ಅಭೌತ ಸಂಸ್ಕೃತಿಗೆ ಒಂದು ಉದಾಹರಣೆ ನೀಡಿ.

೧೦. ನಗರಗಳ ಬೆಳವಣಿಗೆಯೊಂದಿಗೆ ಹುಟ್ಟಿಕೊಂಡ ಯಾವುದಾದರೂ ಒಂದು ಸಾಮಾಜಿಕ ಸಮಸ್ಯೆಯನ್ನು ನಮೂದಿಸಿ.

II. ಎರಡು ಅಂಕಗಳ ಪ್ರಶ್ನೆಗಳು

೧. ಸಾಮಾಜಿಕ ಪ್ರಗತಿಯೆಂದರೇನು?

೨. ಸಾಮಾಜಿಕ ಬದಲಾವಣೆಯನ್ನು ವ್ಯಾಖ್ಯಾನಿಸಿ

೩. ಸಾಮಾಜಿಕ ಬದಲಾವಣೆಗೆ ಅಡ್ಡಿಯನ್ನುಂಟು ಮಾಡುವ ಅಂಶಗಳಾವವು?

೪. ಸಾಮಾಜಿಕ ಬದಲಾವಣೆಯ ಎರಡು ಅಂಶಗಳನ್ನು ಹೆಸರಿಸಿ.

೫. ತಾಂತ್ರಿಕತೆಯಿಂದುಂಟಾದ ಯಾವುದಾದರೂ ಎರಡು ಬದಲಾವಣೆಗಳನ್ನು ತಿಳಿಸಿ.

೬. ಸಾಮಾಜಿಕ ಪ್ರಗತಿ ಹಾಗೂ ವಿಕಾಸದ ಮಧ್ಯದ ಎರಡು ವ್ಯತ್ಯಾಸಗಳನ್ನು ತಿಳಿಸಿ.

೭. ಭಾರತದ ಎರಡು ಔದ್ಯೋಗಿಕ ನಗರಗಳನ್ನು ಹೆಸರಿಸಿ.

೮. ಸಾಂಸ್ಕೃತಿಕ ಹಿಂಬೀಳಿಕೆ ಎಂದರೇನು?

III. ಐದು ಅಂಕಗಳ ಪ್ರಶ್ನೆಗಳು

೧. ಸಾಮಾಜಿಕ ಬದಲಾವಣೆಗೆ ಮುಖ್ಯ ಕಾರಣಗಳಾವುವು?

೨. ಸಾಮಾಜಿಕ ಪರಿವರ್ತನೆಯ ಮೇಲೆ ಕಾನೂನಿನ ಪ್ರಭಾವವನ್ನು ತಿಳಿಸಿ.

೩. ಸಾಮಾಜಿಕ ಬದಲಾವಣೆಯನ್ನು ವ್ಯಾಖ್ಯಾನಿಸಿ.

೪. ಸಾಮಾಜಿಕ ವಿಕಾಸ, ಸಾಮಾಜಿಕ ಪ್ರಗತಿ ಹಾಗೂ ಸಾಮಾಜಿಕ ಅಭಿವೃದ್ಧಿ ಈ ಪರಿಕಲ್ಪನೆಗಳ ಅರ್ಥವನ್ನು ವಿವರಿಸಿ.

೫. ಸಾಂಸ್ಕೃತಿಕ ಹಿಂಬೀಳಿಕೆಯ ಕಲ್ಪನೆಯನ್ನು ವಿವರಿಸಿ.

೬. ತಾಂತ್ರಿಕತೆಯಿಂದಾಗಿ ಕೃಷಿ ಕ್ಷೇತ್ರದಲ್ಲುಂಟಾದ ಬದಲಾವಣೆಗಳಾವವು?

IV. ಹತ್ತು ಅಂಕದ ಪ್ರಶ್ನೆಗಳು

೧. ಸಾಮಾಜಿಕ ಬದಲಾವಣೆಯ ಪ್ರತಿಬಂಧಕಗಳು ಯಾವುವು? ವಿವರಿಸಿ.

೨. ತಾಂತ್ರಿಕ ಅಂಶಗಳು ಹೇಗೆ ಸಾಮಾಜಿಕ ಬದಲಾವಣೆಯನ್ನು ತರುತ್ತವೆ? ವಿವರಣೆ ನೀಡಿ.

೩. ಸಾಮಾಜಿಕ ಬದಲಾವಣೆಯ ವಿವಿಧ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

೪. ಸಾಮಾಜಿಕ ಬದಲಾವಣೆಯಲ್ಲಿ ಜೈವಿಕ ಅಂಶಗಳು ವಹಿಸುವ ಪಾತ್ರವನ್ನು ವಿವರಿಸಿ.

೫. ಭೌಗೋಳಿಕ ಅಂಶವು ಹೇಗೆ ಸಾಮಾಜಿಕ ಬದಲಾವಣೆಗೆ ಕಾರಣವಾಗಿದೆ?

ಅಭ್ಯಾಸ/ಚಟುವಟಿಕೆಗಳು

೧. ಕೃಷಿ ಉದ್ಯೋಗದ ಮೇಲೆ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಭಾವವನ್ನು ತಿಳಿಸಿ.

೨. ಕೈಗಾರೀಕರಣದಿಂದಾಗಿ ಗ್ರಾಮ ಸಮುದಾಯಗಳಲ್ಲಾಗುತ್ತಿರುವ ಬದಲಾವಣೆಗಳನ್ನು ತಿಳಿಸಿ.

೩. ಬರಗಾಲದಿಂದಾಗಿ ಜನರ ಜೀವನದಲ್ಲಾಗುವ ಬದಲಾವಣೆಗಳ ಪಟ್ಟಿಮಾಡಿ.

೪. ಭಾರತದಲ್ಲಿ ಘಟಿಸುತ್ತಿರುವ ನೈಸರ್ಗಿಕ ಪ್ರಕೋಪಗಳು ಪಟ್ಟಿ ಮಾಡಿ, ಯಾವುದಾದರೊಂದರ ಭೀಕರತೆಯ ಚಿತ್ರಣ ಕೊಡಿ.

ಅನುಬಂಧಗಳು

ಅ. ಪ್ರಾಯೋಗಿಕ ಅಧ್ಯಯನ ಯೋಜನೆಗಳು

ನಮ್ಮ ರಾಜ್ಯದ ಪದವಿಪೂರ್ವ ಶಿಕ್ಷಣ ಇಲಾಖೆಯು ೨೦೦೪-೦೫ನೆಯ ಸಾಲಿನಲ್ಲಿ ಜಾರಿಗೆ ತಂದಿರುವ ಸಮಾಜಶಾಸ್ತ್ರ ಪಠ್ಯಕ್ರಮದಲ್ಲಿ ಎರಡು ಭಾಗಗಳಿವೆ. ಮೊದಲನೆಯದು ಸೈದ್ಧಾಂತಿಕ ಅಥವಾ ತಾತ್ವಿಕ ಭಾಗ. ಎರಡನೆಯದು ಪ್ರಾಯೋಗಿಕ ಅಥವಾ ಎಂಫೆರಿಕಲ್ ಭಾಗ. ಸೈದ್ಧಾಂತಿಕ ಭಾಗಕ್ಕೆ ಪರೀಕ್ಷೆಯಲ್ಲಿ ೯೦ ಅಂಕಗಳನ್ನು ನಿಗದಿಪಡಿಸಲಾಗಿದೆ ಮತ್ತು ಪ್ರಾಯೋಗಿಕ ಭಾಗಕ್ಕೆ ೧೦ ಅಂಕಗಳಿವೆ. ಇದಕ್ಕೆ ಹಿಂದಿನ ಪಠ್ಯಕ್ರಮದಲ್ಲಿ ಪ್ರಾಯೋಗಿಕ ಭಾಗ ಕಲಾ ವಿಭಾಗದ ವಿದ್ಯಾರ್ಥಿಗಳಿಗಿರಲಿಲ್ಲ. ಪ್ರಾಯೋಗಿಕ ಭಾಗವನ್ನು ಪದವಿಪೂರ್ವ ಕಲಾ ತರಗತಿಗಳಿಗೆ ನಿಯಮಿಸಿರುವ ಪದವಿಪೂರ್ವ ಶಿಕ್ಷಣ ಇಲಾಖೆಯ ಕಾರ್ಯವು ಶ್ಲಾಘನೀಯವಾದುದಾಗಿದೆ. ಬೋಧನೆ ಮತ್ತು ಕಲಿಕೆಗೆ ಇದು ಹೊಸ ಆಯಾಮವೊಂದನ್ನು ನೀಡಿದೆ. ಕಲಾ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಭಾಗವನ್ನು ನಿಯಮಿಸಿರುವುದು ಕರ್ನಾಟಕಕ್ಕೆ ಸಂಬಂಧಿಸಿದಂತೆ ತುಂಬ ವಿನೂತನ ಕ್ರಮವಾಗಿದೆ. ಇದೇ ಕ್ರಮವನ್ನು ಮುಂದೆ ಪದವಿ ಮಟ್ಟದಲ್ಲಿ ವಿಶ್ವವಿದ್ಯಾಲಯಗಳು ಮುಂದುವರಿಸುವ ಪ್ರಯತ್ನ ನಡೆಸಬೇಕು.

ಈ ಪ್ರಾಯೋಗಿಕ ಭಾಗವನ್ನು ವಿದ್ಯಾರ್ಥಿಗಳು ಹೇಗೆ ನಿರ್ವಹಿಸಬೇಕು ಮತ್ತು ಅಧ್ಯಾಪಕರಿಂದ ಯಾವ ಬಗೆಯ ನಿರ್ದೇಶನ ಮತ್ತು ಮಾರ್ಗದರ್ಶನ ಪಡೆಯಬೇಕು ಎಂಬುದರ ಸ್ಥೂಲ ವಿವರಣೆಯನ್ನು ಇಲ್ಲಿ ನೀಡಲಾಗಿದೆ. ಪ್ರತಿ ಅಧ್ಯಾಯಕ್ಕೆ ಸಂಬಂಧಿಸಿದಂತೆ ಯಾವ ಪ್ರಾಯೋಗಿಕ ಅಧ್ಯಯನ ಯೋಜನೆ ಕೈಗೊಳ್ಳಬಹುದು ಎಂಬ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ. ಇದು ವಿದ್ಯಾರ್ಥಿ ಸಮುದಾಯಕ್ಕೆ ಉಪಯೋಗವಾಗುತ್ತದೆ ಎಂದು ನಂಬಲಾಗಿದೆ. ಇಲ್ಲಿ ನೀಡಿರುವ ಪಟ್ಟಿಯು ಅಂತಿಮವಾದುದೇನಲ್ಲ. ಇದೊಂದು ಸೂಚಿಫಲಕ. ಸೃಜನಶೀಲರಾದ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಬೇರೆ ರೀತಿಯಲ್ಲಿ ಪ್ರಾಯೋಗಿಕ ಅಧ್ಯಯನ ಯೋಜನೆಗಳನ್ನು ರೂಪಿಸಿಕೊಳ್ಳಬಹುದು. ಈ ಅನುಬಂಧದ ಕೊನೆಯ ಭಾಗದಲ್ಲಿ ಅಧ್ಯಯನ ವರದಿಯನ್ನು ಹೇಗೆ ರಚಿಸಬೇಕು ಎಂಬುದರ ಬಗ್ಗೆ ಸೂಚನೆ ನೀಡಲಾಗಿದೆ.

ಸೈದ್ಧಾಂತಿಕ/ತಾತ್ವಿಕವಾದ ಸಂಗತಿಗಳು ಮತ್ತು ಅವುಗಳನ್ನು ಕುರಿತ ಚರ್ಚೆ ಮೂಲತಃ ಅಮೂರ್ತವಾಗಿರುತ್ತದೆ. ಪ್ರತಿಯೊಂದು ಜ್ಞಾನಶಿಸ್ತುವಿಗೆ ಸಂಬಂಧಿಸಿದಂತೆ ಸಿದ್ಧಾಂತಗಳಿರುತ್ತವೆ - ನಿಯಮಗಳಿರುತ್ತವೆ - ತತ್ವಗಳಿರುತ್ತವೆ. ಈ ನಿಯಮ-ತತ್ವ-ಸಿದ್ಧಾಂತಗಳು ಆಚರಣೆಯಲ್ಲಿ ಹೇಗಿರುತ್ತವೆ ಎಂಬುದನ್ನು ತಿಳಿಯುವುದು ತುಂಬಾ ರೋಚಕವಾಗಿರುತ್ತದೆ.

ಈ ಬಗೆಯ ಪ್ರಯೋಗದಿಂದ ತತ್ವ-ಸಿದ್ಧಾಂತ-ನಿಯಮಗಳನ್ನು ವಿದ್ಯಾರ್ಥಿಗಳು ಸುಲಭವಾಗಿ ಕಲಿಯಬಹುದು-ಅರ್ಥ ಮಾಡಿಕೊಳ್ಳಬಹುದು ಮತ್ತು ಮನನ ಮಾಡಿಕೊಳ್ಳಬಹುದು.

ಸಿದ್ಧಾಂತಗಳು ಆಚರಣೆಯಲ್ಲಿ ಯಾವ ಸ್ವರೂಪ ತಳೆಯುತ್ತವೆ ಎಂಬುದು ತುಂಬಾ ಕುತೂಹಲಕಾರಿಯಾದ ಸಂಗತಿಯಾಗಿದೆ. ಇಂತಹ ಪ್ರಯೋಗಗಳಿಂದ ಸೈದ್ಧಾಂತಿಕತೆ ಹಾಗೂ ಪ್ರಾಯೋಗಿಕತೆಗಳ ನಡುವೆ ಅನುಸಂಧಾನ ಸಾಧ್ಯವಾಗುತ್ತದೆ. ಸಿದ್ಧಾಂತಗಳನ್ನು ಕುರಿತಂತೆ ವಿದ್ಯಾರ್ಥಿಗಳು ಯೋಚಿಸುವುದು-ಚಿಂತಿಸುವುದು ಸಾಧ್ಯವಾಗುತ್ತದೆ. ಇದು ವಿದ್ಯಾರ್ಥಿಗಳಲ್ಲಿ ವಿಶ್ಲೇಷಣಾ ಕೌಶಲ್ಯವನ್ನು ಬೆಳೆಸುತ್ತದೆ. ಸಮಾಜಶಾಸ್ತ್ರ ಪಠ್ಯಕ್ರಮದ ಉದ್ದೇಶ ಕೇವಲ ಜ್ಞಾನ ಸಂಪಾದನೆಯಷ್ಟೇ ಅಲ್ಲ. ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಸಿದ್ಧಾಂತಗಳ ಅನ್ವಯಿಕ ಸ್ವರೂಪವನ್ನು ತಿಳಿದುಕೊಳ್ಳಬೇಕಾಗುತ್ತದೆ. ಈ ಎಲ್ಲ ಉದ್ದೇಶಗಳನ್ನು ಗಮನದಲ್ಲಿಟ್ಟು ಕೊಂಡು ಪ್ರಾಯೋಗಿಕ ಭಾಗವನ್ನು ಪಠ್ಯಕ್ರಮದಲ್ಲಿ ಸೇರಿಸಲಾಗಿದೆ. ಪ್ರಾಯೋಗಿಕ ಅಧ್ಯಯನ ಯೋಜನೆಯಲ್ಲಿ ಭಾಗವಹಿಸುವುದರಿಂದ ಅಧ್ಯಯನದಲ್ಲಿ ಒಂದು ಬಗೆಯ ಶಿಸ್ತು-ಕಟ್ಟುಪಾಡು ವಿದ್ಯಾರ್ಥಿಗಳಿಗೆ ಪ್ರಾಪ್ತವಾಗುತ್ತದೆ. ಈ ಬಗೆಯ ಕಾರ್ಯ ಯೋಜನೆಗಳಿಂದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ನಡುವೆ ಚರ್ಚೆ-ವಿಚಾರ ವಿನಿಮಯ-ಸಂವಾದ ಅನಿವಾರ್ಯವಾಗುತ್ತದೆ. ಇಲ್ಲಿ ಅಧ್ಯಯನವು ಏಕಮುಖಿಯಾಗಿರುವುದಿಲ್ಲ. ಇಲ್ಲಿ ವಿದ್ಯಾರ್ಥಿಗಳು ಕೇವಲ ಕೇಳುವ ಶ್ರೋತೃಗಳಲ್ಲ. ಕೇಳಿದ್ದನ್ನು-ತಿಳಿದುಕೊಂಡಿದ್ದನ್ನು ಕಲಿತುಕೊಂಡಿದ್ದನ್ನು ಪ್ರಮಾಣಿಸಿ ನೋಡುವ ಪ್ರಯೋಗಶೀಲರೂ ಹೌದು. ಪ್ರಾಯೋಗಿಕ ಅಧ್ಯಯನ ಯೋಜನೆಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಅಧ್ಯಯನ ವರದಿಯನ್ನು ಸಿದ್ಧಪಡಿಸಬೇಕಾಗುತ್ತದೆ. ಇದರಿಂದ ಅವರು ಪ್ರಬಂಧ ಕಲೆಯನ್ನು ರೂಢಿಸಿಕೊಳ್ಳಬಹುದು.

ಪ್ರತಿ ಅಧ್ಯಾಯಕ್ಕೆ ಸಂಬಂಧಿಸಿದಂತೆ ಯಾವ ಯಾವ ಪ್ರಾಯೋಗಿಕ ಅಧ್ಯಯನ ಯೋಜನೆಗಳು, ಕ್ಷೇತ್ರಕಾರ್ಯ ಕೈಗೊಳ್ಳಬಹುದು ಎಂಬುದರ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ. ಈಗಾಗಲೆ ಹೇಳಿರುವಂತೆ ಇದೊಂದು ಪ್ರಾಥಮಿಕವಾದಂತಹ ಮಾರ್ಗಸೂಚಿ. ಇದರಂತೆ ಎಲ್ಲರೂ ಮಾಡಬೇಕೆಂಬ ಕಡ್ಡಾಯವಿಲ್ಲ. ಪ್ರಾಯೋಗಿಕ ಅಧ್ಯಯನ ಯೋಜನೆ ಕುರಿತಂತೆ ಒಂದು ಸ್ಥೂಲ ಚಿತ್ರವನ್ನು ವಿದ್ಯಾರ್ಥಿಗಳಿಗೆ ನೀಡುವುದು ಇಲ್ಲಿನ ಉದ್ದೇಶವಾಗಿದೆ.

ಪ್ರಾಯೋಗಿಕ ಅಧ್ಯಯನ ಯೋಜನೆಗಳ ಪಟ್ಟಿ

ಪ್ರತಿ ಅಧ್ಯಾಯಕ್ಕೆ ಸಂಬಂಧಿಸಿದಂತೆ ಕೆಲವು ಸಾಮಾನ್ಯ ಯೋಜನೆಗಳ ಪಟ್ಟಿಯನ್ನು ಹಾಗೂ ಯೋಜನೆ ಕೈಗೊಳ್ಳುವ ಕ್ರಮವನ್ನು ವಿವರಿಸಿಲಾಗಿದೆ.

ಅಧ್ಯಾಯ-ಒಂದು

ಈ ಅಧ್ಯಾಯದಲ್ಲಿ ಕ್ಷೇತ್ರಕಾರ್ಯಕ್ಕೆ ಅವಕಾಶ ಕಡಿಮೆ. ಇಲ್ಲಿ ನಾಲ್ವರು ಪಿತಾಮಹ ಸದೃಶ ಸಮಾಜಶಾಸ್ತ್ರಜ್ಞರ ವಿಚಾರಗಳನ್ನು ತಿಳಿದುಕೊಳ್ಳುವುದು ಅಗತ್ಯ. ಅಂದ ಮೇಲೆ ಈ ನಾಲ್ವರು ಸಮಾಜಶಾಸ್ತ್ರಜ್ಞರ ವಿಚಾರಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವ ಕಾರ್ಯ ಯೋಜನೆ ಕೈಗೊಳ್ಳಬಹುದು. ಇದಕ್ಕೆ ಮೂಲ ಕೃತಿಗಳನ್ನು ಅಭ್ಯಸಿಸಬೇಕಾಗುತ್ತದೆ. ಅಭಿಜಾತ

ಕೃತಿಗಳನ್ನು ಅಧ್ಯಯನ ಮಾಡುವುದು ತುಂಬಾ ಉಪಯುಕ್ತವಾದ ಕಾರ್ಯವಾಗಿದೆ. ವಿದ್ಯಾರ್ಥಿಗಳು ಮೂಲ ಕೃತಿಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಅಭ್ಯಾಸ ಮಾಡಿದ ಕೃತಿಯ ಸಾರವನ್ನು ಪ್ರಬಂಧ ರೂಪದಲ್ಲಿ ಹಿಡಿದಿಡಲು ಪ್ರಯತ್ನಿಸಬೇಕು. ಇದಕ್ಕೆ ಅಧ್ಯಾಪಕರನ್ನು ಹೆಚ್ಚು ಅವಲಂಬಿಸಬೇಕಾಗುತ್ತದೆ. ಪಿತಾಮಹ ಸದೃಶ ಸಮಾಜಶಾಸ್ತ್ರಜ್ಞರ ಜೀವನ ಚರಿತ್ರೆಗಿಂತ ಅವರ ವಿಚಾರ, ಅವರು ರೂಪಿಸಿದ ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಸಿದ್ಧಾಂತಗಳನ್ನು ಕುರಿತಂತೆ ಚರ್ಚೆ ಮಾಡುವುದು ಅಪೇಕ್ಷಣೀಯ.

ನಮಗೆಲ್ಲ ತಿಳಿದಿರುವಂತೆ ಅಂತಾರಾಷ್ಟ್ರೀಯ ಖ್ಯಾತಿಯ ಸಮಾಜಶಾಸ್ತ್ರಜ್ಞರಾದ ಎಂ.ಎನ್. ಶ್ರೀನಿವಾಸ ಕರ್ನಾಟಕದವರು. ಆದ್ದರಿಂದ ಅವರ ಬಗ್ಗೆ ವಿಶೇಷ ಅಧ್ಯಯನ ಯೋಜನೆ ಕೈಗೊಳ್ಳಬಹುದು. ಅವರು ಸಮಾಜಶಾಸ್ತ್ರಕ್ಕೆ ಅನೇಕ ಸಿದ್ಧಾಂತಗಳನ್ನು ರೂಪಿಸಿ ಕೊಟ್ಟಿದ್ದಾರೆ. ಉದಾಹರಣೆಗೆ ಸಂಸ್ಕೃತೀಕರಣ, ಪ್ರಬಲ ಜಾತಿಗಳು - ಇತ್ಯಾದಿ. ಅವರ ಪ್ರಸಿದ್ಧ ಕೃತಿ 'ಎ ರಿಮೆಂಬರಡ್ ವಿಲೇಜ್' ಕುರಿತಂತೆ ಚರ್ಚೆ ಮಾಡಬಹುದು.

ಅಧ್ಯಾಯ-ಎರಡು

ಈ ಅಧ್ಯಾಯದಲ್ಲಿ ಸಮಾಜಶಾಸ್ತ್ರದಲ್ಲಿ ವ್ಯಾಪಕವಾಗಿ ಬಳಸುವ ಕೆಲವು ಮೂಲಭೂತ ಪರಿಕಲ್ಪನೆಗಳ ಬಗ್ಗೆ ಚರ್ಚೆ ಮಾಡಲಾಗುತ್ತದೆ.

ನಮ್ಮ ಊರಿನ ಸಮಾಜ ಮತ್ತು ಅದರ ಗುಣಲಕ್ಷಣಗಳು

ಇದೊಂದು ಕುತೂಹಲಕಾರಿ ಅಧ್ಯಯನ ಯೋಜನೆಯಾಗಬಹುದು. ನಾವು ತರಗತಿಯಲ್ಲಿ 'ಸಮಾಜ' ಕುರಿತಂತೆ ಅನೇಕ ವ್ಯಾಖ್ಯೆಗಳನ್ನು ಅಭ್ಯಾಸ ಮಾಡುತ್ತೇವೆ. ಆ ವ್ಯಾಖ್ಯೆಗಳನ್ನು ನಮ್ಮ ಸಮಾಜಕ್ಕೆ ಅನ್ವಯಿಸಿ ಸಂಬಂಧಿಸಿದ ವ್ಯಾಖ್ಯೆ ಎಷ್ಟರಮಟ್ಟಿಗೆ ಸರಿ ಎಂಬುದನ್ನು ಪ್ರಾಮಾಣಿಸಿ ನೋಡಬಹುದು. ನಮ್ಮ ಪಠ್ಯಪುಸ್ತಕಗಳಲ್ಲಿ ಪಟ್ಟಿ ಮಾಡಿರುವ ಸಮಾಜದ ಲಕ್ಷಣಗಳನ್ನು ವಾಸ್ತವ ಸಮಾಜದಲ್ಲಿ ಕಾಣಲು ಸಾಧ್ಯವೆ ಎಂಬುದನ್ನು ವಿಶ್ಲೇಷಣೆ ಮಾಡಬಹುದು. ನಮ್ಮ ಊರಿನ ಸಮಾಜದಲ್ಲಿನ ಏಕರೂಪಿ ಗುಣಗಳಾವುವು ಮತ್ತು ಅದರ ಭಿನ್ನತೆ ಗುಣಗಳಾವುವು ಎಂಬುದನ್ನು ಪಟ್ಟಿ ಮಾಡಬಹುದು. ನಮ್ಮ ಊರಿನಲ್ಲಿ ಕಂಡು ಬರುವ ಶ್ರಮವಿಭಜನೆಯ ಸ್ವರೂಪ ಯಾವ ಬಗೆಯದು? ಶ್ರಮವಿಭಜನೆಯಲ್ಲಿ ಲಿಂಗಸಂಬಂಧಿ ಶ್ರಮವಿಭಜನೆ ಎಂಬ ಪ್ರಕಾರದ ಬಗ್ಗೆ ಮಾಹಿತಿ ಸಂಗ್ರಹಿಸಬಹುದು. ನಮ್ಮ ಸಮಾಜದಲ್ಲಿ ಕಂಡು ಬರುವ ಘರ್ಷಣೆಯ ನೆಲೆಗಳಾವುವು? ಸಹಕಾರದ ಗುಣ ಯಾವ ಸಂದರ್ಭದಲ್ಲಿ ಕಂಡು ಬರುತ್ತದೆ? ಊರಿನಲ್ಲಿ ಜನರ ನಡುವೆ ಅನ್ಯೋನ್ಯ ಭಾವನೆಯ ಸ್ವರೂಪ ಯಾವ ಬಗೆಯದು? ಈ ಬಗ್ಗೆ ಅತ್ಯಂತ ಉಪಯುಕ್ತ ಹಾಗೂ ಆಕರ್ಷಣೀಯ ಯೋಜನೆ ರೂಪಿಸಬಹುದು.

ಇದೇ ರೀತಿ 'ಸಮುದಾಯ' ಕುರಿತಂತೆ ಅಧ್ಯಯನ ಯೋಜನೆಯನ್ನು ವಿದ್ಯಾರ್ಥಿಗಳ ಒಂದು ಗುಂಪು ಕೈಗೊಳ್ಳಬಹುದು. ಸಮಾಜ ಮತ್ತು ಸಮುದಾಯಗಳ ನಡುವಿನ ಸಾದೃಶ್ಯ-

ವೈದೃಶ್ಯಗಳ ಬಗ್ಗೆ ಚರ್ಚೆ ಮಾಡಬಹುದು. ಸಮುದಾಯವನ್ನು ಯಾವ ಆಧಾರದ ಮೇಲೆ ಗುರುತಿಸಲಾಗುತ್ತದೆ ಎಂಬುದನ್ನು ವಿಶ್ಲೇಷಣೆ ಮಾಡಬಹುದು.

ಸಮಾಜದ ಪ್ರಕ್ರಿಯೆ-ಅಂತರ್‌ಕ್ರಿಯೆ ಕುರಿತ ಯೋಜನೆ

ಸಮಾಜದ ವಿವಿಧ ಸಮುದಾಯಗಳು, ವಿವಿಧ ಸಮೂಹಗಳು, ವಿವಿಧ ಗುಂಪುಗಳು ಜೊತೆಯಲ್ಲಿ ಬದುಕು ಸಾಗಿಸುತ್ತಿರುತ್ತವೆ. ಈ ಸಮುದಾಯ, ಸಮೂಹ, ಗುಂಪುಗಳ ನಡುವೆ ಯಾವ ಬಗೆಯ ಅಂತಃಕ್ರಿಯೆಗಳು ನಡೆಯುತ್ತವೆ? ಅವುಗಳ ನಡುವೆ ಸಹಕಾರ ಯಾವ ಕಾರಣಕ್ಕೆ ಉಂಟಾಗುತ್ತದೆ? ಅವುಗಳ ಮಧ್ಯೆ ಘರ್ಷಣೆ ಉಂಟಾಗಲು ಕಾರಣವೇನು? ಭಿನ್ನತೆಗಳನ್ನು ಸಮಾಜವು ಹೇಗೆ ಅರಗಿಸಿಕೊಳ್ಳುತ್ತದೆ? ಈ ಎಲ್ಲ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ನಮ್ಮ ಊರಿನ ಸಾಮಾಜಿಕ ಅಂತರ್‌ಕ್ರಿಯೆ ಬಗ್ಗೆ ಅಧ್ಯಯನವೊಂದನ್ನು ಕೈಗೊಳ್ಳಬಹುದು. ನಮ್ಮ ಊರಿನಲ್ಲಿ ವಿವಿಧ ಜಾತಿಗಳ ನಡುವಿನ ಸಹಕಾರದ ಸ್ವರೂಪ, ಪೈಪೋಟಿ, ಘರ್ಷಣೆ ಮುಂತಾದ ಸಂಗತಿಗಳ ಬಗ್ಗೆ ವಿದ್ಯಾರ್ಥಿಗಳು ಮಾಹಿತಿ ಸಂಗ್ರಹಿಸಬಹುದು. ಇದೊಂದು ಕುತೂಹಲಕಾರಿ ಅಧ್ಯಯನ ಯೋಜನೆಯಾಗಿದೆ.

ಅಧ್ಯಾಯ-ಮೂರು

ನಮ್ಮ ಊರಿನಲ್ಲಿ ಸಾಮಾಜಿಕ ಸಮೂಹಗಳು

ಸಮಾಜಶಾಸ್ತ್ರ ಪಾಠದಲ್ಲಿ ಸಾಮಾಜಿಕ ಸಮೂಹ ಕುರಿತಂತೆ ಅನೇಕ ಸಂಗತಿಗಳನ್ನು ವಿದ್ಯಾರ್ಥಿಗಳು ಕಲಿಯುತ್ತಾರೆ. ಹೀಗೆ ಕಲಿತ ತಾತ್ವಿಕ ಸಂಗತಿಯನ್ನು ಅನ್ವಯ ಮಾಡಿ ಸಮಾಜದಲ್ಲಿ ಇರುವ ಸಮೂಹ ಕುರಿತಂತೆ ಒಂದು ಅಧ್ಯಯನ ಯೋಜನೆ ಸಿದ್ಧಪಡಿಸಬಹುದು. ಈ ಅಧ್ಯಯನ ಯೋಜನೆಯಲ್ಲಿ ಕೆಳಕಂಡ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಬಹುದು.

ನಮ್ಮ ಊರಿನಲ್ಲಿರುವ ಸಂಘಟಿತ ಸಮೂಹಗಳಾವುವು?

ನಮ್ಮ ಊರಿನಲ್ಲಿರುವ ಅಸಂಘಟಿತ ಸಾಮಾಜಿಕ ಸಮೂಹಗಳಾವುವು?

ನಮ್ಮ ಊರಿನಲ್ಲಿರುವ ಪ್ರಾಥಮಿಕ ಸಮೂಹಗಳಾವುವು?

ನಮ್ಮ ಊರಿನಲ್ಲಿರುವ ಮಾಧ್ಯಮಿಕ ಸಮೂಹಗಳಾವುವು?

ಈ ನಾಲ್ಕು ವಿಷಯಗಳನ್ನು ಕುರಿತಂತೆ ವಿದ್ಯಾರ್ಥಿಗಳು ಮಾಹಿತಿ ಸಂಗ್ರಹಿಸಬಹುದು. ಸಂಗ್ರಹಿಸಿದ ಮಾಹಿತಿಯನ್ನು ಕ್ರೋಢೀಕರಿಸಿ ಅಧ್ಯಯನ ವರದಿ ಸಿದ್ಧಪಡಿಸಬಹುದು.

ಅಧ್ಯಾಯ-ನಾಲ್ಕು

ಗ್ರಾಮೀಣ ಸಂಸ್ಕೃತಿ

ಸಂಸ್ಕೃತಿಯನ್ನು ಕುರಿತಂತೆ ನೂರಾರು ವ್ಯಾಖ್ಯೆಗಳಿವೆ. ಅನೇಕ ಬಗೆಯ ದೃಷ್ಟಿಕೋನಗಳಿವೆ. ಈ ಎಲ್ಲ ವ್ಯಾಖ್ಯೆ - ದೃಷ್ಟಿಕೋನಗಳನ್ನು ಆಧರಿಸಿಕೊಂಡು ನಮ್ಮ ಗ್ರಾಮೀಣ ಪ್ರದೇಶದಲ್ಲಿನ ಸಂಸ್ಕೃತಿ ಸ್ವರೂಪದ ಬಗ್ಗೆ ವಿದ್ಯಾರ್ಥಿಗಳು ಮಾಹಿತಿ ಸಂಗ್ರಹಿಸಬಹುದು. ಗ್ರಾಮೀಣ

ಸಂಸ್ಕೃತಿಯಲ್ಲಿನ ಭೌತ ಸಂಗತಿಗಳಾವುವು ಮತ್ತು ಅಭೌತ ಸಂಗತಿಗಳಾವುವು ಎಂಬುದನ್ನು ಕೂಲಂಕಷವಾಗಿ ಗುರುತಿಸಬಹುದು. ನಮ್ಮ ಗ್ರಾಮೀಣ ಪ್ರದೇಶದಲ್ಲಿ ಸಂಸ್ಕೃತಿಯನ್ನು ಪ್ರತಿನಿಧಿಸುವ ಸಂಗತಿಗಳಾವುವು ಮತ್ತು ನಾಗರಿಕತೆಯನ್ನು ಪ್ರತಿನಿಧಿಸುವ ಸಂಗತಿಗಳಾವುವು ಎಂಬುದನ್ನು ವಿದ್ಯಾರ್ಥಿಗಳು ಪಟ್ಟಿ ಮಾಡಬಹುದು.

ಗ್ರಾಮೀಣ ಪ್ರದೇಶದಲ್ಲಿ ಸಾಮಾಜೀಕರಣ

ಇದು ಇನ್ನೊಂದು ಅಧ್ಯಯನ ಯೋಜನೆ. ನಮ್ಮ ಗ್ರಾಮೀಣ ಪ್ರದೇಶದಲ್ಲಿ ಸಾಮಜೀಕರಣ ಹೇಗೆ ಸಂಭವಿಸುತ್ತದೆ? ಅದರ ನಿಯೋಗಗಳಾವುವು? ಸಾಮಾಜೀಕರಣದಲ್ಲಿ ಕುಟುಂಬ, ಸಮವಯಸ್ಕರು, ಶಾಲೆ ಮತ್ತು ಸಮೂಹ ಮಾಧ್ಯಮಗಳ ಪಾತ್ರವೇನು? ಸಾಮಾಜೀಕರಣದ ಮಹತ್ವವೇನು? ಗ್ರಾಮಗಳಲ್ಲಿ ನಡೆಯುವ ಹಬ್ಬ, ಜಾತ್ರೆ, ಉತ್ಸವಗಳು ಹೇಗೆ ಜನರಲ್ಲಿ ಕೆಲವು ಗುಣಗಳನ್ನು ಬೆಳೆಸುತ್ತವೆ? ಈ ಎಲ್ಲ ಸಂಗತಿ ಮತ್ತು ಮಾಹಿತಿಗಳನ್ನು ಕೊಡಿಸಿ ಪ್ರಬಂಧ ಸಿದ್ಧಪಡಿಸಬಹುದು.

ಅಧ್ಯಾಯ-ಐದು

ಸಾಮಾಜಿಕ ನಿಯಂತ್ರಣ - ಅನುವರ್ತನೆ ಮತ್ತು ಅಪವರ್ತನೆ

ಸಮಾಜದಲ್ಲಿ ಜನರ ವರ್ತನೆ ಮತ್ತು ನಡೆವಳಿಕೆಗಳನ್ನು ಹೇಗೆ ನಿಯಂತ್ರಿಸಲಾಗುತ್ತದೆ? ಅವುಗಳನ್ನು ಹೇಗೆ ನಿರ್ದೇಶಿಸಲಾಗುತ್ತದೆ? ಸಾಮಾಜಿಕ ನಿಯಂತ್ರಣದ ನಿಯೋಗಗಳಾವುವು? ಈ ವಿಷಯವನ್ನು ಕುರಿತಂತೆ ಒಂದು ಅಧ್ಯಯನ ಯೋಜನೆ ರೂಪಿಸಬಹುದು.

ನಮ್ಮ ಊರಿನಲ್ಲಿ ಜನರು ಯಾಕೆ ಸಾಮಾಜಿಕ ಕಟ್ಟುಪಾಡುಗಳನ್ನು ಅನುಸರಿಸುತ್ತಾರೆ? ಯಾವ ಸಂದರ್ಭದಲ್ಲಿ ಕಟ್ಟುಪಾಡುಗಳನ್ನು ಮುರಿಯುತ್ತಾರೆ? ಯಾಕೆ ಮುರಿಯುತ್ತಾರೆ? ಇಂತಹ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನ ನಿಜಕ್ಕೂ ರೋಮಾಂಚನಕಾರಿಯಾಗಿರುತ್ತದೆ. ನಮ್ಮ ಗ್ರಾಮೀಣ ಪ್ರದೇಶವನ್ನು ಇದಕ್ಕೆ ಅಧ್ಯಯನ ಕ್ಷೇತ್ರವನ್ನಾಗಿ ಮಾಡಿಕೊಳ್ಳಬಹುದು. ಅಲ್ಲಿ ಸಾಮಾಜಿಕ ನಿಯಂತ್ರಣವನ್ನು ನಿರ್ವಹಿಸುವ ನಿಯೋಗಗಳಾವುವು? ಔಪಚಾರಿಕ ನಿಯೋಗಗಳಾವುವು? ಅನೌಪಚಾರಿಕ ನಿಯೋಗಗಳಾವುವು? ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹ ಮಾಡಬೇಕು. ಅಧ್ಯಯನ ವರದಿ ಸಿದ್ಧಪಡಿಸಬೇಕು.

ಅಧ್ಯಾಯ-ಆರು

ಈ ಅಧ್ಯಾಯದಲ್ಲಿ ಅನೇಕ ಬಗೆಯ ಅಧ್ಯಯನ ಯೋಜನೆಗಳನ್ನು ಕೈಗೊಳ್ಳಬಹುದು.

೧. ನಮ್ಮ ಗ್ರಾಮೀಣ ಪ್ರದೇಶದಲ್ಲಿ ವಿವಾಹ ಕುರಿತ ಅಧ್ಯಯನ

೨. ನಮ್ಮ ಗ್ರಾಮೀಣ ಪ್ರದೇಶದಲ್ಲಿ ವಿವಾಹದ ವಿಧಗಳು - ಏಕಪತ್ನಿತ್ವ - ಬಹುಪತ್ನಿತ್ವ

೩. ನಮ್ಮ ಗ್ರಾಮೀಣ ಪ್ರದೇಶದಲ್ಲಿ ಕುಟುಂಬದ ಪದ್ಧತಿಗಳು

ಈ ಮೂರು ವಿಷಯ ಕುರಿತಂತೆ ವಿಪುಲ ಮಾಹಿತಿ ದೊರೆಯುತ್ತದೆ. ನಿರ್ದಿಷ್ಟವಾಗಿ

ಕೆಲವು ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಮೂರು ಶೀರ್ಷಿಕೆಗಳಲ್ಲಿ ಯಾವುದಾದರೂ ಒಂದರ ಬಗ್ಗೆ ಅಧ್ಯಯನ ಯೋಜನೆ ಕೈಗೊಳ್ಳಬಹುದು.

ಅಧ್ಯಾಯ-ಏಳು

ನಮ್ಮ ಗ್ರಾಮೀಣ ಪ್ರದೇಶದಲ್ಲಿ ಸಾಮಾಜಿಕ ಬದಲಾವಣೆ

ಇದೊಂದು ಅದ್ಭುತ ಅಧ್ಯಯನ ಯೋಜನೆ. ನಮ್ಮ ಹಿರಿಯರು ಯಾವಾಗಲೂ ಬದಲಾಗುತ್ತಿರುವ ಸಾಮಾಜಿಕ ಸಂಗತಿಗಳ ಬಗ್ಗೆ ಮಾತನಾಡುತ್ತಿದ್ದಾರೆ. ಅವರನ್ನು ಆಕರವನ್ನಾಗಿ ಮಾಡಿಕೊಂಡು ನಮ್ಮ ಗ್ರಾಮೀಣ ಪ್ರದೇಶದಲ್ಲಿ ಸಂಭವಿಸುತ್ತಿರುವ ಸಾಮಾಜಿಕ ಬದಲಾವಣೆಗಳನ್ನು ಕುರಿತಂತೆ ಅಧ್ಯಯನ ಮಾಡಬಹುದು. ವಿದ್ಯಾರ್ಥಿಗಳು ಪಾಠದಲ್ಲಿ ಕಲಿತದ್ದನ್ನು ವಾಸ್ತವವಾಗಿ ಸಮಾಜದಲ್ಲಿ ಹೇಗೆ ಸಂಭವಿಸುತ್ತದೆ ಎಂಬುದನ್ನು ತಿಳಿದುಕೊಳ್ಳಬಹುದು. ಬದಲಾವಣೆ, ವಿಕಾಸ, ಪ್ರಗತಿ ಮತ್ತು ಅಭಿವೃದ್ಧಿ ಇವುಗಳ ನಡುವಿನ ಭಿನ್ನತೆಗಳನ್ನು ಉದಾಹರಣೆ ಸಮೇತ ನಾವು ಚರ್ಚೆ ಮಾಡಬಹುದು.

ಖಾಯಿಲೆ ಉಂಟಾದಾಗ ದೇವರಿಗೆ ಹರಕೆ ಕಟ್ಟಿಕೊಳ್ಳುವುದಕ್ಕೆ ಪ್ರತಿಯಾಗಿ ಜನರು ವೈದ್ಯರ ಬಳಿ ಹೋಗುತ್ತಾರೆ. ಇದು ಬದಲಾವಣೆ. ನಮ್ಮ ಊರಿಗೆ ಇಂದು ಬಸ್ಸು ಬರುತ್ತದೆ. ಇದು ಪ್ರಗತಿ. ನಮ್ಮ ಎತ್ತಿನ ಬಂಡಿಗೆ ಇಂದು ಬಾಲ್ ಬೇರಿಂಗ್ ಇರುವ ಟೈರು ಚಕ್ರಗಳನ್ನು ಅಳವಡಿಸಿಕೊಳ್ಳಲಾಗುತ್ತದೆ. ಇದು ವಿಕಾಸ. ಜನರ ಆದಾಯದ ಮಟ್ಟವು ಇಂದು ಉತ್ತಮಗೊಂಡಿದೆ. ಇದು ಅಭಿವೃದ್ಧಿ. ಈ ಎಲ್ಲ ಸಂಗತಿಗಳನ್ನು ಕುರಿತಂತೆ ವಿದ್ಯಾರ್ಥಿಗಳು ಮಾಹಿತಿ ಸಂಗ್ರಹಿಸಬಹುದು.

ಅಧ್ಯಯನ ವರದಿ ಸಿದ್ಧಪಡಿಸುವುದು

ಮೇಲೆ ತಿಳಿಸಿದ ವಿಷಯಗಳಿಗೆ ಅಥವಾ ಯಾವುದಾದರೂ ನೀವು ಆಯ್ಕೆ ಮಾಡಿಕೊಂಡ ವಿಷಯದ ಬಗ್ಗೆ ಅಧ್ಯಯನ ವರದಿ ಸಿದ್ಧಪಡಿಸಬೇಕಾದರೆ ಕೆಲವು ಸಂಗತಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇದು ಬರವಣಿಗೆಗೆ ಸಂಬಂಧಿಸಿದ ಸಂಗತಿಯಾಗಿದೆ. ಇಂತಹ ವರದಿಗಳನ್ನು ಸಿದ್ಧಪಡಿಸುವುದರಿಂದ ನಮ್ಮ ಬರವಣಿಗೆಯ ಕುಶಲತೆಯನ್ನು ಉತ್ತಮಪಡಿಸಿಕೊಳ್ಳಬಹುದಾಗಿದೆ. ಪ್ರಬಂಧ ಕಲೆಯನ್ನು ರೂಢಿಸಿಕೊಳ್ಳಲು ಇದೊಂದು ಅವಕಾಶವಾಗಿದೆ.

ಅಧ್ಯಯನ ವರದಿಯನ್ನು ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಐದು ಹಂತಗಳನ್ನು ಗುರುತಿಸಬಹುದು.

ಮೊದಲನೆಯ ಭಾಗದಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯದ ಬಗ್ಗೆ ಕೆಲವು ಮಾಹಿತಿ ನೀಡಬೇಕಾಗುತ್ತದೆ. ಅಧ್ಯಯನ ವಿಷಯವನ್ನು ಅಧ್ಯಯನ ಪ್ರಶ್ನೆಯನ್ನಾಗಿ ಪರಿಭಾವಿಸಿಕೊಂಡಿರುವ ಪರಿಯನ್ನು ವಿವರಿಸಬೇಕಾಗುತ್ತದೆ.

ಎರಡನೆಯ ಭಾಗದಲ್ಲಿ ಅಧ್ಯಯನದ ಉದ್ದೇಶಗಳನ್ನು ಅನುಕ್ರಮವಾಗಿ ನೀಡಬೇಕಾಗುತ್ತದೆ. ಇದು ಬಹಳ ಮುಖ್ಯವಾದ ಸಂಗತಿಯಾಗಿದೆ. ಏಕೆಂದರೆ ಇದು ಅಧ್ಯಯನಕ್ಕೆ

ಒಂದು ಚೌಕಟ್ಟನ್ನು ಒದಗಿಸುತ್ತದೆ. ಇದರಿಂದ ಅಧ್ಯಯನಕ್ಕೊಂದು ದಿಶೆ ಪ್ರಾಪ್ತವಾಗುತ್ತದೆ. ಈ ಅಧ್ಯಯನದಲ್ಲಿ ಏನು ಮಾಡಲಾಗುತ್ತದೆ ಎಂಬುದನ್ನು ಇದು ತಿಳಿಸಿಕೊಡುತ್ತದೆ.

ಮೂರನೆಯದು ಅಧ್ಯಯನ ವಿಧಾನ. ವೈಧಾನಿಕತೆಯನ್ನು ಕುರಿತಂತೆ ಚರ್ಚೆಯು ಪದವಿಪೂರ್ವ ಹಂತದಲ್ಲಿ ಅಗತ್ಯವಿಲ್ಲ. ವಿಧಾನದ ಬಗ್ಗೆ ವಿದ್ಯಾರ್ಥಿಗಳ ತಿಳಿದುಕೊಂಡರೆ ಸಾಕು. ಯಾವ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಯಿತು, ಯಾರನ್ನು ಸಂದರ್ಶಿಸಲಾಯಿತು, ಮಾಹಿತಿಯನ್ನು ಹೇಗೆ ವರ್ಗೀಕರಿಸಲಾಗಿದೆ. ಅಧ್ಯಯನ ನಡೆಸಿದ ಕಾಲಾವಧಿ ಯಾವುದು ಮುಂತಾದ ಸಂಗತಿಗಳನ್ನು ಇಲ್ಲಿ ವಿವರಿಸಬೇಕಾಗುತ್ತದೆ.

ನಾಲ್ಕನೆಯದು ಅಧ್ಯಯನದ ಮಹತ್ವದ ಭಾಗವಾಗಿದೆ. ಅಧ್ಯಯನದ ವಿಷಯಕ್ಕೆ ಸಂಬಂಧಿಸಿದ ಮಾಹಿಯ ವಿಶ್ಲೇಷಣೆ ಇಲ್ಲಿರುತ್ತದೆ. ಸಂಗ್ರಹಿಸಿದ ಮಾಹಿತಿಯನ್ನು ಇಲ್ಲಿ ತರ್ಕಬದ್ಧವಾಗಿ ಚರ್ಚೆಗೆ ಒಳಪಡಿಸಲಾಗುತ್ತದೆ. ಈ ಭಾಗದಲ್ಲಿನ ಚರ್ಚೆಯ ಆಧಾರದಿಂದ ನಾವು ತೀರ್ಮಾನಗಳನ್ನು ರೂಪಿಸುತ್ತೇವೆ.

ಕೊನೆಯ ಭಾಗವು ಅಧ್ಯಯನ ಸಾರಾಂಶವಾಗಿದೆ. ಇದರಲ್ಲಿ ಅಧ್ಯಯನದಿಂದ ಕಂಡುಕೊಂಡ ಹೊಸ ತಥ್ಯಗಳನ್ನು ನೀಡಬೇಕಾಗುತ್ತದೆ.

ಅಧ್ಯಯನ ವರದಿಯ ಪುಟಗಳ ಬಗ್ಗೆ ಯೋಚಿಸುವ ಅಗತ್ಯವಿಲ್ಲ. ಪದವಿಪೂರ್ವ ತರಗತಿಗಳ ವಿದ್ಯಾರ್ಥಿಗಳು ಅಧ್ಯಯನ ವರದಿ ಸಿದ್ಧಪಡಿಸುತ್ತಿದ್ದಾರೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ವರದಿ ೧೫ ರಿಂದ ೨೦ ಪುಟಗಳಲ್ಲಿದ್ದರೆ ಸಾಕು. ಇಲ್ಲಿ ಪುಟಗಳಿಗಿಂತ ಪುಟಗಳಲ್ಲಿ ಏನಿದೆ ಎಂಬುದು ಮುಖ್ಯ. ಈ ಅಧ್ಯಯನ ವರದಿಯಲ್ಲಿ 'ಕೃತಜ್ಞತೆ'ಯ ಭಾಗವಿರಬಹುದು. ಅಧ್ಯಯನ ವಿಷಯಕ್ಕೆ ಪೂರಕವಾಗುವಂತಹ ಭಾವ ಚಿತ್ರಗಳಿದ್ದರೆ ಬಳಸಬಹುದು. ಈ ಪ್ರಾಯೋಗಿಕ ಅಧ್ಯಯನ ಯೋಜನೆಯ ಎಲ್ಲ ಹಂತದಲ್ಲೂ ನಾವು ಅಧ್ಯಾಪಕರ ನೆರವನ್ನು, ಮಾರ್ಗದರ್ಶನವನ್ನು ಪಡೆಯುವುದು ತುಂಬಾ ಅಗತ್ಯ.

ಹೊಣೆಗಳು

(ಯಾವುದಾದರೂ ಐದು)

ಅಧ್ಯಾಯ - I

೧. ಸಮಾಜಶಾಸ್ತ್ರದ ಸಂಸ್ಥಾಪಕ ನಾಲ್ವರು ಸಮಾಜಶಾಸ್ತ್ರಜ್ಞರ ಜೀವನ ಚರಿತ್ರೆ,
ಆಗಸ್ಟ್‌ಕಾಮ್ಟೆ, ಹರ್ಬಟ್ ಸ್ಪೆನ್ಸರ್, ಎಮಿಲಿ ಡರ್ಖಿಮ್ ಮಾರ್ಕ್ಸ್‌ವೇಬರ್.

೨. ಸಮಾಜಶಾಸ್ತ್ರದ ವಿಶೇಷ ಕ್ಷೇತ್ರಗಳು
ಅ. ಕೈಗಾರಿಕಾ ಸಮಾಜಶಾಸ್ತ್ರ, ಆ. ಗ್ರಾಮೀಣ ಸಮಾಜಸಾಸ್ತ್ರ, ಇ. ನಗರ ಸಮಾಜಶಾಸ್ತ್ರ

ಅಧ್ಯಾಯ - II

೩. ಸಮಾಜವಿಜ್ಞಾನಗಳಲ್ಲಿ ಪರಿಭಾವನೆಗಳ ಸ್ವರೂಪ
೪. ಸಾಂಗ್ವೀಕರಣದಲ್ಲಿ ಸಮೂಹ ಮಾಧ್ಯಮಗಳ ಪಾತ್ರ

ಅಧ್ಯಾಯ - III

೫. ಪ್ರಾಥಮಿಕ ಸಮೂಹ - ಗ್ರಾಮ
೬. ದ್ವಿತೀಯ ಸಮೂಹ - ಕಾಲೇಜ್

ಅಧ್ಯಾಯ - IV

೭. ಸಾಂಸ್ಕೃತಿಕ ಹಿಂಬೀಳಿಕೆ
೮. ಸಂಸ್ಕೃತಿಯ ಪ್ರಭೇದವಾಗಿ ಕಲೆ

ಅಧ್ಯಾಯ - V

೯. ಮೌಲ್ಯಗಳು
೧೦. ಸಾಮಾಜಿಕ ಕಾನೂನುಗಳು

ಅಧ್ಯಾಯ - VI

೧೧. ಕುಟುಂಬದ ವಿಧಗಳು
೧೨. ಹೊಸ ಬೆಳವಣಿಗೆಯಾಗಿ ಸಾಮೂಹಿಕ ವಿವಾಹಗಳು

ಅಧ್ಯಾಯ - VII

೧೩. ಸಾಮಾಜಿಕ ಬದಲಾವಣೆಯಲ್ಲಿ ಸರ್ಕಾರದ ಪಾತ್ರ
೧೪. ಧರ್ಮ ಮತ್ತು ಸಾಮಾಜಿಕ ಬದಲಾವಣೆ
೧೫. ಮೂಢ ನಂಬಿಕೆಗಳು
೧೬. ಸಮೂಹ ಸಂವಹನ ಮತ್ತು ಸಾಮಾಜಿಕ ಬದಲಾವಣೆ

ಚಟುವಟಿಕೆಗಳು

೧. ಘರ್ಷಣೆ

ಅ. ಕೌಟುಂಬಿಕ ಘರ್ಷಣೆಗಳು
ಆ. ವೈವಾಹಿಕ ಘರ್ಷಣೆಗಳು
ಇ. ಕೋಮುದಳ್ಳುರಿ ಅಥವಾ ಜಾತಿ ಘರ್ಷಣೆಗಳು
ಈ. ಮತಾಂತರ

೨. ಸಂಸ್ಕೃತಿ

ಉ. ಜನಪ್ರಿಯ ಸಂಸ್ಕೃತಿ : ಭಾರತೀಯ ನೃತ್ಯ
ಭಾರತೀಯ ಸಂಗೀತ
ಊ. ವಿವಾಹದ ವಿವಿಧ ಪ್ರಕಾರಗಳು
ನಿರ್ದಿಷ್ಟ ಸಮುದಾಯವೊಂದರ ವಿವಾಹದ ಆಚರಣೆಗಳು
ಋ. ನೈಸರ್ಗಿಕ ವಿಕೋಪಗಳು

೩೦. ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಭಾವ - ಪರಿಣಾಮ
(ಕೃಷಿಯ ಮೇಲೆ, ಗುಡಿ ಕೈಗಾರಿಕೆಗಳ ಮೇಲೆ,
ವೈದ್ಯಕೀಯ ಸೇವೆ ಮೇಲೆ).

೩. ಪುಸ್ತಕ ಪರಾಮರ್ಶೆ

ಇಲ್ಲಿ ನೀಡಿರುವ ಆಕರ ಗ್ರಂಥಗಳಲ್ಲಿ ಆಯ್ದ ಕೃತಿಗಳ ನಿರ್ದಿಷ್ಟ ಅಧ್ಯಾಯಗಳ ಪರಾಮರ್ಶೆ

೪. ನಕ್ಷೆಗಳ ರಚನೆ

ಭಾರತದ ಜನಸಂಖ್ಯೆಯ ಭಾಷಾವಾರು ವರ್ಗೀಕರಣದ ನಕ್ಷೆ

ಭಾರತದಲ್ಲಿ ಮಾತೃಪ್ರಧಾನ ಕುಟುಂಬಗಳ ನೆಲೆಗೊಂಡಿರುವ ಪ್ರದೇಶಗಳ ನಕ್ಷೆ

ಆ. ಮಾದರಿ ಪ್ರಶ್ನೆ ಪತ್ರಿಕೆ

ಪ್ರಥಮ ಪಿಯುಸಿ
ಸಮಾಜಶಾಸ್ತ್ರ
ಮಾದರಿ ಪ್ರಶ್ನೆ ಪತ್ರಿಕೆ

ಸಮಯ : ೩ ಗಂಟೆಗಳು **ಗರಿಷ್ಠ ಅಂಕಗಳು : ೯೦**

I. ಕೆಳಗಿನವುಗಳನ್ನು ತಲಾ ಒಂದು ವ್ಯಾಖ್ಯೆದಲ್ಲಿ ಉತ್ತರಿಸಿ. ೧x೧೦=೧೦

೧. 'ಸೋಶಿಯಾಲಜಿ' ಪದದ ವ್ಯುತ್ಪತ್ತಿಯನ್ನು ತಿಳಿಸಿ.
೨. ವಿಜ್ಞಾನದ ವ್ಯಾಖ್ಯೆ ನೀಡಿ.
೩. ಅಲೆಮಾರಿಗಳನ್ನು ಸಮುದಾಯವೆಂದು ಯಾಕೆ ಕರೆಯಲು ಸಾಧ್ಯವಿಲ್ಲ?
೪. ಸಾಮಾಜಿಕ ಅಂತರ್‌ಕ್ರಿಯೆಯೆಂದರೇನು?
೫. ಅಸಂಘಟಿತ ಸಮೂಹದ ಒಂದು ಲಕ್ಷಣ ತಿಳಿಸಿ.
೬. 'ಕಲ್ಚರ್' ನುಡಿಯ ವ್ಯುತ್ಪತ್ತಿ ವಿವರಿಸಿ.
೭. ಸಮವಯಸ್ಕರ ಗುಂಪು ಎಂದರೇನು?
೮. 'ಫೋಕ್‌ವೇಸ್' ಗ್ರಂಥದ ಕರ್ತೃ ಯಾರು?
೯. ಬಹುಪತ್ನಿತ್ವ ಎಂದರೇನು?
೧೦. ಸಾಮಾಜಿಕ ಬದಲಾವಣೆಯ ವ್ಯಾಖ್ಯೆ ನೀಡಿ.

II. ಕೆಳಗಿನವುಗಳಲ್ಲಿ ೧೦ ಕ್ಕೆ ತಲಾ ಎರಡು ವ್ಯಾಖ್ಯೆಗಳಲ್ಲಿ ಉತ್ತರಿಸಿ. ೨x೧೦=೨೦

೧೧. ಸಮಾಜಶಾಸ್ತ್ರದ ಎರಡು ವ್ಯಾಖ್ಯೆಗಳನ್ನು ನೀಡಿ.
೧೨. ವಸ್ತುನಿಷ್ಠತೆ ಎಂದರೇನು?

೧೩. ಸಂಸ್ಥೆಯ ವ್ಯಾಖ್ಯೆ ನೀಡಿ.

೧೪. ಸ್ವಾಗೀಕರಣ ಎಂದರೇನು?

೧೫. ಸಂಘಟಿತ ಮತ್ತು ಅಸಂಘಟಿತ ಸಮೂಹಗಳ ಎರಡು ವ್ಯತ್ಯಾಸಗಳನ್ನು ತಿಳಿಸಿ.

೧೬. ಸಾಮಾಜೀಕರಣದ ವ್ಯಾಖ್ಯೆ ನೀಡಿ.

೧೭. ಸಾಮಾಜಿಕ ಅಪವರ್ತನೆ ಎಂದರೇನು?

೧೮. ಉದಾಹರಣೆಯೊಂದಿಗೆ 'ಫೋಕ್‌ವೇಸ್'ನ ವ್ಯಾಖ್ಯೆ ನೀಡಿ.

೧೯. ವಿವಾಹದ ಎರಡು ಕಾರ್ಯಗಳನ್ನು ತಿಳಿಸಿ.

೨೦. ಕುಟುಂಬದ ಎರಡು ವ್ಯಾಖ್ಯೆ ನೀಡಿ.

೨೧. ಬದಲಾವಣೆ ಮತ್ತು ವಿಕಾಸಗಳ ನಡುವಣ ಭಿನ್ನತೆ ವಿವರಿಸಿ.

೨೨. ಸಾಮಾಜಿಕ ಬದಲಾವಣೆಗಿರುವ ಎರಡು ಅಡ್ಡಿಗಳನ್ನು ವಿವರಿಸಿ.

III. ಕೆಳಗಿನವುಗಳಲ್ಲಿ ೪ಕ್ಕೆ ತಲಾ ಹದಿನೈದು ವ್ಯಾಖ್ಯೆಗಳಲ್ಲಿ ಉತ್ತರಿಸಿ. ೫x೪=೨೦

೨೩. ಸಮಾಜಶಾಸ್ತ್ರದ ಉಗಮಕ್ಕೆ ಕಾರಣವಾದ ಸಂಗತಿಗಳನ್ನು ವಿವರಿಸಿ.

೨೪. ಸಮಾಜದ ಗುಣಲಕ್ಷಣಗಳನ್ನು ವಿವರಿಸಿ.

೨೫. ಪ್ರಾಥಮಿಕ ಸಮೂಹದ ಗುಣಲಕ್ಷಣ ವಿವರಿಸಿ.

೨೬. ಸಂಸ್ಕೃತಿ ಮತ್ತು ನಾಗರಿಕತೆಗಳ ನಡುವಿನ ವ್ಯತ್ಯಾಸ ತಿಳಿಸಿ.

೨೭. ಅಪವರ್ತನೆಯನ್ನು ನಿರ್ಧರಿಸುವ ಸಂಗತಿಗಳನ್ನು ವಿವರಿಸಿ.

೨೮. ಏಕಪತ್ನಿತ್ವ ಎಂದರೇನು? ಅದರ ಮಹತ್ವ ವಿವರಿಸಿ.

IV. ಕೆಳಗಿನವುಗಳಲ್ಲಿ ೪ಕ್ಕೆ ತಲಾ ಹದಿನೈದು ವ್ಯಾಖ್ಯೆಗಳಲ್ಲಿ ಉತ್ತರಿಸಿ. ೫x೪=೨೦

೨೯. ಸಮಾಜಶಾಸ್ತ್ರದ ವೈಜ್ಞಾನಿಕ ಸ್ವರೂಪವನ್ನು ವಿವರಿಸಿ.

೩೦. ಸಾಮಾಜಿಕ ಜೀವನದಲ್ಲಿ ಸ್ಪರ್ಧೆಯ ಪಾತ್ರವನ್ನು ವಿವರಿಸಿ.

೩೧. ಸಾಮಾಜಿಕ ಸಮೂಹದ ವ್ಯಾಖ್ಯೆ ನೀಡಿ. ಅದರ ಲಕ್ಷಣಗಳನ್ನು ವಿವರಿಸಿ.

೩೨. ಸಾಂಸ್ಕೃತಿಕ ಹಿಂಬೀಳಿಕೆಯನ್ನು ವಿಶ್ಲೇಷಿಸಿ.

೩೩. ಸಾಮಾಜಿಕ ನಿಯಮಗಳ ಸಹ ವರ್ತನೆಯನ್ನು ವಿವರಿಸಿ.

೩೪. ಕುಟುಂಬದ ಕಾರ್ಯಗಳನ್ನು ವಿವರಿಸಿ.

V. ಕೆಳಗಿನವುಗಳಲ್ಲಿ ಎರಡಕ್ಕೆ ತಲಾ ಮೂವತ್ತು ವ್ಯಾಖ್ಯೆಗಳಲ್ಲಿ ಉತ್ತರಿಸಿ. ೨x೧೦=೩೦

೩೫. ಸಮಾಜಶಾಸ್ತ್ರ ಅಧ್ಯಯನದ ಮಹತ್ವ ವಿವರಿಸಿ.

೩೬. ಸಾಮಾಜೀಕರಣದಲ್ಲಿ ಶಿಕ್ಷಣದ ಪಾತ್ರವನ್ನು ವಿವರಿಸಿ.

೩೭. ಸಾಮಾಜಿಕ ನಿಯಂತ್ರಣವನ್ನು ವಿವರಿಸಿ. ಸಾಮಾಜಿಕ ನಿಯಂತ್ರಣದ ಔಪಚಾರಿಕ ನಿಯೋಗಗಳನ್ನು ವಿವರಿಸಿ.

೩೮. ಸಾಮಾಜಿಕ ಬದಲಾವಣೆ ಮೇಲಿನ ಸಾಮಾಜಿಕ ಶಾಸನ (ಕಾನೂನು)ಗಳ ಪ್ರಭಾವವನ್ನು ವಿವರಿಸಿ.

೯. ಮೊದಲ ಪಿಯುಸಿ ಸಮಾಜಶಾಸ್ತ್ರ ಪ್ರಶ್ನೆ ಪತ್ರಿಕೆ ನೀಲಿ ನಕಾಶೆ

ಕ್ರಮ ಸಂಖ್ಯೆ	ಅಧ್ಯಾಯಗಳು	ಬೋಧನಾ ಅವಧಿ (ಗಂಟೆಗಳಲ್ಲಿ)	ಜ್ಞಾನ ಅಂಕಗಳು				ಅರಿವು/ಮನನ ಅಂಕಗಳು				ಅನ್ವಯಿಕತೆ ಅಂಕಗಳು				ಕೌಶಲ್ಯ/ಅಭಿವ್ಯಕ್ತಿ ಅಂಕಗಳು				ಒಟ್ಟು ಅಂಕಗಳು
			೧	೨	೫	೧೦	೧	೨	೫	೧೦	೧	೨	೫	೧೦	೧	೨	೫	೧೦	
೦೧.	ಸಮಾಜಶಾಸ್ತ್ರ ಪ್ರವೇಶ	೧೪	೨	೧	-	-	-	೧	೧	-	-	-	೧	-	-	-	-	೧	೨೬
೦೨.	ಮೂಲಭೂತ ಪರಿಭಾವನೆಗಳು	೧೬	೧	೧	೧	-	೧	೧	-	-	-	-	೧	-	-	-	-	-	೧೬
೦೩.	ಸಾಮಾಜಿಕ ಸಮೂಹಗಳು	೧೦	೧	-	೧	-	-	೧	-	-	-	-	೧	-	-	-	-	-	೧೩
೦೪.	ಸಂಸ್ಕೃತಿ ಮತ್ತು ಸಾಮಾಜೀಕರಣ	೧೬	೨	೧	-	-	-	-	೧	-	-	-	೧	-	-	-	-	೧	೨೪
೦೫.	ಸಾಮಾಜಿಕ ನಿಯಂತ್ರಣ	೧೦	೧	೧	-	-	-	-	೧	-	-	೧	೧	-	-	-	-	೧	೨೫
೦೬.	ವಿವಾಹ ಮತ್ತು ಕುಟುಂಬ	೧೨	೧	೧	-	-	-	೧	೧	-	-	-	೧	-	-	-	-	-	೧೫
೦೭.	ಸಾಮಾಜಿಕ ಬದಲಾವಣೆ	೧೨	೧	೧	-	-	-	೧	-	-	-	-	-	-	-	-	-	೧	೧೫
೦೮.	ಒಟ್ಟು	೯೦	೦೯	೧೨	೧೦	-	೧	೧೦	೨೦	೦೦	೦೦	೨	೩೦	೦೦	೦೦	೦೦	೦೦	೪೦	೧೩೪

ಆಕರ ಗ್ರಂಥಗಳು

೦೧. Sociology - Parmal B. Kas
೦೨. The Social Order - Robert Biersteelt
೦೩. An Introduction to Sociology - Sachdeva & Vidya Bhushan
೦೪. Sociology - An Introductory Analysis - H.M. Johnsen
೦೫. Foundations of Modern Sociology - Metta Spencer
೦೬. Principles of Sociology (ed) Richard Pais
೦೭. Social Anthropology - S.L. Doshi & P.E. Jain
೦೮. What is Sociology - Alek Inkeles
೦೯. Society - AN Introductory Analysis - R.M. Maeiver & Page
೧೦. Human Society - Kingsley Davis
೧೧. Principles of Sociology R.N. Sharma
೧೨. Fundamentals of Sociology - P. Gisbert
೧೩. Introductory Sociology - R.L. Sutherland & Others
೧೪. Sociology - C.N. Shankar Rao
೧೫. Sociology - Themes & Perspectives - Michael Haralamboy
೧೬. Introduction to Sociology - Stewart E.W. & Glynn J.A.
೧೭. Sociology - A Guide to Problems & Literature - T.B. Bottomore
೧೮. Sociology - N.J. Smelser
೧೯. Sociology - An Introduction to the Science of Society - Samuel Koenig.
೨೦. ಸಮಾಜಶಾಸ್ತ್ರ - ವಿಲಾಸ ಸಂಗವೆ ಅನುವಾದ ಮಾಧವ ಕುಲಕರ್ಣಿ
೨೧. ಸಮಾಜಶಾಸ್ತ್ರ ಪರಿಚಯ - ಎಂ. ನಂಜಮ್ಮಣ್ಣಿ
೨೨. ಸಮಾಜಶಾಸ್ತ್ರ ಕೈಪಿಡಿ - ರಿಚರ್ಡ್ ಪ್ಯಾಸ್ ಮತ್ತು ಇತರರು
೨೩. ಸಮಾಜವಿಜ್ಞಾನಗಳ ಪಾರಿಭಾಷಿಕ ಪದಕೋಶ ಸಂ. ಡಾ. ಚಂದ್ರಶೇಖರ ದಾಮ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬

ಲೇಖಕರ ವಿಳಾಸ

೧. ಪ್ರೊ. ರಮಾನಾಥ ಬಿ., ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕಾಪು, ದಕ್ಷಿಣ ಕನ್ನಡ ಜಿಲ್ಲೆ

೨. ಪ್ರೊ. ಬಿ. ತಿಪ್ಪೇಸ್ವಾಮಿ, ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ, ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು-೧೨.

೩. ಪ್ರೊ. ಪಿ.ಜಿ. ನಾಗನೂರಿ, ಸಮಾಜಶಾಸ್ತ್ರ ಪ್ರಾಧ್ಯಾಪಕರು, ನೆಹರೂ ಮೆಮೋರಿಯಲ್ ಕಾಲೇಜು, ಸುಳ್ಯ-೫೭೪ ೩೨೭, ದಕ್ಷಿಣ ಕನ್ನಡ ಜಿಲ್ಲೆ.

೪. ಡಾ. ವೈ. ರವೀಂದ್ರನಾಥ ರಾವ್, ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ, ಎಸ್.ಎಂ.ಎಸ್. ಪ್ರಥಮ ದರ್ಜೆ ಕಾಲೇಜು, ಬ್ರಹ್ಮಾವರ-೫೭೬ ೨೧೩, ಉಡುಪಿ ಜಿಲ್ಲೆ.

೫. ಡಾ. ಎಂ.ಎಸ್. ಗಿರಿಧರ ರಾವ್, ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ವಿಟ್ಲ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

೬. ಡಾ. ಚಂದ್ರಶೇಖರ ದಾಮ್ಲೆ, ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ, ನೆಹರೂ ಮೆಮೋರಿಯಲ್ ಕಾಲೇಜು, ಸುಳ್ಯ-೫೭೪ ೩೨೭, ದಕ್ಷಿಣ ಕನ್ನಡ ಜಿಲ್ಲೆ.

೭. ಡಾ. ಜಯಶ್ರೀ, ಪ್ರವಾಚಕರು, ಸಮಾಜಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಬೆಳಗಾವಿ.

ಕನ್ನಡ ವಿಶ್ವವಿದ್ಯಾಲಯದ ಪಠ್ಯಪುಸ್ತಕ ರಚನಾ ಕೇಂದ್ರವು ಸಿದ್ಧಪಡಿಸಿರುವ ಪದವಿಪೂರ್ವ ಶಿಕ್ಷಣದ ಮೊದಲ ವರ್ಷದ 'ಸಮಾಜಶಾಸ್ತ್ರ' ಪಠ್ಯವನ್ನು ತಮ್ಮ ಮುಂದಿಡಲು ನಮಗೆ ಸಂತೋಷವೆನಿಸುತ್ತದೆ. ಈಗ ಜಾರಿಗೆ ಬಂದಿರುವ ಹೊಸ ಪಠ್ಯಕ್ರಮಕ್ಕೆ ಅನುಗುಣವಾಗಿ ಇದನ್ನು ಸಿದ್ಧಪಡಿಸಲಾಗಿದೆ. ಈ ಪಠ್ಯವನ್ನು ಸಿದ್ಧಪಡಿಸುವ ಕಾರ್ಯದಲ್ಲಿ ನಾಡಿನ ಪ್ರಸಿದ್ಧ ವಿದ್ವಾಂಸರು ಪಾಲುದಾರರಾಗಿದ್ದಾರೆ.

ಈ ಪಠ್ಯವು ನಾಡಿನ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುತ್ತದೆಂದು ನಾವು ಭಾವಿಸಿದ್ದೇವೆ. ಈ ಪಠ್ಯವನ್ನು ಉಪಯೋಗಿಸುವ ಸಹೃದಯಿಗಳು ಪಠ್ಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೇಂದ್ರಕ್ಕೆ ಬರೆದು ತಿಳಿಸಿದರೆ ತುಂಬಾ ಉಪಯೋಗವಾಗುತ್ತದೆ. ಮುಂದಿನ ಆವೃತ್ತಿಗಳಲ್ಲಿ ಪಠ್ಯದ ಗುಣಮಟ್ಟವನ್ನು ಇನ್ನೂ ಹೆಚ್ಚು ಉತ್ತಮಪಡಿಸಬಹುದು.

ಪಠ್ಯಪುಸ್ತಕಗಳ ಜೊತೆ ನಾವು ಅಧ್ಯಾಪಕರ ಕೈಪಿಡಿಗಳನ್ನು ಸಿದ್ಧಪಡಿಸುತ್ತಿದ್ದೇವೆ. ನಾವು ಪ್ರಕಟಿಸುತ್ತಿರುವ ಪಠ್ಯಗಳಿಗೆ ಪದವಿಪೂರ್ವ ಶಿಕ್ಷಣ ಇಲಾಖೆಯು ಅಧಿಕೃತ ಮನ್ನಣೆ ನೀಡಿ ನಮ್ಮ ಪ್ರಯತ್ನದಲ್ಲಿ ಕೈ ಜೋಡಿಸಿದೆ. ಕರ್ನಾಟಕದ ವಿದ್ಯಾರ್ಥಿ ಬಳಗಕ್ಕೆ ಕನ್ನಡದಲ್ಲಿ ಜ್ಞಾನವು ಉತ್ತಮ ರೀತಿಯಲ್ಲಿ ದೊರೆಯಬೇಕೆಂಬುದು ನಮ್ಮ ಮುಖ್ಯ ಗುರಿಯಾಗಿದೆ. ಈ ದಿಶೆಯಲ್ಲಿ ನಮ್ಮ ಪ್ರಯತ್ನ ನಡೆದಿದೆ. ಇದಕ್ಕೆ ತಮ್ಮ ಆಶೀರ್ವಾದವಿದೆಯೆಂದು ಭಾವಿಸಿದ್ದೇವೆ.

ರೂ. ೧೦೦/-